ಚಿತ್ರದುರ್ಗ ಪಾಳೆಯಗಾರರ ಕಾಲದ ಕಲೆ ಮತ್ತು ವಾಸ್ತು ಶಿಲ್ಪ - ಒಂದು ಅಧ್ಯಯನ

(ಪಿಎಚ್.ಡಿ ಪದವಿಗಾಗಿ ಸಲ್ಲಿಸಿದ ಮಹಾ ಪ್ರಬಂಧ)

... ಎಸ್





ಮಾರ್ಗದರ್ಶಕರು

ಡಾ. ಸಿ ಮಹದೇವ

ಪ್ರಾಧ್ಯಾಪಕರು

ಪ್ರಾಚೀನ ಇತಿಹಾಸ ಹಾಗೂ ಪುರಾತತ್ವ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ ವಿದ್ಯಾರಣ್ಯ ಹಂಪಿ

೨೦೦೯

290

ಚಿತ್ರದುರ್ಗ ಪಾಳೆಯಗಾರರ ಕಾಲದ ಕಲೆ ಮತ್ತು ವಾಸ್ತುಶಿಲ್ಪ : ಒಂದು ಅಧ್ಯಯನ

(ಪಿ.ಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಮಹಾಪ್ರಬಂಧದ)

ಸಂಶೋಧಕರು

ಶಕುಂತಲ ಎನ್.

ಮಾರ್ಗದರ್ಶಕರು

ಡಾ. ಸಿ.ಮಹದೇವ

ಪ್ರಾಧ್ಯಾಪಕರು

ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗ

ಸಮಾಜವಿಜ್ಞಾನ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ

೨೦೦೯

ಸಂಶೋಧಕರ ಪ್ರಮಾಣಪತ್ರ

ಚಿತ್ರದುರ್ಗ ಪಾಳೆಯಗಾರರ ಕಾಲದ ಕಲೆ ಮತ್ತು ವಾಸ್ತುಶಿಲ್ಪ : ಒಂದು ಅಧ್ಯಯನ ಎಂಬಮಹಾ ಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ.ಪದವಿಗಾಗಿ **ಡಾ.ಸಿ.ಮಹದೇವ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ **ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗಕ್ಕೆ** ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಮಹಾಪ್ರಬಂಧವು ನನ್ನ ಸ್ವಂತ ಪರಿಶ್ರಮದ ಫಲವಾಗಿದ್ದು, ಈ ಮೊದಲು ಇದನ್ನು ಇನ್ನಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

Shakuntala. N.

ಶಕುಂತಲ ಎನ್.
ಸಂಶೋಧಕರು
ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ದಿನಾಂಕ : 30/06/09
ಸ್ಥಳ : ವಿದ್ಯಾರಣ್ಯ

ಮಾರ್ಗದರ್ಶಕರ ಪ್ರಮಾಣಪತ್ರ

ಶಕುಂತಲ ಎನ್. ಅವರು **ಚಿತ್ರದುರ್ಗ ಪಾಳೆಯಗಾರರ ಕಾಲದ ಕಲೆ ಮತ್ತು ವಾಸ್ತುಶಿಲ್ಪ: ಒಂದು ಅಧ್ಯಯನ** ಎಂಬ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್. ಡಿ. ಪದವಿಗಾಗಿ ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ **ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗಕ್ಕೆ** ಸಲ್ಲಿಸುತ್ತಿದ್ದಾರೆ, ಪ್ರಸ್ತುತ ಮಹಾಪ್ರಬಂಧವು ಅವರ ಸ್ವಂತ ಪರಿಶ್ರಮದ ಫಲವಾಗಿದ್ದು, ಈ ಮೊದಲು ಇದನ್ನು ಇನ್ನಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

30/6/09

ಡಾ.ಸಿ.ಮಹದೇವ
ಪ್ರಾಧ್ಯಾಪಕರು
ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ದಿನಾಂಕ : 30-6-09
ಸ್ಥಳ : ವಿದ್ಯಾರಣ್ಯ

ಕೃತಜ್ಞತೆಗಳು

ಚಿತ್ರದುರ್ಗ ಪಾಳೆಯಗಾರರ ಕಾಲದ ಕಲೆ ಮತ್ತು ವಾಸ್ತುಶಿಲ್ಪ : ಒಂದು ಅಧ್ಯಯನ ಎಂಬ ಮಹಾಪ್ರಬಂಧದ ಅಧ್ಯಯನಕ್ಕೆ ಕನ್ನಡ ವಿಶ್ವವಿದ್ಯಾಲಯದಲ್ಲಿ ಅವಕಾಶ ಕಲ್ಪಿಸಿಕೊಟ್ಟ ಡಾ.ಬಿ.ಎ.ವಿವೇಕ ರೈ ಅವರಿಗೂ ಮತ್ತು ಇಂದಿನ ಕುಲಪತಿಗಳಾದ ಡಾ.ಎ.ಮುರಿಗೆಪ್ಪ ಅವರಿಗೂ ಹಿಂದಿನ ಕುಲಸಚಿವರಾದ ಡಾ.ಬೋರಲಿಂಗಯ್ಯ ಅವರಿಗೂ ಹಾಗೂ ಹಿಂದಿನ ಅಧ್ಯಯನಾಂಗದ ನಿರ್ದೇಶಕರಾದ ಡಾ.ಡಿ.ಪಾಂಡುರಂಗ ಬಾಬು ಅವರಿಗೂ ಇಂದಿನ ಅಧ್ಯಯನಾಂಗ ನಿರ್ದೇಶಕರಾದ ಡಾ.ವೀರೇಶ ಬಡಿಗೇರ ಅವರಿಗೂ,

ನಾನು ಸಂಶೋಧನೆ ಕೈಗೊಳ್ಳಲು ಸೂಚಿಸಿ ಮಾರ್ಗದರ್ಶನ ಮಾಡಲು ಒಪ್ಪಿದ್ದಲ್ಲದೇ, ನನ್ನ ಸಂಶೋಧನಾ ಪ್ರಬಂಧ ರಚನೆಯಲ್ಲಿ ಸೂಕ್ತ ಮಾರ್ಗದರ್ಶನ ಹಾಗು ಸಲಹೆಗಳನ್ನು ನೀಡಿ ಮುಕ್ತವಾದ ಅವಕಾಶವನ್ನು ಕಲ್ಪಿಸಿಕೊಟ್ಟ ಮಾರ್ಗದರ್ಶಕರಾದ ಡಾ.ಸಿ.ಮಹದೇವ ಅವರಿಗೆ,

ಅಧ್ಯಯನದ ವರದಿ ಸಲ್ಲಿಸುವಾಗಲೆಲ್ಲ ಸೂಕ್ತ ಸಲಹೆಗಳನ್ನು ನೀಡುತ್ತಾ ಬಂದ ಪ್ರಾಚೀನ ಇತಿಹಾಸ ಹಾಗೂ ಪುರಾತತ್ವ ವಿಭಾಗದ ಮುಖ್ಯಸ್ಥರಾದ ಡಾ.ವಾಸುದೇವ ಬಡಿಗೇರ ಮತ್ತು ವಿಭಾಗದ ಅಧ್ಯಾಪಕರುಗಳಾದ ಡಾ.ಸಿ.ಎಸ್.ವಾಸುದೇವನ್, ಡಾ.ರಮೇಶ್‌ನಾಯ್ಕ, ಡಾ.ಎಸ್.ವೈ.ಸೋಮಶೇಖರ್ ಅವರುಗಳಿಗೆ ನನ್ನ ಕೃತಜ್ಞತೆಗಳು.

ಅವಿದ್ಯಾವಂತ ತಂದೆ–ತಾಯಿಯವರಾದ ಶ್ರೀಮತಿ ಪಾರ್ವತಮ್ಮ, ನಿಂಗಪ್ಪ, ಅತ್ತೆ–ಮಾವರಾದ ಶ್ರೀಮತಿ ಸಣ್ಣಜಯಮ್ಮ, ಕೆ.ವೀರಣ್ಣ ಅವರಿಗೆ,

ನನ್ನ ಸಂಶೋಧನಾ ಕ್ಷೇತ್ರಕಾರ್ಯದಲ್ಲಿ ಸೂಕ್ತವಾದ ಸಲಹೆಗಳನ್ನಿತ್ತು ಪ್ರೋತ್ಸಾಹಿಸಿದ ಖ್ಯಾತ ಸಾಹಿತಿ ಡ.ಮೀರಾಸಾಬಿಹಳ್ಳಿ ಶಿವಣ್ಣ, ಎಚ್.ಪಿ.ಪಿ.ಸಿ. ಸರ್ಕಾರಿ ಪ್ರಥಮದರ್ಜೆ ಕಾಲೇಜಿನ ಪ್ರಾಚಾರ್ಯರಾದ ಟಿ.ಸುರೇಶ್‌ಗುಪ್ತ, ವ್ಯವಸ್ಥಾಪಕ ಹನುಮಂತರಾಯಪ್ಪ, ಇತಿಹಾಸ ವಿಭಾಗದ ಮುಖ್ಯಸ್ಥರಾದ ಎಂ.ಶಿವಲಿಂಗಪ್ಪ ಸಿ.ಜಗದೀಶ್, ವಾಣಿಜ್ಯ ವಿಭಾಗದ ಸಿ.ಚನ್ನಕೇಶವ, ದೊಡ್ಡೇರಿ ರಾಜಣ್ಣ, ಮಂಜುನಾಥ ರೆಡ್ಡಿ, ಅರ್ಥಶಾಸ್ತ್ರ ಉಪನ್ಯಾಸಕಿ ರಾಜೇಶ್ವರಿ ಪೂಜಾರ್, ಸಂಸ್ಕೃತ ಉಪನ್ಯಾಸಕಿ ಬಿ.ಡಿ.ಶೋಭ, ಆಂಗ್ಲ ಉಪನ್ಯಾಸಕಿ ಶಾಂತವೀರಮ್ಮ, ತ್ರಿವೇಣಿ, ತುರುವನೂರು ಎಸ್.ತಿಪ್ಪೇಸ್ವಾಮಿ, ಬಿ.ಸುರೇಶ್, ಶ್ರೀಎನ್.ಜಯಣ್ಣ ಬಿ.ಇಡಿ ಶಿಕ್ಷಣ

ಮಹಾವಿದ್ಯಾಲಯದ ಪ್ರಾಚಾರ್ಯರಾದ ಟಿ.ಬಸಪ್ಪ, ಉಪನ್ಯಾಸಕರುಗಳಾದ ಕೆ.ಪಿ.ನಾಗಭೂಷಣ್, ಎಚ್.ಮಂಜುನಾಥ ಹಾಗು ಸಿಬ್ಬಂದಿವರ್ಗ, ಸ್ನೇಹಿತರಾದ ವಾಣಿಜಗದೀಶ್, ನೂರಜಹಾನ್, ಸರಳ, ಸತೀಶ್, ಪುಟವಿನ್ಯಾಸ ಮಾಡಿಕೊಟ್ಟ ಶ್ರೀ ಸಾವಳಗಿ ಶಿವಲಿಂಗೇಶ್ವರ ಗ್ರಾಫಿಕ್ಸ್‌ನ ಶ್ರೀಮತಿ ರಶ್ಮಿಕೃಪಾಶಂಕರ್, ತಲಾವಿನ್ಯಾಸ ಮಾಡಿಕೊಟ್ಟ ಇಂಜನಿಯರ್ ಕೆ.ವೀರಭದ್ರಪ್ಪ, ಛಾಯಾಚಿತ್ರ ವಿನ್ಯಾಸಗೊಳಿಸಿದ ಬಂಜಗೆರೆ ದಿವಾಕರ್ ಅವರಿಗೆ,

ನನ್ನ ಸಂಶೋಧನಾ ಅಧ್ಯಯನದ ಸಂದರ್ಭದಲ್ಲಿ ಎಲ್ಲಾ ರೀತಿಯ ಸಹಾಯ, ಸಹಕಾರ ನೀಡಿದ ಸೋದರ ಎನ್.ತಿಪ್ಪೇಸ್ವಾಮಿ, ಬಾವಂದಿರುಗಳಾದ ವಿ.ಮಂಜುನಾಥ್, ವಿ.ದಯಾನಂದ, ಮೈದುನ ವಿ.ಲೋಕೇಶ್, ಅಕ್ಕ-ತಂಗಿಯರಾದ ಪಿ.ಗಿರಿಜಮ್ಮ, ಸುಧಾ, ಶ್ರೀದೇವಿ, ನಾದಿನಿ ಟಿ.ಕಾವ್ಯಶ್ರೀ ಹಾಗು ಎಲ್ಲಾ ಪುಟಾಣಿಗಳನ್ನು ನೆನೆಯಲೇಬೇಕು.

ನನ್ನ ಸಂಶೋಧನಾ ಅವಧಿಯುದ್ದಕ್ಕೂ ನಿಗದಿತ ಸಮಯದಲ್ಲಿ ಪ್ರಬಂಧ ಬರೆದು ಸಲ್ಲಿಸುವಂತೆ ಸದಾ ನನ್ನೊಂದಿಗೆ ಇದ್ದು ನನ್ನನ್ನು ಎಚ್ಚರಿಸುತ್ತಿದ್ದ ನನ್ನ ಪತಿ ವಿ.ವೀರಭದ್ರಯ್ಯ ಹಾಗು ಚಿರಂಜೀವಿಗಳಾದ ವಿ.ಎಸ್.ಮೇಘನಾ ಮತ್ತು ವಿ.ಎಸ್.ಮಂಜುನಾಥರನ್ನು ನೆನೆಯದಿರಲಾರೆ.

ಕೃತಜ್ಞತೆಗಳು

ಶಕುಂತಲ ಎನ್.

ಪರಿವಿಡಿ

ಅಧ್ಯಾಯ ೧

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪ

೧

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪ

ಇತಿಹಾಸವೆಂದರೆ ಗತಕಾಲದ ಘಟನೆಗಳನ್ನು ಲಭ್ಯವಿರುವ ಆಕರಗಳ ಮೇಲೆ ಪುನರ್‌ರಚಿಸುವುದಾಗಿದೆ. ಚರಿತ್ರೆಯ ಅಧ್ಯಯನದಿಂದ ಒಂದು ಕಾಲದ, ಸ್ಥಳದ ಹಾಗು ವ್ಯಕ್ತಿಯ ರಾಜಕೀಯ, ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಹಾಗು ಸಾಂಸ್ಕೃತಿಕ ಕ್ಷೇತ್ರಗಳಲ್ಲಾದ ಬೆಳವಣಿಗೆಯನ್ನು ತಿಳಿಯಬಹುದಾಗಿದೆ. ಇಂತಹ ಚರಿತ್ರೆಯ ರಚನೆಗೆ ಸಹಾಯಕವಾಗುವ ಆಕರಗಳಲ್ಲಿ ದಾಖಲೆಗಳು ಮತ್ತು ಸ್ಮಾರಕಗಳು ಬಹುಮುಖ್ಯವಾದವುಗಳಾಗಿವೆ. ಆದರೆ ಇಂತಹ ಐತಿಹಾಸಿಕ ಅಂಶಗಳನ್ನು ಪ್ರತಿಬಿಂಬಿಸುವ ಚಾರಿತ್ರಿಕ ದಾಖಲೆಗಳು ಮತ್ತು ಸ್ಮಾರಕಗಳಲ್ಲಿ ಕೆಲವು ಉಳಿದಿವೆ, ಇನ್ನೂ ಕೆಲವು ಹಾಳಾಗಿವೆ. ಅದರಲ್ಲೂ ಲಭ್ಯವಿರುವ ಇಂತಹ ದಾಖಲೆಗಳು ಮತ್ತು ಸ್ಮಾರಕಗಳ ಅವಶೇಷಗಳಿಂದ ಇದೂವರೆಗೂ ಕೇವಲ ಕರ್ನಾಟಕದ ಪ್ರಸಿದ್ಧ ರಾಜಮನೆತನಗಳ ಚರಿತ್ರೆಯನ್ನು ಮಾತ್ರ ಕುರಿತು ಅಧ್ಯಯನ ನಡೆಸಲಾಗಿದೆ. ಆದರೆ ಇತ್ತೀಚಿನ ಕೆಲವು ದಶಕಗಳಿಂದ ಚರಿತ್ರೆಯ ಅಧ್ಯಯನದ ದೃಷ್ಟಿಕೋನ ಅಥವಾ ಸಂಶೋಧನೆಯ ನಿಲುವು ಬದಲಾಗಿದೆ. ಅಂದರೆ ಪ್ರಾದೇಶಿಕ ಅಥವಾ ಸ್ಥಳೀಯ ಇತಿಹಾಸದ ಅಧ್ಯಯನದ ಬಗ್ಗೆ ಆಸಕ್ತಿ ತೋರಿಸಲಾಗಿದ್ದು, ಸೂಕ್ಷ್ಮ ಅಧ್ಯಯನದ ಮೂಲಕ ಸಮಗ್ರ ಅಧ್ಯಯನ ಮಾಡುವಲ್ಲಿ ಹೆಚ್ಚಿನ ಪ್ರಯತ್ನಗಳು ನಡೆಯುತ್ತಿವೆ. ಹಾಗಾಗಿ ಇತಿಹಾಸ ಶಾಸ್ತ್ರದ ಬೆಳವಣಿಗೆಯ ಪರಿಣಾಮವಾಗಿ ಚರಿತ್ರೆಕಾರರಿಂದ ನಿರ್ಲಕ್ಷಿಸಲ್ಪಟ್ಟಿದ್ದ ಸ್ಥಳೀಯ ಇತಿಹಾಸಕ್ಕೆ ಚರಿತ್ರೆಯ ಅಧ್ಯಯನದಲ್ಲಿ ಹೆಚ್ಚಿನ ಮಹತ್ವ ದೊರಕಿದೆ.[೧]

ದೇಶದ ಪ್ರತಿಯೊಂದು ಸ್ಥಳ, ಗ್ರಾಮ, ಜಿಲ್ಲೆ ಹಾಗು ರಾಜ್ಯಕ್ಕೂ ತನ್ನದೇ ಆದ ಚರಿತ್ರೆಯಿದ್ದು, ಆ ಚರಿತ್ರೆಯನ್ನು ಕ್ರಮಬದ್ಧ ಹಾಗು ವ್ಯವಸ್ಥಿತವಾಗಿ ಅಧ್ಯಯನ ಮಾಡಿ ಪುನರ್‌ರಚನೆ ಮಾಡಿದರೆ ಅದನ್ನು ಸ್ಥಳೀಯ ಇತಿಹಾಸ ಎನ್ನಬಹುದು. ಆದರೆ ಭಾರತದಂತಹ ಬಹುಭಾಷ ದೇಶಕ್ಕೆ "ಪ್ರಾದೇಶಿಕ ಇತಿಹಾಸ" ಎನ್ನುವ ಪದ ಅನ್ವಯಿಸುವುದಿಲ್ಲ ಎನ್ನುವುದು ಅನೇಕ ವಿದ್ವಾಂಸರುಗಳ ಅಭಿಪ್ರಾಯ. ಅಂದರೆ ನಮ್ಮ ನಾಡಿನಲ್ಲಿ ಚಾರಿತ್ರಿಕವಾಗಿ ಬೆಳವಣಿಗೆ ಹೊಂದಿದ ಪ್ರದೇಶಗಳು ಯಾವುದೇ ಕೇಂದ್ರಾಡಳಿತಕ್ಕೆ ಸಂಪೂರ್ಣವಾಗಿ ಒಳಪಟ್ಟಿರಲಿಲ್ಲ. ಹಾಗಾಗಿ ಭಾರತದ ಇತಿಹಾಸವೆಂದರೆ ವಿವಿಧ ರಾಜ್ಯಗಳ, ಪ್ರದೇಶಗಳ, ಇತಿಹಾಸವೇ

ಹೊರತು, ಕೆಲವೇ ರಾಜವಂಶಗಳ ಇತಿಹಾಸವಲ್ಲ ಎನ್ನುವುದು ಸ್ಪಷ್ಟ. ಆದ್ದರಿಂದ ಯಾವುದನ್ನು ಪ್ರಾದೇಶಿಕ ಇತಿಹಾಸವೆಂದು ಕರೆಯಲಾಗುವುದೋ ಅದನ್ನು ಸ್ಥಳೀಯ ಇತಿಹಾಸವೆಂದು ಕರೆಯುವುದು ಸೂಕ್ತ.[೨]

ಸ್ಥಳೀಯ ಇತಿಹಾಸ ಚರಿತ್ರೆಕಾರನಿಗೆ ಮುಖ್ಯವೆನಿಸುವ ದಾಖಲೆಗಳನ್ನು ಒದಗಿಸಿಕೊಟ್ಟು, ಆ ಪ್ರದೇಶದ ಇತಿಹಾಸ ರಚನೆಗೆ ಒಂದು ಚೌಕಟ್ಟನ್ನು ಸೃಷ್ಟಿಸಿಕೊಡುತ್ತದೆ. ಅಲ್ಲದೇ ಸ್ಥಳೀಯ ಇತಿಹಾಸವು ಎಲ್ಲಾ ವಿಧದ ಅಧ್ಯಯನದ ವಿಧಾನಗಳನ್ನು, ಚರಿತ್ರೆಯ ಮಾದರಿಗಳನ್ನು, ಮೌಖಿಕ, ಸಾಂಖ್ಯಿಕ ಮತ್ತು ಸಾಹಿತ್ಯಿಕ ಆಕರಗಳನ್ನು ಒಳಗೊಂಡಿದ್ದು, ಜನಪದ ಮತ್ತು ಜಾನಪದ ಜೀವನಕ್ಕೆ ಸಂಬಂಧಿಸಿದ ವಸ್ತು ವಿಶೇಷತೆ, ವಾಸ್ತುಶಿಲ್ಪ, ವಿವಿಧ ಸಮುದಾಯಗಳ ರಾಜಕೀಯ, ಆರ್ಥಿಕ, ಬೌದ್ಧಿಕ, ಉಡುಗೆ-ತೊಡುಗೆ, ಸ್ಥಳೀಯ ಉತ್ಪಾದನಾ ವಸ್ತುಗಳು, ಪರಿಸರ ಮುಂತಾದವುಗಳನ್ನು ಅರಿಯಲು ಸಹಾಯಕವಾಗಿವೆ.[೩] ಹಾಗಾಗಿ ಇತ್ತೀಚಿನ ದಿನಗಳಲ್ಲಿ ಕರ್ನಾಟಕದಲ್ಲಿನ ಅನೇಕ ಜಿಲ್ಲೆಗಳು ಮತ್ತು ಪ್ರದೇಶಗಳಲ್ಲಿ ಸಂಶೋಧನೆಗಳು ನಡೆಯುತ್ತಿದ್ದು, ಅನೇಕ ನವನವೀನ ಐತಿಹಾಸಿಕ ಅಂಶಗಳು ಬೆಳಕಿಗೆ ಬರುತ್ತಿವೆ. ಈ ನಿಟ್ಟಿನಲ್ಲಿ ಏಷ್ಯಾಖಂಡದಲ್ಲೇ ಅತ್ಯಂತ ಪ್ರಾಚೀನ ನೆಲೆಯಾದ ಚಿತ್ರದುರ್ಗ ಜಿಲ್ಲೆಯು[೪] ಸಹ ಈ ಸಾಲಿಗೆ ಸೇರಿರುವ ಒಂದು ಮಹತ್ವದ ಐತಿಹಾಸಿಕ ಮತ್ತು ಸಾಂಸ್ಕೃತಿಕ ಪ್ರದೇಶವಾಗಿದೆ.

ಅನಾದಿಕಾಲದಿಂದಲೂ ಮಾನವನ ನೆಲೆ ಹಾಗು ಚಟುವಟಿಕೆಗಳ ಕೇಂದ್ರವಾಗಿದ್ದು, ಚರಿತ್ರೆಯ ವಿವಿಧ ಮಜಲುಗಳನ್ನು ಹೊಂದಿರುವ ಚಿತ್ರದುರ್ಗ ಜಿಲ್ಲೆಯು, ಕರ್ನಾಟಕದ ಇತಿಹಾಸದಲ್ಲಿ ವಿಶಿಷ್ಟ ಸ್ಥಾನವನ್ನು ಪಡೆದುಕೊಂಡಿದೆ. ಏಳುಸುತ್ತಿನ ಕೋಟೆ, ಗಂಡುಮೆಟ್ಟಿನ ನಾಡು ಎಂದೇ ಚಿರಪರಿಚಿತವಾಗಿರುವ ಚಿತ್ರದುರ್ಗ ಅಸಾಧಾರಣ ಸಾಧನೆಗಳ ಪ್ರತೀಕವಾಗಿ ಹುಟ್ಟಿಕೊಂಡ ಕಥೆಗಳು, ಕುತೂಹಲ ಕೆರಳಿಸುವ ಕೋಟೆ, ದೇವಾಲಯಗಳು, ಸರಳ ಭಾಷೆ, ಮುಂತಾದ ವೈಶಿಷ್ಟ್ಯತೆಗಳಿಂದ ನಾಡಿನುದ್ದಗಲಕ್ಕೂ ಪ್ರಸಿದ್ಧಿಯಾಗಿದೆ.[೫] ಹೀಗೆ ಪ್ರಾಗಿತಿಹಾಸ ಕಾಲದಿಂದಲೂ ಮಾನವನ ಸಂಸ್ಕೃತಿಯ ಕೇಂದ್ರವಾಗಿರುವ ಚಿತ್ರದುರ್ಗ ಜಿಲ್ಲೆಯು, ಅನೇಕ ಸಾಮ್ರಾಜ್ಯಗಳ ಆಳ್ವಿಕೆಗೆ ಒಳಪಟ್ಟಿರುವುದನ್ನು ಮನಗಾಣುತ್ತೇವೆ. ಮೌರ್ಯರು, ಶಾತವಾಹನರು, ಕದಂಬರು, ಚಾಲುಕ್ಯರು, ರಾಷ್ಟ್ರಕೂಟರು, ಹೊಯ್ಸಳರು, ನೊಳಂಬರು, ಸೇವುಣರು, ವಿಜಯನಗರ ಅರಸರು, ಪಾಳೆಯಗಾರರು, ಹೈದರಾಲಿ-ಟಿಪ್ಪು, ಮೈಸೂರಿನ ಒಡೆಯರು ಪ್ರಮುಖರಾಗಿದ್ದು, ಇವರುಗಳು ತಮ್ಮ ಆಳ್ವಿಕೆಯ ಅವಧಿಯಲ್ಲಿ ಅನೇಕ ಶಾಸನಗಳನ್ನು ಹಾಕಿಸಿದ್ದಲ್ಲದೆ, ಅನೇಕ ದೇವಾಲಯಗಳು, ಅರಮನೆ, ಕೋಟೆಕೊತ್ತಲಗಳು, ಕೆರೆ-ಕಟ್ಟೆಗಳು ಹಾಗು ಮಠಗಳನ್ನು ನಿರ್ಮಾಣಮಾಡಿ, ಜಿಲ್ಲೆಯ ಇತಿಹಾಸ ರಚನೆಗೆ ಪ್ರಮುಖ

ಆಕರಗಳನ್ನಾಗಿ ಬಿಟ್ಟುಹೋಗಿದ್ದಾರೆ. ಈ ಆಕರಗಳಿಂದ ಅವರ ಕಾಲದ ರಾಜಕೀಯ, ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಹಾಗು ಸಾಂಸ್ಕೃತಿಕ ಕ್ಷೇತ್ರಗಳ ಬಗ್ಗೆ ತಿಳಿದುಕೊಳ್ಳಬಹುದಾಗಿದೆ.

ಉದ್ದೇಶ

ಒಂದು ದೇಶದ ಇತಿಹಾಸವನ್ನು ಅಧ್ಯಯನ ಮಾಡುವಲ್ಲಿ ಹಾಗು ರಚಿಸುವಲ್ಲಿ ಅನೇಕ ವ್ಯಕ್ತಿಗಳ ಪರಿಶ್ರಮದ ಅವಶ್ಯಕತೆಯಿದೆ. ಯಾವುದೇ ಒಬ್ಬ ವ್ಯಕ್ತಿಯಿಂದ ದೇಶದ ಇಡೀ ಇತಿಹಾಸವನ್ನು ಸಂಪೂರ್ಣವಾಗಿ, ಸಮಗ್ರವಾಗಿ ಅಧ್ಯಯನ ಮಾಡಲು ಸಾಧ್ಯವಿಲ್ಲ. ಹಾಗಾಗಿ ಆ ದೇಶದ ಇತಿಹಾಸವನ್ನು ಅನೇಕ ಘಟ್ಟಗಳಾಗಿ ವಿಂಗಡಿಸಿ, ಹಲವಾರು ಹಂತಗಳಲ್ಲಿ, ಹತ್ತು ಹಲವಾರು ವಿವಿಧ ದೃಷ್ಟಿಕೋನಗಳಿಂದ ವಿಶ್ಲೇಷಣೆ ಮಾಡಿ, ಅಂತಿಮವಾಗಿ ನಡೆಸಿದಂತಹ ಎಲ್ಲಾ ರೀತಿಯ ಅಧ್ಯಯನಗಳನ್ನು ಸಮಗ್ರವಾಗಿ ಪರಿಶೀಲಿಸಿ, ತುಲನಾತ್ಮಕವಾಗಿ ವಿವೇಚನೆ ಮಾಡಿ ಇತಿಹಾಸವನ್ನು ರಚಿಸಬೇಕಾಗುತ್ತದೆ.[೬] ಈ ಹಿನ್ನೆಲೆಯಲ್ಲಿ ಕರ್ನಾಟಕದ ಇತಿಹಾಸವನ್ನು ಅಧ್ಯಯನ ಮಾಡಿರುವ ವಿದ್ವಾಂಸರುಗಳ ಪ್ರಯತ್ನವನ್ನು ಗಮನಿಸಿದರೆ ಪ್ರಮುಖವಾಗಿ ರಾಜವಂಶಗಳ ಕಾಲ ಹಾಗು ಸಾಂಸ್ಕೃತಿಕ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಮೂರು ವಿಭಾಗಗಳಾಗಿ ವಿಂಗಡಿಸಿ ಅಧ್ಯಯನ ನಡೆಸಿರುವುದನ್ನು ಕಾಣಬಹುದಾಗಿದೆ.[೭] ಮೊದಲೆರಡು ಅಧ್ಯಯನಗಳು ಇಪ್ಪತ್ತನೆಯ ಶತಮಾನದ ಪ್ರಾರಂಭದಲ್ಲಿ ರೂಪುಗೊಂಡರೆ, ಮೂರನೆಯ ಅಧ್ಯಯನವು ಅದೇ ಶತಮಾನದ ಮಧ್ಯಭಾಗದ ನಂತರ ಪ್ರಾರಂಭವಾಯಿತು. ಇದರಲ್ಲಿ ಪ್ರಮುಖವಾಗಿ ಸಾಂಸ್ಕೃತಿಕ ಅಂಶಗಳನ್ನು ಪರಿಶೀಲನೆಗೆ ಒಳಪಡಿಸಿ, ಯಾವುದೋ ಒಂದು ಮಿತಿಯಲ್ಲಿ ಮಾತ್ರ ವಿವರವಾಗಿ ಅಧ್ಯಯನ ಮಾಡುವ ಪ್ರಯತ್ನಗಳು ಕನ್ನಡದಲ್ಲಿ ನಡೆದಿವೆ.[೮] ಇಂತಹವುಗಳಲ್ಲಿ ಡಾ. ಎಂ.ಚಿದಾನಂದಮೂರ್ತಿಯವರ 'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ' ಗ್ರಂಥ ಗಮನಾರ್ಹವಾಗಿದೆ.

ಕಲೆ, ವಾಸ್ತು ಮತ್ತು ಮೂರ್ತಿಶಿಲ್ಪಗಳ ಅಧ್ಯಯನದ ಬಗ್ಗೆ ಹೇಳುವುದಾದರೆ, ಆ ಕ್ಷೇತ್ರಗಳ ಬದಲಾವಣಾ ಘಟ್ಟಗಳನ್ನು ಆಯಾಕಾಲದ ರಾಜವಂಶಗಳ ಹೆಸರಿನೊಂದಿಗೆ ಸಮೀಕರಿಸಲಾಗಿದೆ. ಇದು ಔಚಿತ್ಯವೂ ಹೌದು. ಪ್ರಾಚೀನ ಭಾರತದಲ್ಲಿ ಬಹುಪಾಲು ಎಲ್ಲಾ ಕಲಾ ಪ್ರಕಾರಗಳು ಹುಟ್ಟಿ ಬೆಳೆದದ್ದು ರಾಜಾಶ್ರಯದಿಂದಲೇ. ಆಶ್ರಯದಾತರು ಇಲ್ಲದೆ ಯಾವುದೇ ಕಲಾ ಪ್ರಕಾರಗಳು ಪ್ರವರ್ಧಮಾನಕ್ಕೆ ಬರುವುದಿಲ್ಲ. ಹಾಗೆಯೇ ಆಯಾ ರಾಜಮನೆತನಗಳ ಏಳು-ಬೀಳುಗಳ ಪ್ರಭಾವವು ಕಲಾ ಪ್ರಕಾರಗಳ ಮೇಲಾಗಿರುವುದನ್ನು ಗುರುತಿಸಲಾಗಿದೆ. ಕೆಲವರು ಖಾಸಗಿಯಾಗಿ ಕಲಾ ಪ್ರಕಾರಗಳಿಗೆ, ಸಾಂಸ್ಕೃತಿಕ ಅಂಶಗಳಿಗೆ ನೆರವು ನೀಡಿದ್ದರೂ, ಈ ಎಲ್ಲಾ ನೆರವು ಕಲಾವಿದರ, ಕಲಾಕೃತಿಗಳ, ಸಾಂಸ್ಕೃತಿಕ ಅಂಶಗಳ

ಸಂಖ್ಯೆಯನ್ನು ಹೆಚ್ಚಿಸಿದೆಯೇ ಹೊರತು, ಕಲಾ ಪ್ರಕಾರಗಳ ಒಲವುಗಳನ್ನು ಬದಲಾಯಿಸುವ ಸಾಮರ್ಥ್ಯವನ್ನು ಹೊಂದಿರುವುದಿಲ್ಲ.[೯] ಈ ಒಂದು ದೃಷ್ಟಿಯಿಂದಲೇ ಭಾರತೀಯ ಅಥವಾ ಕರ್ನಾಟಕದ ವಾಸ್ತುಶಿಲ್ಪವನ್ನು ವಿಂಗಡಿಸುವಾಗ ರಾಜಮನೆತನಗಳನ್ನು ಗಮನದಲ್ಲಿಟ್ಟುಕೊಂಡು, ನಂತರ ಅವುಗಳನ್ನು ಧರ್ಮದ ದೃಷ್ಟಿಯಿಂದ ವಿಂಗಡಿಸಲಾಗುತ್ತದೆ.[೧೦]

ಸಾಮಾನ್ಯವಾಗಿ ಕರ್ನಾಟಕದ ಕಲೆ ಮತ್ತು ವಾಸ್ತುಶಿಲ್ಪ ಕುರಿತಂತೆ ವಿಜಯನಗರ ಕಾಲದವರೆಗೆ ಮಾತ್ರ ಹೆಚ್ಚು ಅಧ್ಯಯನಗಳು ನಡೆದಿವೆ. ಆದರೆ ವಿಜಯನಗರೋತ್ತರ ಕಾಲದ ಕಲೆ ಮತ್ತು ವಾಸ್ತುಶಿಲ್ಪ ಕುರಿತಂತೆ ಅಧ್ಯಯನಗಳು ಕೆಲವೆಡೆ ಪ್ರಾದೇಶಿಕವಾಗಿ, ಅದರಲ್ಲೂ ತುಂಬಾ ವಿರಳವಾಗಿ ನಡೆದಿವೆ. ಅಂದರೆ ಗಣ್ಯ ರಾಜಮನೆತನಗಳ ಇತಿಹಾಸ ರಚನೆಗೆ ಕೊಟ್ಟ ಪ್ರಾಶಸ್ತ್ಯ, ಅಧೀನ ಅಥವಾ ಸಣ್ಣ ರಾಜಮನೆತನಗಳ ಇತಿಹಾಸ ರಚನೆಗೆ ಕೊಡಲಿಲ್ಲ. ಹಾಗಾಗಿ ಅವುಗಳ ಇತಿಹಾಸಕ್ಕೆ ಸಂಬಂಧಪಟ್ಟ ಸಂಶೋಧನೆಗಳು ವಿರಳವಾಗಿದ್ದವು. ಆದರೆ ಇಂದು ಸಂಶೋಧನೆಯು ಹೊಸ ತಿರುವನ್ನು ಪಡೆದುಕೊಂಡಿದೆ. ಇದುವರೆಗೂ ಕೇವಲ ರಾಜಕೀಯ, ಸಾಮಾಜಿಕ ಕ್ಷೇತ್ರಗಳಲ್ಲಿ ಗಣ್ಯ ಮನೆತನಗಳ ಬಗ್ಗೆ ನಡೆದಿದ್ದ ಸಂಶೋಧನೆಯು ಕೆಲವು ಸಾಂಸ್ಕೃತಿಕ ಕ್ಷೇತ್ರಗಳ ಸಂಶೋಧನೆಗೂ ಹೆಚ್ಚು ಒತ್ತು ಕೊಡಲಾಗಿದೆ. ಅದರಲ್ಲೂ ಪ್ರಾದೇಶಿಕ ಇತಿಹಾಸವನ್ನು ಕುರಿತಾದ ಹೆಚ್ಚು ಸಂಶೋಧನಾ ಗ್ರಂಥಗಳು, ಲೇಖನಗಳು ಹೊರ ಬರುತ್ತಿವೆ. ಇಂತಹ ಪ್ರಾದೇಶಿಕ ಇತಿಹಾಸ ರಚನೆಯಿಂದ ದೇಶದ ಹಾಗು ರಾಜ್ಯದ ಇತಿಹಾಸಕ್ಕೆ ಸಂಬಧಿಸಿದಂತೆ ಸ್ಪಷ್ಟ ಚಿತ್ರಣ ದೊರೆಯುತ್ತದೆನ್ನುವ ಮಾತಿನಲ್ಲಿ ಯಾವುದೇ ಸಂಶಯವಿಲ್ಲ.

ಸ್ಥಳೀಯ ಅಥವಾ ಪ್ರಾದೇಶಿಕ ಚರಿತ್ರೆ ಬೆಳೆಯದಿದ್ದರೆ ರಾಜ್ಯ ಅಥವಾ ರಾಷ್ಟ್ರದ ಇತಿಹಾಸ ಪೂರ್ಣವಾಗಲಾರದು. ಅರ್ಥಾತ್ ಅಂತಹ ಇತಿಹಾಸ ಸ್ಪಷ್ಟತೆಯನ್ನು ಕಾಣಲಾರದು. ಹಾಗಾಗಿ ಸ್ಥಳೀಯ ಇತಿಹಾಸ ಆಯಾಯ ಸಾಮಾಜಿಕ, ಧಾರ್ಮಿಕ, ಆರ್ಥಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಇತಿಹಾಸದ ಮಜಲುಗಳನ್ನು ಸಮಗ್ರವಾಗಿ ಒಂದು ಕಡೆ ತಂದಾಗ ನಮ್ಮ ಇತಿಹಾಸ ಸ್ಪಷ್ಟಗೊಳ್ಳುತ್ತದೆ. ಈ ನಿಟ್ಟಿನಲ್ಲಿ ಪ್ರಸ್ತುತ ಅಧ್ಯಯನವು ಅಂತಹ ಪ್ರಾದೇಶಿಕ ಇತಿಹಾಸ ರಚನಾ ಕಾರ್ಯದಲ್ಲಿ ಮುಂದಾಗಿದೆ ಹಾಗು ಉದ್ದೇಶವೂ ಹೌದು.

ಪ್ರತಿಯೊಂದು ಅಧ್ಯಯನವು ಒಂದಲ್ಲ ಒಂದು ಉದ್ದೇಶವನ್ನು ಇಟ್ಟುಕೊಂಡಿರುವುದರ ಜೊತೆಗೆ, ಗುರಿಯನ್ನು ಹೊಂದಿರುತ್ತದೆ. ಇಲ್ಲಿ ಗುರಿ ಎಂದರೆ ಒಂದು ಸಮಸ್ಯೆಗೆ ಪರಿಹಾರವನ್ನು ಕಂಡುಕೊಳ್ಳುವುದಾದರೆ, ಏನನ್ನು ಶೋಧಿಸಲು ಪ್ರಯತ್ನಿಸಲಾಗುತ್ತದೆ ಎನ್ನುವುದನ್ನು ಉದ್ದೇಶ ತಿಳಿಸುತ್ತದೆ. ಇಂತಹ ಅಧ್ಯಯನದ ಉದ್ದೇಶಗಳು ಸಂಶೋಧನಾಕಾರ್ಯದಲ್ಲಿ

ಒಂದು ಉತ್ತಮ ಮಾರ್ಗಸೂಚಿಯಂತೆ ಕೆಲಸ ನಿರ್ವಹಿಸುತ್ತವೆ.[೧೧] ಪ್ರಸ್ತುತ ಅಧ್ಯಯನದ ವಿಷಯ "ಚಿತ್ರದುರ್ಗ ಪಾಳೆಯಗಾರರ ಕಾಲದ ಕಲೆ ಮತ್ತು ವಾಸ್ತುಶಿಲ್ಪ"-ಒಂದು ಅಧ್ಯಯನವಾಗಿದ್ದು, ಪ್ರಸ್ತುತ ಅಧ್ಯಯನದ ಉದ್ದೇಶವೂ ಇವರ ಆಳ್ವಿಕೆಯ ಅವಧಿಯಲ್ಲಿ ನಿರ್ಮಾಣಗೊಂಡ ಕಲೆ ಮತ್ತು ವಾಸ್ತು ನಿರ್ಮಾಣಗಳನ್ನು ಕುರಿತು ಒಂದು ವ್ಯವಸ್ಥಿತ ಹಾಗು ಕ್ರಮಬದ್ಧ ಅಧ್ಯಯನ ಕೈಗೊಳ್ಳುವುದಾಗಿದೆ.

ವಿಜಯನಗರೋತ್ತರ ಕಾಲದಲ್ಲಿ ಚಿತ್ರದುರ್ಗ ಜಿಲ್ಲೆಯಲ್ಲಿ ಅನೇಕ ಪಾಳೆಯಪಟ್ಟುಗಳು ಆಳ್ವಿಕೆ ನಡೆಸಿದ್ದು ತಮ್ಮದೇ ಆದ ಕೊಡುಗೆಗಳನ್ನು ನೀಡಿದ್ದಾರೆ. ಹಾಗಾಗಿ ತಮ್ಮ ಇತಿಮಿತಿಯಲ್ಲಿ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತೊಡಗಿದ್ದನ್ನು ಮತ್ತು ಕಲೆ, ವಾಸ್ತು ನಿರ್ಮಾಣ ಗಳಿಗೆ ನೀಡಿದ ಪ್ರೋತ್ಸಾಹ, ಕೊಡುಗೆಗಳನ್ನು ಗುರುತಿಸಬಹುದಾಗಿದೆ. ಅಂತಹ ಪಾಳೆಯಪಟ್ಟುಗಳಲ್ಲಿ ಒಂದಾದ ಹಾಗು ಪ್ರಸಿದ್ಧವಾದ ಚಿತ್ರದುರ್ಗ ಪ್ರದೇಶವನ್ನು ಆಳಿದ ಚಿತ್ರದುರ್ಗ ಪಾಳೆಯಗಾರರ ಕಾಲದಲ್ಲಿ ನಡೆದ ಕಲೆ ಮತ್ತು ವಾಸ್ತು ನಿರ್ಮಾಣಗಳನ್ನು ಕುರಿತಂತೆ ಸಮಗ್ರ ಅಧ್ಯಯನ ಮಾಡುವುದು ಅವಶ್ಯಕವಾಗಿದೆ. ಕಾರಣ ಇವರನ್ನು ಕುರಿತಂತೆ ನಡೆದಿರುವ ಈವರೆಗಿನ ಅಧ್ಯಯನಗಳು ಹೆಚ್ಚಾಗಿ ಅವರ ರಾಜಕೀಯ ಚರಿತ್ರೆಯನ್ನು ಒಳಗೊಂಡಿವೆ. ಆದರೆ ಕೆಲವು ದೇವಾಲಯಗಳ ಬಗ್ಗೆ ಕೆಲವೊಂದು ಗ್ರಂಥಗಳಲ್ಲಿ, ಲೇಖನಗಳಲ್ಲಿ, ಪತ್ರಿಕೆಗಳಲ್ಲಿ ಉಲ್ಲೇಖವಿದ್ದರೂ ಸಮಗ್ರವಾದ ಅಧ್ಯಯನವಾಗಿಲ್ಲ ಹಾಗು ವಿವರವಾದ ಮಾಹಿತಿ ನೀಡಿಲ್ಲ. ಅಂದರೆ ಇವರ ಕಾಲದ ಕಲೆ ಮತ್ತು ವಾಸ್ತುಶಿಲ್ಪ ಕುರಿತಂತೆ ಒಂದು ಪ್ರತ್ಯೇಕ, ವ್ಯವಸ್ಥಿತ, ಕ್ರಮಬದ್ಧವಾದ ಹಾಗು ಸಂಶೋಧನಾತ್ಮಕವಾದ ಸಾಂಸ್ಕೃತಿಕ ಅಧ್ಯಯನ ಇದುವರೆಗೂ ನಡೆದಿಲ್ಲವೆಂದೇ ಹೇಳಬಹುದು.

ಈ ಹಿನ್ನೆಲೆಯಲ್ಲಿ ಚಿತ್ರದುರ್ಗ ಪಾಳೆಯಗಾರರು ಕಲೆ ಮತ್ತು ವಾಸ್ತುಶಿಲ್ಪಕ್ಕೆ ನೀಡಿರುವ ಕೊಡುಗೆಗಳ ಬಗ್ಗೆ ಸಮಗ್ರವಾಗಿ ಅಧ್ಯಯನ ಕೈಗೊಂಡು ಸವಿವರವಾದ ಮಾಹಿತಿಯನ್ನು ಸಂಗ್ರಹಿಸಿ, ವಿಜಯನಗರೋತ್ತರ ಕಾಲದಲ್ಲೂ ಸಹ ಕರ್ನಾಟಕದ ಕಲೆ ಮತ್ತು ವಾಸ್ತುಶಿಲ್ಪ ಪರಂಪರೆ ಜೀವಂತವಾಗಿ ಮುಂದುವರೆದಿರುವುದನ್ನು ಗುರುತಿಸುವುದೇ, ಪ್ರಸ್ತುತ ಅಧ್ಯಯನದ ಉದ್ದೇಶವಾಗಿದೆ, ಹಾಗು ಸ್ಥಳೀಯ ನಾಯಕರು ನೆರೆಹೊರೆಯ ರಾಜಕೀಯ ಶಕ್ತಿಗಳಿಂದ ಜರ್ಜರಿತವಾಗಿದ್ದರೂ ಕಲೆ ಮತ್ತು ವಾಸ್ತು ಪರಂಪರೆಯನ್ನು ಮುಂದುವರೆಸಿಕೊಂಡು ಬಂದ ಸಂದರ್ಭವನ್ನು ಗಮನಿಸುವುದು ಸಹ ಬಹುಮುಖ್ಯವಾಗಿದೆ. ಅಷ್ಟೇ ಅಲ್ಲದೆ ಪ್ರಸ್ತುತ ಅಧ್ಯಯನದಲ್ಲಿ ಹೊಸದಾಗಿ ಸೇರ್ಪಡೆಗೊಂಡ ವಾಸ್ತು ಮತ್ತು ಮೂರ್ತಿಶಿಲ್ಪದ ರಚನೆ, ಶೈಲಿ, ಲಕ್ಷಣ ಮತ್ತು ನಿರ್ಮಾಣ ಸಾಮಾಗ್ರಿಗಳನ್ನು ಕುರಿತು ಅಧ್ಯಯನ ಮಾಡಲಾಗುವುದು.

ಮುಂದುವರೆದು ಚಿತ್ರದುರ್ಗ ಪಾಳೆಯಗಾರರು ವಿಜಯನಗರ ಕಾಲದ ಕಲೆ ಮತ್ತು ವಾಸ್ತುಶಿಲ್ಪದ ಲಕ್ಷಣಗಳನ್ನು ಅನುಸರಿಸಿದ್ದಾರೆಯೇ, ಅನುಸರಿಸಿದ್ದಲ್ಲಿ ಹೊಸದಾಗಿ ಸೇರ್ಪಡೆಗೊಂಡ ರಚನೆಗಳಾವುವು ಅಥವಾ ತಮ್ಮದೇ ಆದಂತಹ ವಾಸ್ತುಶೈಲಿಯನ್ನು ಸೃಷ್ಟಿಸಿದರೇ, ಹಾಗಿದ್ದರೆ ಇವರದೇ ಆದಂತಹ ಕಲಾಶೈಲಿಯ ಲಕ್ಷಣಗಳಾವುವು ಎಂಬುದನ್ನು ಸೂಕ್ಷ್ಮವಾಗಿ ಗಮನಿಸಿ, ಅವರ ಕಲೆ ಮತ್ತು ವಾಸ್ತುಶಿಲ್ಪದ ವೈಶಿಷ್ಟತೆಯನ್ನು ಗುರುತಿಸುವುದೇ ಪ್ರಸ್ತುತ ಅಧ್ಯಯನದ ಉದ್ದೇಶವಾಗಿದೆ. ಇದರ ಮೂಲಕ ಅವರ ಕಾಲದ ಕಲೆ ಮತ್ತು ವಾಸ್ತುಶಿಲ್ಪದ ಗುಣಲಕ್ಷಣಗಳನ್ನು ಅರಿಯುವುದಾಗಿದೆ.

ಅಧ್ಯಯನದ ವ್ಯಾಪ್ತಿ

ಸಾಮಾನ್ಯ ಅರ್ಥದಲ್ಲಿ 'ವ್ಯಾಪ್ತಿ' ಎಂದರೆ ಎಲ್ಲೆ, ಮೇರೆ, ಹರವು, ಗಡಿ, ವೈಶಾಲ್ಯತೆ ಅಥವಾ ಸೀಮಾರೇಖೆ ಎಂದಾಗುತ್ತದೆ. ಆದರೆ ಯಾವುದೇ ಒಂದು ವಿಷಯದ ವ್ಯಾಪ್ತಿ ಎಂದರೆ ಆ ಕ್ಷೇತ್ರದ ವೈಶಾಲ್ಯತೆ, ಹರವು ಅಥವಾ ಅಧ್ಯಯನದ ಸೀಮಾರೇಖೆ ಎಂದರ್ಥ. ಯಾವುದೇ ಸಂಶೋಧನೆಗೆ ಒಂದು ಚೌಕಟ್ಟು, ಅಂದರೆ ವ್ಯಾಪ್ತಿ ಬಹಳ ಮುಖ್ಯ. ಒಂದು ನಿರ್ದಿಷ್ಟ ಹಾಗು ಉದ್ದೇಶಪೂರಿತವಾದ ಸಂಶೋಧನೆ ಯಶಸ್ಸು ಕಾಣಬೇಕೆಂದರೆ ಅದಕ್ಕೆ ಒಂದು ಚೌಕಟ್ಟು ಅಗತ್ಯ. ಈ ಚೌಕಟ್ಟಿನ ಕ್ರಮಬದ್ಧತೆಯಿಂದ ಸ್ಪಷ್ಟವಾದ ಇತಿಹಾಸವನ್ನು ರಚಿಸಲು ಸಾಧ್ಯವಾಗುತ್ತದೆ. ವ್ಯಾಪ್ತಿಗಳಿಲ್ಲದ ಅಧ್ಯಯನವು ಗೊಂದಲಮಯವಾಗಿ ಸಂಶೋಧಕನ ಮಿತಿಯನ್ನು ತೀವ್ರಗೊಳಿಸುವುದಲ್ಲದೇ, ಸಂಶೋಧಕನನ್ನು ದಾರಿ ತಪ್ಪಿಸುತ್ತದೆ.

ಪ್ರಸ್ತುತ ಅಧ್ಯಯನದ ವ್ಯಾಪ್ತಿಯು ,ಶೀರ್ಷಿಕೆಯನ್ವಯ ಚಿತ್ರದುರ್ಗ ಪಾಳೆಯಗಾರರಿಗೆ ಮಾತ್ರ ಸೀಮಿತವಾಗಿದೆ. ಅಂದರೆ ವಿಷಯದ ವ್ಯಾಪ್ತಿಯು ಪ್ರಧಾನವಾಗಿ ಚಿತ್ರದುರ್ಗ ಪಾಳೆಯಗಾರರ ಕಾಲದಲ್ಲಿ ನಿರ್ಮಾಣಗೊಂಡ ದೇವಾಲಯಗಳು, ಮೂರ್ತಿಶಿಲ್ಪಗಳು, ಚಿತ್ರಕಲೆ, ಮಠಗಳು, ಕೋಟೆಗಳು ಹಾಗು ಶಾಸನಗಳ ವಿಷಯಗಳನ್ನೊಳಗೊಂಡಿದೆ. ಈ ಮೂಲಕ ಕರ್ನಾಟಕದ ಕಲಾ ಇತಿಹಾಸಕ್ಕೆ ಮತ್ತು ವಿಜಯನಗರೋತ್ತರ ಕಾಲದ ಕಲೆ ಮತ್ತು ವಾಸ್ತುಶಿಲ್ಪ ಕ್ಷೇತ್ರಕ್ಕೆ ಪ್ರಾದೇಶಿಕವಾಗಿ ಚಿತ್ರದುರ್ಗ ಪಾಳೆಯಗಾರರ ಕೊಡುಗೆಗಳನ್ನು ಪರಿಶೀಲಿಸಲಾಗುವುದು.

ಅಧ್ಯಯನದ ಸ್ವರೂಪ

ಪ್ರಸ್ತುತ ಅಧ್ಯಯನವು ದಾಖಲಾತಿ ಮತ್ತು ವಿವರಣೆಗಳನ್ನೊಳಗೊಂಡಂತೆ ವಿಶ್ಲೇಷಣಾತ್ಮಕ ವಾಗಿರುತ್ತದೆ. ಮುಖ್ಯವಾಗಿ ಚಿತ್ರದುರ್ಗ ಪಾಳೆಯಗಾರರ ಕಾಲದ ಕಲೆ ಮತ್ತು

ವಾಸ್ತುಶಿಲ್ಪವನ್ನು ಕುರಿತಂತೆ ಸಂಶೋಧನಾತ್ಮಕವಾದ ಅಧ್ಯಯನವಾಗಿರುತ್ತದೆ ಹಾಗು ಮುಂದಿನ ಅಧ್ಯಯನ ಮತ್ತು ಸಂಶೋಧನೆಗಳಿಗೆ ಅನುವು ಮಾಡಿಕೊಡುವ ಸ್ವರೂಪವನ್ನು ಹೊಂದಿದೆ. ಪ್ರಸ್ತುತ ಅಧ್ಯಯನದ ವಿಷಯವನ್ನು ಅಧ್ಯಯನದ ಅನುಕೂಲಕ್ಕಾಗಿ ಐದು ಅಧ್ಯಾಯಗಳಾಗಿ ವಿಭಾಗಿಸಲಾಗಿದ್ದು, ಪ್ರತಿಯೊಂದು ಅಧ್ಯಾಯವು ಉಪಶೀರ್ಷಿಕೆಗಳನ್ನೊಳಗೊಂಡಿದೆ.

ಮೊದಲನೆಯ ಅಧ್ಯಾಯವು ಅಧ್ಯಯನದ ಉದ್ದೇಶ, ವ್ಯಾಪ್ತಿ, ಸ್ವರೂಪ, ವಿಧಾನ, ಈವರೆಗಿನ ಅಧ್ಯಯನದ ಸಮೀಕ್ಷೆ ಎಂಬ ವಿಷಯಗಳನ್ನೊಳಗೊಂಡಿದೆ. ಈ ಅಧ್ಯಾಯದ ಅಧ್ಯಯನಕ್ಕೆ ಸಹಾಯಕವಾದ ಆಕರಗಳು ಸೇರಿದಂತೆ ಚಿತ್ರದುರ್ಗ ಹಾಗು ಚಿತ್ರದುರ್ಗ ಪಾಳೆಯಗಾರರ ಬಗ್ಗೆ ಈ ಹಿಂದೆ ನಡೆದಿರುವ ಅಧ್ಯಯನಗಳು ಹಾಗು ಪ್ರಸ್ತುತ ಅಧ್ಯಯನದ ವಿಧಾನಗಳನ್ನು ಕುರಿತು ಚರ್ಚಿಸಲಾಗಿದೆ. ಈ ವಿವರಗಳು ಪ್ರಸ್ತುತ ನಿಬಂಧಕ್ಕೆ ಅಗತ್ಯವಾದ ತಾತ್ವಿಕ ಹಿನ್ನೆಲೆಯನ್ನು ರೂಪಿಸುತ್ತವೆಂದು ಹೇಳಬಹುದು.

ಪ್ರಾಗೈತಿಹಾಸಿಕ ಕಾಲದಿಂದ ಆಧುನಿಕ ಕಾಲದವರೆಗೂ ತನ್ನದೇ ಆದ ಚಾರಿತ್ರಿಕ ಘಟ್ಟಗಳನ್ನು ಗುರುತಿಸಿಕೊಂಡಿರುವ ಚಿತ್ರದುರ್ಗವು ಕರ್ನಾಟಕದ ಮಧ್ಯಭಾಗದಲ್ಲಿರುವ ಪ್ರಮುಖ ಜಿಲ್ಲೆಗಳಲ್ಲೊಂದಾಗಿದೆ. ಪ್ರಾಚೀನ ಕಾಲದಿಂದಲೇ ಜನವಸತಿ ಪ್ರದೇಶವಾಗಿದ್ದು, ಉತ್ತರ ಮತ್ತು ದಕ್ಷಿಣ ಕರ್ನಾಟಕದ ಸಂಸ್ಕೃತಿಯನ್ನು ಬೆಸೆಯುವ ಕೊಂಡಿಯಾಗಿದೆ. ವಿಶೇಷವಾಗಿ ಬ್ರಹ್ಮಗಿರಿ ಮತ್ತು ಚಂದ್ರವಳ್ಳಿಗಳು ಜಿಲ್ಲೆಯ ಅತ್ಯಂತ ಪ್ರಾಚೀನ ನೆಲೆಗಳಾಗಿದ್ದು, ಜಿಲ್ಲೆಯ ಇತಿಹಾಸದ ಮೇಲೆ ಹೊಸಬೆಳಕು ಚೆಲ್ಲಿವೆ.

ಇಂತಹ ಚಾರಿತ್ರಿಕ ಮಹತ್ವವನ್ನು ಹೊಂದಿರುವ ಚಿತ್ರದುರ್ಗ ಜಿಲ್ಲೆಯು ೧೯೫೬ರಲ್ಲಿ ನವಮೈಸೂರು ರಾಜ್ಯ ರಚನೆಗೊಂಡಾಗ ಸ್ವತಂತ್ರ ಜಿಲ್ಲೆಯಾಗಿ ಅಸ್ತಿತ್ವಕ್ಕೆ ಬಂದಿತು. ಆಗ ದಾವಣಗೆರೆ, ಹರಿಹರ, ಜಗಲೂರು, ಚಿತ್ರದುರ್ಗ ಚಳ್ಳಕೆರೆ, ಮೊಳಕಾಲ್ಮೂರು, ಹಿರಿಯೂರು, ಹೊಸದುರ್ಗ ಮತ್ತು ಹೊಳಲ್ಕೆರೆಗಳೆಂಬ ಒಂಭತ್ತು ತಾಲ್ಲೂಕುಗಳನ್ನು ಒಳಗೊಂಡಿದ್ದು, ರಾಜ್ಯದಲ್ಲಿಯೇ ಬಹುದೊಡ್ಡ ಜಿಲ್ಲೆಗಳಲ್ಲಿ ಒಂದಾಗಿತ್ತು ಹಾಗು ವೈವಿಧ್ಯಮಯವಾದ ಪ್ರಾಕೃತಿಕ ಸಂಪತ್ತಿನಿಂದ ಕೂಡಿತ್ತು. ಆದರೆ ಕ್ರಿ.ಶ. ೧೯೯೭ನೆಯ ನವೆಂಬರ್ ಒಂದರಂದು ಹಳೆಯ ಚಿತ್ರದುರ್ಗ ಜಿಲ್ಲೆಯನ್ನು ಆಡಳಿತದ ಅನುಕೂಲಕ್ಕಾಗಿ ಎರಡು ಭಾಗಗಳಾಗಿ ವಿಭಾಗಿಸಿ ಚಿತ್ರದುರ್ಗ ಜಿಲ್ಲೆಯ ಬಹುದೊಡ್ಡ ತಾಲ್ಲೂಕು ಕೇಂದ್ರವಾಗಿದ್ದ ದಾವಣಗೆರೆಯನ್ನು ದಾವಣಗೆರೆ, ಹರಿಹರ, ಜಗಲೂರು, ಚನ್ನಗಿರಿ, ಹೊನ್ನಾಳಿ ತಾಲ್ಲೂಕುಗಳನ್ನೊಳಗೊಂಡ ಹೊಸ ಜಿಲ್ಲೆಯನ್ನಾಗಿ ರಚಿಸಲಾಯಿತು.[೧೨] ಆಗ ಚಿತ್ರದುರ್ಗ ಜಿಲ್ಲೆಯಲ್ಲಿ ಚಿತ್ರದುರ್ಗ, ಚಳ್ಳಕೆರೆ,

ಮೊಳಕಾಲ್ಮೂರು, ಹೊಳಲ್ಕೆರೆ, ಹೊಸದುರ್ಗ, ಹಿರಿಯೂರು ತಾಲ್ಲೂಕುಗಳು ಉಳಿದುಕೊಂಡವು.[೧೩] ಆ ಸಂದರ್ಭದಲ್ಲಿ ಜಿಲ್ಲೆಯು ಕೇವಲ ಆಡಳಿತಾತ್ಮಕವಾಗಿ ಬೇರೆಯಾಗದೆ, ಭೌಗೋಳಿಕ ನೆಲೆ ಮತ್ತು ಚರಿತ್ರೆಯ ಮೇರೆಗಳನ್ನು ಕಳೆದುಕೊಂಡಿತು. ರಾಜ್ಯದಲ್ಲಿಯೇ ಏಳನೆಯ ಸ್ಥಾನದಲ್ಲಿದ್ದ (ವಿಸ್ತೀರ್ಣದಲ್ಲಿ) ಜಿಲ್ಲೆಯು, ಒಂಭತ್ತನೆಯ ಸ್ಥಾನಕ್ಕೆ ಬರುವಂತಾಯಿತು.[೧೪] ಈ ಎಲ್ಲಾ ಹಿನ್ನೆಲೆಯೊಂದಿಗೆ ಜಿಲ್ಲೆಯ ಭೌಗೋಳಿಕ ಮತ್ತು ಚಾರಿತ್ರಿಕ ಹಿನ್ನೆಲೆಯನ್ನು ಕುರಿತಂತೆ ಸಂಕ್ಷಿಪ್ತವಾಗಿ ಪ್ರಸ್ತುತ ಎರಡನೆಯ ಅಧ್ಯಾಯದಲ್ಲಿ ವಿವೇಚಿಸಲಾಗಿದೆ.

ಮೂರನೆಯ ಅಧ್ಯಾಯದಲ್ಲಿ ವಾಸ್ತುಶಿಲ್ಪದ ಅಧ್ಯಯನವಿದ್ದು ವಾಸ್ತುಶಿಲ್ಪದ ಅರ್ಥ, ಪ್ರಧಾನವಾಗಿ ಪಾಳೆಯಗಾರರ ಕಾಲದಲ್ಲಿ ನಿರ್ಮಾಣಗೊಂಡ ದೇವಾಲಯಗಳನ್ನು, ಅವುಗಳ ರಚನೆ, ಶೈಲಿ, ಲಕ್ಷಣ ಮತ್ತು ಕಟ್ಟಡ ಸಾಮಾಗ್ರಿ ಕುರಿತಂತೆ ವಿವರ ಮತ್ತು ವಿಶ್ಲೇಷಣಾತ್ಮಕವಾಗಿ ಪರಿಶೀಲಿಸುವ ಪ್ರಯತ್ನವಿದೆ. ಇದರೊಂದಿಗೆ ಮಠಗಳು, ಅರಮನೆ ಮತ್ತು ಕೋಟೆಕೊತ್ತಲಗಳ ವಾಸ್ತುರಚನೆಯನ್ನು ಕುರಿತಂತೆ ಸಾಂದರ್ಭಿಕವಾಗಿ ಪ್ರಸ್ತಾಪಿಸಲಾಗಿದೆ.

ನಾಲ್ಕನೆಯ ಅಧ್ಯಾಯವು ಮೂರ್ತಿಶಿಲ್ಪ ಹಾಗು ಚಿತ್ರಕಲೆಯನ್ನು ಒಳಗೊಂಡಿದ್ದು, ದೇವಾಲಯಗಳಲ್ಲಿನ ಬಿಡಿಶಿಲ್ಪಗಳು, ಉಬ್ಬುಶಿಲ್ಪಗಳು ಹಾಗು ಈ ದೇವಾಲಯ, ಮಠಗಳಲ್ಲಿ ರಚನೆಗೊಂಡಿರುವ ಭಿತ್ತಿವರ್ಣಚಿತ್ರಗಳನ್ನು ಕುರಿತು ಪರಿಶೀಲಿಸಲಾಗಿದೆ. ಅಲ್ಲದೇ ಅವುಗಳ ರಚನೆ, ಶೈಲಿ, ಲಕ್ಷಣ ಹಾಗು ಮಾಧ್ಯಮವನ್ನು ಸಹ ವಿಶ್ಲೇಷಿಸಲಾಗಿದೆ.

ಕೊನೆಯ ಅಥವಾ ಐದನೆಯ ಅಧ್ಯಾಯವು ಸಮಾರೋಪವಾಗಿದ್ದು, ಪ್ರಸ್ತುತ ಅಧ್ಯಾಯದಲ್ಲಿ ಕಂಡುಕೊಂಡ ಫಲಿತಗಳು ಹಾಗು ಮಿತಿಗಳನ್ನು ಕುರಿತು ವಿವೇಚಿಸಲಾಗಿದೆ ಮತ್ತು ಸಂಬಂಧಪಟ್ಟ ಕ್ಷೇತ್ರದಲ್ಲಿ ಮುಂದಿನ ಸಂಶೋಧನೆಗೆ ಅನುವು ಮಾಡಿಕೊಡುವ ಸೂಚನೆಗಳನ್ನು ಒದಗಿಸುವ ಪ್ರಯತ್ನವನ್ನು ಮಾಡಲಾಗಿದೆ.

ಕೊನೆಯಲ್ಲಿ ಪ್ರಸ್ತುತ ಅಧ್ಯಯನಕ್ಕೆ ಪೂರಕವಾಗಿ ದೇವಾಲಯಗಳ ತಲವಿನ್ಯಾಸದ ನಕ್ಷೆಗಳು, ವಾಸ್ತುಭಾಗಗಳು, ಮೂರ್ತಿಶಿಲ್ಪ ಮತ್ತು ಚಿತ್ರಕಲೆಗಳ ಛಾಯಾಚಿತ್ರಗಳನ್ನು ಕೊಡಲಾಗಿದೆ.

ಅಧ್ಯಯನದ ವಿಧಾನ

ಯಾವುದೇ ಒಂದು ಕಾರ್ಯವು ಯಶಸ್ವಿಯಾಗಬೇಕಾದರೆ ಕ್ರಮಬದ್ಧತೆ ಅತೀ ಮುಖ್ಯ. ಅದೇ ರೀತಿ ಸಂಶೋಧನಾ ಕಾರ್ಯಕ್ಕೂ ವ್ಯವಸ್ಥಿತ ಅಧ್ಯಯನ ಕ್ರಮ ಬಹಳ ಅವಶ್ಯಕವಾದುದು. ಅಂತೆಯೇ ಪ್ರಸ್ತುತ ಅಧ್ಯಯನವನ್ನು ಕೈಗೊಳ್ಳುವ ಮುನ್ನ ಚಿತ್ರದುರ್ಗ

ಜಿಲ್ಲೆಯ ಇತಿಹಾಸಕ್ಕೆ ಸಂಬಂಧಿಸಿದಂತೆ ಲಭ್ಯವಿರುವ ವಿಷಯಗಳನ್ನು ಪಟ್ಟಿ ಮಾಡಿ, ವಿದ್ವಾಂಸರೊಂದಿಗೆ ಚರ್ಚಿಸಲಾಯಿತು. ಈಗಾಗಲೇ ಸಂಶೋಧನೆ ಆಗಿರುವ, ಕೈಗೊಂಡಿರುವ ವಿಷಯಗಳನ್ನು ಬಿಟ್ಟು ಮಾರ್ಗದರ್ಶಕರ ಸಲಹೆಯ ಮೇರೆಗೆ, ಜೊತೆಗೆ ಸ್ವ-ಆಸಕ್ತಿಯಿಂದ ಕ್ಷೇತ್ರಕಾರ್ಯವೇ ಪ್ರಧಾನವಾಗಿರುವ ಈ ವಿಷಯವನ್ನು ಆಯ್ಕೆ ಮಾಡಿಕೊಳ್ಳಲಾಯಿತು. ವಿಷಯದ ಆಯ್ಕೆಯು ಅಧಿಕೃತಗೊಂಡ ನಂತರ ಚಿತ್ರದುರ್ಗ ಪಾಳೆಯಗಾರರ ಕಾಲದ ಕಲೆ ಮತ್ತು ವಾಸ್ತುಶಿಲ್ಪಕ್ಕೆ ಸಂಬಂಧಿಸಿದಂತೆ ಯಾವ ಯಾವ ಅಂಶಗಳು ಒಳಗೊಂಡಿರಬೇಕೆಂಬ ಪಠ್ಯವನ್ನು ತಯಾರಿಸಲಾಯಿತು. ನಂತರ ಚಿತ್ರದುರ್ಗ ಪರಿಸರದಲ್ಲಿ ಆಳ್ವಿಕೆ ನಡೆಸಿದ ಅರಸರು, ಪಾಳೆಯಗಾರರು ಹಾಗು ಭಾರತ ಮತ್ತು ಕರ್ನಾಟಕದ ಕಲೆ ಮತ್ತು ವಾಸ್ತುಶಿಲ್ಪಕ್ಕೆ ಸಂಬಂಧಿಸಿದ ಕೃತಿಗಳನ್ನು, ಬಿಡಿಲೇಖನಗಳನ್ನು, ನಿಬಂಧಗಳನ್ನು, ಪತ್ರಿಕಾ ವರದಿಗಳನ್ನು, ಗ್ರಂಥಸೂಚಿಯನ್ನು ಸಿದ್ಧಪಡಿಸಲಾಯಿತು. ನಂತರ ಅಧ್ಯಯನ ಮಾಡಿ, ಚಿತ್ರದುರ್ಗ ಪಾಳೆಯಗಾರರ ಬಗ್ಗೆ, ಭಾರತ, ಕರ್ನಾಟಕದ ವಾಸ್ತುಶೈಲಿಯ ಬಗ್ಗೆ ದೊರೆತ ಅಧ್ಯಯನ ಯೋಗ್ಯ ಅಂಶಗಳನ್ನು ಕಾಲಾನುಕ್ರಮವಾಗಿ ದಾಖಲಿಸಿಕೊಳ್ಳಲಾಯಿತು. ತದನಂತರ ಚಿತ್ರದುರ್ಗ ಪಾಳೆಯಗಾರರ ಕಾಲ ಮತ್ತು ಗಡಿಗಳನ್ನು ಗುರುತಿಸಿಕೊಂಡು ಯಾವ ಯಾವ ಸ್ಥಳಗಳಲ್ಲಿ ಅವರ ವಾಸ್ತು ನಿರ್ಮಾಣಗಳಿವೆ ಎಂಬುದನ್ನು ಕುರಿತು ಮಾಹಿತಿ ಸಂಗ್ರಹಿಸಿ, ಊರುಗಳ ಹೆಸರನ್ನು ಪಟ್ಟಿಮಾಡಿಕೊಂಡು ಕ್ಷೇತ್ರಕಾರ್ಯವನ್ನು ಕೈಗೊಳ್ಳಲಾಯಿತು. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ದಾಖಲಾತಿ ಹಾಳೆಯಲ್ಲಿ ದೇವಾಲಯಗಳ ವಾಸ್ತುವಿವರಗಳನ್ನು ಮತ್ತು ಮೂರ್ತಿಶಿಲ್ಪಗಳನ್ನು ದಾಖಲಿಸಿಕೊಂಡು ಛಾಯಚಿತ್ರಗಳನ್ನು ತೆಗೆದುಕೊಳ್ಳಲಾಯಿತು ಇದೇ ಸಂದರ್ಭದಲ್ಲಿ ದೇವಾಲಯಗಳ ನಕ್ಷೆಯನ್ನು ತಯಾರಿಸಿಕೊಳ್ಳಲಾಯಿತು.

ಕ್ಷೇತ್ರಕಾರ್ಯದ ಜೊತೆಗೆ ಗ್ರಂಥಾಲಯದ ಕಾರ್ಯವನ್ನು ಕೈಗೊಳ್ಳಲಾಯಿತು. ಚಿತ್ರದುರ್ಗ ಕೇಂದ್ರ ಗ್ರಂಥಾಲಯ, ಬೆಂಗಳೂರಿನ ಐ.ಸಿ.ಹೆಚ್.ಆರ್, ಮಿಥಿಕ್ ಸೊಸೈಟಿ, ಮೈಸೂರು, ಧಾರವಾಡ ಹಾಗು ಕನ್ನಡ(ಹಂಪಿ) ವಿಶ್ವವಿದ್ಯಾಲಯಗಳ ಗ್ರಂಥಾಲಯಗಳಿಗೆ ಭೇಟಿ ನೀಡಿ, ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದ ಸಾಹಿತ್ಯಿಕ ದಾಖಲೆಗಳನ್ನು ಪರಿಶೀಲಿಸಿ ಮಾಹಿತಿಯನ್ನು ಸಂಗ್ರಹಿಸಿಕೊಳ್ಳಲಾಯಿತು ಹಾಗು ಅನೇಕ ಗ್ರಂಥಗಳನ್ನು ಸಂಗ್ರಹಿಸಿಕೊಳ್ಳಲಾಯಿತು.

ಅಧ್ಯಯನದ ಸಮೀಕ್ಷೆ

ಚಿತ್ರದುರ್ಗ ಜಿಲ್ಲೆಯು ಪ್ರಾಗಿತಿಹಾಸ ಕಾಲದಿಂದ ಸ್ವಾತಂತ್ರ್ಯ ಹೋರಾಟದ ಕಾಲದ ವರೆಗೂ ವಿಶಿಷ್ಟ ಸ್ಥಾನ ಪಡೆದುಕೊಂಡಿದೆ. ಇಂತಹ ವಿಸ್ತಾರವಾದ ಇತಿಹಾಸವನ್ನು ಹೊಂದಿರುವ ಜಿಲ್ಲೆಯ ಬಗ್ಗೆ ಇದುವರೆಗೆ ಅನೇಕ ಅಧ್ಯಯನಗಳು, ಸಂಶೋಧನೆಗಳು

ನಡೆದು ಅನೇಕ ಕೃತಿಗಳು, ಪ್ರಬಂಧಗಳು, ಲೇಖನಗಳು, ಲಾವಣಿಗಳು, ಜಾನಪದ ಗೀತೆಗಳು, ಪ್ರಾರ್ಥನಾ ಪದಗಳು, ಕಾದಂಬರಿಗಳು ಮುಂತಾದ ಪ್ರಕಾರಗಳು ರಚನೆಯಾಗಿವೆ. ಇವುಗಳಲ್ಲಿ ಕೆಲವು ವೈಚಾರಿಕತೆ ಮತ್ತು ಚಾರಿತ್ರಿಕ ವಸ್ತು ಬಗೆಗಿನ ಖಚಿತ ವಿಶ್ಲೇಷಣೆಯಿಲ್ಲದೆ ಸೊರಗಿದ್ದರೂ, ವಿವಿಧ ಕಾಲಘಟ್ಟಗಳಲ್ಲಿ ಆದ ಒಟ್ಟಾರೆ ಬದಲಾವಣೆ, ಸ್ಥಿತ್ಯಂತರಗಳನ್ನು ಸ್ಥೂಲವಾಗಿಯಾದರೂ ತಿಳಿದುಕೊಳ್ಳಲು ಸಹಾಯಕವಾಗಿವೆ.[೧೫]

ವಿಜಯನಗರ ಸಾಮ್ರಾಜ್ಯದ ಪತನಾನಂತರ ಜಿಲ್ಲೆಯಲ್ಲಿ ಅನೇಕ ಪಾಳೆಯಪಟ್ಟುಗಳು ತಲೆ ಎತ್ತಿದವು. ಇಂತಹವರಲ್ಲಿ ಚಿತ್ರದುರ್ಗ ಪಾಳೆಯಗಾರರು ಪ್ರಸಿದ್ಧರಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಅವರ ಚರಿತ್ರೆಗೆ ಸಂಬಂಧಿಸಿದಂತೆ ಈ ಹಿಂದೆ ನಡೆದಿರುವ ಅಧ್ಯಯನಗಳ ಸಮೀಕ್ಷೆ ಮಾಡುವುದು ಅಗತ್ಯ.

ಚಿತ್ರದುರ್ಗ ಚರಿತ್ರೆಯನ್ನು, ಮುಖ್ಯವಾಗಿ ನಾಯಕ ಅರಸರ ಚರಿತ್ರೆಯನ್ನು ಕುರಿತು ನಡೆದ ಅಧ್ಯಯನಗಳ ಸಮೀಕ್ಷೆಯನ್ನು ನಾಲ್ಕು ಪ್ರಮುಖ ಘಟ್ಟಗಳಲ್ಲಿ ವಿಭಾಗಿಸಬಹುದು.[೧೬]

೧. ೧೯೦೦ ರಿಂದ ೧೯೬೦

೨. ೧೯೬೦ ರಿಂದ ೧೯೭೦

೩. ೧೯೭೦ ರಿಂದ ೧೯೯೦

೪. ೧೯೯೦ ರಿಂದ ೨೦೦೦

ಕಾಲಾನುಕ್ರಮಣಿಕೆಯ ದೃಷ್ಟಿಯಿಂದ ಇಲ್ಲಿ ಮೊದಲು ಪ್ರಸ್ತಾಪಗೊಳ್ಳುವವರೆಂದರೆ ಪಿ.ಕೃಷ್ಣರಾವ್. ೧೯೧೯ರಲ್ಲಿ ಚಿತ್ರದುರ್ಗ ಕುರಿತ ಇವರ ಉಪನ್ಯಾಸ ೧೯೫೭ರಲ್ಲಿ 'ಚಿತ್ರದುರ್ಗ ಬೆಟ್ಟ ಮತ್ತು ನಾಯಕ ಸಾಮ್ರಾಜ್ಯ' ಎಂಬ ಶೀರ್ಷಿಕೆಯಲ್ಲಿ ಹೊರಹೊಮ್ಮಿ ಚಿತ್ರದುರ್ಗದ ಸ್ಮಾರಕಗಳು ಮತ್ತು ಇತಿಹಾಸ ಕುರಿತು ಅಧ್ಯಯನ ಕೈಗೊಳ್ಳಲು ಪ್ರೇರಣೆ ನೀಡಿತು. ಇವರ ನಂತರ ಚಿತ್ರದುರ್ಗ ಹಾಗು ಪಾಳೆಯಗಾರರ ಇತಿಹಾಸ ಕುರಿತು ಬರಹ ಕೃಷಿ ನಡೆಸಿದವರಲ್ಲಿ ಪ್ರಮುಖರಾದವರೆಂದರೆ ಹುಲ್ಲೂರು ಶ್ರೀನಿವಾಸ ಜೋಯಿಸರು. ಇವರು 'ಚಿತ್ರದುರ್ಗದ ಕೊನೆಯ ಪಾಳೆಯಗಾರ ರಾಜಾ ವೀರಮದಕರಿನಾಯಕನ ಇತಿಹಾಸ ಕುರಿತು 'ಚಿತ್ರದುರ್ಗದ ಬಖೈರು', 'ಮದಕರಿರಾಜೇಂದ್ರ ದಂಡಕ', 'ಹಿರೇಮದಕರಿನಾಯಕ ತಾರಾವಳಿ', 'ಧೂರೆರಾಯ' 'ಭರಮಣ್ಣನಾಯಕನ ಸಮರವಿಜಯ', 'ಐತಿಹಾಸಿಕ ಪತ್ರವ್ಯವಹಾರಗಳು', 'ಉತ್ಸವಾಂಬೆಯ ಪ್ರಾರ್ಥನಾ ಪದಗಳು' ಮುಂತಾದ ಬರವಣಿಗೆಗಳ ಮೂಲಕ ನಾಯಕ ಅರಸರ ವಂಶಾವಳಿಯನ್ನು ಪರಿಚಯಿಸಿದರು.[೧೭] ಅಲ್ಲದೇ ಚಿತ್ರದುರ್ಗದಲ್ಲಿ ಒಂದು ಪ್ರಾಚ್ಯವಸ್ತು

ಸಂಗ್ರಹಾಲಯವನ್ನು ಸ್ಥಾಪಿಸಿ, ೧೯೫೨ರಿಂದ ೧೯೫೬ರವರೆಗೆ ಅದರ ಕ್ಯುರೇಟರ್ ಆಗಿ ಕಾರ್ಯನಿರ್ವಹಿಸಿದರು.[೧೮]

ವಿಜಯನಗರೋತ್ತರ ಕಾಲೀನ ಕರ್ನಾಟಕದ ಇತಿಹಾಸ ರಚನೆಯಲ್ಲಿ ಪ್ರಮುಖ ಆಕರವೆಂದರೆ ಎಂ.ಎಸ್. ಪುಟ್ಟಣ್ಣನವರ 'ಚಿತ್ರದುರ್ಗ ಪಾಳೆಯಗಾರರು' ಎಂಬ ಕೃತಿ. ಕ್ರಿ.ಶ. ೧೯೨೮ರಲ್ಲಿ 'ದಿ ಮದರಾಸ್ ಮೇಲ್ ಆನ್ಯುಯಲ್'ನಲ್ಲಿ ಪ್ರಕಟಗೊಂಡ ಎ.ಆರ್.ಸ್ಲೇಟರ್ ಅವರ 'ದಿ ಹಿಲ್ ಪೋರ್ಟ್ಸ್ ಆಫ್ ಮೈಸೂರು' ಎಂಬ ಲೇಖನ ಚಿತ್ರದುರ್ಗ ಕೋಟೆಯ ಬಗ್ಗೆ ಮಾಹಿತಿ ನೀಡುತ್ತದೆ.[೧೯] ಜಿ.ಎಲ್.ಸ್ವಾಮಿಯವರ 'ಚಿತ್ರದುರ್ಗ ಡಿಸ್ಟ್ರಿಕ್ಟ್ ಕೈಪಿಡಿ', ಬಿ.ರಾಮರಾವ್‌ರವರ 'ರಿ ಕಲೆಕ್ಷನ್ಸ್ ಆಫ್ ಆನ್ ಇಂಡಿಯನ್ ಜಿಯಾಲಿಜಿಸ್ಟ್' ಎಂಬ ತಮ್ಮ ಆತ್ಮ ಚರಿತ್ರೆಯಲ್ಲಿ ಚಿತ್ರದುರ್ಗ ಕೋಟೆ ಮತ್ತು ಪರಿಸರದ ಬಗ್ಗೆ ಮಾಹಿತಿಯಿದೆ.[೨೦]

ಚಿತ್ರದುರ್ಗ ಸಂಸ್ಥಾನದ ಹನ್ನೆರಡನೆಯ ದೊರೆ ರಾಜಾ ಬಿಚ್ಚುಗತ್ತಿ ಭರಮಣ್ಣನಾಯಕರ ಆಳ್ವಿಕೆಯವರೆಗಿನ ಇತಿಹಾಸದ ಬಗ್ಗೆ ಮಾಹಿತಿಯಿರುವ 'ಚಿತ್ರದುರ್ಗದ ಗಜಕೇಸರಿ'[೨೧] ಬಿ.ಎನ್.ಶ್ರೀಸತ್ಯನ್ ಅವರ 'ಚಿತ್ರದುರ್ಗ ಜಿಲ್ಲಾ ಗೆಜೆಟಿಯರ್', ಎಂ.ಜಿ.ವೆಂಕಟೇಶಯ್ಯನವರ 'ಚಿತ್ರದುರ್ಗ ಪಾಳೆಯಗಾರರು' ಕಮಲಾಹಂಪನಾವರವರ 'ವೀರವನಿತೆ ಓಬವ್ವ', ಹೆಚ್.ಟಿ. ದೇಶಪಾಂಡೆಯವರ 'ಚಿತ್ರದುರ್ಗ ನಾಯಕರ ಕಾಲದ ಭೂವ್ಯವಸ್ಥೆ' ಎಂಬ ಮಹಾಪ್ರಬಂಧ, ಶ್ರೀಧರಮೂರ್ತಿಯವರ 'ಚಿತ್ರದುರ್ಗ', ಎಂ.ವಿ.ಶ್ರೀನಿವಾಸ್ ಮತ್ತು ಲಕ್ಷ್ಮಣ್‌ತೆಲಗಾವಿ ಅವರುಗಳು ಸಂಪಾದಿಸಿದ 'ಚಂದ್ರವಳ್ಳಿ', ಕೆ.ವೆಂಕಣ್ಣಾಚಾರ್, ಹುಲ್ಲೂರು ಶ್ರೀನಿವಾಸ ಪಾಂಡು ರಂಗಜೋಯಿಸ್ ಹಾಗು ಲಕ್ಷ್ಮಣ್‌ತೆಲಗಾವಿಯವರು ಸಂಪಾದಿಸಿದ 'ಐತಿಹಾಸಿಕ ಚಿತ್ರದುರ್ಗ' ಮತ್ತು 'ಚಿತ್ರದುರ್ಗ ದರ್ಶಿನಿ' ಗ್ರಂಥಗಳು ಚಿತ್ರದುರ್ಗ ಹಾಗು ನಾಯಕರ ಚರಿತ್ರೆಯನ್ನು ತಿಳಿಸುವಲ್ಲಿ ಪ್ರಮುಖವಾದವುಗಳಾಗಿವೆ.

ಖ್ಯಾತ ಸಾಹಿತಿಗಳಾದ ತ.ರಾ.ಸು. ಮತ್ತು ಹೆಚ್.ಶ್ರೀಶೈಲಆರಾಧ್ಯ ಅವರು ಸಂಯೋಜಿಸಿದ 'ಚಿತ್ರಮಯ ಚಿತ್ರದುರ್ಗ' ಕಮಲಾಹಂಪನಾರವರ 'ಚಿಕ್ಕವರಿಗೆ ಚಿತ್ರದುರ್ಗ' ಎಂ.ಎಸ್.ಶಂಕರ್. ಕೆ.ವೆಂಕಣ್ಣಾಚಾರ್, ಹು.ಶ್ರೀ.ಪಾ.ಜೋಯಿಸ್ ಅವರು ಸಂಪಾದಿಸಿದ 'ಚಿತ್ರದುರ್ಗ ಎ ಹ್ಯಾಂಡ್ ಬುಕ್', ಬಿ.ಎಸ್.ಶ್ರೀನಿವಾಸನಾಯಕ ಅವರ 'ಚಿತ್ರದುರ್ಗದ ಕಾಮಗೇತಿ ಅರಸರು', ಟಿ. ಗಿರಿಜರವರ 'ಚಿತ್ರದುರ್ಗ ಜಿಲ್ಲಾದರ್ಶಿನಿ', ಹು.ಶ್ರೀ.ಪಾ.ಜೋಯಿಸರ 'ಚಿತ್ರದುರ್ಗ ಏಳುಸುತ್ತಿನ ಕೋಟೆ', ನಾ.ಪ್ರಭಾಕರ್‌ರವರ 'ಮದಕರಿನಾಯಕ', ಸಿ.ಆಂಜನೇಯ ಅವರ 'ಚಿತ್ರದುರ್ಗದ ರಾಜಮನೆತನದ ವಂಶಾವಳಿ' ಮುಂತಾದುವುಗಳು ಪ್ರಮುಖ ರಚನೆಗಳಾಗಿವೆ.[೨೨]

ತೊಂಬತ್ತರ ದಶಕದ ಅಂದರೆ ೧೯೯೦ರಿಂದ ೨೦೦೦ದವರೆಗಿನ ಕಾಲಾವಧಿಯ ಬರಹಗಳೆಂದರೆ ನಾ.ಪ್ರಭಾಕರ್‌ರವರ 'ಮದಕರಿಯ ನಾಡಿನಲ್ಲಿ' ಟಿ.ಎನ್. ಗಂಡುಗಲಿಯವರ 'ಚಿತ್ರದುರ್ಗ ಖಾಸಾ ನಾಯಕ ವಂಶಸ್ಥರು-ಕೆಲವು ವಿಚಾರಗಳು' 'ದೇಶದ್ರೋಹಿ ದೊಡ್ಡಮದಕರಿನಾಯಕ ಹಾಗು 'ನೋಡಬನ್ನಿ ಚಿತ್ರದುರ್ಗ' ಹೆಚ.ಶ್ರೀಶೈಲಆರಾಧ್ಯರ 'ಚಿತ್ರದುರ್ಗ', ಹು.ಶ್ರೀ.ಜೋಯಿಸರ 'ಐತಿಹಾಸಿಕ ಲೇಖನಗಳು', ಬಿ.ರಾಜಶೇಖರಪ್ಪರವರ 'ಇತಿಹಾಸಕಥನ,', 'ದುರ್ಗಶೋಧನ', ಡಾ.ಆರ್. ಗೋಪಾಲ್‌ರವರ 'ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ' ಗ್ರಂಥಗಳು ಹಾಗು ಹೆಚ್. ತಿಪ್ಪೇಸ್ವಾಮಿಯವರ 'ದಾವಣಗೆರೆ ಜಿಲ್ಲೆಯ ದೇವಾಲಯಗಳು-ಒಂದು ಅಧ್ಯಯನ' ಡಾ.ಬಿ.ಸುರೇಶ್‌ರವರ 'ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆಗಳ ಪುರಾತತ್ವ ಅಧ್ಯಯನ', ಡಾ.ಎಸ್.ತಿಪ್ಪೇಸ್ವಾಮಿಯವರ 'ರಕ್ಷಣಾವಾಸ್ತುಶಿಲ್ಪ-ಚಿತ್ರದುರ್ಗ ಜಿಲ್ಲೆ', ಆರ್.ಶಿವಪ್ಪನವರ 'ಚಿತ್ರದುರ್ಗ ಪಾಳೆಯಗಾರರ ಕಾಲದ ಸೈನ್ಯ ವ್ಯವಸ್ಥೆ' ಮುಂತಾದ ಅಪ್ರಕಟಿತ ಮಹಾಪ್ರಬಂಧಗಳು ಪ್ರಮುಖ ಆಕರಗಳಾಗಿವೆ.

ಚಿತ್ರದುರ್ಗ ನಾಯಕರ ಕುರಿತಾದ ಲೇಖನಗಳಲ್ಲಿ ಪ್ರಮುಖವಾದವುಗಳೆಂದರೆ ಲಕ್ಷ್ಮಣ್‌ತೆಲಗಾವಿಯವರ 'ಮಾಯಕೊಂಡದ ಕಾಳಗ', 'ಚಿತ್ರದುರ್ಗ ಜಿಲ್ಲೆಯಲ್ಲಿ ಪಾಳೆಯಗಾರರ ಆಳ್ವಿಕೆ', 'ಚಿತ್ರದುರ್ಗದ ಸಂಕ್ಷಿಪ್ತ ಇತಿಹಾಸ', 'ಚಿತ್ರದುರ್ಗ ಪಾಳೆಯಗಾರರ ಫಿರಂಗಿಶಾಸನ', 'ಚಿತ್ರದುರ್ಗ ರಾಜಾವೀರಮದಕರಿನಾಯಕನ ಗೌಡನಹಳ್ಳಿ ಶಾಸನ', 'ಮದಕರಿ ವಿಶ್ಲೇಷಣೆ,' 'ಚಿತ್ರದುರ್ಗದ ಒನಕೆ ಓಬವ್ವೆಯ ಘಟನೆ-ಚಾರಿತ್ರಿಕ ವಿಮರ್ಶೆ', 'ಬಖೈರ ಒಂದು ಅಧ್ಯಯನ', 'ಚಿತ್ರದುರ್ಗ ಜಿಲ್ಲೆಯ ನಾಯಕ ಮನೆತನಗಳ ಇತಿಹಾಸ-ಇತ್ತೀಚಿನ ಸಂಶೋಧನೆಗಳು' ಮುಂತಾದವು.[೨೩] ಬಿ.ರಾಜಶೇಖರಪ್ಪನವರ 'ಚಿತ್ರದುರ್ಗ ಪಾಳೆಯಗಾರರು', ಡಾ.ಮೀರಾಸಾಬಿಹಳ್ಳಿ ಶಿವಣ್ಣರವರ 'ಬುಕ್ಯಾನನ್ ಕಂಡ ಚಿತ್ರದುರ್ಗ ಜಿಲ್ಲೆ', ಡಾ.ಎಸ್.ಕೆ.ಜೋಷಿಯವರ 'ಚಿತ್ರದುರ್ಗ ಜಿಲ್ಲೆಯಲ್ಲಿರುವ ಕೋಟೆಕೊತ್ತಲುಗಳು', ಕೆ.ವೆಂಕಣ್ಣಾಚಾರ್ ಅವರ 'ಚಿತ್ರದುರ್ಗ ಇತಿಹಾಸ ರಚನೆಗೆ ಸಾಮಾಗ್ರಿ', ಎಸ್.ವಿ.ಗೌಡೂರ್ ರವರ 'ಚಿತ್ರದುರ್ಗದ ದೇವಮಂದಿರಗಳು', ಬಿ.ಎಲ್.ವೇಣುರವರ 'ಚಿತ್ರದುರ್ಗದ ಪ್ರಮುಖ ಉತ್ಸವಗಳು'[೨೪] ಪಿಎಸ್.ರಾಮಾನುಜಂರವರ 'ಚಿತ್ರದುರ್ಗದ ಅಭಿದಾನ ಒಂದು ವಿವೇಚನೆ', ಅ.ರಾ.ಶಂಕರಯ್ಯನವರ 'ನೀರ್ಥಡಿ ರಂಗನಾಥ ದೇವಾಲಯ'[೨೫], ವಿ.ಅನುರಾಧ ಅವರ 'ಚಿತ್ರದುರ್ಗ ಜಿಲ್ಲೆಯ ದೇವಾಲಯಗಳಲ್ಲಿನ ಮೂರ್ತಿಶಿಲ್ಪ ಮತ್ತು ಶಿಲ್ಪಕಲೆ,[೨೬] ಮುಂತಾದವುಗಳು.

ಹೀಗೆ ಚಿತ್ರದುರ್ಗ ಪಾಳೆಯಗಾರರ ಇತಿಹಾಸದ ಬಗ್ಗೆ ಇನ್ನೂ ಅನೇಕ ಕೃತಿಗಳು, ಲೇಖನಗಳು, ಕಾದಂಬರಿಗಳು, ಲಾವಣಿಗಳು, ಜನಪದಗೀತೆಗಳು, ಸ್ಮರಣಸಂಚಿಕೆಗಳು

ರಚನೆಯಾಗಿವೆ.. ಆದರೆ ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದ ಪ್ರಮುಖವಾದ ದಾಖಲೆಗಳನ್ನು ಮಾತ್ರ ಸಂಗ್ರಹಿಸಲಾಗಿದೆ. ಸಂಗ್ರಹಿಸಿದ ಹಾಗು ಪರಿಶೀಲಿಸಿದ ಎಲ್ಲಾ ಸಾಹಿತ್ಯಾಧಾರಗಳನ್ನು ಗಮನಿಸಿದರೆ ಪಾಳೆಯಗಾರರ ರಾಜಕೀಯ ಚರಿತ್ರೆಯ ಬಗ್ಗೆ ಹೆಚ್ಚು ಅಧ್ಯಯನಗಳು ನಡೆಸಿರುವುದು ತಿಳಿದು ಬರುತ್ತದೆ. ಕಲೆ ಮತ್ತು ವಾಸ್ತುಶಿಲ್ಪಕ್ಕೆ ಸಂಬಂಧಿಸಿದಂತೆ ಕೆಲವೊಂದು ಲೇಖನಗಳಲ್ಲಿ, ಪತ್ರಿಕೆಗಳಲ್ಲಿ ಉಲ್ಲೇಖವಾಗಿದೆಯೇ ಹೊರತು, ಅದನ್ನೇ ಒಂದು ಸಂಶೋಧನೆಯ ವಿಷಯವಾಗಿ ಸಮಗ್ರ, ವ್ಯವಸ್ಥಿತ ಹಾಗು ಕ್ರಮಬದ್ಧವಾದ ಅಧ್ಯಯನಗಳು ನಡೆದಿರುವುದು ಕಂಡುಬಂದಿಲ್ಲ. ಹಾಗಾಗಿ ಈ ಕ್ಷೇತ್ರದಲ್ಲಿ ಒಂದು ವ್ಯವಸ್ಥಿತವಾದ ಅಧ್ಯಯನ ಕೈಗೊಂಡು ಚಿತ್ರದುರ್ಗದ ಪಾಳೆಯಗಾರರು ಕರ್ನಾಟಕದ ಕಲೆ ಮತ್ತು ವಾಸ್ತುಶಿಲ್ಪ ಕ್ಷೇತ್ರಕ್ಕೆ ನೀಡಿದ ಕೊಡುಗೆಯನ್ನು ಹಾಗು ವಿಜಯನಗರೋತ್ತರ ಕಾಲದಲ್ಲಿ ಚಿತ್ರದುರ್ಗ ಪ್ರದೇಶದಲ್ಲಿ ಸ್ಥಳೀಯವಾಗಿ ಬೆಳೆದು ಬಂದ ಕಲಾಪರಂಪರೆಯ ಶೈಲಿ ಮತ್ತು ಲಕ್ಷಣಗಳನ್ನು ಗುರುತಿಸುವುದೇ ಪ್ರಸ್ತುತ ಅಧ್ಯಯನದ ಪ್ರಧಾನ ಉದ್ದೇಶವಾಗಿದೆ.

ಅಡಿಟಿಪ್ಪಣಿಗಳು

೧. ಶ್ರೀನಿವಾಸ್ ಎಂ.ವಿ., ೨೦೦೧: **'ಸ್ಥಳೀಯಚರಿತ್ರೆ', ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ-೪,** ತಂಬಂಡ ವಿಜಯ್ ಪೂರ್ಣಚ್ಛ (ಸಂ), ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪುಟ-೩೯.

೨. ಅದೇ ಪು-೩೯

೩. ಲಕ್ಷ್ಮಣ್‌ತೆಲಗಾವಿ, ೨೦೦೩: **ಸ್ಥಳೀಯ ಚರಿತ್ರೆ ಅಧ್ಯಯನದ ತಾತ್ವಿಕತೆ ಮತ್ತು ಸ್ವರೂಪ,** ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು-೬

೪. ವಿರೂಪಾಕ್ಷಿ ಪೂಜಾರಹಳ್ಳಿ, ೨೦೦೨: **ಚಿತ್ರದುರ್ಗ ಜಿಲ್ಲೆಯ ಬುಡಕಟ್ಟು ವೀರರು,** ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು-೯

೫. ಅದೇ ಪು-೧೧

೬. ದೇವರ ಕೊಂಡಾರೆಡ್ಡಿ., ೧೯೯೪: **ತಲಕಾಡಿನ ಗಂಗರ ದೇವಾಲಯಗಳು-ಒಂದು ಅಧ್ಯಯನ,** ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು (ಪ್ರ) ಪು-೧

೭. ಅದೇ ಪು-೧

೮. ಅದೇ ಪು-೧

೯. ಅದೇ ಪು-೨

೧೦. ಅದೇ ಪು-೨

೧೧. ಚಂದ್ರಪೂಜಾರಿ ಎಂ., ೨೦೦೮: **ಸಂಶೋಧನಾ ಪ್ರಸ್ತಾವ,** ಕನ್ನಡ ವಿಶ್ವವಿದ್ಯಾಲಯ, ಹಂಪಿ ಪು-೧೯, ೨೦

೧೨. ಕನ್ನಡ ವಿಷಯ ವಿಶ್ವಕೋಶ ಸಂ ೧, (ಪರಿಷ್ಕೃತ) ೨೦೦೫: ಮೈಸೂರು ವಿಶ್ವವಿದ್ಯಾಲಯ, ಪು-೯೬೬

೧೩. ಸುರೇಶ್ ಬಿ., ೨೦೦೨: **ಚಿತ್ರದುರ್ಗ ದಾವಣಗೆರೆ ಜಿಲ್ಲೆಗಳ ಪುರಾತತ್ವ ಅಧ್ಯಯನ**,(ಅಪ್ರಕಟಿತ ಮಹಾಪ್ರಬಂಧ), ಮೈಸೂರು ವಿಶ್ವವಿದ್ಯಾಲಯ, ಮೈಸೂರು, ಪು-೨

೧೪. ತಿಪ್ಪೇಸ್ವಾಮಿ ಎಸ್., ೨೦೦೪: **ರಕ್ಷಣಾ ವಾಸ್ತುಶಿಲ್ಪ-ಚಿತ್ರದುರ್ಗ ಜಿಲ್ಲೆ**, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು-೬

೧೫. ಲಕ್ಷ್ಮಣ್‌ತೆಲಗಾವಿ., ೨೦೦೪: **ಚಿತ್ರದುರ್ಗ ಜಿಲ್ಲಾ ಇತಿಹಾಸ ಅಧ್ಯಯನದ ವ್ಯಾಪಕತೆ ಮತ್ತು ಸಾಧ್ಯತೆ-ಒಂದು ಶತಮಾನ**, ವಾಲ್ಮೀಕಿ ಸಾಹಿತ್ಯಸಂಪದ, ಹರ್ತಿಕೋಟೆ, ಪು-೨

೧೬. ಅದೇ ಪು-೪

೧೭. ಅದೇ ಪು-೫

೧೮. ಸದಾನಂದ ಕನವಳ್ಳಿ, ವೀರಣ್ಣ ರಾಜೂರ(ಸಂ), **ಮಹಾಮಾರ್ಗ**, ಪು.೪೭೦(ಬಿ.ಸುರೇಶ್., **ಪೂರ್ವೋಕ್ತ**)

೧೯. ಲಕ್ಷ್ಮಣ್‌ತೆಲಗಾವಿ., ೨೦೦೪: **ಪೂರ್ವೋಕ್ತ**, ಪು-೭

೨೦. ಅದೇ ಪು-೧೬

೨೧. ಶ್ರೀನಿವಾಸನಾಯಕ ಬಿ.ಎಸ್., ೧೯೮೪: **ಚಿತ್ರದುರ್ಗದ ಕಾಮಗೇತಿ ಅರಸರು**, ಪು-೨

೨೨. ಲಕ್ಷ್ಮಣ್‌ತೆಲಗಾವಿ., ೨೦೦೪: **ಪೂರ್ವೋಕ್ತ**, ಪು-೮, ೯

೨೩. ಸುರೇಶ್ ಬಿ., ೨೦೦೨: **ಪೂರ್ವೋಕ್ತ**, ಪು-೧೨

೨೪. ಲಕ್ಷ್ಮಣ್‌ತೆಲಗಾವಿ, ಕೆ.ವೆಂಕಣ್ಣಾಚಾರ್(ಸಂ), ೧೯೭೬: **ಐತಿಹಾಸಿಕ ಚಿತ್ರದುರ್ಗ**, ಪು-೬

೨೫. ಲಕ್ಷ್ಮಣ್‌ತೆಲಗಾವಿ, ಎಂ.ವಿ.ಶ್ರೀನಿವಾಸ್(ಸಂ), ೧೯೭೯: **ಚಿತ್ರದುರ್ಗ ದರ್ಶಿನಿ**, ಪು-೬, ೭

೨೬. ಗೋಪಾಲ್ ಅರ್., ೨೦೦೪, **ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ**, ಪು-೮, ೯

ಅಧ್ಯಾಯ ೨

ಭೌಗೋಳಿಕತೆ ಮತ್ತು ಚಾರಿತ್ರಿಕ ಹಿನ್ನೆಲೆ

೨

ಭೌಗೋಳಿಕತೆ ಮತ್ತು ಚಾರಿತ್ರಿಕ ಹಿನ್ನೆಲೆ

ಭೌಗೋಳಿಕತೆ

ಇತಿಹಾಸವು ಎಲ್ಲಾ ಶಾಸ್ತ್ರಗಳೊಂದಿಗೆ ನಿಕಟಸಂಬಂಧವನ್ನು ಹೊಂದಿದೆ. ಅದರಲ್ಲೂ ಮುಖ್ಯವಾಗಿ ಭೂಗೋಳಶಾಸ್ತ್ರದೊಂದಿಗೆ ಅತ್ಯಂತ ನಿಕಟ ಸಂಬಂಧವನ್ನು ಹೊಂದಿದೆ. ಭೌಗೋಳಿಕ ಅಂಶಗಳು ಇತಿಹಾಸ ರಚನೆಗೆ ಬಹುಮುಖ್ಯ ಸಾಮಾಗ್ರಿಗಳಾಗಿವೆ. ಅಲ್ಲದೇ ಆಯಾ ದೇಶದ ಸಂಪತ್ತನ್ನು ಹೆಚ್ಚಿಸಿ, ಅಲ್ಲಿನ ಜನಜೀವನದ ಮೇಲೆ ಪ್ರಭಾವ ಬೀರುತ್ತವೆ ಹಾಗು ಸಾಂಸ್ಕೃತಿಕ ಬದುಕನ್ನು ರೂಪಿಸಲು ಸಹಕಾರಿಯಾಗಿವೆ. ಅದಕ್ಕೂ ಮಿಗಿಲಾಗಿ ದೇಶವನ್ನು ಪರಕೀಯರ ದಾಳಿಯಿಂದ ರಕ್ಷಿಸುತ್ತವೆ. ಹಾಗಾಗಿ ಭೌಗೋಳಿಕ ಅಂಶಗಳು ಪ್ರಭಾವ ಬೀರದ ಪ್ರದೇಶವಿಲ್ಲವೆಂದೇ ಹೇಳಬಹುದು.

ಕರ್ನಾಟಕಕ್ಕೆ ಸಾವಿರಾರು ವರ್ಷಗಳ ಇತಿಹಾಸವಿದೆ. ರಾಮಾಯಣ ಹಾಗು ಮಹಾಭಾರತಗಳಂತಹ ಮಹಾಕಾವ್ಯಗಳಲ್ಲಿ ಕರ್ನಾಟಕದ ಹೆಸರು, ಪದವ್ಯುತ್ಪತ್ತಿ, ಮಹತ್ವ ಮುಂತಾದವುಗಳ ಬಗ್ಗೆ ಉಲ್ಲೇಖವಿದ್ದು, ಅದರ ಪ್ರಾಚೀನತೆಯನ್ನು ತಿಳಿಸಿಕೊಡುತ್ತವೆ. ಮಹಾಭಾರತದ ಬೀಷ್ಮಪರ್ವದ ಒಂಭತ್ತನೆಯ ಅಧ್ಯಾಯದಲ್ಲಿ ದ್ರಾವಿಡ, ಕೇರಳ ಮೊದಲಾದ ಹೆಸರುಗಳೊಂದಿಗೆ ಕರ್ನಾಟಕದ ಹೆಸರು ಉಲ್ಲೇಖಗೊಂಡಿದೆ.[೧] ಅನೇಕ ಶಾಸನಗಳಲ್ಲೂ ಇದರ ಹೆಸರಿನ ಬಗ್ಗೆ ಉಲ್ಲೇಖವಿದೆ. ಶಾಸನಗಳಲ್ಲಿ ಕೂಟಶಾಸನವೆಂದು ಅನುಮಾನವಿರುವ ಕದಂಬ ದೊರೆ ವಿಷ್ಣುವರ್ಮನ ಬೀರೂರು ಶಾಸನದಲ್ಲಿ[೨] ಕರ್ನಾಟಕ ಎಂಬ ಹೆಸರಿನ ಪ್ರಪ್ರಥಮ ಉಲ್ಲೇಖವಿದೆ. ಇಂತಹ ಪ್ರಾಚೀನತೆ ಹಾಗು ಶಾಸನೋಕ್ತವಾದ ಕರ್ನಾಟಕದ ಮಧ್ಯಭಾಗದಲ್ಲಿ ಚಿತ್ರದುರ್ಗ ಜಿಲ್ಲೆಯಿದೆ. ಇದು ಉತ್ತರ ಮತ್ತು ದಕ್ಷಿಣ ಕರ್ನಾಟಕಗಳ ಸಂಸ್ಕೃತಿಗಳನ್ನು ಬೆಸೆಯುವ ಕೊಂಡಿಯಾಗಿದೆ. ಪ್ರಾಚೀನ ಚಿತ್ರದುರ್ಗವು ಒಂಭತ್ತು ತಾಲ್ಲೂಕುಗಳನ್ನೊಂದಿತ್ತು. ಆದರೆ ೧೯೭೦ರಲ್ಲಿ ಆದಂತಹ ಹೊಸ ಜಿಲ್ಲೆಗಳ ರಚನಾಕಾರ್ಯದಲ್ಲಿ ದಾವಣಗೆರೆಯು ಹೊಸ ಜಿಲ್ಲೆಯಾಗಿ ಮಾರ್ಪಟ್ಟಾಗ, ಚಿತ್ರದುರ್ಗ ಜಿಲ್ಲೆಯು ಭೌಗೋಳೀಕ

ನೆಲೆ, ಮೇರೆ ಹಾಗು ವಿಸ್ತೀರ್ಣದಲ್ಲಿ ತನ್ನ ಮೂಲ ಸ್ಥಾನವನ್ನು ಕಳೆದು ಕೊಂಡಿತಲ್ಲದೇ, ವಿಸ್ತೀರ್ಣದಲ್ಲಿ ರಾಜ್ಯದಲ್ಲಿ ಏಳನೆಯ ಸ್ಥಾನದಲ್ಲಿದ್ದದ್ದು ಒಂಭತ್ತನೆಯ ಸ್ಥಾನಕ್ಕೆ ಬಂದಿತು. ಪ್ರಸ್ತುತ ಜಿಲ್ಲೆಯು ಚಿತ್ರದುರ್ಗ, ಹಿರಿಯೂರು, ಚಳ್ಳಕೆರೆ, ಮೊಳಕಾಲ್ಮೂರು, ಹೊಳಲ್ಕೆರೆ ಮತ್ತು ಹೊಸದುರ್ಗ ಎಂಬ ಆರು ತಾಲ್ಲೂಕುಗಳು, ೨೨ ಹೋಬಳಿಗಳು, ೧೮೫ ಗ್ರಾಮ ಪಂಚಾಯಿತಿಗಳು, ೧೧೦೦ ಹಳ್ಳಿಗಳನ್ನು ಹೊಂದಿದೆ.[೩]

ಚಿತ್ರದುರ್ಗ ಜಿಲ್ಲೆಯು ಪ್ರಾಕೃತಿಕವಾಗಿ ಸಂಪದ್ಭರಿತವಾಗಿದ್ದು, ಭೌಗೋಳಿಕವಾಗಿ ವಿಶಿಷ್ಟತೆಯಿಂದ ಕೂಡಿರುವ ದಕ್ಷಿಣ ಭಾರತದ ಆಯಕಟ್ಟಿನ ಪ್ರದೇಶವಾಗಿದೆ. ಜಿಲ್ಲೆಯು ಪೂರ್ವಕ್ಕೆ ಆಂಧ್ರಪ್ರದೇಶ, ಉತ್ತರಕ್ಕೆ ಬಳ್ಳಾರಿ, ಪಶ್ಚಿಮಕ್ಕೆ ದಾವಣಗೆರೆ, ನೈರುತ್ಯಕ್ಕೆ ಚಿಕ್ಕಮಗಳೂರು, ಆಗ್ನೇಯಕ್ಕೆ ತುಮಕೂರು ಜಿಲ್ಲೆಗಳಿಂದ ಸುತ್ತುವರಿಯಲ್ಪಟ್ಟಿದೆ. ಜಿಲ್ಲೆಯ ವಾಸ್ತವಿಕ ಭೌಗೋಳಿಕ ನೆಲೆಯು ಉತ್ತರ ಅಕ್ಷಾಂಶ ೧೩.೧೫ ರಿಂದ ೧೫.೨೦ ಹಾಗು ಪೂರ್ವ ರೇಖಾಂಶ ೭೬.೭೪ ರಿಂದ ೭೭.೨೦ ರಲ್ಲಿದೆ. ಇದರ ಒಟ್ಟು ವಿಸ್ತೀರ್ಣ ೮೪೦೪.೬ (೯೩,೪೪೫)[೪] ಚ.ಕಿ.ಮೀ. ಅಥವಾ ೩೨೪೮.೯ ಚ.ಮೈಲಿಗಳೆಂದು ಅಂದಾಜು ಮಾಡಲಾಗಿದೆ.[೫]

ಜಿಲ್ಲೆಯು ಬೆಟ್ಟಗುಡ್ಡಗಳಿಂದ ಆವೃತವಾಗಿದ್ದು ಮುಖ್ಯ ಬೆಟ್ಟದ ಸಾಲುಗಳು ವಾಯುವ್ಯದಿಂದ ಆಗ್ನೇಯದೆಡೆಗೆ ಒಂದೇ ಅಂತರದಲ್ಲಿ ಹಬ್ಬಿವೆ.[೬] ಈ ರೀತಿ ಸಾಗಿರುವ ಬೆಟ್ಟಗುಡ್ಡಗಳು ಸ್ವಾಭಾವಿಕವಾಗಿ ರಕ್ಷಣೆಯನ್ನು ಒದಗಿಸಿವೆ. ಪ್ರಕೃತಿಯೇ ಕೋಟೆಯಂತೆ ಮೈದಳೆದಿರುವ ಚಿತ್ರದುರ್ಗ ಬೆಟ್ಟಕ್ಕೆ ಚಿನ್ಮೂಲಾದ್ರಿ ಎಂದು ಕರೆಯಲಾಗಿದೆ.[೭] ಚಿತ್ರದುರ್ಗ ಪರಿಸರದಲ್ಲಿ ಚೇಳುಗುಡ್ಡ, ಬೋರನ ಕಲ್ಲುದುರ್ಗ, ಧವಳಪ್ಪನಗುಡ್ಡ, ಈಚಲಗುಡ್ಡ, ಓಬಳದೇವರಗುಡ್ಡ ಮತ್ತು ಜೋಗಿಮರಡಿ ಮುಂತಾದ ಬೆಟ್ಟಗುಡ್ಡಗಳ ಶ್ರೇಣಿಗಳಿವೆ. ಜೋಗಿಮರಡಿಯು ಜಿಲ್ಲೆಯಲ್ಲಿಯೇ ಅತೀ ಎತ್ತರವಾದ ಪ್ರದೇಶವಾಗಿದ್ದು, ಒಟ್ಟು ೨೬೪೭೬ ಎಕರೆ ಪ್ರದೇಶದಲ್ಲಿ ವ್ಯಾಪಿಸಿಕೊಂಡಿದೆ.[೮]

ಜಿಲ್ಲೆಯ ಇತರೆ ತಾಲ್ಲೂಕುಗಳಲ್ಲಿರುವ ಪ್ರಮುಖ ಬೆಟ್ಟಗುಡ್ಡಗಳೆಂದರೆ ಮೊಳಕಾಲ್ಮೂರು ತಾಲ್ಲೂಕಿನ ಜಟಂಗರಾಮೇಶ್ವರ, ಬ್ರಹ್ಮಗಿರಿ, ನುಂಕಪ್ಪನಗುಡ್ಡ, ಜೋಗಪ್ಪನಗುಡ್ಡ, ಸಂತೇಗುಡ್ಡ,[೯] ಹೊಳಲ್ಕೆರೆ ತಾಲ್ಲೂಕಿನ ದೊಡ್ಡರಂಗಪ್ಪನಗುಡ್ಡ, ಜಾನುಕಲ್ಲುಗುಡ್ಡ, ವಡೇರಗುಡ್ಡ, ಹಿರೇಕಂದ ವಾಡಿಗುಡ್ಡ, ಹೊಸದುರ್ಗ ತಾಲ್ಲೂಕಿನ ಕೋಟೆಕಲ್ಲುಗುಡ್ಡ, ನೀರಗುಂದ, ತಿರುಮಲದೇವರಗುಡ್ಡ, ದೊಡ್ಡರಸಿಗುಡ್ಡ, ಹಾಲುರಾಮೇಶ್ವರಗುಡ್ಡ, ಹಿರಿಯೂರು ತಾಲ್ಲೂಕಿನ ಹಿಂಡಸನಕಟ್ಟೆ, ವೇಣು ಕಲ್ಲುಗುಡ್ಡ ಮತ್ತು ಮಾರಿಕಣಿವೆ ಬೆಟ್ಟದ ಸಾಲುಗಳು ಮುಂತಾದವು. ಇವೆಲ್ಲವೂ ಕೋಟೆ ಕೊತ್ತಲಗಳನ್ನು ನಿರ್ಮಿಸಲು ಸಹಕಾರಿಯಾಗಿವೆ. ಈ ಎಲ್ಲಾ ಬೆಟ್ಟಗುಡ್ಡಗಳಿಂದಾವೃತವಾಗಿರುವ

ಜಿಲ್ಲೆಯು, ಸಮುದ್ರಮಟ್ಟದಿಂದ ಸುಮಾರು ೨೦೦೦ ಅಡಿಗಳಷ್ಟು ಎತ್ತರವಾಗಿದ್ದು ಉತ್ತರ ಹಾಗು ಈಶಾನ್ಯ ದಿಕ್ಕುಗಳಲ್ಲಿ ಇಳಿಜಾರಾಗಿದೆ.[೧೦]

ಜಿಲ್ಲೆಯಲ್ಲಿ ಜಲಸಂಪತ್ತು ತುಂಬಾ ಕಡಿಮೆಯಿದ್ದು, ವೇದಾವತಿ, ಚಿನ್ನಹಗರಿ ಮತ್ತು ಸುವರ್ಣ ನದಿಗಳ ಮೂಲಕ ನೀರಿನ ಸಂಪರ್ಕ ಕಲ್ಪಿಸಲಾಗಿದೆ. ಸ್ವಾತಂತ್ರ್ಯ ಪೂರ್ವದ ಭಾರತದ ಮೊಟ್ಟ ಮೊದಲನೆಯ ಕೃತಕ ಸರೋವರ ಎಂದೇ ಪ್ರಸಿದ್ಧಿಯಾಗಿರುವ ವೇದಾವತಿ ನದಿಗೆ ಹೊಸದುರ್ಗ-ಹಿರಿಯೂರು ತಾಲ್ಲೂಕುಗಳ ಗಡಿಯಲ್ಲಿ ಮಾರಿಕಣಿವೆ ಎಂಬಲ್ಲಿ ಅಣೆಕಟ್ಟನ್ನು ಕಟ್ಟಲಾಗಿದ್ದು, ರಾಜ್ಯದ ನೀರಾವರಿ ಯೋಜನೆಗಳಲ್ಲಿ ಮೊದಲನೆಯದು. ಇದು ೧೮೯೮ರಲ್ಲಿ ಪ್ರಾರಂಭವಾಗಿ ೧೯೦೭ರಲ್ಲಿ ಮುಕ್ತಾಯವಾಯಿತು.[೧೧] ಪ್ರಸ್ತುತ ಈ ಅಣೆಕಟ್ಟಿನ ಉದ್ದ ೧.೩೩೦ ಅಡಿ, ಎತ್ತರ ೧೬೨ ಅಡಿಗಳಿದ್ದು, ಸುಮಾರು ೨೧,೬೫೪ ಎಕರೆ ಪ್ರದೇಶಕ್ಕೆ ನೀರುಣಿಸುತ್ತದೆ. ಜಿಲ್ಲೆಯ ಮತ್ತೊಂದು ನದಿಯಾದ ಜಿನಗಿಹಳ್ಳ (ಚಿನ್ನಹಗರಿ)ವು ಚಿತ್ರದುರ್ಗ, ಜಗಳೂರು ಮತ್ತು ಮೊಳಕಾಲ್ಮೂರು ತಾಲ್ಲೂಕುಗಳಲ್ಲಿ ಹರಿದು ವೇದಾವತಿ ನದಿಗೆ ಸೇರುತ್ತದೆ. ಮತ್ತೊಂದು ನದಿಯಾದ ಸ್ವರ್ಣಮುಖಿಯು ಸುಮಾರು ೭೮ ಕಿ.ಮೀ. ಹರಿದು, ಹಿರಿಯೂರು ತಾಲ್ಲೂಕಿನ ಇಕ್ಕನೂರಿನ ಬಳಿ ವೇದಾವತಿ ನದಿಗೆ ಸೇರುತ್ತದೆ. ಈ ನದಿಗಳ ಜೊತೆಗೆ ಕೆಲವು ಕೆರೆಗಳಿದ್ದು ವ್ಯವಸಾಯಕ್ಕೆ ಯೋಗ್ಯವಾಗಿವೆ.[೧೨]

ಜಿಲ್ಲೆಯು ಭೂಸಂಪತ್ತಿನಲ್ಲಿಯೂ ವಿಶಿಷ್ಟ ಸ್ಥಾನವನ್ನು ಪಡೆದಿದ್ದು, ಜಿಲ್ಲೆಯ ಶಿಲಾಪದರು ವಲಯವು ಪ್ರಪಂಚದಲ್ಲಿಯೇ ಪ್ರಸಿದ್ಧಿ ಪಡೆದಿದೆ. ಮರಡಿಹಳ್ಳಿಯ ದಿಂಬುರಚನೆ (ಪಿಲ್ಲೋಲಾವಸ್) ಶಿಲಾಪದರುಗಳು ಸುಮಾರು ೨೭೦ ಕೋಟಿ ವರ್ಷಗಳಿಗಿಂತ ಹಿಂದೆ ಸಮುದ್ರದ ತಳವಾಗಿತ್ತೆಂದು ಭೂವಿಜ್ಞಾನಿಗಳಾದ ಬ್ರೂಸ್‌ಫ್ರೂಟ್ (೧೮೭೬), ಪಿಚಿಮುತ್ತು (೧೯೩೮), ರಸ್ಸೆಲ್ (೧೯೫೪) ಮುಂತಾದವರು ಅಭಿಪ್ರಾಯಪಟ್ಟಿದ್ದಾರೆ. ಅಷ್ಟೆ ಅಲ್ಲದೇ ಚಿತ್ರದುರ್ಗದ ಪದರು ಶಿಲೆಗಳನ್ನು 'ಕಿರಿಯ ಹಸಿರುಕಲ್ಲು ವಲಯ' ಎಂದು ಗುರುತಿಸಿದ್ದಾರೆ. ಈ ವಲಯದಲ್ಲಿ ಒರಟು ಕಣ ಶಿಲೆ (ಗ್ರಾನೈಟ್) ಡಯೋರೈಟ್, ಡಾಲೋರೈಟ್ ಮುಂತಾದ ಶಿಲೆಗಳಿದ್ದವು.[೧೩] ಇಂದು ಈ ಸ್ಥಳವನ್ನು ರಾಷ್ಟ್ರೀಯ ಶಿಲಾ ಉದ್ಯಾನವನದ ಸ್ಮಾರಕವನ್ನಾಗಿ ಸಂರಕ್ಷಿಸಿದ್ದಾರೆ.[೧೪]

ಭೂಸಂಪತ್ತಿನಂತೆ ಖನಿಜ ಸಂಪತ್ತಿನಲ್ಲಿಯೂ ಜಿಲ್ಲೆ ಮಹತ್ವದ ಸ್ಥಾನ ಪಡೆದಿದೆ. ಅಲ್ಲದೇ ಭಾರತದ ಖನಿಜ ಭೂಪಟದಲ್ಲಿ ತಾಮ್ರದ ನಿಕ್ಷೇಪಗಳಿಂದಾಗಿ ತನ್ನದೇ ಆದ ವಿಶಿಷ್ಟ ಸ್ಥಾನ ಪಡೆದುಕೊಂಡಿದೆ. ಚಿತ್ರದುರ್ಗ ಸಮೀಪವಿರುವ ಇಂಗಳದಾಳು ತಾಮ್ರದಗಣಿ ಕರ್ನಾಟಕದ ಅತೀ ಪ್ರಾಚೀನವಾದ ಗಣಿಯಾಗಿದೆ.[೧೫] ಈ ಪರಿಸರದಲ್ಲಿ ಚಾಲ್ಕೋಪೈರೇಟ್,

ಪೈರೋಟೈಟ್ ಎಂಬ ತಾಮ್ರದ ಅದಿರುಗಳು, ಗಂಧಕ ಸಲ್ಫೈಟ್ ಮತ್ತು ಗೆಲಿನಾ ಎಂಬ ಸತುಗಳು ಶಿಲಾಗರ್ಭದಲ್ಲಿವೆ. ಇಲ್ಲಿ ೧೯೬೪ರಲ್ಲಿ ತಾಮ್ರದ ಅದಿರು ಸಂಸ್ಕರಣದ ಕಾರ್ಯಗಾರವನ್ನು ಸ್ಥಾಪಿಸಲಾಯಿತು. ಹೀಗೆ ಪುರಾತನ ಗಣಿಉದ್ಯಮದಿಂದ ಈ ಪ್ರದೇಶ ಬೆಳ್ಳಿಗುಡ್ಡವೆಂದೇ ಪ್ರಸಿದ್ಧಿಯಾಗಿದೆ.[೧೬] ಈ ಖನಿಜಗಳಲ್ಲದೇ ಸಲ್ಫೈಟ್ ಲೋಹ, ಕಬ್ಬಿಣ, ಮ್ಯಾಂಗನೀಸ್ ಅದಿರು, ಸುಣ್ಣಶಿಲೆ, ಸಿಲಿಕಾದಿಂದ ಕೂಡಿದ ಬಾಕ್ಸೈಟ್, ಕಾವಿಮಣ್ಣು ಮುಂತಾದ ಖನಿಜಗಳು ಕಂಡು ಬಂದಿವೆ. ಚಳ್ಳಕೆರೆ ಮತ್ತು ಮೊಳಕಾಲ್ಮೂರು ತಾಲ್ಲೂಕುಗಳಲ್ಲಿ ಚದುರಿದಂತಹ ಕಣಶಿಲೆಯ ಬೆಟ್ಟಗಳಿವೆ. ಚಿತ್ರದುರ್ಗ ತಾಲ್ಲೂಕಿನ ಕೋಟೆಮರಡಿ, ಗೋನೂರು, ಹೊಸದುರ್ಗ ತಾಲ್ಲೂಕಿನ ಬೂದಿಮರಡಿ, ಹಿರಿಯೂರು ತಾಲ್ಲೂಕಿನ ಜವಗೊಂಡನಹಳ್ಳಿ,, ಆನೆಸಿದ್ರಿ, ದಿಂಡಾವರ ಹಾಗು ಇತ್ತೀಚೆಗೆ ಗುಡ್ಡದರಂಗವ್ವನಹಳ್ಳಿ ಮಂತಾದೆಡೆ ಚಿನ್ನದ ನಿಕ್ಷೇಪಗಳು ಕಂಡುಬಂದಿವೆ.[೧೭]

ಜಿಲ್ಲೆಯಲ್ಲಿ ಮಳೆಯ ಪ್ರಮಣ ತುಂಬಾ ಕಡಿಮೆಯಿರುವ ಕಾರಣ ಜಿಲ್ಲೆಯು ಅರಣ್ಯ ಸಂಪತ್ತಿನಲ್ಲಿ ಇತರೆ ಜಿಲ್ಲೆಗಳಿಗಿಂತ ಹಿಂದುಳಿದಿದೆ ಎಂದು ಹೇಳಬಹುದು. ಆದ್ದರಿಂದ ಈ ಜಿಲ್ಲೆಯು ಬಯಲು ಸೀಮೆ ಎಂದೇ ಗುರುತಿಸಲ್ಪಟ್ಟಿದೆ. ಹಾಗಾಗಿ ಜಿಲ್ಲೆಯು ೬೩.೧೧೯ ಹೆಕ್ಟೇರ್‌ನಷ್ಟು ಮಾತ್ರ ಅರಣ್ಯ ಪ್ರದೇಶವನ್ನು ಹೊಂದಿದೆ.[೧೮] ಇದರಲ್ಲಿ ಹೆಚ್ಚಾಗಿ ಕುರುಚಲು ಗಿಡಗಳಿದ್ದು, ೧/೩ ಭಾಗ ಜಾಲಿಗಿಡಗಳು, ಉಳಿದ ಭಾಗ ಅಲ್ಲಲ್ಲಿ ಹುಣಸೆ, ಸೀತಾಫಲ, ಬೇವು, ಕರಿಜಾಲಿ ಮರಗಳು ಕಂಡು ಬರುತ್ತವೆ. ಬೆಟ್ಟಗುಡ್ಡಗಳಲ್ಲಿ ಚಿರತೆ, ಕರಡಿ, ಕಾಡುಹಂದಿ, ಕತ್ತೆಕಿರುಬ, ಜಿಂಕೆ, ನೀರುಕುಳಿ, ನವಿಲು ಮುಂತಾದ ಪ್ರಾಣಿಗಳನ್ನು ಕಾಣಬಹುದು. ಅಲ್ಲದೇ ಈ ಜಿಲ್ಲೆಯಲ್ಲಿ ಪಶುಪಾಲನೆ ಹೆಚ್ಚಾಗಿ ಕಂಡುಬರುತ್ತದೆ.[೧೯]

ಜಿಲ್ಲೆಯಲ್ಲಿನ ಹವಾಮಾನವು ಏರಿಳಿತಗಳಿಂದ ಕೂಡಿದ್ದು, ಏಪ್ರಿಲ್ ತಿಂಗಳಲ್ಲಿ ಅತೀ ಹೆಚ್ಚು ಉಷ್ಣಾಂಶವಿದ್ದರೆ, ನವೆಂಬರ್, ಡಿಸೆಂಬರ್ ತಿಂಗಳುಗಳಲ್ಲಿ ಅತೀ ಹೆಚ್ಚು ತಂಪಾದ ವಾತಾವರಣವಿರುತ್ತದೆ. ಜಿಲ್ಲೆಯಲ್ಲಿನ ಸಾಮಾನ್ಯ ಅಥವಾ ಗರಿಷ್ಟ ಉಷ್ಣಾಂಶ ೪೧೦ ಸೆಂಟಿಗ್ರೇಡ್, ಕನಿಷ್ಟ ೧೬.೬೦ ಸೆಂಟಿಗ್ರೇಡ್. ವರ್ಷಕ್ಕೆ ಸರಾಸರಿ ೨೧.೯೫ ಅಂಗುಲ ಮಳೆಯಾಗುತ್ತಿದ್ದು, ಇತ್ತೀಚಿನ ದಿನಗಳಲ್ಲಿ ಅದರ ಪ್ರಮಾಣ ತುಂಬಾ ಕಡಿಮೆಯಾಗುತ್ತಿದೆ. ಜಿಲ್ಲೆಯು ಉತ್ತರದಲ್ಲಿ ಕಪ್ಪು, ದಕ್ಷಿಣದಲ್ಲಿ ಕೆಂಪು ಮಣ್ಣುಗಳಿಂದ ಕೂಡಿದ ಭೂಮಿ ಹೆಚ್ಚಾಗಿದೆ. ಜಿಲ್ಲೆಯ ಮಧ್ಯಭಾಗದಲ್ಲಿ ಉತ್ತರ ದಿಕ್ಕಿನಿಂದ ದಕ್ಷಿಣ ದಿಕ್ಕಿನವರೆಗಿನ ಭೂಪ್ರದೇಶವು ಉಳಿದ ಪ್ರದೇಶಗಳಿಗಿಂತ ಫಲವತ್ತಾಗಿದ್ದು ವ್ಯವಸಾಯಕ್ಕೆ ಯೋಗ್ಯವಾಗಿದೆ.[೨೦] ಜಿಲ್ಲೆಯ ಪ್ರಮುಖ ಬೆಳೆಗಳೆಂದರೆ ಶೇಂಗಾ, ತೆಂಗು, ಅಡಿಕೆ, ರೇಷ್ಮೆ, ಹತ್ತಿ, ಸೂರ್ಯಕಾಂತಿ, ಎಳ್ಳು, ಭತ್ತ, ಹೆಸರು, ರಾಗಿ, ಜೋಳ, ಕಡಲೆ, ಸಜ್ಜೆ, ನವಣೆ, ಮೆಣಸಿನಕಾಯಿ ಮುಂತಾದವು.

ಚಾರಿತ್ರಿಕ ಹಿನ್ನೆಲೆ

ಪರ್ಯಾಯದ್ವೀಪ ಭಾಗದ ಅತೀ ಪುರಾತನ ಪ್ರಸ್ಥಭೂಮಿಯಾದ ಕನಾಟಕವು ಪ್ರಪಂಚದ ಅತ್ಯಂತ ಪುರಾತನ ಪೀಠಭೂಮಿಯೂ ಆಗಿದೆ. ಇಂತಹ ಪುರಾತನ ಪೀಠಭೂಮಿಯ ಕೇಂದ್ರ ಭೂಭಾಗವಾಗಿರುವ ಚಿತ್ರದುರ್ಗ ಜಿಲ್ಲೆಯು ಇತ್ತೀಚಿನ ಸಂಶೋಧನೆಗಳಿಂದ ಸುಮಾರು ೨೬೦ ಕೋಟಿ ವರ್ಷಗಳ ಹಿಂದೆ ಸಮುದ್ರದ ತಳಭಾಗವಾಗಿತ್ತೆಂದು ತಿಳಿದುಬಂದಿದೆ. ನಂತರ ಭೂಕಂಪ ಮೊದಲಾದ ಸ್ಥಿತ್ಯಂತರಗಳಿಂದಾಗಿ ಅದು ಮೇಲೆ ಬಂದು ಸಮುದ್ರ, ಸಾಗರಗಳು ದೂರ ಸರಿದವೆಂದು ಭೂಗರ್ಭಶಾಸ್ತ್ರಜ್ಞರ ಅಭಿಪ್ರಾಯ. ಹಿರಿಯೂರು ತಾಲ್ಲೂಕಿನ ಮರಡಿಹಳ್ಳಿ ಬಳಿಯ ಪಿಲ್ಲೋಲಾವ ಶಿಲೆಯ ಗುಡ್ಡಗಳು ಈ ಮಾತಿಗೆ ಸಾಕ್ಷಿಯಾಗಿವೆ ಎಂಬುದು ಅವರ ವಾದವಾಗಿದೆ.[೨೧]

ಡಾ.ಎಂ.ಹೆಚ್.ಕೃಷ್ಣರವರ ೧೯೨೯ರ ಚಂದ್ರವಳ್ಳಿಯ ಭೂಸಂಶೋಧನೆಗಿಂತ ಮೊದಲು ಚಿತ್ರದುರ್ಗದ ಇತಿಹಾಸವನ್ನು ಕೆಳಕಂಡಂತೆ ಸ್ಥಳಪುರಾಣ ಹಾಗು ದಂತಕಥೆಗಳಿಂದ ವಿವರಿಸಲಾಗುತ್ತಿತ್ತು. ಐತಿಹ್ಯವೊಂದರ ಪ್ರಕಾರ ತ್ರೇತ್ರಾಯುಗದಲ್ಲಿ ಒಮ್ಮೆ ಲಂಕಾಧಿಪನಾದ ರಾವಣನು ನಂದಿಕೇಶ್ವರನನ್ನು ವಂದಿಸದೆ ಅಲಕ್ಷಿಸಿ ಕೈಲಾಸಪರ್ವತವನ್ನು ಎತ್ತಲು ಮುನ್ನುಗ್ಗಿದಾಗ ನಂದಿ ಅಲ್ಲಿಂದ ಹಾರಿ ಬಂದು ಈ ಚಿತ್ರದುರ್ಗ ಬೆಟ್ಟದಲ್ಲಿ ಬಿದ್ದಾಗ, ನಂತರ ಜ್ಞಾನೋದಯವಾಗಿ ಇಲ್ಲಿಂದಲೇ ನಂದಿಕೇಶ್ವರನನ್ನು ಸ್ತುತಿಸುತ್ತ ಹೊರಟನಂತೆ. ಹೀಗೆ ರಾವಣನ 'ಚಿತ್' ಪರಿವರ್ತನೆಗೆ ಕಾರಣವಾಗಿ ಜ್ಞಾನವಿತ್ತ ಸ್ಥಳವಾದ್ದರಿಂದ ಅಂದಿನಿಂದ ಈ ಬೆಟ್ಟಕ್ಕೆ 'ಚಿನ್ಮೂಲಾದ್ರಿ' ಎಂಬ ಹೆಸರು ಬಂದಿತಂತೆ.[೨೨] ಇನ್ನೊಂದು ಐತಿಹ್ಯದ ಪ್ರಕಾರ ಮೊಳಕಾಲ್ಮೂರು ತಾಲ್ಲೂಕಿನ ಜಟಿಂಗರಾಮೇಶ್ವರ ಬೆಟ್ಟದ ಮೇಲಿನ ಜಟಿಂಗರಾಮೇಶ್ವರ ದೇವಾಲಯ. ಇಲ್ಲಿ ಶ್ರೀರಾಮಚಂದ್ರನು ಜಟಾಯುವಿಗೆ ಅಗ್ನಿ ಸಂಸ್ಕಾರ ಮಾಡಿ, ಅವರ ಹೆಸರಿನಲ್ಲಿ ಲಿಂಗಪ್ರತಿಷ್ಠೆ ಮಾಡಿದನೆಂದೂ, ಆದ್ದರಿಂದ ಜಟಾಯು–ರಾಮ–ಈಶ್ವರ ಈ ಮೂವರ ಹೆಸರಿನಲ್ಲಿ ಈ ದೇವರಿಗೆ ಜಟಿಂಗರಾಮೇಶ್ವರ ಎಂದು, ಗುಡ್ಡಕ್ಕೆ ಜಟಿಂಗಿರಾಮಗಿರಿ ಎಂದು ಪ್ರಸಿದ್ಧಿಯಾಗಿದೆ ಎಂದು ತಿಳಿದುಬಂದಿದೆ.[೨೩] ಅಲ್ಲದೇ ರಾವಣನು ಸೀತೆಯನ್ನು ಕದ್ದೊಯ್ಯುವಾಗ ಜಟಾಯು ಅವನನ್ನು ಇಲ್ಲಿ ತಡೆದು ಹೋರಾಡಿ ಸತ್ತಿತೆಂಬ ಪ್ರತೀತಿ ಕ್ರಿ.ಶ. ೯೬೧ರ ಶಾಸನದಲ್ಲಿ ಉಕ್ತವಾಗಿದೆ.[೨೪]

ಮಹಾಭಾರತಕ್ಕೆ ಬಂದರೆ ಪಾಂಡವರ ಕಾಲದಲ್ಲಿ ಚಿತ್ರದುರ್ಗವನ್ನು 'ಹಿಡಂಬ ಕ್ಷೇತ್ರ',[೨೫] 'ಹಿಡಿಂಬ ಪಟ್ಟಣ'[೨೬] ಎಂದು ಕರೆಯಲಾಗುತ್ತಿತ್ತೆಂದು ಹೇಳಲಾಗಿದೆ. ಬೆಟ್ಟದ ಮೇಲೆ ಇಂದಿಗೂ ಇರುವ ಕ್ರಿ.ಶ. ೧೧ನೆಯ ಶತಮಾನದ ಶಾಸನವೊಂದು ಹೊಯ್ಸಳರ ಕಾಲದ

ಹಿಡಿಂಬೇಶ್ವರ ದೇವಾಲಯದ ಉತ್ತರದ ಒಂದು ಭಾಗವನ್ನು 'ಹಿಡಿಂಬವನ' ಎಂದು ವರ್ಣಿಸಿದೆ.[೨೭] ಉಚ್ಚಂಗಿದುರ್ಗದ ಒಂದು ಶಾಸನದಲ್ಲಿ ಹೇಳಿರುವಂತೆ, ಹಿಡಿಂಬವನದಲ್ಲಿ ಹಿಡಿಂಬಾಸುರನು ಲಿಂಗ ಪ್ರತಿಷ್ಠೆಯನ್ನು ಮಾಡಿಸಿದ್ದರಿಂದ, ಗುಡ್ಡದಲ್ಲಿರುವ ಲಿಂಗಗಳಲ್ಲಿ ಒಂದನ್ನು ಹಿಡಿಂಬೇಶ್ವರ ಲಿಂಗ ಎಂದು ಹೇಳಲಾಗುತ್ತದೆ.[೨೮] ಪಾಂಡವರು ವನವಾಸಕ್ಕೆ ಹೋದಾಗ ಕುಂತಿಯ ಮಗ ಭೀಮನಿಗೂ, ಬೆಟ್ಟದಲ್ಲಿ ವಾಸವಾಗಿದ್ದ ಹಿಡಿಂಬಾಸುರನಿಗೂ ನಡೆದ ಯುದ್ಧದಲ್ಲಿ ಭೀಮನು ಹಿಡಿಂಬನನ್ನು ಕೊಂದು, ಅವನ ತಂಗಿ ಹಿಡಿಂಬಿಯನ್ನು ವಿವಾಹವಾದನೆಂದು ಐತಿಹ್ಯವೊಂದರ ಮೂಲಕ ತಿಳಿದುಬರುತ್ತದೆ.[೨೯] ಈ ಐತಿಹ್ಯಕ್ಕೆ ಸಾಕ್ಷಿಯೆಂಬಂತೆ ಬೆಟ್ಟದ ಮೇಲಿರುವ ಹಿಡಿಂಬೇಶ್ವರ ದೇವಾಲಯದಲ್ಲಿ ಸುಲಿದ ತೆಂಗಿನ ಕಾಯಿ ಗಾತ್ರದಲ್ಲಿರುವ ಹಲ್ಲನ್ನು ಹಿಡಿಂಬನ ಹಲ್ಲೆಂದೂ, ಇಲ್ಲಿರುವ ಎರಡು ಗುಂಡುಗಳಲ್ಲಿ ಒಂದನ್ನು ಭೀಮನಕಲ್ಲು ಎಂದು, ಮತ್ತೊಂದನ್ನು ಹಿಡಿಂಬನ ಕಲ್ಲೆಂದು ತಿಳಿಯಲಾಗಿದೆ.[೩೦] ಅಲ್ಲದೇ ಚಂದ್ರವಳ್ಳಿಯ ಅಂಕಲಿಮಠದ ಬಳಿಯ ಪಂಚಲಿಂಗ ದೇವಾಲಯದಲ್ಲಿರುವ ಐದು ಲಿಂಗಗಳನ್ನು ಪಾಂಡವರು ತಮ್ಮ ಹೆಸರಿನಲ್ಲಿ ಪ್ರತಿಷ್ಠಾಪಿಸಿದರೆಂದು ಅದೇ ದೇವಾಲಯದ ಹೊಯ್ಸಳ ಶಾಸನವು ತಿಳಿಸುತ್ತದೆ.[೩೧] ಉತ್ಖನನದಲ್ಲಿ ದೊರೆತ ಅವಶೇಷಗಳ ಆಧಾರದಿಂದ ಡಾ.ಅ. ಸುಂದರರವರು ಸಹ ಇಲ್ಲಿ ಹಿಡಿಂಬಪಟ್ಟಣವಿತ್ತೆಂದು ಅಭಿಪ್ರಾಯಪಟ್ಟಿದ್ದಾರೆ.[೩೨]

ಹೀಗೆ ದ್ವಾಪರಯುಗದಲ್ಲಿ ಚಿತ್ರದುರ್ಗಕ್ಕೂ, ಪಾಂಡವರಿಗೂ ಹಾಗು ಹಿಡಿಂಬರಿಗೂ ಇರುವ ಸಂಬಂಧ ಕುರಿತು ಐತಿಹ್ಯವಿದೆ. ಇದಕ್ಕೆ ಆಧಾರವೆಂಬಂತೆ ಹಿಡಿಂಬೇಶ್ವರ ದೇವಾಲಯ, ಹಿಡಿಂಬನ ಹಲ್ಲು, ಪಂಚಲಿಂಗೇಶ್ವರ, ಧರ್ಮೇಶ್ವರ, ಭೀಮೇಶ್ವರ, ಪಲ್ಗುಣೇಶ್ವರ, ಪಾಂಡುರಂಗ, ಗೋಪಾಲಕೃಷ್ಣ ದೇವಾಲಯಗಳು, ಪಾಂಡವತೀರ್ಥ ಹಾಗು ಗೋಪಾಲಕೃಷ್ಣ ಹೊಂಡಗಳು ಮತ್ತು ಪಾಂಡವರಹಳ್ಳಿಯನ್ನು ಕಾಣಬಹುದು.[೩೩]

ಈ ರೀತಿಯಾಗಿ ರಾಮಾಯಣ, ಮಹಾಭಾರತ ಕಾಲದಿಂದಲೂ ಪರಿಚಿತವಾಗಿರುವ ಚಿತ್ರದುರ್ಗದ ಸ್ಥಳನಾಮದ ಬಗ್ಗೆ ಕೆಳಕಂಡಂತೆ ನೋಡಬಹುದಾಗಿದೆ. ತಿರುವು, ಸುರುಳಿ, ಅಂಕುಡೊಂಕಿನ ರಚನೆ, ಕೆತ್ತನೆ, ಶಿಲ್ಪ ಮೊದಲಾದ ಅರ್ಥ ಬರುವ ಸುಳಿಗಲ್ ಎಂಬುದು ಚಿತ್ರಕಲ್ಲಾಗಿ, ಚಿತ್ರಕಲ್‌ದುರ್ಗವಾಗಿ, ಚಿತ್ರದುರ್ಗವಾಗಿರಬೇಕು ಎಂದೆಲ್ಲಾ ವ್ಯಾಖ್ಯಾನ ಮಾಡಲಾಗುತ್ತದೆ.[೩೪] ಕ್ರಿ.ಶ.೧೦ ಮತ್ತು ೧೧ನೆಯ ಶತಮಾನಗಳ ಶಾಸನಗಳಲ್ಲಿ 'ಸೂಳ್ಗಲ್ಲುಪಟ್ಟಣ' ಎಂದು ಉಕ್ತವಾಗಿದೆ.[೩೫] ಬಾದಾಮಿ ಚಾಲುಕ್ಯರ ಕಾಲದಲ್ಲಿ 'ಸೂಳ್ಗಲ್ಲುನಾಡು'[೩೬] ಕಲ್ಯಾಣ ಚಾಲುಕ್ಯ ಹಾಗು ಹೊಯ್ಸಳರ ಕಾಲದಲ್ಲಿ ಬೆಮ್ಮತ್ತನಕಲ್ಲು, ಬೆಮ್ಮತ್ತನೂರು, ಬ್ರಹ್ಮಪುರಿಗೇರಿ, ಪೆರಮಾಳೇಪುರ ಎಂದು ಕರೆಯಲಾಗುತ್ತಿತ್ತೆಂದು ತಿಳಿದುಬಂದಿದೆ.[೩೭] ೧೩ರಿಂದ ೧೮ನೆಯ

ಶತಮಾನಗಳ ಶಾಸನಗಳಲ್ಲಿ ಬೆಂಮ್ಮತ್ತನೂರುಸೀಮೆ,[೩೮] ಬೆಂಮತ್ತೂರುನಾಡು,[೩೯] ಬೆಂಮತ್ತನಕಲ್ಲು ನಾಡು,[೪೦] ಬೆಮ್ಮತ್ತನಕಲ್ಲುಸೀಮೆ,[೪೧] ಚಿತ್ರದುರ್ಗಸೀಮೆ,[೪೨] ಬೆಮತೂರನಾಡು,[೪೩] ಬೆಂಚಿನಗಿರಿದುರ್ಗ, ಶಿಂಗನಗಿರಿದುರ್ಗ, ಚಿಂತಕಲೆದುರ್ಗ[೪೪] ಎಂದು ಉಲ್ಲೇಖಿತವಾಗಿದೆ. ಕ್ರಿ.ಶ. ೧೩೩೪ರಲ್ಲಿ ಚಿತ್ರದುರ್ಗದಲ್ಲಿದ್ದ ವೀರಮಲ್ಲಣ್ಣ ಒಡೆಯನು ಮಲ್ಲರಾಯನದುರ್ಗ ಎಂಬ ಕೋಟೆಯನ್ನು ಕಟ್ಟಿಸಿದ್ದರಿಂದ ಮಲ್ಲರಾಯನದುರ್ಗವೆಂತಲೂ ಕರೆಯಲ್ಪಟ್ಟಿತು.[೪೫] ವಿಜಯನಗರ ಕಾಲದಲ್ಲಿ ಚಿನ್ನದಹಗರಿ, ಚಿನ್ಮೂಲಗಿರಿ, ಚಿಮ್ಮಚ್ಚನೂರು, ಚಿಮ್ಮತ್ತನೂರು ಎಂಬ ಹೆಸರುಗಳಿದ್ದವೆಂದು ತಿಳಿದುಬರುತ್ತದೆ.[೪೬] ಜನಪದರು ಸಿತ್ರಕಲ್ಲುದುರುಗ, ಚಿತ್ರಕಲ್ಲು, ಸಿಂತರಕಲ್ಲುದುರ್ಗ,[೪೭] ಎಂದು, ಸಂಸ್ಕೃತ ವಿದ್ವಾಂಸರು ಚಿನ್ಮೂಲಾದ್ರಿದುರ್ಗ[೪೮] ಎಂದು, ಬೇಡರು ತಮ್ಮ ಮನೆದೇವರು ಚಿತ್ರದೇವರ ನೆನಪಿಗಾಗಿ 'ಚಿತ್ರಕಲ್ಲು'[೪೯] ಎಂದು ಕರೆದಿರುವುದು ತಿಳಿದುಬಂದಿದೆ. ಇನ್ನೊಂದು ಐತಿಹ್ಯದ ಪ್ರಕಾರ ಗುಡ್ಡದಲ್ಲಿದ್ದ ರಸಸಿದ್ಧರು ಭಂಗೀ ನೀರನ್ನು ಕಲ್ಲಿನ ಮೇಲೆ ಚೆಲ್ಲಿದಾಗ ಕರೆ ಹತ್ತಿದ್ದರಿಂದ ಅದನ್ನು 'ಚಿತ್ರಕಲ್ಲು' ಎಂದು ಕರೆಯಲಾಯಿತೆಂದು ತಿಳಿದುಬಂದಿದೆ.[೫೦] ಚಿತ್ರದುರ್ಗ ಪಾಳೆಯಗಾರರ ಕಾಲದಲ್ಲಿ 'ಚಿಂತರಕಲ್ಲುದುರ್ಗ' ಎಂಬ ಹೆಸರು ಪಡೆದು, ಅಂತ್ಯದಲ್ಲಿ 'ಚಿತ್ರದುರ್ಗ' ಎಂದು, ನಂತರ ಹೈದರಾಲಿಯ ಕಾಲದಲ್ಲಿ 'ಫರ್ರಕಾಬಾದ್' ಎಂದಾಯಿತೆಂದು[೫೧] ತಿಳಿದುಬಂದಿದೆ. ಆದರೆ ಅವನ ಮರಣಾ ನಂತರ ಆ ಹೆಸರು ಮರೆತು ಹೋಗಿ 'ಚಿತ್ರಕಲ್‌ದುರ್ಗ' ಎಂಬ ಹೆಸರೇ ರೂಢಿಗೆ ಬಂದು ಈಗ 'ಚಿತ್ರದುರ್ಗ' ಎಂದೇ ಖ್ಯಾತಿಯಾಗಿದೆ.

ಆದಿಹಳೆಶಿಲಾಯುಗ, ಸೂಕ್ಷ್ಮಶಿಲಾಯುಗ, ನವಶಿಲಾಯುಗ, ಶಿಲಾತಾಮ್ರಯುಗ, ಬೃಹತ್ ಶಿಲಾಯುಗ ಸಂಸ್ಕೃತಿಗಳ ನೆಲೆವೀಡಾಗಿರುವ ಚಿತ್ರದುರ್ಗ ಜಿಲ್ಲೆಯು ಕರ್ನಾಟಕದ ಮಹತ್ವದ ಐತಿಹಾಸಿಕ ಕೇಂದ್ರವಾಗಿದೆ. ಶಿಲಾಯುಗ ಕಾಲದಿಂದಲೂ ಮಾನವನಿಗೆ ಆಶ್ರಯ ತಾಣಾವಾಗಿದ್ದಿತೆಂಬುದಕ್ಕೆ ಜಿಲ್ಲೆಯಾದ್ಯಂತ ಇದೂವರೆಗೂ ದೊರೆತಿರುವ ಸುಮಾರು ೫೦ಕ್ಕೂ ಹೆಚ್ಚು ಪುರಾತತ್ವ ನೆಲೆಗಳು ಸಾಕ್ಷಿಯಾಗಿವೆ.[೫೨] ಈ ಪರಿಸರದ ಚಂದ್ರವಳ್ಳಿ ಮತ್ತು ಬ್ರಹ್ಮಗಿರಿ ನೆಲೆಗಳು ಚಿತ್ರದುರ್ಗವಷ್ಟೇ ಅಲ್ಲದೇ, ಕರ್ನಾಟಕದ ಪುರಾತತ್ವ ಅಧ್ಯಯನದ ಮೇಲೂ ಹೊಸ ಬೆಳಕನ್ನು ಚೆಲ್ಲಿವೆ. ಹರಪ್ಪ, ಮೊಹೆಂಜೋದಾರೋ, ಚೀನಾ ಹಾಗು ರೋಮನ್ ಸಂಸ್ಕೃತಿಗಳ ಸಮಕಾಲೀನ ಸಂಸ್ಕೃತಿಯೊಂದು ಚಂದ್ರವಳ್ಳಿಯಲ್ಲಿ ಇತ್ತೆಂದು ಅಲ್ಲಿ ನಡೆದ ಭೂಸಂಶೋಧನೆಗಳಿಂದ ತಿಳಿದುಬಂದಿದೆ.[೫೩] ಅಲ್ಲದೆ ಮೇಲಿನ ಎರಡು ನೆಲೆಗಳಲ್ಲಿ ನಡೆದಿರುವ ಉತ್ಖನನಗಳಿಂದ ಇಲ್ಲಿನ ಪ್ರಾಗಿತಿಹಾಸದ ಮಹತ್ವ ತಿಳಿದುಬರುವುದಲ್ಲದೇ, ಕರ್ನಾಟಕದ ಪ್ರಾಗಿತಿಹಾಸದ ಹಲವು ಸಮಸ್ಯೆಗಳನ್ನು ಬಿಡಿಸಲು ಒಂದು ನಿರ್ದಿಷ್ಟ

ನೆಲೆಗಟ್ಟನ್ನು ಒದಗಿಸಿಕೊಟ್ಟಿರುವುದರಿಂದ ಅವುಗಳ ಕಾಲಮಾನವನ್ನು ನಿರ್ಧರಿಸಲು ಸಹಕಾರಿಯಾಗಿವೆ.

ಚಂದ್ರವಳ್ಳಿಯಲ್ಲಿ ಚಿನ್ನವನ್ನು ಪತ್ತೆಮಾಡಲು ಖನಿಜತಜ್ಞರು ಭೂಮಿಯನ್ನು ಅಗೆದಾಗ ಹಾಗು ಬ್ರಿಟಿಷ್ ಸರ್ಕಾರದ ಇಂಜಿನಿಯರೊಬ್ಬರು ನೀರಿಗಾಗಿ ಕಾಲುವೆಗಳನ್ನು ತೋಡುತ್ತಿದ್ದಾಗ ಅನೇಕ ಸೀಸದ ನಾಣ್ಯಗಳು ದೊರಕಿದವು. ಲಂಡನ್ ಮ್ಯೂಜಿಯಂನ ತಜ್ಞ ಇ.ಜೆ. ರ್‍ಯಾಪ್ಸನ್ ಈ ನಾಣ್ಯಗಳನ್ನು ಪರೀಕ್ಷಿಸಿ ಇವು ಆಂಧ್ರಭೃತ್ಯರ ಕಾಲದವುಗಳೆಂದು ತಿಳಿಸಿದರು. ನಂತರ ೧೯೦೮ರಲ್ಲಿ ಬಿ.ಎಲ್.ರೈಸ್‌ರು ಈ ನೆಲೆಯಲ್ಲಿ ಕೈಗೊಂಡ ಭೂಸಂಶೋಧನೆಯಿಂದ ಸುಟ್ಟ ಇಟ್ಟಿಗೆಗಳು, ಮಣ್ಣಿನ ವಿವಿಧ ವಸ್ತುಗಳು, ಮಣಿಗಳು, ಹೆಂಚುಗಳು, ಮುದ್ರೆಗಳು ದೊರಕಿದವು. ತದನಂತರ ಆರ್.ನರಸಿಂಹಚಾರ್, ವೆಂಕಟಸುಬ್ಬಯ್ಯ ಹಾಗು ಆರ್. ಶ್ಯಾಮಶಾಸ್ತ್ರಿಗಳು ಈ ನೆಲೆಯ ಮಹತ್ವದ ಬಗ್ಗೆ ಆರಂಭಿಕ ಅಧ್ಯಯನ ನಡೆಸಿ, ವಿವರಗಳನ್ನು ಪ್ರಕಟಿಸಿ ಅನೇಕ ವಿದ್ವಾಂಸರ, ಸಂಶೋಧಕರ ಗಮನ ಸೆಳೆದರು.[೫೪] ತರುವಾಯ ಬಿ.ಎಲ್.ರೈಸರು ೧೯೨೮ರಲ್ಲಿ ಈ ನೆಲೆಯ ಬಗ್ಗೆ ಅಧ್ಯಯನ ಕೈಗೊಂಡು ನಾಲ್ಕು ಶಾಸನಗಳನ್ನು ಪತ್ತೆಹಚ್ಚಿದರು, ಆದರೆ ಎಂ.ಹೆಚ್.ಕೃಷ್ಣರವರು ಪುರಾತತ್ವ ಇಲಾಖೆಯ ನಿರ್ದೇಶಕರಾಗಿ ನೇಮಕಗೊಂಡ ನಂತರ ಈ ನೆಲೆಯ ಬಗ್ಗೆ ವ್ಯಾಪಕ ಶೋಧನಾಕಾರ್ಯ ಪ್ರಾರಂಭವಾಯಿತು. ಇವರು ೧೯೨೮-೨೯ರ ಅವಧಿಯಲ್ಲಿ ಈ ಪರಿಸರದಲ್ಲಿ ಇಂಕ್ಕೂ ಹೆಚ್ಚು ಕಡೆ ಕೈಗೊಂಡ ಉತ್ಖನನಗಳಿಂದ ಏಳೆಂಟು ಪದರುಗಳನ್ನು ಗುರುತಿಸಿ, ಮೂರು ಮತ್ತು ಆರನೆಯ ಪದರುಗಳು ಚಂದ್ರವಳ್ಳಿ ಪ್ರದೇಶಕ್ಕೆ ಸಂಬಂಧಿಸಿದವುಗಳೆಂದು ತಿಳಿಸಿದ್ದಲ್ಲದೇ, ಶಿಲಾಯುಗ, ಸೂಕ್ಷ್ಮಶಿಲಾಯುಗ, ನವಶಿಲಾಯುಗ, ಬೃಹತ್‌ಶಿಲಾಯುಗ, ಮೌರ್ಯ, ಶಾತವಾಹನ ಹಾಗು ಕದಂಬರ ಕಾಲಕ್ಕೆ ಸಂಬಂಧಿಸಿದ ಸುಮಾರು ಸಾವಿರಕ್ಕೂ ಹೆಚ್ಚು ಅವಶೇಷಗಳನ್ನು ಪತ್ತೆ ಹಚ್ಚಿದರು.[೫೫] ನಂತರ ೧೯೪೦ರಲ್ಲಿ ಬ್ರಹ್ಮಗಿರಿಯನ್ನು ವೈಜ್ಞಾನಿಕವಾಗಿ ಸರ್ವೇಕ್ಷಣೆ ನಡೆಸಿ[೫೬] ೧೯೪೨ರಲ್ಲಿ ಉತ್ಖನನವನ್ನು ಕೈಗೊಂಡು ನೂತನ ಶಿಲಾಯುಗ, ಕಬ್ಬಿಣಯುಗ ಹಾಗು ಇತಿಹಾಸ ಆರಂಭ ಕಾಲದ ಅವಶೇಷಗಳನ್ನು ಸಂಗ್ರಹಿಸಿದರು.[೫೭] ಮಾರ್ಟಿಮರ್ ವ್ಹೀಲರ್‌ರವರು ಚಂದ್ರವಳ್ಳಿ ಮತ್ತು ಬ್ರಹ್ಮಗಿರಿ ನೆಲೆಗಳಲ್ಲಿ ೧೯೪೭ರಲ್ಲಿ ಮತ್ತೆ ಅಧ್ಯಯನ ಕೈಗೊಂಡು, ದೊರೆತ ಅವಶೇಷಗಳ ಆಧಾರದ ಮೇಲೆ ಈ ಪರಿಸರದಲ್ಲಿ ಬೃಹತ್‌ಶಿಲಾಯುಗ ಸಂಸ್ಕೃತಿ ಇತ್ತೆಂದು ಖಚಿತವಾದ ಅಭಿಪ್ರಾಯವನ್ನು ತಿಳಿಸಿದ್ದಲ್ಲದೇ, ಬ್ರಹ್ಮಗಿರಿಯ ಪಕ್ಕದಲ್ಲಿ ರೊಪ್ಪ ಸಂಸ್ಕೃತಿಯನ್ನು ಪತ್ತೆಹಚ್ಚಿದರು. ಹಾಗು ಇಲ್ಲಿ ಸೂಕ್ಷ್ಮಶಿಲಾಯುಗ, ಬೃಹತ್‌ಶಿಲಾಯುಗ ಮತ್ತು ಇತಿಹಾಸ ಆರಂಭಕಾಲದ ಸಂಸ್ಕೃತಿಗಳು ನೆಲೆಗೊಂಡಿದ್ದನ್ನು ಗುರುತಿಸಿದರು.[೫೮] ಎಂ.ಶೇಷಾದ್ರಿಯವರು[೫೯]

ಸಹ ಇಲ್ಲಿ ಉತ್ಖನನ ನಡೆಸಿದ್ದಾರೆ. ಭಾರತ ಸರ್ಕಾರದ ಪ್ರಾಚ್ಯ ಸಂಶೋಧನಾ ಇಲಾಖೆಯ ತಜ್ಞರಾದ ಎ.ಕೆ.ಮಿಶ್ರ ಮತ್ತು ಕೆ.ವಿ.ರಾವ್‌ರವರ ನಿರ್ದೇಶನದಲ್ಲಿ ೧೯೭೮ರಲ್ಲಿ ಚಂದ್ರವಳ್ಳಿಯಲ್ಲಿ ಮತ್ತೊಮ್ಮೆ ನಡೆದ ಉತ್ಖನನದಲ್ಲಿ ವಿವಿಧ ಬಗೆಯ ಮಣ್ಣಿನ ಪಾತ್ರೆಗಳು, ಸೀಸ ಮತ್ತು ತಾಮ್ರದ ನಾಣ್ಯಗಳು ವೃತ್ತಾಕಾರದ ಗೃಹ ನಿವೇಶನದ ಅವಶೇಷಗಳು ಕಂಡುಬಂದವು.[೬೦] ಡಾ. ಅ.ಸುಂದರರವರು ಸಹ ಚಿತ್ರದುರ್ಗ ಜಿಲ್ಲೆಯ ಅನೇಕ ಪುರಾತತ್ವ ನೆಲೆ ಮತ್ತು ಬಯಲುಬಂಡೆ ರೇಖಾಚಿತ್ರಗಳನ್ನು ಪತ್ತೆಹಚ್ಚಿದ್ದಾರೆ.[೬೧] ಪ್ರೊ.ಲಕ್ಷಣ ತೆಲಗಾವಿ[೬೨] ಎಸ್.ವೈ.ಸೋಮಶೇಖರ್,[೬೩] ಹೆಚ್.ತಿಪ್ಪೇಸ್ವಾಮಿ[೬೪] ಹೊಳಲ್ಕೆರೆ ಮತ್ತು ಹೊಸದುರ್ಗ ತಾಲ್ಲೂಕಿನ ಪರಿಸರದಲ್ಲಿ, ಮೊಳಕಾಲ್ಮುರು ತಾಲ್ಲೂಕಿನ ಪರಿಸರದಲ್ಲಿ ಜಯಣ್ಣ ಉಲ್ಲಾನಹಳ್ಳಿಯವರು ಪುರಾತತ್ವ ನೆಲೆಗಳನ್ನು ಶೋಧಿಸಿದ್ದಾರೆ.[೬೫]

ಇಂತಹ ಪ್ರಾಗೈತಿಹಾಸಿಕ ಹಿನ್ನೆಲೆಯುಳ್ಳ ಚಿತ್ರದುರ್ಗ ಜಿಲ್ಲೆಯು ಐತಿಹಾಸಿಕವಾಗಿಯೂ ಮಹತ್ವದ ಸ್ಥಾನವನ್ನು ಪಡೆದುಕೊಂಡಿದೆ. ಈ ಪ್ರದೇಶವು ಮೌರ್ಯರಿಂದ ಹಿಡಿದು ಮೈಸೂರು ಒಡೆಯರ ಕಾಲದವರೆಗೆ ಅನೇಕ ರಾಜಮನೆತನಗಳ ಆಳ್ವಿಕೆಗೆ ಒಳಪಟ್ಟಿದೆ. ಈ ಎಲ್ಲಾ ರಾಜಮನೆತನಗಳು ಈ ಪ್ರದೇಶದ ಇತಿಹಾಸವನ್ನು ಪುನರ್‌ವಿಮರ್ಶಿಸಲು ಹಾಗು ಸಂಶೋಧನೆ ಕೈಗೊಳ್ಳಲು ಸಹಕಾರಿಯಾಗುವಂತಹ ಅನೇಕ ಕುರುಹುಗಳನ್ನು, ಅವಶೇಷಗಳನ್ನು ಬಿಟ್ಟುಹೋಗಿವೆ. ಹಾಗಾಗಿ ಈ ಪ್ರದೇಶದ ದೇವಾಲಯಗಳು, ಶಿಲ್ಪಗಳು ಹಾಗು ಶಾಸನಗಳನ್ನು ಕುರಿತಂತೆ ಅಧ್ಯಯನ ಮಾಡಲು ಈ ಎಲ್ಲಾ ರಾಜಮನೆತನಗಳ ಒಂದು ಕಿರುಪರಿಚಯ ಅತ್ಯಗತ್ಯವಾಗಿದೆ. ಇದು ಪ್ರಸ್ತುತ ಸಂಶೋಧನೆಗೆ ಅವಶ್ಯಕವೂ ಹೌದು. ಈ ದಿಶೆಯಲ್ಲಿ ಸಂಶೋಧನೆಗೆ ಪೂರಕವಾಗುವಂತಹ ಮಾಹಿತಿಯನ್ನು ರಾಜಮನೆತನಗಳಿಗನುಕ್ರಮವಾಗಿ ಸಂಕ್ಷಿಪ್ತವಾಗಿ ಕೆಳಕಂಡಂತೆ ಪರಿಚಯಿಸಲಾಗಿದೆ.

ಭಾರತದ ಪ್ರಸಿದ್ಧ ರಾಜಮನೆತನಗಳಲ್ಲಿ ಅತ್ಯಂತ ಪ್ರಮುಖ ಹಾಗು ಪ್ರಾಚೀನವಾದುದು ಮೌರ್ಯ ಸಾಮ್ರಾಜ್ಯ. ಅಲ್ಲದೇ ಉತ್ತರ ಭಾರತದಲ್ಲಿ ಪ್ರಪ್ರಥಮವಾಗಿ ಐತಿಹಾಸಿಕ ಸಾಮ್ರಾಜ್ಯಕ್ಕೆ ಅಸ್ತಿಭಾರ ಹಾಕಿದ ಹೆಗ್ಗಳಿಕೆಗೆ ಪಾತ್ರರಾಗಿರುವವರೆಂದರೆ ಮೌರ್ಯರು. ಹಾಗೆಯೇ ಕರ್ನಾಟಕವು ಸಹ ತನ್ನ ಚಾರಿತ್ರಿಕ ಘಟ್ಟವನ್ನು ಗುರುತಿಸಿಕೊಳ್ಳುವುದು ಮೌರ್ಯರ ಕಾಲದಿಂದ. ಹಾಗಾಗಿ ಅಶೋಕನ ಶಾಸನಗಳು ದೊರೆತಿರುವ ಎಡೆಗಳೆಲ್ಲವೂ ಮೌರ್ಯಕಾಲೀನ ಸಂಸ್ಕೃತಿ ನೆಲೆಗೊಂಡಿದ್ದ ನಿವೇಶನಗಳೇ ಆಗಿವೆ ಎನ್ನುವುದು ಗಮನಾರ್ಹ. ಆದರೆ ಮೌರ್ಯರಿಗಿಂತ ಮೊದಲು ನಂದರು, ಶಿಶುನಾಗರು ಕರ್ನಾಟಕದ ಕೆಲವು

ಭಾಗಗಳನ್ನು ಆಳ್ವಿಕೆ ನಡೆಸಿರುವುದು ತಿಳಿದುಬರುತ್ತದೆ. ನಂದರನ್ನು ಸೋಲಿಸಿ ಮೌರ್ಯರು ದಕ್ಷಿಣಭಾರತವನ್ನು ಒಳಗೊಂಡ ಮಗಧ ರಾಜ್ಯದ ಒಡೆಯರಾದರೆಂದು, ಈ ಹಿಂದೆ ಇಲ್ಲಿ ನಂದರು ಆಳ್ವಿಕೆ ನಡೆಸಿದ್ದರೆಂದು ಶಿಕಾರಿಪುರದ ಶಾಸನ ತಿಳಿಸುತ್ತದೆ.[೧೬]

ಕರ್ನಾಟಕದಲ್ಲಿ ಬ್ರಹ್ಮಗಿರಿ, ಸಿದ್ದಾಪುರ, ಜಟಿಂಗರಾಮೇಶ್ವರ (ಚಿತ್ರದುರ್ಗ ಜಿಲ್ಲೆ), ಮಸ್ಕಿ(ರಾಯಚೂರು ಜಿಲ್ಲೆ), ಕೊಪ್ಪಳ (ಕೊಪ್ಪಳ ಜಿಲ್ಲೆ), ಉಡೇಗೋಳಂ, ನಿಟ್ಟೂರು (ಬಳ್ಳಾರಿ ಜಿಲ್ಲೆ) ಹಾಗು ಸನ್ನತಿ (ಗುಲ್ಬರ್ಗಾ ಜಿಲ್ಲೆ) ಯಲ್ಲಿ ಅಶೋಕನ ಕಾಲದ ಶಾಸನಗಳು ದೊರೆತಿವೆ. ಕ್ರಿ.ಶ.೧೮೯೨ರಲ್ಲಿ ಸಿದ್ದಾಪುರ, ಬ್ರಹ್ಮಗಿರಿ, ಜಟಿಂಗರಾಮೇಶ್ವರ ನೆಲೆಗಳಲ್ಲಿ ಬಿ.ಎಲ್.ರೈಸ್‌ರವರು ಕೈಗೊಂಡ ಉತ್ಖನನಗಳಿಂದ ಪತ್ತೆಯಾದ ಅಶೋಕನ ಕಿರುಬಂಡೆಗಲ್ಲಿನ ಶಾಸನಗಳನ್ನು ೧೯೦೩ ರಲ್ಲಿ 'ಎಪಿಗ್ರಾಫಿಯಾ ಕರ್ನಾಟಿಕ' ಸಂಪುಟ-೧೧ ರಲ್ಲಿ (ಚಿತ್ರದುರ್ಗ ಜಿಲ್ಲೆ) ಪ್ರಕಟಿಸಿದ್ದರಿಂದ ದಕ್ಷಿಣ ಭಾರತದಲ್ಲಿ ಮೌರ್ಯ ಸಾಮ್ರಾಜ್ಯದ ಗಡಿಯನ್ನು ಗುರುತಿಸಲಾಯಿತು.[೧೭] ಬಿಂದುಸಾರನು ಚಿತ್ರದುರ್ಗವನ್ನೊಳಗೊಂಡಂತೆ ದಖನ್ನಿನ ಸ್ವಲ್ಪ ಭಾಗವನ್ನು ಸೇರಿಸಿಕೊಂಡು ಆಳ್ವಿಕೆ ನಡೆಸಿದರೆ,[೧೮] ಚಿತ್ರದುರ್ಗದ ಇತಿಹಾಸಕ್ಕೆ ಹೊಸ ತಿರುವು ಕೊಟ್ಟವನೆಂದರೆ ಅಶೋಕ ಮಹಾಶಯ. ಆದರೆ ಮೌರ್ಯ ಸಾಮ್ರಾಜ್ಯ ದಕ್ಷಿಣ ಭಾಗದಾದ್ಯಂತ ವ್ಯಾಪಿಸಲಿಲ್ಲ ಎಂಬುದು ಇತಿಹಾಸಕಾರರ ಅಭಿಪ್ರಾಯ. ಒಟ್ಟಿನಲ್ಲಿ 'ಕುಂತಲವು' ಅಶೋಕನ ಆಳ್ವಿಕೆಗೆ ಮೊದಲೇ ಮೌರ್ಯ ಸಾಮ್ರಾಜ್ಯಕ್ಕೆ ಸೇರಿದ್ದಿತೆಂಬುದು ನಿರ್ವಿವಾದ ವಿಷಯವಾಗಿದೆ.[೧೯] ಅಲ್ಲದೇ ಅಶೋಕನ ಎರಡು ಮತ್ತು ಮೂರನೆಯ ಶಾಸನಗಳು ದಕ್ಷಿಣದ ರಾಜ್ಯಗಳ ಹೆಸರುಗಳನ್ನು ತಿಳಿಸುತ್ತವೆ. ಜಗಲೂರು ತಾಲ್ಲೂಕಿನ 'ಅಸಗೋಡು' ಅಶೋಕ ಪಟ್ಟಣವೆಂದು ಕರೆಯಲ್ಪಟ್ಟಿದ್ದು, ಇಲ್ಲಿ ಬೌದ್ಧಧರ್ಮ ಇದ್ದುದರ ಕುರುಹುಗಳು ಸಿಗುತ್ತವೆ.[೨೦] ಸಂಘಂ ಸಾಹಿತ್ಯ ಕೃತಿಗಳಲ್ಲಿಯೂ ಮೌರ್ಯರು ದಕ್ಷಿಣ ಭಾರತದೊಂದಿಗೆ ಸಂಪರ್ಕ ಇಟ್ಟುಕೊಂಡಿದ್ದುದರ ಬಗ್ಗೆ ಉಲ್ಲೇಖವಿದೆ.[೨೧] ದಾವಣಗೆರೆ ಸಮೀಪದ ಶಾಮನೂರು, ಬೇತೂರುಗಳಲ್ಲೂ ಬೌದ್ಧರಿಗೆ ಸಂಬಂಧಿಸಿದ ಅವಶೇಷಗಳು ದೊರೆತಿವೆ.[೨೨] ಹೀಗೆ ಚಿತ್ರದುರ್ಗ ಜಿಲ್ಲೆಯ ಉತ್ತರ ಭಾಗದಲ್ಲಿ ದೊರೆತಿರುವ ಅಶೋಕನ ಶಾಸನಗಳು ಮೌರ್ಯರ ಆಳ್ವಿಕೆಯನ್ನು ಅಧಿಕೃತವಾಗಿ ಸ್ಪಷ್ಟಪಡಿಸುವ ಆಧಾರಗಳಾಗಿವೆ.

ಕರ್ನಾಟಕದಲ್ಲಿ ಬೆಳಕಿಗೆ ಬಂದಿರುವ ಅಶೋಕನ ಒಟ್ಟು ಹದಿನಾಲ್ಕು ಶಾಸನಗಳಲ್ಲಿ, ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ತಾಲ್ಲೂಕಿನ ಬ್ರಹ್ಮಗಿರಿ, ಸಿದ್ದಾಪುರ ಹಾಗು ಜಟಿಂಗರಾಮೇಶ್ವರಗಳಲ್ಲಿ ದೊರೆತಿರುವ ಶಾಸನಗಳು ಚಿತ್ರದುರ್ಗಕ್ಕೆ ಸಂಬಂಧಪಟ್ಟವೆಂದು ಅಭಿಪ್ರಾಯವೊಂದಿದ್ದರೆ,[೨೩] ಇನ್ನೊಂದು ಅಭಿಪ್ರಾಯದ ಪ್ರಕಾರ ಅಶೋಕನ ಒಟ್ಟು ಹದಿನೇಳು ಶಾಸನಗಳಲ್ಲಿ ಹದಿಮೂರು ಲಘುಶಾಸನಗಳು, ನಾಲ್ಕು ಮುಖ್ಯ ಶಿಲಾಶಾಸನಗಳಾಗಿದ್ದು,

ಬ್ರಹ್ಮಗಿರಿ, ಸಿದ್ದಾಪುರ ಮತ್ತು ಜಟಿಂಗರಾಮೇಶ್ವರಗಳಲ್ಲಿ ತಲಾ ಎರೆಡೆರಡರಂತೆ ಒಟ್ಟು ಆರು ಶಾಸನಗಳು ದೊರೆತಿವೆ. ಅಂದರೆ ಒಂದೇ ಶಾಸನದಲ್ಲಿ ಮೊದಲನೆಯ ಭಾಗದಲ್ಲಿ ರೂಪನಾಥ, ಎರಡನೆಯ ಭಾಗದಲ್ಲಿ ಎರ್ರಗುಡಿ ಶಾಸನಗಳೆಂಬ ಎರಡು ಭಾಗಗಳಿವೆ ಎಂದು ತಿಳಿದುಬರುತ್ತದೆ.[೨೪] ಈ ಮೂರು ಶಾಸನಗಳು ಅಶೋಕನ ಸಾಮ್ರಾಜ್ಯದ ಗಡಿಗಳನ್ನು ಸೂಚಿಸುವ ನೆಲಗಳಾಗಿವೆಯೆಂಬುದು ಇತಿಹಾಸಕಾರರ ಅಭಿಪ್ರಾಯ ಹಾಗು ಚಿತ್ರದುರ್ಗ ಜಿಲ್ಲೆ ಮೌರ್ಯರ ನೇರ ಆಡಳಿತಕ್ಕೆ ಒಳಪಟ್ಟಿತ್ತೆಂಬುದು ಸ್ಪಷ್ಟವಾಗುತ್ತದೆ.[೨೫] ಅಲ್ಲದೆ ಬ್ರಹ್ಮಗಿರಿ ಶಾಸನದಲ್ಲಿ ಉಲ್ಲೇಖಿಸಿದಂತೆ 'ಸುವರ್ಣಗಿರಿ' ಮೌರ್ಯರ ದಕ್ಷಿಣ ಪ್ರಾಂತ್ಯದ ರಾಜಧಾನಿಯಾಗಿತ್ತೆಂದೂ, ಅಶೋಕ ಕೆಲವು ದಿನಗಳವರೆಗೆ ಇಲ್ಲಿ ವಾಸವಾಗಿದ್ದನೆಂದೂ ತಿಳಿದುಬರುತ್ತದೆ.[೨೬] ಕೆಲವು ವಿದ್ವಾಂಸರು ಸುವರ್ಣಗಿರಿಯು ಮಸ್ಕಿಯಾಗಿತ್ತೆಂದು, ಗಂಗಾವತಿ ತಾಲ್ಲೂಕಿನ ಕನಕಗಿರಿಯೆಂದು, ಗುಲ್ಬರ್ಗ ಜಿಲ್ಲೆಯ ಸನ್ನತಿ ಎಂದೂ, ಆಂಧ್ರಪ್ರದೇಶದ ಎರ್ರಗುಡಿ ಬಳಿಯ ಜೊನ್ನಗಿರಿ ಎಂದು ಊಹಿಸಿದ್ದಾರೆ.[೨೭] ಆದರೆ ಬ್ರಹ್ಮಗಿರಿಯೇ ಸುವರ್ಣಗಿರಿ ಆಗಿರಬಹುದೆಂದು ಅಭಿಪ್ರಾಯಪಡಲಾಗಿದೆ.[೨೮]

ಮೌರ್ಯರ ಆಗಮನ ಚಿತ್ರದುರ್ಗ ಜಿಲ್ಲೆಯಲ್ಲಿ ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ ಮತ್ತು ರಾಜಕೀಯವಾಗಿ ಹೊಸದೊಂದು ಅಲೆಯನ್ನು ಪ್ರಾರಂಭಿಸಿತು. ಅಂದರೆ ಉತ್ತರದ ಸಂವೇದನೆಗಳು ಇಲ್ಲಿಗೆ ವರ್ಗಾವಣೆಗೊಂಡವು. ಬೌದ್ಧಧರ್ಮವು ಈ ಪ್ರದೇಶದ ಮೇಲೆ ತನ್ನ ಪ್ರಭಾವವನ್ನು ಬೀರಲು ಪ್ರಾರಂಭಿಸಿತು. ಅಲ್ಲದೆ ಬ್ರಹ್ಮಗಿರಿ, ಸಿದ್ದಾಪುರ ಹಾಗು ಜಟಿಂಗರಾಮೇಶ್ವರಗಳಲ್ಲಿ ದೊರೆತಿರುವ ಬೌದ್ಧಧರ್ಮದ ಅವಶೇಷಗಳು ಕರ್ನಾಟಕದ ಅತ್ಯಂತ ಪ್ರಾಚೀನ ಬೌದ್ಧಧರ್ಮದ ಕುರುಹುಗಳೆಂಬ ಅಭಿಪ್ರಾಯವಿದೆ.[೨೯] ಅಶೋಕನು ಕೇವಲ ರಾಜಕೀಯ ಸಾಧನೆಗಳಲ್ಲದೆ, ಸಾರ್ವಜನಿಕ ಉಪಯೋಗಿ ಕಾರ್ಯಕ್ರಮಗಳನ್ನೂ ಕೈಗೊಂಡು ಸನ್ಯಾಸಿ ಮಠಗಳು, ದೇವಾಲಯಗಳು ಹಾಗು ಒಂದು ಭವ್ಯ ಅರಮನೆಯನ್ನು ಕಟ್ಟಿಸಿದ ನೆಂಬುದು ಅವನೇ ಹೊರಡಿಸಿರುವ ಶಾಸನಗಳು ಹಾಗು ಪರಂಪರಾನುಗತವಾಗಿ ಬಂದ ದಾಖಲೆಗಳು ತಿಳಿಸುತ್ತವೆ.[೩೦] ಆದರೆ ಮೌರ್ಯರ ಕಾಲದಿಂದಲೇ ವಾಸ್ತು ಚಟುವಟಿಕೆಗಳು ನಡೆದರೂ, ಆ ಕಾಲದ ಯಾವುದೇ ಅವಶೇಷಗಳು ಇಂದು ಉಳಿದುಕೊಂಡು ಬಂದಿಲ್ಲ.

ಒಟ್ಟಾರೆ ಚಿತ್ರದುರ್ಗ ಜಿಲ್ಲೆಯಲ್ಲಿ ಪ್ರಪ್ರಥಮವಾಗಿ ಐತಿಹಾಸಿಕ ಸಾಮ್ರಾಜ್ಯ ಸ್ಥಾಪಿಸಿದ ಮೌರ್ಯರ ಆಡಳಿತ ವೈಖರಿ, ಸುಧಾರಣೆಗಳು, ಉದಾತ್ತ ಧ್ಯೇಯಗಳು, ಧಾರ್ಮಿಕ ಸಹಿಷ್ಣುತೆ ಮುಂದಿನ ರಾಜಮನೆತನದವರಿಗೆ ಭದ್ರಬುನಾದಿಯಾದವೆಂದು ತಿಳಿಯಬಹುದಾಗಿದೆ. ಈ ಪ್ರದೇಶದಿಂದ ಮೌರ್ಯರು ಕಣ್ಮರೆಯಾಗುತ್ತಿದ್ದಂತೆ ಶಾತವಾಹನರು ಪ್ರಬಲರಾಗತೊಡಗಿದರು.

ಚಿತ್ರದುರ್ಗ ಪರಿಸರದಲ್ಲಿ ಮೌರ್ಯ ಸಾಮ್ರಾಜ್ಯದ ಪತನಾನಂತರ ಅವರ ಸಾಮಂತರಾಗಿದ್ದ ಆಂಧ್ರರು, ಆಂಧ್ರಭೃತ್ಯರು, ಶಾತಃಕರ್ಣಿಗಳು ಮುಂತಾದ ಹೆಸರುಗಳಿಂದ ಖ್ಯಾತರಾಗಿದ್ದ ಶಾತವಾಹನರು ಅಧಿಕಾರ ಸ್ಥಾಪಿಸಿದರು. ಆದರೆ ಇವರ ಶಾಸನಗಳಲ್ಲಿ ಎಲ್ಲಿಯೂ ಸಹ 'ಆಂಧ್ರ' ಎಂಬ ಪದವನ್ನೇ ಬಳಸಿಲ್ಲದಿರುವುದರಿಂದ ಹಾಗು ಶಾಸನಗಳಲ್ಲಿ ತಮ್ಮನ್ನು ಶಾತವಾಹನಕುಲ, ಶಾತವಾಹನರೆಂದಷ್ಟೇ ಕರೆದುಕೊಂಡಿರುವುದರಿಂದ ಇವರನ್ನು ಆಂಧ್ರರೆಂದು ಕರೆಯುವುದರಲ್ಲಿ ಅರ್ಥವಿಲ್ಲವೆಂದು ತಿಳಿದುಬರುತ್ತದೆ.[೮೧] ಆದರೆ ಗೌತಮಿಪುತ್ರಶಾತಃಕರ್ಣಿ ಇಂದಿನ ಕರಾವಳಿ ಆಂಧ್ರಪ್ರದೇಶಕ್ಕೆ ಸೇರಿದ ಭೂಭಾಗಗಳ ಮೇಲೆ ಒಡೆತನ ಸಾಧಿಸಿದ್ದನೆಂದು ತಿಳಿದುಬರುತ್ತದೆ. ಆದರೂ ಅವನ ಆಳ್ವಿಕೆಯ ಅವಧಿಯಲ್ಲಿ (ಕ್ರಿ.ಶ. ಸು.೬೦ ರಿಂದ ೯೦) ಈ ಪ್ರದೇಶವನ್ನು ಆಂಧ್ರವೆಂದು ಗುರುತಿಸಿರಲಿಲ್ಲವಾದ್ದರಿಂದ, ಇವನಿಗೂ ಮೊದಲು ಆಂಧ್ರಪ್ರದೇಶದಲ್ಲಿ ಇವರು ಆಳ್ವಿಕೆ ಮಾಡಿದ್ದರೆಂಬುದಕ್ಕೆ ಯಾವ ಸಾಕ್ಷ್ಯವೂ ಇಲ್ಲ.[೮೨] ಹಾಗೆಯೆ ಅಜಯ್‌ಮಿತ್ರಶಾಸ್ತ್ರೀಯವರು ಇವರ ಮೊದಲ ರಾಜಧಾನಿ ಮಹಾರಾಷ್ಟ್ರದ ಜುನ್ನಾರ್, ಶಾತ್ಕಾಲಿಕ ರಾಜಧಾನಿ ಆಂಧ್ರಪ್ರದೇಶದ ತೆಲಂಗಾಣ ಎಂದು ತಿಳಿಸಿದ್ದಾರಲ್ಲದೇ, ಗುಲ್ಬರ್ಗ ಜಿಲ್ಲೆಯ ಸನ್ನತಿಯೂ ಇವರ ರಾಜಧಾನಿಯಾಗಿತ್ತೆಂದು ಅಭಿಪ್ರಾಯಪಟ್ಟಿದ್ದಾರೆ.[೮೩] ಹಾಗಾಗಿ ಇವರ ಮೂಲದ ಬಗ್ಗೆ ಭಿನ್ನಾಭಿಪ್ರಾಯವಿದೆ

ಕರ್ನಾಟಕದಲ್ಲಿ ಇವರ ಆಳ್ವಿಕೆಯನ್ನು ಸಮರ್ಥಿಸುವ ಶಾಸನಗಳೆಂದರೆ ಚಿಕ್ಕಮಗಳೂರಿನ ಶಾಸನ, ಗುಲ್ಬರ್ಗ ಜಿಲ್ಲೆಯ ಸನ್ನತಿಯ ಪರಿಸರದಲ್ಲಿ ದೊರೆತಿರುವ ಅರವತ್ತಕ್ಕೂ ಹೆಚ್ಚು ಶಾಸನಗಳು, ಬಳ್ಳಾರಿ ಜಿಲ್ಲೆಯ ಮ್ಯಾಕದೋಣಿ ಮತ್ತು ಹಿರೇಹಡಗಲಿಯ ಪ್ರಾಕೃತ ಶಾಸನಗಳು ಪ್ರಮುಖವಾದವು. ಬಳ್ಳಾರಿ ಜಿಲ್ಲೆಯ ಶಾಸನಗಳು ಈ ಪ್ರದೇಶವನ್ನು 'ಶಾತವಾಹನಿಹಾರ' ಮತ್ತು 'ಶಾತವಾಹನೀರಠ (ಶಾತವಾಹನೀ ರಾಷ್ಟ್ರ) ಎಂದು ಪ್ರಯೋಗಿಸಿದ್ದು, ಬಳ್ಳಾರಿಯಿಂದ ದಾವಣಗೆರೆಯವರೆಗೂ ತಮ್ಮ ಆಳ್ವಿಕೆಯನ್ನು ವಿಸ್ತರಿಸಿದ್ದರೆಂದು ತಿಳಿಸುತ್ತವೆ.[೮೪] ಅಲ್ಲದೆ ನಾಸಿಕ್ ಶಾಸನವು ವಾಸಿಷ್ಠಪುತ್ರಪುಳುಮಾವಿ ಕಾಲದಲ್ಲಿ ಅವರ ಸಾಮ್ರಾಜ್ಯ ಕುಂತಲದವರೆಗೂ ವಿಸ್ತರಿಸಿತ್ತೆಂದು ತಿಳಿಸುತ್ತದೆ.[೮೫] ಈ ಶಾಸನಗಳಿಂದ ಕೆಲವೇ ಕೆಲವು ಶಾತವಾಹನ ರಾಜರ ಹೆಸರುಗಳು ಕಂಡುಬರುತ್ತವೆ. ಅಂತಹವರಲ್ಲಿ ವಾಸಿಷ್ಠಪುತ್ರಪುಳುಮಾವಿ, ಶಿವಮಾರ್ಕಂಡ, ಶಿವಸ್ಕಂದಶಾತಕರ್ಣಿ, ಗೌತಮೀಪುತ್ರ ಯಜ್ಞಶಾತಕರ್ಣಿ,ಗೌತಮಿಪುತ್ರ ವಿಜಯಶಾತಕರ್ಣಿ ಪ್ರಮುಖರಾಗಿದ್ದಾರೆ.[೮೬] ಅಲ್ಲದೆ ಬನವಾಸಿ (ಉತ್ತರಕನ್ನಡ ಜಿಲ್ಲೆ), ವಡಗಾಂವ, ಮಾಧವಪುರ, ಹಲಸಿ (ಬೆಳಗಾವಿ ಜಿಲ್ಲೆ), ಕೊಪ್ಪಳ, ಐಹೊಳೆ, ಪಟ್ಟದಕಲ್ಲು (ಬಾಗಲಕೋಟೆ ಜಿಲ್ಲೆ), ಸನ್ನತಿ, ಹರಸನಗುಂಡಿ, ಕೊಲ್ಲೂರು, ಅಣಬಿ (ಗುಲ್ಬರ್ಗ ಜಿಲ್ಲೆ)ಗಳು ಕರ್ನಾಟಕದಲ್ಲಿ ಶಾತವಾನಹರ ಪ್ರಮುಖ ನೆಲೆಗಳಾಗಿದ್ದವು.

ಇವರ ಮಾಂಡಳಿಕರಾಗಿದ್ದ ಚುಟುಗಳು ಮತ್ತು ಮಹಾರಥಿಗಳಲ್ಲಿ ಚಿತ್ರದುರ್ಗವನ್ನು ಆಳಿದವರೆಂದರೆ ಚುಟುಗಳು. ಇವರನ್ನು ಆನಂದ ಅರಸರೆಂತಲೂ ಕರೆಯಲಾಗಿದೆ.[೮೭] ಇವರು ಬನವಾಸಿಯಿಂದಲೇ ಆಳ್ವಿಕೆ ನಡೆಸಿದರು. ಕ್ರಿ.ಶ. ೧೮೮೮ರಲ್ಲಿ ಮೆರ್ವಿನ್‌ಸ್ಮಿತ್ ಅವರು ಪ್ರಥಮ ಬಾರಿಗೆ ಚಿತ್ರದುರ್ಗ ಜಿಲ್ಲೆಯಲ್ಲಿ ಚುಟುಗಳಿಗೆ ಸಂಬಂಧಿಸಿದ ಅನೇಕ ಸೀಸದ ನಾಣ್ಯಗಳನ್ನು ಪತ್ತೆಹಚ್ಚಿದರು.[೮೮] ನಂತರ ಚಂದ್ರವಳ್ಳಿಯಲ್ಲಿ ಕೈಗೊಂಡ ಉತ್ಖನನದಲ್ಲಿ ಅನೇಕ ಸೀಸದ ನಾಣ್ಯಗಳು ದೊರೆತಿದ್ದು, ಗಾತ್ರದಲ್ಲಿ ಆ ಕಾಲದ ಇತರೇ ನಾಣ್ಯಗಳಿಗಿಂತ ಹೆಚ್ಚು ದೊಡ್ಡ ದಾಗಿವೆ. ಇವುಗಳ ಮುಂಭಾಗದಲ್ಲಿ ಏಳೆಂಟು ಕಮಾನುಗಳ ಗುಡ್ಡ, ಅದರ ಕೆಳಭಾಗದಲ್ಲಿ ನದಿಯನ್ನು ಸಂಕೇತಿಸಿರುವ ವಕ್ರರೇಖೆ ಕಂಡುಬರುತ್ತದೆ.[೮೯] ಅಲ್ಲದೆ ಈ ಭಾಗದಲ್ಲಿ ಆಳ್ವಿಕೆ ನಡೆಸಿದ ನಾಲ್ಕು ಜನ ಮಹಾರಥಿ ಅರಸರುಗಳನ್ನು ಈ ನಾಣ್ಯಗಳಿಂದ ಗುರುತಿಸಲಾಗಿದೆ.[೯೦] ಇತ್ತೀಚೆಗೆ ಎಸ್.ವೈ.ಸೋಮಶೇಖರ್‌ರವರು ತುರುವನೂರು ಮತ್ತು ಚಿಪ್ಪಿನಕರೆ ಪ್ರದೇಶಗಳಲ್ಲಿ ಮುಲಾನಂದನಿಗೆ ಸಂಬಂಧಿಸಿದ ನಾಣ್ಯಗಳನ್ನು ಸಂಗ್ರಹಿಸಿ, ಅವುಗಳ ಮಹತ್ವವನ್ನು ಪ್ರಕಟಿಸಿದ್ದಾರೆ.[೯೧]

ಚಿತ್ರದುರ್ಗ ಜಿಲ್ಲೆಯಲ್ಲಿ ಇವರ ಆಳ್ವಿಕೆಯನ್ನು ಸಮರ್ಥಿಸುವಂತಹ ಶಾಸನಗಳು ದೊರೆತಿಲ್ಲವಾದರೂ, ೧೯೦೯ರಲ್ಲಿ ಆರ್.ನರಸಿಂಹಾಚಾರ್, ೧೯೨೮ರಲ್ಲಿ ಎಂ.ಎಚ್.ಕೃಷ್ಣ, ೧೯೪೭ರಲ್ಲಿ ಮಾರ್ಟಿಮರ್ ವ್ಹೀಲರ್ ಅವರುಗಳು ಚಂದ್ರವಳ್ಳಿ ಮತ್ತು ಬ್ರಹ್ಮಗಿರಿ ನೆಲೆಗಳಲ್ಲಿ ನಡೆಸಿದ ಶೋಧನೆಗಳಿಂದ ದೊರೆತ ನಾಣ್ಯಗಳು, ಪುರಾತತ್ವ ಅವಶೇಷಗಳು ಅವರ ಆಡಳಿತ, ಕಲೆ, ವಾಸ್ತು, ಸಾಮಾಜಿಕ, ಆರ್ಥಿಕ ಹಾಗು ಧಾರ್ಮಿಕ ಪರಿಸ್ಥಿತಿಗಳ ಮೇಲೆ ಬೆಳಕು ಚೆಲ್ಲಿವೆ. ಅಂದರೆ ದೊರೆತಿರುವ ಇಟ್ಟಿಗೆ ಚೂರು, ಲೋಹದ ಬಳೆ, ಕಬ್ಬಿಣ, ಮಣ್ಣಿನ ಪಾತ್ರೆ ಮುಂತಾದುವುಗಳಿಂದ ಅವರ ಸಾಮಾಜಿಕ ಜೀವನ, ಚಿನ್ನ, ಬೆಳ್ಳಿ, ತಾಮ್ರ, ಪೋಟಿನ್, ಸೀಸ ಮುಂತಾದ ಬಗೆಯ ನಾಣ್ಯಗಳಿಂದ ಆರ್ಥಿಕ ಸ್ಥಿತಿ ಹಾಗು ಚೀನಾ, ರೋಂ ದೇಶಗಳೊಂದಿಗಿನ ವ್ಯಾಪಾರ ಸಂಬಂಧ, ನಾಣ್ಯಗಳ ಮೇಲೆ ಚಿತ್ರಿತವಾಗಿರುವ ವೃಕ್ಷ, ವೃಷಭ, ಅರ್ಧಸ್ತೂಪ ಮುಂತಾದ ಸಂಕೇತಗಳಿಂದ ಧಾರ್ಮಿಕ ನೀತಿ ಹಾಗು ಅಂಕಲಿಮಠಗ ನಿವೇಶನದಿಂದ ಬೌದ್ಧಧರ್ಮದ ಅನುಯಾಯಿಗಳಾಗಿದ್ದರೆಂದು ತಿಳಿದುಬರುತ್ತದೆ.

ಚಂದ್ರವಳ್ಳಿ ಅವರ ರಾಜಧಾನಿಗಳಲ್ಲಿ ಒಂದಾಗಿದ್ದು, ಚುಟುಕಾನಂದ, ಮುಲಾನಂದ ಸಡಕಣ,ಕೆಳಲಾಯಿ ಮುಂತಾದವರು ಈ ಸಂತತಿಯ ಪ್ರಮುಖ ಆಡಳಿತಗಾರರಾಗಿದ್ದರೆಂದು ತಿಳಿದುಬರುತ್ತದೆ. ಹಾಗು ಉತ್ಖನನದಲ್ಲಿ ಕಂಡುಬಂದಿರುವ ಇವರ ಕಾಲದ ಗಜಪೃಷ್ಠಾಕಾರದ ಇಟ್ಟಿಗೆಯಲ್ಲಿ ನಿರ್ಮಿಸಿರುವ ಬೌದ್ಧ ಚೈತ್ಯದ ಅವಶೇಷಗಳು, ವಿಶಾಲವಾದ ಇಟ್ಟಿಗೆ ನಿರ್ಮಿತ

ಕಟ್ಟಡಗಳ ಅವಶೇಷಗಳು ಈ ಭಾಗದ ವಾಸ್ತು ಚಟುವಟಿಕೆಗಳಿಗೆ ಬುನಾದಿ ಹಾಕಿದವು ಎನ್ನಬಹುದು.[೧೨] ಅಲ್ಲದೆ ಇತ್ತೀಚಿನ ಸಂಶೋಧನೆಗಳಿಂದ ಕೇವಲ ಚಂದ್ರವಳ್ಳಿ ಮತ್ತು ಬ್ರಹ್ಮಗಿರಿ ನೆಲೆಗಳಿಗಷ್ಟೇ ಸೀಮಿತವಾಗಿದ್ದ ಶಾತವಾಹನ ಸಂಸ್ಕೃತಿ ಜಿಲ್ಲೆಯಾದಾದ್ಯಂತ ವ್ಯಾಪಕವಾಗಿ ಹರಡಿರುವುದನ್ನು ಗುರುತಿಸಲಾಗಿದೆ.[೧೩] ಚುಟುಗಳ ನಂತರ ಕದಂಬ ಮಯೂರಶರ್ಮನು ಬನವಾಸಿಯಲ್ಲಿ ರಾಜ್ಯ ಸ್ಥಾಪನೆ ಮಾಡುವುದರೊಂದಿಗೆ ಚುಟುಗಳ ಅಧಿಕಾರ ಅಂತ್ಯಗೊಂಡಿತು.

ಕ್ರಿ.ಶ. ಮೂರನೆಯ ಶತಮಾನದಲ್ಲಿ ಅಂತ್ಯಗೊಂಡ ಶಾತವಾಹನರ ನಂತರ ಚಿತ್ರದುರ್ಗ ಜಿಲ್ಲೆಯಲ್ಲಿ ಆಧಿಪತ್ಯ ಸ್ಥಾಪಿಸಿದವರೆಂದರೆ ಬನವಾಸಿಯ ಕದಂಬರು. ಬನವಾಸಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು, ಇವರು ಕ್ರಿ.ಶ. ಮೂರನೆಯ ಶತಮಾನದ ಅಂತ್ಯದಿಂದ ಏಳನೆಯ ಶತಮಾನದ ಮಧ್ಯದವರೆಗೆ ಸುಮಾರು ೩೭೫ ವರ್ಷಗಳ ಕಾಲ ಉತ್ತರ ಕರಾವಳಿ, ದಕ್ಷಿಣ ಕರಾವಳಿ, ಬೆಳಗಾಂ, ಧಾರವಾಡ, ಚಿತ್ರದುರ್ಗ, ದಾವಣಗೆರೆ, ಶಿವಮೊಗ್ಗ ಮುಂತಾದ ಭಾಗಗಳಲ್ಲಿ ಆಳ್ವಿಕೆ ನಡೆಸಿದ್ದಾರೆ.[೧೪] ಈ ವಂಶದ ಪ್ರಸಿದ್ಧ ದೊರೆ ಮಯೂರಶರ್ಮ, ಪಲ್ಲವರನ್ನು ಸದೆಬಡಿದು ವಿಶಾಲ ಸಾಮ್ರಾಜ್ಯವನ್ನು ಕಟ್ಟಿಬೆಳೆಸಿದನೆಂದು ತಾಳಗುಂದ ಶಾಸನದಿಂದ ತಿಳಿದುಬರುತ್ತದೆ.[೧೫] ಪ್ರಾಚೀನ ಕದಂಬರಲ್ಲಿ ಗೋವೆ, ಬೇಲೂರು, ನಾಗರಖಂಡ, ಹಾನಗಲ್ಲು, ಉಚ್ಚಂಗಿ, ಬಯಲುನಾಡು, ಕಳಿಂಗ ಮತ್ತು ಬಂಕಾಪುರಗಳೆಂಬ ಮನೆತನಗಳಿದ್ದು, ದಕ್ಷಿಣ ಭಾರತದ ಬೇರೆ ಬೇರೆ ಭಾಗಗಳಲ್ಲಿ ಸುಮಾರು ಹದಿನಾಲ್ಕನೆಯ ಶತಮಾನದವರೆಗೆ ಆಳ್ವಿಕೆ ನಡೆಸಿದ್ದಾರೆ.[೧೬]

ಎಂ.ಎಚ್.ಕೃಷ್ಣ ಅವರು ಕ್ರಿ.ಶ.೧೯೭೯ರಲ್ಲಿ ಮಯೂರಶರ್ಮನ ಚಂದ್ರವಳ್ಳಿ ಶಾಸನವನ್ನು ಪ್ರಪ್ರಥಮವಾಗಿ ಪತ್ತೆಹಚ್ಚಿ, ಅದರ ಮಹತ್ವವನ್ನು ಪ್ರಕಟಿಸಿದ್ದರಿಂದ[೧೭] ಚಿತ್ರದುರ್ಗ ಜಿಲ್ಲೆಯಲ್ಲಿ ಮಯೂರಶರ್ಮನಿಂದಲೇ ಕದಂಬರ ಆಳ್ವಿಕೆ ಪ್ರಾರಂಭವಾಯಿತೆಂಬುದು ಖಚಿತವಾಯಿತು. ಈ ಶಾಸನ ಚಿಕ್ಕದಾದರೂ, ಕದಂಬರ ಆರಂಭದ ಇತಿಹಾಸವನ್ನು ತಿಳಿಸುವಲ್ಲಿ ಅಮೂಲ್ಯವೆನಿಸಿದೆ. ಅಲ್ಲದೆ ಮಯೂರಶರ್ಮನು ಒಂದು ಕೆರೆಯನ್ನು ಕಟ್ಟಿಸಿದನೆಂದು ಉಲ್ಲೇಖವಿದೆ. ಈ ಶಾಸನವು ಚಂದ್ರವಳ್ಳಿಯ ಹುಲಿಗೊಂದಿ ಸಿದ್ದೇಶ್ವರ (ಭೈರವೇಶ್ವರ) ದೇವಾಲಯದ ಬಲಭಾಗದ ಬೃಹತ್ ಬಂಡೆಯ ಮೇಲಿದ್ದು, ಬ್ರಾಹ್ಮಿಲಿಪಿ, ಪ್ರಾಕೃತ ಭಾಷೆಯಲ್ಲಿದೆ.[೧೮] ಚಂದ್ರವಳ್ಳಿ ನಿವೇಶನದಲ್ಲಿ ನಡೆದಿರುವ ಉತ್ಖನನಗಳಿಂದ ದೊರೆತಿರುವ ಲೌಕಿಕ ಕಟ್ಟಡಗಳ ಅವಶೇಷಗಳು, ಬಾವಿ ಮತ್ತು ಕಟ್ಟಡಗಳನ್ನು ಕಟ್ಟಲು ಬಳಸಿರುವ ೧೬x೮x೩ ಅಳತೆಯ ಇಟ್ಟಿಗೆಗಳಿಂದ ಇಲ್ಲಿ ಭಾರೀ ಕಟ್ಟಡಗಳು, ರಾಜಬೀದಿಗಳು, ಇಕ್ಕೆಲಗಳಲ್ಲಿ ವೈದ್ಯರು,

ಅಕ್ಕಸಾಲಿಗರು ಮತ್ತು ಕುಂಬಾರರ ಅಂಗಡಿಗಳಿದ್ದವೆಂದು ತಿಳಿದು ಬಂದಿದ್ದು, ಕದಂಬರ ಆಳ್ವಿಕೆಯ ವೇಳೆಗಾಗಲೇ ಚಂದ್ರವಳ್ಳಿ ಪ್ರದೇಶ ತುಂಬಾ ಮುಂದುವರೆದ ನಗರವಾಗಿತ್ತೆಂದು ತಿಳಿಯಬಹುದಾಗಿದೆ.[೯೯]

ಚಿತ್ರದುರ್ಗ ಜಿಲ್ಲೆಯಲ್ಲಿ ಆದಿಕದಂಬರ ಶಾಸನಗಳು ದೊರೆತಿರುವುದು ತುಂಬಾ ವಿರಳ. ಆದರೆ ದೊರೆತಿರುವ ಕೆಲವೇ ಶಾಸನಗಳು ತುಂಬಾ ಮಹತ್ವದ್ದಾಗಿವೆ. ದಾವಣಗೆರೆ ತಾಲ್ಲೂಕು ಅಣಜಿ ಗ್ರಾಮದಲ್ಲಿ ದೊರೆತಿರುವ ಶಿವನಂದವರ್ಮನ ಶಾಸನ ನೊಣಕ್ಕಸ ಪಲ್ಲವನಿಗೂ, ಕದಂಬ ಕೃಷ್ಣವರ್ಮನಿಗೂ ನಡೆದ ತುಮುಲ ಯುದ್ಧದ ಬಗ್ಗೆ ವರ್ಣಿಸುತ್ತದೆ.[೧೦೦] ಅಲ್ಲದೆ ಸಾಮಾಜಿಕ, ಧಾರ್ಮಿಕ ನಡವಳಿಕೆಗಳು ಹೇಗಿದ್ದವೆಂಬುದಕ್ಕೆ ಕೈಗನ್ನಡಿಯಾಗಿದೆ. ಅಣಜಿಯಲ್ಲಿನ ಕೋಟೆ ಮತ್ತು ಕೆಲವು ಅವಶೇಷಗಳು ಇವರ ಕಾಲದವುಗಳೆನ್ನಬಹುದು.[೧೦೧] ಇವರ ಕಾಲದ ಮತ್ತೊಂದು ಶಾಸನವೆಂದರೆ ದಾವಣಗೆರೆ ತಾಲ್ಲೂಕು ಕಾಶೀಪುರ ಗ್ರಾಮದಲ್ಲಿ ದೊರೆತಿರುವ ರವಿಮರ್ಮನ ತಾಮ್ರಶಾಸನ.[೧೦೨] ಈ ಶಾಸನದಿಂದ ಅವನ ಆಡಳಿತ ಮತ್ತು ದಾನ ನೀಡಿದ ಬಗ್ಗೆ ತಿಳಿದುಬರುತ್ತದೆ. ಮೊಳಕಾಲ್ಮೂರಿನಲ್ಲಿ ಇವರ ಆಡಳಿತಕ್ಕೆ ಸಂಬಂಧಿಸಿದಂತೆ ಮೊಳಕಾಲ್ಮೂರು ತಾಲ್ಲೂಕಿನ ನುಂಕೆಮಲೆಯ ಬೆಟ್ಟದ ಮೇಲಿರುವ ನುಂಕೇಶ್ವರನನ್ನು ಕದಂಬ ವಂಶದ ರಾಜನೊಬ್ಬನು ಪ್ರತಿಷ್ಠಾಪಿಸಿದನೆಂದೂ, ಕದಂಬರು ಈ ಪ್ರದೇಶದಲ್ಲಿ 'ಲುಂಕೆ' ಎಂಬ ಹೆಸರಿನ ಕೋಟೆ ಕಟ್ಟಿಸಿದರೆಂದೂ, ಇದೇ ಮುಂದೆ ನುಂಕೆಕೋಟೆಯಾಗಿದೆಯೆಂದು ನುಂಕೆಮಲೆಯಲ್ಲಿ ದೊರೆತಿರುವ ಶಾಸನಗಳಿಂದ ತಿಳಿದುಬರುತ್ತದೆ.[೧೦೩]

ಕ್ರಿ.ಶ. ಆರನೆಯ ಶತಮಾನದ ಕೊನೆಯವರೆಗೆ ಆಳಿದ ಆದಿಕದಂಬರು ಬಾದಾಮಿ ಚಾಲುಕ್ಯರಿಗೆ ಸೋತು ಸಾಮಂತರಾದರು. ಮೊಳಕಾಲ್ಮೂರಿಗೆ ಉತ್ತರದಲ್ಲಿರುವ ಹಿರೇಆರ್ಯದುರ್ಗವೆಂದು ಪ್ರಸಿದ್ಧವಾಗಿರುವ ಉಚ್ಚಂಗಿದುರ್ಗ ಕದಂಬರ ರಾಜಧಾನಿಯಾಗಿತ್ತೆಂದು ಅವರಿಗೆ ಸಂಬಂಧಿಸಿದ ದಾಖಲೆಗಳಿಂದ ತಿಳಿದುಬಂದಿದೆ.[೧೦೪]

ಹೀಗೆ ಚಿತ್ರದುರ್ಗ ಜಿಲ್ಲೆಯಲ್ಲಿ ಸಾಮ್ರಾಜ್ಯ ಕಟ್ಟಿ ಆಳ್ವಿಕೆ ನಡೆಸಿದ ಕದಂಬರು ಕೆಲವು ದೇವಾಲಯಗಳಿಗೆ ದಾನದತ್ತಿಗಳನ್ನು ನೀಡಿರುವ ಬಗ್ಗೆ ತಿಳಿದುಬರುತ್ತದೆ. ಇಸಾಮುದ್ರದ ಕಲ್ಲೇಶ್ವರ ದೇವಾಲಯದ ಶಾಸನ ಹಾಗು ಚಿತ್ರದುರ್ಗದ ಇಪ್ಪತ್ತಾರನೆಯ ಶಾಸನಗಳಿಂದ ಕದಂಬರ ಕನ್ನಯ್ಯ, ಗೊಗ್ಗಿಯ ದೇವಾಲಯದ ಧರ್ಮದರ್ಶಿ ಭಟ್ಟಾರರಿಗೆ ಸಿರಿಗೆರೆ, ಕಾರಿಂಗೆರೆ (ಕಾಲಗೆರೆ), ಹದರಿಗಟ್ಟ (ಬಹದ್ದೂರ್ ಘಟ್ಟ) ಹಾಗು ಇಟ್ಟಿಗೆ ಎಂಬ ನಾಲ್ಕು ಊರುಗಳನ್ನು ದಾನ ನೀಡಿದ ವಿಷಯ ತಿಳಿಯುತ್ತದೆ. ಅಲ್ಲದೆ ದಾವಣಗೆರೆ ತಾಲ್ಲೂಕಿನ ಕಾಸೀಪುರ ತಾಮ್ರಶಾಸನದಿಂದ ರವಿವರ್ಮನು ದುಮ್ಮಿಯನ್ನು ದತ್ತಿಬಿಟ್ಟ ವಿಷಯ

ತಿಳಿದುಬರುತ್ತದೆ. ಕ್ರಿಶ. ೧೦೭೧ನೆಯ ಇಸವಿಯ ಶಾಸನದಿಂದ ದಡಗೂರಿನ ಕಲಿದೇವನಿಗೆ ದತ್ತಿಬಿಟ್ಟ ವಿಷಯ ಹಾಗು ಬಂಚರಸದೇವನು ಲುಂಕೇಶ್ವರ ದೇವಾಲಯವನ್ನು ಕಟ್ಟಿಸಿ, ದಾನದತ್ತಿಗಳನ್ನು ನೀಡಿದ ವಿಷಯ ತಿಳಿದುಬರುತ್ತದೆ.

ಚಾಲುಕ್ಯರಲ್ಲಿ ಪ್ರಮುಖವಾಗಿ ಬಾದಾಮಿ ಚಾಲುಕ್ಯರು, ಕಲ್ಯಾಣ ಚಾಲುಕ್ಯರು, ವೆಂಗಿ ಚಾಲುಕ್ಯರು ಎಂಬ ಮೂರು ಶಾಖೆಗಳು ಕಂಡುಬರುತ್ತವೆ. ಇವರಲ್ಲಿ ಬಾದಾಮಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಕ್ರಿ.ಶ.ಆರನೆಯ ಶತಮಾನದಿಂದ ಎಂಟನೆಯ ಶತಮಾನದವರೆಗೆ ಅಖಂಡ ಕರ್ನಾಟಕವನ್ನು ಪ್ರಪ್ರಥಮ ಚಕ್ರವರ್ತಿಗಳಾಗಿ ಆಳಿದ ಬಾದಾಮಿ ಚಾಲುಕ್ಯರು ಅತ್ಯಂತ ಪ್ರಮುಖರಾದವರು. ಇವರ ಮೂಲಪುರುಷ ಜಯಸಿಂಹ. ನಂತರ ಈ ವಂಶದ ಪ್ರಮುಖ ಅರಸನಾದ ಒಂದನೆಯ ಪುಲಿಕೇಶಿ, ಎರಡನೆಯ ಪುಲಿಕೇಶಿ, ಎರಡನೆಯ ವಿಕ್ರಮಾದಿತ್ಯರು ರಾಜ್ಯದ ಗಡಿಯನ್ನು ಉತ್ತರದಲ್ಲಿ ನರ್ಮದೆಯಿಂದ, ದಕ್ಷಿಣದಲ್ಲಿ ಕಾವೇರಿಯವರೆಗೂ ವಿಸ್ತರಿಸಿದರು. ಇಂತಹ ಸಮಯದಲ್ಲಿ ಚಾಲುಕ್ಯ ಮತ್ತು ಪಲ್ಲವರ ನಡುವೆ ನಡೆಯುತ್ತಿದ್ದ ನಿರಂತರ ಜಗಳಗಳಿಂದ, ಎರಡೂ ಮನೆತನಗಳ ಗಡಿಯಲ್ಲಿದ್ದ ಚಿತ್ರದುರ್ಗ ಪ್ರದೇಶದಲ್ಲಿ ಅಶಾಂತಿವುಂಟಾಗಿ ಈ ಅವಧಿಯಲ್ಲಿ ಚಿತ್ರದುರ್ಗವು ಬಾದಾಮಿ ಚಾಲುಕ್ಯರ ಆಳ್ವಿಕೆಗೆ ಒಳಪಟ್ಟಿತ್ತೆಂದು, ಚಿತ್ರದುರ್ಗವನ್ನು 'ಸೂಳ್ಗಲ್ಲುನಾಡು' ಎಂದು ಕರೆಯಲಾಗುತ್ತಿತ್ತೆಂದು ಧೃಡವಾಗುತ್ತದೆ.[೧೦೫]

ಕರ್ನಾಟಕದ ಇತಿಹಾಸದಲ್ಲಿ ಬಾದಾಮಿ ಚಾಲುಕ್ಯರ ನಂತರ ಪ್ರವರ್ಧಮಾನಕ್ಕೆ ಬಂದ ರಾಜಮನೆತನವೆಂದರೆ ರಾಷ್ಟ್ರಕೂಟರು. ಇವರು ಬಾದಮಿ ಚಾಲುಕ್ಯರ ಮಾಂಡಳಿಕರಾಗಿದ್ದು, ಕ್ರಿ.ಶ.೭೫೩ರ ವೇಳೆಗೆ ಬಾದಾಮಿ ಚಾಲುಕ್ಯರಿಂದ ಸಾಮ್ರಾಜ್ಯವನ್ನು ಗೆದ್ದುಕೊಂಡು, ಗುಲ್ಬರ್ಗ ಜಿಲ್ಲೆಯ ಮಳಖೇಡವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ನಡೆಸಿದರು. ಚೋಳ, ಗಂಗ ಹಾಗು ನೊಳಂಬರೊಂದಿಗೆ ವೈವಾಹಿಕ ಸಂಬಂಧಗಳನ್ನು ಬೆಳೆಸಿ ದಕ್ಷಿಣಭಾರತದ ದೊಡ್ಡ ರಾಜಮನೆತನವಾಗಿ ಪರಿಣಮಿಸಿತು.

ಚಿತ್ರದುರ್ಗ ಜಿಲ್ಲೆಯಲ್ಲಿ ಮೂರನೆಯ ಗೋವಿಂದ, ಎರಡನೆಯ ಕೃಷ್ಣ, ಎರಡನೆಯ ಅಮೋಘವರ್ಷ, ಮೂರನೆಯ ಕೃಷ್ಣ ಹಾಗು ಎರಡನೆಯ ಕರ್ಕ ಮುಂತಾದ ದೊರೆಗಳಿಗೆ ಸಂಬಂಧಿಸಿದ ಶಾಸನಗಳು ದೊರೆತಿದ್ದು, ಅವರ ಆಳ್ವಿಕೆಯನ್ನು ಸಮರ್ಥಿಸುತ್ತವೆ. ಈ ಅರಸರುಗಳ ಆಳ್ವಿಕೆಯ ಅವಧಿಯಲ್ಲಿ ಅವರ ಮೂಲಖಾಖೆಯ ಜೊತೆಗೆ ಉಪಶಾಖೆಗಳು ಸಹ ಚಿತ್ರದುರ್ಗ ಜಿಲ್ಲೆಯಲ್ಲಿ ಆಳ್ವಿಕೆ ನಡೆಸಿದ್ದವೆಂದು ಶಾಸನಗಳಿಂದ ತಿಳಿದುಬರುತ್ತದೆ. ಕ್ರಿ.ಶ.೯೩೭ರ ಚಿತ್ರದುರ್ಗ ಶಾಸನ ರಟ್ಟಭೂಪರ ವಂಶಾವಳಿಯನ್ನು (ಅಜನಿಂದ ದಂತಿಗನವರೆಗೆ) ಹೆಸರಿಸುತ್ತದೆ.[೧೦೬]

ರಾಷ್ಟ್ರಕೂಟರು ಆಳ್ವಿಕೆಗಷ್ಟೇ ಅಲ್ಲ ಕಲೆ ಮತ್ತು ವಾಸ್ತುಶಿಲ್ಪದ ಬಗ್ಗೆಯೂ ಆಸಕ್ತಿ ವಹಿಸಿದ್ದುದರ ಬಗ್ಗೆ ತಿಳಿದುಬರುತ್ತದೆ. ಕೆಲವು ದೇವಾಲಯಗಳು, ಬಸದಿಗಳು ಹಾಗು ಮಠಗಳಿಗೆ ನೀಡಿದ ದಾನದ ಬಗ್ಗೆ ತಿಳಿಸುವ ಶಾಸನಗಳು ಜಿಲ್ಲೆಯಲ್ಲಿ ದೊರೆತಿವೆ. ಕ್ರಿ.ಶ. ೮೧೫ರ ಕದಂಬ ಶಾಸನ ಸಿಂಹಪೋತನ ಮಗ ಚಾರುಪನ್ನೇರ, ಮತ್ತು ಅವನ ಮಗ ಪಲ್ಲವಮಲ್ಲರು ಮೂರನೆಯ ಗೋವಿಂದನ ಸಾಮಂತರಾಗಿ ನೊಳಂಬಾಳಿಗೆ ಮತ್ತು ನೀರ್ಗುಂದ ನಾಡನ್ನು ಆಳುತ್ತಿದ್ದಾಗ, ಅವನ ರಾಣಿಯರು ಶಿವಾಲಯಕ್ಕೆ ನೀಡಿದ ದತ್ತಿಯ ಬಗ್ಗೆ ತಿಳಿಸುತ್ತದೆ.[೧೦೭] ಇಸಾಮುದ್ರದ ಭೋಗೇಶ್ವರ ದೇವಾಲಯ, ಅಲ್ಲಿನ ಮಠವನ್ನು ವಿದ್ಯಾರ್ಥಿಗಳಿಗೆ, ಗುರುಗಳಾದ ಬಾಳಚಂದ್ರಭಟ್ಟಾರಕರಿಗೆ ದತ್ತಿಬಿಟ್ಟ ವಿಷಯ ಎರಡನೆಯ ಅಮೋಘವರ್ಷನ ಶಾಸನದಿಂದ ತಿಳಿದುಬರುತ್ತದೆ.[೧೦೮] ಕ್ರಿ.ಶ.೯೧೭ರ ಶಾಸನದಲ್ಲಿ ಅಕಾಲವರ್ಷನ ಕಾಲದಲ್ಲಿ ಸಾಮಂತನಾಗಿದ್ದ ಸಿಡಿಲಂಕರಾಮನು ಮಾಡಿಸಿದ ಸಿಡಿಲೇಶ್ವರ ದೇವಾಲಯಕ್ಕೆ ಅಂಕಬ್ಬದ ಭೂಮಿಯನ್ನು ದೇವಭೋಗವಾಗಿ ದಾನ ಮಾಡಿದುದರ ಬಗ್ಗೆ ಉಲ್ಲೇಖವಿದೆ.[೧೦೯] ಬೇವಿನಹಳ್ಳಿಯ ಶಾಸನದಿಂದ ಅಂದಿನ ತೆರಿಗೆ ಪದ್ಧತಿಯ ಬಗ್ಗೆ, ಕಾಡಜ್ಜಿಯ ಶಾಸನ ಆಗಿನ ಕಾಲದ ವೇಶ್ಯಾವೃತ್ತಿಯ ವಿಷಯವನ್ನು ತಿಳಿಸುತ್ತದೆ.[೧೧೦] ಕೊಗ್ಗನೂರು, ಮಸಣಕೆರೆ, ಚಮರಗೋಳ, ಕೋಗಲೂರುಗಳಲ್ಲಿ ಇವರ ಶೈಲಿಯ ದೇವಾಲಯಗಳು ಕಂಡುಬಂದಿವೆ. ಹೀಗೆ ಜಿಲ್ಲೆಯಲ್ಲಿ ದೊರೆತ ಕೆಲವು ಶಾಸನಗಳಿಂದ ಅವರ ಕಾಲದ ಆಡಳಿತ, ಆರ್ಥಿಕ, ಸಾಮಾಜಿಕ ಮತ್ತು ವಾಸ್ತುಕಲೆಯ ಬಗ್ಗೆ ತಿಳಿದುಬರುತ್ತದೆ.

ಗಂಗರು, ಕಲ್ಯಾಣ ಚಾಲುಕ್ಯರು, ಚೋಳ ಹಾಗು ಹೊಯ್ಸಳರ ಮಹಾಸಾಮಂತರಾಗಿದ್ದ ನೊಳಂಬ ಅಥವಾ ನೊಳಂಬ ಪಲ್ಲವರು ಸುಮಾರು ಕ್ರಿ.ಶ. ಎಂಟನೆಯ ಶತಮಾನದಿಂದ ಹನ್ನೊಂದನೆಯ ಶತಮಾನದವರೆಗೆ ಆಳ್ವಿಕೆ ನಡೆಸಿದ ಕರ್ನಾಟಕದ ಪ್ರಮುಖ ರಾಜಮನೆತನಗಳಲ್ಲಿ ಒಂದು. ಕ್ರಿ.ಶ.೯೨೦ರ ಹೇಮಾವತಿ ಅಥವಾ ಹೆಂಜೇರುವಿನ ಸ್ತಂಭಶಾಸನದಲ್ಲಿ ಇವರ ವಂಶವೃಕ್ಷವಿದೆ.[೧೧೧] ಇದರಲ್ಲಿರುವ ನೊಳಂಬರ ವಂಶಾವಳಿಯು ಅತ್ಯಂತ ಪ್ರಾಚೀನವೆಂದು ತಿಳಿಯಲಾಗಿದೆ. ಆದರೆ ಚಿತ್ರದುರ್ಗ ಜಿಲ್ಲೆಯ ಮಹದೇವಪುರ ಗ್ರಾಮದ ಈಶ್ವರ ದೇವಾಲಯದ ಜೀರ್ಣೋದ್ಧಾರ ಸಮಯದಲ್ಲಿ ದೊರೆತ ತಾಮ್ರಶಾಸನ ಹೇಮಾವತಿಯ ಶಾಸನದಲ್ಲಿ ಹೇಳಿರುವುದಕ್ಕಿಂತ ಸ್ವಲ್ಪ ಭಿನ್ನವಾಗಿ ನೊಳಂಬರ ಪ್ರಾರಂಭಿಕ ಅರಸರ ಬಗ್ಗೆ ಬೆಳಕು ಚೆಲ್ಲುತ್ತದೆ.

ನೊಳಂಬರು ಪ್ರಾರಂಭದಲ್ಲಿ ಹೆಂಜೇರುವನ್ನು ರಾಜಧಾನಿಯನ್ನಾಗಿಸಿಕೊಂಡು ಆಳ್ವಿಕೆ ಮಾಡಿ, ನಂತರ ಬಳ್ಳಾರಿ ಜಿಲ್ಲೆಯ ಕಂಪ್ಲಿಗೆ ವರ್ಗಾಯಿಸಿದರು. ಇವರು ಚಿತ್ರದುರ್ಗ, ದಾವಣಗೆರೆ, ತುಮಕೂರು ಮತ್ತು ಬಳ್ಳಾರಿ ಜಿಲ್ಲೆಗಳ ಪ್ರದೇಶಗಳ ಮೇಲೆ ಆಡಳಿತವನ್ನು

ಆರಂಭಿಸಿದರು.[೧೧೨] ಅವರು ಆಳ್ವಿಕೆ ನಡೆಸಿದ ಪ್ರದೇಶವನ್ನು 'ನೊಳಂಬವಾಡಿ ಮೂವತ್ತೆರಡು ಸಾವಿರ' ಎಂದು ಕರೆಯಲಾಯಿತು.[೧೧೩] ಚಿತ್ರದುರ್ಗ ಜಿಲ್ಲೆಯಲ್ಲಿ ತುರುವನೂರು, ಅಣಜಿ, ಹಿರೇಮಧುರೆ, ಚಿಕ್ಕಮಧುರೆ, ದೊಡ್ಡಉಳ್ಳಾರ್ತಿ, ಗಂಜಿಗಟ್ಟೆ, ಧರ್ಮಪುರ, ಸಿದ್ದಾಪುರ, ಐಮಂಗಲ, ಬಾಗೇನಾಳು, ಮೊಳಕಾಲ್ಮೂರು, ಹೇಮಾವತಿ ಮುಂತಾದವು ನೊಳಂಬರ ಶಾಸನಗಳನ್ನು ಹೊಂದಿದ ಗ್ರಾಮಗಳಾಗಿದ್ದು, ಅಮ್ಮವಳ್ಳಿ, ಮುದರಿಕಲ್ಲು, ನೀರ್ಗುಂದನಾಡು ನೊಳಂಬರಿಗೆ ಆಡಳಿತ ವಿಭಾಗಗಳಾಗಿದ್ದು, ಪ್ರಾಂತ್ಯವನ್ನು ವಾಡಿ, ನಾಡು, ಹಳ್ಳಿ ಮುಂತಾದ ಭಾಗಗಳಾಗಿ ವಿಂಗಡಿಸಿದ್ದುದು ಶಾಸನಗಳಿಂದ ತಿಳಿದುಬರುತ್ತದೆ.[೧೧೪]

ಕ್ರಿ.ಶ.ಎಂಟನೆಯ ಶತಮಾನಕ್ಕೆ ಸೇರಿದ ತುರುವನೂರಿನ ಶಾಸನದಿಂದ ಇಲ್ಲಿನ ರಾಮಲಿಂಗದೇವಾಲಯ, ಶಿವಲಿಂಗ ಮತ್ತು ನಂದಿಯ ಶಿಲ್ಪಗಳು ಇವರ ಕಾಲದವುಗಳೆಂದು ತಿಳಿದುಬರುತ್ತದೆ.[೧೧೫] ಚಳ್ಳಕೆರೆ ತಾಲ್ಲೂಕಿನ ಚಿಕ್ಕಮಧುರೆ ಗ್ರಾಮದ ಮಲ್ಲೇಶ್ವರ ದೇವಾಲಯದಲ್ಲಿರುವ ಕ್ರಿ.ಶ.೮೧೫ರ ಕಾಲದ ಸ್ತಂಭಶಾಸನಗಳು ಸಿಂಹಪೋತನ ಮಗ ಪರಮೇಶ್ವರ ಪಲ್ಲವಾಧಿರಾಜ ಮತ್ತು ಅವನ ಮಗ ಪಲ್ಲವಮಲ್ಲ ರಾಷ್ಟ್ರಕೂಟರ ಸಾಮಂತರಾಗಿ ಆಡಳಿತ ನಡೆಸುತ್ತಿದ್ದುದರ ಬಗ್ಗೆ ತಿಳಿಸುತ್ತವೆ.[೧೧೬] ಹಿರಿಯೂರಿನ ಸಖರಿ ಶಾಸನ ಕ್ರಿ.ಶ.೮೯೦ರ ಕಾಲದ್ದಾಗಿದ್ದು, ನೊಳಂಬಪಲ್ಲವ ರಾಜಮಹೇಂದ್ರನ ಆಳ್ವಿಕೆಯಲ್ಲಿ ಚಿತ್ತಪ್ಪನ ಕೆರೆ ನಿರ್ಮಾಣವಾದುದರ ಬಗ್ಗೆ ತಿಳಿಸುತ್ತದೆ.[೧೧೭] ಚಿತ್ರದುರ್ಗ ತಾಲ್ಲೂಕು ಬಾಗೇನಾಳು ಗ್ರಾಮದಲ್ಲಿ ಹಾಳುಬಿದ್ದಿರುವ ಈಶ್ವರ ದೇವಾಲಯದ ಕ್ರಿ.ಶ.೯೧೮ರ ಕಾಲಮಾನದ ಶಾಸನ ಇವನ ಆಳ್ವಿಕೆಯ ಬಗ್ಗೆ ತಿಳಿಸುತ್ತದೆ.[೧೧೮] ಇವನ ಆಳ್ವಿಕೆಯ ಬಗ್ಗೆ ತಿಳಿಸುವ ಮತ್ತೊಂದು ಶಾಸನವೆಂದರೆ ಜಗಲೂರು ತಾಲ್ಲೂಕಿನ ಮುಷ್ಟೂರು ಗ್ರಾಮದ ಕಲ್ಲೇಶ್ವರ ದೇವಾಲಯದಲ್ಲಿರುವ ಕ್ರಿ.ಶ.೯೬೦ರ ಶಾಸನ. ಈ ಶಾಸನ ಜವಯ್ಯನ ಮಗ ನಾಥವರ್ಮನು ಕಲ್ಲೇಶ್ವರ ದೇವಾಲಯವನ್ನು ಜೀರ್ಣೋದ್ಧಾರ ಮಾಡಿದ್ದುದರ ಬಗ್ಗೆ ತಿಳಿಸುತ್ತದೆ.[೧೧೯]

ಚಿತ್ರದುರ್ಗ ತಾಲ್ಲೂಕು ಐಮಂಗಲದ ಕಂಬದದೇವನ ಗುಡಿಯಲ್ಲಿರುವ ಕ್ರಿ.ಶ.೯೭೫ರ ಕಾಲಮಾನದ ವೀರಗಲ್ಲು ಪೆರ್ಗ್ಗಡಿ ಗುಂಡಯ್ಯ ಅಯ್ಯಪ್ಪಮಂಗಲದ ಪೂರ್ವ ಮರ್ಯಾದೆಯನ್ನು ತಪ್ಪಿ ಅಕ್ರಮವನ್ನು ಮಾಡಿದಾಗ ವತ್ಸಗೋತ್ರದ ಏಚಯ್ಯ ಎಂಬುವವನು ಆತನ ತಪ್ಪಿಗಾಗಿ ತನ್ನನ್ನು ತಾನೇ ಇರಿದುಕೊಂಡು ಹುತಾತ್ಮನಾಗಿ, ಗುಂಡಯ್ಯನಿಗೆ ಕ್ಷಮೆ ದೊರೆಯುವಂತೆ ಮಾಡಿದನೆಂದು ತಿಳಿದುಬರುತ್ತದೆ. ಅಂದರೆ ನೊಳಂಬರಾಜರು ತಮ್ಮ ಸಾಮಂತ ಅಧಿಕಾರಿಗಳು ತಪ್ಪು ಮಾಡಿದಾಗ ಅಂತಹವರನ್ನು ಶಿಕ್ಷಿಸುವಂತೆ ಮತ್ತೊಬ್ಬ ಸಾಮಂತನಿಗೂ, ಮಂತ್ರಿಗೂ ನೀಡುತ್ತಿದ್ದ ಆಜ್ಞೆ ಬಗ್ಗೆ ತಿಳಿಸುತ್ತದೆ.[೧೨೦] ಈ ಶಾಸನದ ಆಧಾರದಿಂದ ಹತ್ತನೆಯ ಶತಮಾನದಿಂದಲೂ ಈ ಗ್ರಾಮ ಅಸ್ತಿತ್ವದಲ್ಲಿತ್ತೆಂದು ಹಾಗು ಅಯ್ಯಪ್ಪಮಂಗಲನಿಂದಲೇ

'ಐಮಂಗಲ' ಎಂಬ ಹೆಸರು ಬಂದಿರಬಹುದೆಂದು ತಿಳಿಯಲಾಗುತ್ತದೆ. ಈ ಗ್ರಾಮದ ಪೂರ್ವಕ್ಕೆ ಸುಮಾರು ನಾಲ್ಕು ಕಿ.ಮೀ. ದೂರದಲ್ಲಿ ನೊಣಬಿಪಟ್ಟಣವೆಂಬ ಬೇಚಾರಕ್ ಗ್ರಾಮವಿದ್ದು, ಇಲ್ಲಿ ಹಾಳುಬಿದ್ದಿರುವ ಅವಶೇಷಗಳನ್ನು ಕಾಣಬಹುದು.

ಕ್ರಿ.ಶ.೧೦೭೩ ರ ಚಿತ್ರದುರ್ಗದ ಹುಲಿಗೊಂದಿ ಸಿದ್ದೇಶ್ವರ ದೇವಾಲಯದ ಶಾಸನ,[೧೨೧] ಕ್ರಿ.ಶ.೧೦೭೭ರ ಜಟಿಂಗರಾಮೇಶ್ವರ ಬೆಟ್ಟದ ಶಾಸನಗಳು,[೧೨೨] ತ್ರೈಲೋಕ್ಯನೊಳಂಬ, ಪಲ್ಲವಪೆರ್ಮಾಡಿ, ಜಯಸಿಂಹದೇವ ನೀಡಿದ ದಾನದತ್ತಿಗಳ ಬಗ್ಗೆ ತಿಳಿಸುತ್ತವೆ. ಚಳ್ಳಕೆರೆಯ ಶ್ರೀ ರಾಮದೇವರ ದೇವಾಲಯದಲ್ಲಿನ ಗರುಡಗಂಬದ ಶಾಸನ ನೊಳಂಬರ ಆಳ್ವಿಕೆಯ ಬಗ್ಗೆ ತಿಳಿಸುತ್ತದೆ.[೧೨೩] ನೊಳಂಬರಾಜರಲ್ಲಿ ಒಬ್ಬನಾದ ಶ್ರೀನಂದಿ ಎನ್ನುವವನು ಹರಿಹರ ತಾಲ್ಲೂಕಿನ ವೃಷಭಾಪುರಿ ಯಲ್ಲಿ(ನಂದಿಗುಡಿ) ಮಲ್ಲಿಕಾರ್ಜುನ ದೇವಾಲಯವನ್ನು ನಿರ್ಮಿಸಿ, ತನ್ನ ಹೆಸರಿನಲ್ಲಿ ಬೃಹತ್ ನಂದಿಯನ್ನು ಸ್ಥಾಪಿಸಿದ್ದರಿಂದ ನಂದಿಗುಡಿ ಎಂದು ಹೆಸರಾಯಿತೆಂದು ತಿಳಿದುಬರುತ್ತದೆ.[೧೨೪]

ಕಲ್ಯಾಣವನ್ನು ರಾಜಧಾನಿಯನ್ನಾಗಿಸಿಕೊಂಡು ಕ್ರಿ.ಶ.ಹತ್ತನೆಯ ಶತಮಾನದಿಂದ ಹನ್ನೆರಡನೆಯ ಶತಮಾನದವರೆಗೆ ಆಳ್ವಿಕೆ ಮಾಡಿದ ಕಲ್ಯಾಣ ಚಾಲುಕ್ಯರು, ಕರ್ನಾಟಕದ ಇತಿಹಾಸದಲ್ಲಿ ಮಹತ್ವದ ಸ್ಥಾನ ಪಡೆದಿದ್ದಾರೆ. ಬಾದಾಮಿ ಚಾಲುಕ್ಯರ ಕಾಲದಿಂದಲೂ ಕಲಹಕ್ಕೆ ಎಡೆಮಾಡಿಕೊಟ್ಟಿದ್ದ 'ನೊಳಂಬವಾಡಿ-೩೨೦೦೦' ಪ್ರದೇಶದಿಂದ ಇವರ ಆಳ್ವಿಕೆ ಪ್ರಾರಂಭವಾಗಿರುವುದು ತಿಳಿದುಬರುತ್ತದೆ. ಈ ಪ್ರದೇಶವನ್ನು ಕಲ್ಯಾಣ ಚಾಲುಕ್ಯ ಅರಸ ಎರಡನೆಯ ಜಯಸಿಂಹನು ಕ್ರಿ.ಶ.೧೦೧೫ರಲ್ಲಿ ಚೋಳರ ರಾಜರಾಜಚೋಳನಿಂದ ವಶಪಡಿಸಿಕೊಂಡನೆಂದು ತಿಳಿಯಲಾಗಿದೆ.[೧೨೫]

ಚಿತ್ರದುರ್ಗ ಜಿಲ್ಲೆಯಲ್ಲಿ ಅನೇಕ ಶಾಸನಗಳು ದೊರೆತಿದ್ದು ಅವರ ಆಳ್ವಿಕೆಯನ್ನು ಸಮರ್ಥಿಸುತ್ತವೆ. ಚಿತ್ರದುರ್ಗ ತಾಲ್ಲೂಕಿನ ಬೇವಿನಹಳ್ಳಿ ಗ್ರಾಮದ ಕ್ರಿ.ಶ.೯೬೮ರ ಶಾಸನ,[೧೨೬] ವಿಕ್ರಮಾದಿತ್ಯನ ಆಡಳಿತದ ಬಗ್ಗೆ, ಚಳ್ಳಕೆರೆ ತಾಲ್ಲೂಕಿನ ಓಬಳಾಪುರದ ಶಾಸನ,[೧೨೭] ಜಯಸಿಂಹನ ಬಿರುದು ಹಾಗು ಆಡಳಿತದ ಬಗ್ಗೆ, ದಾವಣಗೆರೆ ತಾಲ್ಲೂಕಿನ ಹದಡಿ ಗ್ರಾಮದ ಶಾಸನ,[೧೨೮] ಕ್ರಿ.ಶ.೧೦೬೦ರ ಇಸಾಮುದ್ರದ ಶಾಸನಗಳು,[೧೨೯] ಮೊದಲನೆಯ ಸೋಮೇಶ್ವರನ ಆಡಳಿತ, ಕ್ರಿ.ಶ.೧೦೬೪ರ ಜಟಿಂಗರಾಮೇಶ್ವರದ ಶಾಸನ,[೧೩೦] ೧೦೬೭ರ ಭೀಮಸಮುದ್ರದ ಶಾಸನಗಳು ವಿಷ್ಣುವರ್ಧನನ ಆಳ್ವಿಕೆ, ಚಿತ್ರದುರ್ಗ ತಾಲ್ಲೂಕಿನ ಕ್ರಿ.ಶ. ೧೦೭೪ರ ಹುಲಿಗೊಂದಿಯ ಶಾಸನ,[೧೩೧] ಕ್ರಿ.ಶ. ೧೧೪೩ರ ಶಾಸನ,[೧೩೨] ಜಯಸಿಂಹನ ಚೋಳ ಮತ್ತು ಹೊಯ್ಸಳರೊಂದಿಗಿನ ಯುದ್ಧದ ವರ್ಣನೆ, ಹೊಳಲ್ಕೆರೆ[೧೩೩] ಹಾಗು ಚಳ್ಳಕೆರೆ ತಾಲ್ಲೂಕಿನ ಮಹದೇವಪುರದ ಶಾಸನಗಳು[೧೩೪] ತ್ರಿಭುವನಮಲ್ಲದೇವನ ಬಗ್ಗೆ, ದಾವಣಗೆರೆ ತಾಲ್ಲೂಕಿನ ಬೇತೂರು ಶಾಸನ[೧೩೫] ಆರನೆಯ ವಿಕ್ರಮಾದಿತ್ಯನ ಆಳ್ವಿಕೆಯ ಬಗ್ಗೆ ತಿಳಿಸುವ ಪ್ರಮುಖ ಶಾಸನಗಳಾಗಿವೆ.

ಚಿತ್ರದುರ್ಗ ಜಿಲ್ಲೆಯಲ್ಲಿ ಪೂರ್ಣಪ್ರಮಾಣದ ದೇವಾಲಯಗಳ ನಿರ್ಮಾಣ ಪ್ರಾರಂಭವಾಗುವುದು ಕಲ್ಯಾಣ ಚಾಲುಕ್ಯರ ಕಾಲದಲ್ಲಿಯೇ ಎನ್ನಬಹುದು. ಜಗಲೂರು ತಾಲ್ಲೂಕಿನ ಬಿಳಿಚೋಡಿನ ಈಶ್ವರ ದೇವಾಲಯ, ಚದುರಗೋಳದ ಕಲ್ಲೇಶ್ವರ, ಹರಿಹರ ತಾಲ್ಲೂಕಿನ ಸಾರಥಿಯ ಬಸವೇಶ್ವರ, ದೇವರಬೆಳಕೆರೆಯ ಕಲ್ಲೇಶ್ವರ, ಚಿಕ್ಕಬಿದರೆಯ ಕಲ್ಲೇಶ್ವರ, ಜಿಗಳಿಯ ರಂಗನಾಥ, ಚಿತ್ರದುರ್ಗ ಗಾರೆಹಟ್ಟಿಯ ಮಹೇಶ್ವರ, ಚೋಳೇಶ್ವರ, ಎಲವಟ್ಟಿಯ ಸೋಮೇಶ್ವರ, ದಾವಣಗೆರೆ ತಾಲ್ಲೂಕಿನ ಆವರಗೋಳದ ಈಶ್ವರ, ಕಂದಗಲ್ಲಿನ ಕಲ್ಲೇಶ್ವರ, ನಲ್ಕುಂದದ ಈಶ್ವರ, ವಡೇರಹಳ್ಳಿಯ ಕಲ್ಲೇಶ್ವರ, ಶ್ಯಾಗಲಿಯ ಮಲ್ಲಿಕಾರ್ಜುನಸ್ವಾಮಿ, ಹೂವಿನಮಡುವಿನ ಕಲ್ಲೇಶ್ವರ, ಹೊನ್ನೂರಿನ ಈಶ್ವರ, ಬಾಗಳಿಯ ಕಲ್ಲೇಶ್ವರ, ನೀಲಗುಂದದ ಭೀಮೇಶ್ವರ ಮತ್ತು ಲಕ್ಷ್ಮೀನಾರಾಯಣ, ಹೊಸದುರ್ಗ ತಾಲ್ಲೂಕಿನ ನೀರ್ಗುಂದದ ಮಲ್ಲೇಶ್ವರ, ಪರಶುರಾಂಪುರದ ಶಿವಾಲಯ, ಹೊಳಲ್ಕೆರೆಯ ಶಿವಾಲಯ, ಗೊಡನಾಳಿನ ಕಲ್ಲೇಶ್ವರ, ಕೋಗುಂಡಿಯ ಬಾಚೇಶ್ವರ, ಹೊಳಲ್ಕೆರೆಯ ಕುಂಬೇಶ್ವರ, ಕಾಕಂಬಾಳಿನ ಬಸದಿ, ಚಂದ್ರವಳ್ಳಿಯ ಪಂಚಲಿಂಗೇಶ್ವರ ಮುಂತಾದ ದೇವಾಲಯಗಳು ಇವರ ಕಾಲದ ನಿರ್ಮಾಣಗಳೆಂದು ತಿಳಿದುಬರುತ್ತದೆ.[೧೩೬]

ಕಲ್ಯಾಣ ಚಾಲುಕ್ಯರು ವಾಸ್ತುಕಲೆಯಂತೆ ಮೂರ್ತಿಶಿಲ್ಪಕ್ಕೂ ಪ್ರೋತ್ಸಾಹ ನೀಡಿದ್ದಾರೆ. ಜಗಲೂರು ತಾಲ್ಲೂಕಿನ ಅಸಗೋಡಿನ ಶಂಭುಲಿಂಗೇಶ್ವರ ದೇವಾಲಯದ ವೀರಭದ್ರಶಿಲ್ಪ, ಗುತ್ತಿದುರ್ಗದ ಭೈರವೇಶ್ವರ ದೇವಾಲಯದ ಭೈರವ ಶಿಲ್ಪ, ಕಲ್ಲೆದೇವರಪುರದ ತ್ರಿಕೂಟೇಶ್ವರ ದೇವಾಲಯದ ಕಾರ್ತಿಕೇಯ ಶಿಲ್ಪ, ಚದುರುಗೋಳದ ಕಲ್ಲೇಶ್ವರ ದೇವಾಲಯದ ಅನಂತಶಯವಿಷ್ಣುವಿನ ಶಿಲ್ಪ, ಬಿಳಿಚೋಡುವಿನ ಈಶ್ವರ ದೇವಾಲಯದ ಜನಾರ್ಧನ ಶಿಲ್ಪ, ಚನ್ನಕೇಶವ ದೇವಾಲಯದ ಕೇಶವ ಶಿಲ್ಪ, ದಾವಣಗೆರೆ ತಾಲ್ಲೂಕಿನ ಮಾಯಕೊಂಡದ ಓಬಳದೇವರ ಗುಡಿಯ ಜನಾರ್ಧನ ಶಿಲ್ಪ, ಬೇತೂರಿನ ಕಾಳಿದೇವಾಲಯದ ಸರಸ್ವತಿ ಹಾಗು ಮಹಿಷಾಮರ್ಧಿನಿ ಶಿಲ್ಪಗಳು, ಗೊಗ್ಗನೂರಿನ ಈಶ್ವರ ದೇವಾಲಯದ ಮಹಿಷಾಮರ್ಧಿನಿ ಶಿಲ್ಪ, ಹರಿಹರ ತಾಲ್ಲೂಕಿನ ದೇವರಬೆಳೆಕೆರೆಯ ಕಲ್ಲೇಶ್ವರ ದೇವಾಲಯದ ಭೈರವಶಿಲ್ಪ, ಚಿಕ್ಕಬಿದಿರೆಯ ಕಲ್ಲೇಶ್ವರ ದೇವಾಲಯದ ಗಣಪತಿ ಶಿಲ್ಪ, ನಂದಿಗುಡಿಯ ಬಸವೇಶ್ವರ ದೇವಾಲಯದ ಹರಿಹರ ಶಿಲ್ಪ, ಜಿಗಳಿಯ ರಂಗನಾಥ ದೇವಾಲಯದ ಕೇಶವ ಶಿಲ್ಪ ಮುಂತಾದವು ಇವರ ಕಾಲದ ಶಿಲ್ಪಗಳಿಗೆ ಉದಾಹರಣೆಗಳಾಗಿವೆ.

ಚಿತ್ರದುರ್ಗದ ಗಾರೆಹಟ್ಟಿಯ ಚೋಳೇಶ್ವರ ದೇವಾಲಯದ ಕ್ರಿ.ಶ.೧೧೨೪ರ ಶಾಸನ ಚಾಲುಕ್ಯ ವಿಕ್ರಮಾದಿತ್ಯನ ಮಹಾಸಾಮಂತ ಉದಯಾದಿತ್ಯನು ಗಾರೆಹಟ್ಟಿಯಲ್ಲಿ ಎತ್ತರವಾದ ಕಲ್ಲಿನ ದೇಗುಲವನ್ನು ಕಟ್ಟಿಸಿ, ಚೋಳೇಶ್ವರ ಲಿಂಗವನ್ನು ಪ್ರತಿಷ್ಠಾಪಿಸಿ ರುದ್ರಶಕ್ತಿ ಪಂಡಿತರಿಗೆ ದೇವಾಲಯದ ಪೂಜಾ ಕಾರ್ಯಕ್ಕಾಗಿ ಎರಡು ಗ್ರಾಮಗಳನ್ನು ಉಂಬಳಿ ಹಾಕಿಕೊಟ್ಟ ವಿಚಾರ

ತಿಳಿಸುತ್ತದೆ.[೧೩೭] ಹೀಗೆ ಕಲ್ಯಾಣದ ಚಾಲುಕ್ಯರು ಚಿತ್ರದುರ್ಗ ಪ್ರದೇಶದಲ್ಲಿ ಕಲೆ ಮತ್ತು ವಾಸ್ತುಶಿಲ್ಪ ಕ್ಷೇತ್ರಗಳಿಗೆ ತಮ್ಮದೇ ಆದ ಕೊಡುಗೆಗಳನ್ನು ನೀಡಿದ್ದಾರೆ.

ಕಲ್ಯಾಣದ ಚಾಲುಕ್ಯರ ನಂತರ ಅಧಿಕಾರಕ್ಕೆ ಬಂದ ಹೊಯ್ಸಳರು ಕರ್ನಾಟಕದ ಇತಿಹಾಸದಲ್ಲಷ್ಟೇ ಅಲ್ಲದೇ, ದಕ್ಷಿಣಭಾರತದ ಇತಿಹಾಸದಲ್ಲೂ ಶ್ರೇಷ್ಠ ಸ್ಥಾನವನ್ನು ಪಡೆದುಕೊಂಡಿದ್ದಾರೆ. ಕ್ರಿ.ಶ.ಹನ್ನೊಂದರಿಂದ ಹದಿನಾಲ್ಕನೆಯ ಶತಮಾನದ (ಕ್ರಿ.ಶ.೧೧೧೬–೧೩೪೬) ಮಧ್ಯಭಾಗದವರೆಗೆ ಸುಧೀರ್ಘವಾದ ಆಳ್ವಿಕೆ ನಡೆಸಿದರು. ಚಿತ್ರದುರ್ಗ ಜಿಲ್ಲೆಯಲ್ಲಿ ಇವರ ಆಳ್ವಿಕೆಯ ಕಾಲ ಕ್ರಿ.ಶ.ಹನ್ನೆರಡರಿಂದ ಹದಿಮೂರನೆಯ ಶತಮಾನವೆಂದು ಗುರುತಿಸಲಾಗಿದೆ. ಈ ಅವಧಿಯಲ್ಲಿ ಎರಡನೆಯ ಬಲ್ಲಾಳನಿಂದ, ಮೂರನೆಯ ಬಲ್ಲಾಳನ ಕಾಲದವರೆಗಿನ ಸುಮಾರು ೬೫ಕ್ಕೂ ಹೆಚ್ಚು ಶಾಸನಗಳು ಜಿಲ್ಲೆಯಲ್ಲಿ ದೊರಕಿದ್ದು, ಅವರ ಆಳ್ವಿಕೆಯನ್ನು ಸಮರ್ಥಿಸುತ್ತವೆ. ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ, ಸಾಹಿತ್ಯ ಹಾಗು ಶಿಲ್ಪಕಲೆಗಳ ದೃಷ್ಟಿಯಿಂದ ಹೊಯ್ಸಳರ ಆಳ್ವಿಕೆಯ ಅವಧಿ ಅತ್ಯಂತ ಪ್ರಭಾವಯುತವಾದುದು. ಶಿಲ್ಪಕಲಾ ಶೈಲಿ ಇವರ ಕಾಲದಲ್ಲಿ ತನ್ನದೇ ಆದ ರೂಪುಪಡೆದು 'ಜಾಗತಿಕ ಕಲಾಕ್ಷೇತ್ರಕ್ಕೆ ವಿಶಿಷ್ಟವಾದ ಕೊಡುಗೆಯನ್ನಿತ್ತಿತು.

ಚಿತ್ರದುರ್ಗ ಬೆಟ್ಟದೊಳಗಿನ ಇವರ ಕಾಲದ ಪ್ರಮುಖ ದೇವಾಲಯಗಳೆಂದರೆ ಗೋಪಾಲಸ್ವಾಮಿ, ಹಿಡಿಂಬೇಶ್ವರ, ಪಲ್ಗುಣೇಶ್ವರ, ಸಂಪಿಗೆಸಿದ್ದೇಶ್ವರ, ಹೊಳಲ್ಕೆರೆ ತಾಲ್ಲೂಕಿನ ನೀರ್ಗುಂದದ ಸಿದ್ದೇಶ್ವರ, ರಾಮೇಶ್ವರ, ಚನ್ನಕೇಶವ, ಆನೆಕೊಂಡದ ಮೊದಲನೆ ನರಸಿಂಹನ ಕಾಲದ (ಕ್ರಿ.ಶ.೧೧೬೦) ಈಶ್ವರ ದೇವಾಲಯ, ಬಾಡದ ಕೋಡಿಬಸವಣ್ಣ, ಬ್ರಹ್ಮಗಿರಿಯ ತ್ರಿಶಂಕೇಶ್ವರ, ಹೆಗ್ಗೆರೆಯ ಹಲಗೇಶ್ವರ ಮತ್ತು ಕಲ್ಲೇಶ್ವರ, ಹರಿಹರದ ಹರಿಹರೇಶ್ವರ ದೇವಾಲಯಗಳು.

ಹೊಯ್ಸಳರು ಕಲ್ಯಾಣ ಚಾಲುಕ್ಯರ ಸಾಮಂತರಾಗಿದ್ದಾಗಲೇ ನೊಳಂಬವಾಡಿಯ ಅಂದರೆ ಚಿತ್ರದುರ್ಗ–ದಾವಣಗೆರೆ ಪ್ರದೇಶಗಳು ಇವರ ಗಮನಸೆಳೆದಿದ್ದವು. ಎರೆಯಂಗನ ಮಗ ಒಂದನೆಯ ಬಲ್ಲಾಳ ತನ್ನ ಸಹೋದರ ವಿಷ್ಣುವರ್ಧನನೊಡನೆ ಸೇರಿ ಉಚ್ಚಂಗಿಪಾಂಡ್ಯರ ಮೇಲೆ ಯುದ್ಧ ಕೈಗೊಂಡು ಅಪಾರ ಸಂಪತ್ತನ್ನು ಕೊಳ್ಳೆಹೊಡೆದನೆಂದು ತಿಳಿದುಬಂದಿದೆ. ನಂತರ ಅಧಿಕಾರಕ್ಕೆ ಬಂದ ವಿಷ್ಣುವರ್ಧನನು ಕ್ರಿ.ಶ.೧೧೧೭ರಲ್ಲಿ ಹೊಳಲ್ಕೆರೆ ತಾಲ್ಲೂಕಿನ ದುಮ್ಮಿ ಎಂಬಲ್ಲಿ ನಡೆದ ಯುದ್ಧದಲ್ಲಿ ಉಚ್ಚಂಗಿಪಾಂಡ್ಯರನ್ನು ಸೋಲಿಸಿ, 'ನೊಳಂಬವಾಡಿಗೊಂಡ' ಎಂಬ ಬಿರುದಿಗೆ ಪಾತ್ರನಾದನು.[೧೩೮]

ಚಿತ್ರದುರ್ಗ ಜಿಲ್ಲೆಯಲ್ಲಿ ದೊರೆತಿರುವ ಶಾಸನಗಳು ಹೊಯ್ಸಳರ ಆಳ್ವಿಕೆಯನ್ನು ಸಮರ್ಥಿಸುವುದಲ್ಲದೇ, ಸಾಮಾಜಿಕ, ಆರ್ಥಿಕ, ಧಾರ್ಮಿಕ, ಸಾಹಿತ್ಯ, ಸಾಂಸ್ಕೃತಿಕ, ಕಲೆ

ಮತ್ತು ವಾಸ್ತುಶಿಲ್ಪ ಕ್ಷೇತ್ರಗಳಿಗೆ ನೀಡಿದ ಕೊಡುಗೆಯನ್ನು ತಿಳಿಸುತ್ತವೆ. ಇವರು ಅನೇಕ ಕೆರೆ, ಕಾಲುವೆ, ದೇವಾಲಯಗಳು ಮತ್ತು ಅಗ್ರಹಾರಗಳನ್ನು ನಿರ್ಮಾಣ ಮಾಡಿರುವುದಲ್ಲದೇ, ಅನೇಕ ದೇವಾಲಯಗಳಿಗೆ ದಾನದತ್ತಿಗಳನ್ನು ನೀಡಿ ಜೀರ್ಣೋದ್ಧಾರ ಕಾರ್ಯಗಳನ್ನೂ ಕೈಗೊಂಡಿದ್ದಾರೆಂಬುದು ಅವರ ಶಾಸನಗಳಿಂದ ತಿಳಿದುಬರುತ್ತದೆ.

ಹೊಯ್ಸಳ ಸಾಮ್ರಾಜ್ಯದ ನಾಡಪ್ರಭು ಅಣ್ಣಮರಸನು ಹೊಳಲ್ಕರೆ ನಾಡನ್ನು ಪಾಲಿಸುತ್ತಿದ್ದು, ಸ್ವಯಂಭು ಕಲಿದೇವಾಲಯಕ್ಕೆ ಕೋಡಿಹಳ್ಳಿಯನ್ನು ದತ್ತಿಬಿಟ್ಟ ವಿಚಾರ ತಿಳಿದುಬರುತ್ತದೆ. ಕ್ರಿ.ಶ.೧೨೧೮ರ ಕುಂದವಾಡ ಗ್ರಾಮದ ಶಾಸನ ಹೊಯ್ಸಳರ ಕಾಲದ ಆರ್ಥಿಕ ಜೀವನಕ್ಕೆ ಹಿಡಿದ ಕೈಗನ್ನಡಿಯಂತಿದೆ. ಅಣ್ಣಮರಸನ ಪತ್ನಿ ಅಭಿನವ ಕೇತಲದೇವಿಯು ಕುಂದವಾಡದಲ್ಲಿ ಪ್ರತಿ ಬುಧವಾರ ಸಂತೆ ನಡೆಯುವಂತೆ ಅಲ್ಲಿನ ಗೌಡರಿಗೆ ಆದೇಶಿಸಿ, ಅದರಿಂದ ಬರುವ ಆದಾಯವನ್ನು ಸೋಮನಾಥ ದೇವರಿಗೆ ದತ್ತಿ ಬಿಟ್ಟಿದ್ದನ್ನು ತಿಳಿಸುತ್ತದೆ.[೧೩೯]

ವಿಷ್ಣುವರ್ಧನನ ನಂತರ ಎರಡನೆಯ ಬಲ್ಲಾಳ ಅಧಿಕಾರಕ್ಕೆ ಬಂದು, ಬೆಮ್ಮತ್ತೂರನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ಮಾಡಿದನು. ಜಿಲ್ಲೆಯಲ್ಲಿ ಇವನ ಆಳ್ವಿಕೆಗೆ ಸಂಬಂಧಿಸಿದಂತೆ ಸುಮಾರು ಹತ್ತಕ್ಕೂ ಹೆಚ್ಚು ಶಾಸನಗಳು ದೊರೆತಿದ್ದು, ಬೇಬೆಯದಣ್ಣಾಯಕ[೧೪೦] ಹಾಗು ಸೋಮದಣ್ಣಾಯಕರು[೧೪೧] ಅವನ ಆಪ್ತಮಂತ್ರಿಗಳಾಗಿದ್ದರೆಂದು ತಿಳಿದುಬರುತ್ತದೆ. ಎರಡನೆಯ ಬಲ್ಲಾಳನ ನಂತರ ಅವನ ಮಗ ಎರಡನೆಯ ನರಸಿಂಹ ಕ್ರಿ.ಶ.೧೨೨೦ ರಿಂದ ೧೨೩೫ ರವರೆಗೆ ಆಳ್ವಿಕೆ ನಡೆಸಿದ. ಇವನ ಆಳ್ವಿಕೆಗೆ ಸಂಬಂಧಿಸಿದಂತೆ ಸುಮಾರು ಆರೇಳು ಶಾಸನಗಳು ದೊರೆತಿದ್ದು, ದಾವಣಗೆರೆ, ಚಿತ್ರದುರ್ಗ ಹಾಗು ಹೊಳಲ್ಕರೆ ತಾಲ್ಲೂಕುಗಳು ಇವನ ಆಳ್ವಿಕೆಗೆ ಒಳಪಟ್ಟಿದ್ದವೆಂದು ತಿಳಿದುಬರುತ್ತದೆ. ಹರಿಹರದ ಶಾಸನವು[೧೪೨] ಹರಿಹರೇಶ್ವರ ದೇವಾಲಯ ನಿರ್ಮಾಣದ ವೃತ್ತಾಂತ, ಹೊಯ್ಸಳರ ಮೂಲ, ವಂಶಾವಳಿ, ಹರಿ–ಹರ ಇವರೀರ್ವರ ನಡುವೆ ಯಾವುದೇ ಭೇದವಿಲ್ಲವೆನ್ನುವುದನ್ನು ತೋರಿಸಲು ಹರಿಹರನು ಒಂದಾಗಿ ರೂಪುತಳೆದ ವಿವರಣೆಗಳ ಬಗ್ಗೆ ತಿಳಿಸುತ್ತದೆ. ಅಲ್ಲದೆ ಎರಡನೆಯ ನರಸಿಂಹನ ಪ್ರಧಾನಮಂತ್ರಿ ಪೋಲಾಳ್ವದೇವನ ವರ್ಣನೆ ಹಾಗು ಇವನು ಹರಿಹರೇಶ್ವರ ದೇವಾಲಯವನ್ನು ಪೂರ್ಣಗೊಳಿಸಲು ದೇವಾಲಯದ ಮೇಲೆ ೧೧೫ ಸುವರ್ಣ ಕಳಸಗಳನ್ನು ಇಡಿಸಿದ ಬಗ್ಗೆ, ದೇವಾಲಯವನ್ನು ಪೂರ್ಣಗೊಳಿಸಿದ ನಂತರ ೧೦೪ ಬ್ರಾಹ್ಮಣರನ್ನೊಳಗೊಂಡ ಅಗ್ರಹಾರಕ್ಕೆ ಭಾನುವಳ್ಳಿ ಗ್ರಾಮವನ್ನು ದತ್ತಿಬಿಟ್ಟು ಲಕ್ಷ್ಮೀನಾರಾಯಣ ದೇವಾಲಯವನ್ನು ಕಟ್ಟಿಸಿದ ಬಗ್ಗೆ, ಹಾಗು ಷಟ್ಪದಿಯಲ್ಲಿ ಹರಿಚರಿತವನ್ನು ರಚಿಸಿದನೆಂದು ತಿಳಿದುಬರುತ್ತದೆ. ಹೀಗೆ ಹೊಯ್ಸಳ

ಪ್ರಭುಗಳಂತೆಯೇ ಅವರ ಮಂತ್ರಿಗಳು ಮತ್ತು ದಂಡಾಧಿಕಾರಿಗಳು ವಿದ್ಯಾವಿನಯಶೀಲರೂ, ದೈವಶಕ್ತಿ ಸಂಪನ್ನರೂ ಆಗಿದ್ದರೆಂಬುದಕ್ಕೆ ಈ ಶಾಸನ ಉತ್ತಮ ಉದಾಹರಣೆಯೆನ್ನಬಹುದು.

ಎರಡನೆಯ ನರಸಿಂಹನ ಮರಣದ ನಂತರ ಅವನ ಮಗ ಸೋಮೇಶ್ವರ ಅಧಿಕಾರಕ್ಕೆ ಬಂದು ಕ್ರಿ.ಶ.೧೨೩೬ ರಿಂದ ೧೨೫೬ ರವರೆಗೆ ಆಳ್ವಿಕೆ ನಡೆಸಿದನು. ಜಗಲೂರು ತಾಲ್ಲೂಕಿನ ಕಲ್ಲೇದೇವರಪುರದ ಕಲ್ಲೇಶ್ವರ ದೇವಾಲಯದ ಬಳಿಯ ಶಾಸನ[೧೪೩] ಇವನಿಗೆ ಸಂಬಂಧಿಸಿದ ಜಿಲ್ಲೆಯ ಮೊದಲ ಶಾಸನವಾಗಿದ್ದು, ಅವನ ಆಳ್ವಿಕೆ ಹಾಗು ನಾರಸಿಂಹನಾಯಕ, ಮಲ್ಲಯ್ಯನಾಯಕರು ಬೆಮ್ಮತ್ತನೂರು ಸೀಮೆಯನ್ನು ಆಳುತ್ತಿದ್ದು, ಬೆಮ್ಮತ್ತನೂರು ದುರ್ಗದ ಸ್ವಯಂಭುವನೇಶ್ವರಿ ದೇವಿಗೆ ದತ್ತಿಬಿಟ್ಟ ಬಗ್ಗೆ ತಿಳಿಸುತ್ತದೆ.

ಕ್ರಿ.ಶ.೧೨೫೬ರಲ್ಲಿ ಆಡಳಿತದ ಹೊಣೆ ಹೊತ್ತ ಮೂರನೆಯ ನರಸಿಂಹನ ಆಳ್ವಿಕೆಗೆ ದಾವಣಗೆರೆ, ಹೊಳಲ್ಕೆರೆ, ಹಿರಿಯೂರು, ಚಿತ್ರದುರ್ಗ ಪ್ರಾಂತ್ಯಗಳು ಸೇರಿದ್ದು, ಈ ಪ್ರದೇಶಗಳಲ್ಲಿ ಸುಮಾರು ಒಂಭತ್ತು ಶಾಸನಗಳು ದೊರೆತಿವೆ. ಇವನ ಸೋದರ ಸಂಬಂಧಿ ಸೋಮೇಯದಣ್ಣಾಯಕ ಬರೆಸಿರುವ ಹರಿಹರ ದೇವಾಲಯದ ಮಹಾದ್ವಾರದ ಬಳಿಯ ಕ್ರಿ.ಶ.೧೨೬೮ರ ಶಾಸನ,[೧೪೪] ಸೋಮೇಯದಣ್ಣಾಯಕ ಹರಿಹರದ ದೇವಾಲಯದ ಪೂರ್ವದಿಕ್ಕಿನಲ್ಲಿರುವ ಐದು ಅಂತಸ್ತುಗಳ ದ್ವಾರಮಂಟಪವನ್ನು ನಿರ್ಮಿಸಿ, ಗೋಪುರದ ಮೇಲೆ ಐದು ಕಳಸಗಳನ್ನು ಪ್ರತಿಷ್ಠಾಪಿಸಿದನೆಂದು ಹಾಗು ಪ್ರಸನ್ನ ಸೋಮನಾಥಪುರವೆಂಬ ಅಗ್ರಹಾರವನ್ನು ಸ್ಥಾಪಿಸಿ, ಅಲ್ಲಿ ಶಿವ ಮತ್ತು ವಿಷ್ಣು ದೇವಾಲಯಗಳನ್ನು ಕಟ್ಟಿಸಿದನೆಂದು ತಿಳಿಸುತ್ತದೆ. ಹರಿಹರ ದೇವಾಲಯದ ಉತ್ತರ ಭಾಗದಲ್ಲಿರುವ ವೀರಗಲ್ಲು[೧೪೫] ಜಿಲ್ಲೆಯಲ್ಲಿ ದೊರೆತ ಮೂರನೆಯ ನರಸಿಂಹನ ಕಾಲದ ಪ್ರಮುಖ ಹಾಗು ಹೊಯ್ಸಳರ ಶಾಸನಗಳಲ್ಲಿ ಕೊನೆಯದಾಗಿದ್ದು, ಐತಿಹಾಸಿಕ ದೃಷ್ಟಿಯಿಂದ ಮಹತ್ವದ್ದಾಗಿದೆ.

ಇದು ಮೂರನೆಯ ನರಸಿಂಹನ ಮಂತ್ರಿ ಸೋಮೇಯದಣ್ಣಾಯಕ ಹರಿಹರ ದೇವಾಲಯದ ಐದು ಅಂತಸ್ತಿನ ದ್ವಾರಮಂಟಪದ ಗೋಪುರದ ಮೇಲೆ ಪಂಚಕಳಸಗಳನ್ನು ಇರಿಸಿ ಬರುತ್ತಿರುವಾಗ, ಕಂಚಿಕೆರೆಯ ಬಳಿ ಬೇಡರ ಮುತ್ತಿಗೆಯಿಂದ ಮರಣ ಹೊಂದಿದ ಸ್ಮರಣಾರ್ಥವಾಗಿ ನಿಲ್ಲಿಸಿದ ಸ್ಮಾರಕವಾಗಿದೆ. ಇವನ ಮತ್ತೊಬ್ಬ ಪ್ರಧಾನಮಂತ್ರಿ ಪೆರುಮಾಳೆದೇವದಣ್ಣಾಯಕನಿಗೆ ಸಂಬಂಧಿಸಿದ ಸುಮಾರು ಹದಿನೈದಕ್ಕೂ ಹೆಚ್ಚು ಶಾಸನಗಳು ದೊರಕಿದ್ದು, ಅವನು ಪ್ರಜಾಹಿತ ಕಾರ್ಯಗಳಲ್ಲಿ ಹೆಚ್ಚಿನ ಆಸಕ್ತಿ ಹೊಂದಿದ್ದನೆಂದು ತಿಳಿದುಬರುತ್ತದೆ. ಇವನು ಚಿತ್ರದುರ್ಗದಲ್ಲಿರುವ ಬ್ರಹ್ಮಪುರಿಯನ್ನು ಸ್ಥಾಪಿಸಿ ಪೆರುಮಾಳೆಪುರವೆಂದು

ನಾಮಕರಣ ಮಾಡಿ, ಅದರ ನಿರ್ವಹಣೆಗೆ ಹಾಗು ವಿದ್ಯಾಲಯದ ಆಚಾರ್ಯರ ಪೋಷಣೆಗೆ ಬೆಟ್ಟದ ಪೂರ್ವಕ್ಕಿದ್ದ ಕುರುಬ ಕಾಳೇಯನ ಕೆರೆಯನ್ನು, ಅಲ್ಲಿನ ಭೂಮಿಯನ್ನು ದತ್ತಿನೀಡಿದ ವಿಷಯ ಬೆಟ್ಟದ ಮೇಲಿನ ಹಿಡಿಂಬೇಶ್ವರ ದೇವಾಲಯದಲ್ಲಿನ ಕ್ರಿ.ಶ.೧೨೮೬ರ ಶಾಸನ[೧೪೬] ತಿಳಿಸುತ್ತದೆ.

ಹೊಯ್ಸಳರ ಕೊನೆಯ ಹಾಗು ಶ್ರೇಷ್ಠ ಅರಸ ಮೂರನೆಯ ಬಲ್ಲಾಳ. ಇವನು ಮೂರನೆಯ ನರಸಿಂಹನ ಮರಣದ ನಂತರ ಕ್ರಿ.ಶ.೧೨೯೧ರಲ್ಲಿ ಅಧಿಕಾರರೂಢನಾಗಿ ಕ್ರಿ.ಶ.೧೩೪೨ ರವರೆಗೆ ಆಳ್ವಿಕೆ ಮಾಡಿದನು. ಇವನ ಆಳ್ವಿಕೆಗೆ ಸಂಬಂಧಿಸಿದ ಅನೇಕ ಶಾಸನಗಳು ದೊರೆಕಿವೆ. ಕ್ರಿ.ಶ.೧೩೧೦ರ ಚಿತ್ರದುರ್ಗ ಶಾಸನ[೧೪೭] ಮೂರನೆಯ ಬಲ್ಲಾಳನ ಅಳಿಯ ಸಿಂಗೇಯದಣ್ಣಾಯಕ ಸೋಮನಾಥ ದೇವಾಲಯಕ್ಕೆ ನೀಡಿದ ದತ್ತಿಯ ವಿಷಯ ತಿಳಿಸುತ್ತದೆ. ಚಿತ್ರದುರ್ಗದ ಬೆಟ್ಟದ ಮೇಲಿರುವ ಸಂಪಿಗೆಸಿದ್ದೇಶ್ವರ ದೇವಾಲಯದ ಬಳಿ ಇರುವ ನಾಲ್ಕು ಶಾಸನಗಳಲ್ಲಿ ಕ್ರಿ.ಶ.೧೩೨೮ ರ ಶಾಸನ[೧೪೮] ಮೂರನೆಯ ಬಲ್ಲಾಳನ ದಂಡನಾಯಕರುಗಳಾದ ಬಲ್ಲಪ್ಪದಣ್ಣಾಯಕ ಮತ್ತು ಅವನ ತಮ್ಮ ಸಿಂಗೇಯದಣ್ಣಾಯಕರು ತಮ್ಮ ತಂದೆ ಬೇಚಿಯದಣ್ಣಾಯಕನ ಹೆಸರಿನಲ್ಲಿ ಬೆಮ್ಮತ್ತನಕಲ್ಲಿನಲ್ಲಿ ಬೇಖನಾಥಲಿಂಗವನ್ನು ಪ್ರತಿಷ್ಠಾಪಿಸಿ ಬೆಣ್ಣೆದೋಣಿ ಪ್ರದೇಶವನ್ನು ದತ್ತಿ ಬಿಟ್ಟ ಬಗ್ಗೆ ತಿಳಿಸುತ್ತದೆ. ಚಿತ್ರದುರ್ಗದ ಬೆಟ್ಟದ ಮೇಲಿನ ಗೋಪಾಲಸ್ವಾಮಿ ದೇವಾಲಯದ ಬಳಿ ತೋಟದಲ್ಲಿ ಬಿದ್ದಿರುವ ಕ್ರಿ.ಶ.೧೩೩೮ರ ಶಾಸನ[೧೪೯] ಮೂರನೆಯ ಬಲ್ಲಾಳನ ಕೊನೆಯ ಶಾಸನವಾಗಿದ್ದು, ಅವರ ಬಿರುದುಬಾವಲಿಗಳನ್ನು ಪ್ರಸ್ತಾಪಿಸುವುದರ ಜೊತೆಗೆ, ತನ್ನ ಮಂತ್ರಿ ಹಿರಿಯಬಲ್ಲಪ್ಪದಣ್ಣಾಯಕ ಬೆಮ್ಮತ್ತನೂರು ನಾಡನ್ನು ಆಳುತ್ತಿದ್ದಾಗ ಗೋಪಾಸ್ವಾಮಿಗೆ ನೀಡಿದ ದತ್ತಿಯ ಬಗ್ಗೆ ತಿಳಿಸುತ್ತದೆ.

ಹೀಗೆ ಅಧಿಕಾರ ನಡೆಸಿದ ಮೂರನೆಯ ಬಲ್ಲಾಳ ಉತ್ತರದ ಮುಸ್ಲಿಮರ ದಾಳಿಗಳಿಂದ ತತ್ತರಿಸಿದನು. ಮಧುರೆಯ ನವಾಬನ ಮೋಸಕ್ಕೆ ಬಲಿಯಾಗಿ ಕ್ರಿ.ಶ.೧೩೪೨ರಲ್ಲಿ ಮರಣ ಹೊಂದಿದನು. ನಂತರ ಅವನ ಮಗ ನಾಲ್ಕನೆಯ ಬಲ್ಲಾಳ ಅಧಿಕಾರಕ್ಕೆ ಬಂದರೂ, ಹೊಯ್ಸಳ ಸಾಮ್ರಾಜ್ಯ ತನ್ನ ಹಿಂದಿನ ಭವ್ಯತೆಯನ್ನು ಪಡೆಯಲು ಸಾಧ್ಯವಾಗದೆ, ಇವನ ಮರಣದ ನಂತರ ಹೊಯ್ಸಳರ ಆಧಿಪತ್ಯ ಕೊನೆಗೊಂಡು ವಿಜಯನಗರ ಸಾಮ್ರಾಜ್ಯ ತಲೆ ಎತ್ತಿತು. ಈ ಮಧ್ಯೆ ಜಿಲ್ಲೆಯ ವಿವಿಧ ಭಾಗಗಳಲ್ಲಿ ಕೆಲವು ಸಾಮಂತ ರಾಜಮನೆತನಗಳಾದ ಗಂಗರು, ಸಿಂಧರು, ಸೇವುಣರು ಮತ್ತು ನಿಡಗಲ್ಲು ಚೋಳರು ಆಳ್ವಿಕೆ ಮಾಡಿರುವ ಬಗ್ಗೆ ಜಿಲ್ಲೆಯಲ್ಲಿ ದೊರೆತಿರುವ ಶಾಸನಗಳು ತಿಳಿಸುತ್ತವೆ.[೧೫೦] ಗಂಗರಿಗೆ ಸಂಬಂಧಿಸಿದಂತೆ ಚಿತ್ರದುರ್ಗ,[೧೫೧] ಹೊಳಲ್ಕೆರೆ,[೧೫೨]ಗಳಲ್ಲಿ ದೊರೆತಿರುವ ಎರಡು ಶಾಸನಗಳು ಆಧಾರವಾದರೆ,

ಹೊಳಲ್ಕೆರೆಯಲ್ಲಿ ದೊರೆತಿರುವ ಮತ್ತೊಂದು ಶಾಸನ ಸಿಂಧರ ಆಳ್ವಿಕೆಯನ್ನು ಸಮರ್ಥಿಸುತ್ತದೆ.[೧೫೩] ಹಾಗೆಯೆ ಚಳ್ಳಕೆರೆ,[೧೫೪] ಮೊಳಕಾಲ್ಮೂರು,[೧೫೫], ಹಿರಿಯೂರು,[೧೫೬] ಪ್ರದೇಶಗಳಲ್ಲಿ ನಿಡಗಲ್ಲು ಚೋಳರ ಆಡಳಿತಕ್ಕೆ ಸಂಬಂಧಿಸಿದ ಶಾಸನಗಳು ದೊರೆತಿವೆ.

ದೇವಗಿರಿಯ ಯಾದವರೆಂದೇ ಚಿರಪರಿಚಿತರಾಗಿರುವ ಸೇವಣರು ದೇವಗಿರಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ಪ್ರಾರಂಭಿಸಿದರು. ಕರ್ನಾಟಕದ ದೊಡ್ಡ ರಾಜಮನೆತನಗಳಂತೆ, ಇವರೂ ಸಹ ಸ್ವಲ್ಪ ಕಾಲ ಚಿತ್ರದುರ್ಗ ಜಿಲ್ಲೆಯಲ್ಲಿ ಆಳ್ವಿಕೆ ನಡೆಸಿದ್ದಾರೆ. ಶಿವಮೊಗ್ಗ, ಹಾಸನ, ದಾವಣಗೆರೆ, ರಾಯಚೂರು, ಚಿತ್ರದುರ್ಗ, ಬಿಜಾಪುರ, ಧಾರವಾಡ, ಬಳ್ಳಾರಿ, ಬೀದರ್ ಮುಂತಾದ ಜಿಲ್ಲೆಗಳು ಇವರ ಆಳ್ವಿಕೆಗೆ ಒಳಪಟ್ಟಿದ್ದವು.[೧೫೭] ಇವರ ಹೆಚ್ಚಿನ ಶಾಸನಗಳು ಹಾಗು ದೇವಾಲಯಗಳು ಜಗಲೂರು, ಹೊಳಲ್ಕೆರೆ, ಚಳ್ಳಕೆರೆ, ಹರಿಹರ, ತಾಲ್ಲೂಕುಗಳಲ್ಲಿ ಕಂಡುಬರುತ್ತವೆ. ದಾವಣಗೆರೆ, ಜಗಲೂರು ಮತ್ತು ಹೊಳಲ್ಕೆರೆಗಳಲ್ಲಿ ದೊರೆತಿರುವ ಶಾಸನಗಳು ಸಿಂಘಣನ ನಂತರದ ಕಾಲದವುಗಳಾಗಿದ್ದು, ಕನ್ನರ, ಮಹಾದೇವ, ಮತ್ತು ರಾಮಚಂದ್ರರ ಆಳ್ವಿಕೆಯನ್ನು ತಿಳಿಸುತ್ತವೆ. ದಾವಣಗೆರೆ ಜಿಲ್ಲೆಯ ಹರಿಹರ ಮತ್ತು ಭಾನುವಳ್ಳಿ ಶಾಸನಗಳಲ್ಲಿ ಸೇವುಣರ ವಂಶಾವಳಿಯನ್ನು ಕಾಣಬಹುದು.[೧೫೮]

ಸಿಂಘಣನ ಮಗ ಕೃಷ್ಣ ಅಥವಾ ಕನ್ನರನಿಗೆ ಸೇರಿದ ಸುಮಾರು ಐದು ಶಾಸನಗಳು ದೊರಕಿದ್ದು, ಅವುಗಳಲ್ಲಿ ಕ್ರಿ.ಶ.೧೨೫೦ರ ಗಂಗನರಸಿ ಶಾಸನ ಅತ್ಯಂತ ಪ್ರಾಚೀನವಾದುದಾಗಿದೆ.[೧೫೯] ಬಿಲ್ಲಾಳದ ಅಂಮೇಯನಾಯಕನೆಂಬ ಸೇನಾನಿ ತನ್ನ ಪ್ರಭುವಿನ ಹೆಸರಿನಲ್ಲಿ ಬಿದರೆ ಗ್ರಾಮದಲ್ಲಿ ಕನ್ನೇಶ್ವರ ದೇವಾಲಯವನ್ನು ಕಟ್ಟಿಸಿ, ದೇವರಿಗೆ ದತ್ತಿನೀಡಿದ ವಿಷಯ ಚಿಕ್ಕಬಿದರೆ ಗ್ರಾಮದ ಕ್ರಿ.ಶ.೧೨೫೪ರ ಶಾಸನ ತಿಳಿಸುತ್ತದೆ.[೧೬೦]

ಕನ್ನರನ ನಂತರ ಅವನ ಮಗ ರಾಮಚಂದ್ರ ಅಧಿಕಾರಕ್ಕೆ ಬಂದನು. ಇವನಿಗೆ ಸಂಬಂಧಿಸಿದ ಶಾಸನಗಳು ದಾವಣಗೆರೆ ತಾಲ್ಲೂಕಿನ ಬೇತೂರು ಗ್ರಾಮ[೧೬೧] ಮತ್ತು ಜಗಲೂರು ತಾಲ್ಲೂಕಿನ ಕಲ್ಲೇದೇವರಪುರದಲ್ಲಿ[೧೬೨] ದೊರಕಿದ್ದು, ಕಲ್ಲೇದೇವರಪುರದ ಶಾಸನ ಇವನ ಪ್ರಶಸ್ತಿಯನ್ನು ತಿಳಿಸುತ್ತದೆ. ಅಲ್ಲದೆ ಇವನ ಮಹಾಮಂಡಲೇಶ್ವರ ಸಾಲೆಯ ತಿಕ್ಕಮದೇವನು ಅರಸನ ಅನುಮತಿ ಪಡೆದು ಹರಿಹರ ದೇವರ ಬಳಿ ತಿಕ್ಕಮಲಕ್ಷ್ಮಿನಾರಾಯಣ ವಿಗ್ರಹವನ್ನು ಪ್ರತಿಷ್ಠಾಪಿಸಿ ದತ್ತಿನೀಡಿದ ಹಾಗು ಹರಿಹರ ಬ್ರಾಹ್ಮಣರು, ಉಚ್ಚಂಗಿಯ ಪಾಂಡ್ಯರು ಮತ್ತು ಬೇತೂರಿನ ನಾಗರಿಕರು, ಮತ್ತಿತರರು ಹರಿಹರದಲ್ಲಿ ಮಹಾಸಭೆ ಸೇರಿ ದೇವರಿಗೆ ವಜ್ರದ ಬೀಸಣಿಗೆಯನ್ನು ಅರ್ಪಿಸಿದ ವಿಷಯಗಳಿವೆ.[೧೬೩]

ಹೊಯ್ಸಳರ ಸಾಮ್ರಾಜ್ಯದ ಪತನಾನಂತರ ಸ್ಥಾಪಿತವಾದ ವಿಜಯನಗರ ಸಾಮ್ರಾಜ್ಯ ತುಂಗಾಭದ್ರ ನದಿದಂಡೆಯ ಮೇಲಿರುವ ಹಂಪಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡಿತು. ಇದು ಕರ್ನಾಟಕದ ರಾಜಕೀಯ ಇತಿಹಾಸದಲ್ಲಿ ಅಮರನಾಯಕ ವ್ಯವಸ್ಥೆಯನ್ನು ಸೃಷ್ಟಿಸಿದ ಕೀರ್ತಿಗೆ ಪಾತ್ರವಾಗಿದೆ.

ಕ್ರಿ.ಶ.೧೩೩೬ರಿಂದ ೧೫೬೫ ರವರೆಗೆ ಸುರ್ಧೀರ್ಘವಾಗಿ ಆಳ್ವಿಕೆ ನಡೆಸಿದ ವಿಜಯನಗರ ಅರಸರು, ಪ್ರಾರಂಭದಿಂದಲೇ ಚಿತ್ರದುರ್ಗ ಜಿಲ್ಲೆಯಲ್ಲಿ ರಾಜಕೀಯ ಅಧಿಕಾರವನ್ನು ಹೊಂದುವ ಆಸಕ್ತಿ ಹೊಂದಿದ್ದರು. ಹಾಗಾಗಿ ನೈಸರ್ಗಿಕ ಬೆಟ್ಟಗುಡ್ಡಗಳಿಂದ ಆವೃತವಾಗಿದ್ದು, ಕೋಟೆಕೊತ್ತಲಗಳನ್ನು ಕಟ್ಟಿಕೊಳ್ಳಲು ಹಾಗು ಮಿಲಿಟರಿ ದೃಷ್ಟಿಯಿಂದ ಬಹುಮುಖ್ಯ ಪ್ರದೇಶವಾಗಿರುವ ಚಿತ್ರದುರ್ಗವನ್ನು ತಮ್ಮ ರಾಜ್ಯದ ಒಂದು ಪ್ರಾಂತ್ಯವನ್ನಾಗಿ ಮಾಡಿಕೊಂಡು, ಪ್ರತ್ಯಕ್ಷ ಹಾಗು ಪರೋಕ್ಷವಾಗಿ ಆಳ್ವಿಕೆ ಪ್ರಾರಂಭಿಸಿದರು.[೧೬೪]

ಚಿತ್ರದುರ್ಗ ಜಿಲ್ಲೆಯಲ್ಲಿ ದೊರೆತಿರುವ ಅವರ ಅನೇಕ ಶಾಸನಗಳು ಅವರ ಆಳ್ವಿಕೆ, ತೆರಿಗೆಪದ್ಧತಿ, ಕೃಷಿ, ಶಿಕ್ಷಣ, ಧರ್ಮ, ದಾನದತ್ತಿ, ದೇವಾಲಯಗಳ ನಿರ್ಮಾಣ ಮುಂತಾದ ಅಂಶಗಳನ್ನು ತಿಳಿಸುತ್ತವೆ. ಕ್ರಿ.ಶ.೧೩೫೫ ಮತ್ತು ೧೩೫೬ರ[೧೬೫] ಶಾಸನಗಳು ವಿಜಯನಗರ ಸಾಮ್ರಾಜ್ಯದ ಪ್ರತಿನಿಧಿ ಮಲ್ಲಿನಾಥ ಒಡೆಯನು ಬೆಮ್ಮತ್ತನಕಲ್ಲನ್ನು ಕೇಂದ್ರವನ್ನಾಗಿ ಮಾಡಿಕೊಂಡು ಆಡಳಿತ ನಡೆಸುತ್ತಿದ್ದನೆಂಬುದನ್ನು ತಿಳಿಸುತ್ತವೆ. ಹಾಗಾಗಿ ಇವರ ಆಳ್ವಿಕೆಯಲ್ಲಿ ಮಲ್ಲಿನಾಥ ಒಡೆಯನು ಬೆಟ್ಟದ ಮೇಲಿರುವ ಸಂಪಿಗೆಸಿದ್ದೇಶ್ವರ ದೇವರಿಗೆ ಕಲ್ಲಿನ ಉಪ್ಪರಿಗೆ ಮತ್ತು ಉಯ್ಯಾಲೆಕಂಬವನ್ನು ಮಾಡಿಸಿ, ಶಿಖರ ಪ್ರತಿಷ್ಠಾಪಿಸಿ ಎರಡು ಗ್ರಾಮಗಳನ್ನು ದತ್ತಿ ನೀಡಿದುದರ ಬಗ್ಗೆ ದೇವಾಲಯದಲ್ಲಿರುವ ಒಂದನೆಯ ಬುಕ್ಕರಾಯನ ಶಾಸನದಿಂದ ತಿಳಿದುಬರುತ್ತದೆ.[೧೬೬]

ವಿಜಯನಗರದ ಅರಸರು ತಮ್ಮ ಆಡಳಿತದ ಅನುಕೂಲಕ್ಕಾಗಿ ಜಿಲ್ಲೆಯನ್ನು ರಾಜ್ಯ, ವೆಂಟೆ, ವಳಿತ, ಚಾವಡಿ, ಸೀಮೆ, ಮಾಗಣಿ, ಸಮ್ಮತ್ತು, ಹೋಬಳಿ, ಕಸುಬೆ ಮುಂತಾದ ಪ್ರಾದೇಶಿಕ ವಿಭಾಗಗಳಾಗಿ ವಿಭಾಗಿಸಿಕೊಂಡು ಆಳ್ವಿಕೆ ಮಾಡಿದರೆಂಬ ವಿಚಾರ ತಿಳಿದುಬರುತ್ತದೆ.[೧೬೭] ಕೃಷ್ಣದೇವರಾಯನ ಆಳ್ವಿಕೆಯ ಕಾಲದಲ್ಲಿ ಜಿಲ್ಲೆಯ ಒಂದು ಭಾಗದ ಜನ ಅಧಿಕ ತೆರಿಗೆಗಳ ಹೊರೆಯಿಂದ ಬಳಲುತ್ತಿದ್ದಾಗ, ಅವನ ಸಾಮಂತಾಧಿಕಾರಿ ಕಾಣಿಕೆ, ಮೇಲುಪಣ ಮತ್ತು ಕಬ್ಬಿನ ಮೇಲಿನ ಸುಂಕವನ್ನು ರದ್ದುಪಡಿಸಿದ.[೧೬೮] ಇದೇ ರೀತಿ ಅಚ್ಚುತರಾಯನ ಆಜ್ಞೆಯ ಮೇರೆಗೆ ಬಾಗೂರು ಸೀಮೆಯಲ್ಲಿ ಮದುವೆ ತೆರಿಗೆಯನ್ನು ರದ್ದುಪಡಿಸಲಾಯಿತು.[೧೬೯]

ಇದರಿಂದ ವಿಜಯನಗರದ ಅರಸರು ಪ್ರಜೆಗಳ ಹಿತರಕ್ಷಣೆಗೆ ಹೆಚ್ಚಿನ ಆಸಕ್ತಿ ವಹಿಸಿದ್ದರೆಂಬುದು ತಿಳಿದುಬರುತ್ತದೆ.

ಕ್ರಿ.ಶ.೧೩೩೭ ರಿಂದ ೧೪೪೬ರವರೆಗೆ ಆಳ್ವಿಕೆ ಮಾಡಿದ ಎರಡನೆಯ ಹರಿಹರನ ಅರ್ಧ ವರಹಗಳು ಜಗಲೂರು ತಾಲ್ಲೂಕಿನ ಬಿಳಿಚೋಡುವಿನಲ್ಲಿ ದೊರೆತಿದ್ದು, ನಾಣ್ಯದ ಮೇಲ್ಮುಖದಲ್ಲಿ ಶಿವ–ಪಾರ್ವತಿಯರ ಚಿತ್ರ, ಹಿಂಭಾಗದಲ್ಲಿ 'ಶ್ರೀಪ್ರತಾಪ ಹರಿಹರ' ಎಂಬ ಮೂರು ಸಾಲಿನ ನಾಗರಲಿಪಿ ಇದೆ. ಇದರಿಂದ ಅವರ ಧರ್ಮದ ಬಗ್ಗೆ ತಿಳಿಯಬಹುದಾಗಿದೆ. ಕ್ರಿ.ಶ.ಹದಿನಾಲ್ಕನೆಯ ಶತಮಾನದಲ್ಲಿ ಚಿತ್ರದುರ್ಗದಲ್ಲಿ ಆಳುತ್ತಿದ್ದ ವಿಜಯನಗರದ ಮಾದರಸದಣ್ಣಾಯಕ ಅರವಟ್ಟಿಗೆ ಸೇವೆಗಾಗಿ ಕರಲಹಳ್ಳದ ದಂಡೆಯ ಭೂಮಿಯನ್ನು ಉಂಬಳಿ ಹಾಕಿದನೆಂದು ತಿಳಿದುಬಂದಿದೆ. ಕ್ರಿ.ಶ.೧೩೩೪ ರಲ್ಲಿ ಆಳುತ್ತಿದ್ದ ವಿಜಯನಗರದ ವೀರಮಲ್ಲಣ್ಣ ಒಡೆಯನು ತನ್ನ ತಾಯಿಯ ಹೆಸರಿನಲ್ಲಿ ಬೆಟ್ಟದ ಮೇಲಿನ ಹಿಡಿಂಬೇಶ್ವರ ದೇವರಿಗೆ ಕುಂಚಿಗನಹಳ್ಳಿಯನ್ನು (ಕುಂಚಿಗನಾಳು) ಮಲ್ಲಾಪುರವೆಂದು ನಾಮಕರಣ ಮಾಡಿ ದತ್ತಿಬಿಟ್ಟ ಬಗ್ಗೆ ಉಲ್ಲೇಖವಿದೆ.

ಮೊಳಕಾಲ್ಮೂರು ತಾಲ್ಲೂಕಿನ ಕರಡಿಹಳ್ಳಿಯ ಹನಮಂತದೇವರ ಗುಡಿಯ ಮುಂದಿನ ಶಾಸನ ಸದಾಶಿವರಾಯನ ಕಾಲದಲ್ಲಿ ಈ ಗ್ರಾಮವನ್ನು ದತ್ತಿಬಿಟ್ಟ ವಿಚಾರ ತಿಳಿದುಬರುತ್ತದೆ. ಇದೇ ತಾಲ್ಲೂಕಿನ ಮುರಡಿ (ಮುರವಡಿಪುರ) ಗ್ರಾಮದ ಬಸವಣ್ಣನ ಗುಡಿಯ ಹಿಂದೆ ದೊರೆತಿರುವ ಶಾಸನ ಸದಾಶಿವರಾಯನ ಕಾಲದಲ್ಲಿ ಮಹಾಮಂಡಲೇಶ್ವರ ತಿರುಮಲಯ್ಯದೇವ ಮಹಾರಾಜರು ಈ ಗ್ರಾಮವನ್ನು ದತ್ತಿಬಿಟ್ಟ ವಿಚಾರ ತಿಳಿಸುತ್ತದೆ. ಜಗಲೂರು ತಾಲ್ಲೂಕಿನ ಗುತ್ತಿದುರ್ಗ ಗ್ರಾಮದ ಭೈರೇದೇವರ ಗುಡಿಯ ಹತ್ತಿರದ ಶಾಸನ ಒಂದನೆಯ ಬುಕ್ಕರಾಯನ ಗಜ ಸೈನ್ಯಾಧಿಕಾರಿ ಬಲ್ಲಪ್ಪ ಮತ್ತು ಇವನ ಸಹೋದರ ಚಿಕ್ಕಣ್ಣ ಎಂಬುವವರು ಭೈರೇದೇವರ ಪಾದಶಿಲ್ಪವನ್ನು ಕೆತ್ತಿಸಿ ಪ್ರತಿಷ್ಠಾಪಿಸಿದರೆಂದು ತಿಳಿಸುತ್ತದೆ.[೧೭೦]

ಹೊಳಲ್ಕೆರೆ ತಾಲ್ಲೂಕಿನ ತ್ಯಾಗದಹಳ್ಳಿಯ ಶಾಸನದಿಂದ ಶ್ರೀಕೃಷ್ಣದೇವರಾಯರು ನಾಯಕತನ ಪಾಲಿಸಿದ್ದಾಕ್ಕಾಗಿ ಪ್ರಧಾನಮಲ್ಲರಸರು ಜಾಜೂರು ಗವಿಯ ತಿರುಮಲದೇವರಿಗೆ ಜಾಜೂರು ಸೀಮೆಗೆ ಸಲ್ಲುವಂತೆ ತ್ಯಾಗದಹಳ್ಳಿಯನ್ನು ದತ್ತಿಬಿಟ್ಟ ವಿಚಾರ ತಿಳಿದುಬರುತ್ತದೆ.[೧೭೧] ಕೃಷ್ಣದೇವರಾಯ ಕವಿಕೋನಪ್ಪನಿಗೆ ಆನೆಸಿದ್ರಿ ಗ್ರಾಮವನ್ನು ಅಗ್ರಹಾರವಾಗಿ ನೀಡಿದ.[೧೭೨] ಉಪ್ಪಾರಹಳ್ಳಿ ಪಟೇಲ್ ರಂಗಣ್ಣನ ಜಮೀನಿನಲ್ಲಿದ್ದ ಶಾಸನದಿಂದ ತಿರುಮಲರಾಜಯ್ಯ ಹಿರಿಯೂರು ತಾಲ್ಲೂಕಿನ ಅಂಬಲಗೆರೆಯ ತಿರುವೆಂಗಳನಾಥಸ್ವಾಮಿಗೆ ಪರಿಕರಹಳ್ಳಿಯನ್ನು ದತ್ತಿಬಿಟ್ಟ ವಿಚಾರ ತಿಳಿದುಬರುತ್ತದೆ.[೧೭೩] ಹೊಸದುರ್ಗ ತಾಲ್ಲೂಕಿನ ಚನ್ನಕೇಶವ

ದೇವಾಲಯದಲ್ಲಿರುವ ಏಕಶಿಲಾ ಗರುಡಗಂಬದ ಶಾಸನ ವೀರಪ್ರತಾಪರಾಯನ ಕಾಲದಲ್ಲಿ ವಿಶ್ವನಾಥಯ್ಯ ಎಂಬುವವನಿಂದ ಈ ಗರುಡಗಂಬ ಸ್ಥಾಪಿಸಲ್ಪಟ್ಟಿತ್ತೆಂದು ತಿಳಿಸುತ್ತದೆ.[೧೭೪] ಇದೇ ಊರಿನ ಅಂತರಘಟ್ಟಮ್ಮನ ಗುಡಿಯ ಶಾಸನ ಸದಾಶಿವರಾಯ ಮತ್ತು ಕೃಷ್ಣಪ್ಪನಾಯಕರು ಈ ದೇವರಿಗೆ ಭೂದತ್ತಿ ನೀಡಿದ ವಿಚಾರವನ್ನು ತಿಳಿಸುತ್ತದೆ.[೧೭೫] ಹಾಗು ಸದಾಶಿವರಾಯನ ಕ್ಷೌರಿಕ ಭೈರಪ್ಪನಾಯಕ ಹರಿಹರ ದೇವರಿಗೆ ನೈವೇದ್ಯ ಅರ್ಪಿಸಲು ಬೆಳ್ಳಿಯ ಹರಿವಾಣ, ಮಧ್ಯಾಹ್ನದ ಅನ್ನ ಸಂತರ್ಪಣೆಗಾಗಿ ಬೆಳ್ಳೂಡಿ ಗ್ರಾಮವನ್ನು ದಾನ ನೀಡಿದ ಮಾಹಿತಿ ಹಾಗು ವೀರಪ್ರತಾಪ ದೇವರಾಯನಿಂದ ಹರಿದ್ರಾ ನದಿಗೆ ಕಾಲುವೆ ಕಟ್ಟಿದಾಗ ನೀರಾವರಿಯ ಆದಾಯದ ಒಂದು ಭಾಗದಲ್ಲಿ ಹರಿಹರೇಶ್ವರ ದೇವಾಲಯದ ಜೀರ್ಣೋದ್ಧಾರ ಹಾಗು ಅರ್ಚಕರ ಉದರ ಪೋಷಣೆ ಮುಂತಾದವುಗಳಿಗೆ ನೆರವು ನೀಡಬೇಕೆಂದು ನಿರೂಪ ಹಾಕಲ್ಪಟ್ಟ ವಿಚಾರ ತಿಳಿದುಬರುತ್ತದೆ.[೧೭೬]

ಹರಿಹರ ತಾಲ್ಲೂಕಿನ ಹಳ್ಳಿಹಾಳು ಗ್ರಾಮದ ಶಾಸನದಿಂದ ವೀರಬುಕ್ಕರಾಯ ಒಡೆಯರ ಕಾಲದಲ್ಲಿ ಯಬ್ಬೇನಾಯಕನು ತಮ್ಮ ತಂದೆಯ ಹೆಸರಿನಲ್ಲಿ ಭುವನಸಮುದ್ರವೆಂಬ ಕೆರೆ ಕಟ್ಟಿಸಿ ಹಲೆವಾಳಿನಲ್ಲಿ ಭುವನೇಶ್ವರ ದೇವರನ್ನು ಪ್ರತಿಷ್ಠಾಪಿಸಿ, ಪೂಜಾಕೈಂಕರ್ಯಗಳಿಗಾಗಿ ಕೆರೆಯ ಕೆಳಗಿನ ಗದ್ದೆ ಮತ್ತು ಹಲೆವಾಳದ ಬೆದ್ದಲು ಭೂಮಿಯನ್ನು ಉಂಬಳಿ ಹಾಕಿದ ವಿಷಯ ತಿಳಿದುಬರುತ್ತದೆ.[೧೭೭] ಇವರು ಕಲೆ ಮತ್ತು ವಾಸ್ತುಶಿಲ್ಪಕ್ಕೂ ಅಪಾರ ಪ್ರೋತ್ಸಾಹ ನೀಡಿದ್ದು, ದಾವಣಗೆರೆ ತಾಲ್ಲೂಕಿನ ಶಂಕರನಹಳ್ಳಿ, ಮಾಯಕೊಂಡ, ನೀರ್ಥಡಿ, ಜಗಲೂರು ತಾಲ್ಲೂಕಿನ ಕೊಣಚಗಲ್, ಕೊಡದಗುಡ್ಡ, ಹೊಳಲ್ಕೆರೆ, ಚಿತ್ರದುರ್ಗ, ಹಿರಿಯೂರು ಮುಂತಾದ ಕಡೆಗಳಲ್ಲಿ ಇವರ ಕಾಲದ ದೇವಾಲಯಗಳು ಕಂಡುಬಂದಿವೆ.

ಹೀಗೆ ಎಲ್ಲಾ ಕ್ಷೇತ್ರಗಳಲ್ಲೂ ಗಣನೀಯ ಕೊಡುಗೆಗಳನ್ನು ನೀಡಿ ದಕ್ಷ ಆಡಳಿತ ನಡೆಸಿ, ಅಮರನಾಯಕ ವ್ಯವಸ್ಥೆಯನ್ನು ಸೃಷ್ಟಿಸಿದ ವಿಜಯನಗರ ಅರಸರು, ಹದಿನೈದನೆಯ ಶತಮಾನದಲ್ಲಿ ಪಾಳೆಯಗಾರರು ತಲೆ ಎತ್ತಿದ ಮೇಲೆ ಈ ಪ್ರದೇಶದಲ್ಲಿ ಪರೋಕ್ಷವಾಗಿ ಆಡಳಿತ ಪ್ರಾರಂಭಿಸಿದರು. ಆದರೆ ತಾಳಿಕೋಟೆಯ ಯುದ್ಧದಲ್ಲಿ ವಿಜಯನಗರ ಸೋಲನ್ನು ಅನುಭವಿಸಿ ಅವನತಿಯ ಹಾದಿ ಹಿಡಿದ, ಪರಿಸ್ಥಿತಿಯ ಲಾಭ ಪಡೆದ ಅಮರನಾಯಕರು ಮುಂದೆ ಪ್ರಬಲರಾಗಿ ಸ್ವತಂತ್ರ ಸಂಸ್ಥಾನಗಳನ್ನು ಸ್ಥಾಪಿಸಿಕೊಂಡರು.

ಚಿತ್ರದುರ್ಗ ಪ್ರದೇಶದಲ್ಲಿ ಪಾಳೆಯಪಟ್ಟಿನ ಉಗಮವನ್ನು ವಿಜಯನಗರ ಸಾಮ್ರಾಜ್ಯದ ಆಳ್ವಿಕೆಯ ಕಾಲದಲ್ಲಿ ಕಾಣಬಹುದಾಗಿದೆ. ಇವರ ಕಾಲದಲ್ಲಿ ಆಳ್ವಿಕೆ ನಡೆಸುತ್ತಿದ್ದ ಸಣ್ಣಪುಟ್ಟ ಸಾಮಂತರು ದಂಡಿನೊಡನೆ ಪಾಳೆಯವನ್ನು ಹಾಕಿ ಯುದ್ಧಕ್ಕೆ ಸಿದ್ಧವಾಗಿರ ತಕ್ಕವರನ್ನು

ಪಾಳೆಯಗಾರರೆಂದು ಹೇಳಲಾಗಿದೆ. ಹಾಗು ಪಾಳೆಯಗಾರ ಎಂಬ ಪದದಲ್ಲಿರುವ 'ಪಾಳೆಯ' ಪದವು ದಂಡು, ಸೈನ್ಯ, ಸೇನಾವಿಭಾಗ, ಶಿಬಿರ, ಠಾಣೆ ಮುಂತಾದ ಅರ್ಥಗಳನ್ನು ಸೂಚಿಸಲಾಗುತ್ತಿದ್ದು, ಇವುಗಳ ಮುಖ್ಯಸ್ಥರೆ ಪಾಳೆಯಗಾರರೆಂತಲೂ ತಿಳಿದುಬರುತ್ತದೆ.[೧೭೮] ಇಂತಹ ಪಾಳೆಯಪಟ್ಟಿನ ವ್ಯವಸ್ಥೆಯಲ್ಲಿ ರಾಜನು ಭೂಮಿಯನ್ನು ಸ್ವಾಮಿ ಎಂದು ಪರಿಗಣಿಸಲಾಗಿದ್ದು, ಅವನು ಭೂಮಿಯನ್ನು ತನ್ನ ಆಶ್ರಿತರಿಗೆ ಹಂಚುತ್ತಿದ್ದ. ಇಂತಹ ಪಾಳೆಯಗಾರರು ಕರ್ನಾಟಕದಾದ್ಯಂತ ಆಳ್ವಿಕೆ ನಡೆಸಿರುವುದು ಅಧ್ಯಯನಗಳಿಂದ ತಿಳಿದುಬಂದಿದೆ. ಹಾಗೆಯೆ ಚಿತ್ರದುರ್ಗ ಪ್ರದೇಶದಲ್ಲಿ ಕ್ರಿ.ಶ.ಹದಿನೈದನೆಯ ಶತಮಾನದಿಂದ ಹದಿನೆಂಟನೆಯ ಶತಮಾನದವರೆಗೆ ಆಳ್ವಿಕೆ ನಡೆಸಿದ ಪಾಳೆಯಗಾರರಲ್ಲಿ ಬೂದಿಹಾಳು, ಚಿತ್ರದುರ್ಗ, ಹರತಿ, ರಾಯದುರ್ಗ, ಬೇಲೂರು, ಸಂತೆಬೆನ್ನೂರು, ಹಟ್ಟಿ, ಹರಪನಹಳ್ಳಿ, ಮತ್ತಿನಾಡು (ಮತ್ತೋಡು) ಪಾಳೆಯಗಾರರು ಪ್ರಮುಖರಾಗಿದ್ದು, ಜಿಲ್ಲೆಯನ್ನು ಇತಿಹಾಸದ ಪುಟಗಳಲ್ಲಿ ಸೇರಿಸಿದ್ದಾರೆ.

ಚಿತ್ರದುರ್ಗ ಪಾಳೆಯಗಾರರು

ವಿಜಯನಗರ ಸಾಮ್ರಾಜ್ಯದ ಪತನಾನಂತರ ಕರ್ನಾಟಕದಲ್ಲಿ ಪ್ರಬಲರಾದವರು ಪಾಳೆಯಗಾರರು. ಇಂತಹ ಪಾಳೆಯಗಾರರಲ್ಲಿ ಅತ್ಯಂತ ಪ್ರಸಿದ್ಧಿಯಾದವರು ಚಿತ್ರದುರ್ಗದ ಪಾಳೆಯಗಾರರು. ಚಿತ್ರದುರ್ಗವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಕ್ರಿ.ಶ.ಹದಿನಾರನೆಯ ಶತಮಾನದ ಪೂರ್ವಾರ್ಧದಿಂದ ಹದಿನೆಂಟನೆಯ ಶತಮಾನದ ಉತ್ತರಾರ್ಧದವರೆಗೆ ಆಳ್ವಿಕೆ ನಡೆಸಿದ ಪಾಳೆಯಗಾರರು 'ಚಿತ್ರದುರ್ಗದ ಪಾಳೆಯಗಾರರೆಂದೇ' ಹೆಸರಾಗಿದ್ದಾರೆ. ಪರಂಪರೆಯಿಂದ ಹೇಳುವಂತೆ ಇವರು ಮೂಲತಃ ಬೇಡ ಜನಾಂಗದವರಾಗಿದ್ದು, ತಮ್ಮನ್ನು ವಾಲ್ಮೀಕಿ ಮತಸ್ಥರು, ಕಾಮಗೇತಿ ವಂಶಸ್ಥರು ಎಂದು ಶಾಸನಗಳಲ್ಲಿ ಕರೆದುಕೊಂಡಿರುವುದಲ್ಲದೆ, 'ಕಸ್ತೂರಿ' ಎಂಬ ಅಭಿದಾನವನ್ನು, 'ಶ್ರೀಮನ್ಮಹಾನಾಯಕಾಚಾರ್ಯ' ಎಂಬ ಬಿರುದನ್ನು ಧರಿಸಿಕೊಂಡು ಇತಿಹಾಸದಲ್ಲಿ ಮದಕರಿನಾಯಕರೆಂದೇ[೧೭೯] ಪ್ರಸಿದ್ಧರಾಗಿದ್ದಾರೆ. ಕಾಮಗೇತಿ ಎಂಬುದು ಮ್ಯಾಸಬೇಡರಲ್ಲಿ ಇಂದಿಗೂ ಪ್ರಚಲಿತದಲ್ಲಿರುವ ಕಾಮಗೇತಲ ಎಂಬ ಬೆಡಗು ಅಥವಾ ಗೋತ್ರ ಎಂದು ತಿಳಿದುಬರುತ್ತದೆ.[೧೮೦] ಚಿತ್ರದುರ್ಗ ಪಟ್ಟಣಕ್ಕೆ ಕ್ರಿ.ಶ.೧೦೭೦ಕ್ಕೆ ಮುಂಚೆಯೇ ಕೋಟೆ ಇದ್ದಿತ್ತಾದರೂ[೧೮೧] ಹೆಚ್ಚು ಸಂಖ್ಯೆಯ ಹಾಗು ಬಲಿಷ್ಠವಾದ ಕೋಟೆಯ ಸುತ್ತುಗಳನ್ನು ನಿರ್ಮಿಸಿ, ಇದು ದುರ್ಗ, ಏಳುಸುತ್ತಿನ ಕೋಟೆ ಎಂದು ಪ್ರಸಿದ್ಧಿ ಪಡೆಯುವುದಕ್ಕೆ ಕಾರಣರಾದವರು ಚಿತ್ರದುರ್ಗದ ಪಾಳೆಯಗಾರರು.[೧೮೨]

ಚಿತ್ರದುರ್ಗ ಪಾಳೆಯಗಾರರು ಕಾಮಗೇತಿ ಅರಸರು, ನಾಯಕರಸರು, ನಾಯಕದೊರೆಗಳು, ಪಾಳೆಯಗಾರ ಅರಸರು, ಪಾಳೆಯಗಾರ ದೊರೆಗಳು ಇತ್ಯಾದಿಯಾಗಿ ಕರೆಯಲ್ಪಟ್ಟಿದ್ದು,

ಒಂದೊಂದಕ್ಕೂ ಅದರದ್ದೇ ಆದ ಅರ್ಥೌಚಿತ್ಯ ಇರುವುದಾದರೂ, 'ಪಾಳೆಯಗಾರ' ಎಂಬ ಹೆಸರೇ ಈಚಿನ ಕಾಲದಲ್ಲಿ ಹೆಚ್ಚು ಬಳಕೆಯಾಗುತ್ತಾ ಬಂದಿದೆ. ಅಲ್ಲದೆ ವಾಸ್ತವವಾಗಿ ಅವರೇ ಹಾಕಿಸಿದ ಮತ್ತು ಇತರೆ ಶಾಸನಗಳಲ್ಲಿ ವಿಜಯನಗರದ ದೊರೆಗಳ ಕಾರ್ಯಕರ್ತರು, ನಾಯಕ ಅಯ್ಯನವರು, ಅರಸರುಗಳು, ಕರ್ತಾರಯ್ಯನವರು, ರಾಜಶ್ರೀ, ರಾಜಾ ಎಂದೂ ಕರೆಯಲ್ಪಟ್ಟಿದ್ದಾರೆ. ಆದರೆ ಅವರು ಎಂದೂ, ಎಲ್ಲೂ ತಮ್ಮನ್ನು ಈ ರೀತಿ ಸಂಬೋಧಿಸಿಕೊಳ್ಳದೆ, ಪಾಳೆಯಗಾರ ಅಥವಾ ಪಾಳ್ಳೇಗಾರ ಎಂದು ಸ್ಥಾನಮಾನಗಳಲ್ಲಿ ತಮಗಿಂತ ಕಡಿಮೆ ಎನಿಸಿದವರಿಗೆ ಬಳಸಿದ್ದರೆಂದು, ಅವರ ವಂಶಾವಳಿಗಳಿಂದ ತಿಳಿದುಬರುತ್ತದೆ. ಚಿತ್ರದುರ್ಗ ಪಾಳೆಯಗಾರರ ಒಂದು ವಿಶೇಷತೆಯೆಂದರೆ ಹೆಚ್ಚಿನ ನಾಯಕರುಗಳು 'ಮೆದಕೇರಿ' ಅಥವಾ 'ಮದಕರಿ' ಎಂಬ ಅಭಿದಾನವನ್ನು ಹೊಂದಿರುವುದು. ಕೆಲವು ವಿದ್ವಾಂಸರು ಎಲ್ಲಾ ಪಾಳೆಯಗಾರರು ಈ ಅಭಿದಾನವನ್ನು ಹೊಂದಿದ್ದಾರೆಂದು ತಿಳಿಸಿದ್ದಾರೆ. ಆದರೆ ಇದರ ಬಗ್ಗೆ ಬಿ.ರಾಜಶೇಖರಪ್ಪನವರು ತಮ್ಮ ವಿರೋಧ ವ್ಯಕ್ತಪಡಿಸುತ್ತಾ ಮದಕರಿನಾಯಕ ಎಂಬುದು ವಂಶನಾಮವಲ್ಲ ವ್ಯಕ್ತಿನಾಮವಾಗಿದೆ. ಇದೇ ವಂಶದ ದೊರೆಗಳು ತಿಮ್ಮಣ್ಣನಾಯಕ ಓಬಣ್ಣನಾಯಕ, ಚಿಕ್ಕಣ್ಣನಾಯಕ, ಕಸ್ತೂರಿರಂಗಪ್ಪನಾಯಕ ಎಂಬ ಬೇರೆಯ ಹೆಸರುಗಳನ್ನು ಹೊಂದಿದವರಾಗಿದ್ದಾರೆ. ಮುಂದುವರೆದು, ಮದಕರಿ ನಾಯಕ ಎಂಬ ಹೆಸರು ವಾಸ್ತವವಾಗಿ ಇಪ್ಪತ್ತನೆಯ ಶತಮಾನದಲ್ಲಿ ಹೆಚ್ಚಾಗಿ ಪ್ರಚಾರಗೊಂಡಿರುವ ಒಂದು ಅಸಮರ್ಪಕ ನಾಮರೂಪವಾಗಿದ್ದು, ಈ ಸಂಸ್ಥಾನಿಕರ ಪೂರ್ವಿಕರಲ್ಲೊಬ್ಬ ದಿಲ್ಲಿಯ ಸುಲ್ತಾನನ ಬಳಿ ವಜೀರನಾಗಿದ್ದು, ಒಮ್ಮೆ ಮದಿಸಿದ ಕರಿ(ಆನೆ)ಯನ್ನು ಮಣಿಸಿದ್ದರಿಂದ ಸುಲ್ತಾನನು ಅವನಿಗೆ ಕೊಟ್ಟ ಮದಕರಿನಾಯಕನೆಂಬ ಬಿರುದು ಅವನ ಹೆಸರಾಯಿತು ಎಂದು ಪ್ರಚಲಿತದಲ್ಲಿದ್ದರೂ, ಇದರ ಬಗ್ಗೆ ಯಾವುದೇ ಚಾರಿತ್ರಿಕ ದಾಖಲೆಗಳಿಲ್ಲ. ಮತ್ತೊಂದು ಐತಿಹ್ಯದ ಪ್ರಕಾರ ಈ ಮನೆತನದ ಎರಡನೆಯ ದೊರೆಯಾದ ಓಬಣ್ಣನಾಯಕನಿಗೆ ದುರ್ಗದ ಬೆಟ್ಟದಲ್ಲಿದ್ದ ರಸಸಿದ್ಧರೆಂಬ ಮಹಿಮಾಪುರುಷರು 'ಮೆದಕೇರಿನಾಯಕ' ಎಂದು ಕರೆದರೆಂದು ವಂಶಾವಳಿಗಳಿಂದ ತಿಳಿದುಬರುತ್ತದೆ.[೧೮೩] ಎಂ.ಎಸ್.ಪುಟ್ಟನವರು ರಸಸಿದ್ಧರು 'ಮದಕರಿ' ಎಂಬ ಬಿರುದನ್ನು ಕೊಟ್ಟಿದ್ದರೆಂದು, ಅದು ಉಚ್ಚಾರಣೆಯಲ್ಲಿ ಕೆಟ್ಟು 'ಮೆದಕೇರಿ' ಎಂಬ ರೂಪ ಪಡೆಯಿತೆಂದು ಹೇಳಿದ್ದಾರೆ.[೧೮೪]

ಇವರ ಮೂಲದ ಬಗ್ಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ. ಇವರು ಮೊದಲು ಕರ್ನೂಲು ಜಿಲ್ಲೆಯ ಜಡೇಕಲ್ಲುದುರ್ಗ, ಕರಿಮಲೆ, ರಾಮದುರ್ಗದಲ್ಲಿ ನೆಲಸಿ, ನಂತರ ದಾವಣಗೆರೆ ಜಿಲ್ಲೆಯ ಭರಮಸಾಗರದ ಸಮೀಪವಿರುವ ನೀರ್ಥಡಿ ಗ್ರಾಮಕ್ಕೆ ಬಂದು ನೆಲಸಿದರೆಂದು ಹೇಳಲಾಗಿದೆ.[೧೮೫] ಮತ್ತೊಂದು ಹೇಳಿಕೆಯ ಪ್ರಕಾರ ಇವರ ಮನೆದೇವರು

ಓಬಳದೇವರು. ಅಂದರೆ ಅಹೋಬಲನರಸಿಂಹಸ್ವಾಮಿ ಎಂದು ಹೇಳಿರುವುದರಿಂದ ಇವರು ಮೂಲತಃ ಆಂಧ್ರಪ್ರದೇಶದ ಅಹೋಬಲಂ ಪ್ರದೇಶದವರಿರಬೇಕೆಂದು ಅಭಿಪ್ರಾಯಪಡಲಾಗಿದೆ.[೧೮೬] ಚಿತ್ರನಾಯಕನೆಂಬುವನು ಈ ವಂಶದ ಮೂಲಪುರುಷನಾಗಿದ್ದು, ಚಿತ್ರದುರ್ಗ ಎಂಬ ಹೆಸರು ಬರಲು ಇವನೇ ಕಾರಣವೆಂದು, ಆಗ ಕಾಮಗೇತಿ ವಂಶಸ್ಥರು ಚಿತ್ರನಾಯಕರೆಂದು ಯಶೋವಂತರಾದರೆಂದು ಬಖೈರುವಿನಲ್ಲಿ ಉಲ್ಲೇಖವಿದೆ.[೧೮೭] ಇವರು ಶ್ರೀಮನ್ಮಹಾನಾಯಕಾಚಾರ್ಯ, ಕಾಮಗೇತಿ, ಕಸ್ತೂರಿ, ಗಾದ್ರಿಮಲೆ ಹೆಬ್ಬುಲಿ, ಹಗಲುಕಗ್ಗೊಲೆಯ ಮಾನ್ಯ, ಹರಿರಾಯರ ಮರ್ದನ, ಮಲೆನಾಡಿನವರ ಗಂಡ, ಚಂದ್ರಗಾವಿಯ ಛಲದಂಕ, ಭಾರೀನಿಗಳಾಂಕ, ದೊಳಗ್ಗೆವಜ್ಜೀರ ಮುಂತಾದ ಬಿರುದುಗಳನ್ನು ಧರಿಸಿದ್ದರು.[೧೮೮]

ಚಿತ್ರದುರ್ಗದ ಪಾಳೆಯಗಾರರ ಆಳ್ವಿಕೆಯ ಅವಧಿಗೆ ಸಂಬಧಿಸಿದಂತೆ ಅನೇಕ ದ್ವಂದ್ವಗಳಿದ್ದು, ಪ್ರಮುಖವಾಗಿ ೨೧೧, ೨೧೭, ೨೨೪, ೨೬೫, ೨೭೨, ೨೭೬, ೪೧೧, ೪೫೯, ವರ್ಷಗಳೆಂದು ವಿವಿಧ ಕಾಲಾವಧಿಗಳನ್ನು ಹೇಳಲಾಗಿದೆ. ಆದರೆ ಈ ವಂಶದ ಮೊದಲನೆಯ ದೊರೆ ಮತ್ತಿತಿಮ್ಮಣ್ಣನಾಯಕನ ಕಾಲದಿಂದ ಶಾಸನಗಳು ದೊರಕುವುದರಿಂದ ಕ್ರಿ.ಶ.೧೫೪೮ರ ವೇಳೆಗಾಗಲೇ ಈ ವಂಶದ ಆಳ್ವಿಕೆ ಪ್ರಾರಂಭವಾಗಿ ಕ್ರಿ.ಶ.೧೭೭೯ರಲ್ಲಿ ಚಿತ್ರದುರ್ಗ ಹೈದರಾಲಿಯ ವಶವಾಗುವವರೆಗಿನ ಇವರ ಆಳ್ವಿಕೆಯ ಕಾಲಾವಧಿ ೨೩೧ ವರ್ಷಗಾಳಗಿರಬೇಕೆಂದು ಬಿ.ರಾಜಶೇಖರಪ್ಪನವರು ಅಭಿಪ್ರಾಯಪಟ್ಟಿದ್ದಾರೆ.[೧೮೯]

ಈ ಮನೆತನದಲ್ಲಿ ಒಟ್ಟು ಹದಿನಾಲ್ಕು ಜನ ಪಾಳೆಯಗಾರರು ಆಳ್ವಿಕೆ ನಡೆಸಿದ್ದು, ವಿಜಯನಗರದ ಸಂಸ್ಕೃತಿ ಮತ್ತು ಪರಂಪರೆಯನ್ನು ಮುಂದುದುವರೆಸಿದರೆಂದು ಹೇಳಬಹುದು. ಅಲ್ಲದೆ ಪ್ರಾದೇಶಿಕ ಮಟ್ಟದ ಬುಡಕಟ್ಟು ಸಂಸ್ಕೃತಿ ಮತ್ತು ಶಿಷ್ಟ ಸಂಸ್ಕೃತಿಗಳನ್ನು ಸಂಯೋಜಿಸಿ ಸಾಂಸ್ಕೃತಿಕ ಸಂಪರ್ಕವನ್ನು ಸೃಷ್ಟಿಸಿದರು. ಇವರು ವಿದೇಶಿ ತಂತ್ರಜ್ಞರ ನೆರವಿನಿಂದ ಆಯಾಕಟ್ಟಿನ ಸ್ಥಳಗಳ ಕೋಟೆಕೊತ್ತಲುಗಳು, ಬುರುಜುಬತೇರಿಗಳು, ಅಗಳು, ಅಗಸೆ ಬಾಗಿಲು, ದಿಡ್ಡಿಬಾಗಿಲು, ಕಲ್ಲುಕಣಜಗಳು, ನೀರಿನಕೊಳಗಳು, ಚಾವಡಿಗಳು, ಅರಮನೆಗಳು, ಉಯ್ಯಾಲೆ ಮತ್ತು ದೀಪಸ್ತಂಭಗಳು, ಮಂದಿರಗಳು, ಅಂಕಣಗಳು, ಟಂಕಸಾಲೆ, ಕಛೇರಿ, ಸೇನಾನೆಲೆ ಮುಂತಾದವುಗಳನ್ನು ನಿರ್ಮಾಣ ಮಾಡಿ ಚಿತ್ರದುರ್ಗವನ್ನು ಭವ್ಯನಗರಿಯಂತೆ ಮಾರ್ಪಡಿಸಿದರು.[೧೯೦] ಹೀಗೆ ಜಿಲ್ಲೆಯ ಸಾಂಸ್ಕೃತಿಕ ಇತಿಹಾಸದಲ್ಲಿ ವೈವಿಧ್ಯತೆಯನ್ನು ಕಾಪಾಡಿಕೊಂಡು ಬರುತ್ತಾ, ಕರ್ನಾಟಕದ ಪರಂಪರೆಯನ್ನು ಎತ್ತಿಹಿಡಿದರಲ್ಲದೇ, ರಾಜಕೀಯ ಕ್ಷೇತ್ರದಲ್ಲೂ ತಮ್ಮನ್ನು ಗುರುತಿಸಿಕೊಂಡರು.

ಮತ್ತಿತಿಮ್ಮಣ್ಣನಾಯಕ

ಚಿತ್ರದುರ್ಗದ ಪಾಳೆಯಪಟ್ಟನ್ನು ಕಟ್ಟಿದ ಮತ್ತಿತಿಮ್ಮಣ್ಣನಾಯಕ ಸೇಗಲೆಯ ಹನುಮಿನಾಯಕನ ಮಗನಾಗಿದ್ದು, ಮತ್ತಿ ಗ್ರಾಮದಲ್ಲಿ ವಾಸವಾಗಿದ್ದನು.[೯೧] ಸೇಗಲೆ ಮತ್ತು ಮತ್ತಿ ಗ್ರಾಮಗಳು ದಾವಣಗೆರೆ ಜಿಲ್ಲೆಯ ಕಸಬಾ ತಾಲ್ಲೂಕಿನಲ್ಲಿರುವ ಗ್ರಾಮಗಳಾಗಿವೆ. ಇವನು ಚಿಲ್ಲಹಳ್ಳಿಯ ಓಬವ್ವ ಎಂಬ ಕನ್ಯೆಯನ್ನು ವಿವಾಹವಾದನು. ನಂತರ ಕುಟುಂಬಸಮೇತ ಹಡವನಹಾಳಲ್ಲಿ ನೆಲೆಸಿದನು. ಆಗ ವಿಜಯನಗರದ ಅರಸ ತಿರುಮಲರಾಜದೇವ ಅರಸನು ತಿಮ್ಮಣ್ಣನಾಯಕನಿಗೆ ಹೊಳಲ್ಕೆರೆ ಸೀಮೆಯನ್ನು ಅಮರಮಾಗಣಿಯಾಗಿ ನೀಡಿದನು.[೯೨] ನಂತರ ಹಿರಿಯೂರು ಸೀಮೆಯ ಅಧಿಕಾರಿಯಾಗಿ ನೇಮಕಗೊಂಡು ಅಂತಿಮವಾಗಿ ಸದಾಶಿವರಾಯನ ಕಾಲದಲ್ಲಿ ಕ್ರಿ.ಶ.೧೫೪೯ರಲ್ಲಿ ದುರ್ಗದ ನಾಯಕತನವನ್ನು ಪಡೆದು ಆಳಲಾರಂಭಿಸಿದನು.

ಮತ್ತಿತಿಮ್ಮಣ್ಣನಾಯಕನು ಉತ್ತಮ ಆಡಳಿತಗಾರ, ಸಾಹಸಿ ಹಾಗು ಪರಾಕ್ರಮಿಯಾಗಿದ್ದನು. ಇವನಿಗೆ ಚಿನ್ಮೂಲಾದ್ರಿಯಲ್ಲಿ ವಾಸವಾಗಿದ್ದ ಏಳು ಜನ ರಸಸಿದ್ಧರು 'ನಿನಗೆ ಈ ಚಿನ್ಮೂಲಾದ್ರಿಯ ಪ್ರಭುತ್ವ ಮಾಡಲು ಯೋಗವಿದೆ. ನೀನೂ, ನಿನ್ನ ವಂಶದವರು ಅರಿತು ನಡೆದರೆ ಆರು ಪಟ್ಟು, ಮರೆತು ನಡೆದರೆ ಮೂರು ಪಟ್ಟು ಎಂದು ನುಡಿದಾಗ ತಿಮ್ಮಣ್ಣನಾಯಕ ಅವರನ್ನು ಪೂಜಿಸುತ್ತಾ, ನಿತ್ಯವೂ ಹಾಲುಹಣ್ಣು ತಂದುಕೊಡುತ್ತಿದ್ದನು. ನಾಯಕನ ಭಕ್ತಿಗೆ ಮೆಚ್ಚಿದ ರಸಸಿದ್ಧರು ದೆಸೆಕಟ್ಟು, ಧೂಳಿತ, ಸಿದ್ಧಮೂಲಿಕೆ, ಕೈಯಂಬು' ಎಂಬ ಅಮೂಲ್ಯವಾದ ವಸ್ತುಗಳನ್ನು ದಯಾಪಾಲಿಸಿದರು. ಅದರ ಪ್ರಭಾವದಿಂದ ತಿಮ್ಮಣ್ಣನಾಯಕನು ಧರ್ಮದಿಂದ ಆಳುತ್ತಾ ಪ್ರವರ್ಧಮಾನಕ್ಕೆ ಬಂದನೆಂದು ತಿಳಿದುಬರುತ್ತದೆ.[೯೩]

ಮತ್ತಿತಿಮ್ಮಣ್ಣನಾಯಕನ ಪ್ರಾಬಲ್ಯ ಅಥವಾ ಏಳಿಗೆಯನ್ನು ಸಹಿಸದ ವಿಜಯನಗರ ಸಂಸ್ಥಾನದವರು ಸಾಳ್ವನರಸಿಂಗರಾಯನೊಡನೆ ಸೈನ್ಯವನ್ನು ಕಳುಹಿಸಿದಾಗ ಶತ್ರುಗಳನ್ನು ಜಯಿಸಿದನಲ್ಲದೆ, ನರಸಿಂಗರಾಯನ ಪಾಳೆಯದಲ್ಲಿ ನುಗ್ಗಿ ಅಲ್ಲಿದ್ದ ಖಾಸಾ ಕುದುರೆಯನ್ನು ಬಿಚ್ಚಿ ತರುವಾಗ ತನ್ನ ಮುಂಗೈಯನ್ನು ಕಳೆದುಕೊಂಡನು. ಈಚೆಗೆ ಅಪೂರ್ಣವಾಗಿ ದೊರೆತಿರುವ ಕಾಗದದ ಹಸ್ತಪ್ರತಿಯ ದಾಖಲೆಯಿಂದ ಹೊಸ ವಿಚಾರವೊಂದು ತಿಳಿದುಬಂದಿದೆ.[೯೪] ಅದೇನೆಂದರೆ ಈಗಾಗಲೇ ಒಂದು ಪ್ರದೇಶಕ್ಕೆ ಅಧಿಪತಿಯಾಗಿದ್ದ ನರಸಿಂಗರಾಯ ಚಿತ್ರದುರ್ಗ ಪರಿಸರಕ್ಕೂ ಅಧಿಪತಿಯಾಗಲು ಬಯಸಿ, ತಮ್ಮ ಇಬ್ಬರ ರಾಜ್ಯಗಳನ್ನು ಏಕೀಕೃತಗೊಳಿಸಿ ಆಳ್ವಿಕೆ ಮಾಡೋಣವೆಂದು ತಿಮ್ಮಣ್ಣನಾಯಕನಿಗೆ ತಿಳಿಸಿ, ಎರಡೂ ರಾಜ್ಯಗಳಲ್ಲಿ ಇಬ್ಬರ ಕಡೆಯ ದಂಡುಗಳಿರಬೇಕೆಂದು ಇರಿಸಿಕೊಂಡರು. ಚಿತ್ರದುರ್ಗದಲ್ಲಿ ನರಸಿಂಗರಾಯನ ದಂಡಿಗೆ ಅಲ್ಲೀಖಾನ್ ದಳಪತಿಯಾಗಿದ್ದನು. ಈ ಸಂದರ್ಭದಲ್ಲಿ ನರಸಿಂಗರಾಯನ

ಅಧೀನದಲ್ಲಿದ್ದ ಕಲ್ಬುರ್ಗಿ ಕೈತಪ್ಪಿ ಹೋದಾಗ, ಅದನ್ನು ಮರಳಿ ಪಡೆಯಲು ಅಲ್ಲೀಖಾನ್ ಮತ್ತು ತಿಮ್ಮಣ್ಣನಾಯಕನಿಗೆ ದಂಡು ತೆಗೆದುಕೊಂಡು ಬರಲು ಪತ್ರ ಬರೆದಾಗ, ಅಲ್ಲೀಖಾನ್ ಹೋಗದೆ ಚಿತ್ರದುರ್ಗದಲ್ಲಿಯೇ ಉಳಿದನು. ಆಗ ತಿಮ್ಮಣ್ಣನಾಯಕನು ಹೋಗಿ ಕಲ್ಬುರ್ಗಿ ಕೋಟೆಯನ್ನು ಗೆದ್ದುಕೊಟ್ಟನು. ಇದರಿಂದ ವಿಜಯನಗರದ ಅರಸರ ಮೆಚ್ಚುಗೆಗೆ ಪಾತ್ರನಾಗಿ 'ಹಗಲುಕಗ್ಗೊಲೆಯಮಾನ್ಯ' ಎಂಬ ಬಿರುದನ್ನು ಧರಿಸಿದನಲ್ಲದೆ, ಚಿನ್ನದ ಮೂಲಾಮಿನ ದೊಡ್ಡ ಶಂಖ, ಚಕ್ರದ ಜೊತೆಗೆ ಒಂದು ಅಂದಳ, ಒಂದು ಮೊಸಳೆ ಬಾಯಿಜೋಡು, ಒಂದು ಫಿರಂಗಿ, ಒಂದು ಸತ್ತಿಗೆ, ಒಂದು ಚಿನ್ನದ ಹಸ್ತ, ಒಂದು ಹಗಲದೀವಿಟಿಗೆ ಮತ್ತು ಅನೇಕ ಉಡುಗೊರೆಗಳನ್ನು ಪಡೆದನು.[೧೯೫]

ಬಸವಾಪಟ್ಟಣದ ಕೆಂಗಣ್ಣನಾಯಕನಿಗೂ, ಮತ್ತಿತಿಮ್ಮಣ್ಣನಾಯಕನಿಗೂ ನಡೆದ ಯುದ್ಧದಲ್ಲಿ ತಿಮ್ಮಣ್ಣನಾಯಕ ಸೆರೆಸಿಕ್ಕಾಗ, ಹರಪನಹಳ್ಳಿ ಪಾಳೆಯಗಾರ ದಾದಯ್ಯನಾಯಕನ ಸಹಾಯ ಯಾಚಿಸಿದನು. ದಾದಯ್ಯನಾಯಕ ಪ್ರಬಲರಾದ ಚಿತ್ರದುರ್ಗ ಪಾಳೆಯಗಾರರ ಸ್ನೇಹ ಪಡೆಯುವ ಸ್ವಾರ್ಥದಿಂದ, ತನ್ನ ಕಿರಾತಪಡೆಯ ಸಹಾಯದಿಂದ ಕೆಂಗಣ್ಣನಾಯಕನನ್ನು ದುರ್ಗದಿಂದ ಓಡಿಸಿ, ಕೋಟೆಯನ್ನು ಶತ್ರುಗಳಿಂದ ರಕ್ಷಿಸಿದನು. ಈ ಸ್ನೇಹದ ಸಂಕೇತವಾಗಿ ತಿಮ್ಮಣ್ಣನಾಯಕ ದಾದಯ್ಯನಾಯಕನನ್ನು ಗೌರವಿಸಿ, ತನ್ನ ಮಗಳು ಹೊನ್ನನಾಗತಿಯನ್ನು ಕೊಟ್ಟು ವಿವಾಹ ಮಾಡಿ, ಉಚ್ಚಂಗಿದುರ್ಗದ ಕೋಟೆಯನ್ನು ಉಡುಗೊರೆಯಾಗಿ ನೀಡಿದನು.[೧೯೬] ರಾಯದುರ್ಗದ ಉಪ್ಪಾರರು ಏಳುಗುಡ್ಡಗಳನ್ನು ಬಳಸಿಕೊಂಡು ಮೋಟಾಲದ ಕಣಿವೆ ಮಾರ್ಗವಾಗಿ ಅಲಂಕರಿಸಿ ತಮ್ಮ ೩೦೦ ಕೋಣಗಳೊಂದಿಗೆ ಹೋಗುತ್ತಿದ್ದುದನ್ನು ಕಂಡ ತಿಮ್ಮಣ್ಣನಾಯಕ, ತನ್ನ ದಂಡಿನವರಿಂದ ಕೋಣಗಳನ್ನು ಕೊಳ್ಳೆಹೊಡೆದು ತಂದು ಚಿತ್ರದುರ್ಗ ಕೋಟೆಯಲ್ಲಿ ಕಟ್ಟಿ ಉಪ್ಪಾರರನ್ನು ಸೆರೆಹಿಡಿದನು. ಆಗ ಚಿತ್ರದುರ್ಗದ ಉಪ್ಪಾರತಿಮ್ಮಣ್ಣ ಅವರನ್ನು ಬಂಧನದಿಂದ ಬಿಡಿಸಿದ. ಅಲ್ಲದೆ ಉಪ್ಪಾರರು ಕಲ್ಲುಕೆಲಸದಲ್ಲಿ ನಿಪುಣರಾಗಿದ್ದರು. ಹಾಗಾಗಿ ತಿಮ್ಮಣ್ಣನಾಯಕ ತನ್ನ ರಕ್ಷಣೆಗೆ ಬಳ್ಳಾರಿ ಪ್ರಾಂತ್ಯದ ಉಪ್ಪಾರರನ್ನು, ಚತುರರಾದ ಕಲ್ಲುಕುಟಿಗರನ್ನು, ಶಿಲ್ಪಶಾಸ್ತ್ರಜ್ಞರನ್ನು ಬಳಸಿಕೊಂಡು ಕೋಟೆಗಳನ್ನು, ಕಲ್ಲುಕಂಬಗಳು, ಉಯ್ಯಾಲೆಗಂಬಗಳು, ದೇವಾಲಯಗಳು, ಶಿಲಾವಿಗ್ರಹಗಳು ಮುಂತಾದವುಗಳನ್ನು ನಿರ್ಮಿಸಿದನೆಂದು ತಿಳಿದುಬರುತ್ತದೆ.[೧೯೭] ಹೀಗೆ ಮತ್ತಿತಿಮ್ಮಣ್ಣನಾಯಕ ಬಸವಾಪಟ್ಟಣ, ಹರಪನಹಳ್ಳಿ, ರಾಯದುರ್ಗ ಪಾಳೆಯಗಾರರೊಂದಿಗೆ ಸಂಬಂಧ ಹೊಂದಿದ್ದನೆಂದು ತಿಳಿದುಬರುತ್ತದೆ.

ಮತ್ತಿತಿಮ್ಮಣ್ಣನಾಯಕ ಹೊಳಲ್ಕೆರೆಯ ಗೋಪಾಲಕೃಷ್ಣ, ಹಿರಿಯೂರಿನ ವೀರಭದ್ರ, ಒನಕೆಕಿಂಡಿಯ ಹನುಮಂತ, ಏಕನಾಥೇಶ್ವರಿ ದೇವಾಲಯಗಳನ್ನು, ಮೇಲುದುರ್ಗದಲ್ಲಿ

ಅರಮನೆಯನ್ನು, ಅದರ ಸುತ್ತಿನ ಕೋಟೆ, ನೆಲ್ಲಿಕಾಯಿ ಸಿದ್ದಪ್ಪನಗುಡ್ಡದ ಸುತ್ತಿನ ಕೋಟೆ, ರಣಮಂಡಲದ ಸುತ್ತಿನಕೋಟೆ, ಒನಕೆಕಿಂಡಿಬಾಗಿಲ ಸುತ್ತಿನಕೋಟೆ ಮುಂತಾದುವುಗಳನ್ನು ಕಟ್ಟಿಸಿದನು. ಚಿತ್ರದುರ್ಗ ತಾಲ್ಲೂಕಿನ ಹಿರೇಗುಂಟನೂರು ಮತ್ತು ಹುಲ್ಲೂರಿನ ಕ್ರಿ.ಶ.೧೫೪೯ ರ ಶಾಸನಗಳು, ಚಿತ್ರಹಳ್ಳಿ ಸೀಮೆಯ ಪಾಂಚಾಳರಿಗೆ(ವಿಶ್ವಕರ್ಮ) ವಿಧಿಸಿದ ಅರವಣದ ರೊಕ್ಕವನ್ನು ಮನ್ನಾ ಮಾಡಿದನೆಂದು ತಿಳಿಸುತ್ತವೆ.[೧೯೮] ಹಾಗೆಯೆ ಹಿರಿಯೂರಿನ ವೀರಭದ್ರ ದೇವಾಲಯದ ಮುಖ್ಯಸ್ಥನಿಗೆ ಮತ್ತು ಬ್ರಾಹ್ಮಣನಿಗೆ ದತ್ತಿಯನ್ನು ನೀಡಿ, ದುರಸ್ತಿ ಕಾರ್ಯವನ್ನು ಕೈಗೊಂಡು, ಕಂದಾಯವನ್ನು ಮಾಫಿ ಮಾಡಿದನೆಂದು, ಕ್ರಿ.ಶ.೧೫೫೬ರಲ್ಲಿ ಹಿರಿಯೂರಿನ ತಮ್ಮಡಿಗಳಿಗೆ ಮಾನ್ಯಗಳನ್ನು ನೀಡಿದನೆಂದು, ಅಲ್ಲದೆ ಗ್ರಾಮಾಧಿಕಾರಿಗಳು ಮಾಡುತ್ತಿದ್ದ ಸೇವೆಗೆ ಇಂತಹ ಇನಾಮುಗಳನ್ನು ನೀಡುತ್ತಿದ್ದನು ಎಂಬ ವಿಚಾರ ತಿಳಿದುಬರುತ್ತದೆ.[೧೯೯] ಹೊಳಲ್ಕೆರೆ ಸೀಮೆಯನ್ನು ತನ್ನ ಅಳಿಯ ಗುಲ್ಯಪ್ಪನಾಯಕನಿಗೆ ಉಂಬಳಿಯಾಗಿ ನೀಡಿದನು. ಹಾಗು ಗೋಪಾಲಕೃಷ್ಣ ದೇವಾಲಯಕ್ಕೆ ಅರ್ಚಕನನ್ನು ನೇಮಿಸಿದ ವಿಚಾರ ಶಾಸನವೊಂದರಿಂದ ತಿಳಿದುಬರುತ್ತದೆ.[೨೦೦]

ಹೀಗೆ ಏಳಿಗೆಗೆ ಬಂದ ಮತ್ತಿತಿಮ್ಮಣ್ಣನಾಯಕನನ್ನು ಸಹಿಸದ ಜನರು, ಅವನ ಮೇಲೆ ಇಲ್ಲಸಲ್ಲದ ಅಪವಾದಗಳನ್ನು ಹೊರಿಸಿದಾಗ, ವಿಜಯನಗರದ ಅರಸರು ಬೇಸರಗೊಂಡು ಸೆರೆಯಲ್ಲಿಟ್ಟರು. ಕೊನೆಗೆ ಅಲ್ಲಿಯೇ ಮರಣ ಹೊಂದಿದನು. ನಂತರ ಅವನ ಮಗ ಓಬಣ್ಣನಾಯಕ ತನ್ನ ತಂದೆಯ ಶವವನ್ನು ದಹನ ಮಾಡಿ ತುಂಗಾಭದ್ರ ನದಿಯನ್ನು ಕಾಣಿಸಿ ಉತ್ತರ ಕ್ರಿಯಾದಿಗಳನ್ನು ಮಾಡಿದ ಮೇಲೆ, ತಂದೆಯ ಅಸ್ತಿಯನ್ನು ತೆಗೆದುಕೊಂಡು ಯಾರ ಕಣ್ಣಿಗೂ ಬೀಳದಂತೆ ತಪ್ಪಿಸಿಕೊಂಡು ಚಿತ್ರದುರ್ಗಕ್ಕೆ ಬರುವಾಗ, ಮತ್ತಿಗ್ರಾಮದಲ್ಲಿ ಗುಡ್ಡೆ ಮಾಡಿಸಿದನೆಂದು ತಿಳಿದುಬರುತ್ತದೆ.[೨೦೧]

ಓಬಣ್ಣನಾಯಕ

ಮತ್ತಿತಿಮ್ಮಣ್ಣನಾಯಕನ ಮರಣದ ನಂತರ ವಿಜಯನಗರದ ಅರಸ ಅಳಿಯ ರಾಮರಾಯನಿಂದ ಕ್ರಿ.ಶ.೧೫೬೮ರಲ್ಲಿ ನಾಯಕತನ ಪಡೆದ ಓಬಣ್ಣನಾಯಕ ಕ್ರಿ.ಶ.೧೬೦೨ ರವರೆಗೆ ಆಳ್ವಿಕೆ ಮಾಡಿದನು. ಇವನೂ ಸಹ ತನ್ನ ತಂದೆಯಂತೆ ರಸಸಿದ್ಧರ ಭಕ್ತನಾಗಿದ್ದು, ಅವರಿಂದ 'ಮೆದಕೇರಿನಾಯಕ' ಅಥವಾ 'ಗಡ್ಡದ ಮದಕರಿನಾಯಕ' ಎಂಬ ಬಿರುದನ್ನು ಪಡೆದನು.[೨೦೨] ಅಲ್ಲದೆ 'ಗಾದ್ರಿಮಲೆಹೆಬ್ಬುಲಿ' ಎಂಬ ಬಿರುದನ್ನೂ ಧರಿಸಿದ್ದನು. ಇವನ ಆಡಳಿತದ ಅವಧಿಯಲ್ಲಿ ವಿಜಯನಗರ ಸಾಮ್ರಾಜ್ಯ ಪತನಗೊಂಡು ಚಿತ್ರದುರ್ಗ ಸ್ವತಂತ್ರ ರಾಜ್ಯವಾಯಿತು. ಹಾಗಾಗಿ ಈ ಪಾಳೆಯಗಾರರ ಸ್ವತಂತ್ರ ಆಳ್ವಿಕೆ ಇವನಿಂದ ಪ್ರಾರಂಭವಾಯಿತೆಂದು ಗುರುತಿಸಲಾಗಿದೆ. ಇವನು ಗುಂಟನೂರು ಮಲ್ಲಪ್ಪನನ್ನು ಪ್ರಧಾನಿಯಾಗಿ ನೇಮಿಸಿದನು.

ಓಬಣ್ಣನಾಯಕನಿಗೆ ಕನಕಗಿರಿಯ ರಂಗಪ್ಪನಾಯಕನ ಮಗಳು ಕನಕವ್ವನಾಗತಿಯೊಂದಿಗೆ ವಿವಾಹವಾಯಿತು. ಈಚೆಗೆ ದೊರೆತಿರುವ ಶಾಸನದಿಂದ, ಇವನಿಗೆ ನಾರಸಿಂಹನಾಯಕ ಎಂಬ ಮಗನಿದ್ದು, ಅವನಿಗೆ ಚಿಕ್ಕಕೋನಮ್ಮ ಎಂಬುವಳೊಂದಿಗೆ ವಿವಾಹವಾಗಿ ದೊಡ್ಡಣ್ಣ ಎಂಬ ಮಗನಿದ್ದನೆಂದು, ತಂದೆ ಮಕ್ಕಳಿಬ್ಬರೂ ಅಕಾಲ ಮರಣಕ್ಕೆ ತುತ್ತಾದರೆಂದು, ಗಾದ್ರಿಮಲೆ ಹೆಬ್ಬುಲಿ ಎಂಬ ಬಿರುದು ಕಸ್ತೂರಿರಂಗಪ್ಪನಾಯಕನಿಗೂ ಮೊದಲೇ ಓಬಣ್ಣನಾಯಕನಿಗೆ ಇತ್ತೆಂದು ಹಾಗು ಇವನೇ ಒಂದನೆಯ ಮದಕರಿನಾಯಕನೆಂದು ತಿಳಿದುಬರುತ್ತದೆ.[೨೦೩] ಇವನು ತನ್ನ ಉಂಬಳಿ ಗ್ರಾಮವಾದ ಹುಲ್ಲೂರಿನಲ್ಲಿ ಮತ್ತು ಚಿತ್ರದುರ್ಗದಲ್ಲಿ ಕೆರೆಗಳನ್ನು ನಿರ್ಮಿಸಿದನು.[೨೦೪] ಕ್ರಿ.ಶ.೧೫೯೧ರಲ್ಲಿ ಹನುಮಂತದೇವರ ಗುಡಿಯನ್ನು ಕಟ್ಟಿಸಿದ್ದಕ್ಕಾಗಿ ಹಾಗು ನಾಡಿನ ಜನತೆಗೆ ಅಪಾರಸೇವೆ ಸಲ್ಲಿಸಿದ್ದಕ್ಕಾಗಿ ಒಬ್ಬ ಬಡಗಿ ಹಾಗು ಕಲ್ಲುಕುಟಿಗನಿಗೆ ಭೂಮಿಯನ್ನು ಇನಾಮಾಗಿ ಕೊಟ್ಟನು.[೨೦೫] ಇವನು ಕ್ರಿ.ಶ.೧೬೦೩ರಲ್ಲಿ ಮರಣ ಹೊಂದಿದಾಗ, ಮಗ ಕಸ್ತೂರಿರಂಗಪ್ಪನಾಯಕ ಹಡವನಹಾಳಲ್ಲಿ ಸಮಾಧಿ ಕಟ್ಟಿಸಿದನು. ಇವನ ಜೊತೆ ಐದು ಜನ ನಾಗತಿಯರು ಸಹಗಮನ ಹೊಂದಿ, ಇಬ್ಬರು ನಾಗತಿಯರು ಮಾತ್ರ ಉಳಿದುಕೊಂಡರು.[೨೦೬]

ಒಂದನೆ ಕಸ್ತೂರಿರಂಗಪ್ಪನಾಯಕ

ಓಬಣ್ಣನಾಯಕನ ಮರಣದ ನಂತರ ಅಧಿಕಾರಕ್ಕೆ ಬಂದ ಒಂದನೆಯ ಕಸ್ತೂರಿರಂಗಪ್ಪ ನಾಯಕ ಕ್ರಿ.ಶ.೧೬೦೨ರಿಂದ ೧೬೫೨ರವರೆಗೆ ಆಳ್ವಿಕೆ ಮಾಡಿದನು. ಇವನು ಸ್ವತಂತ್ರವಾಗಿ ರಾಜ್ಯಭಾರ ಮಾಡಿದ ವೀರ, ಪರಾಕ್ರಮಿ ಹಾಗು ಮುತ್ಸದ್ಧಿಯೂ ಆಗಿದ್ದನು. ಹಿರಿಯೂರು ತಾಲ್ಲೂಕಿನ ಚಿಲ್ಲಹಳ್ಳಿಯ ತಿಮ್ಮವ್ವನಾಗತಿಯನ್ನು ವಿವಾಹವಾದನು. ಇವನ ಆಳ್ವಿಕೆಯ ಕಾಲದಲ್ಲಿ ಸುತ್ತಮುತ್ತಲಿನ ನಾಯಕರ ಘರ್ಷಣೆಗಳು ಹೆಚ್ಚಾಗಿದ್ದವು. ಕ್ರಿ.ಶ.೧೬೦೫ರಲ್ಲಿ ತಾನು ಕಟ್ಟಿಸಿದ ರಂಗಪಟ್ಟಣಕ್ಕೆ ತರಿಕೆರೆಯ ಹನುಮಪ್ಪನಾಯಕನು ಮುತ್ತಿಗೆ ಹಾಕಿ ವಶಪಡಿಸಿಕೊಂಡಾಗ ಹೆಂಡತಿಯೊಡನೆ ದುರ್ಗಕ್ಕೆ ಬಂದನು. ಆಗ ಕ್ರಿ.ಶ.೧೬೩೩ರಲ್ಲಿ ದುರ್ಗದ ಅರಮನೆಯನ್ನು, ಅದರ ಸುತ್ತಿನ ಕೋಟೆಯನ್ನು ಕಟ್ಟಿಸಿದನು. ಆದರೆ ತರಿಕೆರೆಯವರು ದುರ್ಗಕ್ಕೂ ಮುತ್ತಿಗೆ ಹಾಕಿದಾಗ, ಕಂದವಾಡಿ ಎಂಬಲ್ಲಿ ನಡೆದ ಯುದ್ಧದಲ್ಲಿ ಹನುಮಪ್ಪನಾಯಕನನ್ನು ಸೋಲಿಸಿ ದೇವಪುರಕೋಟೆ, ಜಾನಕಲ್ಲುದುರ್ಗ, ಹೊಳಲ್ಕೆರೆ, ಮಾಯಕೊಂಡ, ಚಿತ್ರಹಳ್ಳಿ ಗಡಿಗಳನ್ನೆಲ್ಲಾ ಪುನಃ ವಶಪಡಿಸಿಕೊಂಡು, 'ಗಾದ್ರಿಮಲೆಹೆಬ್ಬುಲಿ' ಎಂಬ ಬಿರುದನ್ನು ಪಡೆದನು.[೨೦೭] ಅಲ್ಲದೆ ಹಮಪ್ಪನಾಯಕ ಮತ್ತು ಅವನ ಹದಿನೈದು ಜನ ಸಹಚರರನ್ನು ಸೆರೆಹಿಡಿದನು. ಆದರೆ ಈ ಸಮಯದಲ್ಲಿ ಮದಕರಿಯಣ್ಣ (ಸರ್ಜಿರಾಯ) ಎಂಬ ಮಗನ ಜನನದಿಂದ

ಸಂತೋಷಗೊಂಡ ರಂಗಪ್ಪನಾಯಕ ಸೆರೆಯಾಳುಗಳನ್ನು ಬಿಡುಗಡೆಗೊಳಿಸಿದನು. ಚಿತ್ರಹಳ್ಳಿಯ ನೀಲಯ್ಯನನ್ನು ಯುದ್ಧದಲ್ಲಿ ಸೋಲಿಸಿ ಕೋಟೆಯನ್ನು ವಶಪಡಿಸಿಕೊಂಡು, ನೀಲಯ್ಯನನ್ನು ಸೆರೆಹಿಡಿದು ಹಲ್ಲುಕೀಳಿಸಿ ತಲೆ ಹೊಡೆಸಿದನು.[೨೦೮]

ಕ್ರಿ.ಶ.೧೬೩೭ರಲ್ಲಿ ಹರಪನಹಳ್ಳಿಯವರನ್ನು, ಕ್ರಿ.ಶ.೧೬೩೮ರಲ್ಲಿ ಸೀರ್ಯಾದ ರಂಗಪ್ಪನಾಯಕನನ್ನು ಸೋಲಿಸಿದನು. ಸೀರ್ಯಾದ ಸುಬೇದಾರ ಇವನಿಗೆ 'ತಲ್ಲಾರಿ' 'ನಾಡಗೌಡ' ಎಂಬ ಬಿರುದುಗಳನ್ನು ನೀಡಿದನು. ಇವನ ಆಳ್ವಿಕೆಯ ಕಾಲಾವಧಿಯಲ್ಲಿ ರಾಜ್ಯವು ಬಹಳ ವಿಶಾಲವಾಗಿ ಬೆಳೆದು ಇಪ್ಪತ್ತೆರಡು ಸೀಮೆಗಳನ್ನೊಳಗೊಂಡಿದ್ದು, ಅವುಗಳಿಂದ ಸುಮಾರು ೬೫೦೦೦ ಪಗೋಡಗಳಷ್ಟು ಆದಾಯ ಬರುತ್ತಿತ್ತು. ಚಿತ್ರದುರ್ಗದ ಕೂಡಲಿ ಶೃಂಗೇರಿಮಠದ ಬಳಿ ಹೊನ್ನಮ್ಮನ ಗುಡಿ ಹತ್ತಿರ ಇರುವ ಒಂದು ಕಂಬದ ಮೇಲೆ ಕೆಲವು ಅಕ್ಷರಗಳಿದ್ದು, ಚಿತ್ರದುರ್ಗದ ಪಾಳೆಯಗಾರರಲ್ಲಿ ಒಬ್ಬನಾದ ಕಸ್ತೂರಿರಂಗಪ್ಪನಾಯಕ ಕ್ರಿ.ಶ.೧೬೦೫ರಲ್ಲಿ ಒಂದು ಬಾಗಿಲನ್ನು ಕಟ್ಟಿಸಿದನೆಂದು ನಮೂದಿಸಲಾಗಿದೆ. ಈ ಬಾಗಿಲು ಚಿತ್ರದುರ್ಗದ ಏಳನೆಯ ಸುತ್ತಿನ ಕೋಟೆಯ ಪೂರ್ವದಿಕ್ಕಿನ ಮಹಾದ್ವಾರವಾದ ರಂಗಯ್ಯನ ಬಾಗಿಲಿರಬೇಕೆಂದು ಅಭಿಪ್ರಾಯಪಡಲಾಗಿದೆ.[೨೦೯]

ಹರ್ತಿಕೋಟೆಯ ಕಲ್ಲುದೇವರ ಗುಡಿ ಬಯಲಿನಲ್ಲಿ ಬಹಳ ಹಿಂದೆ ಕೋಟೆ ನಿರ್ಮಿತಗೊಂಡಿದ್ದು, ಅದನ್ನು ಕಸ್ತೂರಿರಂಗಪ್ಪನಾಯಕನ ಕೋಟೆಯೆಂದು ಕರೆಯುತ್ತಿದ್ದರೂ, ಅದನ್ನು ಈಗ ಒಪ್ಪುವುದು ಕಷ್ಟವೆನಿಸುತ್ತದೆ. ಒಂದನೆಯ ಅಥವಾ ಎಡನೆಯ ಕಸ್ತೂರಿರಂಗಪ್ಪನಾಯಕರು ಚಿತ್ರದುರ್ಗದಿಂದ ನಿಡುಗಲ್ಲಿಗೆ ಪ್ರಯಾಣ ಮಾಡುವಾಗ ಈ ಕೋಟೆಯಲ್ಲಿ ತಂಗಿ ನಂತರ ಪ್ರಯಾಣ ಮುಂದುವರೆಸುತ್ತಿದ್ದರಂತೆ. ಆದರೆ ಈ ವೃತ್ತಾಂತಗಳಿಗೆ ಸ್ಥಳೀಯರು ಹೇಳುವ ಕತೆಗಳನ್ನು ಬಿಟ್ಟರೆ ಬೇರೆ ಯಾವುದೇ ಲಿಖಿತ ಆಧಾರಗಳಾಗಲಿ, ಅಥವಾ ಸ್ಮಾರಕಗಳಾಗಲಿ ಇನ್ನು ಗಮನಕ್ಕೆ ಬಂದಿಲ್ಲ.[೨೧೦] ಇವನ ಮಗ ಸರ್ಜೆರಾಯ ಅಕಾಲ ಮರಣ ಹೊಂದಿದ್ದರಿಂದ ಅದೇ ಕೊರಗಿನಲ್ಲಿಯೇ ಕ್ರಿ.ಶ.೧೬೫೨ರಲ್ಲಿ ಮರಣ ಹೊಂದಿದನು. ಇವನ ದೇಹವನ್ನು ಅರಮನೆಯಲ್ಲಿ ದಹನ ಮಾಡಿದರು. ಈತನ ಏಳು ಜನ ಹೆಂಡತಿಯರು ಸಹಗಮನ ಮಾಡಿ, ಐದು ಜನರು ಉಳಿದುಕೊಂಡರು.[೨೧೧]

ಇಮ್ಮಡಿ ಮದಕರಿನಾಯಕ

ಕಸ್ತೂರಿರಂಗಪ್ಪನಾಯಕ ಜೀವಂತವಿರುವಾಗಲೆ ಹಿರಿಯ ಮಗ ಸರ್ಜೆರಾಯ ಮತ್ತು ಎರಡನೆಯ ಮಗ ಕುಮಾರಪ್ಪ ಅಕಾಲ ಮರಣ ಹೊಂದಿದ್ದರಿಂದ, ಮೂರನೆಯ ಮಗನಾದ ಇಮ್ಮಡಿ ಮದಕರಿನಾಯಕನಿಗೆ ಕ್ರಿ.ಶ.೧೬೫೨ರಲ್ಲಿ ಪಟ್ಟಕಟ್ಟಲಾಯಿತು. ಇದಕ್ಕೆ ನಿದರ್ಶನವಾಗಿ

ಹುಲ್ಲೂರಿನ ಶ್ರೀವೀರಭದ್ರಸ್ವಾಮಿ ದೇವಾಲಯದಲ್ಲಿ ಒಂದು ಶಾಸನವಿದೆ. ಇವನಿಗೆ ಜಡೇಕಲ್ಲುದುರ್ಗದ ಗೌರವ್ವನಾಗತಿಯೊಂದಿಗೆ ವಿವಾಹವಾಯಿತು. ಈತನ ಆಳ್ವಿಕೆಯ ಅವಧಿಯಲ್ಲಿ ಹರಾಜಕತೆಯ ಪರಿಸ್ಥಿತಿ ತಲೆದೋರಿತು. ತರಿಕೆರೆಯ ಪಾಳೆಯಗಾರರಾದ ಚಿಕ್ಕಹನುಮಪ್ಪನಾಯಕ ಮತ್ತು ಪಟ್ಟಾಭಿರಾಮನಾಯಕರು ಹೊರೆಕೆರೆದೇವರಪುರದ ಕೋಟೆಗೆ ಮುತ್ತಿಗೆ ಹಾಕಿದಾಗ, ಛಲದಂಕನೆಂಬ ಕುದುರೆಯೇರಿ ತರಿಕೆರೆಯ ದಂಡನ್ನು ಸೋಲಿಸಿದನು. ಈ ವಿಜಯದ ಸಂಕೇತವಾಗಿ ಕೆಳಗಿನ ಅರಮನೆ, ಗಾರೆಬಾಗಿಲು, ಅದರ ಸುತ್ತಲಿನ ಕೋಟೆ, ಬುರುಜು, ರಾಮದೇವರ ಗುಡಿಯ ಹಿಂದಿನ ಕೋಟೆ, ಕಾಮಗೇತಿ ತಿಮ್ಮಣ್ಣನಾಯಕನ ಅರಮನೆಯ ಹಿಂದಿನ ಮದ್ದಿನ ಕಣಜ, ತುಪ್ಪದ ಕಣಜ ಹಾಗು ಏಕನಾಥಮ್ಮನ ಗುಡಿ (ದುರಸ್ತಿ) ಮುಂತಾದುವುಗಳನ್ನು ಕಟ್ಟಿಸಿದನು. ಅಲ್ಲದೆ ಗುಡೇಕೋಟೆ, ನನ್ನಿವಾಳ, ಐಮಂಗಲ ಹಾಗು ಹಿರಿಯೂರಿನ ಕೋಟೆಗಳನ್ನು ವಶಪಡಿಸಿಕೊಂಡನು.

ಇಮ್ಮಡಿಮದಕರಿನಾಯಕನಿಗೆ ಎಷ್ಟು ದಿನಗಳಾದರೂ ಮಕ್ಕಳಾಗದಿದ್ದಾಗ, ಸಂತಾನಕ್ಕಾಗಿ ಉಚ್ಚಂಗಿ ದೇವರಿಗೆ ಹರಿಕೆ ಹೊತ್ತು ಹೆಣ್ಣು ಸಂತಾನ ಪಡೆದನು. ಆದರೆ ಮಗಳಾದ ಕೆಂಚವ್ವ ಅಕಾಲ ಮರಣ ಹೊಂದಿದಳು. ಅವಳ ನೆನಪಿಗಾಗಿ ಒಂದು ಕೆರೆ ಹಾಗು ತನ್ನ ತಂದೆ–ತಾಯಿಯರ ನೆನಪಿಗಾಗಿ ಜಿನಗಿಹಳ್ಳಕ್ಕೆ ಅಡ್ಡಕಟ್ಟೆಯನ್ನು ಕಟ್ಟಿಸಿದನು.[೨೧೨] ಇವನಿಗೆ ಸಂಬಂಧಿಸಿದ ಅನೇಕ ಶಾಸನಗಳು ಜಿಲ್ಲೆಯಲ್ಲಿ ದೊರಕಿವೆ. ಡಾ.ಎಂ.ಎಚ್.ಕೃಷ್ಣರವರು ಚಿತ್ರಸಮೇತ ಪ್ರಕಟಿಸಿರುವ ತಾಮ್ರಶಾಸನವೊಂದು ಚಿತ್ರದುರ್ಗದ ರಾಜ್ಯ ಪುರಾತತ್ವ ವಸ್ತುಸಂಗ್ರಹಾಲಯದಲ್ಲಿದ್ದು, ಇದೊಂದು ದಾನಶಾಸನವಾಗಿದೆ. ಮೂವತ್ತೊಂದು ಸಾಲುಗಳ ಈ ಶಾಸನವನ್ನು ಮರುಪರಿಶೀಲಿಸಿದಾಗ ಮೂವತ್ತಕ್ಕೂ ಹೆಚ್ಚು ಕಡೆ ಓದಿಕೆಯಲ್ಲಿ ವ್ಯತ್ಯಾಸವಾಗಿರುವುದು ಕಂಡುಬಂದಿದೆ. ಅಲ್ಲದೆ ಕನ್ನಡ ಪಾಠಕ್ಕೂ ರೋಮನ್ ಪಾಠಕ್ಕೂ ಕೆಲವೆಡೆ ವ್ಯತ್ಯಾಸವಿರುವುದು ಸಹ ಕಂಡುಬಂದಿದೆ.[೨೧೩]

ಚಿತ್ರದುರ್ಗ ಸಂಸ್ಥಾನದ ಚಿತ್ರಹಳ್ಳಿ ಸೀಮೆಯ ಹಿರೇಗುಂಟನೂರು ಮಾಗಣೆಗೆ ಸೇರಿದ ಕಡ್ಲೆಗುದ್ದು ಗ್ರಾಮದಲ್ಲಿ ಅಗ್ರಹಾರವನ್ನು ಸ್ಥಾಪಿಸಿ, ಅದನ್ನು ಕ್ಷಾತ್ರಭಟ್ಟರ ವಂಶಜನಾದ ತಿಮ್ಮಪ್ಪನಿಗೆ ವಹಿಸಿಕೊಟ್ಟು, ಜೊತೆಗೆ ಆ ಗ್ರಾಮದ ಆದಾಯವನ್ನು ಅಗ್ರಹಾರದ ಅಭಿವೃದ್ಧಿಗೆ ಬಿಟ್ಟುಕೊಟ್ಟು ಶಿಲಾಶಾಸನ ಮತ್ತು ತಾಮ್ರಪಟ ಶಾಸನಗಳನ್ನು ಬರೆಯಿಸಿದನು.[೨೧೪] ತನ್ನ ಪಟ್ಟದನಾಗತಿ ಚಿಕ್ಕಮ್ಮಳ ಹೆಸರಿನಲ್ಲಿ ಕಟ್ಟೆ ಬಸವಯ್ಯನ ಮಗ ಕೆಂಚಯ್ಯನ ಮುಖಾಂತರ ನೆಲ್ಲಿಕಟ್ಟೆಯಲ್ಲಿ ಕೆರೆಯೊಂದನ್ನು ಕಟ್ಟಿಸಿದನು.[೨೧೫] ಗಳ್ಳಿಲೋರ ಚೆಂದಲ್ಲಯ್ಯನು ಭರಮಸಮುದ್ರದ ಕೋಟೆಯನ್ನು ಕಟ್ಟಿಕೊಟ್ಟಿದ್ದಕ್ಕೆ ಮನಸೋತು ಕೋಟೆಯಲ್ಲಿಯೇ ಅವನು ಶಾಶ್ವತವಾಗಿ ವಾಸವಾಗಿರುವಂತೆ ಏರ್ಪಾಟು ಮಾಡಿದನು.[೨೧೬]

ಹೀಗೆ ಈತನ ಕಾಲದಲ್ಲಿ ಚಿತ್ರದುರ್ಗ ಸಂಸ್ಥಾನಕ್ಕೆ ಅತೀ ಹೆಚ್ಚಿನ ಆದಾಯ ಬರುತ್ತಿತ್ತು. ಇವನು ಕ್ರಿ.ಶ.೧೬೭೪ರಲ್ಲಿ ಮರಣ ಹೊಂದಿದಾಗ ಶವವನ್ನು ಅರಮನೆಯಲ್ಲಿಯೆ ದಹನ ಮಾಡಿದರು. ಇವನೊಂದಿಗೆ ಇಪ್ಪತ್ತೇಳು ಜನ ಹೆಂಡತಿಯರು ಸಹಗಮನ ಮಾಡಿ, ಮೂರು ಜನ ಮಾತ್ರ ಉಳಿದರು.[೨೧೭] ಆದರೆ ಇವನಿಗೆ ಪುತ್ರಸಂತಾನವಿಲ್ಲದಿದ್ದರಿಂದ ದಳವಾಯಿಗಳು ಈತನ ತಮ್ಮನ ಮಗ ಚಿಕ್ಕಣ್ಣನಾಯಕನನ್ನು ಅಧಿಕಾರಕ್ಕೆ ತಂದರು.

ಚಿಕ್ಕಣ್ಣನಾಯಕ

ದಂಗೆಯೆದ್ದ ದಳವಾಯಿಗಳು ಓಬಣ್ಣನಾಯಕನನ್ನು ಕೊಂದು ಎರಡನೆಯ ಮದಕರಿನಾಯಕನ ಅಣ್ಣ ಸರ್ಜೆರಾಯನ ಮಗ ಚಿಕ್ಕಣ್ಣನಾಯಕನನ್ನು ಕಣಕುಪ್ಪೆಯಿಂದ ಕರೆತಂದು, ಕ್ರಿ.ಶ.೧೬೭೫ರಲ್ಲಿ ಸಿದ್ದೇಶ್ವರ ಗುಡಿಯಲ್ಲಿ ಪಟ್ಟಕಟ್ಟಿದರು.[೨೧೮] ಇವನ ಕಾಲದಲ್ಲಿ ಸುತ್ತಲಿನ ಪಾಳೆಯಗಾರರ ಉಪಟಳ ಹೆಚ್ಚಾಗಿತ್ತು. ಸುಮಾರು ಇಪ್ಪತ್ತು ದಿನಗಳ ಕಾಲ ಸಾಣೀಕೆರೆಗೆ ಮುತ್ತಿಗೆ ಹಾಕಿದ್ದ ನಿಡಗಲ್ಲು ಪಾಳೆಯಗಾರರನ್ನು ಸೋಲಿಸಿ ಕೋಟೆಯನ್ನು ವಶಪಡಿಸಿಕೊಂಡನು. ಇದೇ ಸಂದರ್ಭದಲ್ಲಿ ಹರಪನಹಳ್ಳಿ ಪಾಳೆಯಗಾರರು ಅಣಜಿ ಕೋಟೆಯನ್ನು ಹಿಡಿದು, ಅಲ್ಲಿನ ಅಧಿಕಾರಿ ಭೂನಪ್ಪನನ್ನು ಕೊಂದರು. ಚಿಕ್ಕಣ್ಣನಾಯಕ ಸಾಣೀಕೆರೆಯಿಂದ ಅಣಜಿಗೆ ಹೋಗುವಷ್ಟರಲ್ಲಿ ಅಣಜಿಯಲ್ಲಿದ್ದ ಕೆಂಚನಗೌಡ ಮತ್ತು ಅವನ ಮಂದಿ ಹರಪನಹಳ್ಳಿ ಪಾಳೆಯಗಾರರನ್ನು ಸೋಲಿಸಿ ಓಡಿಸಿದ್ದರು. ಆಗ ಇವರ ಸಾಹಸಕ್ಕೆ ಮೆಚ್ಚಿದ ದೊರೆ ಮಂದಿಗೆ ಹೊಲವನ್ನು ಉಡುಗೊರೆ ನೀಡಿದ. ಇದೇ ಸಂದರ್ಭದಲ್ಲಿ ಚಿಕ್ಕಣ್ಣನಾಯಕನು ಕಲ್ಲಬಾಗಿಲ ಬಳಿಯ ಅರಮನೆ, ಅದರ ಸುತ್ತಿನ ಕೋಟೆ, ಬಾಗೂರು ಚೆನ್ನಿಗರಾಯನ ತೇರು, ಚಿನ್ನದ ಮುಲಾಮಿನ ಗರುಡೋತ್ಸವ ಮೂರ್ತಿ, ಮೇಲುದುರ್ಗದಲ್ಲಿ ವಿನಾಯಕನ ಗುಡಿ ಹಾಗು ಹೊಂಡಗಳನ್ನು ನಿರ್ಮಿಸಿದನು.[೨೧೯]

ಹರಿಹರದ ಶ್ರೀಹರಿಹರೇಶ್ವರ ದೇವಾಲಯದ ಐಶ್ವರ್ಯವನ್ನು ದೋಚಲು ಬಂದಿದ್ದ ಷೇರ್‌ಖಾನ್‌ನ ಸೈನ್ಯವನ್ನು ಹಿಮ್ಮೆಟ್ಟಿಸಿದನು. ಈತನು ಮೂಲತಃ ಬೇಡ ಜನಾಂಗದವನಾಗಿದ್ದರೂ, ವೀರಶೈವ ಧರ್ಮಕ್ಕೆ ಮತಾಂತರಗೊಂಡನಲ್ಲದೇ, ಉಗ್ರಚನ್ನವೀರದೇವರೆಂಬ ವಿರಕ್ತ ಜಂಗಮನನ್ನು ಗುರುವಾಗಿ ಸ್ವೀಕರಿಸಿದನು. ಅಲ್ಲದೆ ರಾಲಕೋಟೆ ಬಾಗಿಲ ಬಳಿಯಲ್ಲಿ ವೀರಶೈವ ಮಠವನ್ನು ಕಟ್ಟಿಸಿದನು. ಅನಂತರ ಯಾವುದೋ ಕಾರಣದಿಂದ ಆ ಧರ್ಮವನ್ನು ತ್ಯಜಿಸಿದನು. ಇವನು ಬಾಗೂರು ಸೀಮೆಯೊಳಗಿನ ಮಾರಬಗಟ್ಟೆ ಗ್ರಾಮವನ್ನು ಕೂಡಲಿಶೃಂಗೇರಿ ಮಠದ ಅಂದಿನ ಗುರುಗಳಾಗಿದ್ದ ಶ್ರೀಶಂಕರಭಾರತೀ ಸ್ವಾಮಿಗಳಿಗೆ ವಹಿಸಿಕೊಟ್ಟ.[೨೨೦] ಅಲ್ಲದೆ ರಾಮಾನುಜ ಪಂಥದವರಿಗೆ ನಾಗೇನಹಳ್ಳಿ ಗ್ರಾಮವನ್ನು ಕಂದಾಯರಹಿತವಾಗಿ ಮಾನ್ಯ ನೀಡಿದನು.[೨೨೧]

ಜಗಲೂರು ತಾಲ್ಲೂಕು ಕಣಕುಪ್ಪೆ(ಕಣ್ವರಕುಪ್ಪೆ)ಯಲ್ಲಿ ಬಲವಾದ ಕೋಟೆಯೊಂದನ್ನು ಕಟ್ಟಿಸಿದನು. ಈ ಕೋಟೆಯ ರಚನೆ ಇತ್ಯಾದಿಗಳ ಬಗ್ಗೆ ವಿವರವಾದ ವರ್ಣನೆಯಿದೆ.[೨೨೨] ಕ್ರಿ.ಶ.೧೬೬೧ರಲ್ಲಿ ಅಗ್ರಹಾರವನ್ನು ಅಲ್ಲಿನ ಗೌಡ ಮತ್ತು ಆಯಗಾರರ ಸಮ್ಮತಿಯೊಡನೆ ಕವಿಕೋನಪ್ಪನ ಅಗ್ರಹಾರವೆಂದು ಕರೆದು, ಆನೆಸಿದ್ರಿ ಗ್ರಾಮದ ನಾಲ್ಕು ಗಡಿಗಳನ್ನು ಗುರುತಿಸಿ ಕವಿಕೋನಪ್ಪನಿಗೆ ದತ್ತಿನೀಡಿದ ಬಗ್ಗೆ ತಿಳಿದುಬಂದಿದೆ.[೨೨೩] ತಮ್ಮ ಹಿರಿಯರಿಗೆ ಪುಣ್ಯವಾಗಲೆಂದು ಕೊಡಗನೂರು ಸೀಮೆಗೆ ಸೇರಿದ್ದ ಹಾಗು ಹಾಳು ಬಿದ್ದಿದ್ದ ಮಲ್ಲಣ್ಣನಹಳ್ಳಿಯನ್ನು ದುರಸ್ತಿಗೊಳಿಸಿ ಅದಕ್ಕೆ ಮದಕರಿಪುರವೆಂದು ನಾಮಕರಣ ಮಾಡಿ ಅಗ್ರಹಾರ ಸ್ಥಾಪಿಸಿ, ಶಾಮಾಚಾರ್ಯರೆಂಬುವವರಿಗೆ ದತ್ತಿನೀಡಿದ ಬಗ್ಗೆ ತಿಳಿದುಬರುತ್ತದೆ.[೨೨೪]

ಮಹಮದೀಯರ ಅಧೀನದಲ್ಲಿದ್ದ ಶಿರಾ ಪ್ರಾಂತ್ಯದ ಬಾಗೂರು ಕೋಟೆಯನ್ನು ವಶಪಡಿಸಿಕೊಳ್ಳುವ ಸಲುವಾಗಿ, ಈಗಿನ ಹೊಸದುರ್ಗದ ಪೂರ್ವದಿಕ್ಕಿನ ಬೆಟ್ಟದ ಮೇಲೆ ಕ್ರಿ.ಶ.೧೬೭೫ರಲ್ಲಿ ಕೋಟೆಯನ್ನು ಕಟ್ಟಿಸಿ ಸೈನ್ಯಸಮೇತನಾಗಿ ಅಲ್ಲೇ ನೆಲೆಸಿದನು. ಇದೇ ಸಂದರ್ಭದಲ್ಲಿ ಬಾಗೂರಿನಿಂದ ಹೊರದೂಡಲ್ಪಟ್ಟ ಜಂಗಮ ಪುರೋಹಿತನು ಚಿಕ್ಕಣ್ಣನಾಯಕನ ಮೊರೆಹೊಕ್ಕಾಗ, ಬೆಟ್ಟದ ಕೆಳಗೆ ಹೊರಪೇಟೆಯೊಂದನ್ನು ನಿರ್ಮಿಸಿಕೊಳ್ಳುವಂತೆ ತಿಳಿಸಿದನು. ಬೆಟ್ಟದ ತಪ್ಪಲಿನಲ್ಲಿ ೧೬೭೮ ರ ವೇಳೆಗೆ ಚಿಕ್ಕಪೇಟೆಯೊಂದು ನಿರ್ಮಾಣವಾಯಿತು. ಆಗ ನಾಯಕನು ಈ ಪ್ರದೇಶಕ್ಕೆ 'ಹೊಸದುರ್ಗ' ಎಂದು ನಾಮಕರಣ ಮಾಡಿದನು. ಈ ಹೊಸದುರ್ಗಕ್ಕೆ ಆರಂಭದಲ್ಲಿ 'ನವದುರ್ಗ' ಎಂದು ಕರೆಯಲಾಗುತ್ತಿತ್ತು.[೨೨೫] ಇವನ ಆಡಳಿತದಲ್ಲಿ ಬಿಳಿಚೋಡು ಪಾರುಪತ್ತೆಗಾರನಾಗಿದ್ದ ಮಲ್ಲಶೆಟ್ಟಿ ಎಂಬುವವನು ಅಲ್ಲಿನ ಕೆಲಸಗಾರರಿಗೆ ಬಿಳಿಚೋಡು ಗ್ರಾಮದ ತೆರಿಗೆಯನ್ನು ಬಿಟ್ಟುಕೊಟ್ಟನು.[೨೨೬] ಅಲ್ಲದೆ ಕ್ರಿ.ಶ.೧೬೯೧ರಲ್ಲಿ 'ದುರ್ಗಿವರಹ' ಎಂಬ ಪಗೋಡ ನಾಣ್ಯವನ್ನು ಚಿತ್ರದುರ್ಗದ ಟಂಕಸಾಲೆಯಲ್ಲಿ ಮುದ್ರಿಸಿ ಚಲಾವಣೆಗೆ ತಂದನಂತೆ.[೨೨೭] ಇವನು ಕ್ರಿ.ಶ.೧೬೮೬ರಲ್ಲಿ ಮರಣ ಹೊಂದಿದ. ಇವನಿಗೆ ಮಕ್ಕಳಿಲ್ಲದಿದ್ದರಿಂದ ಈತನ ಅಣ್ಣ ಲಿಂಗಣ್ಣನಾಯಕ (ಮೂರನೆಯ ಮದಕರಿನಾಯಕ)ನಿಗೆ ಪಟ್ಟವಾಯಿತು.

ಮೂರನೆಯ ಮದಕರಿನಾಯಕ

ಮೂರನೆಯ ಮದಕರಿನಾಯಕನೆಂದೇ ಪ್ರಸಿದ್ಧಿಯಾದ ಲಿಂಗಣ್ಣನಾಯಕ ಕ್ರಿ.ಶ.೧೬೮೬ರಲ್ಲಿ ಅಧಿಕಾರಕ್ಕೆ ಬಂದನು. ಇವನ ಆಳ್ವಿಕೆಯ ಅವಧಿ ಅರಾಜಕತೆಯಿಂದ ಕೂಡಿದ್ದು, ದಳವಾಯಿಗಳ ಉಪಟಳ ಹೆಚ್ಚಾಗಿ ಕೇವಲ ಮೂರು ವರ್ಷ ಮಾತ್ರ ಅಧಿಕಾರದಲ್ಲಿದ್ದನು. ದಳವಾಯಿ ಮುದ್ದಣ್ಣ ಹಾಗು ಇತರ ಸಹಚರರು ಲಿಂಗಣ್ಣನಾಯಕ ಪೂಜಾಕಾರ್ಯದಲ್ಲಿ

ನಿರತನಾಗಿದ್ದ ಸಂದರ್ಭದಲ್ಲಿ ಅರಮನೆಯನ್ನು ಮುತ್ತಿ, ಅವನನ್ನು ಸೆರೆಹಿಡಿದು ಮೂಗು ಕೊಯ್ದು ಹುಣಸೆಮರದ ಗಿರಿಯಣ್ಣ ಎಂಬುವನ ಮನೆಯಲ್ಲಿ ಸೆರೆಹಾಕಿ ದೊಣೆರಂಗಪ್ಪನಾಯಕನನ್ನು ಪಟ್ಟಕ್ಕೆ ತಂದರು. ಕೆಲಕಾಲದ ನಂತರ ಈತನನ್ನು ಸಹ ದೇವಾಲಯವೊಂದರಲ್ಲಿ ಸೆರೆಹಾಕಿ, ದುರ್ಗದ ವಂಶಕ್ಕೆ ಸೇರಿದ ನರಗನಹಳ್ಳಿಯ ರಘುವಪ್ಪನಾಯಕನನ್ನು ಅಧಿಕಾರಕ್ಕೆ ತಂದರು. ದುರಾದೃಷ್ಟವಶಾತ್ ಇವನು ಕೆಲಕಾಲದಲ್ಲಿ ಮರಣ ಹೊಂದಿದ್ದರಿಂದ, ದುರ್ಗದ ದೊರೆಗಳ ಹೆಣ್ಣು ಮಕ್ಕಳ ಸಂತತಿಯ ಇಸಾಮುದ್ರದ ಸೂರೇಕಾಂತಿ (ಸೂರ್ಯಕಾಂತಿ) ರಂಗಪ್ಪನಾಯಕನಿಗೆ ಪಟ್ಟಕಟ್ಟಲಾಯಿತು. ತರುವಾಯ ಇವನನ್ನು ಕಾರಣಾಂತರದಿಂದ ಸರೆಹಿಡಿಯಲಾಯಿತು.[೨೨೮]

ಮೂರನೆಯ ಮದಕರಿನಾಯಕ ಜಗಲೂರು ಸೀಮೆಯ ಕಸವನಹಳ್ಳಿ ಗ್ರಾಮವನ್ನು ಅಗ್ರಹಾರವನ್ನಾಗಿ ಮಾಡಿ, ಆ ಗ್ರಾಮದ ಉತ್ಪತ್ತಿಯನ್ನು ವಾರಿಜನಾಬೆಯ ಸೀನಯ್ಯನಿಗೆ ನೀಡಿದನೆಂದು,[೨೨೯] ಹಿಂದೆ ವಿಜಯನಗರದ ಕೃಷ್ಣದೇವರಾಯನ ಕಾಲದಲ್ಲಿ ಆನೆಸಿದ್ರಿ ಗ್ರಾಮದ ಅಗ್ರಹಾರವು ಸ್ಥಾಪಿಸಲ್ಪಟ್ಟಿದ್ದು, ಅದನ್ನು ಜೀರ್ಣೋದ್ಧಾರ ಮಾಡಿ ಶಿಲಾಶಾಸನ ಬರೆಸಿದನೆಂದು ತಿಳಿದುಬರುತ್ತದೆ.[೨೩೦]

ಹೀಗೆ ಇವನ ಕಾಲದಲ್ಲಿ ರಾಜಕೀಯ ಅಸ್ಥಿರತೆಯ ಗೊಂದಲದ ಪರಿಸ್ಥಿತಿ ಉಂಟಾಗಿ ನಿಜವಾದ ಹಕ್ಕುದಾರ ಬಿಚ್ಚುಗತ್ತಿ ಭರಮಣ್ಣನಾಯಕನಾಗಿದ್ದರೂ, ದಳವಾಯಿ ಮುದ್ದಣ್ಣನ ಉಪಟಳದಿಂದ ಕೆಲಕಾಲ ಬಿಳಿಚೋಡು ಗ್ರಾಮದಲ್ಲಿ ತಲೆಮರೆಸಿಕೊಂಡಿದ್ದನು. ಆಗ ದಳವಾಯಿ ಮುದ್ದಣ್ಣ, ಲಿಂಗಣ್ಣನಾಯಕನನ್ನು ಕೊಲೆಮಾಡಿಸಿ ತಾನೇ ಅಧಿಕಾರ ವಹಿಸಿ ಕೊಂಡನು. ಇದನ್ನು ಸಹಿಸದ ನಿಷ್ಠಾವಂತ ದಳವಾಯಿ ಭರಮಪ್ಪ ಬಿಳಿಚೋಡಿನಲ್ಲಿದ್ದ ಬಿಚ್ಚುಗತ್ತಿ ಭರಮಣ್ಣನಾಯಕನನ್ನು ಕರೆತಂದು, ಶತ್ರುಗಳನ್ನು ಸಂಹರಿಸಿ ಕ್ರಿ.ಶ.೧೬೮೯ ರಲ್ಲಿ ಪಟ್ಟಕ್ಕೆ ತಂದರು.[೨೩೧]

ಬಿಚ್ಚುಗತ್ತಿ ಭರಮಣ್ಣನಾಯಕ

ರಾಜಕೀಯ ಸಂದಿಗ್ಧ ಪರಿಸ್ಥಿತಿಯಲ್ಲಿ ಅಧಿಕಾರಕ್ಕೆ ಬಂದ ಬಿಚ್ಚುಗತ್ತಿ ಭರಮಣ್ಣನಾಯಕ ಕ್ರಿ.ಶ.೧೬೮೯ ರಿಂದ ೧೭೨೧ರವರೆಗೆ ಆಳ್ವಿಕೆ ಮಾಡಿದನು. ಚಿತ್ರದುರ್ಗ ಬೃಹನ್ಮಠದ ಎಂಟನೆಯ ಪಟ್ಟಾಧಿಕಾರಿಗಳಾಗಿದ್ದ ಮುರುಘರಾಜೇಂದ್ರರು 'ಮುಂದೆ ನೀನು ಚಿತ್ರದುರ್ಗದ ರಾಜನಾಗುತ್ತೀಯ' ಎಂದು ಆಶೀರ್ವಾದ ಮಾಡಿದ ಪರಿಣಾಮವಾಗಿ ಅಧಿಕಾರಕ್ಕೆ ಬಂದ ಇವನು, ತಮ್ಮ ಗುರುಗಳಿಗೆ ಬೇಕಾದ ಎಲ್ಲಾ ಸೌಕರ್ಯಗಳನ್ನು ಒದಗಿಸಿಕೊಟ್ಟಿದ್ದಲ್ಲದೆ, ಬೆಟ್ಟದ ಮೇಲಿನ ೩೬೦ ಅಂಕಣಗಳ ವಿಸ್ತಾರವಾದ ದೊಡ್ಡ ಮಠವೊಂದನ್ನು ಕಟ್ಟಿಸಿಕೊಟ್ಟ. ಸುಮಾರು ೩೩ ವರ್ಷಗಳ

ಕಾಲ ಯಶಸ್ವಿಯಾಗಿ ಆಡಳಿತ ನಡೆಸಿದಂತಹ ಇವನು ಚಿತ್ರದುರ್ಗ ಸಂಸ್ಥಾನಕ್ಕೆ ನಿಜವಾದ ಅರ್ಥದಲ್ಲಿ ಬಿಚ್ಚುಗತ್ತಿಯೇ ಆಗಿದ್ದನು.

ಇವನ ಕಾಲದಲ್ಲಿ ಶತ್ರುಗಳ ಅಥವಾ ನೆರೆಯ ಪಾಳೆಯಗಾರರ ಉಪಟಳ ಹೆಚ್ಚಾಗಿತ್ತು. ದುರ್ಗದ ಹಳೆಯ ವೈರಿಗಳಾದ ಹರಪನಹಳ್ಳಿ ಹಾಗು ಬಿದನೂರಿನ ಪಾಳೆಯಗಾರರು ಸೇರಿ ಅಣಜಿ ಕೋಟೆಗೆ ಮುತ್ತಿಗೆ ಹಾಕಿದಾಗ, ದಳವಾಯಿ ಭರಮಪ್ಪ ಜರಿಮಲೆ ಮತ್ತು ತರಿಕೆರೆ ಪಾಳೆಯಗಾರರ ಸಹಾಯದಿಂದ ಹರಪನಹಳ್ಳಿಯವರನ್ನು ಸೋಲಿಸಿ, ಅಣಜಿ ಕೋಟೆಯನ್ನು ವಶಪಡಿಸಿಕೊಂಡನು. ನಂತರ ಕ್ರಿ.ಶ.೧೬೯೬ರಲ್ಲಿ ಮರಾಠರ ದಂಡು ಸೀರ್ಯಾವನ್ನು ಮುತ್ತಿದಾಗ, ಸೀರ್ಯಾದ ಸುಬೇದಾರ ಖಾಸಿಂಖಾನನು ದೊಡ್ಡೇರಿ ಕೋಟೆಗೆ ಬಂದು ಅವಿತುಕೊಂಡನು. ಆಗ ಬಿಚ್ಚುಗತ್ತಿಭರಮಣ್ಣನಾಯಕ ಮರಾಠ ಸಂತಾಜಿಯೊಂದಿಗೆ ಸೇರಿ ಖಾಸಿಂಖಾನನ ವಿರುದ್ಧ ಹೋರಾಡಿದ್ದರಿಂದ ಖಾಸಿಂಖಾನನು ಮೃತನಾಗಿ, ಮೊಗಲ್ ಸೈನ್ಯ ಸೋತು ದೊಡ್ಡೇರಿ ವಶವಾಯಿತು. ನಂತರ ಸಂತಾಜಿ ದೊಡ್ಡೇರಿ ಕೋಟೆಯನ್ನು, ಎರಡು ಮಿಲಿಯನ್ ಹಣ, ಅನೇಕ ಕುದುರೆಗಳು ಮತ್ತು ಇತರೆ ಸಂಪತ್ತನ್ನು ದುರ್ಗದವರಿಗೆ ನೀಡಿದನು. ಇದಾದ ನಂತರ ದಿಲಾವರ್‌ಬಕ್ಷನ ದಂಡು ದುರ್ಗದ ರಾಜ್ಯದೊಳಗೆ ದಾಳಿ ಮಾಡಿದಾಗ, ಅವನಿಗೆ ಮೂರು ಲಕ್ಷ ವರಹ ಕೊಟ್ಟು ಸಂಧಿ ಮಾಡಿಕೊಳ್ಳಲಾಯಿತು. ಅನಂತರ ಗುಡೇಕೋಟೆಗೆ ಸೇರಿದ ನಾಗಸಮುದ್ರಕ್ಕೆ ಕ್ರಿ.ಶ.೧೬೯೮ರಲ್ಲಿ ಮುತ್ತಿಗೆ ಹಾಕಿ ವಶಪಡಿಸಿಕೊಂಡಿದ್ದಲ್ಲದೆ, ಗುಡೇಕೋಟೆ ಪಾಳೆಯಗಾರರ ಮಗಳಾದ ಬಂಗಾರನಾಗತಿಯನ್ನು ವಿವಾಹವಾದನು.

ಇಂದುರಾಯ ಮತ್ತು ರಾಯದುರ್ಗದವರು ಕ್ರಿ.ಶ.೧೬೯೯ರಲ್ಲಿ ನಾಯಕನಹಟ್ಟಿ ಕೋಟೆಯನ್ನು ಮುತ್ತಿದಾಗ ಭರಮಪ್ಪನಾಯಕ, ಹಟ್ಟಿಮಲ್ಲಪ್ಪನಾಯಕ, ಸೀರ್ಯಾದ ಫಡದುಲ್ಲಾಖಾನ್ ಹಾಗು ಇನ್ನಿತರ ಪಾಳೆಯಗಾರರ ಸಹಾಯದಿಂದ ನನ್ನಿವಾಳ ಕಾಳಗದಲ್ಲಿ ಶತ್ರುಗಳನ್ನು ಸೋಲಿಸಿ, ಹಟ್ಟಿ ಕೋಟೆಯನ್ನು ರಕ್ಷಿಸಿದನು. ರಾಯದುರ್ಗದ ಮೇಲೆ ಮತ್ತೆ ಯುದ್ಧ ಕೈಗೊಂಡು ಗೌರಸಮುದ್ರದ ಕೋಟೆ ಸೇರಿದಂತೆ ಅನೇಕ ಕೋಟೆಗಳನ್ನು ವಶಪಡಿಸಿಕೊಂಡನು. ತರುವಾಯ ಸೀರ್ಯಾದ ಸುಬೇದಾರ ಫಡದುಲ್ಲಾಖಾನನೊಂದಿಗೆ ಮಲೆನಾಡು ಸೀಮೆಯನ್ನು ಮುತ್ತಿ ಗೆದ್ದುಕೊಟ್ಟು, ಖಾನನಿಂದ ದೊಡ್ಡೇರಿ ಮತ್ತು ಜಾಜೂರು ಸೀಮೆಗಳನ್ನು ಪಡೆದುಕೊಂಡನು. ಕ್ರಿ.ಶ.೧೭೦೯ರಲ್ಲಿ ಹರಪನಹಳ್ಳಿಯನ್ನು ಮುತ್ತಿ ಅನೇಕ ಗಡಿಪ್ರದೇಶಗಳನ್ನು ವಶಪಡಿಸಿಕೊಂಡ.[೨೩೨] ಆದರೆ ಹರಪನಹಳ್ಳಿಯನ್ನು ಮತ್ತೆ ಅವರಿಗೆ ಹಿಂದುರಿಗಿಸಿದ. ಬಾಗೂರನ್ನು ಗೆದ್ದು ಶಿರಾದ ಸುಬೇದಾರ ದರಗಾಪಲಿಖಾನನಿಗೆ ಕೊಟ್ಟು, ಅವನಿಂದ ಒಂದು ಗ್ರಾಮವನ್ನು ಪಡೆದುಕೊಂಡನು. ಅಲ್ಲದೆ ಬಿಜಾಪುರದ ದಿಲಾವರ್‌ಖಾನನ ಸೈನ್ಯ ದುರ್ಗವನ್ನು

ಮುತ್ತಿದಾಗ, ಹಿರಿಯೂರಿನ ಬಳಿ ನಡೆದ ಭೀಕರ ಯುದ್ಧದಲ್ಲಿ ನವಾಬನನ್ನು ಸೆರೆಹಿಡಿದು ತನ್ನ ವರ್ಚಸ್ಸನ್ನು ಹೆಚ್ಚಿಸಿಕೊಂಡನು.

ಮುರುಘರಾಜೇಂದ್ರಸ್ವಾಮಿಗಳ ಪರಮಭಕ್ತನಾಗಿದ್ದ ಇವನು ಮಠವನ್ನು ನಿರ್ಮಿಸಿ ಕೊಟ್ಟಿದ್ದಲ್ಲದೆ ತನ್ನ ಮಕ್ಕಳಲ್ಲೊಬ್ಬನನ್ನು ಅವರ ಸೇವೆಗೆ ನೇಮಿಸಿ, ಬೆಟ್ಟದಿಂದ ದೂರವಿರುವ ಸ್ಥಳದಲ್ಲಿ ಇನ್ನೊಂದು (ಈಗಿರುವ) ಮಠವನ್ನು ನಿರ್ಮಿಸಿ ತನ್ನ ಹೆಸರುಳ್ಳ ಘಂಟೆಯನ್ನು ಮಠಕ್ಕೆ ಅರ್ಪಿಸಿದನು.[೨೩೩] ಅಲ್ಲದೆ ಶಂಕರಭಾರತೀ ಸ್ವಾಮಿಗಳಿಗೆ ಜಾಜೂರು ಹೋಬಳಿಯ ಹನುಮನಹಳ್ಳಿ ಗ್ರಾಮವನ್ನು ದಾನವಾಗಿ ನೀಡಿದನು.[೨೩೪] ಜಗಲೂರು ತಾಲ್ಲೂಕಿನ ಮಠದದ್ಯಾಮವ್ವನಹಳ್ಳಿಯ ಕ್ರಿ.ಶ.೧೭೧೧ರ ಕನ್ನಡ ಶಾಸನವೊಂದು, ಕುಂಭಕೋಣೆಯ ಮಠದ ಸುಮತೀಂದ್ರಸ್ವಾಮಿಗಳಿಗೆ ಅವರ ಆರಾಧ್ಯದೈವ ರಘುಪತಿ ದೇವರ ಸೇವೆಗಾಗಿ ದೇಮವ್ವನಹಳ್ಳಿಯನ್ನು ದಾನವಾಗಿ ನೀಡಿದನೆಂದು ತಿಳಿಸುತ್ತದೆ.[೨೩೫]

ಇವನು ಉತ್ತಮ ಪರಾಕ್ರಮಿಯೂ, ಸಮರ್ಥನೂ ಆಗಿದ್ದುದರ ಜೊತೆಗೆ ಶ್ರೇಷ್ಠ ನ್ಯಾಯತೀರ್ಮಾನಿಯೂ ಆಗಿದ್ದನು. ಇವನ ಕಾಲದಲ್ಲಿ ತಪ್ಪಿತಸ್ಥರನ್ನು ಅವರ ಹಳೆಯ ದಾಖಲೆಗಳನ್ನು ಪರಿಶೀಲಿಸುವುದರಿಂದಲೂ, ದಿಷ್ಟಿದೀವಿಗೆ ಪರೀಕ್ಷೆಯಿಂದಲೂ, ಮುದ್ದೆತುಪ್ಪದ ಪ್ರಮಾಣದಿಂದಲೂ, ಬ್ರಾಹ್ಮಣರನ್ನು ಧರ್ಮಶಾಸ್ತ್ರದಲ್ಲಿ ವಿಘ್ನೇಶ್ವರ ಶಾಸ್ತ್ರವನ್ನು ಓದಿಸುವುದರಿಂದಲೂ ಪರೀಕ್ಷಿಸಿ ತಪ್ಪುಗಳನ್ನು ಕಂಡುಹಿಡಿದು ದಂಡವಿಧಿಸುತ್ತಿದ್ದನು. ಆಯಾ ಸ್ಥಳದ ಹನ್ನೆರಡು ಜನ ಕೈವಾಡದವರು ಒಮ್ಮತಾಭಿಪ್ರಾಯ ಸೂಚಿಸುವುದರ ಮೂಲಕ ತಪ್ಪಿತಸ್ಥನನ್ನು ದಂಡನೆಗೆ ಗುರಿಮಾಡುತ್ತಿದ್ದರು. ಗಡಿಪಾರು ಮಾಡುವ ಶಿಕ್ಷೆಯೂ ಇತ್ತು. ವಿಶೇಷವೆಂದರೆ ಬಹುಪಾಲು ವಿವಾದಗಳು ರಾಜಧಾನಿ ಚಿತ್ರದುರ್ಗದಲ್ಲೆ ಪರಿಹರಿಸಲ್ಪಡುತ್ತಿದ್ದವು.[೨೩೬]

ಭರಮಣ್ಣನಾಯಕನ ಕಾಲದಲ್ಲಿ ಇಸಾಮುದ್ರ, ಭರಮಸಾಗರ, ಅಜ್ಜಪ್ಪನಹಳ್ಳಿ ಹೀಗೆ ಒಟ್ಟು ಮೂವತ್ತೆರಡು ಪಟ್ಟಡಿ ಗ್ರಾಮಗಳಿದ್ದವು. ತನ್ನ ದಳವಾಯಿ ಲಿಂಗಣ್ಣನಾಯಕನಿಗೆ ಭರಮಸಾಗರದ ಕೆರೆಯನ್ನು ಕಟ್ಟಿಸುವ ಜವಾಬ್ದಾರಿಯನ್ನು ವಹಿಸಿದಾಗ, ಅವನು ಕೆರೆಯ ಜೊತೆಗೆ ಒಂದು ಊರನ್ನು, ಅರಮನೆ, ನೀರಿನ ಬಾವಿ, ಸುತ್ತುಕೋಟೆ, ಬುರುಜುಗಳನ್ನು ಕಟ್ಟಿಸಿದ್ದರಿಂದ ಆ ಊರಿಗೆ ಅರಸೂರು ಎಂದು ನಾಮಕರಣ ಮಾಡಿ, ಕ್ರಿ.ಶ.೧೬೯೬ರಲ್ಲಿ ಲಿಂಗಣ್ಣನಾಯಕನಿಗೆ ಮತ್ತು ಕಣಕುಪ್ಪೆ ಕಾಟನಾಯಕನಿಗೆ ಉಂಬಳಿ ಹಾಕಿಕೊಟ್ಟನು. ಲಿಂಗಣ್ಣನಾಯಕ ಇಲ್ಲಿ ಬಸವಣ್ಣ, ಕಲ್ಲೇಶ್ವರ ಮತ್ತು ಹನುಮಂತರಾಯನ ಗುಡಿಗಳನ್ನು ಕಟ್ಟಿಸಿದ. ಆದರೆ ಆ ಊರು ಈಗಿಲ್ಲವೆಂದು ತಿಳಿದುಬರುತ್ತದೆ.[೨೩೭] ಚಿತ್ರದುರ್ಗ ಸಮೀಪವಿರುವ ಪಿಳ್ಳೇಕೆರನಹಳ್ಳಿಯ ಆಂಜನೇಯ ದೇವಾಲಯದ ಮುಂಭಾಗದಲ್ಲಿ ಶಿಲಾಶಾಸನವನ್ನು ನೆಟ್ಟು,

ಅದರಲ್ಲಿ ಚಿತ್ರದುರ್ಗದ(ವೆಂಕಟೇಶ್ವರ ಬಡಾವಣೆಯಲ್ಲಿರುವ) ವೆಂಕಟರಮಣಸ್ವಾಮಿಯ ಅಮೃತಪಡಿ, ನಂದಾದೀಪ, ಮಂತ್ರಪುಷ್ಪ ಮುಂತಾದ ಸೇವೆಗೆ ಪಿಳ್ಳೇಕೆರನಹಳ್ಳಿ ಗ್ರಾಮವನ್ನು ದತ್ತಿನೀಡಿದನೆಂದು ತಿಳಿದುಬರುತ್ತದೆ.[೨೩೮]

ವ್ಯಾಸರಾಯರಮಠದ ಶ್ರೀಮದ್ ರಘುತೀರ್ಥಪಾದಂಗಳವರಿಗೆ ಚಿತ್ರದುರ್ಗ ಸಂಸ್ಥಾನಕ್ಕೆ ಸೇರಿದ ಕೊಡಗನೂರು ಸೀಮೆಯ ದೇಮಲವನ(ದ್ಯಾಮವ್ವನ) ಹಳ್ಳಿಯನ್ನು ಬಿಟ್ಟುಕೊಟ್ಟು ತನ್ನ ಗೌರವವನ್ನು ತೋರಿದನು.[೨೩೯] ಚಿತ್ರದುರ್ಗ ತಾಲ್ಲೂಕು ಮದಕರಿಪುರ ಗ್ರಾಮದ ಬಳಿಯ ಪಾಲನಹಳ್ಳಿಯ ಹೊಲದಲ್ಲಿನ ಶಾಸನದಲ್ಲಿ ಸಿಂಗನಗಿರಿದುರ್ಗದ ಒಂದು ದೇವಸ್ಥಾನಕ್ಕೆ ದತ್ತಿನೀಡಿದ ವಿಚಾರವಿದೆ.[೨೪೦] ಇವನ ಅಪ್ಪಣೆಯಂತೆ ಬೊಕ್ಕಸದ ತಿಮ್ಮಪ್ಪನ ಪಾರುಪತ್ಯದಲ್ಲಿ ಜಲಧಿಗೌಡನ ಮಗ ಚಿಕ್ಕಣ್ಣಗೌಡನು ಗೋಸಿಕೆರೆಯ ಕೋಟೆಕೊತ್ತಲ ಮತ್ತು ಅಗಳುಗಳನ್ನು ನಿರ್ಮಿಸಿದನು ಎಂದು ತಿಳಿದುಬರುತ್ತದೆ.[೨೪೧]

ಭೀಮಸಮುದ್ರದ ಭೀಮೇಶ್ವರ, ಬಿಳಿಚೋಡಿನ ಆಂಜನೇಯ, ನೀಲಕಂಠೇಶ್ವರ, ಚಿತ್ರದುರ್ಗದ ಬೆಟ್ಟದ ಮೇಲಿನ ತೆಂಕಮುಖದ ಚಾವಡಿ, ನೆಲ್ಲಿಕಾಯಿ ಸಿದ್ದಪ್ಪನಗುಡ್ಡದ ಕೊತ್ತಲ, ಏಕನಾಥೇಶ್ವರಿ ಗುಡಿಯ ಬಳಿಯ ಸುತ್ತಿನ ಬಾಗಿಲು, ಹಿಡಿಂಬೇಶ್ವರ ದೇವಾಲಯದ ಸುತ್ತಿನ ಕೋಟೆ, ಊರಬಾಗಿಲು, ಅದಕ್ಕೆ ಕದಗಳು, ಪಚ್ಚೆಕಣಿವೆಯಲ್ಲಿ ಚಿಕ್ಕಣ್ಣನಾಯಕರ ಸುತ್ತಿನ ಬಾಗಿಲು, ಹೊಲತಿಹಾಳು ಕೆರೆ, ಭರಮಸಾಗರದ ಕೆರೆ, ಅಬ್ಬೆನಾಯಕನಹಳ್ಳಿ ಕೆರೆ, ಅನ್ನೇಹಾಳು ಕೆರೆ, ಹೊಳಲ್ಕೆರೆ ಕೋಟೆ ಹೀಗೆ ಸುಮಾರು ಮೂವತ್ತಕ್ಕೂ ಹೆಚ್ಚು ದೇವಾಲಯಗಳು, ನಾಲ್ಕು ಅರಮನೆಗಳು, ಐದು ಬಲಿಷ್ಠ ಗಡಿದುರ್ಗಗಳು, ಇಪ್ಪತ್ತು ಕೆರೆಗಳನ್ನು ನಿರ್ಮಿಸುವುದರ ಮೂಲಕ ಜನೋಪಕಾರಿ ಕಾರ್ಯಗಳನ್ನು ಕೈಗೊಂಡನು.[೨೪೨] ಇವುಗಳ ಜೊತೆಗೆ ಮೇಲುದುರ್ಗದ ಸಿದ್ದರಂಗಯ್ಯನ ಹೊಂಡ, ಸಂತೆಹೊಂಡ, ಹನುಮನಹೊಂಡ, ಸಿಹಿನೀರಿನ ಹೊಂಡ, ಕರೆಕಲ್ಲುಹೊಂಡ, ಉಚ್ಚಂಗೆಮ್ಮನ ಹೊಂಡಗಳನ್ನು ನಿರ್ಮಿಸಿದ್ದಾನೆ.[೨೪೩] ಹೀಗೆ ಸುದೀರ್ಘವಾಗಿ ಆಳ್ವಿಕೆ ಮಾಡಿ ಚಿತ್ರದುರ್ಗದ ಪಾಳೆಯಗಾರರಲ್ಲೇ ಅತ್ಯಂತ ಉಲ್ಲೇಖನೀಯವಾಗಿರುವ ಬಿಚ್ಚುಗತ್ತಿಭರಮಣ್ಣನಾಯಕನು ಕ್ರಿ.ಶ.೧೭೨೧ರಲ್ಲಿ ಸ್ವರ್ಗಸ್ಥನಾದನು.

ಹಿರೇಮದಕರಿನಾಯಕ

ಅತ್ಯಂತ ಶೂರ, ಧೀರ, ದಕ್ಷ ದೊರೆಯಾದ ಹಿರೇಮದಕರಿನಾಯಕ ತನ್ನ ತಂದೆಯ ಮರಣದ ನಂತರ ಕ್ರಿ.ಶ.೧೭೨೧ರಲ್ಲಿ ಸಿಂಹಾಸನವೇರಿದನು. ಇವನ ಆಡಳಿತಾವಧಿಯಲ್ಲಿ ಸುತ್ತಲಿನ ಪಾಳೆಯಗಾರರ ಉಪಟಳ ಹೆಚ್ಚಾಗಿ ಸರಣಿ ಯುದ್ಧಗಳನ್ನು ಮಾಡಬೇಕಾಯಿತು.

ಮುಖ್ಯವಾಗಿ ಹರಪನಹಳ್ಳಿ, ಬಿದನೂರು, ಸಂತಬೆನ್ನೂರು ಪಾಳೆಯಗಾರರು, ಸವಣೂರು ನವಾಬರು, ಮರಾಠರು ಮತ್ತು ಮೊಗಲರನ್ನು ಎದುರಿಸಬೇಕಾಯಿತು. ಇವನು ದೊರೆಯಾಗುತ್ತಿದ್ದಂತೆಯೆ ಕ್ರಿ.ಶ.೧೭೫೮ರಲ್ಲಿ ರತ್ನಗಿರಿ ಸೀಮೆಯ ವೇಣುಕಲ್ಲುಗುಡ್ಡ ಮತ್ತು ಇಕ್ಕನೂರು, ಕ್ರಿ.ಶ.೧೭೩೩ ರಲ್ಲಿ ಗುಡೇಕೋಟೆ ಮತ್ತು ಮೊಳಕಾಲ್ಮೂರು ಕೋಟೆಗಳನ್ನು ಹಾಗು ಸೀರ್ಯಾದ ಸುಬೇದಾರನಿಂದ ಅಜ್ಜಂಪುರ ಮತ್ತು ದುಮ್ಮಳ ಕೋಟೆಗಳನ್ನು ವಶಪಡಿಸಿಕೊಂಡನು. ಶ್ರೀರಂಗಪಟ್ಟಣದ ದೊರೆಗಳು ದುರ್ಗದ ದೊರೆಗಳನ್ನು ತಮ್ಮ ಸಮಾನ ಮಿತ್ರರೆಂದು ಪರಿಗಣಿಸಿ ಅನೇಕ ಕಾಣಿಕೆಗಳನ್ನು ಕಳುಹಿಸಿಕೊಟ್ಟಿದ್ದು ಇವನ ಕಾಲದ ವಿಶೇಷ.

ಹಾಗಲವಾಡಿಯವರು ಹರ್ತಿಕೋಟೆಯನ್ನು ಮುತ್ತಿದಾಗ ಅವರೊಡನೆ ಒಪ್ಪಂದ ಮಾಡಿಕೊಂಡು ಹರ್ತಿಕೋಟೆಯನ್ನು ಉಳಿಸಿಕೊಳ್ಳಲಾಯಿತು. ಕ್ರಿ.ಶ.೧೭೪೧ರಲ್ಲಿ ನವಾಬ ಮಜೀದ್‌ಖಾನನು ಹಿರೇಮದಕರಿನಾಯಕನ ಮೇಲೆ ಯುದ್ಧ ಸಾರಿದ ಸಂದರ್ಭದಲ್ಲಿಯೇ, ಕೆಳದಿಯ ಬಸಪ್ಪನಾಯಕ ಆನೆಗೊಂದಿ, ರಾಯದುರ್ಗ, ಹರಪನಹಳ್ಳಿ ಪಾಳೆಯಗಾರರೊಂದಿಗೆ ಸೇರಿ ಹಿರೇಮದಕರಿನಾಯಕನ ಮೇಲೆ ದಾಳಿ ಮಾಡಿ ರಾಮಗಿರಿ ಕೋಟೆಯನ್ನು ವಶಪಡಿಸಿಕೊಂಡನು. ಆದರೆ ಹಿರೇಮದಕರಿನಾಯಕ ಆ ಕೋಟೆಯನ್ನು ಪುನಃ ವಶಪಡಿಸಿ ಕೊಂಡನು. ಕ್ರಿ.ಶ.೧೭೪೮ರಲ್ಲಿ ಬಿದನೂರು, ಸವಣೂರು, ಹರಪನಹಳ್ಳಿ ಮತ್ತು ರಾಯದುರ್ಗದವರು ಒಟ್ಟಾಗಿ, ಮತ್ತೆ ಚಿತ್ರದುರ್ಗದ ಮೇಲೆ ದಾಳಿ ಮಾಡಿ ಮಾಯಕೊಂಡದ ಕೋಟೆಯನ್ನು ಮುತ್ತಿದರು. ಈ ಕಾಳಗದಲ್ಲಿ ಹಿರೇಮದಕರಿನಾಯಕ, ಹರಪನಹಳ್ಳಿ ಪಾಳೆಯಗಾರ ಸೋಮಶೇಖರನಾಯಕನಿಂದ ಕೊಲೆಯಾಗಿ, ಮಾಯಕೊಂಡದ ಕೋಟೆ ಶತ್ರುಗಳ ವಶವಾಯಿತು. ಮಾಯಕೊಂಡದಲ್ಲೇ ಅಂತ್ಯಕ್ರಿಯೆ ನಡೆಸಿ ಅಸ್ಥಿಅವಶೇಷಗಳನ್ನು ದುರ್ಗಕ್ಕೆ ತಂದು ಭರಮಣ್ಣ ನಾಯಕನ ಸಮಾಧಿಯ ಮೇಲೆ ನೆಲೆಗೊಳಿಸಲಾಯಿತು. ಆದರೆ ದಿಲೇರಜಂಗ್ ಕಾವ್ಯದಲ್ಲಿ ಹಿರೇಮದಕರಿನಾಯಕನು ಸವಣೂರು ನವಾಬ ಅಬ್ದುಲ್‌ಮಜೀದ್‌ಖಾನನು ಗಾಯಗೊಳಿಸಿದ್ದರಿಂದ ಸತ್ತನೆಂದು ದಾಖಲಿಸಲ್ಪಟ್ಟಿದೆ. ಬಹುಶಃ ನವಾಬರ ಕೀರ್ತಿಯನ್ನು ಹೆಚ್ಚಿಸಲು ಈ ರೀತಿ ಬರೆಸಿರಬಹುದು.[೨೪]

ಇವನ ಕಾಲದಲ್ಲಿ ಚಿತ್ರದುರ್ಗ ಸಂಸ್ಥಾನಕ್ಕೆ ಮೂರು ಲಕ್ಷ ವರಹಗಳ ಆದಾಯ ಬರುತ್ತಿತ್ತು. ಇವನ ರಾಜ್ಯಕ್ಕೆ ಏಳುಲಕ್ಷ ಸೀಮೆ ಎಂದು ಹೇಳಲಾಗುತ್ತಿತ್ತು. ರಾಯದುರ್ಗ ಸೀಮೆಯ ಹದಿನೆಂಟು ಪಟ್ಟಡಿಗಳನ್ನು ಒಳಗೊಂಡಂತೆ, ಒಟ್ಟು ಅರವತ್ತು ಪಟ್ಟಡಿಗಳು, ಅರವತ್ನಾಲ್ಕು ಗಡಿಗಳನ್ನು ಹೊಂದಿದ್ದನು. ಪ್ರತಿಯೊಂದು ಗಡಿಗೂ ಒಬ್ಬೊಬ್ಬ ಗಡಿನಾಯಕರನ್ನು ನೇಮಿಸಿ, ಅವರಿಗೆ ೭೫೦ ಸೈನಿಕರ ಶಸ್ತ್ರಸಜ್ಜಿತ ಸೈನ್ಯವನ್ನು ನೀಡಲಾಗಿತ್ತು. ಅಲ್ಲದೆ ಎಲ್ಲಾ

ಗಡಿಗಳ ಉಸ್ತುವಾರಿಗಾಗಿ ಎಂಟು ಜನ ದಳವಾಯಿಗಳನ್ನು ನೇಮಿಸಲಾಗಿತ್ತೆಂದು ತಿಳಿದು ಬರುತ್ತದೆ. ಇವನ ಕಾಲದಲ್ಲಿ ಜಾನ್ ಎಂಬುವ ಫರಂಗಿಯವನು ದುರ್ಗದಲ್ಲಿ ತನ್ನದೇ ಆದ ಚಾವಡಿಯೊಂದನ್ನು ಹೊಂದಿದ್ದು, ದಿನವೊಂದಕ್ಕೆ ಒಂದು ಕಲ್ಲಿನ ಉಯ್ಯಾಲೆ ಮತ್ತು ದೀಪಸ್ತಂಭಗಳನ್ನು ನಿಲ್ಲಿಸಿದನಂತೆ.[೨೪೫] ಹಿರೇಮದಕರಿನಾಯಕನು ಆನೆಗೊಂದಿ ದೊರೆಯ ಮಗಳು ಓಬವ್ವನಾಗತಿ, ಕನಕಗಿರಿಯ ವೆಂಕಟಾಚಲವ್ವ ನಾಗತಿಯರನ್ನು ವಿವಾಹವಾಗಿದ್ದನು. ಪರಮ ದೈವಭಕ್ತನಾಗಿದ್ದು, ಪ್ರತಿಸೋಮವಾರ ಉಪವಾಸ ಮಾಡಿ ಪ್ರದೋಶ ಕಾಲದಲ್ಲಿ ಚಂದ್ರಮೌಳೇಶ್ವರ ಪೂಜೆಯನ್ನು ಮಾಡುತ್ತಿದ್ದನು.

ಎರಡನೆಯ ಕಸ್ತೂರಿರಂಗಪ್ಪನಾಯಕ

ತನ್ನ ತಂದೆಯ ಮರಣದ ನಂತರ ಕ್ರಿ.ಶ.೧೭೪೮ ರಲ್ಲಿ ಅಧಿಕಾರಕ್ಕೆ ಬಂದ ಎರಡನೆಯ ಕಸ್ತೂರಿರಂಗಪ್ಪನಾಯಕ, ತನ್ನ ತಂದೆಯ ಸಾವಿಗೆ ಕಾರಣವಾಗಿದ್ದ ಮಾಯಕೊಂಡವನ್ನು ವಶಪಡಿಸಿಕೊಳ್ಳುವ ಪಣತೊಟ್ಟು ಗುತ್ತಿಯ ಮುರಾರಿರಾಯ, ಆದವಾನಿಯ ಸುಬೇದಾರ ಮೋತಿಖಾನರ ಸಹಾಯದಿಂದ ವಶಪಡಿಸಿಕೊಂಡು ತನ್ನ ತಂದೆಯ ಕೀರ್ತಿಯನ್ನು ಉಳಿಸಿದನು. ಆದರೆ ಇದಕ್ಕೆ ಪ್ರತಿಯಾಗಿ ಶತ್ರುಗಳು ಸಂತೆಬೆನ್ನೂರನ್ನು ಮುತ್ತಿದಾಗ ಮುರಾರಿ ರಾಯ ಮತ್ತು ಮೋತಿಖಾನರು ಶತ್ರುಗಳ ಆಮಿಷಕ್ಕೆ ಒಳಗಾಗಿದ್ದರಿಂದ ಅಸಹಾಯಕನಾಗಿ ದುರ್ಗಕ್ಕೆ ಮರಳಿದನು. ನಂತರ ಹದಡಿ, ಹೊನ್ನೂರು ಕೋಟೆಗಳನ್ನು ವಶಪಡಿಸಿಕೊಂಡನು. ಹಾಗು ರಾಯದುರ್ಗ ಸೀಮೆಯ ಕರೆಕಲ್ಲು ತಿಮ್ಮಲಾಪುರ ಕೋಟೆಯನ್ನು ವಶಪಡಿಸಿಕೊಂಡು ಅದಕ್ಕೆ ಮಹದೇವನ ಕೋಟೆ ಎಂದು, ಬೂದಿಹಾಳು ಕೋಟೆಯನ್ನು ತೆಗೆದುಕೊಂಡು ಗಿರಿಜಾನಗರವೆಂದು ನಾಮಕರಣ ಮಾಡಿದನು.[೨೪೬] ಆನೆಗೊಂದಿಯವರೊಂದಿಗೂ ಸಣ್ಣ ಘರ್ಷಣೆ ನಡೆಯಿತು. ಇವನು ಕೆಲವು ಗಡಿಗಳನ್ನು ಹೊಸದಾಗಿ ಗೆದ್ದನು. ಹೀಗೆ ಆಗಾಗ ಅಲ್ಲಲ್ಲಿ ಸಣ್ಣಪುಟ್ಟ ಘರ್ಷಣೆಗಳು ಜರುಗಿದರೂ, ದುರ್ಗದ ಘನತೆಗೇನೂ ಧಕ್ಕೆ ಬರಲಿಲ್ಲ.

ಇವನು ದುರ್ಗದ ಬೆಟ್ಟದ ಮೇಲೆ ಕಣಜಗಳನ್ನು, ಒಂದು ಬಣ್ಣದ ಚಾವಡಿಯನ್ನು ಕಟ್ಟಿಸಿದನೆಂದು ತಿಳಿದುಬರುತ್ತದೆ. ಮಕ್ಕಳಿಲ್ಲದ ಈ ದೊರೆ ಬಹುಶಃ ವಿಷಪ್ರಾಶನದಿಂದ ಕ್ರಿ.ಶ.೧೭೫೪ ರಲ್ಲಿ ತೀರಿಕೊಂಡನು ಎಂದು ತಿಳಿದುಬರುತ್ತದೆ. ಇವನು ತನ್ನ ಮರಣದ ಮುಂಚೆಯೇ, ತನ್ನ ದಾಯಾದಿ ಸಂಬಂಧದ ಹುಡುಗ ದೊಡ್ಡಮದಕರಿನಾಯಕನನ್ನು ದತ್ತುತೆಗೆದುಕೊಂಡಿದ್ದನು. ಆದರೆ ಅವನಿಗೆ ಪಟ್ಟಕಟ್ಟಲಿಲ್ಲ.

ರಾಜಾವೀರಮದಕರಿನಾಯಕ

ಇಮ್ಮಡಿ ಕಸ್ತೂರಿರಂಗಪ್ಪನಾಯಕನ ಮರಣದ ನಂತರ ರಾಜಮಾತೆ ಓಬವ್ವನಾಗತಿಯು ತನ್ನ ರಾಜಕೀಯ ಕುತಂತ್ರದಿಂದ ಜಾನಕಲ್ಲಿನ ತೊದಲು ಭರಮಪ್ಪನಾಯಕನ ಹನ್ನೆರಡು

ವರ್ಷದ ಮಗನನ್ನು 'ರಾಜವೀರಮದಕರಿನಾಯಕ'ನೆಂಬ ಹೆಸರಿನೊಂದಿಗೆ ಕ್ರಿ.ಶ.೧೭೫೪ರಲ್ಲಿ ಪಟ್ಟಕ್ಕೆ ತಂದಳು. ಇವನನ್ನು ಚಿಕ್ಕಮದಕರಿನಾಯಕ ಅಥವಾ ಕಡೇಮದಕರಿನಾಯಕನೆಂತಲೂ ಕರೆಯಲಾಗಿದೆ. ನಂತರ ರಾಜಮಾತೆ ಓಬವ್ವನಾಗತಿ ಚಿಕ್ಕಮದಕರಿನಾಯಕನ ಕೈಗೆ ರಾಜಮುದ್ರೆಯನ್ನು ಕೊಟ್ಟು, ನಿನಗೆ 'ಕೂತಪಟ್ಟ', ದೊಡ್ಡಮದಕರಿನಾಯಕನ ಕೈಗೆ ಕತ್ತಿಯನ್ನು ಕೊಟ್ಟು ಅವನನ್ನು 'ಕಾಳಗದ ಅಯ್ಯ' ಎಂದು ಕರೆದು ನಿನಗೆ 'ನಿಂತಪಟ್ಟ' ಎಂದು ತಿಳಿಸಿ, ಅಪ್ರಾಪ್ತ ಚಿಕ್ಕಮದಕರಿನಾಯಕನ ರಾಜಪ್ರತಿನಿಧಿಯಾಗಿ ತಾನೇ ಸರ್ವಾಧಿಕಾರಿಯಾದಳು. ಅಂದಿನಿಂದ ಚಿಕ್ಕಮದಕರಿನಾಯಕ ದುರ್ಗದ ಪ್ರಭುವಾಗಿಯೂ, ದೊಡ್ಡಮದಕರಿನಾಯಕ ದೊರೆಯ ರಕ್ಷಕನಾಗಿಯೂ ಕೊನೆಯವರೆಗೂ ಅನ್ಯೋನ್ಯವಾಗಿದ್ದರೆಂದು ದಾಖಲೆಗಳು ತಿಳಿಸುತ್ತವೆ. ಓಬವ್ವನಾಗತಿಯ ಮರಣದ ನಂತರ ಚಿಕ್ಕಮದಕರಿನಾಯಕ ಸ್ವತಂತ್ರ ಪ್ರಭುವಾದನು.

ರಾಜಾವೀರಮದಕರಿನಾಯಕ ಇನ್ನು ಅಪ್ರಾಪ್ತ ವಯಸ್ಕನೆಂಬ ಕಾರಣಕ್ಕೆ ನೆರೆಯ ಪಾಳೆಯಗಾರರು, ರಾಯದುರ್ಗದವರು, ಮರಾಠರು, ಹೈದರಾಲಿ ಮುಂತಾದವರು ದುರ್ಗದ ಮೇಲೆ ದಾಳಿ ನಡೆಸಿದರು. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ವೈರಿಗಳನ್ನೆಲ್ಲಾ ಸೋಲಿಸಿ ಚಿತ್ರದುರ್ಗದ ಕೀರ್ತಿ ಪತಾಕೆಯನ್ನು ಹೆಚ್ಚಿಸಿದನು. ರಾಯದುರ್ಗದ ಪಾಳೆಯಗಾರರನ್ನು ಸೋಲಿಸಿ ಕೋನಾಪುರ, ಕೊಡಗನೂರು, ರಾಯದುರ್ಗದ ಕೋಟೆ ಮುಂತಾದ ಗಡಿ ಠಾಣ್ಯಗಳನ್ನು ವಶಪಡಿಸಿಕೊಂಡನು. ಹರಪನಹಳ್ಳಿ ಸೋಮಶೇಖರನಾಯಕ, ಸವಣೂರಿನ ನವಾಬ ಹಕೀಂಖಾನ್, ರಾಯದುರ್ಗದ ಕೃಷ್ಣಪ್ಪನಾಯಕ ಮತ್ತು ಬಿದನೂರಿನವರೊಂದಿಗೆ ದುರ್ಗದ ಗಡಿಪ್ರದೇಶವಾದ ತೋಲಹಳ್ಳಿಯನ್ನು ಮುತ್ತಿದಾಗ ಅವರನ್ನು ಓಡಿಸಿದನು. ತದನಂತರ ಕ್ರಿ.ಶ.೧೭೬೧ರಲ್ಲಿ ಜರಿಮಲೆ ಮತ್ತು ತರಿಕೆರೆಯ ಪಾಳೆಯಗಾರರನ್ನು ಅಡಗಿಸಿದನು.

ಈ ವೇಳೆಗಾಗಲೇ ಚಿತ್ರದುರ್ಗ ದಕ್ಷಿಣಭಾರತದಲ್ಲಿ ಒಂದು ಪ್ರಬಲ ಸಂಸ್ಥಾನವಾಗಿತ್ತು. ಅದೇ ಸಂದರ್ಭದಲ್ಲಿ ಚಿತ್ರದುರ್ಗ ಪಾಳೆಯಗಾರರಿಗೆ ಸಿಂಹಸ್ವಪ್ನವಾಗಿದ್ದ ಶ್ರೀರಂಗಪಟ್ಟಣದ ನವಾಬ ಹೈದರಾಲಿಯ ರಾಜ್ಯ ವಿಸ್ತರಣೆಯ ಆಕಾಂಕ್ಷೆ ಹೆಚ್ಚಾಗಿತ್ತು. ಈ ಸಂದರ್ಭದಲ್ಲಿ ಮರಾಠರು ಮತ್ತು ಹೈದರಾಲಿ, ಒಬ್ಬರ ವಿರುದ್ಧ ಒಬ್ಬರು ದುರ್ಗದ ದೊರೆಗಳ ಸಹಾಯ ಹಸ್ತ ಕೇಳುವ ಉತ್ಸುಕತೆಯಲ್ಲಿದ್ದರು. ಇದೇ ಸಂದರ್ಭವನ್ನು ಸದುಪಯೋಗಪಡಿಸಿಕೊಂಡ ರಾಜವೀರಮದಕರಿನಾಯಕ ಬಹಳ ಚಾಣಾಕ್ಷತನದಿಂದ ಒಂದು ಕಡೆ ಹೈದರಾಲಿಗೆ ಸಹಾಯ ಮಾಡಿದರೆ, ಮತ್ತೊಂದೆಡೆ ಮರಾಠರೊಂದಿಗೆ ಸ್ನೇಹ ಬೆಳೆಸಿ ಅವರನ್ನು ಅಡಗಿಸಲು ಪ್ರಯತ್ನಿಸುತ್ತಿದ್ದ. ಕ್ರಿ.ಶ.೧೭೬೩ರಲ್ಲಿ ಬಿದನೂರು, ಬಂಕಾಪುರ, ಬಸವಾಪಟ್ಟಣ, ಇಕ್ಕೇರಿ, ಹಾಗು ಗುತ್ತಿಯನ್ನು ಗೆದ್ದುಕೊಟ್ಟರೆ, ಮತ್ತೊಂದೆಡೆ ಸಾವನದುರ್ಗ, ಹುತ್ತರಿದುರ್ಗ, ನುಗ್ಗೇಹಳ್ಳಿ,

ಹಾಗಲವಾಡಿ ಮತ್ತು ಬಾಣಾವರಗಳನ್ನು ವಶಪಡಿಸಿಕೊಂಡನು. ಕ್ರಿ.ಶ.೧೭೭೯ರಲ್ಲಿ ತುರುವೆಕೆರೆ, ಬೆಳ್ಳೂರು, ಕೋಲಾರ, ಮುಳಬಾಗಿಲು, ದೇವರಾಯನದುರ್ಗ, ಮಂಜರಾಬಾದ್, ದಾರಿನಾಯಕನಪಾಳ್ಯ ಮುಂತಾದ ಕೋಟೆಗಳಿಗೆ ಠಾಣ್ಯ ಹಾಕಿದನು. ನಂತರ ಹೈದರನಿಗೆ ಅಸಾಧ್ಯವಾಗಿದ್ದ ನಿಜಗಲ್ಲು ಕೋಟೆಯನ್ನು ಗೆದ್ದುಕೊಟ್ಟನು.[೨೪೭] ನಂತರ ದಕ್ಷಿಣದ ಕಡೆಗೆ ಬಂದ ಮರಾಠರ ಮಾದವರಾಯನು ಮದಕರಿನಾಯಕನ ಸಹಾಯ ಯಾಚಿಸಿದಾಗ, ಮದಕರಿನಾಯಕ ಅನವಟ್ಟಿ ಕೋಟೆಯ ವಶದಲ್ಲಿ ಮರಾಠರಿಗೆ ಸಹಾಯ ಮಾಡಿದ್ದರಿಂದ ಹೈದರಾಲಿ ಮದಕರಿನಾಯಕನಿಗೆ ಶತ್ರುವಾಗಿ ಪರಿಣಮಿಸಿದನೆಂದು ಸ್ಪಷ್ಟವಾಗುತ್ತದೆ.[೨೪೮] ಆಗ ಇವನನ್ನು ಹೇಗಾದರೂ ಮಾಡಿ ಮುರಿಯಬೇಕೆಂದು, ಒಟ್ಟು ನಾಲ್ಕು ಬಾರಿ ದುರ್ಗದ ಮೇಲೆ ಯುದ್ಧ ಸಾರಿದನು. ಮೊದಲ ಬಾರಿಗೆ ಕ್ರಿ.ಶ.೧೭೬೦ರಲ್ಲಿ ದಾಳಿ ಮಾಡಿ ವೇಣುಕಲ್ಲುದುರ್ಗ, ಧರ್ಮಪುರ, ದೊಡ್ಡೇರಿ, ತಳುಕು, ಪರಶುರಾಂಪುರ, ಹಿರಿಯೂರು, ನಾಯಕನಹಟ್ಟಿ, ಗೌರಸಮುದ್ರ, ಹೊಸದುರ್ಗ, ಹೊಳಲ್ಕೆರೆ, ರಂಗಯ್ಯನದುರ್ಗ, ಜಾನಕಲ್ಲು, ಭರಮಣ್ಣನಾಯಕನದುರ್ಗ, ರಾಮಗಿರಿ, ಬಾಗೂರು ಮುಂತಾದ ಗಡಿಗಳನ್ನು ವಶಪಡಿಸಿಕೊಂಡನು. ಆಗ ಮದಕರಿನಾಯಕ ಹೈದರಾಲಿಗೆ ಮೂರು ಲಕ್ಷ ವರಹಗಳನ್ನು ನೀಡಿ ಅವನೊಂದಿಗೆ ಸಂಧಾನ ಮಾಡಿಕೊಂಡನು. ಆದರೆ ಹೈದರಾಲಿ ಕ್ರಿ.ಶ.೧೭೬೪ರಲ್ಲಿ ಎರಡನೆಯ ಬಾರಿ, ೧೭೭೭ರಲ್ಲಿ ಮೂರನೆಯ ಬಾರಿ, ೧೭೭೯ರಲ್ಲಿ ನಾಲ್ಕನೆಯ ಬಾರಿ ಯುದ್ಧಗಳನ್ನು ಕೈಗೊಂಡನು. ಕೊನೆಯ ಯುದ್ಧವು ಸುಮಾರು ನಾಲ್ಕು ತಿಂಗಳ ಕಾಲ ನಡೆಯಿತು. ಈ ಯುದ್ಧದ ಕೊನೆಯ ಸುತ್ತಿನ ಕಾಳಗಕ್ಕೆ ಸಿದ್ಧನಾದ ಮದಕರಿನಾಯಕ ಒಂದು ಶುಭಮುಹೂರ್ತದಲ್ಲಿ ಮಗನಾದ ಭರಮಪ್ಪನಾಯಕನಿಗೆ ಪಟ್ಟಕಟ್ಟಿ, ಅದರ ಜ್ಞಾಪಕಾರ್ಥವಾಗಿ ತ್ಯಾಗರಾಜ ಬೀದಿಯ ತರಕಾರಿ ಮಾರುಕಟ್ಟೆಯ ಎದುರಿಗಿರುವ ಆಂಜನೇಯ ಗುಡಿಯ ಮುಂದೆ ಒಂದು ಅರಳಿ ಗಿಡವನ್ನು ನೆಟ್ಟನು. ಆದರೆ ಅದು ಇಂದು ಕಂಡುಬರುವುದಿಲ್ಲ.[೨೪೯] ಮದಕರಿನಾಯಕನ ಸೈನ್ಯದಲ್ಲಿದ್ದ ಕೆಲವು ಮುಸಲ್ಮಾನ ಸರದಾರರು ಮತ್ತು ಹಿಂದೂ ಅಧಿಕಾರಿಗಳು ಹೈದರ ನೊಂದಿಗೆ ಸೇರಿದಾಗ ಕ್ರಿ.ಶ.೧೭೭೯ರಲ್ಲಿ ಚಿತ್ರದುರ್ಗ ಹೈದರನ ವಶವಾಯಿತು.[೨೫೦]

ಚಿತ್ರದುರ್ಗ ಹೈದರನ ನೇರ ಆಳ್ವಿಕೆಗೆ ಒಳಪಟ್ಟನಂತರ ಷೇಖ್ಆಯಾಸ್‌ನನ್ನು ಚಿತ್ರದುರ್ಗಕ್ಕೆ ನೇಮಿಸಿ, ಮದಕರಿನಾಯಕ, ಪರಶುರಾಮಪ್ಪನಾಯಕ, ಕುಮಾರ ಭರಮಪ್ಪನಾಯಕ ಮತ್ತು ದೊಡ್ಡಮದಕರಿನಾಯಕರನ್ನು ಬಂಧಿಸಿ ಶ್ರೀರಂಗಪಟ್ಟಣಕ್ಕೆ ಸಾಗಿಸಿ, ಚಿಕ್ಕಮದಕರಿನಾಯಕ (ರಾಜಾವೀರನದಕರಿನಾಯಕ) ಮತ್ತು ದೊಡ್ಡಮದಕರಿನಾಯಕರನ್ನು ಬೇರೆ ಬೇರೆಯಾಗಿ ಬಂಧನದಲ್ಲಿಟ್ಟನು. ಪರಶುರಾಮಪ್ಪನಾಯಕ ಮತ್ತು ಕುಮಾರ ಭರಮಪ್ಪನಾಯಕರನ್ನು

ಕಬ್ಬಾಳುದುರ್ಗದಲ್ಲಿ ಸೆರೆ ಇಡಲಾಯಿತು. ಇವರು ಅಲ್ಲಿಂದ ತಪ್ಪಿಸಿಕೊಳ್ಳಲು ಯತ್ನಿಸಿ ಸಿಕ್ಕಿ ಬಿದ್ದಾಗ ಹೈದರನ ಆದೇಶದಂತೆ, ಭೈರಾಪಟ್ಟಣ ಎಂಬ ಊರಿನ ಹತ್ತಿರ ಆಲದ ಮರವೊಂದಕ್ಕೆ ನೇಣುಹಾಕಿದರು. ಇತ್ತ ಚಿಕ್ಕಮದಕರಿನಾಯಕ ವಿಷಪ್ರಾಶನದಿಂದ ಮರಣ ಹೊಂದಿದನು.[೨೫೧] ದೊಡ್ಡಮದಕರಿನಾಯಕ ಬಿಡುಗಡೆಗೊಂಡನು. ಹೀಗೆ ರಾಜಾವೀರಮದಕರಿ ನಾಯಕ ರಾಜಕೀಯ ಹೋರಾಟಗಳ ಜೊತೆಗೆ ಕೆಲವು ದಾನದತ್ತಿಗಳನ್ನು ನೀಡಿದ್ದನು. ತಾನು ಹಿರಿಯೂರಿನಲ್ಲಿ ಸ್ಥಾಪಿಸಿದ್ದ ಅನ್ನಛತ್ರಕ್ಕೆ ಗೌಡನಹಳ್ಳಿಯನ್ನು ಧಾರೆಯೆರೆದುಕೊಟ್ಟನು,[೨೫೨] ಅಲ್ಲದೆ ಒನಕೆ ಓಬವ್ವನ ಸಾಹಸಕ್ಕೆ ಮೆಚ್ಚಿದ ಇವನು ಅಗಸನಕಲ್ಲನ್ನು ಜಹಗೀರಿ ಹಾಕಿಕೊಟ್ಟನು ಎಂದು ತಿಳಿದುಬರುತ್ತದೆ.[೨೫೩]

ದೊಡ್ಡಮದಕರಿನಾಯಕ

ದಿವಾನ್ ಪೂರ್ಣಯ್ಯನವರ ಸಲಹೆಯಂತೆ ಹೈದರಾಲಿಯು ದೊಡ್ಡಮದಕರಿನಾಯಕನನ್ನು ಬಂಧಮುಕ್ತಗೊಳಿಸಿ, ಬೃಹತ್ ಸೈನ್ಯವೊಂದಕ್ಕೆ ದಳಪತಿಯನ್ನಾಗಿ ನೇಮಿಸಿದ. ಇವನು ಕಲ್ಲಿಕೋಟೆಯಲ್ಲಿ ಕೆಲವು ಕಾಲ ನೆಲೆಸಿದ್ದನು. ಆದರೆ ಹೈದರನ ಮರಣಾನಂತರ ಅಧಿಕಾರಕ್ಕೆ ಬಂದ ಟಿಪ್ಪುವಿನ ಕಾಲದಲ್ಲಿ, ತನ್ನ ಕೊಲೆ ಯತ್ನದ ವಿಷಯ ತಿಳಿದ ದೊಡ್ಡಮದಕರಿನಾಯಕ ಅಲ್ಲಿಂದ ದಕ್ಷಿಣಕ್ಕೆ ಬಂದು ತಿರುವನಂತಪುರದ ಮಹಾರಾಜ ರಾಮವರ್ಮನ ಆಶ್ರಯಪಡೆದನು. ಕ್ರಿ.ಶ.೧೭೯೯ರಲ್ಲಿ ಬ್ರಿಟಿಷರು ಟಿಪ್ಪುವಿನ ವಿರುದ್ಧ ಶ್ರೀರಂಗಪಟ್ಟಣವನ್ನು ಮುತ್ತಿದಾಗ ರಾಮ ವರ್ಮನ ಸಲಹೆಯಂತೆ, ಶ್ರೀರಂಗಪಟ್ಟಣದ ಮುತ್ತಿಗೆಯಲ್ಲಿ ಪಾಲ್ಗೊಂಡು ಬ್ರಿಟಿಷರಿಗೆ ನೆರವಾದನು. ಈ ಕಾರ್ಯಾಚರಣೆಯಲ್ಲಿ ಟಿಪ್ಪು ಮೃತನಾಗಿ ಮೈಸೂರು ಬ್ರಿಟಿಷರ ವಶವಾಯಿತು. ಆಗ ಬ್ರಿಟಿಷರು ದಿವಾನ್ ಪೂರ್ಣಯ್ಯನಿಗೆ ಚಿತ್ರದುರ್ಗ ಸಂಸ್ಥಾನವನ್ನು ದೊಡ್ಡಮದಕರಿನಾಯಕನಿಗೆ ಮರಳಿಸಲು ಆದೇಶ ನೀಡಿದರೂ, ಮರಳಿಸದೇ ಇದ್ದುದರಿಂದ ನಿರಾಶನಾಗಿ ಮೈಸೂರನ್ನು ಬಿಟ್ಟು, ಚಿತ್ರದುರ್ಗ ಸಂಸ್ಥಾನಕ್ಕೆ ಸೇರಿದ ದೊಡ್ಡೇರಿ ತಾಲ್ಲೂಕಿಗೆ ಬಂದು ನೆಲೆಸಿದನು. ತನ್ನ ಎಲ್ಲಾ ಆಸ್ತಿಯನ್ನು ಮಕ್ಕಳಿಗೆ ಪಾಲು ನೀಡಿ ಮಗ ಕಾಟಪ್ಪನಾಯಕನಿಗೆ ಸ್ಥಾನಾಧಿಪತ್ಯವನ್ನು ಕೊಟ್ಟು, ಕ್ರಿ.ಶ.೧೮೨೫ರಲ್ಲಿ ಚಳ್ಳಕೆರೆಯಲ್ಲಿ ಮರಣ ಹೊಂದಿದನು. ಈತನ ಮರಣದೊಂದಿಗೆ ಚಿತ್ರದುರ್ಗ ಪಾಳೆಯಗಾರರ ಕಾಲಾವಧಿ ಮುಕ್ತಾಯವಾದಂತೆ ತಿಳಿದುಬರುತ್ತದೆ.[೨೫೪]

ಅಡಿಟಿಪ್ಪಣಿಗಳು

೧. ನಾಯಕ ಹಾ.ಮಾ., ಮತ್ತು ವೆಂಕಟಾಚಲಶಾಸ್ತ್ರಿ ಟಿ.ವಿ., ೧೯೭೪: ಕ.ಸಾ.ಚ.ಸಂ-೧, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ಪು.೨೧೩

೨. ಗೋಪಾಲ ಬಾ.ರಾ., ೧೯೮೫: **ಕಾರ್ಪಸ್ ಆಫ್ ಕನ್ನಡ ಇನ್‌ಸ್ಕ್ರಿಪ್ಷನ್ಸ್**, ಸಂ-೧, ಕದಂಬ ಇನ್‌ಸ್ಟಿಟ್ಯೂಟ್ ಆಫ್ ಕಲ್ಚರಲ್ ಸ್ಟಡೀಸ್, ಶಾಸನ ಸಂಪುಟ-೨೦, ಸಿರ್ಸಿ (ಕರ್ನಾಟಕ), ಪು.೧೨೫

೩. ಲಕ್ಷ್ಮಣ್‌ತೆಲಗಾವಿ, ೨೦೦೪: **ಚಿತ್ರದುರ್ಗ ಜಿಲ್ಲಾ ಇತಿಹಾಸ ಅಧ್ಯಯನದ ವ್ಯಾಪಕತೆ ಮತ್ತು ಸಾಧ್ಯತೆ-ಒಂದು ಶತಮಾನ**, ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ, ಪು.೧ (ಈ ಹಳ್ಳಿಗಳಲ್ಲಿ ಬೇಚಾರಕ್ ಹಳ್ಳಿಗಳೂ ಸೇರಿವೆ).

೪. ಅದೇ, ಪು.೧

೫. ತಿಪ್ಪೇಸ್ವಾಮಿ ಎಸ್., ೨೦೦೪: **ರಕ್ಷಣಾ ವಾಸ್ತುಶಿಲ್ಪ-ಚಿತ್ರದುರ್ಗ ಜಿಲ್ಲೆ**(ಅಪ್ರಕಟಿತ ಮಹಾಪ್ರಬಂಧ) ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.೧೮

೬. ರಮೇಶ್ ಬೆ.ಗೋ., ೧೯೮೫: **ಸಂಪನ್ಮೂಲಗಳು ಮತ್ತು ಕೈಗಾರಿಕಾವಕಾಶಗಳು-ಚಿತ್ರದುರ್ಗ ಜಿಲ್ಲೆ**, ಪು.೭

೭. ಮಂಜುನಾಥ ಕೆ.ಎ., ೧೯೭೯: **'ಚಿತ್ರದುರ್ಗ ಇತಿಹಾಸದಲ್ಲಿ ಐತಿಹ್ಯ'**, ಐತಿಹಾಸಿಕ ಚಿತ್ರದುರ್ಗ, ಲಕ್ಷ್ಮಣ್ ತೆಲಗಾವಿ, ಕೆ.ವೆಂಕಣ್ಣಾಚಾರ್, (ಸಂ) ಜಿಲ್ಲಾ ಇತಿಹಾಸ ಸಂಶೋಧನಾ ಮಂಡಲಿ, ಚಿತ್ರದುರ್ಗ, ಪು.೧೪

೮. ನಾರಾಯಣ್‌ರಾವ್ ಎ.ಎಸ್., ೨೭-೦೪-೨೦೦೧: **'ಬೆಂಗಾಡಿನಲ್ಲೊಂದು ಸುಂದರ ಮಲೆನಾಡು'**, ಪ್ರಜಾವಾಣಿ ದಿನಪತ್ರಿಕೆ, (ಎಸ್.ತಿಪ್ಪೇಸ್ವಾಮಿ, ಪೂರ್ವೋಕ್ತ)

೯. ಶ್ರೀಸತ್ಯನ್ ಬಿ.ಎನ್., ೧೯೬೮: **ಚಿತ್ರದುರ್ಗ ಜಿಲ್ಲಾ ಗೆಜೆಟಿಯರ್**, ಪು.೭ (ಈ ಬೆಟ್ಟಗುಡ್ಡಗಳ ಪರಿಸರವನ್ನು ವಿಶಿಷ್ಟ ಸೌಂದರ್ಯದಿಂದ ಕೂಡಿದ ಪ್ರದೇಶವೆಂದು ಬ್ರೂಸ್‌ಪೂಟ್ ವರ್ಣಿಸಿದ್ದಾರೆ).

೧೦. ಅದೇ, ಪು.೮

೧೧. **ಕನ್ನಡ ವಿಷಯ ವಿಶ್ವಕೋಶ**, ಪು.೧೧೫೪

೧೨. ರಮೇಶ್ ಬೆ.ಗೋ., **ಪೂರ್ವೋಕ್ತ**, ಪು.೮

೧೩. ಶಿವರುದ್ರಪ್ಪ ಜಿ.ವಿ., ೧೯೮೭: 'ಚಿತ್ರದುರ್ಗ ಜಿಲ್ಲೆಯ ಭೂ ಇತಿಹಾಸ', **ಹರತಿಸಿರಿ**, ಲಕ್ಷ್ಮಣ್ ತೆಲಗಾವಿ (ಸಂ), ಪು.೫೭೪, ೫೭೫

೧೪. ಪ್ರಜಾವಾಣಿ ದಿನಪತ್ರಿಕೆ, ೧೬-೦೧-೧೯೯: (ಎಸ್. ತಿಪ್ಪೇಸ್ವಾಮಿ, **ಪೂರ್ವೋಕ್ತ**)

೧೫. ಕ.ವಿ.ವಿ.ಪು.೭೧

೧೬. ಅದೇ, ಪು.೭೧

೧೭. ರಮೇಶ್ ಬೆ.ಗೋ., ಪೂರ್ವೋಕ್ತ, ಪು.೨೪

೧೮. ಚಿತ್ರದುರ್ಗ ಜಿಲ್ಲೆಯ ಅಂಕಿ ಅಂಶಗಳ ನೋಟ, ಪು.೫

೧೯. ಅದೇ, ಪು.೧೨

೨೦.ಅದೇ, ಪು.೨೮

೨೧. ಮಂಜಣ್ಣ ರಾಮಸಾಗರ ಪಿ.ಎಂ., ೨೦೦೭: 'ಚಂದ್ರವಳ್ಳಿ ಮತ್ತು ಏಕಲವ್ಯ ಧ್ವನಿ', ಮಾಸಪತ್ರಿಕೆ

೨೨. ಲಕ್ಷ್ಮಣ್‌ತೆಲಗಾವಿ, ಕೆ.ವೆಂಕಣ್ಣಾಚಾರ್., (ಸಂ), ೧೯೭೯: 'ಐತಿಹಾಸಿಕ ಚಿತ್ರದುರ್ಗ', ಬೃಂದಾವನ ಮುದ್ರಣ, ಪು.೧೭೪

೨೩. ಲಕ್ಷ್ಮಣ್‌ತೆಲಗಾವಿ, ಎಂ.ವಿ.ಶ್ರೀನಿವಾಸ್., (ಸಂ), ೧೯೯೫: **ಹುಲ್ಲೂರು ಶ್ರೀನಿವಾಸ ಜೋಯಿಸರ ಐತಿಹಾಸಿಕ**

ಲೇಖನಗಳು, ಪು.೩೫೯

೨೪. ಎ.ಕ.ಸಂ-೧೧, ಮೊಳಕಾಲ್ಮೂರು-೨೭

೨೫. ಅದೇ, ಚಿತ್ರದುರ್ಗ-೨೩

೨೬. ಲಕ್ಷ್ಮಣ್‌ತೆಲಗಾವಿ, ಎಂ.ವಿ.ಶ್ರೀನಿವಾಸ್.,(ಸಂ), ೧೯೯೫: ಪೂರ್ವೋಕ್ತ, ಪು.೩೭೯ (ಚಿತ್ರದುರ್ಗದಲ್ಲಿ ಶ.ಕ.೧೨೦೮ನೆ ವ್ಯಯ ಸಂವತ್ಸರದ (ಕ್ರಿ.ಶ.೧೨೮೬) ಶಿಲಾಶಾಸನದಲ್ಲಿ ಹಿಡಿಂಬಪಟ್ಟಣ ಎಂದಿದೆ.)

೨೭. ಎ.ಕ.ಸಂ-೧೧, ಚಿತ್ರದುರ್ಗ-೨೮

೨೮. ಸುಂದರ ಅ., ೨೦೦೫: **ಚಿತ್ರದುರ್ಗ ಜಿಲ್ಲೆಯ ಪುರಾತತ್ವ ಸಂಶೋಧನೆ ಮುಂದೇನು?, ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ,** ಡಾ.ಆರ್. ಗೋಪಾಲ್, (ಸಂ), ಪ್ರಾಚ್ಯವಸ್ತು ಸಂಗ್ರಹಾಲಯಗಳ ನಿರ್ದೇಶನಾಲಯ, **ಹೊಸಪೇಟೆ,** ಪು.೧೧

೨೯. ಶ್ರೀಸತ್ಯನ್ ಬಿ.ಎನ್., ೧೯೬೮: **ಪೂರ್ವೋಕ್ತ,** ಪು.೨೭

೩೦. ಅದೇ, ಪು.೨೭(ದೇವಾಲಯದ ಪೂಜಾರಿಗಳು ಸಹ ಇವುಗಳ ವೃತ್ತಾಂತವನ್ನು ಇದೇ ರೀತಿ ಹೇಳುತ್ತಾರೆ).

೩೧. ಎ.ಕ.ಸಂ-೧೧, ಚಿತ್ರದುರ್ಗ-೩೨

೩೨. ಸುಂದರ ಅ., ೧೯೯೨: 'ಹಿಡಿಂಬಪಟ್ಟಣ ಒಂದು ವಿಮರ್ಶಾತ್ಮಕ ಟಿಪ್ಪಣಿ', **ಇತಿಹಾಸ ದರ್ಶನ,** ಸಂ-೭, ಪು.೮೫

೩೩. ಲಕ್ಷ್ಮಣ್‌ತೆಲಗಾವಿ, ಎಂ.ವಿ.ಶ್ರೀನಿವಾಸ್(ಸಂ), ೧೯೯೫: **ಪೂರ್ವೋಕ್ತ,** ಪು.೩೭೯

೩೪. ಶ್ರೀಸತ್ಯನ್ ಬಿ.ಎನ್., **ಪೂರ್ವೋಕ್ತ,** ಪು.೧,೨ ಮತ್ತು ಹಯವದನರಾವ್ ಸಿ.(ಸಂ), **ಮೈಸೂರು ಗೆಜೆಟಿಯರ್,** ಪು.೧೪೨೫

೩೫. ಹು.ಶ್ರೀ.ಜೋ. **ಐತಿಹಾಸಿಕ ಲೇಖನಗಳು,** ಪು.೩೮೦

೩೬. ಲಕ್ಷ್ಮಣ್‌ತೆಲಗಾವಿ, ಕೆ.ವೆಂಕಣ್ಣಾಚಾರ್, ೧೯೭೯: **ಪೂರ್ವೋಕ್ತ,** ಪು.೨

೩೭. ಲಕ್ಷ್ಮಣ್‌ತೆಲಗಾವಿ, ಕೆ.ವೆಂಕಣ್ಣಾಚಾರ್, ಹು.ಶ್ರೀ.ಜೋ., (ಸಂ), ೧೯೮೦: **ಚಿತ್ರದುರ್ಗ ದರ್ಶಿನಿ,** ಪು.೨

೩೮. ಎ.ಕ.ಸಂ-೧೧, ಚಿತ್ರದುರ್ಗ-೩೨, ಹುಲಿಗುಂದ-೧೨೮೬

೩೯. ಅದೇ, ಪು.೬, ೧೩೩೮

೪೦. ಅದೇ, ಪು.೩, ೧೩೫೬

೪೧. ಅದೇ, ಪು.೪೨, ಗುಂಟನೂರು, ೧೫೩೮

೪೨. ಅದೇ, ಪು.೫೬, ಹಳುಧಾರ-೧೭೧೮

೪೩. ಎಂ.ಎ.ಅರ್., ೧೯೨೯: ಚಂದ್ರವಳ್ಳಿ ಬಯಲು, ಪು.೧೬೭೭

೪೪. ಲಕ್ಷ್ಮಣ್‌ತೆಲಗಾವಿ, ಕೆ.ವೆಂಕಣ್ಣಾಚಾರ್, ೧೯೭೯: ಪೂರ್ವೂಕ್ತ, ಪು.೨

೪೫. ಹು.ಶ್ರೀ.ಜೋ.ಐತಿಹಾಸಿಕ ಲೇಖನಗಳು, ಪೂರ್ವೋಕ್ತ, ಪು.೩೮೧

೪೬. ರೈಸ್ ಬಿ.ಎಲ್., 'ಮೈಸೂರು ಶಾಸನಗಳಲ್ಲಿ ಚಿತ್ರದುರ್ಗ ಸಂಪುಟ', ೩೪ನೆಯ ಶಾಸನ.

೪೭. ಕೃಷ್ಣಮೂರ್ತಿ ಹನೂರು., ೧೯೭೯: 'ಜಾನಪದ ಸಾಹಿತ್ಯದಲ್ಲಿ ಚಿತ್ರದುರ್ಗ', **ಐತಿಹಾಸಿಕ ಚಿತ್ರದುರ್ಗ**, ಪು.೨೨

೪೮. ಪುಟ್ಟಣ್ಣ ಎಂ.ಎಸ್., ೧೯೨೪: **ಚಿತ್ರದುರ್ಗ ಪಾಳೆಯಗಾರರು**, ಪು.೧

೪೯. ಅದೇ, ಪು.೧

೫೦. ಅದೇ, ಪು.೩

೫೧. ಹು.ಶ್ರೀ.ಜೋ. **ಐತಿಹಾಸಿಕ ಲೇಖನಗಳು**, ಪು.೩೮೧

೫೨. ಶಿವತಾರಕ್ ಕೆ.ಬಿ., ೨೦೦೧: **ಕರ್ನಾಟಕದ ಪುರಾತತ್ವ ನೆಲೆಗಳು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.೨೬೭

೫೩. ಜಯಣ್ಣ, ೧೯೭೯: 'ಚಿತ್ರದುರ್ಗದಲ್ಲಿ ಭೂಸಂಶೋಧನೆ', **ಐತಿಹಾಸಿಕ ಚಿತ್ರದುರ್ಗ**, ಪು.೩೩

೫೪. ಕ.ವಿ.ವಿ., ಪು.೫೯

೫೫. ಕೃಷ್ಣ ಎಂ.ಎಚ್., ೧೯೫೩: **ಕರ್ನಾಟಕ ಪೂರ್ವಚರಿತ್ರೆ**

೫೬. ಕೃಷ್ಣ ಎಂ.ಎಚ್., ೧೯೪೦: ಎಂ.ಎ.ಆರ್., ಭಾಗ-೪, ಎಸ್ಕವೇಷನ್ ಆಫ್ ಚಿತ್ರದುರ್ಗ ಡಿಸ್ಟ್ರಿಕ್ಟು ದಿ ಬ್ರಹ್ಮಗಿರಿ ಸೈಟ್.

೫೭. ಕೃಷ್ಣ ಎಂ.ಎಚ್., ಎಂ.ಎ.ಆರ್., ೧೯೪೨: ಭಾಗ-೪, 'ಎಸ್ಕವೇಷನ್'.

೫೮. ಶ್ರೀಕಂಠಶಾಸ್ತ್ರಿ ಎಸ್., ೧೯೭೫: **ಪುರಾತತ್ವ ಶೋಧನೆ**, ಪು.೧೭೯

೫೯. ಶೇಷಾದ್ರಿ ಎಂ., ೧೯೫೬: **ಸ್ಟೋನ್ ಯೂಜಿಂಗ್ ಕಲ್ಚರ್ ಆಫ್ ಪ್ರೀ ಅಂಡ್ ಪ್ರೋಟೋ ಇಸ್ಟಾರಿಕ್ ಮೈಸೂರು**, ಲಂಡನ್, ಆರ್.ಗೋಪಾಲ್ (ಸಂ),

೬೦. ಜಯಣ್ಣ, **ಪೂರ್ವೋಕ್ತ**, ಪು.೩೮

೬೧. ಸುಂದರ ಅ., 'ಚಿತ್ರದುರ್ಗ ಪರಿಸರದಲ್ಲಿ ಪುರಾತತ್ವ ಶೋಧನೆ', **ಮಾನವಿಕ ಭಾರತಿ**, ಸಂ-೨, ಪು.೧, ಸುಂದರ ಅ., 'ಜಟಂಗರಾಮೇಶ್ವರದಲ್ಲಿ ಪ್ರಾಗೈತಿಹಾಸಿಕ ಪುರಾತತ್ವ ಅವಶೇಷಗಳು ಮತ್ತು ಐತಿಹ್ಯ', **ಇತಿಹಾಸ ದರ್ಶನ**, ಸಂ-೧೯, ಪು.೬

೬೨. ಲಕ್ಷ್ಮಣ್‌ತೆಲಗಾವಿ., ೧೯೯೮: ಪ್ರಜಾವಾಣಿ ದಿನಪತ್ರಿಕೆ, **ಶಿಲಾಯುಗದ ಶಿಲಾಸಮಾಧಿ ನಿಲುವುಗಲ್ಲುಗಳ ಪತ್ತೆ**. (ಎಸ್. ತಿಪ್ಪೇಸ್ವಾಮಿ ಪೂರ್ವೋಕ್ತ, ಪು.೨೪)

೬೩. ಸೋಮಶೇಖರ್ ಎಸ್.ವೈ., ೧೯೯೬: 'ಚಿತ್ರದುರ್ಗ ತಾಲ್ಲೂಕು ಚಿಪ್ಪಿನಕೆರೆಯಲ್ಲಿ ಕಂಡುಬಂದಿರುವ ಪ್ರಾಕ್ಚಾರಿತ್ರಿಕ ಕುರುಹುಗಳು', **ಇತಿಹಾಸ ದರ್ಶನ**, ಸಂ-೧೧, ಪು.೩೨, ೩೩

೬೪. ತಿಪ್ಪೇಸ್ವಾಮಿ ಎಚ್., ೨೦೦೦: 'ನುಂಕೆಮಲೆ ಪರಿಸರದಲ್ಲಿ ಪ್ರಾಗೈತಿಹಾಸಿಕ ನೆಲೆಗಳ ಶೋಧನೆ', **ಇತಿಹಾಸ ದರ್ಶನ**, ಸಂ-೧೫, ಪು.೬, ೯

೬೫. ಜಯಣ್ಣ ಉಲ್ಲಾನಹಳ್ಳಿ, ೨೦೦೨: 'ಮೊಳಕಾಲ್ಮೂರು ತಾಲ್ಲೂಕು ಹಾನಗಲ್ಲಿನ ಪುರಾತತ್ವ ಸಮೀಕ್ಷೆ', **ಇತಿಹಾಸ ದರ್ಶನ**, ಸಂ-೧೭, ಪು.೨೧

೬೬. ಎ.ಕ.ಸಂ-೭, ಶಿಕಾರಿಪುರ-೨೨೫

೬೭. ಸುಂದರ ಅ., ೨೦೦೫: **ಚಿತ್ರದುರ್ಗ ಜಿಲ್ಲೆ ಪುರಾತತ್ವ ಸಂಶೋಧನೆ ಮುಂದೇನು?**, **ಪೂರ್ವೋಕ್ತ**, ಪು.೯

೬೮. ಮುಜುಂದಾರ್ ಆರ್.ಸಿ., **ಭಾರತದ ಪ್ರೌಢಇತಿಹಾಸ,** ಪು.೮೬

೬೯. ಶ್ರೀನಿವಾಸ್ ಎಂ.ವಿ., ೧೯೭೬: 'ಚಿತ್ರದುರ್ಗ ಜಿಲ್ಲೆಯಲ್ಲಿ ಮೌರ್ಯರ ಆಳ್ವಿಕೆ', **ಚಂದ್ರವಳ್ಳಿ,** ಎಂ.ವಿ. ಶ್ರೀನಿವಾಸ್, ಲಕ್ಷ್ಮಣ್‌ತೆಲಗಾವಿ (ಸಂ), ಜಿಲ್ಲಾ ಇತಿಹಾಸ ಸಂಶೋಧನಾ ಮಂಡಲಿ, ಚಿತ್ರದುರ್ಗ, ಪು.೨

೭೦. ಗಿರಿಜಾ ಟಿ., ೧೯೯೧: **ಚಿತ್ರದುರ್ಗ ಜಿಲ್ಲಾ ದರ್ಶಿನಿ,** ರೇಖಾ ಪ್ರಕಾಶನ, ದಾವಣಗೆರೆ, ಪು.೨೮೭

೭೧. ಪಿಳ್ಳೈ ಕೆ.ಕೆ., **ದಕ್ಷಿಣಭಾರತದ ಇತಿಹಾಸ,** ಪು.೪೭

೭೨. ಗಿರಿಜಾ ಟಿ. ೧೯೯೧: **ಪೂರ್ವೋಕ್ತ,** ಪು.೫೬೨, ೫೭೨, ೫೭೩

೭೩. ಲಕ್ಷ್ಮಣ್‌ತೆಲಗಾವಿ, ೨೦೦೪: **ಮೌರ್ಯ ಮತ್ತು ಶಾತವಾಹನ ಯುಗ, ಕರ್ನಾಟಕ ಸಂಸ್ಕೃತಿ ಚರಿತ್ರೆ ಸಂ-೧, ಪ್ರಸಾರಾಂಗ, ಕ.ವಿ.ವಿ., ಹಂಪಿ, ಪು.೧೩**

೭೪. ಮಸಗಲಿ ಮಂಜಪ್ಪಶೆಟ್ಟಿ ಎಂ., ೧೯೯೧: **'ಕರ್ನಾಟಕದಲ್ಲಿ ಅಶೋಕನ ಶಾಸನಗಳು',** ಮಸಗಲಿ ಪ್ರಕಾಶನ, ಪು.೧೧೦

೭೫. **ಕರ್ನಾಟಕದ ಪರಂಪರೆ ಭಾಗ-೧,** ಪು.೨೧

೭೬. ಲಕ್ಷ್ಮಣ್‌ತೆಲಗಾವಿ, ೨೦೦೪: **ಮೌರ್ಯ ಮತ್ತು ಶಾತವಾಹನ ಯುಗ, ಪೂರ್ವೋಕ್ತ,** ಪು.೪೪

೭೭. **ಕರ್ನಾಟಕ ಚರಿತ್ರೆ, ಸಂ-೧,** ೧೯೯೭: ಪು.೨೮೭

೭೮. ಸುರೇಶ್ ಬಿ., ೨೦೦೨: **ಚಿತ್ರದುರ್ಗ-ದಾವಣಗೆರೆ ಜಿಲ್ಲೆಗಳ ಪುರಾತತ್ವ ಅಧ್ಯಯನ,** (ಅಪ್ರಕಟಿತ ಮಹಾಪ್ರಬಂಧ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ಪು.೭೧

೭೯. ಚಿದಾನಂದಮೂರ್ತಿ ಎಂ., ೧೯೭೯: **ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ,** ಪು.೧೧೩

೮೦. ಮುಜುಂದಾರ್ ಆರ್.ಸಿ., **ಪೂರ್ವೋಕ್ತ,** ಪು.೮೬

೮೧. ಅಜಯ್‌ಮಿತ್ರಶಾಸ್ತ್ರಿ, ೧೯೯೮: **ದಿ ಶಾತವಾಹನಾಸ್ ಅಂಡ್ ದಿ ವೆಸ್ಟ್ರನ್ ಕ್ಷತ್ರಪಾಸ್,** ನಾಗಪುರ, ಪು.೭

೮೨. ಮಾಲಾದತ್ತ, ೧೯೯೦: **'ಎ ಸ್ಟಡಿ ಆಫ್ ದಿ ಶಾತವಾಹನಾಸ್ ಕಾಯಿನೇಜ್',** ಹಾರ್ಮನ್ ಪಬ್ಲಿಷಿಂಗ್ ಹೌಸ್, ನ್ಯೂಡೆಲ್ಲಿ, ಪು.೫

೮೩. ಅಜಯ್‌ಮಿತ್ರಶಾಸ್ತ್ರಿ, ೧೯೯೮: **ಪೂರ್ವೋಕ್ತ,** ಪು.೭೦

೮೪. ಕ.ಚ.ಸಂ-೧, ೧೯೯೭: ಪು.೩೦೨

೮೫. ಅದೇ, ಪು.೭೩

೮೬. ಕೃಷ್ಣ ಕೆ.ಜಿ., ೧೯೮೯: ಉತ್ತಾಂಕಿತ ವಿದ್ಯಾರಣ್ಯ ಎಪಿಗ್ರಾಫ್ಸ್, ವ್ಯಾಲ್ಯೂಂ-೨, ಮೈಸೂರು,

೮೭. ಕ.ಚ.ಸಂ-೧, ೧೯೯೭: ಪು.೩೦೮

೮೮. ರಘುನಾಥ್ ಎಚ್.ಆರ್., ೧೯೭೭: 'ಚಿತ್ರದುರ್ಗ ಜಿಲ್ಲೆಯ ಕೆಲವು ಸೀಸದ ನಾಣ್ಯಗಳು', **ಚಿನ್ಮೂಲಾದ್ರಿ ವಾರ್ಷಿಕ ಸಂಚಿಕೆ,** ಲಕ್ಷ್ಮಣ್‌ತೆಲಗಾವಿ (ಸಂ), ಪು.೩೭

೮೯. ಅದೇ, ಪು.೩೮

೯೦. ಕ.ಚ.ಸಂ-೧, ೧೯೯೭: ಪು.೩೧೯

೯೧. ಸೋಮಶೇಖರ್ ಎಸ್.ವೈ., ೨೦೦೩: **'ಟು(ಎರಡು) ಮರಾಠಿ ಕಾಯಿನ್ಸ್ ಆಫ್ ತುರುವನೂರು ಅಂಡ್**

ಚಿಪ್ಪಿನಕೆರೆ, ಚಿತ್ರದುರ್ಗ ಡಿಸ್ಟ್ರಿಕ್ಟ್, ನ್ಯಾಷನಲ್ ಸೆಮಿನಾರ್ ಆನ್ ಸೌತ್ ಇಂಡಿಯನ್ ನ್ಯೂಮಿಸ್ ಮ್ಯಾಟಿಕ್ಸ್ ಸೊಸೈಟಿ, ಪಾಂಡಿಚೆರಿ, ೭-೯, ಫೆಬ್ರವರಿ, ೨೦೦೩

೯೨. ವ್ಹೀಲರ್ ಆರ್.ಇ.ಎಂ., ೧೯೪೭-೪೮: ಎಐ ನಂ-೪, ಪು.೧೮೬

೯೩. ಲಕ್ಷ್ಮಣ್‌ತೆಲಗಾವಿ, ೨೦೦೨: **ವೇದಾವತಿ ನದಿದಂಡೆ ಹಾಗು ಚಂದ್ರವಳ್ಳಿ ನಿವೇಶನಗಳಲ್ಲಿ ದೊರೆತ ಶಾತವಾಹನ ನಾಣ್ಯಗಳು, ಇತಿಹಾಸ ದರ್ಶನ,** ಸಂ-೧೭, ಪು.೪೦

೯೪. ಶ್ರೀನಿವಾಸ್‌ಮೂರ್ತಿ ಎಚ್.ವಿ., ರಾಮಕೃಷ್ಣ ಆರ್.,(ಸಂ), ೧೯೯೫: **ಸಮಗ್ರ ಕರ್ನಾಟಕ ಚರಿತ್ರೆ,** ಪು.೪೭

೯೫. ಗೋಪಾಲ್ ಬಿ.ಆರ್., ೧೯೮೫: **ಕಾರ್ಪಸ್ ಆಫ್ ಕದಂಬ ಇನ್‌ಸ್ಕ್ರಿಪ್ಷನ್ಸ್,** ಪು.೧೦, ೨೧

೯೬. ಚನ್ನಕ್ಕ ಎಲಿಗಾರ., ೧೯೯೧: **ಬಂಕಾಪುರದ ಕದಂಬರು, ಸಂಶೋಧನಾ,** ಲಕ್ಷ್ಮಣ್‌ತೆಲಗಾವಿ (ಸಂ), ಪು.೭೭೪

೯೭. ಎಂ.ಎ.ಆರ್., ೧೯೨೯: ಪು.೫೦, ೬೦

೯೮. ರಾಜಶೇಖರಪ್ಪ ಬಿ., ಇದರ ಭಾಷೆಯನ್ನು ಸಂಸ್ಕೃತವೆಂದು ಇತ್ತೀಚೆಗೆ ಗುರುತಿಸಿದ್ದಾರೆ.

೯೯. ಕೃಷ್ಣ ಎಂ.ಎಚ್., ೧೯೫೩: **ಪೂರ್ವೋಕ್ತ,** ಪು.೩೧

೧೦೦. ಎ.ಕ.ಸಂ-೬,

೧೦೧. ಗಿರಿಜಾ ಟಿ., ೧೯೯೧: **ಪೂರ್ವೋಕ್ತ,** ಪು.೭೫

೧೦೨. ಎ.ಕ.ಸಂ-೧೧, ದಾವಣಗೆರೆ

೧೦೩. ಕ.ವಿ.ವಿ., ಪು.೨೦೪

೧೦೪. ಶ್ರೀಸತ್ಯನ್ ಬಿ.ಎನ್., ೧೯೮೬: ಪೂರ್ವೋಕ್ತ, ಪು.೩೩

೧೦೫. ದೀಕ್ಷಿತ್ ಸಿ.ಕೆ.ವೈ., ೧೯೭೬: 'ಚಿತ್ರದುರ್ಗದಲ್ಲಿ ಚಾಲುಕ್ಯರ ಆಳ್ವಿಕೆ', **ಚಂದ್ರವಳ್ಳಿ,** ಪೂರ್ವೋಕ್ತ, ಪು.೧೮

೧೦೬. ಎ.ಕ.ಸಂ-೧೧, **ಚಿತ್ರದುರ್ಗ-೭೬**

೧೦೭. ಅದೇ, **ಚಳ್ಳಕೆರೆ-೩೪**

೧೦೮. ಅದೇ, **ಚಿತ್ರದುರ್ಗ-೭೭**

೧೦೯. ಅದೇ, ಚಿತ್ರದುರ್ಗ-೨೩, ಇವರ ತಾಮ್ರಪಟವೊಂದು ದೊರಕಿದ್ದು, ಅದೊಂದು ದಾನಶಾಸನವೆಂದು ಬಿ.ರಾಜಶೇಖರಪ್ಪನವರು ತಿಳಿಸಿದ್ದರೂ, ಶಾಸನದ ಪಾಠ ಪ್ರಕಟವಾಗಿಲ್ಲದಿರುವುದರಿಂದ ಹೆಚ್ಚಿನ ಮಾಹಿತಿಗಳು ತಿಳಿದುಬಂದಿಲ್ಲ.

೧೧೦. ಅದೇ, ದಾವಣಗೆರೆ-೨೩

೧೧೧. ಅದೇ, ದಾವಣಗೆರೆ-೧೬೮

೧೧೨. ಕೃಷ್ಣಮೂರ್ತಿ ಎಂ.ಎಸ್., ೧೯೯೯: 'ನೊಳಂಬರ ಕಾಲದ ಪ್ರಾದೇಶಿಕ ವಿಭಾಗಗಳು', ಪ್ರಾಚೀನ ಕರ್ನಾಟಕದ ಆಡಳಿತದ ವಿಭಾಗಗಳು, ಕಲ್ಬುರ್ಗಿ ಎಂ.ಎಂ. (ಸಂ), ಪು.೧೭೫, ೧೮೨

೧೧೩. ಕೃಷ್ಣಮೂರ್ತಿ ಎಂ.ಎಸ್., ೧೯೮೦: '**ದಿ ನೊಳಂಬಾಸ್**', ಪು.೧೩೬

೧೧೪. ಎ.ಕ.ಸಂ-೧೧, ಚಳ್ಳಕೆರೆ-೫, ೩೩

೧೧೫. ಎಂ.ಎ.ಆರ್., ೧೯೫೬: ಪು.೩೫

೧೧೬. ಎ.ಕ.ಸಂ-೧೧, ಚಳ್ಳಕೆರೆ-೩೩, ೩೪

೧೧೭. ಅದೇ, ಹಿರಿಯೂರು-೩೩

೧೧೮. ಅದೇ, ಚಿತ್ರದುರ್ಗ-೬೨

೧೧೯. ಅದೇ, ಜಗಲೂರು-೨೯

೧೨೦. ಅದೇ, ಹಿರಿಯೂರು-೧

೧೨೧. ಅದೇ, ಚಿತ್ರದುರ್ಗ-೮೨

೧೨೨. ಅದೇ, ಮೊಳಕಾಲ್ಮೂರು-೨೮

೧೨೩. ಗಿರಿಜಾ ಟಿ., ೧೯೯೧: **ಪೂರ್ವೋಕ್ತ,** ಪು.೧೫೬

೧೨೪. ಅದೇ, ಪು.೪೬೩, ೪೬೪

೧೨೫. ಶ್ರೀಸತ್ಯನ್ ಬಿ.ಎನ್., (ಸಂ), ೧೯೬೭: **ಮೈಸೂರು ರಾಜ್ಯ ಗೆಜೆಟಿಯರ್ ಚಿತ್ರದುರ್ಗ ಜಿಲ್ಲೆ,** ಪು.೩೭

೧೨೬. ಎ.ಕ.ಸಂ-೧೧, ಚಿತ್ರದುರ್ಗ-೭೪

೧೨೭. ಅದೇ, ಚಳ್ಳಕೆರೆ-೧

೧೨೮. ಅದೇ, ದಾವಣಗೆರೆ-೧೨೪

೧೨೯. ಅದೇ, ಚಿತ್ರದುರ್ಗ-೭೮

೧೩೦. ಅದೇ, ಮೊಳಕಾಲ್ಮೂರು-೨೯

೧೩೧. ಅದೇ, ಚಿತ್ರದುರ್ಗ-೮೨

೧೩೨. ಅದೇ, ದಾವಣಗೆರೆ-೮೫

೧೩೩. ಅದೇ, ಹೊಳಲ್ಕೆರೆ-೩

೧೩೪. ಅದೇ, ಚಳ್ಳಕೆರೆ-೪೩

೧೩೫. ಅದೇ, ದಾವಣಗೆರೆ-೧೩

೧೩೬. ತಿಪ್ಪೇಸ್ವಾಮಿ ಎಚ್., ೧೯೯೪: **'ದಾವಣಗೆರೆ ಜಿಲ್ಲೆಯ ದೇವಾಲಯಗಳು'** (ಅಪ್ರಕಟಿತ ಮಹಾಪ್ರಬಂಧ), ಕ.ವಿ.ವಿ. ಹಂಪಿ, ಪು.೧೬೩

೧೩೭. ಗಿರಿಜಾ ಟಿ., ೧೯೯೧: **ಪೂರ್ವೋಕ್ತ,** ಪು.೫೪

೧೩೮. ಷೇಕ್ಅಲಿ ಬಿ., **ದಕ್ಷಿಣ ಭಾರತದ ಇತಿಹಾಸ,** ಪು.೩೧

೧೩೯. ಎ.ಕ.ಸಂ-೧೧, ದಾವಣಗೆರೆ-೧೦೫

೧೪೦. ಅದೇ, ಹಿರಿಯೂರು-೧೧೭

೧೪೧. ಅದೇ, ಹೊಳಲ್ಕೆರೆ-೨

೧೪೨. ಅದೇ, ದಾವಣಗೆರೆ-೨೫

೧೪೩. ಅದೇ, ಜಗಲೂರು–೩೩

೧೪೪. ಅದೇ, ದಾವಣಗೆರೆ–೩೬

೧೪೫. ಅದೇ, ದಾವಣಗೆರೆ–೨೮

೧೪೬. ಅದೇ, ಚಿತ್ರದುರ್ಗ–೧೨

೧೪೭. ಅದೇ, ಚಿತ್ರದುರ್ಗ–೧

೧೪೮. ಅದೇ, ಚಿತ್ರದುರ್ಗ–೪

೧೪೯. ಅದೇ, ಚಿತ್ರದುರ್ಗ–೬

೧೫೦. ಶ್ರೀಸತ್ಯನ್ ಬಿ.ಎನ್., ೧೯೮೬: **ಪೂರ್ವೋಕ್ತ,** ಪು.೪೨

೧೫೧. ಎ.ಕ.ಸಂ–೧೧, ಚಿತ್ರದುರ್ಗ–೨೪

೧೫೨. ಅದೇ, ಹೊಳಲ್ಕೆರೆ–೫೬, ೫೮

೧೫೩. ಅದೇ, ಹೊಳಲ್ಕೆರೆ–೨೩

೧೫೪. ಅದೇ, ಚಳ್ಳಕೆರೆ–೧೬, ೨೧, ೨೨

೧೫೫. ಅದೇ, ಮೊಳಕಾಲ್ಮೂರು–೨೦, ೨೩

೧೫೬. ಅದೇ, ಹಿರಿಯೂರು–೩೦, ೩೭

೧೫೭. ನರಸಿಂಹಮೂರ್ತಿ ಎ.ವಿ., ೧೯೭೧: **ಕರ್ನಾಟಕದ ಸೇವುಣರ ಇತಿಹಾಸ,** ಪು.೩

೧೫೮. ಎ.ಕ.ಸಂ–೧೧, ದಾವಣಗೆರೆ–೭೦

೧೫೯. ನಾಗರಾಜರಾವ್ ಎಚ್.ಎಂ., ೧೯೭೬: 'ಚಿತ್ರದುರ್ಗ ಜಿಲ್ಲೆಯಲ್ಲಿ ಸೇವುಣರ ಆಳ್ವಿಕೆ' **ಚಂದ್ರವಳ್ಳಿ, ಪೂರ್ವೋಕ್ತ,** ಪು.೩೮

೧೬೦. ಎ.ಕ.ಸಂ–೧೧, ದಾವಣಗೆರೆ–೧೦೩

೧೬೧. ಅದೇ, ದಾವಣಗೆರೆ–೧೩

೧೬೨. ಅದೇ, ದಾವಣಗೆರೆ–೩೦

೧೬೩. ಶಂಕರನಾರಾಯಣರಾವ್., ೧೭೮೨: **ಹರಿಹರ ದೇವಾಲಯ,** ಪು.೯೧

೧೬೪. ಕ.ಚ.ಸಂ–೩, ಪು.೮೧

೧೬೫. ಎ.ಕ.ಸಂ–೧೧, ಚಿತ್ರದುರ್ಗ–೨, ೩

೧೬೬. ರಾಜಶೇಖರಪ್ಪ ಬಿ., ೧೯೭೯: **ಚಿತ್ರದುರ್ಗದ ಪ್ರಮುಖ ಶಾಸನಗಳು, ಐತಿಹಾಸಿಕ ಚಿತ್ರದುರ್ಗ, ಪೂರ್ವೋಕ್ತ,** ಪು.೪೯

೧೬೭. ಕೃಷ್ಣಮೂರ್ತಿ ಪಿ.ವಿ., ೧೯೯೯: 'ಚಿತ್ರದುರ್ಗ ಜಿಲ್ಲೆಯಲ್ಲಿ ವಿಜಯನಗರ ಕಾಲದ ಆಡಳಿತ ವಿಭಾಗಗಳು', **ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು,** ಕಲ್ಬುರ್ಗಿ ಎಂ.ಎಂ., (ಸಂ), ಪು.೨೧೩

೧೬೮. ಎ.ಕ.ಸಂ–೧೧, ಜಗಲೂರು–೪೧

೧೭೯. ಅದೇ, ಹೊಳಲ್ಕೆರೆ–೧೧

೧೭೦. ಗಿರಿಜಾ ಟಿ., ೧೯೯೧: **ಪೂರ್ವೋಕ್ತ**, ಪು.೩೧೯, ೮೬, ೮೯, ೨೫೩, ೨೬೪, ೨೦೮

೧೭೧. ಅದೇ, ಪು.೨೦೭

೧೭೨. ಎ.ಕಸ.೦–೧೧, ಹಿರಿಯೂರು–೫೮

೧೭೩. ಗಿರಿಜಾ ಟಿ., **ಪೂರ್ವೋಕ್ತ**, ಪು.೩೪೫

೧೭೪. ಅದೇ, ಪು.೪೧೮

೧೭೫. ಅದೇ. ಪು.೪೭೪

೧೭೬. ಎ.ಕ.ಸಂ–೧೧, ದಾವಣಗೆರೆ–೨೨

೧೭೭. ಗಿರಿಜಾ ಟಿ., ೧೯೯೧: **ಪೂರ್ವೋಕ್ತ**, ಪು.೪೧೯

೧೭೮. ಪುಟ್ಟಣ್ಣ ಎಂ.ಎಸ್., ೧೯೨೪: **ಪೂರ್ವೋಕ್ತ**, ಪು.೧

೧೭೯. ಲಕ್ಷ್ಮಣ್‌ತೆಲಗಾವಿ, ೧೯೭೬: 'ಚಿತ್ರದುರ್ಗ ಜಿಲ್ಲೆಯಲ್ಲಿ ಪಾಳೆಯಗಾರರ ಆಳ್ವಿಕೆ' ಚಂದ್ರವಳ್ಳಿ, ಪೂರ್ವೋಕ್ತ, ಪು.೭೮

೧೮೦. ರಾಜಶೇಖರಪ್ಪ. ಬಿ., ೨೦೦೫: 'ಚಿತ್ರದುರ್ಗ ಪಾಳೆಯಗಾರರು', ಆರ್. ಗೋಪಾಲ್(ಸಂ), ಪೂರ್ವೋಕ್ತ, ಪು.೧೧೨

೧೮೧. ಲಕ್ಷ್ಮಣ್‌ತೆಲಗಾವಿ, ೧೯೭೯: 'ಚಿತ್ರದುರ್ಗದ ಸಂಕ್ಷಿಪ್ತ ಇತಿಹಾಸ' **ಐತಿಹಾಸಿಕ ಚಿತ್ರದುರ್ಗ, ಪೂರ್ವೋಕ್ತ**, ಪು.೫

೧೮೨. ರಾಜಶೇಖರಪ್ಪ ಬಿ., ೨೦೦೧: **ಇತಿಹಾಸ ಕಥನ**, ಸಿ.ವಿ.ಜಿ.ಪಬ್ಲಿಕೇಷನ್ಸ್, ಬೆಂಗಳೂರು, ಪು.೯೫

೧೮೩. ರಾಜಶೇಖರಪ್ಪ ಬಿ., ೨೦೦೫: **'ಚಿತ್ರದುರ್ಗದ ಪಾಳೆಯಗಾರರು'**, ಆರ್.ಗೋಪಾಲ್ (ಸಂ), ಪೂರ್ವೋಕ್ತ, ಪು.೧೧೩, ೧೧೪

೧೮೪. ಪುಟ್ಟಣ್ಣ ಎಂ.ಎಸ್., ೧೯೨೪: **ಪೂರ್ವೋಕ್ತ**, ಪು.೨೫

೧೮೫. ಶ್ರೀಸತ್ಯನ್ ಬಿ.ಎನ್., ೧೯೮೬: **ಪೂರ್ವೋಕ್ತ**, ಪು.೮

೧೮೬. ಪುಟ್ಟಣ್ಣ ಎಂ.ಎಸ್., ೧೯೨೪: **ಪೂರ್ವೋಕ್ತ**, ಪು.೬೨

೧೮೭. ಹು.ಶ್ರೀ.ಜೋ. (ಸಂ), ೧೯೬೮: **ಚಿತ್ರದುರ್ಗದ ಬಖೈರ್**, ಪು.೪೯

೧೮೮. ಲಕ್ಷ್ಮಣ್‌ತೆಲಗಾವಿ, ೧೯೭೯: 'ಚಿತ್ರದುರ್ಗದ ಸಂಕ್ಷಿಪ್ತ ಇತಿಹಾಸ' **ಪೂರ್ವೋಕ್ತ**, ಪು.೫

೧೮೯. ಹು.ಶ್ರೀ.ಜೋ. (ಸಂ), ೧೯೬೮: **ಪೂರ್ವೋಕ್ತ**, ಪು.೬೬, ೬೭

೧೯೦. ರಾಜಶೇಖರಪ್ಪ ಬಿ., ೨೦೦೧: ಇತಿಹಾಸ ಕಥನ, ಪು.೮೯, ೯೦

೧೯೧. ಪುಟ್ಟಣ್ಣ ಎಂ.ಎಸ್., ಇವರು ಇವನ ತಂದೆ ಸಬ್ಬಗಡಿ ಓಬನಾಯಕ ಎಂದು ತಿಳಿಸಿದರೆ, ಬಿ.ರಾಜಶೇಖರಪ್ಪ ಸೇಗಲೆಯ ಹನುಮನಾಯಕ ಎಂದಿದ್ದಾರೆ.

೧೯೨. ಲಕ್ಷ್ಮಣ್‌ತೆಲಗಾವಿ, ೧೯೭೬: 'ಚಿತ್ರದುರ್ಗ ಜಿಲ್ಲೆಯಲ್ಲಿ ಪಾಳೆಯಗಾರರ ಆಳ್ವಿಕೆ', ಚಂದ್ರವಳ್ಳಿ, ಪೂರ್ವೋಕ್ತ, ಪು.೬೩

೧೯೩. ಹು.ಶ್ರೀ.ಜೋ. **ಸಂಶೋಧನಾ ಲೇಖನಗಳು, ಪೂರ್ವೋಕ್ತ,** ಪು.೨೪೨

೧೯೪. ರಾಜಶೇಖರಪ್ಪ ಬಿ., ೨೦೦೧: **ಇತಿಹಾಸ ಕಥನ,** ಪು.೭೨

೧೯೫. ಪುಟ್ಟಣ್ಣ ಎಂ.ಎಸ್., ೧೯೨೪: **ಪೂರ್ವೋಕ್ತ,** ಪು.೧೪

೧೯೬. ಸದಾಶಿವಪ್ಪ ಕುಂ.ಬಾ., **ಹರಪನಹಳ್ಳಿ ಪಾಳೆಯಗಾರರು,** ಪು.೯, ೧೦

೧೯೭. ಹು.ಶ್ರೀ.ಜೋ.ಐ.ಲೇ., **ಪೂರ್ವೋಕ್ತ,** ಪು.೪೧೧

೧೯೮. ರಾಜಶೇಖರಪ್ಪ ಬಿ., ೨೦೦೧: **ಇತಿಹಾಸ ಕಥನ,** ಪು.೨೭

೧೯೯. ಐಬಿಡ್, ಹಿರಿಯೂರು–೪೦, ೧೫೫೬ ಎ.ಡಿ.

೨೦೦. ಐಬಿಡ್, ಹೊಳಲ್ಕೆರೆ–೭, ೧೫೬೮ ಎ.ಡಿ

೨೦೧. ಪುಟ್ಟಣ್ಣ ಎಂ.ಎಸ್. ೧೯೨೪: **ಪೂರ್ವೋಕ್ತ,** ಪು.೧೫

೨೦೨. ಹು.ಶ್ರೀ.ಜೋ.ಐ.ಲೇ., **ಪೂರ್ವೋಕ್ತ,** ಪು.೨೪೨, ೨೪೩

೨೦೩. ರಾಜಶೇಖರಪ್ಪ ಬಿ., **ಇತಿಹಾಸ ಕಥನ,** ಪು.೭೪, ೭೫

೨೦೪. ವಸು ಎಂ.ವಿ., ೨೦೦೧: **ದಕ್ಷಿಣ ಕರ್ನಾಟಕದ ಅರಸು ಮನೆತನಗಳು,** ಪು.೨೮

೨೦೫. ಐಬಿಡ್, ಚಿತ್ರದುರ್ಗ–೪೧

೨೦೬. ಪುಟ್ಟಣ್ಣ ಎಂ.ಎಸ್., **ಪೂರ್ವೋಕ್ತ,** ಪು.೧೭

೨೦೭. ಕಲ್ಬುರ್ಗಿ ಎಂ.ಎಂ., (ಸಂ), ೧೯೯೪: **ಕರ್ನಾಟಕದ ಕೈಫಿಯತ್ತುಗಳು,** ಪು.೪೪

೨೦೮. ಪುಟ್ಟಣ್ಣ ಎಂ.ಎಸ್., **ಪೂರ್ವೋಕ್ತ,** ಪು.೨೦

೨೦೯. ಶ್ರೀನಿವಾಸ್ ಎಂ.ವಿ., ೧೯೭೬: 'ಚಿತ್ರದುರ್ಗ ಜಿಲ್ಲೆಯಲ್ಲಿ ಬಿಜಾಪುರ ಹಾಗೂ ಮೊಗಲರ ಆಳ್ವಿಕೆ' **ಚಂದ್ರವಳ್ಳಿ, ಪೂರ್ವೋಕ್ತ,** ಪು. ೯೨

೨೧೦. ತಿಪ್ಪಣ್ಣ ಮರಿಕುಂಟೆ., ೧೯೮೭: **'ಹರತಿಕೋಟೆಯ ಸ್ಮಾರಕಗಳು', ಹರತಿಸಿರಿ, ಲಕ್ಷ್ಮಣ್** ತೆಲಗಾವಿ, (ಸಂ), ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ, ಪು.೫೦೩

೨೧೧. ಪುಟ್ಟಣ್ಣ ಎಂ.ಎಸ್.,೧೯೨೪: **ಪೂರ್ವೋಕ್ತ,** ಪು.೨೨

೨೧೨. ಅದೇ, ಪು.೨೪, ೨೫

೨೧೩. ಎಂ.ಎ.ಆರ್., ೧೯೨೯: ಚಿತ್ರದುರ್ಗ–೭, ೧೬೭೩ ಎ.ಡಿ. ಪು.೬೩, ೬೩, ೨೧೨, ಹೀಗೆಯೇ ಎ.ಕ. ಮತ್ತಿತರ ಶಾಸನ ಸಂಪುಟಗಳಲ್ಲೂ ರೋಮನ್ ಪಾಠ ಮತ್ತು ಆಯಾ ಭಾಷೆಯ ಲಿಪಿ ಪಾಠಕ್ಕೂ ವ್ಯತ್ಯಾಸವಿರುವ ಅನೇಕ ನಿದರ್ಶನಗಳಿವೆ.

೨೧೪. ಐಬಿಡ್, ಚಿತ್ರದುರ್ಗ–೫೫, ೮೧, ೧೬೫೩ ಎ.ಡಿ.

೨೧೫. ಅದೇ, ಚಿತ್ರದುರ್ಗ–೭೩, ೧೬೪೦ ಎ.ಡಿ.

೨೧೬. ಅದೇ, ಜಗಲೂರು–೩೬, ೧೬೭೨ ಎ.ಡಿ.

೨೧೭. ಪುಟ್ಟಣ್ಣ ಎಂ.ಎಸ್.,೧೯೨೪: **ಪೂರ್ವೋಕ್ತ,** ಪು.೨೫

೨೧೮. ಕಲ್ಬುರ್ಗಿ ಎಂ.ಎಂ., (ಸಂ), ೧೯೯೪: **ಪೂರ್ವೋಕ್ತ,** ಪು.೨೮

೨೧೯. ಪುಟ್ಟಣ್ಣ ಎಂ.ಎಸ್.,೧೯೨೪: **ಪೂರ್ವೋಕ್ತ**, ಪು.೨೬

೨೨೦. **ಪ್ರಾಚೀನ ಶಾಸನ ಲೇಖನ ಸಂಗ್ರಹ**, ೧೯೬೫: ಪು.೭೩

೨೨೧. ಐಬಿಡ್, ಹೊಳಲ್ಕೆರೆ-೫೯, ೧೬೭೮ ಎ.ಡಿ.

೨೨೨. ರಾಮರಾವ್ ಬಿ., (ಸಂ), ೧೯೩೧: **'ಕಣಕುಪ್ಪೆ ಕೋಟೆ ಕೈಫಿಯತ್ತು'**, ಕನ್ನಡ ಸಾಹಿತ್ಯ ಪರಿಷತ್, ಸಂ-೧೬, ಪು.೧೨೮, ೧೩೬

೨೨೩. ಐಬಿಡ್, ಹಿರಿಯೂರು-೫೭, ೧೭೨೧ ಎ,ಡಿ.

೨೨೪. ಎ.ಕ.ಸಂ-೧೧, ದಾವಣಗೆರೆ, ೧೭೨೮ ಎ.ಡಿ.

೨೨೫. ಹಯವದನ್‌ರಾವ್., ೧೯೩೦: **ಮೈಸೂರು ಗೆಜೆಟಿಯರ್, ಸಂ-೫**, ಪು.೧೪೫೭, ಬಾಗೂರು ಆರ್. ನಾಗರಾಜಪ್ಪ, ೧೯೪೮: **ಹೊಸದುರ್ಗದ ಸುತ್ತ**, ಪು.೧೦೪

೨೨೬. ಐಬಿಡ್, ಚಿತ್ರದುರ್ಗ-೮೦, ೧೬೦೬ ಎ.ಡಿ.

೨೨೭. ರಾಮಚಂದ್ರರಾವ್ ಡಿ.ಬಿ., **'ಪಾಳೆಗಾರ್ಸ್ ಆಫ್ ಮೈಸೂರು ಅಂಡ್ ದೇರ್ ಸಿವಿಲೈಜೇಷನ್'**, ದಿ ಕ್ವಾರ್ಟರ್‌ಲೀ ಜರ್ನಲ್ಸ್ ಆಫ್ ದಿ ಮಿಥಿಕ್ ಸೊಸೈಟಿ,

೨೨೮. ರಾಜಶೇಖರಪ್ಪ ಬಿ., ಇತಿಹಾಸ ಕಥನ ಪು.೭೮

೨೨೯. ಐಬಿಡ್, ಜಗಲೂರು-೪೬, ೧೬೮೩ ಎ.ಡಿ.

೨೩೦. ಅದೇ, ಹಿರಿಯೂರು-೫೮ ೧೬೮೭ ಎ.ಡಿ.

೨೩೧. ಲಕ್ಷ್ಮಣ್‌ತೆಲಗಾವಿ, ೧೯೭೬: 'ಚಿತ್ರದುರ್ಗ ಜಿಲ್ಲೆಯಲ್ಲಿ ಪಾಳೆಯಗಾರರ ಆಳ್ವಿಕೆ', **ಚಂದ್ರವಳ್ಳಿ, ಪೂರ್ವೋಕ್ತ**, ಪು.೮೧

೨೩೨. ರಾಜಶೇಖರಪ್ಪ ಬಿ., **ಇತಿಹಾಸ ಕಥನ**, ಪು.೭೯, ೮೦

೨೩೩. ತಿಪ್ಪಣ್ಣಮರಿಕುಂಟೆ., ೧೯೭೯: 'ಚಿತ್ರದುರ್ಗದ ಮಠ-ಮಾನ್ಯಗಳು', **ಐತಿಹಾಸಿಕ ಚಿತ್ರದುರ್ಗ, ಪೂರ್ವೋಕ್ತ**, ಪು.೮೯, ೯೦

೨೩೪. **ಪ್ರಾಚೀನ ಶಾಸನ ಲೇಖನ ಸಂಗ್ರಹ**, ಪು.೭೪

೨೩೫. ರಾಜಶೇಖರಪ್ಪ ಬಿ., **ಇತಿಹಾಸ ಕಥನ** ಪು.೨೮

೨೩೬. ಚನ್ನಪ್ಪ ಎರಸೀಮೆ., ೧೯೭೬: 'ಚಿತ್ರದುರ್ಗ ಪಾಳೆಯಗಾರರ ಕಾಲದಲ್ಲಿ ವ್ಯಾಜ್ಯ ತೀರ್ಮಾನ' **ಚಂದ್ರವಳ್ಳಿ**, ಪು.೧೪-೨೦

೨೩೭. ಗಿರಿಜಾ. ಟಿ., **ಪೂರ್ವೋಕ್ತ**, ಪು.೭೮, ೭೯

೨೩೮. ಎ.ಕ.ಸಂ-೧೧, ಚಿತ್ರದುರ್ಗ-೩೧

೨೩೯. ಎ.ಕ.ಸಂ-೦೯, ದಾವಣಗೆರೆ-೧೪೭, ೧೭೧೬ ಎ.ಡಿ.

೨೪೦. ಶಾಂತವೀರಯ್ಯ ಹೀ.ಚಿ., ೧೯೭೬: 'ಶಾಸನಸ್ಥ ನಾಯಕರು', **ಚಂದ್ರವಳ್ಳಿ**, ಪು.೧೩

೨೪೧. ಐಬಿಡ್, ಚಳ್ಳಕೆರೆ-೫೮, ೧೭೧೧ ಎ.ಡಿ.

೨೪೨. ಲಕ್ಷ್ಮಣ್‌ತೆಲಗಾವಿ, ೧೯೭೯: 'ಚಿತ್ರದುರ್ಗದ ಸಂಕ್ಷಿಪ್ತ ಇತಿಹಾಸ', **ಐತಿಹಾಸಿಕ ಚಿತ್ರದುರ್ಗ**, ಪು.೮

ಅಧ್ಯಾಯ ೩

ವಾಸ್ತುಕಲೆ

೩

ವಾಸ್ತು ಕಲೆ

೩.೧. ಪೀಠಿಕೆ

ಸಾಮಾನ್ಯ ಅರ್ಥದಲ್ಲಿ ವಾಸ್ತು ಎಂದರೆ ಭೂಮಿಯ ಮೇಲೆ ಕಟ್ಟಲ್ಪಟ್ಟ ಗೃಹ, ಗುಡಿ ಮುಂತಾದವುಗಳು. ವಿಶಾಲಾರ್ಥದಲ್ಲಿ ವಾಸ್ತು ಎಂದರೆ ಭೂಮಿ, ಕಟ್ಟಡ, ವಾಹನ ಹಾಗು ಪರ್ಯಂಕಗಳು. ಗರುಡ ಪುರಾಣವು ಗ್ರಾಮಗಳು, ನಗರಗಳು, ಕೋಟೆಗಳು, ಪಟ್ಟಣಗಳು, ಮಠಗಳು ಸಹ ವಾಸ್ತುಗಳೆಂದು ಹೇಳಿದೆ.[೧] ಮಯಮತ ಗ್ರಂಥವು ವಾಸ್ತು ಪದವನ್ನು ಎರಡು ಹಂತಗಳಲ್ಲಿ ವಿವರಿಸಿದೆ.[೨]–ಮರ್ತ್ಯರು ಮತ್ತು ಅಮರ್ತ್ಯರು ವಾಸಿಸುವ ಸ್ಥಳಕ್ಕೆ ವಸ್ತು ಎಂದು ಹೆಸರು. ಅಂದರೆ ವಸ್ತುವನ್ನು ಆಶ್ರಯಿಸಿದ್ದುದು ವಾಸ್ತು ಎಂದು ಗುರುತಿಸಬಹುದು. ವಿಶ್ವಕರ್ಮ ವಾಸ್ತುಶಾಸ್ತ್ರವು ಆಲಯಗಳನ್ನು ಕಟ್ಟಲು ಬಳಸಿದ ಇಟ್ಟಿಗೆ, ಕಲ್ಲು, ಮರ ಹಾಗು ಕಬ್ಬಿಣಗಳನ್ನು ಸಹ ವಾಸ್ತುಗಳೆಂದು ತಿಳಿಸಿದೆ.[೩] ಪ್ರಾಸಾದ, ಹರ್ಮ್ಯ, ಸೌಧ ಇತ್ಯಾದಿಗಳು ವಸ್ತುವನ್ನು ಆಶ್ರಯಿಸಿದ್ದರಿಂದ 'ವಾಸ್ತು' ಎಂದೆನಿಸುತ್ತದೆ. ಆದ್ದರಿಂದ ವಸತಿಯೋಗ್ಯ ಭೂಮಿ ಮತ್ತು ಆ ಭೂಮಿಯ ಮೇಲೆ ನಿಂತ ಕಟ್ಟಡ ಎರಡನ್ನು ಒಳಗೊಳ್ಳುತ್ತದೆ. ಶುಕ್ರನೀತಿ ಗ್ರಂಥವು ದೇವಾಲಯ, ಅರಮನೆ ಅಥವಾ ರಾಜಗೃಹಗಳ ರಚನೆ, ದೇವತಾಮೂರ್ತಿಗಳ ರಚನೆ, ಸಾರ್ವಜನಿಕ ಉಪಯೋಗಿ ಗೃಹಗಳು, ಬಾವಿ, ಪುಷ್ಕರಣಿ, ಮುಂತಾದವುಗಳನ್ನು ಶಿಲ್ಪಶಾಸ್ತ್ರದಡಿಯಲ್ಲಿ ಗುರುತಿಸುತ್ತದೆ.[೪]

ವಾಸ್ತುವನ್ನು ಕಲೆಯೆನ್ನುವುದಕ್ಕಿಂತಲೂ ವಾಸ್ತುಶಾಸ್ತ್ರ ಅಥವಾ ವಾಸ್ತುವಿದ್ಯೆ ಎನ್ನುವುದು ಹೆಚ್ಚಾಗಿ ರೂಢಿಯಲ್ಲಿದೆ. ವಾಸ್ತುಶಾಸ್ತ್ರಕ್ಕೆ ಸಂಬಂಧಿಸಿದ ಶಬ್ಧಕೋಶದ ಮುನ್ನುಡಿಯಲ್ಲಿ ವಿದ್ವಾಂಸರಾದ ಪಿ.ಕೆ.ಆಚಾರ್ಯರವರು ವಾಸ್ತುಶಾಸ್ತ್ರ ಮತ್ತು ಶಿಲ್ಪಶಾಸ್ತ್ರ ಪದಗಳನ್ನು ಪರ್ಯಾಯ ಪದಗಳೆಂಬಂತೆ ಬಳಸಿದ್ದಾರೆ. ವಾಸ್ತು ಹಾಗು ಶಿಲ್ಪವೆನ್ನುವ ಪದಗಳ ಸಮಾಸದಿಂದಾಗಿ ವಾಸ್ತುಶಿಲ್ಪವೆನ್ನುವ ಪದ ಬಳಕೆಯಲ್ಲಿದ್ದು, ವಾಸ್ತುಶಿಲ್ಪವೆಂದಲ್ಲಿ ನಮಗೆ ಅರಿವಾಗುವುದು ದೇವಾಲಯಗಳು ಮತ್ತು ಅಲ್ಲಿನ ಮೂರ್ತಿಗಳಿಗೆ ಸಂಬಂಧಿಸಿದ್ದು ಎಂದು. ಅಲ್ಲದೇ ಭಾರತೀಯ ವಾಸ್ತು, ಮೂರ್ತಿ, ಚಿತ್ರಕಲೆಗಳ ಅಧ್ಯಯನಕ್ಕೆ ಸಂಬಂಧಿಸಿದ ಪ್ರಾಚೀನ

ಗ್ರಂಥಗಳನ್ನು ಶಿಲ್ಪಶಾಸ್ತ್ರಗಳೆಂದೇ ಗುರುತಿಸುವುದುಂಟು. ಕೆಲವೊಮ್ಮೆ ಶಿಲ್ಪಶಾಸ್ತ್ರವೆಂದಲ್ಲಿ ಮೂರ್ತಿ ಅಥವಾ ಪ್ರತಿಮಾ ರಚನೆ, ಅವುಗಳ ಲಕ್ಷಣಗಳು, ತಾಳಮಾನ ಇತ್ಯಾದಿಗಳನ್ನು ಹೆಸರಿಸುವುದುಂಟು. ಪ್ರೊ.ಫಣೀಂದ್ರನಾಥಭೋಸ್‌ರವರು ಭಾರತೀಯ ಶಿಲ್ಪಶಾಸ್ತ್ರದ ಮೂಲತತ್ವಗಳನ್ನು ಗುರುತಿಸುವಾಗ ಶಿಲ್ಪಶಾಸ್ತ್ರವೆಂಬ ಪದವನ್ನು ವಾಸ್ತು ಹಾಗು ಪ್ರತಿಮಾಶಾಸ್ತ್ರ ಎರಡನ್ನೂ ಒಳಗೊಂಡಂತೆ ವಿವರಿಸಿದ್ದಾರೆ.[೫] ಆದರೆ ವಾಸ್ತುಶಿಲ್ಪ ದೃಷ್ಟಿ ಉದಯವಾದುದ್ದು ಬುದ್ಧನ ನಂತರ ಎಂದು ತಿಳಿಯಬೇಕು. ಕಾರಣ ಈ ಹಿಂದೆ ಮೂರ್ತಿಪೂಜೆಯ ಆಚರಣೆ ಇರಲಿಲ್ಲ.

ವಾಸ್ತುವಿನ ಜೊತೆಜೊತೆಗೆ ಶಿಲ್ಪವು ಶಿಲ್ಪಿಯ ಅಭಿರುಚಿಗೆ, ಕಲಾನೈಪುಣ್ಯತೆಗೆ ಅನುಗುಣವಾಗಿ ವಿವಿಧ ಭಾಗಗಳಲ್ಲಿ ವ್ಯಕ್ತವಾಗಿರುವುದನ್ನು ನಾವು ಕಾಣುತ್ತೇವೆ. ವಾಸ್ತು ಮತ್ತು ಶಿಲ್ಪಗಳೆರಡೂ ಕಲಾಸೌಂದರ್ಯದ ಪ್ರತೀಕವಾಗಿವೆ. ಇವು ಆರಂಭದಿಂದಲೂ ಜೊತೆಯಾಗಿಯೇ ಬೆಳೆದುಬಂದಿರುವುದು ಗಮನೀಯ ಅಂಶ. ಒಟ್ಟಿನಲ್ಲಿ ವಾಸ್ತುವನ್ನು ನಿರ್ಮಿಸುವುದು ಪ್ರಾಚೀನ ಕಾಲದಿಂದಲೂ ಕಲೆಯೋಪಾದಿಯಲ್ಲಿ ಬೆಳೆದು ಬಂದಿದೆ. ಈ ಹಿನ್ನೆಲೆಯಲ್ಲಿ ವಾಸ್ತುಕಲೆ ಎನ್ನುವ ಪದ–ಪ್ರಯೋಗವನ್ನು ಇಲ್ಲಿ ಮಾಡಲಾಗಿದೆ. ಭಾರತೀಯ ವಾಸ್ತುಕಲೆಯಲ್ಲಿ ನಾವು ಆಧ್ಯಾತ್ಮಿಕ ಮನೋಧರ್ಮವನ್ನು ಕಾಣುತ್ತೇವೆ.[೬]

ಶಿಲ್ಪವೆನ್ನುವ ಪದವು ಮೂರ್ತಿಶಿಲ್ಪವೆಂಬ ಅರ್ಥದಲ್ಲಿ ರೂಢಿಗತವಾಗಿದ್ದರೂ, ಅದಕ್ಕೆ ತನ್ನದೇ ಆದ ಖಚಿತಾರ್ಥವಿದೆ. 'ಶಿಲ್ಪಕರ್ಮ ಕಲಾಧಿಕಂ'[೭] ವೆನ್ನುವ ಅಮರಕೋಶದಲ್ಲಿನ ಉಕ್ತಿ ಕರ್ತೃವಿನ ಅಧಿಕ ಕೌಶಲ್ಯಗಳನ್ನೊಳಗೊಂಡ ಕರ್ಮ ಅಥವಾ ಕ್ರಿಯೆಗೆ ಶಿಲ್ಪವೆಂದು ತಿಳಿಸುತ್ತದೆ. ಇದು ತಾಂತ್ರಿಕ ಪರಿಣಿತಿಯನ್ನು ಅಪೇಕ್ಷಿಸುತ್ತದೆ. ಕಾರಂತರು ತ್ರಿಮಾನಗಳುಳ್ಳ ಘನರೂಪದ ನಿರ್ಮಾಣವನ್ನು ಶಿಲ್ಪ ಎಂದಿದ್ದಾರೆ. ಹಲವಾರು ಹಿರಿಯ ವಿದ್ವಾಂಸರುಗಳು "ಶಿಲ್ಪ"ವೆನ್ನುವ ಪದ ವಾಸ್ತು ಹಾಗು ಮೂರ್ತಿಶಿಲ್ಪಗಳನ್ನೊಳಗೊಂಡದ್ದು ಎಂದು ವಿವರಿಸಿದ್ದಾರೆ. ಒಟ್ಟಾರೆ ಶಿಲ್ಪಶಾಸ್ತ್ರವೆಂದರೆ ಚಿತ್ರ, ಪ್ರತಿಮಾ ಹಾಗು ವಾಸ್ತುವಿಷಯಗಳಿಗೆ ಸಂಬಂಧಿಸಿದ್ದೆಂದು ತಿಳಿಯಬಹುದಾಗಿದೆ.

ಕಲೆ ಎಂದರೆ 'ಒಂದು ವಿಶೇಷವಾದ ಒಳ್ಳೆಯ ಅಭಿರುಚಿಯಿಂದ ಕೂಡಿದ ರಚನಾತ್ಮಕ ಕ್ರಿಯೆ' ಅಥವಾ "ಸದಾಭಿರುಚಿಯಿಂದ ಕೂಡಿದ ಸೌಂದರ್ಯಾನುಭವವನ್ನುಂಟು ಮಾಡುವ ಕಾರ್ಯ. ಕಲಾಪ್ರಕಾರಗಳಲ್ಲಿ ದೃಶ್ಯ ಮತ್ತು ಶ್ರಾವ್ಯ ಎಂಬ ಎರಡು ವಿಧಗಳಿದ್ದು, ಕಲೆಯೆನ್ನುವುದು ಒಂದು ಜನಾಂಗದ ಅನುಭವಸಾರದ ಕೈಗನ್ನಡಿಯಾಗಿದೆ. ವಾಸ್ತು ನಿರ್ಮಾಣದಲ್ಲಿ ದೃಶ್ಯ ಕಲೆಯು ಹೆಚ್ಚಾಗಿ ಮೇಳೈಸಿರುತ್ತದೆ. ಹಾಗಾಗಿ ವಾಸ್ತುಶಿಲ್ಪ, ವಾಸ್ತುಶಾಸ್ತ್ರ,

ವಾಸ್ತುಕಲೆ, ವಾಸ್ತುವಿದ್ಯೆ ಎಂಬ ಪದಗಳನ್ನು ಸರಿಸಮಾನವಾಗಿ ಬಳಸಬಹುದಾಗಿದೆ. ನಮ್ಮ ನಾಡಿನ ಗುಡಿಗೋಪುರಗಳ ಅಧ್ಯಯನ ಹೊಸರೂಪ ಪಡೆದು ವಾಸ್ತುಶಿಲ್ಪ ಅಥವಾ ದೇವಾಲಯ ಶಿಲ್ಪವೆಂದು ಗುರುತಿಸಲ್ಪಟ್ಟಿದ್ದು ಪಾಶ್ಚಿಮಾತ್ಯರಿಂದ. ಇವರು ಈ ಅಧ್ಯಯನಕ್ಕೆ ತಮ್ಮದೇ ಆದ ಚೌಕಟ್ಟನ್ನು ನಿರ್ಮಿಸಿಕೊಂಡು ವಿವರಿಸಿದರು. ಅಲೆಂಗ್ಸಾಂಡರ್ ಅವರು "ವಾಸ್ತುಶಿಲ್ಪ ಸಮಕಾಲೀನ ನಾಗರಿಕತೆಗಳ ಕೈಗನ್ನಡಿ" ಎಂದು ತಿಳಿಸಿದರೆ, ಬೆಂಜಮಿನ್ ರೋಲೆಂಡ್ "ಭಾರತದ ಕಲಾಜಗತ್ತು ಧಾರ್ಮಿಕ ಶ್ರದ್ಧೆಯೊಂದಿಗೆ ಮೇಳೈಸಿರುವುದೆಂದು" ಉದ್ಗರಿಸಿದ್ದಾರೆ.[೮]

ಅಲೆಮಾರಿ ಜೀವನ ನಡೆಸುತ್ತಿದ್ದ ಮಾನವ ಒಂದೆಡೆ ನೆಲೆನಿಂತು ಜೀವಿಸಲು ಎಂದು ಪ್ರಾರಂಭಿಸಿದನೋ ಅಂದಿನಿಂದ ತನಗಾಗಿ ಮನೆಯನ್ನು ಕಟ್ಟಿಕೊಳ್ಳಲು ಪ್ರಾರಂಭಿಸಿದನು. ಈ ಹಂತವು ವಾಸ್ತುಶಿಲ್ಪದ ಪ್ರಥಮ ಹೆಜ್ಜೆಯಾಯಿತು. ಹಾಗೆಯೇ ಪ್ರಾಚೀನ ಕಾಲದ ಮಾನವ ಪ್ರಕೃತಿಯ ಆರಾಧಕನಾಗಿದ್ದು, ಈ ಎಲ್ಲಾ ಸೃಷ್ಟಿಯ ಹಿನ್ನೆಲೆಯಾಗಿ ಯಾವುದೋ ಒಂದು ಅನಂತ ಅಥವಾ ಅಗೋಚರ ಶಕ್ತಿ ಇದೆ ಎಂಬ ಅರಿವುಂಟಾಗಿ, ಆ ಶಕ್ತಿಗೆ ಒಂದು ರೂಪ ಕೊಡುವ ಸಲುವಾಗಿ ಪ್ರತ್ಯೇಕ ಆಲಯವನ್ನು ಕಟ್ಟಲಾರಂಭಿಸಿದ್ದು ದೇವಾಲಯದ ರಚನೆಗೆ ನಾಂದಿಯಾಯಿತು. ಹಾಗೆಯೇ ಧಾರ್ಮಿಕ ಭಾವನೆ ಹಾಗು ಶ್ರದ್ಧೆಯೂ ಮಾನವನ ಜೀವನದ ಅವಿಭಾಜ್ಯ ಅಂಶವಾಗಿದ್ದು, ಭಾರತದಲ್ಲಿ ಪ್ರಾಚೀನ ಕಾಲದಿಂದಲೂ ದೇವಾಲಯಗಳು ನಿರ್ಮಾಣವಾಗಿರುವುದನ್ನು ಕಾಣುತ್ತೇವೆ. ಕ್ರಿ.ಪೂ.ಮೂರನೆಯ ಶತಮಾನದಲ್ಲಿ ಬೌದ್ಧಸ್ತೂಪದ ನಿರ್ಮಾಣವನ್ನು ಕಂಡರೆ, ಸುಮಾರು ಕ್ರಿ.ಶ. ಒಂದು-ಎರಡನೆಯ ಶತಮಾನದಿಂದ ಭಾರತದ ವಿವಿಧ ಭಾಗಗಳಲ್ಲಿ ಇತರ ಧರ್ಮಗಳಿಗೆ ಸೇರಿದ ಕಟ್ಟಡಗಳು ಬೆಳಕಿಗೆ ಬಂದವು. ಉದಾ: ಮಥುರಾ, ಐಹೊಳೆ, ಬನವಾಸಿ, ಪಟ್ಟದಕಲ್ಲು, ಇತ್ಯಾದಿ. ಇದು ಮೊದಲನೆಯ ಹಂತದ ರಚನೆಯಾಗಿದೆ. ಸುಮಾರು, ಕ್ರಿ.ಶ.ಆರನೆಯ ಶತಮಾನದಿಂದ ದೇವಾಲಯಗಳ ನಿರ್ಮಾಣದಲ್ಲಿ ಒಂದು ಕ್ರಮ ಮತ್ತು ಸ್ವರೂಪವನ್ನು ತರಲು ಪ್ರಯತ್ನ ನಡೆದು ಕ್ರಿ.ಶ. ಏಳು-ಎಂಟನೆಯ ಶತಮಾನದ ವೇಳೆಗೆ ದೇವಾಲಯಗಳ ರಚನಾಕ್ರಮದಲ್ಲಿ ಸ್ಪಷ್ಟತೆ ಮೂಡಲಾರಂಭಿಸಿತು. ಅಷ್ಟೇ ಅಲ್ಲದೆ ಉತ್ತರ ಮತ್ತು ದಕ್ಷಿಣ ಭಾರತದ ದೇವಾಲಯಗಳು ತಮ್ಮ ರಚನೆಯಲ್ಲಿ ವಿಶಿಷ್ಟ, ವಿಭಿನ್ನ ರೂಪಗಳನ್ನು ಸ್ಪಷ್ಟವಾಗಿ ಪ್ರತಿಬಿಂಬಿಸಲಾರಂಭಿಸಿದವು. ಇದನ್ನು ನಾವು ವಾಸ್ತುನಿರ್ಮಾಣದ ಪ್ರಬುದ್ಧ ಹಂತವೆಂದು ಗುರುತಿಸಬಹುದು.

ಕರ್ನಾಟಕದಲ್ಲಿ ಮೌರ್ಯರ ಕಾಲದಿಂದಲೇ ವಾಸ್ತು ಚಟುವಟಿಕೆಗಳು ನಡೆದರೂ, ಆ ಕಾಲದ ಅವಶೇಷಗಳು ಇಂದು ಉಳಿದುಕೊಂಡು ಬಂದಿಲ್ಲ. ಆದರೂ ಈ ವಂಶದ ಪ್ರಸಿದ್ಧ

ಅರಸ ಅಶೋಕ ಮಹಾಶಯ ಅನೇಕ ಸನ್ಯಾಸಿ ಮಠಗಳು, ದೇವಾಲಯಗಳು ಹಾಗು ಒಂದು ಭವ್ಯ ಅರಮನೆಯನ್ನು ಕಟ್ಟಿಸಿದನೆಂಬುದು ಅವನೇ ಹೊರಡಿಸಿರುವ ಶಾಸನಗಳು ಹಾಗು ಪರಂಪರಾಗತವಾಗಿ ಬಂದ ದಾಖಲೆಗಳು ತಿಳಿಸುತ್ತವೆ.[೭] ಹಾಗಾಗಿ ದೇವಾಲಯಗಳ ಬೆಳವಣಿಗೆಯನ್ನು ಮೌರ್ಯರ ಕಾಲದಿಂದಲೇ ಗುರುತಿಸಬಹುದಾಗಿದೆ. ಆದರೆ ಅಂತಹ ದೇವಾಲಯಗಳು ಇಂದು ಉಳಿದುಬಂದಿಲ್ಲ. ಹಾಗಾಗಿ ಕರ್ನಾಟಕದಲ್ಲಿ ದೇವಾಲಯಗಳ ವಾಸ್ತುಕಲೆಯ ಬೆಳವಣಿಗೆಯನ್ನು ಶಾತವಾಹನರ ಕಾಲದ ಬೌದ್ಧ ಸ್ತೂಪ, ಚೈತ್ಯ ಹಾಗು ವಿಹಾರಗಳ ರಚನೆಯಿಂದ ಗುರುತಿಸಲಾಗಿದೆ. ಅಲ್ಲದೇ ಸ್ತೂಪ, ಚೈತ್ಯಗಳೊಂದಿಗೆ ವೈದಿಕ ಧರ್ಮದ ರಚನೆಗಳಿದ್ದವೆಂಬುದು ಶಾಸನಗಳಿಂದ ಸ್ಪಷ್ಟವಾಗುತ್ತದೆ.[೧೦] ಬ್ರಹ್ಮಗಿರಿ, ಬನವಾಸಿ, ಸನ್ನತಿ, ಹಲಸಿ, ವಡಗಾಂವಿ, ಮಾಧವಪುರ ಮುಂತಾದೆಡೆಗಳಲ್ಲಿ ಇವರ ವಾಸ್ತುರಚನೆಗಳನ್ನು ಕಾಣಬಹುದು.

ಕರ್ನಾಟಕದಲ್ಲಿ ದೇವಾಲಯಗಳ ನಿರ್ಮಾಣ ಕಾರ್ಯ ಅತ್ಯಂತ ಹೆಚ್ಚು ಭರದಿಂದ ಸಾಗಿದ್ದು ಬಾದಾಮಿ ಚಾಲುಕ್ಯರ ಕಾಲದಿಂದ ಎನ್ನಬಹುದು. ಈ ಕಾಲದ ದೇವಾಲಯಗಳು ಹೆಚ್ಚಾಗಿ ಶಿಲೆಯಿಂದ ಕಟ್ಟಲ್ಪಟ್ಟವು. ಅಲ್ಲದೆ ಹಿಂದೆ ಇದ್ದ ಇಟ್ಟಿಗೆಯಿಂದ ನಿರ್ಮಿಸಲಾದ ಕಟ್ಟಡದ ಭಾಗಗಳು ದೊರೆತ್ತಿದ್ದು, ಅವು ಕರ್ನಾಟಕ ವಾಸ್ತುಶಿಲ್ಪದ ಪ್ರಾಚೀನ ನಿರ್ಮಿತಿಗಳಿಗೆ ಉದಾಹರಣೆಗಳಾಗಿವೆ.[೧೧] ಇವರ ಕಾಲದಲ್ಲಿ ಗುಹಾದೇವಾಲಯಗಳ ನಿರ್ಮಾಣ ವಿಶೇಷವಾಗಿದ್ದು ಬಾದಾಮಿಯ ಶೈವ, ಜೈನ ಹಾಗು ವೈಷ್ಣವ ಧರ್ಮಗಳಿಗೆ ಸಂಬಂಧಿಸಿದ, ಶಿಲೆಯಲ್ಲಿ ಕೊರೆದು ಮಾಡಿದ ಗುಹಾ ದೇವಾಲಯಗಳಿಗೆ ಹೆಸರಾಗಿವೆ. ಐಹೊಳೆಯು ಇವರ ಮತ್ತೊಂದು ವಾಸ್ತು ಕೇಂದ್ರವಾಗಿದ್ದು, ದೇವಾಲಯಗಳ ತೊಟ್ಟಿಲು' ಅಥವಾ ದೇವಾಲಯಗಳ ಪ್ರಯೋಗಶಾಲೆ' ಎಂದು ಹೆಸರಾಗಿದೆ. ಹಾಗೆಯೇ ಪಟ್ಟದಕಲ್ಲಿನ ದೇವಾಲಯಗಳೂ ಸಹ ರಚನಾ ಕ್ರಮದಲ್ಲಿ ಪ್ರಬುದ್ಧ ಸ್ಥಿತಿಯನ್ನು ಹೊಂದಿದ್ದು ಷಡ್ವರ್ಗ ದೇವಾಲಯಗಳೆನಿಸಿವೆ. ದೇವಾಲಯದ ಮುಖ್ಯಭಾಗ, ಅಂಗಗಳು, ಗರ್ಭಗುಡಿಯ ಮೇಲೆ ವಿವಿಧ ರೀತಿಯ ಶಿಖರ ಅಥವಾ ಮೇಲ್ಕಟ್ಟಡಗಳು ರೂಪುಗೊಂಡಿರುವುದೂ ಇವರ ಕಾಲದಲ್ಲಿ. ಈ ಶೈಲಿಯನ್ನು ರಾಷ್ಟ್ರಕೂಟ, ಗಂಗ, ನೊಳಂಬ, ವಿಜಯನಗರದ ಅರಸರ ಕಾಲದ ದೇವಾಲಯಗಳಲ್ಲೂ ಕಾಣಬಹುದಗಿದೆ. ಆದರೆ ಕಲ್ಯಾಣ ಚಾಲುಕ್ಯರ ಕಾಲದ ದೇವಾಲಯಗಳಲ್ಲಿ ಕೆಲವು ವೈವಿಧ್ಯತೆಗಳನ್ನು ಕಾಣಬಹುದಾಗಿದೆ.

ಕಲ್ಯಾಣ ಚಾಲುಕ್ಯರು ಪ್ರಮುಖವಾಗಿ ಸಮತಲವಾದ ಭೂಮಿಯ ಮೇಲೆ ಕರಿಯ ಮೆದುಗಲ್ಲನ್ನು (ಕ್ಲೋರೋಟಿಕ್ ಸಿಸ್ಟ್) ಬಳಸಿ ವಿಶಾಲವಾದ ದೇವಾಲಯಗಳ ನಿರ್ಮಾಣ

ಮಾಡಿದರು. ಶಿಲ್ಪಗಳಿಗೆ ಹೆಚ್ಚಿನ ಮೆರಗು ನೀಡುವ ಪದ್ಧತಿ ಪ್ರಾರಂಭವಾಗಿದ್ದು ಇವರ ಕಾಲದಿಂದ. ಅಲ್ಲದೇ ಮೂರ್ತಿಗಳ ಪ್ರಮಾಣವನ್ನು ಕಿರಿದಾಗಿಸಿ ದೇಹದ ಕೆಲವು ಅಂಗಗಳಿಗೆ ವಿಶೇಷವಾಗಿ ಮೆರಗು ನೀಡಿದರು. ಸಾಮಾನ್ಯವಾಗಿ ಇವರ ಕಾಲದ ದೇವಾಲಯಗಳು ಗರ್ಭಗೃಹ, ಅಂತರಾಳ, ನವರಂಗಗಳನ್ನು ಹೊಂದಿದ್ದು ಕೆಲವೆಡೆ ಮಾತ್ರ ಕಂಬಗಳಿಂದಾದ ಮುಖಮಂಟಪವಿರುತ್ತದೆ. ಭಿತ್ತಿಯು ಕುಡ್ಯಸ್ತಂಭ ಹಾಗು ಕುಂಭಲತೆಗಳಿಂದ ಅಲಂಕೃತಗೊಂಡಿದ್ದು, ಹಿಂಚಾಚು–ಮುಂಚಾಚುಗಳನ್ನು(ಭದ್ರಕರ್ಣ) ಹೊಂದಿರುತ್ತದೆ. ಭಿತ್ತಿಯಲ್ಲಿನ ಕೋಷ್ಠಗಳ ಮೇಲೆ ಕಪೋತದ ರಚನೆಯು ಸಣ್ಣ ಗುಡಿಗಳಂತಿದ್ದು ದೇವಾಲಯದ ಸೌಂದರ್ಯವನ್ನು ಹೆಚ್ಚಿಸುತ್ತವೆ. ಮುಖಮಂಟಪದ ಭಿತ್ತಿಯ ಭಾಗದಲ್ಲಿ ಜಾಲಂಧ್ರಗಳ ಅಳವಡಿಕೆ, ಜಾಲಂಧ್ರಗಳಲ್ಲಿ ಹೂಬಳ್ಳಿಯ ಸುರುಳಿಗಳು, ಪ್ರಾಣಿಪಕ್ಷಿಗಳ, ಚಿಕಣಿಶಿಲ್ಪಗಳ ರಚನೆ, ತಿರುಗಣೆಯಿಂದ ದುಂಡು ಕಂಬಗಳ ಬಳಕೆ ಅನೇಕ ಪಟ್ಟಿಕೆಗಳು ಹಾಗು ಕುಸುರಿ ಕೆತ್ತನೆಯ ದ್ವಾರಬಂಧಗಳು, ದ್ವಾರಬಂಧದ ಉತ್ತಿರಾಂಗದಲ್ಲಿ ಅಧೋಕುಮುದಗಳು, ಬಹುಕೋನಾಕೃತಿ ಮತ್ತು ಚೌಕಾಕಾರದ ಕಂಬಗಳ ಬಳಕೆ, ವಿಮಾನ ಹಾಗು ಭಿತ್ತಿಗಳನ್ನು ಸೇರಿಸುವ ದಪ್ಪವಾದ ಎರಡು ಬಾರಿ ಕಪೋತಗಳ ಬಳಕೆ, ಗುಮ್ಮಟಾಕಾರದ ಶಿಖರ, ಮಧ್ಯಮಮಟ್ಟದ ದೇವಾಲಯಗಳು ಇವು ಕಲ್ಯಾಣ ಚಾಲುಕ್ಯರ ಕಾಲದ ದೇವಾಲಯಗಳ ವಾಸ್ತುಲಕ್ಷಣಗಳು. ಇಂತಹ ದೇವಾಲಯಗಳು ಉತ್ತರ ಕರ್ನಾಟಕದಲ್ಲಿ ನೂರಾರು ನಿರ್ಮಾಣವಾಗಿವೆ.[೧೨] ಕಲ್ಯಾಣ ಚಾಲುಕ್ಯರ ನಂತರ ಬಂದ ಹೊಯ್ಸಳರು ಅವರ ವಾಸ್ತುಶೈಲಿಯನ್ನೇ ಅನುಸರಿಸಿ ದೇವಾಲಯಗಳನ್ನು ನಿರ್ಮಿಸಿರುವುದು ತಿಳಿದುಬರುತ್ತದೆ. ಅಲ್ಲದೇ ವಾಸ್ತುನಿರ್ಮಾಣಗಳಲ್ಲಿ ಅತ್ಯಂತ ಪರಾಕಾಷ್ಠತೆಯ ಹಂತವನ್ನು ತಲುಪಿದರು.

ಮುಂದೆ ಕರ್ನಾಟಕದಾದ್ಯಂತ ಅಧಿಕ ಸಂಖ್ಯೆಯ ದೇವಾಲಯಗಳು ನಿರ್ಮಾಗೊಂಡು ಆಯಾಯ ರಾಜವಂಶದ ದೇವಾಲಯಗಳು ಒಂದೊಂದು ಪ್ರದೇಶದಲ್ಲಿ ಕೇಂದ್ರೀಕೃತಗೊಂಡಂತೆಯೇ, ಬೇರೆ ಬೇರೆ ಪ್ರದೇಶಗಳಲ್ಲಿ ಬಿಡಿಬಿಡಿಯಾಗಿಯೂ ನಿರ್ಮಾಣಗೊಂಡವು. ಅಂದರೆ ಬಾದಾಮಿ ಚಾಲುಕ್ಯರ ಕಾಲದ ದೇವಾಲಯಗಳು ಬಾದಾಮಿ, ಐಹೊಳೆ, ಪಟ್ಟದಕಲ್ಲುಗಳಲ್ಲಿ ಕೇಂದ್ರೀಕೃತಗೊಂಡರೆ, ಎಲ್ಲೋರ, ಕುಕ್ಕನೂರು, ರೋಣ, ಮುಳಗುಂದ, ಸಿರಿವಾಳ, ಮುಂತಾದ ಪ್ರದೇಶಗಳಲ್ಲಿ ರಾಷ್ಟ್ರಕೂಟರ ದೇವಾಲಯಗಳನ್ನ ಗುರುತಿಸಿದರೆ[೧೩], ಕುರುವತ್ತಿ, ಗದಗ, ಲಕ್ಕುಂಡಿಗಳಲ್ಲಿ ಕಲ್ಯಾಣಚಾಲುಕ್ಯರ ದೇವಾಲಯಗಳು[೧೪], ಬೇಲೂರು, ಹಳೇಬೀಡು, ಸೋಮನಾಥಪುರ, ಹಾಸನ ಮತ್ತು ತುಮಕೂರು ಜಿಲ್ಲೆಗಳಲ್ಲಿ ಹೊಯ್ಸಳರ ದೇವಾಲಯಗಳು[೧೫], ಆವನಿ ಮತ್ತು ಹೇಮಾವತಿಗಳಲ್ಲಿ ಗಂಗರ ದೇವಾಲಯಗಳು[೧೬],

ಹಂಪೆಯಲ್ಲಿ ವಿಜಯನಗರ ಕಾಲದ ದೇವಾಲಯಗಳು[೧೭], ಕೇಂದ್ರೀಕೃತಗೊಂಡಿವೆ. ಅಲ್ಲದೆ ಬೇರೆಡೆಯಲ್ಲಿಯೂ ನಿರ್ಮಾಣವಾಗಿದ್ದರೂ, ಒಂದು ಕಾಲದ ದೇವಾಲಯಗಳ ರಚನಾಶೈಲಿ ಆಯಾ ರಾಜವಂಶದ ರಾಜಧಾನಿ ಮತ್ತು ಅದರ ಸುತ್ತಲಿನ ಪ್ರದೇಶಗಳ ಪ್ರಮುಖ ದೇವಾಲಯಗಳಲ್ಲಿ ನಿಖರವಾಗಿ, ಸ್ಪಷ್ಟವಾಗಿ ಮತ್ತು ಪೂರ್ಣವಾಗಿ ಪ್ರಕಟವಾಗಿರುತ್ತದೆ. ಆದ್ದರಿಂದ ಒಂದು ಕಾಲದ ದೇವಾಲಯಗಳ ಶೈಲಿಯನ್ನು ಅರಿಯುವಲ್ಲಿ ಆ ಕೇಂದ್ರ ಸ್ಥಾನಗಳು ಪ್ರಮುಖ ಪಾತ್ರವಹಿಸುತ್ತವೆ.

ಹೀಗೆ ಕರ್ನಾಟಕದಲ್ಲಿ ಪ್ರಾಚೀನ ಕಾಲದಿಂದಲೇ ದೇವಾಲಯಗಳ ರಚನಾಕಾರ್ಯ ಆರಂಭವಾಗಿದ್ದು, ಕಾಲದಿಂದ ಕಾಲಕ್ಕೆ ರಚನಾತ್ಮಕವಾಗಿ ನಿರ್ದಿಷ್ಟಗೊಳ್ಳುತ್ತ ತನ್ನದೇ ಆದ ಶೈಲಿ, ಪ್ರಭೇದಗಳನ್ನು ಬಿಂಬಿಸುತ್ತಾ ಪ್ರತಿಯೊಂದು ಪ್ರದೇಶದ ದೇವಾಲಯಗಳು ಕರ್ನಾಟಕ ವಾಸ್ತುಶಿಲ್ಪಕ್ಕೆ ವೈಶಿಷ್ಟ್ಯಪೂರ್ಣ ಕೊಡುಗೆ ಎನಿಸಿವೆ.[೧೮] ಕಾಲಕಾಲಕ್ಕೆ ಈ ವೈಶಿಷ್ಟ್ಯತೆಯಲ್ಲಾದ ಮಾರ್ಪಾಡನ್ನರಿಯುವಲ್ಲಿ ದೇವಾಲಯದ ರೂಪುರೇಷೆ, ರಚನಾಕ್ರಮ, ಸಾಮಾಗ್ರಿಗಳು, ವಿವಿಧ ಅಂಗಗಳು, ಅವುಗಳ ಅಲಂಕಾರ, ಪ್ರಕಾರ ಮುಂತಾದವುಗಳನ್ನು ಗಮನಿಸಬೇಕಾಗುತ್ತದೆ. ಇವು ದೇವಾಲಯದ ಶೈಲಿಯನ್ನು ನಿರ್ಧರಿಸಲು ಸಹಾಯಕವಾಗುವುದರೊಂದಿಗೆ ಅದರ ಅಂಗ ಭಾಗಗಳು ಬೆಳೆದು ಬಂದ ರೀತಿಯನ್ನು ತಿಳಿಯಬಹುದಾಗಿದೆ.[೧೯]

ತನಗಾಗಿ ಕಟ್ಟಿಕೊಂಡ ಮನೆ ಗೃಹವಾಸ್ತು ಶಿಲ್ಪವೆನಿಸಿದರೆ, ತನ್ನ ದೇವರಿಗಾಗಿ ಕಟ್ಟಿದ್ದು ಧಾರ್ಮಿಕ ವಾಸ್ತುಶಿಲ್ಪ ಅಥವಾ ದೇವಾಲಯ ವಾಸ್ತುಶಿಲ್ಪವೆನಿಸಿತು. ಪ್ರಾರಂಭದಲ್ಲಿ ಕೇವಲ ಮೂರ್ತಿಯನ್ನಷ್ಟೇ ಇಡಲು ಒಂದು ಮಂಟಪವನ್ನು ಮಾತ್ರ ನಿರ್ಮಿಸಿದರೆ, ಕಾಲಕ್ರಮೇಣ ಪೂಜಾವಿಧಿಗಳು, ಆಚರಣೆಗಳು ಹೆಚ್ಚಾದಂತೆ ದೇವಾಲಯದ ವಿಸ್ತಾರವು ವಿಸ್ತೃತಗೊಳ್ಳಲಾರಂಭಿಸಿತು. ಹಾಗೆಯೇ ಮಾನವನ ಆಲೋಚನೆ, ವಿಚಾರಗಳು ಬೆಳೆದಂತೆಲ್ಲಾ ದೇವಾಲಯವೂ ಬೆಳೆವಣಿಗೆಗೊಂಡಿತಲ್ಲದೇ, ನಮ್ಮ ಸಂಸ್ಕೃತಿಯ ಅವಿಭಾಜ್ಯ ಅಂಗವಾಯಿತು. ಅಂದರೆ ವಿದ್ಯೆ, ಸಂಗೀತ, ನೃತ್ಯ, ಮತ್ತಿತರ ಕಲೆಗಳಿಗೆ ಆಸರೆಯಾದವು. ಹೀಗೆ ಸಮಾಜದ ವಿವಿಧ ಉದ್ದೇಶ ಗಳಿಗಾಗಿ ನೆರವಾಗಿ ನಿಂತು ಒಂದಲ್ಲ ಒಂದು ರೀತಿಯಲ್ಲಿ ಸಮಾಜದ ಎಲ್ಲಾ ಸ್ತರದ ಮನ್ನಣೆಯನ್ನು ಪಡೆದಿದ್ದರಿಂದ ಅವು ಅವರ ಜೀವನದೊಂದಿಗೆ ಹಾಸುಹೊಕ್ಕಾಗಿ ಬೆಳೆದು ಸಮಾಜದ ಕೇಂದ್ರಸ್ಥಾನವೆನಿಸಿದಂತೆಯೇ, ದೇವಾಲಯದ ನಿರ್ಮಾಣವೂ ಇಡೀ ಸಮಾಜದ ಧಾರ್ಮಿಕಶ್ರದ್ಧೆಯ, ಭಕ್ತಿಯ ಪ್ರತೀಕವೆನಿಸಿತು. ಆಯಾಯ ಧಾರ್ಮಿಕ ಪಂಥಗಳಿಗನುಗುಣವಾಗಿ ಈ ಪೂಜಾಸ್ಥಳವು ಬೇರೆಬೇರೆ ಹೆಸರಿನಲ್ಲಿ ಕರೆಯಲ್ಪಟ್ಟಿತು. ಅಂದರೆ ಹಿಂದುಗಳು ದೇವಾಲಯವೆಂದು, ಜೈನರು ಬಸದಿ ಎಂದು ಹಾಗು ಬೌದ್ಧರು ಚೈತ್ಯ ಎಂದು ಕರೆದರು.

ಈ ರೀತಿಯಾಗಿ ದೇವಾಲಯ ವಾಸ್ತುಶಿಲ್ಪ ಬೆಳವಣಿಗೆಯಾದರೆ, ತಮ್ಮ ಶತ್ರುಗಳನ್ನು ಎದುರಿಸಲು ಸುಸಜ್ಜಿತವಾದ ಸೈನ್ಯದ ಅವಶ್ಯಕತೆಯಿದ್ದು, ಸೈನಿಕರ ತರಬೇತಿಗಾಗಿ ನಿರ್ಮಾಣ ಗೊಂಡ ರಚನೆಗಳನ್ನು ಸೈನಿಕ ವಾಸ್ತುಶಿಲ್ಪ ಎಂದು ಕರೆದರೆ, ಶತ್ರುಗಳಿಂದ ರಕ್ಷಣೆಗಾಗಿ ನಿರ್ಮಾಣಗೊಂಡ ಕೋಟೆಕೊತ್ತಲಗಳು ರಕ್ಷಣಾ ವಾಸ್ತು ಶಿಲ್ಪವೆನಿಸಿತು.[೨೦]

ಚಿತ್ರದುರ್ಗ ಪಾಳೆಯಗಾರರ ಕಾಲದ ವಾಸ್ತು ಸ್ಮಾರಕಗಳನ್ನು ಪ್ರಮುಖವಾಗಿ ಲೌಕಿಕ ಮತ್ತು ಧಾರ್ಮಿಕ ವಾಸ್ತುಶಿಲ್ಪಗಳೆಂದು ವಿಭಾಗಿಸಲಾಗಿದೆ. ಲೌಕಿಕ ವಾಸ್ತುಶಿಲ್ಪದಲ್ಲಿ ಅರಮನೆ ಗಳು, ಗರಡಿಮನೆಗಳು, ಕೋಟೆ–ಬುರುಜು, ಬತೇರಿಗಳು, ಹೊಂಡಗಳು(ಪುಷ್ಕರಣಿಗಳು), ಹಾಗು ಧಾರ್ಮಿಕ ವಾಸ್ತುಶಿಲ್ಪದಲ್ಲಿ ದೇವಾಲಯಗಳು, ಮಠಗಳು ಕಂಡುಬರುತ್ತವೆ. ಇವುಗಳಲ್ಲಿ ದೇವಾಲಯಗಳೇ ಪ್ರಧಾನವಾಗಿದ್ದು, ಪ್ರಸ್ತುತ ಅಧ್ಯಯನದ ಕೇಂದ್ರ ವಸ್ತುವಾಗಿದೆ. ಉಳಿದವು ಗಳನ್ನು ಸಂಕ್ಷಿಪ್ತವಾಗಿ ವಿವರಿಸುವ ಪ್ರಯತ್ನ ಮಾಡಲಾಗಿದೆ. ಚಿತ್ರದುರ್ಗ ಪಾಳೆಯಗಾರರ ದೇವಾಲಯಗಳನ್ನು ಕುರಿತು ಚರ್ಚಿಸುವ ಮೊದಲು ವಿಜಯನಗರ ವಾಸ್ತುಶೈಲಿಯ ಕೆಲವು ಲಕ್ಷಣಗಳನ್ನು ಗಮನಿಸುವುದು ಸೂಕ್ತ ಹಾಗು ಅನಿವಾರ್ಯವೂ ಹೌದು. ಕಾರಣ ಚಿತ್ರದುರ್ಗದ ಪಾಳೆಯಗಾರರ ಕಲೆ ಮತ್ತು ವಾಸ್ತುಶಿಲ್ಪದ ಶೈಲಿ ವಿಜಯನಗರ ಶೈಲಿಯ ಮುಂದುವರಿಕೆಯಾಗಿದೆ. ಮಧ್ಯಕಾಲೀನ ದಕ್ಷಿಣ ಭಾರತದಲ್ಲಿ ವೈಭವೋಪೇತವಾಗಿ ಆಳ್ವಿಕೆ ನಡೆಸಿದ ವಿಜಯನಗರ ಸಾಮ್ರಾಜ್ಯ ತನ್ನ ಕಲೆ ಮತ್ತು ವಾಸ್ತುಶಿಲ್ಪದ ವೈಶಿಷ್ಟ್ಯತೆಯಿಂದ ಅತ್ಯಂತ ಮಹತ್ವದ ಸ್ಥಾನ ಪಡೆದಿದೆ. ಇವರು ದೇವಾಲಯಗಳ ನಿರ್ಮಾಣಕ್ಕೆ ಹೆಚ್ಚು ಆದ್ಯತೆ ಹಾಗು ಪ್ರೋತ್ಸಾಹ ನೀಡಿದ್ದು, ಬೃಹತ್ ದೇವಾಲಯಗಳ ನಿರ್ಮಾಣಕ್ಕೆ ಕಾರಣೀಭೂತರಾಗಿದ್ದಾರೆ. ಹಾಗಾಗಿ ಇವರ ಕಲೆ ಮತ್ತು ವಾಸ್ತುಶಿಲ್ಪ ಶೈಲಿಯ ಕೆಲವು ಲಕ್ಷಣಗಳು ಗಮನಾರ್ಹವಾದವುಗಳು. ಅವುಗಳೆಂದರೆ ಸ್ಥಳೀಯವಾಗಿ ದೊರೆಯುತ್ತಿದ್ದ ಗ್ರಾನೈಟ್ ಕಲ್ಲಿನ ಬಳಕೆ, ದೇವಾಲಯಗಳ ತಲವಿನ್ಯಾಸದಲ್ಲಿ ಹೆಚ್ಚು ವಿಸ್ತಾರಗೊಂಡಿದ್ದು, ಸಾಮಾನ್ಯವಾಗಿ ಗರ್ಭಗೃಹ, ಪ್ರದಕ್ಷಿಣಾಪಥ, ಅರ್ಧಮಂಟಪ, ನವರಂಗ, ಮುಖಮಂಟಪ, ದೇವಾಲಯದ ಸುತ್ತಲೂ ನಿರ್ದಿಷ್ಟಪಡಿಸಿದ ದಿಕ್ಕಿನಲ್ಲಿ ಪರಿವಾರದೇವತೆಗಳ ಗುಡಿಗಳಿರುವುದು[೨೧], ವಿಶಾಲವಾದ ಪ್ರಾಕಾರ, ಒಂದಕ್ಕಿಂತ ಹೆಚ್ಚು ಪ್ರಾಕಾರಗಳು, ಎತ್ತರವಾದ ಪ್ರಾಕಾರಗೋಡೆ, ಎತ್ತರವಾದ ಪ್ರವೇಶದ್ವಾರ, ಮಹಾದ್ವಾರ ಗೋಪುರಗಳು(ಇಟ್ಟಿಗೆ,ಗಾರೆ), ಕಲ್ಯಾಣಮಂಟಪ ಮತ್ತು ಉತ್ಸವ ಮಂಟಪಗಳಿರುತ್ತವೆ. ಈ ಮಂಟಪಗಳ ಜತೆಗೆ ತಮಿಳುನಾಡಿನಲ್ಲಿರುವ ಇವರ ಕಾಲದ ದೇವಾಲಯಗಳಲ್ಲಿ ವಸಂತ ಮಂಟಪ, ವಾಹನ ಮಂಟಪ, ರಂಗಮಂಟಪ, ಕನ್ನಡಿ ಮಂಟಪ, ಉಯ್ಯಾಲೆ ಮಂಟಪ ಗಳನ್ನು ಕಾಣಬಹುದಾಗಿದೆ.

ಇವರ ಪ್ರದಕ್ಷಿಣಾಪಥದ ವಿಶೇಷವೆಂದರೆ ಗರ್ಭಗೃಹದ ನೆಲಮಟ್ಟಕ್ಕಿಂತ ಕೆಳಮಟ್ಟದಲ್ಲಿದ್ದು (ವಿಜಯನಗರ ಪೂರ್ವದ ಪ್ರದಕ್ಷಿಣಾಪಥಗಳು ನೆಲಮಟ್ಟಕ್ಕೆ ಸಮನಾಗಿದ್ದರೆ), ಸೋಪಾನದ ಮೂಲಕ ಕೆಳಗಿಳಿಯುವಂತಿರುತ್ತದೆ. (ಉದಾ: ಕುರುಗೋಡಿನ ಹಿಂಡುಲಿ ಸಂಗಮೇಶ್ವರ ದೇವಾಲಯ.) ಅಲ್ಲದೇ ಗರ್ಭಗೃಹಕ್ಕೂ, ಪ್ರದಕ್ಷಿಣಾಪಥಕ್ಕೂ ಮಧ್ಯ ಸುಮಾರು ಮೂರು ಅಡಿಗಳಷ್ಟು ಜಾಗವಿರುತ್ತದೆ.[೨೨] ಇವರ ಕಾಲದ ಕಂಬಗಳು ಪ್ರಮುಖವಾಗಿ ಐದು ವಿಧದ ಶೈಲಿಯನ್ನು ಹೊಂದಿದ್ದು, ಮೊದಲನೆಯ ಪ್ರಕಾರದ ಕಂಬಗಳು ಮೂರು ಚೌಕ ಭಾಗಗಳನ್ನು ಹೊಂದಿದ್ದು, ಎಂಟು-ಹದಿನಾರು ಮುಖಗಳ ಅಡ್ಡ ಹಾಗು ಲಂಬ ಪಟ್ಟಿಕೆಗಳಿರುತ್ತವೆ. ಕಂಬಗಳ ಚೌಕಭಾಗಗಳ ನಾಲ್ಕು ಮುಖಗಳಲ್ಲಿ ವಿವಿಧ ಉಬ್ಬು ಶಿಲ್ಪಗಳ ಕೆತ್ತನೆಯಿದ್ದು, ಮೇಲ್ಭಾಗದಲ್ಲಿ ಪುಷ್ಪಬೋದುಗೆಗಳಿರುತ್ತವೆ. ಎರಡನೆಯ ಪ್ರಕಾರದ ಕಂಬಗಳು ಮೇಲಿನ ಕಂಬಗಳಂತೆ ಇದ್ದು, ಸ್ವಲ್ಪ ವಿಶೇಷವಾಗಿ ಕಾಂಡದ ಕೆಳಭಾಗದಲ್ಲಿ ತಮ್ಮ ಮುಂಗಾಲುಗಳನ್ನು ಮೇಲಕ್ಕೆತ್ತಿ ನಿಂತ ಯಾಳಿ, ಕುದುರೆ ಹಾಗು ಸಿಂಹದಾಕಾರವಾಗಿ ರಚನೆಯಾಗಿರುತ್ತವೆ.[೨೩] ಮೂರನೆಯ ರೀತಿಯ ಕಂಬಗಳು ಸಂಯುಕ್ತ ಕಂಬಗಳಾಗಿವೆ. ಇವುಗಳು ಪ್ರಧಾನ ಕಾಂಡ ಮತ್ತು ಮಧ್ಯ ಭಾಗದಲ್ಲಿ ನಾಲ್ಕು ಬದಿಗೆ ಉಪಕಂಬಗಳನ್ನು ಹೊಂದಿರುತ್ತವೆ. ಹಂಪಿಯ ವಿಜಯವಿಠ್ಠಲ ದೇವಾಲಯದಲ್ಲಿರುವ ಇಂತಹ ಕಂಬಗಳು ಸಂಗೀತ ಸ್ತಂಭಗಳೆಂದು ಪ್ರಸಿದ್ಧವಾಗಿವೆ. ನಾಲ್ಕನೆಯ ರೀತಿಯ ಕಂಬಗಳು ಆಕರ್ಷಕವಾಗಿದ್ದು, ಕಾಂಡದ ಕೆಳಭಾಗದಲ್ಲಿ ನಾಲ್ಕು ಬದಿಗೆ ಸ್ವಲ್ಪ ಆಳವಾದ ಗೂಡು ಅಥವಾ ಮಂಟಪಗಳನ್ನು ಹೊಂದಿರುತ್ತವೆ. ಈ ಮಂಟಪಗಳ ಒಳಭಾಗದಲ್ಲಿ ದೇವತೆಗಳ ಶಿಲ್ಪಗಳಿರುತ್ತವೆ. ಇವು ಸಾಮಾನ್ಯವಾಗಿ ಉಬ್ಬುಶಿಲ್ಪಗಳಂತಿರದೆ, ಬಿಡಿಶಿಲ್ಪಗಳಂತೆ ಪೂರ್ಣಪ್ರಮಾಣದಲ್ಲಿ ಗೋಚರಿಸುತ್ತವೆ. ಐದನೆಯ ರೀತಿಯ ಕಂಬಗಳು ವಿಜಯನಗರದ ಅಂತ್ಯ ಕಾಲದ ದೇವಾಲಯಗಳಲ್ಲಿ ಕಂಡುಬರುತ್ತವೆ. ಇವುಗಳು ಒರಟು ಕಂಬಗಳಾಗಿದ್ದು, ಅಲಂಕಾರಕ್ಕಾಗಿ ಕಂಬಗಳ ಮೇಲೆ ಗಾರೆಯ ಲೇಪನವನ್ನು ಮಾಡಲಾಗಿರುತ್ತದೆ. ಇಂತಹ ಕಂಬಗಳನ್ನು ಹಂಪಿಯ ಸಾಸಿವೆಕಾಳು ಗಣಪತಿ ಹಾಗು ಸರಸ್ವತಿ ದೇವಾಲಯಗಳಲ್ಲಿ ಕಾಣಬಹುದು. ಇವರ ಕಾಲದಲ್ಲಿ ದ್ರಾವಿಡ ಶೈಲಿಯ ಶಿಖರ ಹೆಚ್ಚಾಗಿ ಬಳಕೆಯಲ್ಲಿತ್ತು. ಜೊತೆಗೆ ಗಾರೆಶಿಲ್ಪಗಳು (ದೇವತಾಶಿಲ್ಪಗಳು, ಮಿಥುನಶಿಲ್ಪಗಳು) ಸಾಕಷ್ಟು ಪ್ರಮಾಣದಲ್ಲಿ ರಚನೆಯಾದವು.

೩.೨ ಚಿತ್ರದುರ್ಗ ಪಾಳೆಯಗಾರರ ಕಾಲದ ವಾಸ್ತುಕಲೆಯ ಲಕ್ಷಣಗಳು

ವಿಜಯನಗರ ಕಾಲದ ಕಲೆ ಮತ್ತು ವಾಸ್ತುಶೈಲಿಯ ಮುಂದುವರಿಕೆಯಾಗಿ ಅವರ ಸಾಮಂತರಾಗಿದ್ದ ಚಿತ್ರದುರ್ಗ ಪಾಳೆಯಗಾರರ ಕಾಲದ ದೇವಾಲಯಗಳಲ್ಲಿ ಕಾಣಬಹುದಾಗಿದೆ.

ಚಿತ್ರದುರ್ಗ ಪಾಳೆಯಗಾರರ ಕಾಲದ ದೇವಾಲಯಗಳನ್ನು ಪ್ರಮುಖವಾಗಿ ಗುಹಾದೇವಾಲಯಗಳು ಮತ್ತು ರಾಚನಿಕ(ಕಟ್ಟಡ) ದೇವಾಲಯಗಳೆಂದು ಗುರುತಿಸಬಹುದು. ಇವುಗಳಲ್ಲಿ ಕೆಲವು ಮೂಲರೂಪದಲ್ಲಿದ್ದರೆ, ಇನ್ನೂ ಕೆಲವು ಜೀರ್ಣೋದ್ಧಾರಗೊಂಡಿದ್ದು, ಮತ್ತೆ ಕೆಲವು ಅವಸಾನದ ಅಂಚಿನಲ್ಲಿವೆ. ಇವರ ಕಾಲದ ವಾಸ್ತುಕಲೆಯ ವೈಶಿಷ್ಟ್ಯತೆ ಮತ್ತು ಅವುಗಳ ಕಾಲಮಾನವನ್ನು ಗುರುತಿಸಲು ಈ ಎಲ್ಲಾ ದೇವಾಲಯಗಳು ಸಹಾಯಕವಾಗಿವೆ.

ಚಿತ್ರದುರ್ಗ ಜಿಲ್ಲೆಯಲ್ಲಿ ಆಳ್ವಿಕೆ ನಡೆಸಿದ ಚಿತ್ರದುರ್ಗದ ಪಾಳೆಯಗಾರರು ತಮ್ಮ ಪರಿಸರದಲ್ಲಿ ಹಲವಾರು ದೇವಾಲಯ ಸ್ಮಾರಕಗಳನ್ನು ನಿರ್ಮಿಸಿ ಕಲೆ ಮತ್ತು ವಾಸ್ತುಶಿಲ್ಪ ಪರಂಪರೆಯನ್ನು ಶ್ರೀಮಂತಗೊಳಿಸಿದರು. ಅವರ ಕಲಾ ಆಸಕ್ತಿಗೆ ಸಾಕ್ಷಿಯಾಗಿ ಚಿತ್ರದುರ್ಗ ಪರಿಸರದಲ್ಲಿ ಅನೇಕ ದೇವಾಲಯಗಳು ಕಂಡುಬರುತ್ತವೆ. ಈ ದೇವಾಲಯಗಳು ವಿಜಯನಗರ ಶೈಲಿಯಲ್ಲಿ ನಿರ್ಮಿಸಲ್ಪಟ್ಟಿವೆಯಾದರೂ, ಸಾಕಷ್ಟು ಪ್ರಾದೇಶಿಕ ಪ್ರಭಾವಕ್ಕೆ ಒಳಗಾಗಿವೆ. ಹೆಚ್ಚಾಗಿ ಸ್ಥಳೀಯ ಅಂಶಗಳನ್ನು ಒಳಗೊಂಡ ಈ ದೇವಾಲಯಗಳನ್ನು ವಿಜಯನಗರ ವಾಸ್ತುಶೈಲಿಯ ಪ್ರಾದೇಶಿಕ ರೂಪಗಳೆಂದು ಹೇಳಬಹುದು. ಪಾಳೆಯಗಾರರ ರಾಜಕೀಯ ಮತ್ತು ಆರ್ಥಿಕ ಇತಿಮಿತಿಗಳು ಹಾಗು ದೇವಾಲಯಗಳ ನಿರ್ಮಾಣದಲ್ಲಿ ಸ್ಥಳೀಯ ಶಿಲ್ಪಿಗಳ ವ್ಯಾಪಕ ಬಳಕೆ ಈ ರೂಪಾಂತರಕ್ಕೆ ಕಾರಣಗಳಾಗಿವೆ. ಆದಾಗ್ಯೂ ಕೆಲವು ದೇವಾಲಯಗಳು ತಮ್ಮ ಗಾತ್ರ ಮತ್ತು ವಿನ್ಯಾಸದಲ್ಲಿ ವಿಜಯನಗರ ಕಾಲದ ಪ್ರಬುದ್ಧ ಹಂತದ ದೇವಾಲಯಗಳಂತಿವೆ. ಒಂದೆಡೆ ಶಿಷ್ಟ ಪ್ರಕಾರದ ಶೈಲಿಯನ್ನು ಅನುಸರಿಸುತ್ತಲೇ, ಮತ್ತೊಂದೆಡೆ ಜಾನಪದೀಯ(ಸ್ಥಳೀಯ) ಶೈಲಿಗೆ ಅನಿವಾರ್ಯವಾಗಿ ಒಗ್ಗಿಕೊಂಡ ಸಂದರ್ಭವನ್ನು ಈ ಪ್ರದೇಶದ ದೇವಾಲಯಗಳ ವಾಸ್ತು ಸಮೀಕ್ಷೆಯಿಂದ ಸ್ಪಷ್ಟವಾಗುತ್ತದೆ. ಈ ಸಮೀಕ್ಷೆಯಿಂದ ಕಂಡುಬಂದಂತೆ ಚಿತ್ರದುರ್ಗ ಪಾಳೆಯಗಾರರ ವಾಸ್ತುಕಲೆಯ ಲಕ್ಷಣಗಳನ್ನು ಈ ಮುಂದಿನಂತೆ ಗುರುತಿಸಬಹುದು.

ನಿರ್ಮಾಣದ ಸಾಮಾಗ್ರಿ

ಪಾಳೆಯಗಾರರು ತಮ್ಮ ವಾಸ್ತು ಸ್ಮಾರಕಗಳ ನಿರ್ಮಾಣಕ್ಕೆ ಪ್ರಧಾನವಾಗಿ ಚಿತ್ರದುರ್ಗ ಮತ್ತು ಸುತ್ತಲಿನ ಬೆಟ್ಟಗುಡ್ಡಗಳಲ್ಲಿ ವಿಪುಲವಾಗಿ ದೊರೆಯುವ ಕಣಶಿಲೆ (ಗ್ರಾನೈಟ್)ಯನ್ನು ಬಳಸಿದ್ದಾರೆ. ಸಾಮಾನ್ಯವಾಗಿ ದೇವಾಲಯಗಳ ಅಧಿಷ್ಠಾನ, ಭಿತ್ತಿ, ಕಂಬಗಳು, ಬಾಗಿಲುಗಳು (ದ್ವಾರಬಂಧ) ಮುಚ್ಚಿಗೆ (ಛತ್ತು), ಪ್ರಾಕಾರ ಮಂಟಪಗಳು, ದೀಪಸ್ತಂಭ ಹಾಗು ಉಯ್ಯಾಲೆ ಕಂಬಗಳನ್ನು ಈ ಶಿಲೆಯಲ್ಲಿ ನಿರ್ಮಿಸಲಾಗಿದೆ. ತೀರಾ ಅಪರೂಪವಾಗಿ ಶಿಖರವನ್ನು ಸಹ ಕಣಶಿಲೆಯಲ್ಲೇ ನಿರ್ಮಿಸಿರುವುದನ್ನು ನೀರ್ಥಡಿಯ ರಂಗನಾಥ ದೇವಾಲಯದಲ್ಲಿ ಕಾಣಬಹುದು.

ಸಾಮಾನ್ಯವಾಗಿ ಸೂಕ್ಷ್ಮತೆರನಾದ ಕೆತ್ತನೆಗೆ ಕಲ್ಲು ಕಠಿಣವಾಗಿದ್ದರೂ, ಹಿರಿಯೂರಿನ ತೇರುಮಲ್ಲೇಶ್ವರ, ನೀರ್ಥಡಿಯ ರಂಗನಾಥ, ಚಿತ್ರದುರ್ಗದ ವೆಂಕಟರಮಣ ದೇವಾಲಯಗಳ ಆಕರ್ಷಕ ಕಂಬಗಳನ್ನು ಗಮನಿಸಿದಾಗ ಕಠಿಣವಾದ ಕಣಶಿಲೆಯನ್ನು ಹೇಗೆ ಆಕರ್ಷಕವಾಗಿ ಬಳಸಿಕೊಳ್ಳಲಾಗಿದೆ ಎನ್ನುವುದು ವ್ಯಕ್ತವಾಗುತ್ತದೆ.

ಕಣಶಿಲೆಯ ನಂತರ ಸಾಮಾನ್ಯವಾಗಿ ದೇವಾಲಯಗಳ ಶಿಖರ, ಮುಖಮಂಟಪ ಹಾಗು ಸಭಾಮಂಟಪಗಳ ಮಾಡಿನ ಅಂಚಿನಲ್ಲಿ (ಕಪೋತ) ನಿರ್ಮಿಸಲಾಗಿರುವ ದೇವಕೋಷ್ಟಗಳು, ಅವುಗಳಲ್ಲಿರುವ ಶಿಲ್ಪಗಳು, ಶಾಲ, ಹಾರ, ಕೂಟಗಳು, ಕಂಗೂರಾಕೃತಿಗಳು ಹಾಗು ದ್ವಾರಗೋಪುರಗಳನ್ನು ಇಟ್ಟಿಗೆ, ಸಣ್ಣಸಣ್ಣ ಕಲ್ಲಿನ ತುಂಡುಗಳು ಮತ್ತು ಗಾರೆಯಿಂದ ನಿರ್ಮಿಸಲಾಗಿದೆ. ಉದಾ: ಹುಲ್ಲೂರಿನ ಸಿದ್ದೇಶ್ವರ, ನೀರ್ಥಡಿ ರಂಗನಾಥ, ಹೊರಕೆರೆದೇವರಪುರದ ರಂಗನಾಥ, ಚಿತ್ರಹಳ್ಳಿ ಆಂಜನೇಯ, ತಾಳ್ಯದ ಆಂಜನೇಯ, ಚಿತ್ರದುರ್ಗದ ಉತ್ಸವಾಂಬೆ ದೇವಾಲಯಗಳಲ್ಲಿ ಕಟ್ಟಡಗಳ ಮೇಲೆ ಹೆಚ್ಚಿನ ಭಾರವನ್ನು ತಪ್ಪಿಸುವ ಮತ್ತು ಅಧಿಕ ಕುಸುರಿ ಕೆಲಸಕ್ಕೆ ಆಸ್ಪದವಿರುವುದರಿಂದ ಇಟ್ಟಿಗೆ ಮತ್ತು ಗಾರೆಯ ಬಳಕೆ ಮಾಡಿರುವುದನ್ನು ಇಲ್ಲಿ ಗ್ರಹಿಸಬಹುದು.

ತಲವಿನ್ಯಾಸ

ದೇವಾಲಯಗಳು ಸಾಮಾನ್ಯವಾಗಿ ಮಧ್ಯಮ ಹಾಗು ಚಿಕ್ಕ ಪ್ರಮಾಣದ ತಲವಿನ್ಯಾಸಗಳನ್ನು ಹೊಂದಿವೆ. ಈ ಪ್ರದೇಶದಲ್ಲಿ ಹಂಪಿಯ ದೇವಾಲಯಗಳಂತೆ ಯಾವುದೇ ಬೃಹತ್ ಪ್ರಮಾಣದ ತಲವಿನ್ಯಾಸದ ದೇವಾಲಯಗಳು ಕಂಡುಬರುವುದಿಲ್ಲ. ಮಧ್ಯಮ ಪ್ರಮಾಣದ ದೇವಾಲಯಗಳು ಬಹುಮಟ್ಟಿಗೆ ವಿಜಯನಗರ ಶೈಲಿಯ ಎಲ್ಲಾ ಲಕ್ಷಣಗಳನ್ನು ಒಳಗೊಂಡು ರಚನೆಯಾಗಿವೆ. ಉದಾ: ನೀರ್ಥಡಿಯ ರಂಗನಾಥಸ್ವಾಮಿ, ಚಿತ್ರದುರ್ಗದ ಉತ್ಸವಾಂಬೆ, ಚನ್ನಕೇಶವ, ವೆಂಕಟರಮಣ, ಹಿರಿಯೂರಿನ ವೇಣುಗೋಪಾಲಸ್ವಾಮಿ, ಅಂಬಲಗೆರೆ ರಂಗನಾಥಸ್ವಾಮಿ, ಹೊರಕೆರೆದೇವರಪುರದ ಲಕ್ಷ್ಮೀರಂಗನಾಥಸ್ವಾಮಿ ದೇವಾಲಯಗಳು. ಈ ದೇವಾಲಯಗಳು ಗರ್ಭಗೃಹ, ಅಂತರಾಳ, ಸಭಾಮಂಟಪ, ರಂಗಮಂಟಪ, ಸುತ್ತಲೂ ಪ್ರಾಕಾರ, ಅದಕ್ಕೆ ಮಹಾದ್ವಾರ ಮಂಟಪ, ಪ್ರಾಕಾರ ಮಂಟಪಗಳು, ಮುಂದೆ ದೀಪಸ್ತಂಭ ಹಾಗು ಉಯ್ಯಾಲೆಸ್ತಂಭಗಳನ್ನು ಒಳಗೊಂಡು ತಲವಿನ್ಯಾಸದಲ್ಲಿ ವಿಸ್ತೃತವೆನಿಸುತ್ತವೆ. ಕೆಲವು ದೇವಾಲಯಗಳು ಈ ಲಕ್ಷಣಗಳಲ್ಲಿ ಕೆಲವೊಂದು ಭಾಗಗಳನ್ನು ಹೊಂದಿರದೇ ಇದ್ದರೂ, ಅವುಗಳ ತಲವಿನ್ಯಾಸ ವಿಸ್ತೃತವಾಗಿಯೇ ಇರುತ್ತದೆ. ಇನ್ನೂ ಹೆಚ್ಚಿನ ದೇವಾಲಯಗಳ ತಲವಿನ್ಯಾಸವು ಚಿಕ್ಕಪ್ರಮಾಣದಲ್ಲಿರುತ್ತದೆ. ಇಂತಹ ದೇವಾಲಯಗಳು ಕೇವಲ ಗರ್ಭಗೃಹ

(ಉದಾ: ಇಸಾಮುದ್ರದ ಆಂಜನೇಯ, ಹೊಳಲ್ಕೆರೆಯ ಬಯಲುಗಣಪತಿ.) ಇಲ್ಲವೇ ಗರ್ಭಗೃಹ, ಸಭಾಮಂಟಪ ಮತ್ತು ಮುಖಮಂಟಪಗಳನ್ನು ಹೊಂದಿರುತ್ತವೆ. ಉದಾ: ತಾಳ್ಯದ ಆಂಜನೇಯ, ಚಿತ್ರಹಳ್ಳಿ ಆಂಜನೇಯ, ಚಿತ್ರದುರ್ಗದ ಬೆಟ್ಟದಲ್ಲಿನ ಏಕನಾಥೇಶ್ವರಿ, ಭೀಮಸಮುದ್ರದ ಭೀಮೇಶ್ವರ ದೇವಾಲಯಗಳು.

ಅಧಿಷ್ಠಾನ

ಚಿತ್ರದುರ್ಗ ಪಾಳೆಯಗಾರರ ದೇವಾಲಯ ಸ್ಮಾರಕಗಳ ಅಧಿಷ್ಠಾನಗಳು ಹೆಚ್ಚಿನ ಅಲಂಕರಣೆ ಹೊಂದದೆ ಸರಳವಾಗಿವೆ. ಅಧಿಷ್ಠಾನಗಳು ಹೆಚ್ಚಿಗೆ ಮಂಚಬಂಧ ಶೈಲಿಯಲ್ಲಿವೆ. ಇದರಲ್ಲಿ ಉಪಾನ, ಜಗತಿ, ಕಪೋತ ಭಾಗಗಳಿದ್ದು, ಅವು ಕೂಡ ಹೆಚ್ಚಾಗಿ ಸರಳವಾಗಿರುತ್ತವೆ. ಆದರೆ ಕೆಲವೊಂದು ದೇವಾಲಯಗಳ ಅಧಿಷ್ಠಾನದ ಕಪೋತ ಭಾಗದಲ್ಲಿ ಅರೆವೃತ್ತಾಕಾರದ ಹಾಗು ಚೈತ್ಯಾಕೃತಿಗಳ ರಚನೆಗಳನ್ನು ಕಾಣಬಹುದು(ಉದಾ : ಚಿತ್ರದುರ್ಗದ ವೆಂಕಟರಮಣ, ಹೊಳಲ್ಕೆರೆಯ ವೀರಭದ್ರ). ತಾಳ್ಯದ ಆಂಜನೇಯ ದೇವಾಲಯದ ಗರ್ಭಗೃಹ ಮತ್ತು ಸುಖನಾಸಿಯ ಅಧಿಷ್ಠಾನ, ಚಿತ್ರದುರ್ಗದ ಉತ್ಸವಾಂಬೆ ದೇವಾಲಯದ ಮುಖಮಂಟಪದ ಅಧಿಷ್ಠಾನಗಳು ವಿಶೇಷವಾಗಿವೆ. ಇಲ್ಲಿ ಕೆಳ ಅಧಿಷ್ಠಾನದ ಮೇಲೆ ಉಪಅಧಿಷ್ಠಾನವನ್ನು ನಿರ್ಮಿಸಲಾಗಿದೆ. ದೇವಾಲಯಗಳನ್ನು ಮಟ್ಟಸವಲ್ಲದ ಭೂಮಿಯ ಮೇಲೆ ನಿರ್ಮಿಸುವ ಸಂದರ್ಭದಲ್ಲಿ ಕೆಲವು ವಾಸ್ತು ಭಾಗಗಳ ನೆಲಭಾಗವು ಹೆಚ್ಚು ಕಡಿಮೆಯಾಗುವುದರಿಂದ ಅದನ್ನು ಸರಿದೂಗಿಸಿ ಇಡೀ ದೇವಾಲಯದ ಎಲ್ಲಾ ಅಂಕಣಗಳ ನೆಲಭಾಗವನ್ನು ಸಮಗೊಳಿಸುವ ಉದ್ದೇಶದಿಂದ ಹೀಗೆ ಎರಡು ಅಧಿಷ್ಠಾನಗಳನ್ನು ಯೋಜಿಸಿಕೊಂಡಿರುವುದು ವ್ಯಕ್ತವಾಗುತ್ತದೆ. ಹೀಗೆಯೇ ವಿಜಯನಗರದ ವಿಜಯವಿಠ್ಠಲ ದೇವಾಲಯದಲ್ಲಿ ಗರ್ಭಗೃಹ ಮತ್ತು ಅರ್ಧಮಂಟಪ ಎತ್ತರದಲ್ಲಿರುವ ಕಾರಣ ಈ ರೀತಿಯ ಎರಡು ಅಧಿಷ್ಠಾನಗಳನ್ನು ನಿರ್ಮಿಸಲಾಗಿದೆ. ಒಮ್ಮೊಮ್ಮೆ ಭಿತ್ತಿಯ ಅಲಂಕರಣವು ಆಗಿರುತ್ತದೆ. ಇವೆಲ್ಲಾ ಸಾಂದರ್ಭಿಕವಾದ, ಇಲ್ಲವೇ ಅನುಕೂಲಕ್ಕೆ ತಕ್ಕಂತೆ ಮಾಡಿಕೊಂಡ ಮಾರ್ಪಾಡುಗಳೇ ವಿನಃ ಯಾವುದೇ ರೀತಿಯ ವಿಶೇಷ ವಾಸ್ತು ಶೈಲಿಯೇನಲ್ಲ.

ಇಲ್ಲಿಯ ದೇವಾಲಯಗಳ ಅಧಿಷ್ಠಾನಗಳಲ್ಲಿ ತುಂಬಾ ವಿಶಿಷ್ಟವಾದದ್ದು ನೀರ್ಥಡಿಯ ರಂಗನಾಥ ದೇವಾಲಯದ ಗರ್ಭಗೃಹದ ಅಧಿಷ್ಠಾನ. ಶಿಷ್ಟ ಪ್ರಕಾರದಲ್ಲಿರುವ ಇದು ಜಗತಿ, ಉಪಾನ, ಕುಮುದ, ಪದ್ಮ, ಗಳ, ಹಾರ, ಕಂಠ, ಪ್ರತಿಬಂಧ ಮುಂತಾದ ಸೂಕ್ಷ್ಮ ಅಂಗಗಳನ್ನು ಒಳಗೊಂಡಿದ್ದು ಪರಿಪೂರ್ಣ ಅಧಿಷ್ಠಾನವಾಗಿದೆ. ಭಿತ್ತಿಯಲ್ಲಿ ಉಪ ಅಧಿಷ್ಠಾನವನ್ನು ಹೊಂದಿದ್ದು, ತ್ರಿಪಟ್ಟ ಕುಮುದ, ಪ್ರತಿ, ಕಂಠ, ಕಪೋತ, ಕಿರಿದಾದ ಭಿತ್ತಿ,

ಹಾಗು ಊದೋಪಾನಗಳಿಂದ ಕೂಡಿದೆ. ಅಧಿಷ್ಠಾನದಲ್ಲಿ ಆನೆಯ ಸಾಲುಗಳು, ಆನೆಗಳನ್ನು ಪಳಗಿಸುತ್ತಿರುವುದು, ಆನೆಕಾಳಗ, ಪರಸ್ಪರ ಹೋರಾಡುತ್ತಿರುವ ಸಿಂಹಗಳು, ಆನೆಗಳು ವ್ಯಕ್ತಿಯೊಬ್ಬನನ್ನು ವಧಿಸುತ್ತಿರುವುದು, ಕೋಲಾಟದ ದೃಶ್ಯಗಳು ಮುಂತಾದ ಭಿನ್ನಭಿನ್ನವಾದ ವೈವಿಧ್ಯಮಯ ಉಬ್ಬುಶಿಲ್ಪಗಳಿವೆ. ಉಪಾನದ ತುದಿಯಲ್ಲಿ ಸಿಂಹಗಳ, ಕಪಿ, ಟಗರು ಹಾಗು ಮನುಷ್ಯರ ವಿವಿಧ ಭಂಗಿಯ ವಿನೋದದ ಸೂಕ್ಷ್ಮ ಶಿಲ್ಪಗಳನ್ನು ಬಿಡಿಸಿರುವುದು ಇಲ್ಲಿನ ಅಧಿಷ್ಠಾನದ ವಿಶೇಷ ಎನ್ನಬಹುದು.

ಹೀಗೆ ಈ ಪರಿಸರದಲ್ಲಿ ಅಪರೂಪದ್ದೆನಿಸುವ ನೀರ್ಥಡಿ ರಂಗನಾಥಸ್ವಾಮಿ ದೇವಾಲಯದ ಗರ್ಭಗೃಹದ ಅಧಿಷ್ಠಾನವು ಕಲಾತ್ಮಕವಾದ ಕೆತ್ತನೆಗಳಿಂದ ಕೂಡಿದ್ದು, ಹಂಪಿಯ ವಿಜಯವಿಠ್ಠಲ ದೇವಾಲಯದ ಅಧಿಷ್ಠಾನವನ್ನು ನೆನಪಿಸುವಂತಿದೆ.

ಭಿತ್ತಿ

ಅಧಿಷ್ಠಾನದ ನಂತರದ ಭಾಗವೇ ಭಿತ್ತಿ. ಪಾಳೆಯಗಾರರ ಕಾಲದ ದೇವಾಲಯಗಳಲ್ಲಿ ಗರ್ಭಗೃಹ, ಅಂತರಾಳ, ಸಭಾಮಂಟಪ ಮತ್ತು ಮುಖಮಂಟಪಗಳ ಇಕ್ಕೆಲಗಳಲ್ಲಿ ಭಿತ್ತಿಗಳಿವೆ. ಅಧಿಷ್ಠಾನದ ಮೇಲಿನ ಈ ಭಾಗವನ್ನು ಸಾಮಾನ್ಯವಾಗಿ ಮಟ್ಟಸಗೊಳಿಸಿದ ದೊಡ್ಡ ಅಳತೆಯ ಕಲ್ಲುಗಳಿಂದ ಕಟ್ಟಲಾಗಿರುತ್ತದೆ. ಉದಾ: ಚಿತ್ರದುರ್ಗದ ಉತ್ಸವಾಂಬೆ, ಹುಲ್ಲೂರು ಆಂಜನೇಯ, ಭೀಮಸಮುದ್ರದ ಭೀಮೇಶ್ವರ, ಹಂಪನೂರು ರಂಗನಾಥ, ಜೋಡಿರಂಗಾಪುರದ ರಂಗನಾಥ ದೇವಾಲಯಗಳು. ಭಿತ್ತಿಗಳಲ್ಲಿ ಅಂತರ್ಗತವಾದ ಕಂಬಗಳನ್ನು ಹೊಂದಿದ ಭಿತ್ತಿಗಳು ಮತ್ತು ಬಾಹ್ಯ ಗೋಚರಿಸುವ ಕಂಬಗಳನ್ನು ಹೊಂದಿದ ಭಿತ್ತಿಗಳು ಎಂದು ಎರಡು ರೀತಿಯಲ್ಲಿ ವರ್ಗೀಕರಿಸಬಹುದು. ಸಾಮಾನ್ಯವಾಗಿ ವಿಜಯನಗರ ಕಾಲದ ಸಂಗಮ ಮನೆತನದ ದೇವಾಲಯಗಳಿಂದ ಹಿಡಿದು ತುಳುವ ಮನೆತನದ ದೇವಾಲಯಗಳವರೆಗೆ, ಅಂದರೆ ಕಮಲಾಪುರದ ಗಾಣಗಿತ್ತಿ ಜೈನದೇವಾಲಯ, ಹಜಾರರಾಮಸ್ವಾಮಿ ದೇವಾಲಯಗಳ ಭಿತ್ತಿಗಳು ಕೂಡ ಮಟ್ಟಸಗೊಳಿಸಿದ ಬೃಹತ್ ಕಲ್ಲುಗಳಿಂದ ಕಟ್ಟಲ್ಪಟ್ಟಿವೆ. ಈ ಪರಂಪರೆಯನ್ನು ಮುಂದುವರೆಸಿಕೊಂಡು ಬಂದ ಪಾಳೆಯಗಾರರು ಪ್ರಾದೇಶಿಕವಾದ ಹೊಸ ಪದ್ಧತಿಯೊಂದನ್ನು ಅಳವಡಿಸಿಕೊಂಡರು. ಅದು ಭಿತ್ತಿಗಳಲ್ಲಿ ಕಂಬಗಳು ಮತ್ತು ತೊಲೆಗಳು ಹೊರಗೋಚರಿಸುವಂತೆ ನಿರ್ಮಿಸುವುದು. ಸಾಮಾನ್ಯವಾಗಿ ಭಿತ್ತಿಯನ್ನು ದ್ವಿಸ್ತರದಲ್ಲಿ ನಿರ್ಮಿಸಿದಾಗ ಕಂಬಗಳು ಅಂತರ್ಗತವಾಗುತ್ತವೆ. ಆದರೆ ಇದು ವೆಚ್ಚದಾಯಕವಾದ ಕಾರ್ಯ. ಸಾಮಾನ್ಯವಾಗಿ ಏಕಸ್ತರದಲ್ಲಿ ನಿರ್ಮಿಸಿದಾಗ ಕಂಬಗಳು ಹೊರಗೋಚರಿಸುವುದು ಅನಿವಾರ್ಯ. ಭಿತ್ತಿಯ ಸೌಂದರ್ಯಕ್ಕೆ ಇದು ಪೂರಕವಾಗದಿದ್ದರೂ, ಕಡಿಮೆ ವೆಚ್ಚದ್ದು. ಹಾಗಾಗಿ ಪಾಳೆಯಗಾರರು

ತಮ್ಮ ಆರ್ಥಿಕ ಮಿತಿಯಲ್ಲಿ ಯೋಚಿಸಿ ದೇವಾಲಯಗಳನ್ನು ನಿರ್ಮಿಸಿದ್ದರಿಂದ ಏಕಸ್ತರದ ಭಿತ್ತಿಗಳು ರೂಢಿಗೊಂಡವೆಂದು ಹೇಳಬಹುದು.

ದೇವಾಲಯದ ಭಿತ್ತಿಗಳನ್ನು ಸೌಂದರ್ಯಪೂರ್ಣವಾಗಿ ಅಲಂಕರಿಸಿರುವ ಪರಂಪರೆ ಬಾದಾಮಿ ಚಾಲುಕ್ಯರ ಕಾಲದಿಂದ ವಿಜಯನಗರ ಕಾಲದವರೆಗೆ ಬೆಳೆದು ಬಂದಿದೆಯಾದರೂ, ಪಾಳೆಯಗಾರರ ಕಾಲಕ್ಕೆ ಅದು ಒಂದು ರೀತಿಯಲ್ಲಿ ಸ್ಥಗಿತಗೊಂಡಿತೆಂದೇ ಹೇಳಬಹುದು. ಈ ಕಾಲದ ದೇವಾಲಯಗಳ ಭಿತ್ತಿಗಳ ಮೇಲೆ ದೇವಕೋಷ್ಟಗಳಾಗಲಿ, ಅರ್ಧಗಂಬಗಳಾಗಲಿ, ಧಾರ್ಮಿಕ ಮತ್ತು ಲೌಕಿಕ ಶಿಷ್ಟಪ್ರಕಾರದ ಶಿಲ್ಪಗಳನ್ನಾಗಲಿ ಕಾಣಲು ಸಾಧ್ಯವಿಲ್ಲ. ಬದಲಿಗೆ ಗರ್ಭಗೃಹ, ಅಂತರಾಳ, ಸಭಾಮಂಟಪಗಳ ಭಿತ್ತಿಗಳ ಮೇಲೆ ತೀರಾ ವಿರಳವಾಗಿ ಅಲ್ಲಲ್ಲಿ ಕೆಲವು ಉಬ್ಬುಶಿಲ್ಪಗಳು ಕಂಡುಬರುತ್ತವೆ. ಇವೂ ಕೂಡ ತೀರಾ ಅಸಮರ್ಪಕವಾಗಿದ್ದು ನೈಜತೆಯಲ್ಲಿರುವುದಿಲ್ಲ. ಪದೇಪದೇ ನಾಗಸರ್ಪ, ಪರಸ್ಪರ ಅಭಿಮುಖವಾಗಿರುವ ಜೋಡಿಮೀನು, ಜೋಡಿ ಆನೆ, ಐದು ಮುಖದ ಹಸು, ಆಮೆ, ಮಂಗ, ಮಿಥುನಶಿಲ್ಪಗಳು, ಶಿವಲಿಂಗ ಪೂಜಿಸುತ್ತಿರುವ ನರಶಾರ್ದೂಲ, ಮತ್ಸ್ಯಕನ್ಯೆ, ಕಾಳಿಂಗಮರ್ದನ ಕೃಷ್ಣ, ಹಂಸ (ಚಿತ್ರದುರ್ಗದ ಉತ್ಸವಾಂಬೆ), ಹಾವು-ಮುಂಗಸಿಯ ಕಾಳಗ (ಚಿತ್ರದುರ್ಗದ ಗೋಪಾಲಸ್ವಾಮಿ), ವಿವಿಧ ಪುಷ್ಪಾಕೃತಿಗಳು (ಭೀಮಸಮುದ್ರದ ಭೀಮೇಶ್ವರ), ಹಾವಾಡಿಗ (ಚಿತ್ರದುರ್ಗದ ಚನ್ನಕೇಶವ), ಗಜಶಾರ್ದೂಲ (ಚಳ್ಳಕೆರೆಯ ಚಳ್ಳಕೆರೆಮ್ಮ) ಮುಂತಾದ ಶಿಲ್ಪಗಳು ಸಾಮಾನ್ಯವಾಗಿವೆ.

ಆದರೆ ನೀರ್ಥಡಿಯ ರಂಗನಾಥಸ್ವಾಮಿ ದೇವಾಲಯದ ಗರ್ಭಗೃಹದ ಹೊರ ಭಿತ್ತಿಯು ಅತ್ಯಂತ ಆಕರ್ಷಕ ಹಾಗು ಕಲಾತ್ಮಕವಾಗಿದೆ. ಭಿತ್ತಿಯ ಭಾಗದಲ್ಲಿ ಅನೇಕ ರೀತಿಯ ಮನುಷ್ಯರ, ಪ್ರಾಣಿಗಳ ಅಲಂಕೃತ ಆಕೃತಿಗಳ ಉಬ್ಬುಶಿಲ್ಪಗಳನ್ನು ಕಾಣಬಹುದು. ಇಲ್ಲಿ ಕುದುರೆಗಳನ್ನು ಪಳಗಿಸುತ್ತಿರುವ, ಸವಾರಿ ಮಾಡುತ್ತಿರುವ, ಸೈನಿಕರ ಸ್ಫುಟವಾದ ಉಬ್ಬುಶಿಲ್ಪಗಳನ್ನು ಬಿಡಿಸಲಾಗಿದೆ. ಈ ಶಿಲ್ಪಗಳು ಪ್ರಮಾಣಬದ್ಧ ರಚನೆಗಳಾಗಿದ್ದು, ಸೂಕ್ಷ್ಮ ಅಲಂಕರಣೆಗಳಿಂದ ಕೂಡಿವೆ. ಕುದುರೆಗಳು ಮತ್ತು ವ್ಯಕ್ತಿಗಳು ವಿವಿಧ ಆಭರಣಗಳು ಹಾಗು ವೈವಿಧ್ಯಮಯವಾದ ವೇಷಭೂಷಣಗಳಿಂದ ಅಲಂಕೃತಗೊಂಡಿವೆ. ಜೊತೆಗೆ ನರ್ತಕಿಯರ, ಕೋಲಾಟದ ಸ್ತ್ರೀಯರ, ಮೃದಂಗ ವಾದ್ಯಗಾರರ, ಸಾಲುಮಂಟಪಗಳಲ್ಲಿ ಕೂತಿರುವ ಯತಿಗಳ, ದಂಪತಿಗಳ ಹಾಗು ಪೌರಾಣಿಕ ಘಟನೆಗಳಿಗೆ ಸಂಬಂಧಿಸಿದ ವಿವಿಧ ಉಬ್ಬುಶಿಲ್ಪಗಳನ್ನು ಇಲ್ಲಿಯ ಭಿತ್ತಿಯಲ್ಲಿ ಕಾಣಬಹುದಾಗಿದೆ. ಅಂತೆಯೇ ಜೋಡಿ ರಂಗಾಪುರದ ರಂಗನಾಥಸ್ವಾಮಿ ದೇವಾಲಯದ ಭಿತ್ತಿಯಲ್ಲಿ ಉದ್ದಕ್ಕೂ ಚೈತ್ಯಾಕೃತಿಗಳ ಅಲಂಕರಣೆಗಳನ್ನು, ಚಿತ್ರದುರ್ಗದ ವೆಂಕಟರಮಣಸ್ವಾಮಿ ದೇವಾಲಯದ ಒಳಭಿತ್ತಿಯಲ್ಲಿ ಹನ್ನೆರಡು ಜನ ಆಳ್ವಾರರ, ರಥಸವಾರರ, ಗಣೇಶ, ಹಂಸ, ಲಕ್ಷ್ಮೀ ಹಾಗು ಗಜಕಾಳಗದ ಉಬ್ಬುಶಿಲ್ಪಗಳಿವೆ.

ಪ್ರಸ್ತರ

ದೇವಾಲಯಗಳ ಪ್ರಸ್ತರ ಭಾಗವು ವಿವಿಧ ರೀತಿಯಲ್ಲಿ ನಿರ್ಮಾಣವಾಗಿದೆ. ಇಲ್ಲಿ ಇಳಿಜಾರಾದ ಮುಂಜೂರು, ಕಂಗೂರಗಳು, ಶಾಲ, ಕೂಟ, ಹಾರಗಳನ್ನು ನಿರ್ಮಿಸಲಾಗಿದೆ. ಸಾಮಾನ್ಯವಾಗಿ ಮುಖಮಂಟಪದ ಪ್ರಸ್ತರ ಭಾಗವು ಮುಂಜೂರು, ಶಾಲ ಮತ್ತು ಕೂಟಗಳನ್ನು ಹೊಂದಿರುತ್ತದೆ. ಉಳಿದಂತೆ ದೇವಾಲಯದ ಎರಡೂ ಬದಿಯ ಮಾಡಿನಲ್ಲಿ ಉದ್ದಕ್ಕೂ ಕಂಗೂರಾಕೃತಿಗಳು ಕಂಡುಬರುತ್ತವೆ. ಉದಾ: ಮಾರಿಕಣಿವೆಯ ಮಾರಿಕಾಂಭ, ಚಿತ್ರದುರ್ಗದ ಚನ್ನಕೇಶವ ದೇವಾಲಯಗಳು. ಮುಂಜೂರು ಎನ್ನುವುದು ವಾಸ್ತವಿಕವಾಗಿ ಶಿಲೆಯ ಹಲಗೆ. ಮಾಡಿನಲ್ಲಿ ಹೊಂದಿಸಲಾಗಿರುವ ಇದು ಭಿತ್ತಿಯಿಂದ ಹೊರಕ್ಕೆ ಇಳಿಜಾರಾಗಿರುತ್ತದೆ. ಇದರಲ್ಲಿ ಎರಡು ವಿಧ. ಒಂದು ನೇರ ಇಳಿಜಾರಾಗಿರುವುದು. ಉದಾ: ಮಾರಿಕಣಿವೆ ಮಾರಿಕಾಂಭ ದೇವಾಲಯದಲ್ಲಿ ಇದು ಮುಖಮಂಟಪ, ಸಭಾಮಂಟಪ ಮತ್ತು ಗರ್ಭಗೃಹದ ಸುತ್ತೆಲ್ಲಾ ಕಂಡುಬರುತ್ತದೆ. ಇನ್ನೊಂದು ರೀತಿಯ ಮುಂಜೂರು ಅರೆವೃತ್ತಾಕಾರಾದಲ್ಲಿರುತ್ತದೆ. ಇದು ವಿಜಯನಗರದ ಮೂಲ ಶೈಲಿಯಲ್ಲಿಯಂತಿದ್ದು, ಅರೆವೃತ್ತಾಕಾರದಲ್ಲಿ ಖಂಡರಿಸಿದ ಬಿಡಿಬಿಡಿ ಹಲಗೆಗಳನ್ನು ಸೇರಿಸಿ ಇಂತಹ ಮುಂಜೂರನ್ನು ನಿರ್ಮಿಸಲಾಗಿರುತ್ತದೆ. ನೀರ್ಥಡಿಯ ರಂಗನಾಥಸ್ವಾಮಿ ದೇವಾಲಯದ ಪ್ರಧಾನ ಮುಖಮಂಟಪದಲ್ಲಿ ಇಂತಹ ಅರೆವೃತ್ತಾಕಾರದ ಮತ್ತು ಆಕರ್ಷಕವಾದ ಮುಂಜೂರನ್ನು ಕಾಣಬಹುದು. ಇದೇ ದೇವಾಲಯದ ಉಪಮುಖಮಂಟಪದ ಮಾಡಿನಲ್ಲಿ ಇಳಿಜಾರಾದ ಮುಂಜೂರು ಇರುವುದು ವಿಶೇಷವಾಗಿದೆ. ಕೆಲವು ಸಲ ಈ ಮುಂಜೂರಿನ ಮೇಲೆ ಉದ್ದಕ್ಕೂ ಚೈತ್ಯಾಕೃತಿಗಳ ಅಲಂಕರಣೆಗಳಿರುತ್ತವೆ. (ಉದಾ: ಜೋಡಿರಂಗಾಪುರದ ರಂಗನಾಥಸ್ವಾಮಿ). ಈ ಮುಂಜೂರುಗಳ ಮೇಲೆ ಇಟ್ಟಿಗೆ ಮತ್ತು ಗಾರೆಯಿಂದ ನಿರ್ಮಿಸಿದ ಶಾಲ, ಕೂಟ, ಹಾರಗಳಿರುತ್ತವೆ. ಸಾಮಾನ್ಯವಾಗಿ ಮುಖಮಂಟಪಗಳ ಮುಂಭಾಗದಲ್ಲಿ ಮಾತ್ರ ಇಂತಹ ಶಾಲ, ಕೂಟಗಳಿರುತ್ತವೆ. ಉದಾ: ಚಿತ್ರದುರ್ಗದ ಬೆಟ್ಟದ ಮೇಲಿನ ಏಕನಾಥೇಶ್ವರಿ, ನಗರದ ಆನೆಬಾಗಿಲ ವೆಂಕಟೇಶ್ವರ, ಹಿರಿಯೂರಿನ ತೇರುಮಲ್ಲೇಶ್ವರ, ಮಾರಿಕಣಿವೆಯ ಮಾರಿಕಾಂಭ ಮುಂತಾದ ದೇವಾಲಯಗಳು.

ಕಂಗೂರಾಕೃತಿಗಳಲ್ಲೂ ಎರಡು ಪ್ರಕಾರಗಳನ್ನು ಗುರುತಿಸಬಹುದು. ಮುಖಮಂಟಪ ಮತ್ತು ಸಭಾಮಂಟಪಗಳ ಪ್ರಸ್ತರದಲ್ಲಿ ಸ್ವಲ್ಪ ಎತ್ತರವಾದ ಇಟ್ಟಿಗೆ, ಗಾರೆಯ ಗೋಡೆಯನ್ನು ಕಟ್ಟಲಾಗಿದ್ದು, ಅದರ ಮೇಲೆ ಸಾಲಾಗಿ ಕಂಗೂರಾಕೃತಿಗಳನ್ನು ಬಿಡಿಯಾಗಿ ನಿರ್ಮಿಸಲಾಗಿರುತ್ತದೆ. ಇಂತಹ ಕಂಗೂರಾಕೃತಿಗಳನ್ನು ಅಂಬಲಗೆರೆಯ ರಂಗನಾಥಸ್ವಾಮಿ ದೇವಾಲಯದಲ್ಲಿ

ಕಾಣಬಹುದು. ಎರಡನೆಯ ರೀತಿಯ ಕಂಗೂರಾಕೃತಿಗಳು ಮಾರಿಕಣಿವೆಯ ಮಾರಿಕಾಂಭ ದೇವಾಲಯದಲ್ಲಿ ಕಂಡುಬರುತ್ತವೆ. ಇಲ್ಲಿ ಸಭಾಮಂಟಪದ ಬದಿಯ ಮಾಡಿನುದ್ದಕ್ಕೂ ಇಟ್ಟಿಗೆ, ಗಾರೆಯ ಚಿಕ್ಕ ಗೋಡೆಯನ್ನು ನಿರ್ಮಿಸಲಾಗಿದ್ದು, ಅದರ ಹೊರಮುಖದಲ್ಲಿ ಸಾಲಾಗಿ ಕಂಗೂರಾಕೃತಿಗಳ ಉಬ್ಬುಶಿಲ್ಪಗಳನ್ನು ಬಿಡಿಸಲಾಗಿದೆ. ಶಾಲ, ಕೂಟ, ಹಾರಗಳು ಬಹುಮಟ್ಟಿಗೆ ವಿಜಯನಗರ ಶೈಲಿಯಲ್ಲಿದ್ದು, ಅವುಗಳಲ್ಲಿ ಯಾವುದೇ ದೇವತೆಗಳ ಗಾರೆಯ ಶಿಲ್ಪಗಳಿಲ್ಲ. ಆದರೆ ಇತ್ತೀಚಿನ ಶಾಲ, ಕೂಟ, ಹಾರಗಳಲ್ಲಿ ಕೆಲವು ದೇವಾನುದೇವತೆಗಳ ಗಾರೆಶಿಲ್ಪಗಳು ಕಂಡುಬರುತ್ತವೆ.

ಶಿಖರ

ಗರ್ಭಗೃಹಗಳ ಶಿಖರಗಳನ್ನು ಸಾಮಾನ್ಯವಾಗಿ ಇಟ್ಟಿಗೆ ಮತ್ತು ಗಾರೆಯಿಂದ ನಿರ್ಮಿಸಲಾಗಿದೆ. ಆದರೆ ನೀರ್ಥಡಿಯ ರಂಗನಾಥಸ್ವಾಮಿ, ಚಿತ್ರದುರ್ಗದ ಉತ್ಸವಾಂಬೆ ದೇವಾಲಯಗಳ ಶಿಖರಗಳು ಸಂಪೂರ್ಣ ಕಲ್ಲಿನಲ್ಲಿ ನಿರ್ಮಾಣಗೊಂಡಿವೆ. ಈ ಶಿಖರಗಳು ದ್ರಾವಿಡ ಮಾದರಿಯಲ್ಲಿದ್ದು, ಗರ್ಭಗೃಹದ ಉದ್ದಗಲಕ್ಕೂ ವ್ಯಾಪಿಸಿರುತ್ತವೆ. ದ್ರಾವಿಡ ಮಾದರಿಯಲ್ಲಿ ಏಕತಲದ ಮಾದರಿಯ ಶಿಖರಗಳೇ ಹೆಚ್ಚು ಇಂತಹ ಶಿಖರಗಳನ್ನು ಚಿತ್ರದುರ್ಗದ ವೆಂಕಟರಮಣ, ಹೊರಕೆರೆದೇವರಪುರದ ಲಕ್ಷ್ಮೀರಂಗನಾಥಸ್ವಾಮಿ, ಚಿತ್ರಹಳ್ಳಿ ಆಂಜನೇಯ, ತಾಳ್ಯದ ಆಂಜನೇಯ, ಜಾನಕಲ್ಲು ವೆಂಕಟೇಶ್ವರ, ಹಿರಿಯೂರಿನ ತೇರುಮಲ್ಲೇಶ್ವರ ಮತ್ತು ವೆಂಕಟರಮಣ ಮುಂತಾದ ದೇವಾಲಯಗಳಲ್ಲಿ ಕಾಣಬಹುದು. ಇವುಗಳಲ್ಲಿ ಶಾಲ ಮತ್ತು ಕೂಟಗಳ ಜತೆಗೆ ಅರ್ಧಗಂಬಗಳ ಅಲಂಕರಣೆಯಿರುತ್ತದೆ. ಸಾಮಾನ್ಯವಾಗಿ ಈ ಶಿಖರಗಳ ಮೇಲೆ ಯಾವುದೇ ಗಾರೆಶಿಲ್ಪಗಳು ಕಂಡುಬರುವುದಿಲ್ಲ. ಆದರೆ ಅಪರೂಪವಾಗಿ ನೀರ್ಥಡಿಯ ರಂಗನಾಥಸ್ವಾಮಿ(ಶಿಲೆ), ತಾಳ್ಯದ ಆಂಜನೇಯ ದೇವಾಲಯಗಳ ಶಿಖರಗಳಲ್ಲಿ ಒಂದೆರೆಡು ಶಿಲ್ಪಗಳು ಮಾತ್ರ ಕಂಡುಬರುತ್ತವೆ. ಈ ದ್ರಾವಿಡ ಮಾದರಿಗಳಲ್ಲಿ ನೀರ್ಥಡಿಯ ರಂಗನಾಥಸ್ವಾಮಿ, ಅಂಬಲಗೆರೆಯ ರಂಗನಾಥಸ್ವಾಮಿ, ಅಬ್ಬಿನಹೊಳೆಯ ರಂಗನಾಥಸ್ವಾಮಿ ದೇವಾಲಯಗಳಲ್ಲಿ ದ್ವಿತಲದ ಶಿಖರಗಳಿವೆ. ನೀರ್ಥಡಿಯ ಶಿಖರವನ್ನು ಹೊರತುಪಡಿಸಿದರೆ ಉಳಿದೆಲ್ಲವೂ ಸರಳವಾಗಿವೆ. ಯಾವುದೇ ರೀತಿಯ ಶಾಲ, ಕೂಟಗಳಿಲ್ಲದ ತ್ರಿತಲದ ಶಿಖರಗಳನ್ನು ಹೊಳಲ್ಕೆರೆಯ ವೇಣುಗೋಪಾಲಸ್ವಾಮಿ ಮತ್ತು ವೀರಭದ್ರಸ್ವಾಮಿ ದೇವಾಲಯಗಳಲ್ಲಿ ಕಾಣಬಹುದು. ನೀರ್ಥಡಿಯ ಶಿಖರವು ಸಂಪೂರ್ಣ ಶಿಲೆಯಿಂದ ನಿರ್ಮಿಸಲ್ಪಟ್ಟಿದ್ದು ದ್ವಿತಲದಲ್ಲಿದೆ. ಶಿಖರದ ಪ್ರತಿಹಂತವು ಕೂಟ ಮತ್ತು ಶಾಲಗಳ ರಚನೆಯನ್ನು ಹೊಂದಿದೆ. ಅವುಗಳಲ್ಲಿ ಅರ್ಧಗಂಬಗಳು ಮತ್ತು ದೇವಕೋಷ್ಟಗಳಿದ್ದು, ದೇವಕೋಷ್ಟದಲ್ಲಿ ವಿಷ್ಣುವಿನ

ಉಬ್ಬುಶಿಲ್ಪಗಳನ್ನು ಬಿಡಿಸಲಾಗಿದೆ. ಶಾಲ ಮತ್ತು ಕೂಟಗಳ ನಡುವೆ ಕುಂಭಪಂಜರಗಳ ಅಲಂಕರಣೆಯಿದೆ. ಈ ರೀತಿಯ ಕುಂಭಪಂಜರಗಳ ಅಲಂಕರಣೆಯನ್ನು ಹಂಪಿಯ ದೇವಾಲಯಗಳಲ್ಲಿ ಕಾಣಬಹುದು. ಕುಂಭಪಂಜರ ಗಿಡ್ಡನೆಯ ಕಂಬವನ್ನು ಹೊಂದಿದ್ದು, ಮಕರದ ಅಲಂಕರಣವನ್ನು ಹೊಂದಿದೆ. ಇದೇ ರೀತಿಯ ಎರಡನೆಯ ತಲವೂ ಇದ್ದು ಕಿರಿದಾಗುತ್ತಾ ಮೇಲೇರುತ್ತದೆ. ಉಳಿದಂತೆ ಹೆಚ್ಚಿನ ಶಿಖರಗಳು ದುರಸ್ತಿಗೊಂಡಿರುವುದರಿಂದ ಸಮಕಾಲೀನ ವಾಸ್ತು ಭಾಗಗಳನ್ನು ಹೊಂದಿ ಮೂಲ ಸ್ವರೂಪವನ್ನು ಕಳೆದುಕೊಂಡಿವೆ. ಆದಾಗ್ಯೂ ಈ ಶಿಖರಗಳಲ್ಲಿ ವೈವಿಧ್ಯತೆಗಳನ್ನು ಗುರುತಿಸಬಹುದು.

ಚಿತ್ರದುರ್ಗದ ಉತ್ಸವಾಂಬೆ, ಜಾನಕಲ್ಲಿನ ಶಂಕರಲಿಂಗೇಶ್ವರ ದೇವಾಲಯಗಳ ಶಿಖರಗಳು ಕದಂಬನಾಗರ ಶೈಲಿಯಲ್ಲಿವೆ. ಇವುಗಳಲ್ಲಿ ಉತ್ಸವಾಂಬೆ ದೇವಾಲಯದ ಶಿಖರವು ಶಿಖರದ ಕೆಳಹಂತದಲ್ಲಿ ಐದು ತಲಗಳಿದ್ದು, ಅವುಗಳಲ್ಲಿ ಮೂರನೆಯ ತಲದಲ್ಲಿ ಹಲ್ಲಿನಾಕಾರದ ರಚನೆಗಳಿವೆ. ಇದರ ಮೇಲೆ ಚತುಷ್ರಾಕಾರದ ಸ್ತೂಪಿಯಿದೆ. ಈ ಶಿಖರವು ಅರೆ ಫಾಂಸನ ಶೈಲಿಯನ್ನು ಹೋಲುತ್ತದೆ. ಸಾಮಾನ್ಯವಾಗಿ ಎಲ್ಲಾ ಶಿಖರಗಳ ಮೇಲಿನ ಸ್ತೂಪಿಯ ಕೆಳಭಾಗದಲ್ಲಿ ನಾಲ್ಕು ಮೂಲೆಗೆ ನಂದಿ (ಉದಾ:ಬಬ್ಬೂರು ರಂಗನಾಥ), ಸಿಂಹ (ಚಿತ್ರದುರ್ಗದ ಉತ್ಸವಾಂಬೆ)ಗಳ ಶಿಲ್ಪಗಳಿರುತ್ತವೆ. ಮೇಲೆ ಸ್ತೂಪಿಯು ಬಹುಮಟ್ಟಿಗೆ ವೃತ್ತಾಕಾರದಲ್ಲಿ ಇರುತ್ತದೆ. ಆದರೆ ಹೊಳಲ್ಕೆರೆಯ ವೇಣುಗೋಪಾಲಸ್ವಾಮಿ, ಚಿತ್ರದುರ್ಗದ ಉತ್ಸವಾಂಬೆ ಮತ್ತು ನೀರ್ಥಡಿಯ ರಂಗನಾಥಸ್ವಾಮಿ ದೇವಾಲಯಗಳ ಶಿಖರಗಳ ಸ್ತೂಪಿಯು ಚತುರಸ್ರಾಕಾರದಲ್ಲಿದೆ. ಇವುಗಳ ಮೇಲೆ ಕಳಸವಿರುತ್ತದೆ.

ಹೀಗೆ ಪಾಳೆಯಗಾರರ ಕಾಲದ ದೇವಾಲಯಗಳ ಶಿಖರಗಳು ಉತ್ತಮ ಸ್ಥಿತಿಯಲ್ಲಿ ಉಳಿದಿರುವುದಕ್ಕಿಂತ ಶಿಥಿಲವಾಗಿರುವುದೇ ಹೆಚ್ಚು. ಹಾಗಾಗಿ ಅವು ಕಾಲಕಾಲಕ್ಕೆ ದುರಸ್ತಿಗೊಳ್ಳುತ್ತ ಬಂದಿವೆ. ಅಂತಹ ಸಂದರ್ಭದಲ್ಲಿ ಮೂಲ ವಾಸ್ತುಭಾಗಗಳನ್ನು ತೆಗೆದು ಸ್ಥಳೀಯ ಅಂಶಗಳನ್ನು ಸೇರಿಸಿರುವುದು ಹೆಚ್ಚಾಗಿ ಕಂಡುಬರುತ್ತದೆ. ಪರಿಣಾಮವಾಗಿ ಮೂಲ ದ್ರಾವಿಡ ಮಾದರಿಯ ಶಿಖರಗಳು ಹೇಗೆ ಕಾಲಾನುಕ್ರಮದಲ್ಲಿ ತೀರಾ ಸ್ಥಳೀಯವಾಗಿ ರೂಪಾಂತರಗೊಳ್ಳುತ್ತಾ ಬಂದಿವೆ ಎಂಬ ಸಂಗತಿಯನ್ನು ಇಲ್ಲಿಯ ಶಿಖರಗಳು ಸಾಕ್ಷೀಕರಿಸುತ್ತವೆ.

ಗರ್ಭಗೃಹ

ಗರ್ಭಗೃಹವು ದೇವಾಲಯದ ಮುಖ್ಯಭಾಗ. ದೇವಾಲಯದ ಮೂಲದೇವರನ್ನು ಇಲ್ಲಿ ಪ್ರತಿಷ್ಠಾಪಿಸಲಾಗಿರುತ್ತದೆ. ಸಾಮಾನ್ಯವಾಗಿ ಗರ್ಭಗೃಹಗಳು ಒಂದೇ ಅಂಕಣದಲ್ಲಿದ್ದು ಚಿಕ್ಕ ಪ್ರಮಾಣದಲ್ಲಿರುತ್ತವೆ ಮತ್ತು ಅಲಂಕರಣೆಗಳು ತೀರಾ ಕಡಿಮೆ. ಚಿತ್ರದುರ್ಗದ ಪಾಳೆಯಗಾರರ

ಕಾಲದ ದೇವಾಲಯಗಳು ಬಹುಮಟ್ಟಿಗೆ ಏಕಕೂಟ ಮಾದರಿಯ ದೇವಾಲಯಗಳಾಗಿರುವುದರಿಂದ ಒಂದೇ ಗರ್ಭಗೃಹಗಳನ್ನು ಹೊಂದಿವೆ. ಆದರೆ ಹೊಳಲ್ಕೆರೆಯ ವೀರಭದ್ರೇಶ್ವರ ದೇವಾಲಯ ಮಾತ್ರ ತ್ರಿಕೂಟ ಶೈಲಿಯಲ್ಲಿದ್ದು, ಮೂರು ಗರ್ಭಗೃಹಗಳನ್ನು ಹೊಂದಿದೆ. ಈ ಗರ್ಭಗೃಹಗಳ ಹೊರಭಿತ್ತಿಯಲ್ಲಿ ಕೆಲವು ಕಡೆ ಕೈಪಿಡಿಗಳಿವೆ. ಛತ್ತುವಿನಲ್ಲಿ ಬಹುಮಟ್ಟಿಗೆ ಅರಳುಕಮಲದ ಭುವನೇಶ್ವರಿ ಇರುತ್ತದೆ. ಗರ್ಭಗೃಹದಲ್ಲಿ ನಾಲ್ಕು ಮೂಲೆಗಂಬಗಳು ಕಂಡುಬರುತ್ತವೆ. ಗರ್ಭಗೃಹದ ಹೊರಭಿತ್ತಿಯಲ್ಲಿ ಗರ್ಭಗೃಹದಿಂದ ಹೊರಬಂದಿರುವ ಜಲಪ್ರಣಾಳಗಳು ಇರುತ್ತವೆ. ಉದಾ: ಚಳ್ಳಕೆರೆಯ ಚಳ್ಳಕೆರೆಮ್ಮ ದೇವಾಲಯದಲ್ಲಿ ಸಿಂಹವಕ್ತ್ರ ಪ್ರಣಾಳ ಮತ್ತು ಚಿತ್ರದುರ್ಗದ ಉತ್ಸವಾಂಬೆ ದೇವಾಲಯದಲ್ಲಿ ಗಜವಕ್ತ್ರ ಪ್ರಣಾಳಗಳಿವೆ.

ಈ ಎಲ್ಲಾ ದೇವಾಲಯಗಳು ನಿರಾಂಧಾರ ದೇವಾಲಯಗಳಾಗಿದ್ದರೆ, ಚಿತ್ರದುರ್ಗದ ಬೆಟ್ಟದ ಮೇಲಿನ ಗೋಪಾಲಸ್ವಾಮಿ ಮತ್ತು ಕಾವಾಡಿಗರಹಟ್ಟಿಯ ಶಿವದೇವಾಲಯಗಳು ಗರ್ಭಗೃಹದ ಸುತ್ತಲೂ ಪ್ರದಕ್ಷಿಣಾ ಪಥವನ್ನು ಹೊಂದಿ ಸಾಂಧಾರ ದೇವಾಲಯಗಳಾಗಿವೆ. ಇಲ್ಲಿ ಸಭಾಮಂಟಪದಷ್ಟೇ ಅಗಲವಾದ ಪ್ರದಕ್ಷಿಣಾ ಪಥವಿದ್ದು, ಅದರ ಒಳಭಾಗದಲ್ಲಿ ಗರ್ಭಗೃಹವಿರುತ್ತದೆ. ಈ ಪ್ರದಕ್ಷಿಣಾಪಥಗಳು ಸುತ್ತಲೂ ಭಿತ್ತಿಯನ್ನು ಹೊಂದಿ ಮುಚ್ಚಿದ ರೀತಿಯಲ್ಲಿರುತ್ತವೆ. ವಿಜಯನಗರ ಕಾಲದ ದೇವಾಲಯಗಳ ಪ್ರದಕ್ಷಿಣಾಪಥಗಳು ಸಾಮಾನ್ಯವಾಗಿ ಗರ್ಭಗೃಹದ ಮಟ್ಟಕ್ಕಿಂತ ಕೆಳಭಾಗದಲ್ಲಿದ್ದು, ಒಂದು ವಿಶೇಷ ವಾಸ್ತುಭಾಗಗಳಾಗಿ ಕಂಡುಬರುತ್ತವೆ. ಆದರೆ ಪಾಳೆಯಗಾರರ ಈ ಪ್ರದಕ್ಷಿಣಾ ಪಥಗಳು ದೇವಾಲಯದ ವಿಶೇಷ ಭಾಗವಾಗಿ ಗೋಚರಿಸದೆ ಸಾಮಾನ್ಯವಾಗಿವೆ. ವಾಸ್ತುಕಲೆಯು ನಗಣ್ಯವಾದಾಗ ಹೇಗೆ ಶಿಷ್ಟ ಪ್ರಕಾರಗಳು ಸಾಮಾನ್ಯ ರೂಪುಪಡೆದುಕೊಳ್ಳುತ್ತವೆ ಎನ್ನುವುದಕ್ಕೆ ಈ ಪ್ರದಕ್ಷಿಣಾಪಥಗಳು ಸಾಕ್ಷಿಯಾಗಿವೆ.

ಅಂತರಾಳ ಅಥವಾ ಸುಖನಾಸಿ

ಗರ್ಭಗೃಹದ ಮುಂಭಾಗದಲ್ಲಿ ಅದರಷ್ಟೇ ಅಳತೆಯಲ್ಲಿರುವ ಅಂತರಾಳಗಳು ಕೂಡ ಹೆಚ್ಚು ವಾಸ್ತು ವಿಶೇಷತೆಯನ್ನು ಹೊಂದಿರುವುದಿಲ್ಲ. ಆದರೆ ಚಿತ್ರದುರ್ಗ ಪಾಳೆಯಗಾರರ ಕಾಲದ ದೇವಾಲಯಗಳ ಅಂತರಾಳಗಳು ತಮ್ಮ ವಿನ್ಯಾಸದಿಂದ ಗಮನಸೆಳೆಯುತ್ತವೆ. ಅಂದರೆ ಇವು ಸಭಾಮಂಟಪದಷ್ಟೇ ಅಗಲವಾಗಿರುವುದು. ಹುಲ್ಲೂರಿನ ಆಂಜನೇಯ, ಹಂಪನೂರಿನ ರಂಗನಾಥಸ್ವಾಮಿ, ಮಾರಿಕಣಿವೆಯ ಮಾರಿಕಾಂಭ, ಅಬ್ಬಿನಹೊಳೆ ರಂಗನಾಥ ದೇವಾಲಯಗಳ ಅಂತರಾಳಗಳು ಈ ರೀತಿ ಇವೆ. ಇದಕ್ಕೆ ಕಾರಣ ಅಂತರಾಳದ ಎರಡು ಬದಿಯಲ್ಲಿ ಉಪಗರ್ಭಗೃಹಗಳನ್ನು ಮಾಡಿರುವುದು. ಸಾಮಾನ್ಯವಾಗಿ ಇವು ತೆರೆದ ಇಲ್ಲವೇ ಮುಚ್ಚಿದ

ರೀತಿಯಲ್ಲಿರುತ್ತವೆ. ಮುಚ್ಚಿದ ಗರ್ಭಗೃಹಗಳಿಗೆ ಬಾಗಿಲುಗಳು ಸಭಾಮಂಟಪದ ಕಡೆಗಿರುತ್ತವೆ. ಶಿಷ್ಟ ಪ್ರಕಾರದಲ್ಲಿ ಮೂರು ದೇವತೆಗಳ ಪ್ರತಿಷ್ಠಾಪನೆಯು ತ್ರಿಕೂಟಾಚಲ ಮಾದರಿಯ ದೇವಾಲಯದ ತಲವಿನ್ಯಾಸವನ್ನು ರೂಪಿಸಲಾಗುತ್ತದೆ. ಇಲ್ಲಿ ಸಭಾಮಂಟಪದ ಮೂರು ದಿಕ್ಕಿಗೆ ಮೂರು ಗರ್ಭಗೃಹಗಳು, ಅವುಗಳ ಮುಂದೆ ಮೂರು ಅಂತರಾಳಗಳು ಇರುತ್ತವೆ. ಆದರೆ ಪಾಳೆಯಗಾರರ ಆಳ್ವಿಕೆಯ ವೇಳೆಗಾಗಲೆ ವಾಸ್ತುಶಿಲ್ಪದಲ್ಲಿ ಆರ್ಥಿಕತೆ ಮತ್ತು ಇತರ ಸ್ಥಳೀಯ ಕಾರಣಗಳಿಂದ ಸಡಿಲತೆ ಉಂಟಾಗಿ ಹೇಗೆ ಮೂರು ದೇವತೆಗಳನ್ನು ಕಡಿಮೆ ವೆಚ್ಚದಲ್ಲಿ ಒಂದೇ ದೇವಾಲಯದಲ್ಲಿ ಪ್ರತಿಷ್ಠಾಪಿಸುವ ಪದ್ಧತಿ ರೂಢಿಗೊಂಡಿತೆಂಬುದು ಹಾಗು ಆ ಮೂಲಕ ಹೊಸ ಪ್ರಾದೇಶಿಕ ವಾಸ್ತು ಬದಲಾವಣೆಗಳುಂಟಾದವು ಎಂಬುದನ್ನು ಇವುಗಳ ಮೂಲಕ ತಿಳಿಯಬಹುದಾಗಿದೆ.

ಗರ್ಭಗೃಹದ ಮೇಲೆ ಶಿಖರವಿದ್ದರೆ, ಅದಕ್ಕೆ ಹೊಂದಿಕೊಂಡತೆ ಅಂತರಾಳದ ಮೇಲೆ ಸುಖನಾಸ ಎಂಬ ವಾಸ್ತು ಭಾಗವಿರುತ್ತದೆ. ಹಾಗಾಗಿ ಅದರ ಕೆಳಗಿರುವ 'ಅಂತರಾಳ' ಸುಖನಾಸಿ ಎನಿಸುತ್ತದೆ. ಸುಖನಾಸವು ಮುಂಭಾಗದಲ್ಲಿ ಚೈತ್ಯಾಕೃತಿಯನ್ನು ಹೋಲುವ ಅರೆವೃತ್ತಾಕಾರದ ಆಕೃತಿ. ವಿರಳವಾಗಿ ಕೆಲವು ದೇವಾಲಯಗಳಲ್ಲಿ ಇಂತಹ ಸುಖನಾಸಗಳು ಕಂಡುಬರುತ್ತವೆ. ಸಂಡೂರಿನ ಪಾರ್ವತಿ ದೇವಾಲಯದ ಸುಖನಾಸವು ಅತ್ಯಂತ ಪ್ರಧಾನವಾಗಿದೆ. ಇಂತಹ ಸುಖನಾಸಗಳ ಪ್ರಾದೇಶಿಕ ರೂಪುಗಳನ್ನು ಚಿತ್ರದುರ್ಗದ ಪಾಳೆಯಗಾರರ ಕೆಲವು ದೇವಾಲಯಗಳಲ್ಲಿ ಕಾಣಬಹುದು. ಹೊಳಲ್ಕೆರೆ ವೇಣುಗೋಪಾಲಸ್ವಾಮಿ, ಜಾನಕಲ್ಲಿನ ವೀರಭದ್ರೇಶ್ವರ, ಶಂಕರಲಿಂಗೇಶ್ವರ, ತಾಳ್ಯದ ಆಂಜನೇಯ ದೇವಾಲಯಗಳು ಸುಖನಾಸವನ್ನು ಹೊಂದಿರುವುದು ಗಮನಾರ್ಹವಾಗಿದೆ. ಇವೆಲ್ಲ ಇಟ್ಟಿಗೆ ಮತ್ತು ಗಾರೆಯ ರಚನೆಗಳಾಗಿವೆ.

ಶಿಷ್ಟ ಪ್ರಕಾರದ ರಚನೆಯಾದ ಮತ್ತು ಅಷ್ಟೇನು ಅವಶ್ಯಕವಲ್ಲದ, ಇಲ್ಲವೇ ಅನಿವಾರ್ಯವಲ್ಲದ ಭಾಗವಾದ ಸುಖನಾಸವನ್ನು ಪಾಳೆಯಗಾರರು ಮುಂದುವರೆಸಿಕೊಂಡು ಬಂದಿರುವುದು ಮಹತ್ವದ್ದೆನಿಸುತ್ತದೆ. ವಾಸ್ತುಶಿಲ್ಪ ಸಂಕೀರ್ಣತೆಗಳು ಸಡಿಲಗೊಂಡಾಗ್ಯೂ ಇಂತಹ ಕೆಲವು ಮೂಲ ಅಂಶಗಳು ಉಳಿದು ಬಂದಿರುವುದು ಗಮನಾರ್ಹ.

ಅರ್ಧಮಂಟಪ

ಅರ್ಧಮಂಟಪಗಳು ದೇವಾಲಯದ ಮೂಲ ವಾಸ್ತು ಭಾಗಗಳಲ್ಲ. ಇವು ಕಾಲಕ್ರಮೇಣ ಅವಶ್ಯಕತೆಗನುಗುಣವಾಗಿ ರೂಪುಗೊಂಡ ಭಾಗಗಳಾಗಿವೆ. ಸಾಮಾನ್ಯವಾಗಿ ಇಂತಹವುಗಳು ತೀರಾ ವಿರಳವಾಗಿರುತ್ತವೆ. ಚಿತ್ರದುರ್ಗ ಪಾಳೆಯಗಾರರ ಕಾಲದ ಒಂದೆರೆಡು

ದೇವಾಲಯಗಳಲ್ಲಿ ಇವುಗಳು ಕಂಡುಬರುತ್ತವೆ. ನೀರ್ಥಡಿಯ ರಂಗನಾಥಸ್ವಾಮಿ, ಹುಲ್ಲೂರು ಸಿದ್ದೇಶ್ವರ, ಹಿರಿಯೂರಿನ ತೇರುಮಲ್ಲೇಶ್ವರ ದೇವಾಲಯಗಳಲ್ಲಿ ಅಂತರಾಳದ ಮುಂಭಾಗದಲ್ಲಿ ಈ ಅರ್ಧಮಂಟಪಗಳು ಇವೆ. ಸಾಮಾನ್ಯವಾಗಿ ಇವು ಮೂರು ಅಂಕಣಗಳಲ್ಲಿ ಇರುವುದರಿಂದ ಸಭಾಮಂಟಪದಷ್ಟೇ ಅಗಲವಾಗಿರುತ್ತವೆ. ಮಧ್ಯದ ಅಂಕಣಗಳನ್ನು ಹೊರತುಪಡಿಸಿ ಬದಿಯ ಎರಡು ಅಂಕಣಗಳಲ್ಲಿ ಪರಿವಾರ ದೇವತೆಗಳ, ಇಲ್ಲವೆ ಉತ್ಸವ ಮೂರ್ತಿಗಳನ್ನು ಇರಿಸಲಾಗಿರುತ್ತದೆ. ಇದರಿಂದ ಅವಶ್ಯತೆಗನುಗುಣವಾಗಿ ರೂಪುಗೊಂಡ ಹೆಚ್ಚುವರಿ ಭಾಗವೆಂಬುದು ತಿಳಿಯುತ್ತದೆ. ಕೆಲವೊಮ್ಮೆ ಇವು ಸಭಾಮಂಟಪದ ಮುಂದೆಯು ಇರಬಹುದು. ಉದಾ: ಹೊರಕೆರೆದೇವರಪುರದ ಲಕ್ಷ್ಮೀರಂಗನಾಥಸ್ವಾಮಿ, ಚಿತ್ರದುರ್ಗದ ವೇಣುಗೋಪಾಲಸ್ವಾಮಿ ದೇವಾಲಯಗಳು. ಇಲ್ಲಿಯ ಅರ್ಧಮಂಟಪಗಳು ಮಧ್ಯದಲ್ಲಿ ಪ್ರವೇಶಭಾಗವನ್ನು ಸಹಜವಾಗಿ ಹೊಂದಿದ್ದರೆ, ಬದಿಯ ಎರಡು ಅಂಕಣಗಳಲ್ಲಿ ಎತ್ತರವಾದ ಕಟ್ಟೆಗಳಿದ್ದು, ಅವು ಮುಂಬದಿಯಲ್ಲಿ ತೆರೆದಿರುತ್ತವೆ.

ನವರಂಗ ಅಥವಾ ಸಭಾಮಂಟಪ

ನವರಂಗವು ದೇವಾಲಯಗಳ ಸಭಾಮಂಟಪವಾಗಿರುತ್ತದೆ. ಸಾಮಾನ್ಯವಾಗಿ ಇದು ಒಂಭತ್ತು ಅಂಕಣಗಳನ್ನು ಹೊಂದಿರುವುದು ಸಂಪ್ರದಾಯ. ಆದರೆ ಚಿತ್ರದುರ್ಗ ಪಾಳೆಯಗಾರರ ಕೆಲವು ದೇವಾಲಯಗಳಲ್ಲಿ ಸಭಾಮಂಟಪಗಳು ಆರು ಅಂಕಣಗಳಷ್ಟು ಚಿಕ್ಕದಾಗಿಯೂ, ಹದಿನೈದು ಅಂಕಣಗಳಷ್ಟು ವಿಶಾಲವಾಗಿಯೂ ಇರುತ್ತವೆ. ಹಂಪನೂರು ಮತ್ತು ಕೊಣಚಗಲ್ ರಂಗನಾಥಸ್ವಾಮಿ ದೇವಾಲಯಗಳ ಸಭಾಮಂಟಪಗಳು ಪ್ರತಿಸಾಲಿನಲ್ಲಿ ಮೂರರಂತೆ, ಎರಡು ಸಾಲಿನಲ್ಲಿ ಒಟ್ಟು ಆರು ಅಂಕಣಗಳನ್ನು ಹೊಂದಿವೆ. ಇಲ್ಲಿ ಮಧ್ಯದಲ್ಲಿ ಎರಡು ಮತ್ತು ಪ್ರವೇಶಭಾಗದಲ್ಲಿ ಎರಡರಂತೆ ಒಟ್ಟು ನಾಲ್ಕು ಕಂಬಗಳಿರುತ್ತವೆ. ಮಾರಿಕಣಿವೆಯ ಮಾರಿಕಾಂಭ ದೇವಾಲಯದ ಸಭಾಮಂಟಪವು ತನ್ನ ವಿಶಾಲತೆಯಿಂದ ಗಮನ ಸೆಳೆಯುತ್ತದೆ. ಈ ಸಭಾಂಗಣದಲ್ಲಿ ಪ್ರತಿಸಾಲಿನಲ್ಲಿ ಐದರಂತೆ ಮೂರು ಸಾಲಿನಲ್ಲಿ ಒಟ್ಟು ಹದಿನೈದು ಅಂಕಣಗಳಿವೆ. ಈ ಸಭಾಮಂಟಪದ ಮಧ್ಯದಲ್ಲಿ ಒಟ್ಟು ಹದಿನೈದು ಕಂಬಗಳಿವೆ.

ಆರು, ಒಂಭತ್ತು ಮತ್ತು ಹದಿನೈದು ಅಂಕಣಗಳನ್ನು ಹೊಂದಿರುವ ಈ ಸಭಾಮಂಟಪಗಳು ಸಾಮಾನ್ಯವಾಗಿ ತೆರೆದಿರುತ್ತವೆ. ಹುಲ್ಲೂರಿನ ಆಂಜನೇಯ, ಕುಂದುರ್ಪಿಯ ವೆಂಕಟರಮಣ, ಚಿತ್ರದುರ್ಗದ ಉತ್ಸವಾಂಬೆ ಮತ್ತು ಮಾರಿಕಣಿವೆ ಮಾರಿಕಾಂಭ ದೇವಾಲಯಗಳು ಇದರಂತಿವೆ. ಸಭಾಮಂಟಪಕ್ಕೆ ಅದರ ಎರಡೂ ಬದಿಯಲ್ಲಿ ಉಪಪ್ರವೇಶ ದ್ವಾರಗಳು ಇರುವುದುಂಟು. ಹಿರಿಯೂರಿನ ತೇರುಮಲ್ಲೇಶ್ವರ, ಅಂಬಲಗೆರೆಯ ರಂಗನಾಥಸ್ವಾಮಿ,

ಚಿತ್ರದುರ್ಗದ ವೆಂಕಟರಮಣ, ಹೊಳಲ್ಕೆರೆಯ ವೇಣುಗೋಪಾಲಸ್ವಾಮಿ, ಕೊರಟಗೆರೆ ರಂಗನಾಥ ಸ್ವಾಮಿ, ನೀರ್ಥಡಿಯ ರಂಗನಾಥಸ್ವಾಮಿ ದೇವಾಲಯಗಳಲ್ಲಿ ಇಂತಹ ಉಪದ್ವಾರಗಳು ಇವೆ. ಸಭಾಮಂಟಪದ ಒಳಭಿತ್ತಿಗಳಲ್ಲಿ ಕೈಪಿಡಿಗಳು ಕಂಡುಬರುತ್ತವೆ. ಹಂಪನೂರಿನ ರಂಗನಾಥ ದೇವಾಲಯದ ಸಭಾಮಂಟಪದ ಭಿತ್ತಿಯಲ್ಲಿ ದೀಪಗಳನ್ನಿಡಲು ಅನುಕೂಲವಾಗುವಂತಹ ಹತ್ತು ಪುಟ್ಟ ಮಾಡುಗಳಿವೆ. ಸಭಾಮಂಟಪವು ಒಂಭತ್ತು ಅಂಕಣಗಳಲ್ಲಿ ಇದ್ದಾಗ ಮಾತ್ರ ಮಧ್ಯದ ಛತ್ತಿನಲ್ಲಿ ಭುವನೇಶ್ವರಿಯನ್ನು ರೂಪಿಸಬಹುದು. ಆದರೆ ಆರು ಅಂಕಣಗಳಿರುವ ಸಭಾಂಗಣದಲ್ಲಿ ಮುಂದಿನ ಸಾಲಿನ ಮಧ್ಯದ ಅಂಕಣದಲ್ಲಿ ಭುವನೇಶ್ವರಿಯನ್ನು ಅಳವಡಿಸಿ, ಉಳಿದ ಎಲ್ಲಾ ಅಂಕಣಗಳಲ್ಲಿ ವಿವಿಧ ರೀತಿಯ ಪುಷ್ಪಾಕೃತಿಗಳನ್ನು ಕೆತ್ತಲಾಗಿದೆ. ಹದಿನೈದು ಅಂಕಣಗಳ ಸಭಾಂಗಣದಲ್ಲಿ ಒಂಭತ್ತು ಅಂಕಣಗಳಂತೆ ಮಧ್ಯದ ಅಂಕಣದ ಛತ್ತು ಭುವನೇಶ್ವರಿಯನ್ನು ಹೊಂದಿರುತ್ತದೆ.

ಮಹಾಮಂಟಪ

ಸಾಮಾನ್ಯವಾಗಿ ಸಭಾಮಂಟಪದ ಮುಂಭಾಗದಲ್ಲಿ ಮುಖಮಂಟಪಗಳಿರುತ್ತವೆ. ಆದರೆ ವಿಜಯನಗರದ ಅರಸರು ತಾವು ನಿರ್ಮಿಸಿದ ದೇವಾಲಯಗಳಲ್ಲಿ ಸಭಾಮಂಟಪದ ಮುಂಭಾಗದಲ್ಲಿ ವಿಶಾಲವಾದ ಮಹಾಮಂಟಪವನ್ನು ಅಳವಡಿಸಿದರು. ಅದು ಪ್ರಧಾನ ದೇವಾಲಯದ ಎಲ್ಲಾ ವಾಸ್ತು ಭಾಗಗಳಿಗಿಂತ ಅತ್ಯಂತ ಬೃಹತ್ ಪ್ರಮಾಣದಲ್ಲಿರುತ್ತದೆ. ಇಂತಹ ಮಹಾಮಂಟಪಗಳನ್ನು ಹಂಪಿಯ ವಿರೂಪಾಕ್ಷ, ವಿಜಯವಿಠ್ಠಲ ಮತ್ತಿತರ ದೇವಾಲಯಗಳಲ್ಲಿ ಕಾಣಬಹುದು. ಈ ಪರಂಪರೆಯನ್ನು ಮುಂದುವರೆಸಿದ ಚಿತ್ರದುರ್ಗದ ಪಾಳೆಯಗಾರರು ತಮ್ಮ ದೇವಾಲಯಗಳ ಗಾತ್ರ ಹಾಗು ಅಳತೆಗಳಿಗೆ ಅನುಗುಣವಾಗಿ ಮಹಾಮಂಟಪಗಳನ್ನು ನಿರ್ಮಿಸಿದರು. ಅವು ವಿಜಯನಗರ ದೇವಾಲಯಗಳ ಮಹಾಮಂಟಪ ಗಳಂತೆ ಭವ್ಯವಾಗಿರದಿದ್ದರೂ, ವಾಸ್ತುದೃಷ್ಟಿಯಿಂದ ವಿಶಿಷ್ಟವಾಗಿರುತ್ತವೆ. ಸಾಮಾನ್ಯವಾಗಿ ಇವು ಸುತ್ತಲೂ ಕಕ್ಷಾಸನ ರೀತಿಯ ಕಟ್ಟೆಗಳನ್ನು ಹೊಂದಿದ್ದು, ಅವುಗಳ ಮೇಲೆ ಕಂಬಗಳನ್ನು ಹೊಂದಿರುತ್ತವೆ. ಈ ಕಂಬಗಳ ನಡುವಿನ ಭಾಗದಲ್ಲಿ ಭಿತ್ತಿ ಇರದೇ ಇರುವುದರಿಂದ ಇಡೀ ಮಂಟಪವು ತೆರೆದ ಸ್ವರೂಪದಲ್ಲಿರುತ್ತದೆ. ಈ ಮಹಾಮಂಟಪದ ಕಕ್ಷಾಸನದ ಒಳ ಅಧಿಷ್ಠಾನಗಳ ಭಾಗದಲ್ಲಿ ಅನೇಕ ಉಬ್ಬುಶಿಲ್ಪಗಳಿರುತ್ತವೆ. ಇಂತಹ ಮಹಾಮಂಟಪಗಳನ್ನು ಹಿರಿಯೂರಿನ ತೇರುಮಲ್ಲೇಶ್ವರ, ಅಂಬಲಗೆರೆಯ ರಂಗನಾಥ, ಚಿತ್ರದುರ್ಗದ ಚನ್ನಕೇಶವ, ಹೊರಕೆರೆದೇವರಪುರದ ಲಕ್ಷ್ಮೀರಂಗನಾಥ, ಹೊಳಲ್ಕೆರೆಯ ವೇಣುಗೋಪಾಲಸ್ವಾಮಿ, ಗಿಲಕೇನಹಳ್ಳಿ ರಂಗನಾಥ, ಹುಲ್ಲೂರಿನ ಸಿದ್ದೇಶ್ವರ, ಕೊರಟಗೆರೆ ರಂಗನಾಥ ಮುಂತಾದ ದೇವಾಲಯಗಳಲ್ಲಿ

ಕಾಣಬಹುದು. ಈ ಮಹಾಮಂಟಪಗಳಲ್ಲಿ ಒಂಭತ್ತು ಅಂಕಣಗಳ ಸಣ್ಣಪ್ರಮಾಣದ ಮಹಾ ಮಂಟಪಗಳು ಉದಾ: ಹಿರಿಯೂರಿನ ತೇರುಮಲ್ಲೇಶ್ವರ, ಅಂಬಲಗೆರೆ ರಂಗನಾಥ, ಹುಲ್ಲೂರಿನ ಸಿದ್ದೇಶ್ವರ ದೇವಾಲಯಗಳಲ್ಲಿ, ಹದಿನೈದು, ಹದಿನಾರು ಅಂಕಣಗಳ ಮಧ್ಯಮ ಪ್ರಮಾಣದ ಮಹಾಮಂಟಪಗಳನ್ನು ಗಿಲಕೇನಹಳ್ಳಿ ರಂಗನಾಥ, ಕೊರಟಗೆರೆ ರಂಗನಾಥ, ಕುಂದುರ್ಪಿ ವೀರಭದ್ರಸ್ವಾಮಿ ದೇವಾಲಯಗಳಲ್ಲಿ, ಇಪ್ಪತ್ತೈದು ಅಂಕಣಗಳ ಬೃಹತ್ ಪ್ರಮಾಣದಲ್ಲಿ ಚಿತ್ರದುರ್ಗದ ವೆಂಕಟರಮಣ, ಚನ್ನಕೇಶವ, ಹೊರಕೆರೆದೇವರಪುರದ ಲಕ್ಷ್ಮೀರಂಗನಾಥ, ಹೊಳಲ್ಕೆರೆ ವೇಣುಗೋಪಾಲಸ್ವಾಮಿ ದೇವಾಲಯಗಳಲ್ಲಿ ಕಂಡುಬರುತ್ತವೆ. ಇವುಗಳಲ್ಲಿ ಅಂಬಲಗೆರೆಯ ರಂಗನಾಥ, ಹಿರಿಯೂರಿನ ತೇರುಮಲ್ಲೇಶ್ವರ ಮತ್ತು ಚಿತ್ರದುರ್ಗದ ಚನ್ನಕೇಶವ ದೇವಾಲಯಗಳ ಮಹಾಮಂಟಪಗಳಲ್ಲಿ ಉಪಪ್ರವೇಶದ್ವಾರಗಳಿವೆ. ಇಡೀ ದೇವಾಲಯದ ಪ್ರಮುಖ ವಾಸ್ತು ಭಾಗವಾಗಿರುವ ಮಹಾಮಂಟಪವು ವಿಜಯನಗರದ ವಿಶಿಷ್ಟ ಶೈಲಿಯಾದ ದ್ವಿಕಾಂಡ ಶೈಲಿಯ ಬೃಹತ್ ಕಂಬಗಳನ್ನು ಒಳಗೊಂಡಿರುತ್ತವೆ. ಈ ಕಂಬಗಳು, ಅವುಗಳ ಮೇಲಿನ ಬೋದುಗೆಗಳು, ಮಧ್ಯದ ಭುವನೇಶ್ವರಿ ಎಲ್ಲವೂ ಆಕರ್ಷಕವಾಗಿರುತ್ತವೆ. ಹಂಪಿಯ ವಿರೂಪಾಕ್ಷ ದೇವಾಲಯದ ಮಹಾರಂಗಮಂಟಪದಂತೆ ಹಿರಿಯೂರಿನ ತೇರುಮಲ್ಲೇಶ್ವರ ದೇವಾಲಯದ ಮಹಾಮಂಟಪದ ಛತ್ತಿನಲ್ಲಿ ಆಕರ್ಷಕವಾದ ಚಿತ್ರಕಲೆಯನ್ನು ಕಾಣಬಹುದು. ಬೃಹತ್ ಸಾಮ್ರಾಜ್ಯಶಕ್ತಿಗಳ ವಾಸ್ತುಕಲೆಯನ್ನು ಅನುಸರಿಸಬೇಕಾದ ಅನಿವಾರ್ಯತೆಯ ಸಂದರ್ಭದಲ್ಲಿ ಬೃಹತ್ ನಿರ್ಮಾಣ ಸಾಧ್ಯವಾಗದೇ ಹೋದರೂ, ಚಿತ್ರದುರ್ಗ ಪಾಳೆಯಗಾರರು ಆ ಭವ್ಯತೆಯನ್ನು ಇಂತಹ ಮಂಟಪದ ಮೂಲಕ ಉಳಿಸಿಕೊಂಡಿರುವುದು ವಿಶೇಷವೆನಿಸುತ್ತದೆ.

ಮುಖಮಂಟಪ

ಸಭಾಮಂಟಪ ಇಲ್ಲವೆ ಮಹಾಮಂಟಪಗಳ ಮುಂಭಾಗದಲ್ಲಿ ಮುಖಮಂಟಪವಿರುತ್ತದೆ. ಸಾಮಾನ್ಯವಾಗಿ ಪಾಳೆಯಗಾರರ ಕಾಲದ ದೇವಾಲಯಗಳ ಮುಖಮಂಟಪಗಳು ಸಭಾಮಂಟಪದಷ್ಟೇ ಅಗಲವಾಗಿರುವುದು ವಿಶೇಷವಾಗಿದೆ. ಅಂದರೆ ಇವು ಮೂರು ಅಂಕಣಗಳನ್ನು ಹೊಂದಿ ಮುಂಭಾಗದಲ್ಲಿ ತೆರೆದಿರುತ್ತವೆ. ಇಂತಹ ಮುಖಮಂಟಪಗಳು ಚಿತ್ರದುರ್ಗದ ಚನ್ನಕೇಶವ, ಉತ್ಸವಾಂಬೆ, ಏಕನಾಥೇಶ್ವರಿ, ಗೋಪಾಲಸ್ವಾಮಿ, ಮಾರಿಕಣಿವೆಯ ಮಾರಿಕಾಂಭ, ಜಾನಕಲ್ಲಿನ ವೀರಭದ್ರೇಶ್ವರ ಮುಂತಾದ ದೇವಾಲಯಗಳಲ್ಲಿವೆ. ಹೊರೆಕೆರೆದೇವರಪುರದ ಲಕ್ಷ್ಮೀರಂಗನಾಥ, ಹುಲ್ಲೂರಿನ ಆಂಜನೇಯ, ಜೋಡಿರಂಗಾಪುರದ ರಂಗನಾಥ, ಕುಂದುರ್ಪಿಯ ವೀರಭದ್ರ, ನೀರ್ಥಡಿ ರಂಗನಾಥ ದೇವಾಲಯಗಳು ಮೂರು

ಬದಿಯಲ್ಲೂ ತೆರೆದ ಮುಖಮಂಟಪಗಳನ್ನು ಹೊಂದಿವೆ. ಕೆಲವು ಮುಖಮಂಟಪಗಳ ಎರಡೂ ಬದಿಯ ಕೊನೆಯ ಅಂಕಣಗಳಲ್ಲಿ ಎತ್ತರವಾದ ಜಗತಿ(ಕಟ್ಟೆ)ಗಳು ಇರುತ್ತವೆ. ಇಂತಹವು ಚಿತ್ರದುರ್ಗದ ಉತ್ಸವಾಂಬೆ, ಗೋಪಾಲಸ್ವಾಮಿ ದೇವಾಲಯಗಳಲ್ಲಿವೆ. ಅದೇ ರೀತಿ ಹಿರಿಯೂರಿನ ತೇರುಮಲ್ಲೇಶ್ವರ, ಅಂಬಲಗೆರೆ ರಂಗನಾಥ ದೇವಾಲಯಗಳ ಮುಖಮಂಟಪದ ಅಂಚಿನಲ್ಲಿ ಸುತ್ತಲೂ ಕಕ್ಷಾಸನಗಳಿವೆ. ಇನ್ನೊಂದು ವಿಶಿಷ್ಟ ಅಂಶವೆಂದರೆ ಹೆಚ್ಚಿನ ದೇವಾಲಯಗಳ ಮುಖಮಂಟಪಗಳು ಗರ್ಭಗೃಹ, ಅಂತರಾಳ ಮತ್ತು ಸಭಾಮಂಟಪಗಳ ತಳಮಟ್ಟಕ್ಕಿಂತ ಕೆಳಹಂತದಲ್ಲಿರುವುದು. ಹೀಗಾಗಿ ಸಭಾಮಂಟಪದ ಮುಖಭಾಗದ ಅಧಿಷ್ಠಾನವು ಮುಖಮಂಟಪದಲ್ಲಿ ಗೋಚರಿಸುತ್ತದೆ ಮತ್ತು ಮುಖಮಂಟಪಕ್ಕಿಂತ ಸಭಾಮಂಟಪ ಸ್ವಲ್ಪ ಎತ್ತರದಲ್ಲಿರುವುದರಿಂದ ಅದರ ಪ್ರವೇಶಕ್ಕೆ ಮುಖಮಂಟಪದಲ್ಲಿ ಸೋಪಾನಗಳಿರುತ್ತವೆ. ಈ ಸೋಪಾನಗಳ ಇಕ್ಕೆಲಗಳಲ್ಲಿ ಗಜ, ಸುರುಳಿಯಾಳಿ ಇಲ್ಲವೇ ಗಜಶಾರ್ದೂಲಗಳ ಕೈಪಿಡಿಗಳಿರುತ್ತವೆ. ಇಂತಹ ಮುಖಮಂಟಪಗಳು ಜಾನಕಲ್ಲಿನ ವೆಂಕಟೇಶ್ವರ, ಹಂಪನೂರಿನ ರಂಗನಾಥ, ಗುಂಟನೂರು ಹಾಗು ಹುಲ್ಲೂರಿನ ಆಂಜನೇಯ, ಚಿತ್ರದುರ್ಗದ ಚನ್ನಕೇಶವ, ಗೋಪಾಲಸ್ವಾಮಿ ಮತ್ತು ಉತ್ಸವಾಂಬೆ ದೇವಾಲಯಗಳಲ್ಲಿವೆ. ಹೀಗೆ ಮೂಲದಲ್ಲಿ ಕೇವಲ ಒಂದು ಪ್ರವೇಶಮಂಟಪವಾಗಿದ್ದ ಮುಖಮಂಟಪವು ಪಾಳೆಯಗಾರರ ಕಾಲದಲ್ಲಿ ಒಂದು ವಿಸ್ತೃತ ಭಾಗವಾಗಿ ಬೆಳೆದಿರುವುದು ವಿಧಿತವಾಗುತ್ತದೆ. ಹಾಗೆ ಬೆಳೆಯಲು ಅದರ ಉಪಯೋಗಗಳು ಅಧಿಕವಾಗಿರುವುದು ಕಾರಣವಾಗಿದೆ. ಅದರ ಜಗತಿಗಳು ಮತ್ತು ಮೆಟ್ಟಿಲುಗಳು ಮುಖಮಂಟಪದ ಬಹುಮುಖಿ ಉಪಯೋಗಕ್ಕೆ ನಿದರ್ಶನವಾಗಿವೆ.

ದ್ವಾರಬಂಧ

ದ್ವಾರಬಂಧವು ದೇವಾಲಯಗಳ ಪ್ರಮುಖ ವಾಸ್ತುಭಾಗವಾಗಿದೆ. ಸಾಮಾನ್ಯವಾಗಿ ಗರ್ಭಗೃಹ, ನವರಂಗ, ಮಹಾರಂಗಮಂಟಪ ಮತ್ತು ದ್ವಾರಮಂಟಪಗಳು ದ್ವಾರಬಂಧವನ್ನು ಹೊಂದಿರುತ್ತವೆ. ಚಿತ್ರದುರ್ಗ ಪಾಳೆಯಗಾರರ ಕಾಲದ ದೇವಾಲಯ ಸ್ಮಾರಕಗಳಲ್ಲಿ ವಿವಿಧ ರೀತಿಯ ದ್ವಾರಗಳನ್ನು ಗುರುತಿಸಬಹುದು. ಗಾತ್ರದ ದೃಷ್ಟಿಯಿಂದ ಎರಡು ರೀತಿಯ ದ್ವಾರಗಳಿವೆ. ಮಹಾದ್ವಾರಮಂಟಪಗಳ ದ್ವಾರಗಳು ಇಪ್ಪತ್ತು ಅಡಿ ಎತ್ತರವಿದ್ದು ಬೃಹತ್ ಪ್ರಮಾಣದಲ್ಲಿವೆ. ಎರಡನೆಯ ದ್ವಾರಗಳು ಕೇವಲ ನಾಲ್ಕು-ಆರು ಅಡಿ ಎತ್ತರದಲ್ಲಿವೆ. ಇವು ನವರಂಗ, ಅಂತರಾಳ, ಗರ್ಭಗೃಹಗಳಿಗೆ ಇರುತ್ತವೆ. ಇಲ್ಲಿಯ ದ್ವಾರಗಳು ಚಾಲುಕ್ಯ, ಹೊಯ್ಸಳ ಕಾಲದ ದ್ವಾರಬಂಧಗಳಂತೆ ಆಕರ್ಷಕವಾದ ಕೆತ್ತನೆಗಳಿಂದ ಕೂಡಿರದೆ ಸರಳವಾಗಿವೆ. ಹೊಸ್ತಿಲು, ಬಾಗಿಲ ಪಟ್ಟಿಕೆಗಳು, ಅವುಗಳ ಮೇಲೆ ದ್ವಾರಪಾಲಕರು ಇತರೆ

ಶಿಲ್ಪಗಳು, ಒಂದೆರೆಡು ಶಾಖೆಗಳು ಮತ್ತು ಲಲಾಟಬಿಂಬ ಇಲ್ಲಿಯ ದ್ವಾರಗಳ ಮುಖ್ಯ ಭಾಗಗಳಾಗಿವೆ.

ಬಾಗಿಲ ಶಾಖೆಗಳಲ್ಲಿ ಲತಾಶಾಖೆ, ರತ್ನಶಾಖೆಗಳು ಸಾಮಾನ್ಯವಾಗಿವೆ. ಉದಾ: ಕಾವಾಡಿಗರಹಟ್ಟಿಯ ಶಿವ, ಹಿರಿಯೂರಿನ ವೀರಭದ್ರೇಶ್ವರ, ಕೊಣಚಗಲ್ ರಂಗನಾಥ, ಜಾನಕಲ್ಲಿನ ಶಂಕರಲಿಂಗೇಶ್ವರ, ಅಂಬಲಗೆರೆ ರಂಗನಾಥ ದೇವಾಲಯಗಳು. ದ್ವಾರದ ಇಕ್ಕೆಲಗಳಲ್ಲಿ ಸಾಮಾನ್ಯವಾಗಿ ದ್ವಾರಪಾಲಕರ ಶಿಲ್ಪಗಳಿವೆ. ದೇವಾಲಯದ ಪಂಥಕ್ಕನುಗುಣವಾಗಿ ಶೈವ ಮತ್ತು ವೈಷ್ಣವ ದ್ವಾರಪಾಲಕರುಗಳ ಶಿಲ್ಪಗಳಿರುತ್ತವೆ. ದ್ವಾರಪಾಲಕರ ನಿಂತ ಭಂಗಿಗಳು ವಿಭಿನ್ನವಾಗಿವೆ. ಚಿತ್ರದುರ್ಗದ ಲಕ್ಷ್ಮೀನಾರಾಯಣ, ಹಿರಿಯೂರಿನ ವೀರಭದ್ರೇಶ್ವರ, ಲಕ್ಷ್ಮೀವೆಂಕಟೇಶ್ವರ, ಕಾವಾಡಿಗರಹಟ್ಟಿ ಶಿವಾಲಯ, ಕೊಣಚಗಲ್ ರಂಗನಾಥ ದೇವಾಲಯಗಳ ದ್ವಾರಪಾಲಕರುಗಳು ಸಮಭಂಗಿಯಲ್ಲಿದ್ದು, ಬಲಗಾಲನ್ನು ನೇರವಾಗಿ ಹೂರಿದ್ದರೆ, ಎಡಗಾಲನ್ನು ವಕ್ರವಾಗಿಸಿ ಪಾದವನ್ನು ಎಡಕ್ಕೆ ಹೂರಿ ಹಿಮ್ಮಡಿಯನ್ನು ಮೇಲಕ್ಕೆ ಎತ್ತಿ ಇರಿಸಲಾಗಿದೆ. ಇಲ್ಲಿ ಪರಸ್ಪರ ದ್ವಾರಪಾಲಕರುಗಳ ಕಾಲಿನ ಭಂಗಿಗಳು ವಿರುದ್ಧವಾಗಿರುತ್ತವೆ. ಸಾಮಾನ್ಯವಾಗಿ ಕಿರೀಟಮುಕುಟಧಾರಿಗಳಾದ ಇವರು ಮೈಮೇಲೆ ವಿವಿಧ ಆಭರಣಗಳನ್ನು ಧರಿಸಿರುತ್ತಾರೆ. ಚತುರ್ಭುಜರಾಗಿದ್ದು ಹಿಂದಿನ ಕೈಗಳಲ್ಲಿ ಶಂಖ-ಚಕ್ರಗಳಿದ್ದರೆ, ಮುಂದಿನ ಒಂದು ಕೈ ಸೊಂಟದ ಮೇಲಿರಿಸಿದ್ದು, ಮತ್ತೊಂದು ಕೈಯಲ್ಲಿ ಗದೆ ಇರುತ್ತದೆ. ಉದಾ: ಚಿತ್ರದುರ್ಗದ ಲಕ್ಷ್ಮೀನಾರಾಯಣ, ಹಿರಿಯೂರು ಲಕ್ಷ್ಮೀವೆಂಕಟೇಶ್ವರ, ವೀರಭದ್ರೇಶ್ವರ, ಕೊಣಚಗಲ್ಲಿನ ರಂಗನಾಥ, ಕುಂದುರ್ಪಿ ಕೋದಂಡರಾಮ, ಅಂಬಲಗೆರೆ ರಂಗನಾಥ, ಜಾನಕಲ್ಲಿನ ಶಂಕರಲಿಂಗೇಶ್ವರ, ಕಾವಾಡಿಗರಹಟ್ಟಿ ಶಿವಾಲಯ ದೇವಾಲಯಗಳ ದ್ವಾರಪಾಲಕರ ಎಡಕೈಗಳಲ್ಲಿ ಡಮರು ಮತ್ತು ತ್ರಿಶೂಲಗಳಿವೆ. ಉಳಿದಂತೆ ಮುಂದಿನ ಕೈಗಳು ಎಲ್ಲಾ ದ್ವಾರಪಾಲಕರುಗಳಂತೆ ಇವೆ.

ಅಂಬಲಗೆರೆಯ ರಂಗನಾಥ ಮತ್ತು ಕುಂದುರ್ಪಿಯ ಕೋದಂಡರಾಮ ದೇವಾಲಯಗಳ ಗರ್ಭಗೃಹದ ದ್ವಾರಪಾಲಕರ ಭಂಗಿ ಸ್ವಲ್ಪ ವಿಭಿನ್ನವಾಗಿವೆ. ಇಲ್ಲಿ ಉಭಯದ್ವಾರಪಾಲಕರುಗಳು ತಮ್ಮ ಒಂದು ಕಾಲಿನ ಪಾದವನ್ನು ವಕ್ರವಾಗಿ ನೆಲಕ್ಕೆ ಹೂರುವ ಬದಲು, ಅದನ್ನು ಗದಾದ ಮೇಲೆ ಇರಿಸಿರುವುದು ವಿಶೇಷವೆನಿಸುತ್ತದೆ. ಅಂಬಲಗೆರೆಯ ರಂಗನಾಥ, ಕಾವಾಡಿಗರಹಟ್ಟಿ ಶಿವಾಲಯ, ಕೊಣಚಗಲ್ ರಂಗನಾಥ ದೇವಾಲಯಗಳ ದ್ವಾರಪಾಲಕರ ಹಿಂಬದಿಯಲ್ಲಿ ಪ್ರಭಾವಳಿಯನ್ನು ಕೆತ್ತಲಾಗಿದ್ದು, ಮೇಲೆ ಕೀರ್ತಿಮುಖಗಳಿವೆ. ಜಾಕನಲ್ಲಿನ ಶಂಕರಲಿಂಗೇಶ್ವರ, ಹಿರಿಯೂರಿನ ಲಕ್ಷ್ಮೀವೆಂಕಟೇಶ್ವರ ಮತ್ತು ನೀರ್ಥಡಿಯ ರಂಗನಾಥ ದೇವಾಲಯದ ಶಿಲ್ಪಗಳು

ತುಂಬಾ ಆಕರ್ಷಕ ಹಾಗು ಪ್ರಮಾಣಬದ್ಧವಾಗಿ ಕೆತ್ತಲ್ಪಟ್ಟಿವೆ. ಆದರೂ ಉಳಿದಂತೆ ಶಿಲ್ಪಗಳು ಅಂತಹ ಗಮನಾರ್ಹವೇನಲ್ಲ. ದ್ವಾರಪಾಲಕರಲ್ಲಿ ಇಲ್ಲಿಯ ಮತ್ತೊಂದು ವೈಶಿಷ್ಟ್ಯವೆಂದರೆ ಸ್ತ್ರೀದ್ವಾರಪಾಲಕರಿರುವುದು. ಶಾಕ್ತ ಪರಂಪರೆಯ ದೇವತೆಯಾದ ದೇವಿಯ ದೇವಾಲಯಗಳಿಗ, ಇಲ್ಲವೆ ಗರ್ಭಗೃಹಗಳ ದ್ವಾರಬಾಗಿಲುಗಳ ಮೇಲೆ ಸ್ತ್ರೀ ದ್ವಾರಪಾಲಕರಿರುತ್ತಾರೆ. ಹಿರಿಯೂರಿನ ತೇರುಮಲ್ಲೇಶ್ವರ ದೇವಾಲಯದ ದೇವಿಯ ಗರ್ಭಗುಡಿ, ಮಾರಿಕಣಿವೆಯ ಮಾರಿಕಾಂಭ, ಚಳ್ಳಕೆರೆಯ ಚಳ್ಳಕೆರೆಮ್ಮ ದೇವಾಲಯಗಳ ದ್ವಾರಬಂಧದ ಇಕ್ಕೆಲಗಳಲ್ಲಿ ಸ್ತ್ರೀದ್ವಾರಪಾಲಕರಿದ್ದಾರೆ. ಇವರ ಕೈಗಳಲ್ಲಿ ತ್ರಿಶೂಲ ಮತ್ತು ಡಮರುಗಳಿರುತ್ತವೆ. ಸಾಮಾನ್ಯವಾಗಿ ಪ್ರಾಚೀನ ದೇವಿಯ ದೇವಾಲಯಗಳಲ್ಲಿ ಶೈವ ಪುರುಷ ದ್ವಾರಪಾಲಕರೇ ಕಂಡುಬರುತ್ತಾರಾದರೂ, ಇಲ್ಲಿ ಆ ಪರಂಪರೆಯನ್ನು ಕೈಬಿಟ್ಟು ಪ್ರತ್ಯೇಕವಾಗಿ ಸ್ತ್ರೀದ್ವಾರಪಾಲಕರನ್ನು ರೂಪಿಸಿರುವುದು ಪ್ರಾದೇಶಿಕವಾದ ನಂಬಿಕೆ ಮತ್ತು ಸ್ಥಳೀಯ ರೂಪಾಂತರಗಳನ್ನು ಪ್ರತಿಬಿಂಬಿಸುತ್ತವೆ.

ಇಲ್ಲಿಯ ದೇವಾಲಯಗಳ ಲಲಾಟ ಭಾಗದಲ್ಲಿ ಸಾಮಾನ್ಯವಾಗಿ ಗಜಲಕ್ಷ್ಮಿ, ಗಜಾನನ, ಶಿಲ್ಪಗಳು ಕಂಡುಬರುತ್ತವೆ. ಆದರೆ ಕೆಲವೊಂದು ದೇವಾಲಯಗಳಲ್ಲಿ ವೈವಿಧ್ಯಮಯವಾದ ಶಿಲ್ಪಗಳನ್ನು ಕಾಣಬಹುದು. ನೀರ್ಥಡಿ ರಂಗನಾಥ ದೇವಾಲಯದಲ್ಲಿ ಅಂಬೆಗಾಲ ಕೃಷ್ಣ, ಚಿತ್ರದುರ್ಗ ಬೆಟ್ಟದ ಗೋಪಾಲಸ್ವಾಮಿ ದೇವಾಲಯದಲ್ಲಿ ವಿಷ್ಣು, ಹುಲ್ಲೂರು ಆಂಜನೇಯ ದೇವಾಲಯದಲ್ಲಿ ಬಾಲಕೃಷ್ಣ, ಹೊಳಲ್ಕೆರೆ ವೀರಭದ್ರ, ಕುಂದುರ್ಪಿ ವೀರಭದ್ರ, ಹಿರಿಯೂರಿನ ತೇರುಮಲ್ಲೇಶ್ವರ ದೇವಾಲಯಗಳಲ್ಲಿ ಶಿವಪಾರ್ವತಿ, ಹೊಳಲ್ಕೆರೆ ವೇಣುಗೋಪಾಲಸ್ವಾಮಿ ದೇವಾಲಯದಲ್ಲಿ ಜೋಡಿ ಹಂಸಗಳು ಮತ್ತು ಕಾಳಿಂಗಮರ್ದನ ಕೃಷ್ಣ, ಹೊಸದುರ್ಗದ ವೀರಭದ್ರ ದೇವಾಲಯದಲ್ಲಿ ನಂದಿ, ಹಿರಿಯೂರಿನ ತೇರುಮಲ್ಲೇಶ್ವರ ದೇವಾಲಯದಲ್ಲಿ ಭಕ್ತಮಾರ್ಕಂಡೇಯ, ಲಕ್ಷ್ಮಿವೆಂಕಟೇಶ್ವರ ದೇವಾಲಯದಲ್ಲಿ ಬೆಣ್ಣೆಕೃಷ್ಣನ ಶಿಲ್ಪಗಳಿವೆ. ಅದೇ ರೀತಿ ಚಿತ್ರದುರ್ಗದ ಬೆಟ್ಟದ ವಿನಾಯಕ, ಉತ್ಸವಾಂಬೆ, ಜೋಡಿರಂಗಾಪುರದ ರಂಗನಾಥ, ಇಸಾಮುದ್ರದ ಆಂಜನೇಯ, ಹಂಪನೂರಿನ ರಂಗನಾಥ, ಭೀಮಸಮುದ್ರದ ಭೀಮೇಶ್ವರ, ಚಿತ್ರದುರ್ಗ ನಗರದ ಪೇಟೆಆಂಜನೇಯ ದೇವಾಲಯಗಳ ದ್ವಾರಬಂಧಗಳಲ್ಲಿ ಪುಷ್ಪಾಕೃತಿಗಳು ಇವೆ. ಹೀಗೆ ಶಾಸ್ತ್ರೀಯವಾದ ವಾಸ್ತು ಅಂಶಗಳ ಬದಲಾಗಿ ಪ್ರಾದೇಶಿಕವಾದ ಮತ್ತು ಸ್ಥಳೀಯ ತಿಳುವಳಿಕೆಗನುಗುಣವಾಗಿ ವಾಸ್ತುಕಲೆ ಬೆಳೆದು ಬಂದದ್ದನ್ನು ಇಲ್ಲಿಯ ವೈವಿಧ್ಯಮಯವಾದ ಲಲಾಟಬಿಂಬಗಳ ಶಿಲ್ಪಗಳಿಂದ ತಿಳಿಯಬಹುದಾಗಿದೆ.

ಲಲಾಟದ ಮೇಲಿನ ಉತ್ತಿರಾಂಗ ಭಾಗವು ಸಾಮಾನ್ಯವಾಗಿ ಸರಳವಾಗಿದೆಯಾದರೂ, ಅಲ್ಲಲ್ಲಿ ಅಲಂಕರಣೆಗಳಿವೆ. ಹೊಳಲ್ಕೆರೆಯ ವೇಣುಗೋಪಾಲಸ್ವಾಮಿ ಮತ್ತು ಹಿರಿಯೂರಿನ

ತೇರುಮಲ್ಲೇಶ್ವರ ದೇವಾಲಯಗಳಲ್ಲಿ ಮಕರತೋರಣಗಳು ಆಕರ್ಷಕವಾಗಿವೆ. ಬಾಗಿಲ ಬದಿಯ ಶಾಖೆಗಳಲ್ಲಿರುವ ಲತಾಬಳ್ಳಿ, ಲತಾತೋರಣಗಳು ಹಾಗು ಕುಂಭತೋರಣಗಳು ಸಾಮಾನ್ಯವಾಗಿ ಯಾಳ ಸವಾರನ ಬಾಯಿಂದ ಹೊರಟಂತೆ (ನೀರ್ಥಡಿ ರಂಗನಾಥ) ಸಿಂಹಗಳ ಬಾಯಿಂದ ಹೊರಟಂತೆ(ಚಿತ್ರದುರ್ಗದ ಗೋಪಾಲಸ್ವಾಮಿ) ಇವೆ. ಚಿತ್ರದುರ್ಗದ ಏಕನಾಥೇಶ್ವರಿ ದೇವಾಲಯದ ಬಾಗಿಲ ಸುತ್ತಲೂ ದೀಪದ ಗೂಡುಗಳಿವೆ.

ಮಹಾದ್ವಾರಮಂಟಪಗಳ ದ್ವಾರಗಳು ಎತ್ತರವಾಗಿದ್ದು, ಇವು ಕೆಳಭಾಗದಲ್ಲಿ ದ್ವಾರಪಾಲಕರ ಮತ್ತು ಮೇಲ್ಭಾಗದಲ್ಲಿ ಲತಾಶಾಖೆ, ರತ್ನಶಾಖೆ ಮತ್ತು ವಿವಿಧ ಅಲಂಕೃತ ಆಕೃತಿಗಳ ತೋರಣಗಳನ್ನು ಹೊಂದಿವೆ. ಹೊರಕೆರೆದೇವರಪುರದ ಇಂತಹ ಬಾಗಿಲಲ್ಲಿ ದ್ವಾರಪಾಲಕರ ಬದಲಿಗೆ ಕುಂಭತೋರಣಗಳನ್ನು ಬಿಡಿಸಿರುವುದು ಗಮನಾರ್ಹವಾಗಿದೆ. ಈ ದ್ವಾರಗಳ ಮುಂದೆ ಮತ್ತೊಂದು ದ್ವಾರಪಟ್ಟಿಕೆಗಳನ್ನು ರೂಪಿಸಿರುವುದು ಇಲ್ಲಿಯ ವೈಶಿಷ್ಟ್ಯವಾಗಿದೆ. ಇಲ್ಲಿಯ ಪಟ್ಟಿಕೆಗಳ ಕೆಳಭಾಗದಲ್ಲಿ ಲತಾಬಳ್ಳಿಯನ್ನು ಆಶ್ರಯಿಸಿ ನಿಂತ ಬಾಲಿಕೆಯರ ಉಬ್ಬುಶಿಲ್ಪಗಳಿದ್ದು, ಲತಾಬಳ್ಳಿಯು ಇದೇ ಬಾಗಿಲ ತುಂಬೆಲ್ಲಾ ವ್ಯಾಪಿಸಿರುತ್ತದೆ. ಈ ಬಳ್ಳಿಯ ವೃತ್ತಗಳಲ್ಲಿ ನೃತ್ಯಗಾತಿಯರ ಚಿಕ್ಕಚಿಕ್ಕ ಉಬ್ಬುಶಿಲ್ಪಗಳನ್ನು ಖಂಡರಿಸಲಾಗಿದೆ. ಉದಾ: ಅಂಬಲಗೆರೆಯ ರಂಗನಾಥ, ಹೊರಕೆರೆದೇವರಪುರದ ರಂಗನಾಥ ದೇವಾಲಯಗಳ ಬಾಗಿಲ ಹೊರಪಟ್ಟಿಕೆಯಲ್ಲಿ ಶಿಲಾಬಾಲಿಕೆಯರ ಬದಲಿಗೆ ಮಕರದ ಬಾಯಿಂದ ಹೊರಟ ಲತಾತೋರಣಗಳನ್ನು ಬಿಡಿಸಲಾಗಿದೆ. ಲಲಾಟದಲ್ಲಿ ಗಜಲಕ್ಷ್ಮಿ (ಹೊರಕೆರೆದೇವರಪುರ), ಗಜಾನನ(ಉತ್ಸವಾಂಬೆ) ಬಿಂಬಗಳಿವೆ. ಹೀಗೆ ಚಿತ್ರದುರ್ಗ ಪಾಳೆಯಗಾರರ ಕಾಲದ ದೇವಾಲಯಗಳ ದ್ವಾರಬಂಧಗಳಲ್ಲಿ ಹಿಂದಿನ ಕೆಲವು ಅಂಶಗಳನ್ನು ಉಳಿಸಿಕೊಂಡು, ಹೆಚ್ಚಾಗಿ ಪ್ರಾದೇಶಿಕ ಅಂಶಗಳನ್ನು ಬೆರೆಸಿರುವುದನ್ನು ಗುರುತಿಸಬಹುದು. ದೇವಾಲಯದ ಒಳಗಿರುವ ದ್ವಾರಗಳಿಗಿಂತ ಹೊರಗಿನ ಮಹಾದ್ವಾರಗಳ ದ್ವಾರಗಳು ಹೆಚ್ಚು ಆಕರ್ಷಕವಾಗಿರುವುದು ವಿಶೇಷವಾಗಿದೆ.

ಭುವನೇಶ್ವರಿ ಮತ್ತು ಛತ್ತು

ಚಿತ್ರದುರ್ಗ ಪಾಳೆಯಗಾರರ ದೇವಾಲಯಗಳ ಮುಚ್ಚಿಕೆ ಅಥವಾ ಛತ್ತನ್ನು ಸಾಮಾನ್ಯವಾಗಿ ಮಟ್ಟಸಗೊಳಿಸಿದ ಶಿಲಾಹಲಗೆಗಳಿಂದ ನಿರ್ಮಿಸಲಾಗಿದೆ. ಈ ಛತ್ತುಗಳು ಹೆಚ್ಚಿಗೆ ಸರಳವಾಗಿದ್ದರೂ, ಕೆಲವು ದೇವಾಲಯಗಳಲ್ಲಿ ಭುವನೇಶ್ವರಿ ಅಲಂಕರಣೆಗಳನ್ನು ನೋಡಬಹುದು. ಹೆಚ್ಚಾಗಿ ಪದ್ಮಾಕೃತಿಯ ಭುವನೇಶ್ವರಿಯ ಅಲಂಕರಣೆಗಳಿವೆ. ಗರ್ಭಗೃಹ, ಸಭಾಮಂಟಪ, ಇಲ್ಲವೆ ಮಹಾಮಂಟಪದ ಮಧ್ಯದ ಅಂಕಣದಲ್ಲಿ ಮಾತ್ರ ಭುವನೇಶ್ವರಿಗಳ

ಅಲಂಕರಣೆಗಳಿರುತ್ತವೆ. ಈ ಭುವನೇಶ್ವರಿಯನ್ನು ಎರಡು ರೀತಿಯಲ್ಲಿ ರೂಪಿಸಲಾಗಿದೆ. ಮೊದಲನೆಯದಾಗಿ ಅಂಬಲಗೆರೆಯ ರಂಗನಾಥ, ಹಿರಿಯೂರಿನ ತೇರುಮಲ್ಲೇಶ್ವರ, ಹುಲ್ಲೂರಿನ ಸಿದ್ದೇಶ್ವರ, ಚಿತ್ರದುರ್ಗದ ವೆಂಕಟರಮಣ ದೇವಾಲಯಗಳಲ್ಲಿ ಮಟ್ಟಸವಾದ ಭಾವಣಿಯಿಂದ ಭುವನೇಶ್ವರಿಯನ್ನು ಉಬ್ಬುಶಿಲ್ಪವಾಗಿ ಖಂಡರಿಸಲಾಗಿದೆ. ಮಧ್ಯದಲ್ಲಿ ಮೊಗಚಿಹಾಕಿದ ಮೊಗ್ಗು ಇದ್ದು, ಸುತ್ತಲೂ ಎರಡು ಇಲ್ಲವೆ ಮೂರು ಸಾಲಿನ ಪದ್ಮದಳಗಳು ಇರುತ್ತವೆ. ಕಮಲದ ಮೊಗ್ಗು ಛತ್ತಿನಿಂದ ನೆಲಕ್ಕೆ ಮುಖ ಮಾಡಿರುತ್ತದೆ. ತಾಳ್ಯದ ಆಂಜನೇಯ, ಹುಲ್ಲೂರಿನ ಸಿದ್ದೇಶ್ವರ ದೇವಾಲಯಗಳ ಭುವನೇಶ್ವರಿಗಳು ಎರಡನೆಯ ರೀತಿಯದ್ದಾಗಿವೆ. ಇವು ಸಮತಟ್ಟಾದ ಛತ್ತಿನಿಂದ ಆಳವಾಗಿವೆ. ಹಾಗಾಗಿ ಗುಮ್ಮಟಾಕಾರ (ತಾಳ್ಯದ ಆಂಜನೇಯ), ಚೌಕಾಕಾರ (ಹುಲ್ಲೂರು ಸಿದ್ದೇಶ್ವರ) ದಲ್ಲಿವೆ. ಗುಮ್ಮಟಾಕಾರದ ಭಾವಣಿಯ ಈ ಭುವನೇಶ್ವರಿಯ ಮಧ್ಯದಲ್ಲಿ ಮೊಗಚಿ ಹಾಕಿದ ಇಳಿಬಿದ್ದ ಮೊಗ್ಗು ಇದ್ದರೆ, ಸುತ್ತಲೂ ಪದ್ಮದಳಗಳಿವೆ. ಹೀಗೆ ಇದು ಆಳವಾಗಿರುವುದರಿಂದ ಹೆಚ್ಚು ಆಕರ್ಷಕವಾಗಿ ಕಾಣುತ್ತದೆ. ಚೌಕಾಕಾರದಲ್ಲಿ ಇರುವ ಭುವನೇಶ್ವರಿಯೂ ಕೂಡ ಆಳವಾಗಿರುವುದರಿಂದ ವಿಶೇಷವೆನಿಸುತ್ತದೆ. ಕೆಲವು ಸಲ ಭುವನೇಶ್ವರಿಗಳಲ್ಲಿ ವಿವಿಧ ಶಿಲ್ಪಗಳನ್ನು ಕಾಣಬಹುದು ನೀರ್ಥಡಿಯ ರಂಗನಾಥ ದೇವಾಲಯದಲ್ಲಿ ಗಜಸಂಹಾರ ಶಿವ, ನೀರ್ಥಡಿ ಮತ್ತು ಚಳ್ಳಕೆರೆಯ ಚಳ್ಳಕೆರೆಮ್ಮ ದೇವಾಲಯಗಳಲ್ಲಿ ವಾಹನಸಮೇತ ಅಷ್ಟದಿಕ್ಪಾಲಕರನ್ನು ಕೆತ್ತಲಾಗಿದೆ. ಜೊತೆಗೆ ಭುವನೇಶ್ವರಿಯ ಸುತ್ತಲೂ ಹಂಸ, ಪುಷ್ಪ, ಗಿಳಿಗಳ ಸಾಲುಶಿಲ್ಪಗಳಿರುತ್ತವೆ. ಹಿರಿಯೂರಿನ ತೇರುಮಲ್ಲೇಶ್ವರ ದೇವಾಲಯದ ಭುವನೇಶ್ವರಿಯು ವರ್ಣಚಿತ್ರಗಳಿಂದ ಅಲಂಕೃತವಾಗಿದೆ. ಅಲ್ಲಿ ದೇವಾನುದೇವತೆಗಳ, ಪೌರಾಣಿಕ ಘಟನಾವಳಿಗಳ, ವಿವಿಧ ಪ್ರಾಣಿಪಕ್ಷಿಗಳ, ಲತಾಬಳ್ಳಿ ಮುಂತಾದ ಅಲಂಕರಣೆಗಳು ಕಂಡುಬರುತ್ತವೆ. ಮಧ್ಯದ ಭುವನೇಶ್ವರಿಯ ಪದ್ಮಶಿಲೆಯನ್ನು ಕೂಡ ವರ್ಣದಿಂದ ಅಲಂಕರಿಸಿರುವುದು ಗಮನಾರ್ಹವಾಗಿದೆ. ಹೀಗೆ ಚಿತ್ರದುರ್ಗ ಪಾಳೆಯಗಾರರ ಕಾಲದ ದೇವಾಲಯಗಳಲ್ಲಿಯ ಛತ್ತು ಹಿಂದಿನ ವಾಸ್ತುಶೈಲಿಯ ಅಂಶಗಳನ್ನು ಒಳಗೊಂಡಂತೆ ಹೆಚ್ಚಾಗಿ ರಚಿತವಾಗಿದೆ. ಇಲ್ಲಿ ಹೆಚ್ಚಿನ ಬದಲಾವಣೆಗಳು ಆಗಿರುವುದು ಕಂಡುಬರುವುದಿಲ್ಲ.

ಕಂಬಗಳು ಮತ್ತು ಬೋದಿಗೆಗಳು

ದೇವಾಲಯಗಳಲ್ಲಿ ಛತ್ತುಗಳನ್ನು ಹೊತ್ತು ನಿಂತಿರುವ ಕಂಬಗಳು ಆಧಾರ ಭಾಗಗಳಾದರೂ, ಅವುಗಳನ್ನು ಕಲಾತ್ಮಗೊಳಿಸಿ ಸ್ಮಾರಕಗಳ ಪ್ರಮುಖ ವಾಸ್ತುಭಾಗವನ್ನಾಗಿ ಬಿಂಬಿಸಿರುವ ಸಂಗತಿ ಎಲ್ಲಾ ಪ್ರಾಚೀನ ದೇವಾಲಯಗಳಿಂದ ವೇದ್ಯವಾಗುತ್ತದೆ. ಪ್ರಾರಂಭ

ಕಾಲದಲ್ಲಿ ನೇರ, ಸರಳವಾಗಿದ್ದ ಈ ಕಂಬಗಳು ಕ್ರಮೇಣ ಅತ್ಯಂತ ಕಲಾತ್ಮಕವಾಗಿ ರೂಪಿಸಲ್ಪಟ್ಟವು. ಕಲ್ಯಾಣಚಾಲುಕ್ಯ ಮತ್ತು ಹೊಯ್ಸಳರ ಕಾಲದ ಕಂಬಗಳು ತಮ್ಮ ವಿನ್ಯಾಸ, ಶೈಲಿ ಮತ್ತು ಕಲಾತ್ಮಕ ಅಂಶಗಳಿಂದಾಗಿ ಪ್ರಸಿದ್ಧವಾಗಿವೆ. ವಿಜಯನಗರ ಕಾಲದ ಕಂಬಗಳು ಭವ್ಯತೆ ಮತ್ತು ವೈಭವವನ್ನು ಪ್ರತಿಬಿಂಬಿಸುತ್ತವೆ. ಆ ಪರಂಪರೆಯನ್ನು ಅನುಸರಿಸಿ ವಾಸ್ತು ಸ್ಮಾರಕಗಳನ್ನು ನಿರ್ಮಿಸಿದ ಚಿತ್ರದುರ್ಗ ಪಾಳೆಯಗಾರರು ತಮ್ಮ ಕಟ್ಟಡಗಳಲ್ಲಿ ಹಲವಾರು ರೀತಿಯ ವೈವಿಧ್ಯಮಯ ವಿನ್ಯಾಸದ ಕಂಬಗಳನ್ನು ರೂಪಿಸಿ ದೇವಾಲಯಗಳನ್ನು ಹಾಗು ಕಟ್ಟಡಗಳನ್ನು ಅಲಂಕೃತಗೊಳಿಸಿದ್ದಾರೆ.

ಚಿತ್ರದುರ್ಗ ಪಾಳೆಯಗಾರರ ಕಾಲದ ದೇವಾಲಯಗಳಲ್ಲಿಯ ಕಂಬಗಳನ್ನು ಪ್ರಧಾನವಾಗಿ ಏಕಕಾಂಡ ಮತ್ತು ದ್ವಿಕಾಂಡ ಕಂಬಗಳೆಂದು ಎರಡು ಪ್ರಕಾರಗಳಲ್ಲಿ ವಿಂಗಡಿಸಬಹುದು. ಏಕಕಾಂಡ ಕಂಬಗಳು ಹೆಚ್ಚು ವೈವಿಧ್ಯಮಯವಾಗಿವೆ. ಇವುಗಳಲ್ಲಿ ಹತ್ತು ಪ್ರಕಾರಗಳನ್ನು ಗುರುತಿಸಬಹುದು. ಹೊರಕೆರೆದೇವರಪುರದ ಮುಖಮಂಟಪದಲ್ಲಿರುವ ಹದಿನಾರು ಅಡಿ ಎತ್ತರದ ಬೃಹತ್ ಕಂಬಗಳು ಗಮನ ಸೆಳೆಯುತ್ತವೆ. ಇವು ಕಾಂಡ ಭಾಗದಲ್ಲಿ ಕೆಳಗೆ ಮತ್ತು ತುದಿಯಲ್ಲಿ ಚಚ್ಚೌಕ ಭಾಗಗಳನ್ನು ಹೊಂದಿದ್ದು, ಮಧ್ಯದಲ್ಲಿ ಎಂಟು-ಹದಿನಾರು ಮುಖಗಳ ಲಂಬ ಮತ್ತು ಅಡ್ಡ ಪಟ್ಟಿಕೆಗಳಿವೆ. ಇಡೀ ಕಂಬದಲ್ಲಿ ಈ ಪಟ್ಟಿಕೆಗಳೆ ಪ್ರಧಾನವಾಗಿ ಗೋಚರಿಸುತ್ತವೆ. ಕೆಳಭಾಗದ ಚೌಕಭಾಗ ಎತ್ತರವಾಗಿದ್ದು, ಅಲ್ಲಿ ದೇವತೆಗಳ ಉಬ್ಬುಶಿಲ್ಪಗಳಿವೆ. ಇದೇ ರೀತಿಯ ಕಂಬಗಳು ಚಿತ್ರದುರ್ಗದ ಚನ್ನಕೇಶವ ದೇವಾಲಯದಲ್ಲಿ ಮಧ್ಯಮ ಪ್ರಮಾಣದಲ್ಲಿದ್ದು ಹದಿನಾರು-ಎಂಟು-ಹದಿನಾರು ಸಂಖ್ಯೆಯ ಅಡ್ಡಪಟ್ಟಿಕೆಗಳನ್ನು ಹೊಂದಿವೆ. ಚೌಕಕಾಂಡದಲ್ಲಿ ಕೆಳಗೆ, ಮಧ್ಯೆ ಮತ್ತು ಮೇಲೆ ಮೂರು ಅಸಮ ಚೌಕಭಾಗಗಳನ್ನು ಹೊಂದಿರುವ ಕಂಬಗಳು ಹೆಚ್ಚಿನ ದೇವಾಲಯಗಳಲ್ಲಿದ್ದು, ಈ ಚೌಕಭಾಗಗಳ ನಡುವೆ ಕಿರಿದಾದ ನಾಲ್ಕು ಮುಖಗಳ ಲಂಬಪಟ್ಟಿಕೆಗಳು (ಮಾರಿಕಣಿವೆ ಮಾರಿಕಾಂಭ) ಇಲ್ಲವೆ ಎಂಟು-ಹದಿನಾರು-ಎಂಟರ ಲಂಬಪಟ್ಟಿಕೆಗಳು (ಚಿತ್ರದುರ್ಗದ ದೊಡ್ಡಪೇಟೆ ಆಂಜನೇಯ) ಇರುತ್ತವೆ. ಈ ಕಂಬಗಳು ಮೇಲೇರಿದಂತೆ ಸಪೂರವಾಗುತ್ತವೆ. ಆದರೆ ಅಬ್ಬಿನಹೊಳೆಯ ರಂಗನಾಥ ದೇವಾಲಯದ ಕಂಬಗಳು ಮಾತ್ರ ಕೆಳಗಿನಿಂದ ಮೇಲೆ ಏಕಪ್ರಕಾರದಲ್ಲಿವೆ. ಇದೇ ಪ್ರಕಾರದಲ್ಲಿ ತುಂಬಾ ವಿಶಿಷ್ಟವಾದ ಕಂಬಗಳು ಚಿತ್ರದುರ್ಗದ ಗೋಪಾಲಸ್ವಾಮಿ ದೇವಾಲಯ ಮತ್ತು ಅಂಬಲಗೆರೆಯ ರಂಗನಾಥಸ್ವಾಮಿ ದೇವಾಲಯಗಳಲ್ಲಿವೆ. ಗೋಪಾಲಸ್ವಾಮಿ ದೇವಾಲಯದ ಕಂಬಗಳು ರುಚಕ(ಪೀಠ,ಕಾಂಡಸಹಿತ ಏಕಶಿಲೆ) ಕಂಬಗಳಾಗಿದ್ದು, ಕೆಳಗಿನ ಚೌಕಭಾಗ ಕಂಬದ ಅರ್ಧದಷ್ಟು ಎತ್ತರದಲ್ಲಿದೆ. ಉಳಿದ ಅರ್ಧದಲ್ಲಿ ಸಮನಾಂತರದಲ್ಲಿ

ಎರಡು ಚೌಕಭಾಗಗಳಿವೆ. ಕೆಳಭಾಗದಲ್ಲಿ ನಾಲ್ಕು ಬದಿಗೆ ಕಂಬಗಳನ್ನು ಕೊರೆದು ಮಂಟಪಗಳನ್ನು ಮಾಡಲಾಗಿದೆ. ಈ ಮಂಟಪಗಳ ಒಳಗೆ ಉಬ್ಬುಶಿಲ್ಪಗಳಿವೆ. ಇದೊಂದು ಅಪರೂಪದ ಶೈಲಿಯೆನಿಸುತ್ತದೆ. ಒಂದು ರೀತಿಯಲ್ಲಿ ಈ ಕಂಬಗಳು ಅಷ್ಟಕೋನಾಕಾರದಲ್ಲಿವೆ. ಮೇಲಿನ (ಚೌಕಭಾಗಗಳಲ್ಲಿ ಯಾವುದೇ ಶಿಲ್ಪಗಳಿಲ್ಲದೆ ಇದ್ದರೂ, ಅಧಿಷ್ಠಾನ, ಕಂಬ, ಭಿತ್ತಿ, ಪ್ರಸ್ತರಗಳ ರೀತಿಯ ಅಲಂಕರಣೆಗಳಿಂದ ಅವು ಸೊಗಸಾಗಿ ಕಾಣುತ್ತವೆ. ಇವುಗಳ ಮೇಲೆ ಪುಷ್ಪಬೋದುಗೆಗಳಿವೆ.) ಅಂಬಲಗೆರೆಯ ರಂಗನಾಥ ದೇವಾಲಯದ ಕಂಬಗಳು ಕೂಡ ರುಚಕ ಸ್ತಂಭಗಳಾಗಿದ್ದು, ಇವುಗಳ ನಾಲ್ಕು ಮೂಲೆಗಳಲ್ಲಿ ಕುಂಭಪಂಜರಗಳು, ಅವುಗಳ ಮೇಲೆ ಅರ್ಧಗಂಬಗಳ ಅಲಂಕರಣೆಗಳು, ಮೇಲೆ ತೋರಣಗಳು ಇಡೀ ಕಂಬದುದ್ದಕ್ಕೂ ಚಾಚಿವೆ. ನೇರವಾಗಿ ಗಮನಿಸಿದಾಗ ಈ ಕಂಬದ ಮೂರು ಅಸಮ ಚೌಕಭಾಗಗಳು ಗೋಚರಿಸುವುದಿಲ್ಲ. ಆದರೆ ಬದಿಯಿಂದ ಅವು ವ್ಯಕ್ತವಾಗುತ್ತವೆ. ಈ ಎರಡೂ ರೀತಿಯ ಕಂಬಗಳು ಹಂಪಿಯ ದೇವಾಲಯಗಳ ಕಂಬಗಳಂತಿವೆ. ಇಲ್ಲಿ ಕಂಬದ ಯಾವುದೇ ಭಾಗ ಖಾಲಿಯಿರದೆ ಸಂಪೂರ್ಣ ಅಲಂಕೃತಗೊಂಡು ಕಂಬಗಳು ಶಿಷ್ಟ ಕಲಾಕೃತಿಗಳಾಗಿ ಗೋಚರಿಸುತ್ತವೆ. ಮತ್ತೊಂದು ಶೈಲಿಯ ಕಂಬಗಳು ಅಂಬಲಗೆರೆ ರಂಗನಾಥಸ್ವಾಮಿ ಮತ್ತು ಹೊರಕೆರೆದೇವರಪುರದ ಲಕ್ಷ್ಮೀರಂಗನಾಥಸ್ವಾಮಿ ದೇವಾಲಯಗಳಲ್ಲಿ ಕಂಡುಬರುತ್ತವೆ. ಇವು ಚಾಲುಕ್ಯ ಶೈಲಿಯನ್ನು ಹೋಲುತ್ತವೆ. ಹೊರಕೆರದೇವರಪುರದ ಕಂಬಗಳು ಕೆಳಗೆ ಮತ್ತು ಮಧ್ಯ ಅಸಮ ಚೌಕಭಾಗಗಳನ್ನು ಹೊಂದಿದ್ದು, ದೀರ್ಘವಾಗಿರುವ ಕೆಳಚೌಕಭಾಗಗಳ ನಾಲ್ಕು ಮೂಲೆಗಳ ತುದಿಯನ್ನು ಎಲೆಯಾಕಾರದಲ್ಲಿ ಖಂಡರಿಸಲಾಗಿದೆ. ಮಧ್ಯದ ಚೌಕಭಾಗದ ಮೇಲ್ಭಾಗದಲ್ಲಿ ಚಾಲುಕ್ಯ ಶೈಲಿಯಂತೆ ಕುಂಭ, ಕಳಸ, ಫಲಕಗಳಿರುತ್ತವೆ. ಮಧ್ಯಗ ಚೌಕಭಾಗಗಳಲ್ಲಿ ಪುಷ್ಪಾಕೃತಿಗಳ ಉಬ್ಬುಶಿಲ್ಪಗಳಿದ್ದರೆ, ನೀರ್ಥಡಿಯ ರಂಗನಾಥಸ್ವಾಮಿ ದೇವಾಲಯದ ಮುಖಮಂಟಪದ ಇಂತಹ ಕಂಬಗಳ ಚೌಕ ಭಾಗಗಳ ಮೇಲೆ ಭೈರವ. ವೇಣುಗೋಪಾಲ, ಯತಿ ಮುಂತಾದ ದೇವಾನುದೇವತೆಗಳ ಉಬ್ಬುಶಿಲ್ಪಗಳಿವೆ. ಇದೇ ಶೈಲಿಯಲ್ಲಿರುವ ಅಂಬಲಗೆರೆಯ ರಂಗನಾಥ ದೇವಾಲಯದ ಕಂಬಗಳು ಕಾಂಡದಲ್ಲಿ ಕೆಳಗೆ, ಮಧ್ಯ ಮತ್ತು ಮೇಲೆ ಮೂರು ಅಸಮ ಚೌಕಭಾಗಗಳನ್ನು ಹೊಂದಿ ಅದರ ಮೇಲೆ ಕುಂಭ, ಕಳಸ, ಫಲಕಗಳನ್ನು ಹೊಂದಿವೆ. ಹೀಗಾಗಿ ಈ ಕಂಬಗಳು ಮೊದಲ ರೀತಿಯ ಕಂಬಗಳಿಗಿಂತ ಎತ್ತರವಾಗಿವೆ. ಇದರ ಚೌಕಭಾಗಗಳಲ್ಲೂ ವಿವಿಧ ರೀತಿಯ ಉಬ್ಬುಶಿಲ್ಪಗಳನ್ನು ಕೆತ್ತಲಾಗಿದೆ. ಚಿತ್ರದುರ್ಗದ ರಂಗಯ್ಯನಬಾಗಿಲ ಎಡಬದಿಯ ಗಣಪತಿ ದೇವಾಲಯದ ಬಾಗಿಲ ಇಕ್ಕೆಲಗಳಲ್ಲಿರುವ ಜೋಡಿಕಂಬಗಳು ಈ ಪರಿಸರದಲ್ಲಿಯೇ ತೀರಾ ವಿಭಿನ್ನ ಶೈಲಿಯಲ್ಲಿವೆ. ಇವು ಮಧ್ಯಮ ಗಾತ್ರದಲ್ಲಿದ್ದು, ಮೇಲಿನಿಂದ ಕೆಳಕ್ಕೆ ಲಂಬವಾದ ಪಟ್ಟಿಕೆಗಳನ್ನು

ಹೊಂದಿವೆ. ಈ ಪಟ್ಟಿಕೆಗಳು ಸಮತಟ್ಟಾಗಿರದೆ ಸ್ವಲ್ಪ ಆಳವಾಗಿರುವುದರಿಂದ (ಕೋರ್) ಪ್ರತಿ ಪಟ್ಟಿಕೆಯ ತುದಿಗಳು ಕಂಬದಲ್ಲಿ ಪ್ರಧಾನವಾಗಿ ಗೋಚರಿಸುತ್ತವೆ. ಮೇಲಿನ ಬೋದುಗೆಗಳು ಕೂಡ ವಿಶೇಷವಾಗಿವೆ. ಇವು ರೋಮನ್ ಕಂಬಗಳನ್ನು ಹೋಲುತ್ತವೆ. ಈ ಪರಿಸರದಲ್ಲಿ ಇಂತಹ ಭಿನ್ನ ರೀತಿಯ ಕಂಬಗಳ ಅಳವಡಿಕೆ ಕುತೂಹಲದಾಯಕವಾಗಿದೆ.

ದ್ವಿಕಾಂಡ ಕಂಬಗಳ ಶೈಲಿ ವಿಜಯನಗರದ ವಿಶಿಷ್ಟ ಶೈಲಿಯಾಗಿದೆ. ಇದರಲ್ಲಿ ಪ್ರಧಾನ ಕಾಂಡ ಮತ್ತು ಅದಕ್ಕೆ ಹೊಂದಿಕೊಂಡತೆ ಉಪಕಾಂಡಗಳಿರುತ್ತವೆ. ಇವುಗಳಿಗೆ ಸಂಯೋಗ ಸ್ತಂಭಗಳೆಂತಲೂ ಕರೆಯಬಹುದಾಗಿದೆ. ಸಾಮಾನ್ಯವಾಗಿ ಬೃಹತ್ ಪ್ರಮಾಣದಲ್ಲಿರುವ ಮಹಾರಂಗಮಂಟಪ, ಮಹಾಮಂಟಪ ಇಲ್ಲವೆ ಮುಖಮಂಟಪಗಳ ಮುಂಬದಿಯಲ್ಲಿ ಇಂತಹ ಕಂಬಗಳನ್ನು ಅಳವಡಿಸಲಾಗಿರುತ್ತದೆ. ಈ ಕಂಬಗಳು ಗಾತ್ರ ಮತ್ತು ವಿನ್ಯಾಸದಿಂದ ಗಮನಸೆಳೆಯುತ್ತವೆ. ಹಂಪಿಯ ವಿರೂಪಾಕ್ಷ, ವಿಜಯವಿಠ್ಠಲ, ಬಾಲಕೃಷ್ಣ ಮುಂತಾದ ದೇವಾಲಯಗಳಲ್ಲಿ ಹೆಚ್ಚಾಗಿ ಕಂಡುಬರುವ ಇಂತಹ ಕಂಬಗಳನ್ನು ಚಿತ್ರದುರ್ಗ ಪಾಳೆಯಗಾರರು ಕೂಡ ತಮ್ಮ ಭವ್ಯವಾದ ದೇವಾಲಯಗಳಲ್ಲಿ ಅಳವಡಿಸಿದ್ದಾರೆ. ನೀರ್ಥಡಿಯ ರಂಗನಾಥ, ಹಿರಿಯೂರಿನ ತೇರುಮಲ್ಲೇಶ್ವರ, ಅಂಬಲಗೆರೆಯ ರಂಗನಾಥಸ್ವಾಮಿ, ಚಿತ್ರದುರ್ಗದ ವೆಂಕಟರಮಣ ದೇವಾಲಯಗಳಲ್ಲಿ ಇಂತಹ ಕಂಬಗಳನ್ನು ಕಾಣಬಹುದು. ಇವುಗಳಲ್ಲಿ ನೀರ್ಥಡಿಯ ರಂಗನಾಥ ದೇವಾಲಯದ ಮುಖಮಂಟಪದಲ್ಲಿರುವ ಕಂಬಗಳು ಹೆಚ್ಚು ಆಕರ್ಷಕವಾಗಿವೆ. ಪ್ರಧಾನ ಕಾಂಡದಲ್ಲಿ ಉಳಿದ ಕಂಬಗಳಂತೆ ಕೆಳಗೆ ಮತ್ತು ಮಧ್ಯೆ ಅಸಮ ಚೌಕಭಾಗಗಳನ್ನು ಹೊಂದಿದ್ದು, ಅವುಗಳ ಮೇಲೆ ಉಬ್ಬುಶಿಲ್ಪಗಳಿವೆ. ಕೆಲವು ಕಂಬಗಳ ಮೇಲೆ ಸ್ತಂಭಪಂಜರಗಳು ಇವೆ. ಉಪಕಾಂಡದಲ್ಲಿ ತಮ್ಮ ಹಿಂಗಾಲುಗಳಿಂದ ಆನೆಯನ್ನು ಮೆಟ್ಟಿನಿಂತು, ಮುಂಗಾಲುಗಳನ್ನು ಎತ್ತಿನಿಂತ ಸಿಂಹಶಿಲ್ಪಗಳು, ಉಪಸ್ತಂಭಗಳು ಇವೆ. ಹಿರಿಯೂರಿನ ತೇರುಮಲ್ಲೇಶ್ವರ, ಚಿತ್ರದುರ್ಗದ ವೆಂಕಟರಮಣ, ಅಂಬಲಗೆರೆ ರಂಗನಾಥ ದೇವಾಲಯಗಳಲ್ಲಿ ಇಂತಹ ಕಂಬಗಳ ಸಿಂಹಶಿಲ್ಪಗಳ ಮೇಲೆ ಸವಾರರ ಶಿಲ್ಪಗಳಿವೆ. ಒಟ್ಟಿನಲ್ಲಿ ಈ ಕಂಬಗಳು ಕೌಶಲ್ಯ ಮತ್ತು ನೈಪುಣ್ಯತೆಗೆ ಸಾಕ್ಷಿಯಾಗಿವೆ.

ಈ ಎಲ್ಲಾ ರೀತಿಯ ಕಂಬಗಳ ಮೇಲೆ ಎರಡು ರೀತಿಯ ಬೋದುಗೆಗಳಿವೆ. ಮೊದಲನೆಯ ಬೋದುಗೆಗಳು ಸಾಮಾನ್ಯ ರೀತಿಯದವುಗಳಾಗಿದ್ದರೆ, ಇವುಗಳಲ್ಲಿಯೇ ತಕ್ಕಮಟ್ಟಿಗೆ ಬದಲಾವಣೆಯಿರುವ ಬೇರೆಬೇರೆ ರೀತಿಯ ಬೋದುಗೆಗಳನ್ನು ಗಮನಿಸಬಹುದು. ಬೋದುಗೆಯ ನಾಲ್ಕು ಬದಿಯು ಸಮತಟ್ಟಾಗಿರುವುದು, ಇಲ್ಲವೇ ಸುರಳಿಯಾಕಾರದ ಅಲಂಕರಣೆಯಿರುವುದು ಕುಂದುರ್ಪಿ ವೀರಭದ್ರಸ್ವಾಮಿ, ಚಿತ್ರದುರ್ಗದ ಉತ್ಸವಾಂಬೆ,

ಮಾರಿಕಣಿವೆಯ ಮಾರಿಕಾಂಭ, ಕೊಣಚಗಲ್ ರಂಗನಾಥ, ಹಂಪನೂರು ರಂಗನಾಥ ದೇವಾಲಯಗಳಲ್ಲಿ ಕಂಡುಬರುತ್ತವೆ. ಇನ್ನೊಂದು ರೀತಿಯ ಬೋದುಗೆಗಳು ವಿಜಯನಗರ ಶೈಲಿಯ ಪುಷ್ಪಬೋದುಗೆಗಳು. ಸಾಮಾನ್ಯವಾಗಿ ಕಲಾತ್ಮಕವಾದ ಕಂಬಗಳ ಮೇಲೆ ಇಂತಹ ಬೋದುಗೆಗಳು ಕಂಡುಬರುತ್ತವೆ. ಇಲ್ಲಿ ಬೋದುಗೆಯ ನಾಲ್ಕು ದಿಕ್ಕಿನಲ್ಲಿ ಪುಷ್ಪದ ಮೊಗ್ಗಿನ ಅಲಂಕರಣೆಗಳಿರುತ್ತವೆ. ಹುಲ್ಲೂರು ಸಿದ್ದೇಶ್ವರ, ಚಿತ್ರದುರ್ಗದ ಗೋಪಾಲಸ್ವಾಮಿ, ಹೊರಕೆರೆದೇವರಪುರದ ರಂಗನಾಥ, ಕುಂದುರ್ಪಿಯ ವೀರಭದ್ರ ದೇವಾಲಯಗಳಲ್ಲಿನ ಬೋದುಗೆಗಳ ಮೊಗ್ಗುಗಳು ಸ್ವಲ್ಪ ಆಳವಾಗಿವೆ. ಚಿತ್ರಹಳ್ಳಿ ಆಂಜನೇಯ, ಚಿತ್ರದುರ್ಗದ ವೆಂಕಟರಮಣ, ನೀರ್ಥಡಿಯ ರಂಗನಾಥ ದೇವಾಲಯಗಳಲ್ಲಿ ಲಘುವಾಗಿವೆ. ಸಾಮಾನ್ಯವಾಗಿ ವಿಜಯನಗರ ಶೈಲಿಯನ್ನು ಹೆಚ್ಚಾಗಿ ಪ್ರತಿಬಿಂಬಿಸುವ ಕಂಬಗಳ ಮೇಲೆ ಇವು ಪರಿಪೂರ್ಣ ರೀತಿಯಲ್ಲಿ ಕಂಡುಬರುತ್ತವೆ. ಆದರೆ ಈ ಕಂಬಗಳು ಮತ್ತು ಬೋದುಗೆಗಳು ತೀರ ಪ್ರಾದೇಶಿಕ ರೂಪವನ್ನು ಪಡೆದುಕೊಂಡ ಮಾದರಿಗಳನ್ನು ಚಿತ್ರಹಳ್ಳಿ ಆಂಜನೇಯಸ್ವಾಮಿ ದೇವಾಲಯದಲ್ಲಿ ಗಮನಿಸಬಹುದು.

ಸೋಪಾನ

ವಿಜಯನಗರದ ದೇವಾಲಯಗಳು ಮತ್ತು ಅರಮನೆಗಳ ಪ್ರಮುಖ ವಾಸ್ತುಭಾಗವಾಗಿ ಸೋಪಾನಗಳು ಕಂಡುಬರುತ್ತವೆ. ಸಾಮಾನ್ಯವಾಗಿ ಇವುಗಳನ್ನು ದೇವಾಲಯಗಳ ಇಲ್ಲವೆ ಕಟ್ಟಡಗಳ ಮುಖಮಂಟಪ, ಸಭಾಮಂಟಪಗಳ ಉಪದ್ವಾರಗಳ ಮುಂಭಾಗದಲ್ಲಿ ನಿರ್ಮಿಸಲಾಗಿರುತ್ತದೆ. ಎತ್ತರವಾಗಿರುವ ದೇವಾಲಯಗಳ ಪ್ರವೇಶಕ್ಕೆ ಈ ಸೋಪಾನಗಳು ಅವಶ್ಯಕ. ಇವುಗಳನ್ನು ಕೂಡ ಆಕರ್ಷಕವಾಗಿ ನಿರ್ಮಿಸಿ ಒಂದು ವಾಸ್ತುಭಾಗವನ್ನಾಗಿ ರೂಪಿಸಿರುವುದನ್ನು ವಿಜಯನಗರದ ಅನೇಕ ಕಟ್ಟಡಗಳಲ್ಲಿ ಕಾಣಬಹುದಾಗಿದೆ. ಸೋಪಾನಗಳ ಎರಡೂ ಬದಿಯಲ್ಲಿ ಸುರುಳಿಯಾಳಿಗಳ, ಆನೆಗಳ, ಸಿಂಹಗಳ, ಯಾಳಿಗಳ ಕೈಪಿಡಿಗಳನ್ನು ಕೆತ್ತಿ ಅಲಂಕರಿಸಲಾಗಿರುತ್ತದೆ. ಚಿತ್ರದುರ್ಗದ ಪಾಳೆಯಗಾರರ ಕಾಲದ ಹಲವು ದೇವಾಲಯಗಳಲ್ಲೂ ಕೂಡ ಸೋಪಾನಗಳನ್ನು ನಿರ್ಮಿಸಲಾಗಿದೆ. ಜಾನಕಲ್ಲು ಶಂಕರಲಿಂಗೇಶ್ವರ, ಕೊರಟಗೆರೆ ರಂಗನಾಥ, ಹೊರಕೆರೆದೇವರಪುರದ ರಂಗನಾಥ, ಕಡ್ಲೆಗುದ್ದು ಆಂಜನೇಯ ದೇವಾಲಯಗಳ ಸೋಪಾನಗಳು ಬದಿಯಲ್ಲಿ ಕೈಪಿಡಿಗಳನ್ನು ಹೊಂದಿರುವುದಿಲ್ಲ. ಆದರೆ ಹುಲ್ಲೂರಿನ ಆಂಜನೇಯ, ಚಿತ್ರದುರ್ಗದ ಏಕನಾಥೇಶ್ವರಿ, ಮಾರಿಕಣಿವೆಯ ಮಾರಿಕಾಂಭ ದೇವಾಲಯಗಳ ಸೋಪಾನಗಳಲ್ಲಿ ಸುರುಳಿಯಾಳಿಗಳ ಕೈಪಿಡಿಗಳಿವೆ. ತಾಳ್ಯದ ಆಂಜನೇಯಸ್ವಾಮಿ ದೇವಾಲಯದ ಸುರುಳಿಯಾಳಿ ಕುಂಭದಿಂದ ಹೊರಟಿದ್ದು ಊರ್ಧ್ವಮುಖವಾಗಿ ಸುತ್ತಿದೆ. ಈ ಸುರುಳಿ

ಹೆಚ್ಚು ಆಳವಾಗಿರುವುದಿಲ್ಲ. ಹೊಳಲ್ಕೆರೆ ವೀರಭದ್ರ ದೇವಾಲಯದಲ್ಲಿ ಗಜಮುಖದ ಕೈಪಿಡಿಯಿದ್ದರೆ, ಚಿತ್ರದುರ್ಗದ ದೊಡ್ಡಪೇಟೆ ಆಂಜನೇಯ ದೇವಾಲಯದ ಮುಂದಿನ ಲಕ್ಷ್ಮಿನಾರಾಯಣ, ಕುಂದುರ್ಪಿಯ ಕೋದಂಡರಾಮ ದೇವಾಲಯಗಳಲ್ಲಿ ಪೂರ್ಣಪ್ರಮಾಣದ ಆನೆಗಳ ಕೈಪಿಡಿಗಳಿವೆ. ದೊಡ್ಡಪೇಟೆ ಆಂಜನೇಯ ದೇವಾಲಯ ಹಾಗು ಚನ್ನಕೇಶವಸ್ವಾಮಿ ದೇವಾಲಯಗಳ ಸೋಪಾನಗಳಲ್ಲಿ ಸಿಂಹಯಾಳಿಗಳ ಕೈಪಿಡಿಗಳಿವೆ. ಇದರಲ್ಲಿ ಚನ್ನಕೇಶವಸ್ವಾಮಿ ದೇವಾಲಯದ ಸಿಂಹಯಾಳಿಯ ಕೈಪಿಡಿ ಅತ್ಯಂತ ಆಕರ್ಷಕವಾಗಿ ಕೆತ್ತಲ್ಪಟ್ಟಿದ್ದು, ಹಂಪಿಯ ದೇವಾಲಯಗಳ ಸೋಪಾನಗಳನ್ನು ಹೋಲುತ್ತದೆ. ಚಿತ್ರದುರ್ಗದ ವೆಂಕಟರಮಣ ದೇವಾಲಯದ ಸಭಾಮಂಟಪದ ಉಪಪ್ರವೇಶದ್ವಾರದಲ್ಲಿ ಹಣ್ಣನ್ನು ತಿನ್ನುತ್ತಿರುವ ಮಂಗಗಳ ಕೈಪಿಡಿಗಳಿವೆ.

ಬಲಿಪೀಠ, ಧ್ವಜಸ್ತಂಭ, ಗರುಡಸ್ತಂಭ, ದೀಪಸ್ತಂಭ, ಉಯ್ಯಾಲೆಸ್ತಂಭಗಳು

ದೇವಾಲಯಗಳ ವಿಕಾಸಕ್ರಮದಲ್ಲಿ ಮತ್ತು ವಿಸ್ತೃತವಾದ ಆರಾಧನಾ ಪದ್ಧತಿಗಳಿಗನುಗುಣವಾಗಿ ಅನೇಕ ಉಪವಾಸ್ತುಭಾಗಗಳು ದೇವಾಲಯದ ಸಂಕೀರ್ಣಕ್ಕೆ ಸೇರ್ಪಡೆಗೊಂಡವು. ಅಂತಹವುಗಳಲ್ಲಿ ಬಲಿಪೀಠ, ಧ್ವಜಸ್ತಂಭ, ದೀಪಸ್ತಂಭ ಮತ್ತು ಗರುಡ ಸ್ತಂಭಗಳು ಹಾಗು ಉಯ್ಯಾಲೆಸ್ತಂಭಗಳು ಮುಖ್ಯವಾಗಿವೆ. ವಿಜಯನಗರ ರೀತಿಯ ವಿಸ್ತೃತವಾದ ದೇವಾಲಯಗಳಲ್ಲಿ ಮಾತ್ರ ಈ ಎಲ್ಲಾ ವಾಸ್ತುಭಾಗಗಳಿರುತ್ತವೆ. ಆದರೆ ಸಣ್ಣಪುಟ್ಟ ದೇವಾಲಯಗಳಲ್ಲಿ ಉಳಿದಭಾಗಗಳಿಗಿಂತ ದೀಪಸ್ತಂಭಗಳು ಮಾತ್ರ ಹೆಚ್ಚಾಗಿ ಕಂಡುಬರುತ್ತವೆ. ಚಿತ್ರದುರ್ಗ ಪಾಳೆಯಗಾರರ ಕೆಲವು ದೇವಾಲಯಗಳಲ್ಲಿ ಇಂತಹ ಉಪವಾಸ್ತು ನಿರ್ಮಿತಿಗಳು ಇವೆ. ಅವುಗಳಲ್ಲಿ ತೀರಾ ವಿರಳವಾಗಿ ಬಲಿಪೀಠಗಳು ಹೊರಕೆರದೇವರಪುರದ ರಂಗನಾಥ, ಚಿತ್ರದುರ್ಗದ ವೆಂಕಟರಮಣ, ಬೆಟ್ಟದ ಮೇಲಿನ ಗೋಪಾಲಸ್ವಾಮಿ, ಕುಂದುರ್ಪಿ ವೆಂಕಟರಮಣ, ನೀರ್ಥಡಿ ರಂಗನಾಥ ದೇವಾಲಯಗಳಲ್ಲಿವೆ. ಇವು ಎರಡರಿಂದ ಮೂರು ಅಡಿ ಎತ್ತರದ ಜಗತಿಗಳಾಗಿದ್ದು, ಸುತ್ತಲು ಅಧಿಷ್ಠಾನದ ಅಲಂಕರಣೆಯಿದೆ. ತುದಿಯಲ್ಲಿ ವೃತ್ತಾಕಾರದ ರಚನೆಯಿರುತ್ತದೆ.

ಧ್ವಜಸ್ತಂಭಗಳು ಕೂಡ ತೀರ ವಿರಳವಾಗಿವೆ. ಹೊರಕೆರೆದೇವರಪುರದ ರಂಗನಾಥ ದೇವಾಲಯದಲ್ಲಿ ಮರದ ಧ್ವಜಸ್ತಂಭವಿದ್ದು, ಅದಕ್ಕೆ ಲೋಹದ ತಗಡನ್ನು ಹೊಂದಿಸಲಾಗಿದೆ. ಇದರ ಧ್ವಜವೂ ಕೂಡ ಲೋಹದ ತಗಡಿನಲ್ಲಿ ಮಾಡಲಾಗಿದೆ. ಈ ಧ್ವಜದಲ್ಲಿ ಗುರುಡನ ಉಬ್ಬುಶಿಲ್ಪವಿದೆ. ಚಿತ್ರದುರ್ಗದ ವೆಂಕಟರಮಣ ದೇವಾಲಯದಲ್ಲೂ ಧ್ವಜಸ್ತಂಭವಿದೆ. ಗರುಡಸ್ತಂಭಗಳು ಕೂಡ ಹೆಚ್ಚಾಗಿ ಕಂಡುಬರುತ್ತವೆ. ಹೊರಕೆರೆದೇವರಪುರದ ರಂಗನಾಥ, ಅಬ್ಬಿನಹೊಳೆಯ ರಂಗನಾಥ, ಕೊಣಚಗಲ್ ರಂಗನಾಥ, ಅಂಬಲಗೆರೆ ರಂಗನಾಥ

ದೇವಾಲಯಗಳಲ್ಲಿ ಗರುಡಸ್ತಂಭಗಳಿದ್ದು, ಇಪ್ಪತ್ತರಿಂದ-ಐವತ್ತು ಅಡಿ ಎತ್ತರವಾಗಿವೆ. ಏಕಶಿಲಾಸ್ತಂಭಗಳಾಗಿರುವ ಇವುಗಳ ನಿರ್ಮಿತಿ ಮತ್ತು ಪ್ರತಿಷ್ಠಾಪನೆ ಅಚ್ಚರಿಯ ಕಾರ್ಯವಾಗಿದೆ. ಸಾಮಾನ್ಯವಾಗಿ ಮೂರು ಅಡಿ ಎತ್ತರದ ಕಟ್ಟೆಯ ಮಧ್ಯದಲ್ಲಿ ಇವುಗಳನ್ನು ಪ್ರತಿಷ್ಠಾಪಿಸಲಾಗಿದೆ. ಇವು ಕೆಳಗೆ ಮತ್ತು ಮಧ್ಯೆ ಅಸಮ ಚೌಕಭಾಗಗಳನ್ನು ಹೊಂದಿದ್ದು, ಮಧ್ಯದಲ್ಲಿ ಹದಿನಾರು ಮುಖಗಳ ಲಂಬಪಟ್ಟಿಕೆಗಳನ್ನು ಹೊಂದಿರುತ್ತವೆ. (ಅಂಬಲಗೆರೆ, ಕೊಣಚಗಲ್, ಹೊರಕೆರೆದೇವರಪುರ).

ಹೊರಕೆರೆದೇವರಪುರದ ಕಂಬದ ಮೇಲೆ ತೆರೆದ ಮಂಟಪವಿದ್ದು, ಅದರ ಒಳಗಡೆ ಗುರುಡನ ಶಿಲ್ಪವಿದೆ. ಕೊಣಚಗಲ್ಲಿನಲ್ಲಿ ಒಂದೇ ಕಟ್ಟೆಯ ಮೇಲೆ ದೀಪಸ್ತಂಭ ಮತ್ತು ಗರುಡಸ್ತಂಭಗಳಿದ್ದು, ಗರುಡಸ್ತಂಭದ ತುದಿಯಲ್ಲಿ ಮುಚ್ಚಿದ ಮಂಟಪದ ಒಳಗೆ ಗರುಡನಶಿಲ್ಪವಿದೆ. ಅಂಬಲಗೆರೆಯಲ್ಲಿ ಮಾತ್ರ ಕಂಬದ ತುದಿಯಲ್ಲಿ ಯಾವುದೇ ಮಂಟಪವಿರದೆ, ಕೇವಲ ಗರುಡನ ಪ್ರತಿಮೆಯನ್ನು ಕೂರಿಸಲಾಗಿದೆ. ಇದೇ ರೀತಿಯಲ್ಲಿ ಹಿರಿಯೂರಿನ ತೇರುಮಲ್ಲೇಶ್ವರ ದೇವಾಲಯದ ಎದುರಿಗಿರುವ ಬೃಹತ್ ಕಂಬದ ತುದಿಯಲ್ಲಿ ಮಂಟಪವಿದ್ದು, ಆ ಮಂಟಪದ ಒಳಗೆ ನಂದಿಯ ಶಿಲ್ಪವಿದೆ. ಹೀಗಾಗಿ ಇದು ನಂದಿಸ್ತಂಭ. ಹಾಗೆಯೇ ಹೊರಕೆರೆದೇವರಪುರದ ರಂಗನಾಥ ಮತ್ತು ಚಿತ್ರದುರ್ಗದ ವೆಂಕಟರಮಣ, ನೀರ್ಥಡಿ ರಂಗನಾಥ ದೇವಾಲಯಗಳಲ್ಲಿ ಗರುಡಮಂಟಪಗಳನ್ನು ಕಾಣಬಹುದು.

ಇಲ್ಲಿಯ ದೇವಾಲಯಗಳ ಮತ್ತೊಂದು ಗಮನಾರ್ಹ ವಾಸ್ತುಭಾಗಗಳೆಂದರೆ ದೀಪಸ್ತಂಭಗಳು. ಇವು ಕೂಡ ಬೃಹತ್ ಪ್ರಮಾಣದಿಂದಾಗಿ ಗಮನಸೆಳೆಯುತ್ತವೆ. ಒಂದೆರೆಡು ದೇವಾಲಯಗಳನ್ನು ಹೊರತುಪಡಿಸಿದರೆ ಈ ದೀಪಸ್ತಂಭಗಳನ್ನು ಎರಡು ನೆಲೆಗಳಲ್ಲಿ ಸ್ಥಾಪಿಸಲಾಗಿರುತ್ತದೆ. ಮೊದಲನೆಯದಾಗಿ ದೇವಾಲಯದ ಮುಂಭಾಗದಲ್ಲಿ. ಇಂತಹ ಕಂಬಗಳು ನೀರ್ಥಡಿ, ಹಿರಿಯೂರು ಹಾಗು ಕೊಣಚಗಲ್‌ಗಳಲ್ಲಿ ಕಂಡುಬರುತ್ತವೆ. ಇವು ಮಧ್ಯಮ ಪ್ರಮಾಣದಲ್ಲಿವೆ. ನೀರ್ಥಡಿಯ ಸ್ತಂಭ ಕೆಳಗೆ ಶಿಲ್ಪಗಳನ್ನು, ತುದಿಯಲ್ಲಿ ದೀಪದ ಮಾಡುಗಳನ್ನು ಮತ್ತು ದೊಡ್ಡ ಪ್ರಣತಿಯನ್ನು ಹೊಂದಿ ವಿಶಿಷ್ಟವೆನಿಸುತ್ತವೆ. ಚಿತ್ರದುರ್ಗದ ಉತ್ಸವಾಂಬೆ, ಚನ್ನಕೇಶವ, ಬೆಟ್ಟದ ಏಕನಾಥೇಶ್ವರಿ, ಹುಲ್ಲೂರಿನ ಆಂಜನೇಯ, ಜಾನಕಲ್ಲಿನ ಶಂಕರಲಿಂಗೇಶ್ವರ, ತಾಳ್ಯದ ಆಂಜನೇಯ, ನೀರ್ಥಡಿಯ ರಂಗನಾಥಸ್ವಾಮಿ ದೇವಾಲಯಗಳಲ್ಲಿ ಎರಡನೆಯ ಕಂಬಗಳು ದೇವಾಲಯದ ಪ್ರಾಕಾರದ ಹೊರಭಾಗದಲ್ಲಿವೆ. ಇವೆಲ್ಲ ಬೃಹತ್ ಪ್ರಮಾಣದಲ್ಲಿವೆ. ಸುಮಾರು ಐವತ್ತು ಅಡಿಗಳಷ್ಟು ಎತ್ತರವಾಗಿವೆ. ಪುಟ್ಟ ವೇದಿಕೆಯ ಅಧಿಷ್ಠಾನಗಳ ಮಧ್ಯದಲ್ಲಿ ಈ ಕಂಬಗಳನ್ನು ನಿಲ್ಲಿಸಲಾಗಿರುತ್ತದೆ. ಇವು ಕೆಳಗೆ ಮತ್ತು ಮೇಲೆ

ಅಸಮ ಚೌಕಭಾಗಗಳನ್ನು, ಮಧ್ಯದಲ್ಲಿ ಎಂಟು-ಹತ್ತು ಮುಖಗಳ ಲಂಬಪಟ್ಟಿಕೆಗಳನ್ನು ಹೊಂದಿರುತ್ತವೆ. ತುದಿಯಲ್ಲಿ ಕುಂಭಗಳು, ಅವುಗಳ ಮೇಲೆ ಫಲಕಗಳಿರುತ್ತವೆ. ಈ ಫಲಕಗಳ ಮೇಲೆ ಲೋಹದ ದೀಪಗಳನ್ನು ಅಳವಡಿಸಲಾಗಿರುತ್ತದೆ. ತಾಳ್ಯದ ಆಂಜನೇಯ, ಚಿತ್ರದುರ್ಗದ ಏಕನಾಥೇಶ್ವರಿ, ಚನ್ನಕೇಶವ, ಉತ್ಸವಾಂಬೆ, ಜಾನಕಲ್ಲಿನ ಶಂಕರಲಿಂಗೇಶ್ವರ ದೇವಾಲಯಗಳ ಕಂಬಗಳ ಕೆಳಭಾಗದಲ್ಲಿ ಗರ್ಭಗೃಹಕ್ಕೆ ಎದುರಾಗಿ ಪ್ರಾಯಶಃ ದೇವಾಲಯದ ನಿರ್ಮಾತೃಗಳಾದ ಅಂಜಲಿಮುದ್ರೆಯಲ್ಲಿರುವ ರಾಜರಾಣಿಯರ ಉಬ್ಬುಶಿಲ್ಪಗಳಿವೆ. ಕೆಲವು ಕಡೆ ಗರುಡನ ಶಿಲ್ಪಗಳಿವೆ.

ಉಯ್ಯಾಲೆ ಕಂಬ

ಚಿತ್ರದುರ್ಗ ಪಾಳೆಯಗಾರರ ದೇವಾಲಯಗಳ ಮತ್ತೊಂದು ವಿಶಿಷ್ಟ ವಾಸ್ತು ನಿರ್ಮಿತಿಯೆಂದರೆ ಉಯ್ಯಾಲೆ ಕಂಬಗಳು. ಸಾಮಾನ್ಯವಾಗಿ ಇವು ದೇವಾಲಯದ ಹೊರಭಾಗದಲ್ಲಿ ದೇವಾಲಯದಿಂದ ಅನತಿ ದೂರದಲ್ಲಿರುತ್ತವೆ. ಬೃಹದಾಕಾರದ ಏಕಶಿಲೆಯ ಎರಡು ಕಂಬಗಳನ್ನು ಪರಸ್ಪರ ಸುಮಾರು ಐದು ಮೀಟರ್ ಸಮಾನಾಂತರದಲ್ಲಿ ನಿಲ್ಲಿಸಲಾಗಿರುತ್ತದೆ. ಈ ಎರಡೂ ಕಂಬಗಳ ತುದಿಯಲ್ಲಿ ಒಂದರ ಮೇಲೊಂದರಂತೆ ಇರುವ ಎರಡು ಅಡ್ಡ ತೊಲೆಗಳಿಂದ ಸೇರಿಸಲಾಗಿರುತ್ತದೆ. ಈ ಅಡ್ಡ ತೊಲೆಗಳ ನಡುವೆ ಸ್ವಲ್ಪ ಅಂತರವಿರುತ್ತದೆ. ಮೇಲಿನ ಅಡ್ಡ ತೊಲೆಯ ಮೇಲೆ ವಿವಿಧ ರೀತಿಯ ಅಲಂಕರಣೆಗಳಿರುತ್ತವೆ. ಹುಲ್ಲೂರು ಸಿದ್ದೇಶ್ವರ ದೇವಾಲಯದ ಕಂಬದ ಮೇಲ್ಭಾಗದಲ್ಲಿ ಮಧ್ಯದಲ್ಲಿ ಶಾಲಾಶಿಖರದ ಪುಟ್ಟ ಮಂಟಪವಿದ್ದರೆ, ಎರಡೂ ತುದಿಯಲ್ಲಿ ಸ್ತೂಪಿಸಹಿತ ಕಳಸದ ಮಾದರಿಗಳಿವೆ. ಚಿತ್ರದುರ್ಗದ ಏಕನಾಥೇಶ್ವರಿ ಕಂಬದ ತುದಿಯಲ್ಲಿ ಮೂರು ಕಳಸಗಳಿವೆ. ಉತ್ಸವಾಂಬೆ ದೇವಾಲಯದ ಕಂಬದ ಮೇಲೆ ಮೂರು ಕಳಸಗಳಿದ್ದು, ಮಧ್ಯದಲ್ಲಿ ಕಂಗೂರಾಕೃತಿಗಳ ಅಲಂಕರಣೆಗಳಿವೆ. ಎರಡೂ ಕಂಬಗಳಿಗೆ ಹೊಂದಿಕೊಂಡಂತೆ ಕೆಳಭಾಗದಲ್ಲಿ ಕಟ್ಟೆಯಿರುತ್ತದೆ. ಇವುಗಳ ಮುಖಭಾಗದಲ್ಲಿ ಎರಡೂ ಬದಿಗೆ ಆನೆಗಳ (ಹುಲ್ಲೂರು, ಗಿಲಕೇನಹಳ್ಳಿ), ಸುರುಳಿಯಾಳಿಗಳ (ಏಕನಾಥೇಶ್ವರಿ) ಶಿಲ್ಪಗಳಿವೆ. ಮೇಲಿನ ಅಡ್ಡತೊಲೆಯಲ್ಲಿ ಮರದ ರಾಟೆಯನ್ನು ಅಳವಡಿಸಲಾಗಿರುತ್ತದೆ. ವಿಶೇಷ ಸಂದರ್ಭಗಳಲ್ಲಿ ದೇವರ ಉತ್ಸವಮೂರ್ತಿಯ ಉಯ್ಯಾಲೆಗಾಗಿ ಈ ಕಂಬಗಳನ್ನು ಪ್ರತಿಷ್ಠಾಪಿಸಲಾಗಿದೆ. ಹಂಪಿಯ ವಿಜಯವಿಠ್ಠಲ ದೇವಾಲಯದ ಸಮೀಪವಿರುವ ಅರಸನ ತುಲಾಭಾರ ಕಂಬವನ್ನು ಹೋಲುವ ಇವು ಪ್ರಾಯಶಃ ಕರ್ನಾಟಕದ ಬೇರೆ ಯಾವುದೇ ರಾಜಮನೆತನಗಳ ದೇವಾಲಯಗಳಲ್ಲಿ ಕಂಡುಬರುವುದಿಲ್ಲ. ಹಾಗಾಗಿ ಉಯ್ಯಾಲೆಕಂಬಗಳು ಕರ್ನಾಟಕದ ದೇವಾಲಯಗಳ ವಾಸ್ತುಶಿಲ್ಪಕ್ಕೆ ಈ ಪರಿಸರದ ಪಾಳೆಯಗಾರರ ವಿಶಿಷ್ಟ ಕೊಡುಗೆಯೆಂದೇ ಹೇಳಬಹುದು.

ಪ್ರಾಕಾರ

ಪ್ರಧಾನ ದೇವಾಲಯದ ಸುತ್ತ ಪರಿವಾರ ದೇವತೆಗಳ ಗುಡಿಗಳು, ಬಲಿಪೀಠ, ಧ್ವಜಸ್ತಂಭ, ದೀಪಸ್ತಂಭಗಳು ರಚನೆಗೊಂಡ ನಂತರ, ಮತ್ತು ಯಜ್ಞಶಾಲೆ, ಕಲ್ಯಾಣಮಂಟಪ, ಉತ್ಸವಮಂಟಪಗಳು ದೇವಾಲಯದ ಆವರಣದಲ್ಲಿ ನಿರ್ಮಾಣಗೊಂಡನಂತರ, ಆ ಎಲ್ಲಾ ದೇವಾಲಯ ಸಮುಚ್ಚಯವನ್ನು ಒಳಗೊಂಡಂತೆ ಸುತ್ತಲೂ ಪ್ರಾಕಾರಗೋಡೆ ನಿರ್ಮಿಸುವ ಪದ್ಧತಿ ಪ್ರಾರಂಭವಾಯಿತು. ಪ್ರಾಕಾರ ಗೋಡೆಗಳು ಆವರಣ ಗೋಡೆಗಳಾಗಿದ್ದು ದೇವಾಲಯ ಸಂಕೀರ್ಣದ ಸುತ್ತಲೂ ಆಯತಾಕಾರದಲ್ಲಿ ಕಟ್ಟಲ್ಪಟ್ಟಿರುತ್ತದೆ. ಈ ಪ್ರಾಕಾರಗಳಿಗೆ ಮುಂಬದಿಯಲ್ಲಿ ಮಹಾದ್ವಾರ ಮತ್ತು ಗೋಪುರಗಳಿರುತ್ತವೆ. ಕೆಲವು ವೇಳೆ ಬದಿಯ ಗೋಡೆಗಳಲ್ಲೂ ಮಹಾದ್ವಾರಗಳಿರುತ್ತವೆ. ಪ್ರಾಕಾರಗೋಡೆಗೆ ಹೊಂದಿಕೊಂಡಂತೆ ಒಳಗಡೆ ಸುತ್ತಲೂ ಕಂಬಗಳ ಮಂಟಪಗಳಿರುತ್ತವೆ. ಈ ಮಂಟಪಗಳನ್ನು ಪರಿವಾರದೇವತೆಗಳ ಗುಡಿಗಳನ್ನಾಗಿ ಯಜ್ಞಮಂಟಪ ಮತ್ತು ಇತರ ಕಾರ್ಯಗಳಿಗಾಗಿ ಉಪಯೋಗಿಸಲಾಗುತ್ತದೆ. ವಿಜಯನಗರ ಕಾಲದಲ್ಲಿ ಪ್ರಾಕಾರಗಳ ನಿರ್ಮಾಣವು ಬೃಹತ್ ದೇವಾಲಯಗಳ ಅವಶ್ಯಕ ಅಂಗವಾಗಿ ಬೆಳೆಯಿತು. ಇಂತಹ ಬೃಹತ್ ಪ್ರಾಕಾರಗಳನ್ನು ಹಂಪಿಯ ವಿರೂಪಾಕ್ಷ, ಬಾಲಕೃಷ್ಣ, ಅಚ್ಚುತರಾಯ, ಪಟ್ಟಾಭಿರಾಮ, ವಿಜಯವಿಠ್ಠಲ ಮುಂತಾದ ದೇವಾಲಯಗಳಲ್ಲಿ ನೋಡಬಹುದು. ವಿಜಯನಗರ ವಾಸ್ತುಶೈಲಿಯನ್ನು ಅನುಸರಿದ ಚಿತ್ರದುರ್ಗ ಪಾಳೆಯಗಾರರು ತಮ್ಮ ಕೆಲವು ದೊಡ್ಡ ದೇವಾಲಯಗಳ ಸುತ್ತಲೂ ಪ್ರಾಕಾರಗಳನ್ನು ನಿರ್ಮಿಸಿದ್ದಾರೆ.

ಇವುಗಳಲ್ಲಿ ಎರಡು ವಿಧಗಳನ್ನು ಗುರುತಿಸಬಹುದು. ನೀರ್ಥಡಿಯ ರಂಗನಾಥ, ಅಂಬಲಗೆರೆಯ ರಂಗನಾಥ, ಹಿರಿಯೂರು ತೇರುಮಲ್ಲೇಶ್ವರ, ವೀರಭದ್ರೇಶ್ವರ, ಚಿತ್ರದುರ್ಗದ ಚನ್ನಕೇಶವ, ತಾಳ್ಯದ ಆಂಜನೇಯ, ಚಿತ್ರಹಳ್ಳಿ ಆಂಜನೇಯ, ಹುಲ್ಲೂರು ಆಂಜನೇಯ, ಹೊಸದುರ್ಗದ ವೀರಭದ್ರಸ್ವಾಮಿ, ಜಾನಕಲ್ಲು ವೆಂಕಟರಮಣ ದೇವಾಲಯಗಳಲ್ಲಿ ಸುತ್ತಲೂ ಕೇವಲ ಪ್ರಾಕಾರದ ಗೋಡೆಗಳು ಮಾತ್ರ ಕಂಡುಬರುತ್ತವೆ. ಕೆಲವು ಪ್ರಾಕಾರ ಗೋಡೆಗಳ ಮೇಲೆ ಅಲ್ಲಲ್ಲಿ ಹಾವು, ಮೀನು, ಆಮೆ, ಪುಷ್ಪಗಳ ಉಬ್ಬುಶಿಲ್ಪಗಳಿವೆ.

ಚಿತ್ರದುರ್ಗದ ವೆಂಕಟರಮಣ, ಉತ್ಸವಾಂಬೆ, ಹೊರಕೆರೆದೇವರಪುರದ ರಂಗನಾಥ ದೇವಾಲಯಗಳ ಪ್ರಾಕಾರಗಳ ಒಳಭಾಗದಲ್ಲಿ ಕಂಬಗಳ ಸಾಲುಮಂಟಪಗಳಿವೆ. ಈ ಮಂಟಪಗಳು ಎತ್ತರವಾದ ವೇದಿಕೆಯ ಮೇಲೆ ಇದ್ದು, ಮಂಟಪಗಳ ಕಂಬಗಳ ಮೇಲೆ ವಿವಿಧ ರೀತಿಯ ಉಬ್ಬುಶಿಲ್ಪಗಳಿರುತ್ತವೆ. ಪ್ರಾಕಾರಗಳ ಮುಂಭಾಗದಲ್ಲಿ ಬೃಹತ್ ದ್ವಾರಮಂಟಪವಿರುತ್ತದೆ. ಸಂಪೂರ್ಣ ಕಲ್ಲಿನಿಂದ ನಿರ್ಮಿಸಲಾಗಿರುವ ಈ ದ್ವಾರಮಂಟಪದ ಎರಡೂ ಬದಿಗೆ ಬಾಗಿಲುಗಳು ಇದ್ದು ಆಕರ್ಷಕವಾಗಿರುತ್ತವೆ. ದ್ವಾರಮಂಟಪದ ಒಳಗೆ

ಪ್ರವೇಶ ಹಾದಿಯ ಎರಡೂ ಬದಿಯಲ್ಲಿ ಎತ್ತರವಾದ ಜಗತಿಯಿದ್ದು, ಅದರಲ್ಲಿ ಆಕರ್ಷಕವಾದ ಕಂಬಗಳಿರುತ್ತವೆ. ಚಿತ್ರದುರ್ಗದ ಉತ್ಸವಾಂಬೆ, ಹಿರಿಯೂರಿನ ತೇರುಮಲ್ಲೇಶ್ವರ, ಹೊರಕೆರದೇವರಪುರದ ರಂಗನಾಥ ದೇವಾಲಯಗಳ ಮಂಟಪಗಳ ಮೇಲೆ ಎತ್ತರವಾದ ಗೋಪುರಗಳಿವೆ. ದ್ರಾವಿಡ ವಿಮಾನ ಮಾದರಿಯ ಈ ಗೋಪುರಗಳು ಸಂಪೂರ್ಣ ಇಟ್ಟಿಗೆ ಮತ್ತು ಗಾರೆಯಿಂದ ಹಲವಾರು ತಲಗಳಲ್ಲಿ ನಿರ್ಮಿಸಲ್ಪಟ್ಟಿರುತ್ತವೆ. ಈ ಗೋಪುರಗಳ ಪ್ರತಿತಲದಲ್ಲಿ ಬಾಗಿಲು, ಅದರ ಇಕ್ಕೆಲಗಳಲ್ಲಿ ದ್ವಾರಪಾಲಕರ ಶಿಲ್ಪಗಳು ಮತ್ತು ಶಾಲ, ಕೂಟಗಳ ಅಲಂಕರಣೆಗಳಿರುತ್ತವೆ. ಗೋಪುರದ ತುದಿಯಲ್ಲಿ ಶಾಲ ಮಾದರಿಯ ಶಿಖರವಿರುತ್ತದೆ. ಚಿತ್ರದುರ್ಗ ಪರಿಸರದಲ್ಲಿ ತುಂಬಾ ವಿಶಿಷ್ಟವಾದ ದ್ವಾರಗೋಪುರವೊಂದು ಹೊರಕೆರೆದೇವರಪುರದ ರಂಗನಾಥ ದೇವಾಲಯದಲ್ಲಿದೆ. ಈ ಗೋಪುರ ನಾಲ್ಕು ತಲದಲ್ಲಿದ್ದು ಸಂಪೂರ್ಣ ಕಲ್ಲಿನಿಂದಲೇ ಕಟ್ಟಲ್ಪಟ್ಟಿದೆ. ಮೊದಲ ತಲವು ಚಚ್ಚೌಕಾಕಾರದದಲ್ಲಿದ್ದು ಸುತ್ತಲೂ ಮುಚ್ಚಿದ ಕೋಣೆಯಂತಿದೆ. ಇದರ ಬಾಗಿಲ ಬದಿಯಲ್ಲಿ ದ್ವಾರಪಾಲಕರ ಶಿಲ್ಪಗಳಿವೆ. ಇದು ಒಂದು ಬಿಡಿ ದೇವಾಲಯದ ರಚನೆಯನ್ನು ಹೋಲುತ್ತದೆ. ಎರಡನೆಯ ತಲವು ಅಷ್ಟಕೋನಾಕಾರದ ವಿಶೇಷ ರಚನೆ. ಇದಕ್ಕೆ ಎಂಟು ಬದಿಯಲ್ಲಿ ಕಮಾನಿನಾಕಾರದ ದ್ವಾರಬಾಗಿಲುಗಳಿವೆ. ಮೂರನೆಯ ತಲವು ಚೌಕಮಂಟಪದಂತಿದ್ದು, ಅದರ ನಾಲ್ಕು ಬದಿಗೆ ಕಮಾನಿನಾಕಾರದ ಬಾಗಿಲುಗಳಿವೆ. ಇದರ ಮೇಲೆ ಚೌಕಸ್ತಲದ ಸ್ತೂಪಿಯಿದ್ದು, ಅದಕ್ಕೂ ನಾಲ್ಕು ಬದಿಯಲ್ಲಿ ಕಮಾನಿನಾಕಾರದ ಬಾಗಿಲುಗಳನ್ನು ಮಾಡಲಾಗಿದೆ. ಹಾಗಾಗಿ ಸ್ತೂಪಿಯು ಒಂದು ತಲದಂತೆ ಗೋಚರಿಸುತ್ತದೆ. ಇದರ ಮೇಲೆ ಕಳಸವಿದೆ. ಈ ಗೋಪುರವೊಂದು ಅಪರೂಪದ ರಚನೆಯಾಗಿದ್ದರೂ ವಾಸ್ತುಶಿಲ್ಪ ದೃಷ್ಟಿಯಿಂದ ಸುಂದರವಾಗಿಲ್ಲ. ಚೌಕ ಮತ್ತು ಅಷ್ಟಕೋನ ವಿನ್ಯಾಸದ ಮಂಟಪಗಳು ಒಂದಕ್ಕೊಂದು ಪೂರಕವಾಗಿರದೆ ಅಸಮಂಜಸವೆನಿಸುತ್ತವೆ. ಆದಾಗ್ಯೂ ವಾಸ್ತುಕಲೆ ಪರಂಪರೆಯನ್ನು ಮುಂದುವರೆಸುವಲ್ಲಿ ಸ್ಥಳೀಯ ಆಲೋಚನೆಗಳು ಮತ್ತು ಸ್ಥಾನಿಕಶಿಲ್ಪಿಗಳ ಯೋಜನೆಗಳಿಗೆ ಇದು ಒಂದು ಉತ್ತಮ ಉದಾಹರಣೆಯಾಗಿ ಗೋಚರಿಸುತ್ತದೆ. ಪ್ರಾಯಶಃ ಇದು ಕೂಡ ಕರ್ನಾಟಕದ ಒಂದು ಅಪರೂಪದ ರಚನೆಯೆಂದೇ ಹೇಳಬಹುದು.

೩.೩. ಪಾಳೆಯಗಾರರ ಪ್ರಧಾನ ದೇವಾಲಯಗಳ ವಾಸ್ತುವಿವರ

ಚಿತ್ರದುರ್ಗ ಜಿಲ್ಲೆಯಲ್ಲಿ ಪಾಳೆಯಗಾರರ ದೇವಾಲಯಗಳು ಹೆಚ್ಚು ಕೇಂದ್ರೀಕೃತವಾಗಿವೆ. ಚಿತ್ರದುರ್ಗ, ಹಿರಿಯೂರು, ಹೊಳಲ್ಕೆರೆ, ಹೊಸದುರ್ಗ, ಚಳ್ಳಕೆರೆ, ಮೊಳಕಾಲ್ಮೂರು ಜಗಲೂರು, ದಾವಣಗೆರೆ ತಾಲ್ಲೂಕುಗಳು ಮತ್ತು ನೆರೆಯ ಆಂಧ್ರದ ಗಡಿಭಾಗದಲ್ಲಿರುವ ಕುಂದುರ್ಪಿಗಳಲ್ಲಿ ಪಾಳೆಯಗಾರರ ಕಾಲದ ದೇವಾಲಯಗಳು ಕಂಡುಬರುತ್ತವೆ. ಮೇಲೆ

ಹೇಳಿದ ಪ್ರದೇಶಗಳಲ್ಲಿ ಕ್ಷೇತ್ರಕಾರ್ಯ ಕೈಗೊಂಡು ಈ ಎಲ್ಲಾ ದೇವಾಲಯ ಸ್ಮಾರಕಗಳ ವಾಸ್ತು ಅಧ್ಯಯನವನ್ನು ನಡೆಸಲಾಯಿತು. ಈ ಎಲ್ಲಾ ದೇವಾಲಯಗಳ ವಿವರ ಇಂತಿದೆ.

ಚಿತ್ರದುರ್ಗ ತಾಲ್ಲೂಕು

ವೆಂಕಟರಮಣ, ಚನ್ನಕೇಶವ, ಉತ್ಸವಾಂಬೆ, ಗಾರೆಬಾಗಿಲ ಈಶ್ವರ, ಉಮಾಮಹೇಶ್ವರ, ನೀಲಕಂಠೇಶ್ವರ, ಕಾಳಿಕಮ್ಮಟೇಶ್ವರಿ, ದೊಟ್ಟಪೇಟೆ ಆಂಜನೇಯ, ಲಕ್ಷ್ಮಿವೆಂಕಟೇಶ್ವರ, ಶಂಕರನಾರಾಯಣ, ರಂಗಯ್ಯನಬಾಗಿಲ ಶ್ರೀರಾಮ, ಆಂಜನೇಯ, (ಚಿತ್ರದುರ್ಗ), ಏಕನಾಥೇಶ್ವರಿ, ವಿನಾಯಕ, ಒಂಟಿಕಲ್ಲು ಬಸವ, ಒನಕೆಕಿಂಡಿ ಹನುಮಂತ, ಗೋಪಾಲಸ್ವಾಮಿ, ಶಿವಾಲಯ, ಕರಿವರ್ತೀಶ್ವರ (ಕೋಟೆ), ಆಂಜನೇಯ (ಪಿಳ್ಳೆಕೇರನಹಳ್ಳಿ), ರಂಗನಾಥಸ್ವಾಮಿ (ಪಂಡರಹಳ್ಳಿ), ಸಿದ್ದೇಶ್ವರ, ಆಂಜನೇಯ (ಹುಲ್ಲೂರು), ಆಂಜನೇಯ (ನುಲೇನೂರು), ಆಂಜನೇಯ (ಕಡ್ಲೆಗುದ್ದು), ಭೀಮೇಶ್ವರ (ಭೀಮಸಮುದ್ರ), ಆಂಜನೇಯ (ಗುಂಟನೂರು), ರಂಗನಾಥ (ಹಂಪನೂರು), ಆಂಜನೇಯ (ಇಸಾಮುದ್ರ), ಶಿವಾಲಯ (ಕಾವಾಡಿಗರಹಟ್ಟಿ), ಆಂಜನೇಯ (ಭರಮಸಾಗರ), ಆಂಜನೇಯ (ಬಹದ್ದೂರ್‌ಘಟ್ಟ).

ಚಳ್ಳಕೆರೆ ತಾಲ್ಲೂಕು

ಚಳ್ಳಕೆರೆಮ್ಮ (ಚಳ್ಳಕೆರೆ), ಆಂಜನೇಯ (ರೆಡ್ಡಿಹಳ್ಳಿ), ಆಂಜನೇಯ (ಚನ್ನಮ್ಮನಾಗತಿಹಳ್ಳಿ), ಹೊರಮಠ (ನಾಯಕನಹಟ್ಟಿ).

ಹೊಳಲ್ಕೆರೆ ತಾಲ್ಲೂಕು

ವೀರಭದ್ರಸ್ವಾಮಿ, ವೇಣುಗೋಪಾಲಸ್ವಾಮಿ, ಬಯಲುಗಣಪತಿ(ಹೊಳಲ್ಕೆರೆ), ರಂಗನಾಥಸ್ವಾಮಿ (ಗಿಲಕೇನಹಳ್ಳಿ), ಆಂಜನೇಯ(ಚಿತ್ರಹಳ್ಳಿ), ಆಂಜನೇಯ(ತಾಳ್ಯ), ಲಕ್ಷ್ಮಿರಂಗನಾಥಸ್ವಾಮಿ (ಹೊರಕೆರೆದೇವರಪುರ), ಹನುಮಂತ (ನಂದನಹೊಸೂರು), ಆಂಜನೇಯ (ರಾಮೇನಹಳ್ಳಿ).

ಜಗಲೂರು ತಾಲ್ಲೂಕು

ನೀಲಕಂಠೇಶ್ವರ, ರಾಮೇಶ್ವರ, ಆಂಜನೇಯ (ಬಿಳಿಚೋಡು), ಆಂಜನೇಯ (ಕಲ್ಲೇನಹಳ್ಳಿ), ಕಾಟಂದೇವರಗುಡಿ (ಕಣಕುಪ್ಪೆ), ರಂಗನಾಥ (ಕೊರಟಗೆರೆ), ರಂಗನಾಥ (ಕೊಣಚಗಲ್) ಆಂಜನೇಯ (ಸೊಕ್ಕೆ ಮದಕರಿಪುರ).

ಹಿರಿಯೂರು ತಾಲ್ಲೂಕು

ತೇರುಮಲ್ಲೇಶ್ವರ, ವೀರಭದ್ರಸ್ವಾಮಿ, ಲಕ್ಷ್ಮಿವೆಂಕಟರಮಣ (ಹಿರಿಯೂರು), ರಂಗನಾಥ (ಅಬ್ಬಿನಹೊಳೆ), ರಂಗನಾಥ(ಬಬ್ಬೂರು), ರಂಗನಾಥ (ಅಂಬಲಗೆರೆ), ತಿಮ್ಮಪ್ಪ(ಉಪ್ಪಳಗೆರೆ), ರಂಗನಾಥ(ನಂದಿಹಳ್ಳಿ), ಮಾರಿಕಾಂಭ(ಮಾರಿಕಣಿವೆ).

ಹೊಸದುರ್ಗ ತಾಲ್ಲೂಕು

ವೀರಭದ್ರಸ್ವಾಮಿ(ಹೊಸದುರ್ಗ), ಶಂಕರಲಿಂಗೇಶ್ವರ, ವೀರಭದ್ರಸ್ವಾಮಿ, ವೆಂಕಟೇಶ್ವರ, ನೇಮಿನಾಥ ತೀರ್ಥಂಕರ ಚೈತಾಲಯ (ಜಾನಕಲ್ಲು), ವೀರಭದ್ರಸ್ವಾಮಿ (ಬಾಗೂರು), ರಂಗನಾಥ (ಜೋಡಿರಂಗಾಪುರ),

ದಾವಣಗೆರೆ ತಾಲ್ಲೂಕು

ರಂಗನಾಥ, ಹನುಮಂತ(ನೀರ್ಥಡಿ), ವೀರಹನುಮಂತ, ಬಸವೇಶ್ವರ(ಮಾಯಕೊಂಡ), ರಂಗನಾಥ(ಶ್ರೀರಂಗಪುರ), ಆಂಜನೇಯ(ಮತ್ತಿ), ಆಂಜನೇಯ(ದ್ಯಾಮೇನಹಳ್ಳಿ).

ಈ ಎಲ್ಲಾ ದೇವಾಲಯಗಳು ಚಿಕ್ಕ, ಮಧ್ಯಮ ಹಾಗು ತಕ್ಕಮಟ್ಟಿಗೆ ಬೃಹತ್ ಪ್ರಮಾಣದಲ್ಲಿವೆ. ವಾಸ್ತುದೃಷ್ಟಿಯಿಂದ ಕೆಲವು ಮಹತ್ವದವುಗಳಾಗಿದ್ದರೆ, ಉಳಿದವು ಸರಳವಾಗಿವೆ. ಈ ದೇವಾಲಯಗಳಲ್ಲಿ ಬಹಳಷ್ಟು ದೇವಾಲಯಗಳು ಕಾಲಕಾಲಕ್ಕೆ ದುರಸ್ತಿಗೊಂಡು, ಅಲ್ಲಲ್ಲಿ ಮೂಲರೂಪದಲ್ಲಿ ಬದಲಾವಣೆಯನ್ನು ಹೊಂದಿವೆ. ಇನ್ನೂ ಕೆಲವು ನಾಶದ ಅಂಚಿನಲ್ಲಿವೆ. ಆದಾಗ್ಯೂ ಈ ದೇವಾಲಯಗಳು ಪಾಳೆಯಗಾರರ ಪ್ರತ್ಯೇಕ ವಾಸ್ತುಲಕ್ಷಣಗಳನ್ನು ಪ್ರತಿಬಿಂಬಿಸುತ್ತವೆ. ಸಮೀಕ್ಷಿಸಿದ ಪ್ರಸ್ತುತ ದೇವಾಲಯಗಳಲ್ಲಿ ವಾಸ್ತುಶಿಲ್ಪ ಕಲೆದೃಷ್ಟಿಯಿಂದ ಮಹತ್ವದ್ದೆನಿಸುವ ಹತ್ತೊಂಭತ್ತು ದೇವಾಲಯಗಳನ್ನು ಆಯ್ದುಕೊಂಡು ಮಾದರಿಗಾಗಿ ಅವುಗಳ ವಾಸ್ತುವಿವರವನ್ನು ನೀಡಲಾಗಿದೆ.

೧.ರಂಗನಾಥಸ್ವಾಮಿ ದೇವಾಲಯ

ಗ್ರಾಮ	:	*ನೀರ್ಥಡಿ (ದಾವಣಗೆರೆ ತಾಲ್ಲೂಕು)*
ಸ್ಥಾನನಿರ್ದೇಶನ	:	*ಚಿತ್ರದುರ್ಗ–ದಾವಣಗೆರೆ ರಾಷ್ಟ್ರೀಯ ಹೆದ್ದಾರಿಯ ಭರಮಸಾಗರ ಹತ್ತಿರದ ಲಕ್ಕೇಮುಕ್ತೇನಹಳ್ಳಿ ಕ್ರಾಸಿನಿಂದ ಎರಡು ಕಿ.ಮೀ. ಅಂತರದಲ್ಲಿದೆ.*
ಮುಖದಿಕ್ಕು	:	*ಪೂರ್ವ*
ನಿರ್ಮಾಣ ಸಾಮಾಗ್ರಿ	:	*ಕಣಶಿಲೆ, ಗಾರೆ, ಇಟ್ಟಿಗೆ*
ಶಾಸನ ಮತ್ತು ಕಾಲ	:	*ಮೂಲ ಮತ್ತಿತಿಮ್ಮಣ್ಣನಾಯಕ,*
ದುರಸ್ತಿ	:	*ಬಿಚ್ಚುಗತ್ತಿ ಭರಮಣ್ಣನಾಯಕ*
ಶಾಸನ	:	*ದಾವಣಗೆರೆ–೧೬೪.*
ವಾಸ್ತುಭಾಗಗಳು	:	*ಗರ್ಭಗೃಹ, ಅಂತರಾಳ, ಅರ್ಧಮಂಟಪ, ನವರಂಗ, ಮುಖಮಂಟಪ, ಪ್ರಾಕಾರ, ಪ್ರವೇಶದ್ವಾರ, ದೀಪಸ್ತಂಭ.*

ಚಿತ್ರದುರ್ಗದ ಗತಕಾಲದ ಇತಿಹಾಸವನ್ನು ನೆನಪಿಗೆ ತರುವ ಪ್ರಸಿದ್ಧ ದೇವಾಲಯಗಳಲ್ಲಿ ನೀರ್ಥಡಿಯ ಶ್ರೀರಂಗನಾಥಸ್ವಾಮಿ ದೇವಾಲಯ ಮುಖ್ಯವಾದುದು. ಈ ದೇವಾಲಯದ ಇತಿಹಾಸವು ಚಿತ್ರದುರ್ಗ ಪಾಳೆಯಗಾರರ ಇತಿಹಾಸದೊಂದಿಗೆ ಹಾಸುಹೊಕ್ಕಾಗಿ ಬೆರೆತುಕೊಂಡಿದೆ. ಚಿತ್ರದುರ್ಗ–ದಾವಣಗೆರೆಯ ನಡುವಿನ ರಾಷ್ಟ್ರೀಯ ಹೆದ್ದಾರಿಯಲ್ಲಿ ಭರಮಸಾಗರದ ಹತ್ತಿರದ ಲಕ್ಕಮುಕ್ತೇನಹಳ್ಳಿ ಕ್ರಾಸಿನಿಂದ ಎರಡು ಕಿ.ಮೀ. ದೂರದಲ್ಲಿ ನೀರ್ಥಡಿ ಗ್ರಾಮವಿದೆ. ಬೆಟ್ಟದ ತಪ್ಪಲಿನಲ್ಲಿ ಹಾಗು ನೀರಿನ ದಡದಲ್ಲಿ ಕಟ್ಟಲಾಗಿರುವ ಈ ರಮ್ಯ ಪ್ರದೇಶವು ಬಹು ಪ್ರಾಚೀನ ಕಾಲದಿಂದಲೂ ಒಂದು ಪವಿತ್ರ ಧಾರ್ಮಿಕ ಕೇಂದ್ರವಾಗಿದ್ದಂತೆ ತೋರುತ್ತದೆ. ಅನೇಕ ಮಹರ್ಷಿಗಳು ಬೆಟ್ಟದ ತಪ್ಪಲಿನಲ್ಲಿ ಆಶ್ರಮ ಕಟ್ಟಿ ತಪಸ್ಸು ಮಾಡುತ್ತಿದ್ದರೆಂದು ತಿಳಿದುಬಂದಿದೆ.

ಈ ಬೆಟ್ಟದ ತಪ್ಪಲಿನಲ್ಲಿ ತಾಯಿಗರ್ಭದಲ್ಲಿ ಹುದುಗಿದ ಮಗುವಿನಂತೆ ಐತಿಹಾಸಿಕ ಹಾಗು ಧಾರ್ಮಿಕ ಮಹತ್ವ ಪಡೆದಿರುವ ಈ ಗ್ರಾಮಕ್ಕೆ ಚಿತ್ರದುರ್ಗದ ಪಾಳೆಯಪಟ್ಟಿನ ಮೂಲಪುರುಷನಾದ ಚಿತ್ರನಾಯಕರು ಆನೆಗೊಂದಿ ಕಡೆಯಿಂದ ನೀರ್ಥಡಿಗೆ ಬಂದು ಪಾಳೆಯ ಹಾಕಿದಾಗ ಇವನ ವಂಶಿಕರು ಒಂದು ಶತಮಾನಗಳ ಕಾಲ ಇಲ್ಲಿಯೇ ನೆಲೆಸಿದ್ದರೆಂದು ತಿಳಿದುಬಂದಿದೆ.

ಹದಿನಾರನೆಯ ಶತಮಾನದಲ್ಲಿ ಕಟ್ಟಲಾದ ಶ್ರೀರಂಗನಾಥ ದೇವಾಲಯ ಇಂದಿಗೂ ಜಿಲ್ಲೆಯ ವಾಸ್ತುಶಿಲ್ಪಕ್ಕೆ ಹೆಮ್ಮೆಯ ಕೊಡುಗೆಯಾಗಿದೆ. ಚೋಳರ ವಾಸ್ತು ಶಿಲ್ಪವನ್ನು ಅನುಸರಿಸಿ ಕಟ್ಟಲ್ಪಟ್ಟಿರುವ೨೧ ಈ ದೇವಾಲಯವು ಗರ್ಭಗೃಹ, ಅಂತರಾಳ, ಅರ್ಧಮಂಟಪ, ನವರಂಗ, ಮುಖಮಂಟಪ, ಪ್ರಾಕಾರ, ಪ್ರವೇಶ ಮಹಾದ್ವಾರಗಳನ್ನು ಒಳಗೊಂಡಿದ್ದು, ಅನೇಕ ಶಿಲ್ಪಗಳ ಕೆತ್ತನೆಯಿಂದ ಕೂಡಿದೆ.

ಗರ್ಭಗೃಹವು ಚಿಕ್ಕದಾಗಿದ್ದು ಸರಳವಾಗಿದೆ. ಗರ್ಭಗೃಹದ ಬಾಗಿಲು ಕಮಾನಿನ ರಚನೆಯಲ್ಲಿದೆ. ಅರ್ಧಮಂಟಪದ ಬಾಗಿಲ ಲಲಾಟಬಿಂಬದಲ್ಲಿ ಅಂಬೆಗಾಲು ಕೃಷ್ಣನ ಉಬ್ಬುಶಿಲ್ಪವಿದೆ. ದ್ವಾರದ ತಳಭಾಗದಲ್ಲಿ ವೈಷ್ಣವ ದ್ವಾರಪಾಲಕರ ಉಬ್ಬುಶಿಲ್ಪಗಳು ಮತ್ತು ಪಟ್ಟಿಕೆಗಳಲ್ಲಿ ಲತಾಬಳ್ಳಿಗಳ ಅಲಂಕರಣೆಯಿದೆ. ಮುಂದಿರುವ ಅರ್ಧಮಂಟಪದ ದಕ್ಷಿಣ ಮತ್ತು ಉತ್ತರದಲ್ಲಿ ಪರಿವಾರದೇವತೆಗಳ ಎರಡು ಸಣ್ಣ ಕೊಠಡಿಗಳಿವೆ.

ನವರಂಗದಲ್ಲಿ ಚೌಕರಚನೆಯ ನಾಲ್ಕು ಕಂಬಗಳಿದ್ದು, ಅವುಗಳ ನಾಲ್ಕು ಮುಖಗಳ ಮೂರು ಹಂತಗಳಲ್ಲಿ ವಿವಿಧ ಉಬ್ಬುಶಿಲ್ಪಗಳನ್ನು ಬಿಡಿಸಲಾಗಿದೆ. ಪ್ರತಿಹಂತಗಳ ಮೂಲೆಗಳಲ್ಲಿ ಭಾರವನ್ನು ಹೊತ್ತಿನಿಂತ ಸಿಂಹಗಳ ಸೂಕ್ಷ್ಮ ಶಿಲ್ಪಗಳನ್ನು ಬಿಡಿಸಲಾಗಿದೆ. ಈ ಶಿಲ್ಪಗಳನ್ನು

ಒಳಕೊರೆದು ಬಿಡಿಸಲಾಗಿದ್ದು ಕಲಾತ್ಮಕವಾಗಿವೆ. ಈ ಕಂಬಗಳ ಮೇಲಿನ ಉಬ್ಬುಶಿಲ್ಪಗಳಲ್ಲಿ ತಾಯಿಯೊಬ್ಬಳು ಮಗುವನ್ನು ಎತ್ತಿಕೊಂಡಿರುವ, ವೃತ್ತಾಕಾರವಾಗಿ ಸೆಣಸುತ್ತಿರುವ ಜಟ್ಟಿಗಳು, ಅನಂತಶಯನ, ಪರ್ವತ ಹೊತ್ತ ಆಂಜನೇಯ, ಆನೆಸವಾರ, ಕಾಲಭೈರವ, ನೃತ್ಯಗಾತಿ, ಬೇಟೆಗಾರ, ಗಣಪತಿ, ವಿನೋದಗಾರ, ಸಂಗೀತಗಾರರ, ನಾಯಕ–ನಾಯಕಿಯರ, ನಗ್ನಸ್ತ್ರೀಯರ, ಗೋಪಿಕೆಯರ ವಸ್ತ್ರಾಪಹರಣದ ದೃಶ್ಯ, ಮಜ್ಜಿಗೆ ಕಡೆಯುತ್ತಿರುವ ಗೋಪಿಕಾಸ್ತ್ರೀ, ಬೆಣ್ಣೆ ಕದಿಯುತ್ತಿರುವ ಮುದ್ದುಕೃಷ್ಣ, ಅವನನ್ನು ಓಡಿಸುವ ಅವಸರದಲ್ಲಿ ಅವಳು ಕಟ್ಟಿರುವ ಲಂಗವೇ ಜಾರಿ ಅರೆಬೆತ್ತಲೆಯಾಗಿರುವುದು, ಮತ್ಸ್ಯನರ್ತನ ಮುಂತಾದ ಉಬ್ಬುಶಿಲ್ಪಗಳಿವೆ. ಕಂಬಗಳ ಮೇಲಿರುವ ಬೋದುಗೆಗಳು ವಿಜಯನಗರ ಶೈಲಿಯಲ್ಲಿದ್ದು, ಮೊನಚು ಅಲಂಕರಣದಿಂದ ಕೂಡಿವೆ. ಕಂಬಗಳ ಮೇಲಿರುವ ಉಬ್ಬುಶಿಲ್ಪಗಳು ಬಿಡಿಶಿಲ್ಪಗಳಂತೆ ರಚನೆಗೊಂಡಿದ್ದು, ಹೆಚ್ಚು ಹೊರಚಾಚಿಕೊಂಡಿವೆ. ಈ ಉಬ್ಬುಶಿಲ್ಪಗಳು ವಿಜಯನಗರೋತ್ತರ ಕಾಲದ ರಚನೆಗಳಾದರೂ, ಅಲಂಕರಣದಲ್ಲಿ ಕಲಾನೈಪುಣ್ಯತೆಯನ್ನು ಪ್ರದರ್ಶಿಸುತ್ತವೆ. ಶಿಲ್ಪಗಳಲ್ಲಿ ಸೂಕ್ಷ್ಮ ಕೆತ್ತನೆಯ ಅಲಂಕರಣೆಗಳನ್ನು ಕಾಣಬಹುದು. ಆದರೆ ಪ್ರತಿಮುಖಗಳಲ್ಲಿ ಬಿಡಿಸಿರುವ ಶಿಲ್ಪಗಳನ್ನು ಪ್ರಮಾಣಾನುಸಾರ ಸಂಯೋಜಿಸಲಾಗಿಲ್ಲ. ಹಾಗಾಗಿ ಉಬ್ಬುಶಿಲ್ಪಗಳನ್ನು ಅಂಟಿಸಿದಂತೆ ಕಂಡುಬರುತ್ತದೆ.

ನವರಂಗದ ಗೋಡೆಗಂಬಗಳಲ್ಲಿ ಅಳವಡಿಸಿರುವ ಬೋದುಗೆ ಪೀಠಗಳು ಮಧ್ಯದ ಕಂಬಗಳ ಬೋದುಗೆಗಳಿಗಿಂತ ಭಿನ್ನವಾಗಿ ರಚನೆಗೊಂಡಿವೆ. ಈ ಗೋಡೆಗಂಬಗಳ ಮೇಲೂ ತೆಳು ರಚನೆಯ ಉಬ್ಬುಶಿಲ್ಪಗಳನ್ನು ಬಿಡಿಸಲಾಗಿದೆ. ಈ ಉಬ್ಬುಶಿಲ್ಪಗಳಲ್ಲಿ ಆಂಜನೇಯ ಶಿಲ್ಪವೊಂದರ ಮೇಲೆ ಕೀರ್ತಿಮುಖವನ್ನು ಬಿಡಿಸಲಾಗಿದೆ. ಈ ರೀತಿ ದೇವತೆಗಳ ಉಬ್ಬುಶಿಲ್ಪಗಳ ಮೇಲೆ ಕೀರ್ತಿಮುಖಗಳನ್ನು ಬಿಡಿಸುವುದು ನಾಯಕರ ಕಾಲದ ವಿಶೇಷ ಲಕ್ಷಣವೆನ್ನಬಹುದು. ನವರಂಗದ ಪೂರ್ವದ ಪ್ರವೇಶದ್ವಾರವು ವೈಷ್ಣವ ದ್ವಾರಪಾಲಕರ ಉಬ್ಬುಶಿಲ್ಪಗಳನ್ನು ಹೊಂದಿದ್ದು, ನಿಂತಭಂಗಿಯಲ್ಲಿವೆ. ಲಲಾಟ ಬಿಂಬದಲ್ಲಿ ಗಜಲಕ್ಷ್ಮಿಯ ಶಿಲ್ಪವಿದೆ. ಎರಡು ಪಾರ್ಶ್ವಗಳಲ್ಲಿ ಯಾಳಸವಾರನ ಉಬ್ಬುಶಿಲ್ಪಗಳಿದ್ದು, ಅವುಗಳ ಬಾಯಿಯಿಂದ ಹೊರಟ ಪಾರ್ಶ್ವದ ತೋರಣದಲ್ಲಿ ಲತಾಬಳ್ಳಿ ಅಲಂಕರಣೆ ಕಂಡುಬರುತ್ತದೆ. ನವರಂಗದ ಭುವನೇಶ್ವರಿಯು ಆಕರ್ಷಕವಾಗಿದ್ದು, ಅದರ ಕೋನಗಳ ಮೂಲೆಗಳಲ್ಲಿ ಅಷ್ಟದಿಕ್ಪಾಲಕರ ಉಬ್ಬುಶಿಲ್ಪಗಳನ್ನು ಬಿಡಿಸಲಾಗಿದೆ. ಮಧ್ಯದಲ್ಲಿ ಚೌಕ ಮತ್ತು ವೃತ್ತಾಕಾರದ ಗುಮ್ಮಟ ರಚನೆಯಿದ್ದು ಸುತ್ತ ಹಂಸ ಮತ್ತು ವಿವಿಧ ಪುಷ್ಪಗಳ ಅಲಂಕರಣೆಯಿದೆ.

ಮುಖಮಂಟಪವು ಜಗತಿಗಳನ್ನು, ಉತ್ತರ ಮತ್ತು ದಕ್ಷಿಣದಲ್ಲಿ ಕಕ್ಷಾಸನವನ್ನು ಹೊಂದಿದೆ. ಮುಂಭಾಗದಲ್ಲಿ ಅಳವಡಿಸಿರುವ ನಾಲ್ಕು ಕಂಬಗಳಲ್ಲಿ ಎರಡು ಕಂಬಗಳು

ಯಾಳ ಮತ್ತು ಸಿಂಹವನ್ನು ಹೊಂದಿವೆ. ಈ ಬಗೆಯ ಕಂಬಗಳು ಹಂಪಿಯ ವಿಜಯವಿಠ್ಠಲ ದೇವಾಲಯದಲ್ಲಿ ಕಂಡುಬರುತ್ತವೆ. ಈ ಕಂಬಗಳು ಚೌಕ ರಚನೆಯಲ್ಲಿದ್ದು, ನಾಲ್ಕು ಮುಖಗಳಲ್ಲಿ ನರಸಿಂಹ, ಗೋಪಾಲಕೃಷ್ಣ, ರಾಜ-ರಾಣಿ, ಯತಿ, ಮತ್ಸ್ಯಾವತಾರ, ಆಂಜನೇಯ, ಲಕ್ಷ್ಮೀನರಸಿಂಹ, ನಾಯಕ, ಗರುಡ ಮುಂತಾದ ಉಬ್ಬುಶಿಲ್ಪಗಳನ್ನು ಹೊಂದಿವೆ. ಇಲ್ಲಿನ ಯತಿಯೊಬ್ಬನ ಉಬ್ಬುಶಿಲ್ಪದಲ್ಲಿ ತ್ರಿಪುಂಡ್ರ ತಿಲಕವಿದ್ದು, ಮಣಿಗಳಿಂದ ಭೂಷಿತವಾಗಿದೆ. ಆಚೀಚೆಯಿರುವ ಕಂಬಗಳು ಸಂಯುಕ್ತ ಕಂಬಗಳಾಗಿದ್ದು, ಅವುಗಳು ನಾಲ್ಕು ಮುಖಗಳಲ್ಲಿ ಕುಂಭಗಳಿಂದ ಕೂಡಿದ ಅರ್ಧಕಂಬಗಳನ್ನು ಹೊಂದಿವೆ. ಈ ಅರ್ಧಕಂಬಗಳ ಮಧ್ಯದಲ್ಲಿ ಗೂಡೊಂದನ್ನು ನಿರ್ಮಿಸಿ ಸೂಕ್ಷ್ಮ ಶಿಲ್ಪವೊಂದನ್ನು ಬಿಡಿಸಲಾಗಿದೆ. ಕಂಬಗಳ ಮೇಲೆ ವಿಜಯನಗರ ಶೈಲಿಯ ಪುಷ್ಪಬೋದುಗೆಗಳನ್ನು ಅಳವಡಿಸಲಾಗಿದೆ. ಈ ಕಂಬಗಳು ಯಾವುದೇ ಬೋದುಗೆಯ ಪೀಠಗಳನ್ನು ಹೊಂದಿಲ್ಲದಿರುವುದು ವಿಶೇಷ. ಈ ಮಂಟಪದಲ್ಲಿ ಅಳವಡಿಸಿರುವ ತೊಲೆಗಳು ಪಾರ್ಶ್ವ ಮತ್ತು ತಳಭಾಗದಲ್ಲಿ ಅಲಂಕೃತಗೊಂಡಿವೆ. ಮುಖಮಂಟಪದ ಮೇಲೆ ಇಳಿಜಾರಾದ ಮುಂಜೂರಿ(ಸೂರು)ನ ರಚನೆಯನ್ನು ಕಾಣಬಹುದು. ಸೂರಿನ ಒಳಭಾಗದಲ್ಲಿ ಜಂತಿಗಳ ರಚನೆ ಮತ್ತು ಅಡ್ಡಪಟ್ಟಿಗಳ ರಚನೆಯನ್ನು ಬಿಡಿಸಿರುವುದು ಇಲ್ಲಿನ ವಿಶೇಷ. ಹಾಗಾಗಿ ಈ ದೇವಾಲಯದ ರಚನೆಯನ್ನು ವಿಶೇಷ ಆಸಕ್ತಿ ವಹಿಸಿ ನಿರ್ಮಿಸಿರುವುದು ಸುಸ್ಪಷ್ಟ.

ಈ ಮುಖಮಂಟಪದ ಪ್ರವೇಶದಲ್ಲಿ ಎರಡು ಆಕರ್ಷಕವಾದ ಶಿಲಾತೋರಣಗಳಿವೆ. ಮುಂಭಾಗದಲ್ಲಿರುವ ಶಿಲಾತೋರಣದಂತೆ ಉತ್ತರ ಮತ್ತು ದಕ್ಷಿಣ ದಿಕ್ಕಿನಲ್ಲೂ ಶಿಲಾತೋರಣಗಳಿವೆ. ಇದಕ್ಕೂ ಪ್ರಾಚೀನವೆನ್ನಬಹುದಾದ ಇನ್ನೊಂದು ಶಿಲಾತೋರಣವನ್ನು ಕಂಬಗಳ ಒಳಪಾರ್ಶ್ವದಲ್ಲಿ ಶಿಲಾತೋರಣದ ಮಾದರಿಯಲ್ಲಿ ಬಿಡಿಸಲಾಗಿದೆ. ಎಡಪಾರ್ಶ್ವದ ಕಂಬದ ತಳದ ಗೂಡಿನಲ್ಲಿ ಬಹುಶಃ ಈ ಶಿಲಾತೋರಣವನ್ನು ನಿರ್ಮಿಸಿರುವ ನಾಯಕನ ಉಬ್ಬುಶಿಲ್ಪವಿದೆ. ಮುಂದಿನ ಶಿಲಾತೋರಣದಲ್ಲಿ ಪೂತನಿಯ ಹಾಲು ಕುಡಿಯುತ್ತಿರುವ ದೃಶ್ಯ, ಗರುಡ, ಬೇಡರಕಣ್ಣಪ್ಪ, ಗಣೇಶ, ನೃತ್ಯಗಾತಿಯರ ಉಬ್ಬುಶಿಲ್ಪಗಳಿವೆ. ಮುಖಮಂಟಪವು ಎರಡೂ ಕಡೆ ಜಗಲಿಗಳನ್ನು ಹೊಂದಿದೆ. ಕಟಾಂಜನ, ಮುಂದಿರುವ ತೋರಣ, ಉತ್ತರ ಮತ್ತು ದಕ್ಷಿಣಕ್ಕಿರುವ ತೋರಣಗಳು ಒಂದೇ ಕಾಲದ ರಚನೆಗಳು. ಅಂದರೆ ದೇವಾಲಯದ ನಂತರದ ನಿರ್ಮಾಣ ಗಳೆನ್ನಬಹುದು. ಕಟಾಂಜನಗಳ ನಿರ್ಮಾಣ, ಕಲ್ಲಿನ ತಡೆಗಳು ಮತ್ತು ಮೇಲ್ಛಾವಣಿಯ ಮೂಲೆಗಳಲ್ಲಿನ ಕಲ್ಲಿನ ಬಳೆಗಳ ಸರಪಳಿಯ ರಚನೆ ಈ ದೇವಾಲಯದ ಮತ್ತೊಂದು ವಿಶೇಷವೆನ್ನಬಹುದು. ಆದರೆ ಕಲ್ಲಿನ ಸರಪಳಿಯಲ್ಲಿ ಈಗ ಒಂದೇ ಒಂದು ಬಳೆ ಮಾತ್ರ ಇದೆ. ಇದರಿಂದ ನಮಗೆ ಹಿಂದೆ ಎರಡೂ ಕಡೆಗಳಲ್ಲೂ ಕಲ್ಲಿನ ಬಳೆಗಳ ಸರಪಳಿ ಇತ್ತೆಂದು

ತಿಳಿದುಬರುತ್ತದೆ. ಇಲ್ಲಿ ನಿರ್ಮಿಸಲಾಗಿರುವ ಕಟಾಂಜನಗಳ ನಿರ್ಮಾಣ ಕರ್ನಾಟಕದ ವಾಸ್ತು ರಚನೆಯಲ್ಲಿ ವಿಶೇಷವೆನ್ನಬಹುದು. ಕಟಾಂಜನದ ಕಂಬಗಳು ಮೂರು ರಂಧ್ರಗಳನ್ನು ಹೊಂದಿದ್ದು, ಆ ರಂಧ್ರಗಳಲ್ಲಿ ತೆಳುವಾದ ಕಲ್ಲಿನ ಜಂತಿಗಳನ್ನು ಅಳವಡಿಸಿರುವುದು ಕಂಡುಬರುತ್ತದೆ. ಕಂಬಗಳ ತುದಿಯಲ್ಲಿ ಮೊಗ್ಗಿನ ಅಲಂಕರಣೆ ಹೊಂದಿದ್ದು, ಚೌಕ ರಚನೆಯವುಗಳಾಗಿವೆ. ಸುತ್ತಲ ಕಟಾಂಜನಗಳು ಸುಮಾರು ನೆಲಮಟ್ಟದಿಂದ ಮೂರುವರೆ ಅಡಿಗಳಷ್ಟು ಎತ್ತರವನ್ನು ಹಾಗು ಮುಂದಿನ ಕಟಾಂಜನಗಳು ಸುಮಾರು ಐದು ಅಡಿಗಳಷ್ಟು ಎತ್ತರವನ್ನು ಹೊಂದಿವೆ.

ದೇವಾಲಯದ ಏರುವಿನ್ಯಾಸದಲ್ಲಿರುವ ಗರ್ಭಗೃಹದ ಹೊರಭಾಗವು ಎತ್ತರವಾದ ಅಧಿಷ್ಠಾನ, ಜಗತಿ, ಉಪಾನ, ಪದ್ಮ, ಹಾರ, ಕಂಠ, ಕುಮುದ, ಪ್ರತಿ, ಭಿತ್ತಿ ಮತ್ತು ಕಪೋತಗಳಿಂದ ಕೂಡಿದೆ. ಭಿತ್ತಿಯಲ್ಲಿ ಉಪಅಧಿಷ್ಠಾನವಿದ್ದು, ತ್ರಿಪಟ್ಟ ಕುಮುದ, ಪ್ರತಿ, ಕಂಠ, ಕಪೋತ, ಕಿರಿದಾದ ಭಿತ್ತಿ, ಊರ್ದ್ವೋಪಾನಗಳಿಂದ ಕೂಡಿದೆ. ಭಿತ್ತಿ ತುಂಬಾ ಕಿರಿದಾಗಿದ್ದು, ಮೇಲ್ಭಾಗದಲ್ಲಿ ಹೊರಚಾಚಿರುವ ಕಪೋತಬಂಧವಿದೆ. ಇದರ ಮೇಲೆ ಶಾಲ ಮತ್ತು ಕೂಟದ ವಿನ್ಯಾಸವಿರುವ ದ್ವಿತಲದ ದ್ರಾವಿಡ ಮಾದರಿಯ ವಿಮಾನವಿದೆ. ಅಧಿಷ್ಠಾನದಲ್ಲಿ ಆನೆಯ ಸಾಲುಗಳು, ಆನೆಗಳನ್ನು ಪಳಗಿಸುತ್ತಿರುವುದು, ಆನೆಕಾಳಗ, ಪರಸ್ಪರ ಹೋರಾಡುತ್ತಿರುವ ಸಿಂಹಗಳು, ಆನೆಗಳು ವ್ಯಕ್ತಿಯೊಬ್ಬನನ್ನು ವಧಿಸುತ್ತಿರುವುದು ಮುಂತಾದ ಭಿನ್ನಭಿನ್ನವಾದ ಆನೆಗೆ ಸಂಬಂಧಪಟ್ಟ ವೈವಿಧ್ಯಮಯ ಉಬ್ಬುಶಿಲ್ಪಗಳಿವೆ. ಉಪಾನದ ತುದಿಯಲ್ಲಿ ಸಿಂಹ, ಮಂಗ, ಟಗರು ಹಾಗು ಮನುಷ್ಯರ ವಿವಿಧ ಭಂಗಿಯ ವಿನೋದದ ಸೂಕ್ಷ್ಮ ಶಿಲ್ಪಗಳನ್ನು ಬಿಡಿಸಿರುವುದು ಇಲ್ಲಿನ ಅಧಿಷ್ಠಾನದ ವಿಶೇಷವೆನ್ನಬಹುದು.

ನಂತರದ ಭಿತ್ತಿಭಾಗದಲ್ಲಿ ಕುದುರೆಗಳನ್ನು ಪಳಗಿಸುತ್ತಿರುವ, ಸವಾರಿ ಮಾಡುತ್ತಿರುವ ಸೈನಿಕರ ಸ್ಫುಟವಾದ ಉಬ್ಬುಶಿಲ್ಪಗಳನ್ನು ಬಿಡಿಸಲಾಗಿದೆ. ಈ ಶಿಲ್ಪಗಳು ಪ್ರಮಾಣಬದ್ಧ ರಚನೆಗಳಾಗಿದ್ದು, ಸೂಕ್ಷ್ಮ ಅಲಂಕರಣದಿಂದ ಕೂಡಿವೆ. ಕುದುರೆಗಳು ಮತ್ತು ವ್ಯಕ್ತಿಗಳು ವಿವಿಧ ಆಭರಣಗಳು ಮತ್ತು ವೇಷಭೂಷಣಗಳಿಂದ ಅಲಂಕೃತಗೊಂಡಿವೆ. ಮೇಲಿನ ಕಪೋತದ ತಳದಲ್ಲಿ ಊರ್ಧ್ವಬಲಭಾಗದಲ್ಲಿ ಮೊಗ್ಗಿನ ಸಾಲುಗಳ ರಚನೆಯನ್ನು ಬಿಡಿಸಲಾಗಿದೆ. ಇದರ ಕೈಪಿಡಿಯಲ್ಲಿ ಕೀರ್ತಿಮುಖವನ್ನು, ಅದರ ಬಾಯಿಂದ ಹೊರಟಿರುವ ಹಾರಗಳ ರಚನೆಯನ್ನು ಕಾಣಬಹುದು. ಮೇಲಿನ ಕಿರುಭಿತ್ತಿಯಲ್ಲಿರುವ ಸಾಲು ಶಿಲ್ಪಗಳಲ್ಲಿ ಮಂಟಪದಲ್ಲಿ ಕುಳಿತಿರುವ ಯತಿದಂಪತಿಗಳ, ಪೌರಾಣಿಕ ಘಟನಾವಳಿಗಳಿಗೆ ಸಂಬಂಧಪಟ್ಟ ಶಿಲ್ಪಗಳನ್ನು ಬಿಡಿಸಲಾಗಿದೆ. ಮೇಲಿನ ಕಪೋತದಲ್ಲೂ ಮೊಗ್ಗುಗಳ ಉಬ್ಬುಶಿಲ್ಪಗಳನ್ನು

ಸಾಲಾಗಿ ಬಿಡಿಸಲಾಗಿದೆ. ಸೂರು ಇಳಿಜಾರಾಗಿದೆ. ಗರ್ಭಗೃಹದ ಮೇಲಿರುವ ಶಿಖರವು ಜೀರ್ಣೋದ್ಧಾರಗೊಂಡಿದ್ದು, ಶಿಖರದ ಪ್ರತಿಹಂತವೂ ಶಾಲ ಮತ್ತು ಕೂಟಗಳ ರಚನೆಯನ್ನು ಹೊಂದಿದೆ. ಶಾಲ ಮತ್ತು ಕೂಟಗಳಲ್ಲಿ ಅರ್ಧಗಂಬಗಳ ರಚನೆಯಿದ್ದು, ದೇವಕೋಷ್ಠಗಳಿವೆ. ದೇವಕೋಷ್ಠಗಳಲ್ಲಿ ವಿಷ್ಣುವಿನ ಉಬ್ಬುಶಿಲ್ಪಗಳನ್ನು ಬಿಡಿಸಲಾಗಿದೆ. ಶಾಲ ಮತ್ತು ಕೂಟಗಳ ನಡುವೆ ಕುಂಭಪಂಜರಗಳ ಅಲಂಕರಣವಿದ್ದು, ಈ ಬಗೆಯ ಕುಂಭಪಂಜರಗಳ ಅಲಂಕರಣವನ್ನು ಹಂಪಿಯ ವಿಜಯವಿಠ್ಠಲ ದೇವಾಲಯ ಹಾಗು ಇನ್ನಿತರ ದೇವಾಲಯಗಳಲ್ಲಿ ಕಂಡುಬರುತ್ತವೆ. ಕುಂಭಪಂಜರ ಗಿಡ್ಡನೆಯ ಕಂಬವನ್ನು ಹೊಂದಿದ್ದು, ಮಕರದ ಅಲಂಕರಣವನ್ನು ಹೊಂದಿದೆ. ಇದೇ ರೀತಿ ಎರಡನೆಯ ತಲವೂ ಸಹ ಕಿರಿದಾಗುತ್ತಾ ಹೋಗುತ್ತದೆ. ನಂತರದ ತುದಿಯಲ್ಲಿ ಸ್ತೂಪಿಯಿದ್ದು, ನಾಲ್ಕು ಮುಖಗಳ ಗೂಡುಗಳಲ್ಲಿ ವಿಷ್ಣುವಿನ ಶಿಲ್ಪಗಳಿವೆ. ಇವುಗಳ ಮೇಲೆ ಕೀರ್ತಿಮುಖಗಳ ಅಲಂಕರಣವಿದೆ. ತುದಿಯಲ್ಲಿ ಶಿಲಾಕಳಸವನ್ನು ಅಳವಡಿಸಿದ್ದು, ಕಳಸದ ತಲದಲ್ಲಿ ಸುತ್ತಲೂ ಅರಳಿದ ಕಮಲದ ದಳಗಳನ್ನು ಬಿಡಿಸಲಾಗಿದೆ. ಹೀಗಾಗಿ ಈ ದೇವಾಲಯದ ವಿಮಾನವು ತಳದಿಂದ ತುದಿಯವರೆಗೂ ಸಂಪೂರ್ಣವಾಗಿ ಗ್ರಾನೈಟ್ ಶಿಲೆಯಿಂದ ನಿರ್ಮಿಸಲ್ಪಟ್ಟಿದೆ. ಹಾಗಾಗಿ ಚಿತ್ರದುರ್ಗ ಪಾಳೆಯಗಾರರ ಕಾಲದ ವಾಸ್ತು ರಚನೆಗಳಲ್ಲಿ ಈ ದೇವಾಲಯವು ಒಂದು ವಿಶಿಷ್ಟ ರಚನೆ ಎನ್ನಬಹುದು.

ಸಭಾಮಂಟಪದ ಹೊರಭಿತ್ತಿಯು ಸಹ ಅಧಿಷ್ಠಾನವನ್ನು ಹೊಂದಿದ್ದು, ಉಪಾನ, ವಕ್ರಬಂಧಕುಮುದ, ಕಂಠ ಹಾಗು ಕಪೋತಗಳಿಂದ ಕೂಡಿದೆ. ಹೊರಭಿತ್ತಿ ಸರಳ ರಚನೆಯಲ್ಲಿದ್ದು, ಮೇಲಿನ ಕೈಪಿಡಿ ಭಾಗದಲ್ಲಿ ಯಾಳ ಅಲಂಕರಣದ ಜಾಲಂದ್ರಗಳನ್ನು ಅಳವಡಿಸಲಾಗಿದೆ. ಸಭಾಮಂಟಪವು ಉತ್ತರ ಮತ್ತು ದಕ್ಷಿಣ ದಿಕ್ಕುಗಳಲ್ಲಿ ಪ್ರವೇಶದ್ವಾರವನ್ನು ಹೊಂದಿದೆ. ದಕ್ಷಿಣ ದಿಕ್ಕಿನ ಪ್ರವೇಶ ಮಂಟಪವು ಅಧಿಷ್ಠಾನ ಹಾಗು ಕಕ್ಷಾಸನದಿಂದ ಕೂಡಿದೆ. ಪ್ರವೇಶ ಮಂಟಪದಲ್ಲಿ ಅಳವಡಿಸಿರುವ ಕಂಬಗಳು ಘನಾಕೃತಿಯವು. ಈ ಬಗೆಯ ಕಂಬಗಳನ್ನು ಹಂಪಿಯಲ್ಲಿ ವಿಜಯನಗರದ ಆರಂಭ ಕಾಲದಲ್ಲಿ ಅಳವಡಿಸಿರುವುದನ್ನು ಕಾಣಬಹುದು. ಆದರೆ ಆ ಕಂಬಗಳ ಮುಖಭಾಗದಲ್ಲಿ ಉಬ್ಬುಶಿಲ್ಪಗಳಿಲ್ಲ. ಇಲ್ಲಿನ ಈ ಘನಾಕೃತಿಯ ಕಂಬಗಳ ಮೇಲೆ ಲೌಕಿಕ ಮತ್ತು ಅಲೌಕಿಕಕ್ಕೆ ಸಂಬಂಧಿಸಿದ ಅನೇಕ ಉಬ್ಬುಶಿಲ್ಪಗಳನ್ನು ರಚಿಸಲಾಗಿದೆ. ಈ ಶಿಲ್ಪಗಳಲ್ಲಿ ಭೈರವ, ಶ್ರೀವೈಷ್ಣವ, ಯತಿ, ಬಿಲ್ಲುಗಾರ, ಮಾರುತಿ, ಕೀರ್ತಿಮುಖ, ಗೋಪಾಲಕೃಷ್ಣ, ಬೇಟೆಗಾರ, ತಾಯಿ ಮಗುವನ್ನು ಎತ್ತಿಕೊಂಡಿರವುದು, ಕಾಲಭೈರವ, ಯಾಳ, ಗರುಡ ನಾಟ್ಯಲಕ್ಷ್ಮಿ, ನರಸಿಂಹ, ಗಣೇಶ, ಕಾಳಿಂಗಮರ್ದನ, ಪುರುಷಮೃಗ ಮುಂತಾದ ಮನಮೋಹಕ ಉಬ್ಬುಶಿಲ್ಪಗಳಿವೆ. ಗೋಪಾಲಕೃಷ್ಣ ಶಿಲ್ಪದ ಎಡ ತಳಭಾಗದಲ್ಲಿ ಸಿಂಹದ ಶಿಲ್ಪವಿದ್ದು, ಕೊಳಲಿನ ಗಾನಕ್ಕೆ ನರ್ತಿಸುವಂತಿದೆ. ಇದು ಇಲ್ಲಿನ

ವಿಶೇಷ ಹಾಗು ಶಿಲ್ಪಿಯ ಕಲ್ಪನೆಗೆ ಒಂದು ಉತ್ತಮ ಉದಾಹರಣೆ ಎನ್ನಬಹುದು. ಈ ಪ್ರವೇಶಮಂಟಪದ ಹೊಸ್ತಿಲಲ್ಲಿ ಇನ್ನೆರಡು ಕಂಬಗಳನ್ನು ನಿಲ್ಲಿಸಿರುವ ಶಿಲಾತೋರಣವಿದೆ. ಇದನ್ನು ನಾಯಕರಕಾಲದ ವಿಶೇಷ ರಚನೆ ಎನ್ನಬಹುದು. ಈ ಕಂಬಗಳ ಮೇಲೆ ಅರಸರ, ತಾಯಿ ಮತ್ತು ಮಗು, ಸಿಂಹ, ಗಿಳಿಯೊಂದಿಗೆ ಮಾತನಾಡುತ್ತಿರುವ ಸ್ತ್ರೀ, ಕಂಬದಲ್ಲಿ ಪ್ರತ್ಯೇಕವಾದ ನರಸಿಂಹ, ಹಂಸ, ಚಕ್ರ, ಶ್ರೀವೈಷ್ಣವ, ಯತಿ ಮುಂತಾದ ಉಬ್ಬುಶಿಲ್ಪಗಳಿವೆ. ಈ ತೋರಣವಿಲ್ಲದಿದ್ದರೂ ಸಹ ಪ್ರವೇಶಮಂಟಪ ಆಕರ್ಷಕವಾಗಿರುತ್ತಿತ್ತು. ಆದರೆ ಹೆಚ್ಚುವರಿಯಾಗಿ ಅಳವಡಿಸಿರುವ ಈ ತೋರಣ ಮಂಟಪದಿಂದಾಗಿ ಪ್ರವೇಶಮಂಟಪದ ಮುಂಭಾಗ ಸಂಕೀರ್ಣತೆಯಿಂದ ಕೂಡಿದೆ. ತೋರಣದ ಫಲಕದಲ್ಲಿ ಕೀರ್ತಿಮುಖದ ಅಲಂಕರಣವಿದ್ದು, ಅದರ ಎರಡೂ ತುದಿಗಳಲ್ಲಿ ಮಕರಣದ ಮುಖವನ್ನು ಬಿಡಿಸಲಾಗಿದೆ. ಈ ಪ್ರವೇಶ ಮಂಟಪದ ಕಂಬಗಳ ಬೋದುಗೆಯ ಪೀಠವು ಊರ್ಧ್ವ ವೃತ್ತ ಅಲಂಕರಣೆಯನ್ನು ಮತ್ತು ಚೌಕ ಅಲಂಕರಣೆಯನ್ನು ಹೊಂದಿದೆ. ಇದರ ತಳದಲ್ಲಿ ಕಂಬದ ಮೇಲಿರುವ ಪೀಠವೂ ಸಹ ವೃತ್ತ ರಚನೆಯದು. ಬೋದುಗೆಗಳು ಸುರುಳಿ ಅಲಂಕರಣವನ್ನು ಹೊಂದಿದ್ದು, ಭಾರಿ ಗಾತ್ರದವುಗಳಾಗಿವೆ. ಇವುಗಳ ಮೇಲೆ ಅಳವಡಿಸಿರುವ ಅಡ್ಡ ತೊಲೆಗಳು ಲತೆಗಳ ಅಲಂಕರಣದಿಂದ ಕೂಡಿವೆ. ತೊಲೆಗಳ ಮೇಲಿರುವ ಇಳಿಜಾರಾದ ಚಪ್ಪಡಿಗಳು ಸರಳ ರಚನೆಗಳಾಗಿವೆ. ಇತ್ತೀಚೆಗೆ ಮೇಲ್ಭಾಗದಲ್ಲಿ ಗಾರೆಯನ್ನು ತುಂಬಿ ಜೀರ್ಣೋದ್ಧಾರ ಮಾಡಲಾಗಿದೆ.

ಉತ್ತರದ ಪ್ರವೇಶ ಮಂಟಪವೂ ಸಹ ದಕ್ಷಿಣದ ಪ್ರವೇಶ ಮಂಟಪದಂತೆ ರಚನೆಗೊಂಡಿದೆ. ಇದು ಸಹ ಶಿಲಾತೋರಣವನ್ನು ಒಳಗೊಂಡಿದೆ. ಉತ್ತರ ಪ್ರವೇಶ ಮಂಟಪದ ದ್ವಾರದ ಅಧಿಷ್ಠಾನವು ಭಿನ್ನ ರಚನೆಯಾಗಿದ್ದು, ಉಪಾನ, ಭಿತ್ತಿ, ಕಪೋತಗಳಿಂದ ಕೂಡಿದೆ. ಭಿತ್ತಿಯಲ್ಲಿ ಹಂಸಗಳ ಸಾಲನ್ನು ಬಿಡಿಸಲಾಗಿದೆ. ಈ ಪ್ರವೇಶಮಂಟಪದ ಘನಾಕೃತಿಯ ಕಂಬಗಳ ಮೇಲೆ ಗರುಡ ವೈಷ್ಣವ ಯತಿಗಳು, ನಾಟ್ಯಲಕ್ಷ್ಮಿ, ನರಸಿಂಹ, ಯತಿ ಗಣೇಶ, ಕಾಳಿಂಗಮರ್ದನ, ಪುರುಷಮೃಗ, ಮೃದಂಗ ನುಡಿಸುತ್ತಿರುವ ಉಬ್ಬುಶಿಲ್ಪಗಳಿವೆ. ಇದೂ ಸಹ ಕಕ್ಷಾಸನ ಹೊಂದಿದ್ದು, ಪ್ರವೇಶದಲ್ಲಿ ಶಿಲಾತೋರಣವಿದೆ. ತೋರಣದ ಕಂಬಗಳಲ್ಲಿ ಶಂಖ, ಚಕ್ರ, ಮತ್ಸ್ಯಾವತಾರ, ರಾಣಿ, ವಿಷ್ಣು, ಆಂಜನೇಯ, ಕಪಿ, ಕಾಳಿಂಗಮರ್ದನ ಕೃಷ್ಣ, ಕಹಳೆ ನುಡಿಸುತ್ತಿರುವ ಬೇಟೆಗಾರ, ತಾಯಿ ಮತ್ತು ಮಗು ಹಾಗು ರಾಮಾನುಜಾಚಾರ್ಯರ ಉಬ್ಬುಶಿಲ್ಪಗಳಿವೆ. ತೋರಣಫಲಕವನ್ನು ಸಿಂಹಗಳು ಮತ್ತು ಅದರ ಕೆಳಗೆ ವ್ಯಕ್ತಿ ಒತ್ತಿ ನಿಂತಿರುವಂತೆ ಬಿಡಿಸಲಾಗಿದೆ. ಉತ್ತರ ಮತ್ತು ದಕ್ಷಿಣ ದಿಕ್ಕುಗಳ ಪ್ರವೇಶದ್ವಾರಗಳು ವೈಷ್ಣವ ದ್ವಾರಪಾಲಕರನ್ನು ಹೊಂದಿವೆ. ಈ ದ್ವಾರಪಾಲಕರ ಶಿಲ್ಪಗಳು

ತ್ರಿಭಂಗಿಯಲ್ಲಿದ್ದು ಕಿರೀಟಮುಕುಟವನ್ನು ಹೊಂದಿವೆ. ಬಾಗಿಲುವಾಡದಲ್ಲಿ ಲತಾಬಳ್ಳಿಗಳ ಅಲಂಕರಣ ಪಟ್ಟಿಕೆಗಳನ್ನು ಕಾಣಬಹುದು. ಲಲಾಟ ಬಿಂಬದಲ್ಲಿ ಗಜಲಕ್ಷ್ಮಿ ಶಿಲ್ಪವಿದೆ. ಪ್ರವೇಶದ್ವಾರದ ಎಡ ಮತ್ತು ಬಲಭಿತ್ತಿಯ ಮೂಲೆಗಳಲ್ಲಿ ಸ್ತ್ರೀಯರ ಉಬ್ಬುಶಿಲ್ಪಗಳಿದ್ದು, ಲತಾಬಳ್ಳಿಗಳ ವೃಕ್ಷವನ್ನು ಹಿಡಿದು ನಿಂತಿವೆ. ಈ ಶಿಲ್ಪಗಳು ತ್ರಿಭಂಗಿಯಲ್ಲಿದ್ದು, ಬಳುಕುವ ನೀಳವಾದ ಶರೀರವನ್ನು ಹೊಂದಿವೆ. ಕೇಶಾಲಂಕರಣ ಅಮೋಘವಾಗಿದೆ. ಈ ಸ್ತ್ರೀಶಿಲ್ಪಗಳು ವಿಜಯನಗರ ಕಾಲದ ಸ್ತ್ರೀಶಿಲ್ಪಗಳಿಗಿಂತಲೂ ಅಲಂಕರಣದಲ್ಲಿ ವಿಶೇಷವಾಗಿವೆ. ಅಂದರೆ ಹೊಯ್ಸಳ ಶಿಲ್ಪಗಳಿಂದ ಪ್ರಭಾವಿತವಾದಂತೆ ಕಾಣುತ್ತವೆ. ಈ ದೇವಾಲಯದಲ್ಲಿ ಕಂಡುಬರುವ ಎಲ್ಲಾ ಸ್ತ್ರೀಶಿಲ್ಪಗಳ ಕುಚಭಾಗಗಳು ಎದ್ದು ಕಾಣುವಂತೆ ಕಡೆದಿರುವುದು ವಿಶೇಷ. ದೇವಾಲಯವು ಎತ್ತರವಾಗಿದ್ದು, ರಚನೆಯಲ್ಲಿ ವಿಜಯನಗರದ ಕೊನೆಗಾಲದಲ್ಲಿ ನಿರ್ಮಾಣಗೊಂಡ ಹೊಸಪೇಟೆ ತಾಲ್ಲೂಕಿನ ತಿಮ್ಮಲಾಪುರದ ವೇಣುಗೋಪಾಲ ದೇವಾಲಯವನ್ನು ಹೆಚ್ಚಾಗಿ ಹೋಲುತ್ತದೆ. ಹಾಗು ಹಂಪೆಯ ಹಜಾರರಾಮನ ಗುಡಿಯ ಮಾದರಿಯಲ್ಲಿದೆ.

ಈ ದೇವಾಲಯ ವಿಜಯನಗರ ಶೈಲಿಯ ಮುಂದುವರಿಕೆಯ ವಾಸ್ತು ರಚನೆಯಾಗಿ ರೂಪುಗೊಂಡಿದೆ. ಹೀಗಾಗಿ ವಿಜಯನಗರದ ಶಿಲ್ಪಿಗಳ ಸಂತತಿಯವರೇ ಈ ದೇವಾಲಯವನ್ನೂ ಸಹ ನಿರ್ಮಾಣ ಮಾಡಿರಬೇಕೆಂದು ಭಾಸವಾಗುತ್ತದೆ. ಈ ದೇವಾಲಯದ ಅಸ್ತಿತ್ವದಿಂದಾಗಿ ಕೇವಲ ವಿಜಯನಗರ ಕಾಲಕ್ಕೆ ಭವ್ಯ ದೇವಾಲಯಗಳ ನಿರ್ಮಾಣ ನಿಂತುಹೋಗಲಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ವಿಜಯನಗರ ಶೈಲಿಯ ದೇವಾಲಯಗಳು ಪಾಳೆಯಗಾರರ ಕಾಲದಲ್ಲೂ ನಿರ್ಮಾಣಗೊಂಡಿದ್ದಕ್ಕೆ ಪ್ರಸ್ತುತ ದೇವಾಲಯವೇ ಮುಖ್ಯ ಸಾಕ್ಷಿ. ಅಂದರೆ ಪಾಳೆಯಗಾರರು ವಿಜಯನಗರದ ವಾಸ್ತು ಮತ್ತು ಕಲೆಯನ್ನು ಮುಂದುವರೆಸಿದ ಕೀರ್ತಿಗೆ ಭಾಜನರಾಗಿದ್ದಾರೆ. ಈ ಎಲ್ಲಾ ಹಿನ್ನೆಲೆಗಳ ದೃಷ್ಟಿಯಲ್ಲಿ ನೀರ್ಥಡಿಯ ರಂಗನಾಥ ದೇವಾಲಯ ಅಧ್ಯಯನದ ಪ್ರಮುಖ ಸ್ಮಾರಕವೆನ್ನಬಹುದು.

ದೇವಾಲಯವು ಪ್ರವೇಶಮಹಾದ್ವಾರವನ್ನು ಹೊಂದಿದ್ದು ಪ್ರಾಕಾರದಿಂದ ಕೂಡಿದೆ. ಪ್ರವೇಶ ಮಹಾದ್ವಾರವು ಒಳಭಾಗಕ್ಕಾದಂತೆ ಇಕ್ಕೆಲಗಳಲ್ಲಿ ಜಗತಿಯನ್ನು ಹೊಂದಿದೆ. ಮಹಾದ್ವಾರದ ಮೇಲೆ ಯಾವುದೇ ಗೋಪುರ ಅವಶೇಷಗಳು ಕಂಡುಬರುವುದಿಲ್ಲ. ಪ್ರವೇಶಮಹಾದ್ವಾರದ ಮುಂಭಾಗದ ಬಲಿಪೀಠದಲ್ಲಿ ದೀಪಸ್ತಂಭವನ್ನು ಅಳವಡಿಸಲಾಗಿದೆ. ಗರುಡಗಂಬದ ಪೀಠದಲ್ಲಿ ಗರ್ಭಗೃಹದ ದೇವರಿಗೆ ಅಭಿಮುಖವಾಗಿ ಹದಿನೈದು ದಂಪತಿಗಳ ಜೋಡಿ ಭಕ್ತ(ಪರಿವಾರಗೃಹ)ರುಗಳ ಉಬ್ಬುಶಿಲ್ಪಗಳನ್ನು ರಚಿಸಲಾಗಿದೆ. ಈ ಉಬ್ಬುಶಿಲ್ಪಗಳು ಈ ದೇವಾಲಯಕ್ಕೆ ಸಂಬಂಧಿಸಿದ ನಾಯಕ ಮನೆತನದ ಕುಟುಂಬ ಪರಿವಾರದವರ

ಉಬ್ಬುಶಿಲ್ಪಗಳಾಗಿವೆ. ವೇದಿಕೆಯ ಮೂರು ಸಾಲುಗಳಲ್ಲಿ ಕಡೆದಿರುವ ಈ ಉಬ್ಬುಶಿಲ್ಪಗಳ ಮೇಲಿನ ಸಾಲಿನಲ್ಲಿ ಇಬ್ಬಿಬ್ಬರು ಪತ್ನಿಯರನ್ನು ಒಳಗೊಂಡ ನಾಲ್ಕು ಕುಟುಂಬಗಳ ಉಬ್ಬುಶಿಲ್ಪಗಳಿದ್ದು, ಮಧ್ಯದ ಸಾಲಿನಲ್ಲಿ ಏಕಪತ್ನಿಯರನ್ನು ಹೊಂದಿದ ನಾಲ್ಕು ದಂಪತಿಗಳು ಹಾಗು ಇಬ್ಬರು ಪತ್ನಿಯರನ್ನು ಹೊಂದಿದ ಒಂದು ಕುಟುಂಬದ ಉಬ್ಬುಶಿಲ್ಪಗಳು, ಕೆಳಗಿನ ಸಾಲಿನಲ್ಲಿ ಏಕಪತ್ನಿಯರನ್ನು ಹೊಂದಿದ ಆರು ದಂಪತಿಗಳ ಉಬ್ಬುಶಿಲ್ಪಗಳಿವೆ. ಈ ದೇವಾಲಯದ ಬಾಹ್ಯ ವಿನ್ಯಾಸವು ಹೊಯ್ಸಳರ ನಂದಿತಾವರೆಯ ಅಮೃತಲಿಂಗ, ಮಾಣಿಕೇಶ್ವರ, ಹರಿಹರದ ಹರಿಹರೇಶ್ವರ ದೇವಾಲಯಗಳನ್ನು ನೆನಪಿಸುತ್ತದೆ. ಆದರೆ ಈ ದೇವಾಲಯಗಳಲ್ಲಿ ಕಂಡು ಬರುವ ಪ್ರೌಢಶಿಲ್ಪಗಳಾಗಲಿ, ಕುಸುರಿ ಶಿಲಾವಿನ್ಯಾಸಗಳಾಗಲಿ ಇಲ್ಲಿ ಕಂಡುಬರುವುದಿಲ್ಲ. ಆದಾಗ್ಯೂ ದೇವಾಲಯದ ಬಾಹ್ಯ ವಿನ್ಯಾಸದ ದೃಷ್ಟಿಯಿಂದ ಹೇಳುವುದಾದರೆ, ಆ ದೇವಾಲಯಗಳ ಪ್ರಭಾವ ಅಂದರೆ ಹೊಯ್ಸಳರ ಶೈಲಿಯ ಪ್ರಭಾವ ಇಲ್ಲಿ ಕಂಡುಬರುತ್ತದೆ.

ಈ ದೇವಾಲಯದ ಗರ್ಭಗೃಹದಲ್ಲಿ ಸುಮಾರು ನಾಲ್ಕು ಅಡಿ ಎತ್ತರದ ರಂಗನಾಥಸ್ವಾಮಿಯ ವಿಶೇಷ ಶಿಲ್ಪವಿದೆ. ಈ ಶಿಲ್ಪವು ವಾಸ್ತವಿಕವಾಗಿ ವರದರಾಜನ ಶಿಲ್ಪವಾಗಿದೆ.೨೨ ಇದರ ಮೇಲಿನ ಬಲಗೈಯಲ್ಲಿ ಚಕ್ರ, ಎಡಗೈಯಲ್ಲಿ ಶಂಖಗಳಿದ್ದರೆ, ಕೆಳಗಿನ ಬಲಗೈ ಅಭಯಹಸ್ತ, ಎಡಗೈ ವರದ ಹಸ್ತವಾಗಿದೆ. ಪ್ರತಿಮಾ ಲಕ್ಷಣಗಳ ಪ್ರಕಾರ ಈ ಶಿಲ್ಪವನ್ನು ವರದರಾಜನ ಶಿಲ್ಪವೆಂದು ಹೇಳಬೇಕಾಗುತ್ತದೆ. ಹಾರಗಳಿಂದ ಅಲಂಕೃತಗೊಂಡಿರುವ ಈ ಮೂರ್ತಿ ಕಾಲಿನಲ್ಲಿ ಕಡಗಗಳನ್ನು ಹೊಂದಿದೆ. ಪೀಠದಲ್ಲಿ ಅರಳಿದ ಕಮಲವನ್ನು ಬಿಡಿಸಲಾಗಿದೆ. ನೀಳವಾಗಿರುವ ಈ ಶಿಲ್ಪ ಕಪ್ಪುಶಿಲೆಯದಾಗಿದ್ದು, ಮೇಲಿನ ಪ್ರಭಾವಳಿಯಲ್ಲಿ ಕೀರ್ತಿಮುಖದ ಅಲಂಕರಣೆಯನ್ನು ಹೊಂದಿದೆ. ಅರ್ಧಮಂಟಪದ ಉತ್ತರ ದಕ್ಷಿಣ ದಿಕ್ಕುಗಳಲ್ಲಿದ್ದು, ಉತ್ತರದ ಕೊಠಡಿಯಲ್ಲಿ ಆಳ್ವಾರುಗಳ(೧೩) ಶಿಲ್ಪಗಳು, ದಕ್ಷಿಣದ ಕೊಠಡಿಯಲ್ಲಿ ಲಕ್ಷ್ಮಿಯ ಶಿಲ್ಪವಿದೆ. ಲಕ್ಷ್ಮಿಯ ಶಿಲ್ಪವು ಕಪ್ಪುಶಿಲೆಯದಾಗಿದ್ದು ತುಂಬಾ ಆಕರ್ಷಕವಾಗಿದೆ.

ಚಿತ್ರದುರ್ಗ ಪಾಳೆಯಪಟ್ಟಿನ ಮೂಲಪುರುಷನಾದ ಚಿತ್ರನಾಯಕರು ಹಂಪೆಯ ವಿರೂಪಾಕ್ಷ ದೇವಾಲಯದಲ್ಲಿ ಮಂತ್ರಪುಷ್ಪಗಳನ್ನು ಅರ್ಪಿಸುವ ಕೆಲಸದಲ್ಲಿದ್ದ ಕರೆಜೋಯಿಸರು ಮತ್ತು ವಿರೂಪಾಕ್ಷಜೋಯಿಸರೊಂದಿಗೆ ಸೇರಿ ನೀರ್ಥಡಿ ಗ್ರಾಮದಲ್ಲಿ ಅಹೋಬಲನರಸಿಂಹಸ್ವಾಮಿ ದೇವಾಲಯವನ್ನು ಕಟ್ಟಿಸಿದನಂತೆ. ನಂತರ ಈ ದೇವಾಲಯದಲ್ಲಿ ಸಾಲಿಗ್ರಾಮ ಪ್ರತಿಷ್ಠಾಪನ ಸಮಯದಲ್ಲಿ ಶ್ರೀರಂಗನಾಥಸ್ವಾಮಿ ಉದ್ಭವವಾದಾಗ, ಕ್ರಿ.ಶ. ೧೫೫೮ರಲ್ಲಿ ಮತ್ತಿತಿಮ್ಮಣ್ಣನಾಯಕ

ಶ್ರೀರಂಗನಾಥಸ್ವಾಮಿ ದೇವಾಲಯ ಕಟ್ಟಿಸಿದನೆಂದು ತಿಳಿಯುತ್ತದೆ. ಆದರೆ ಕ್ರಿ.ಶ.೧೬೩೪ರಲ್ಲಿ ತುರುಕರ ದಿಲಾವರ್‌ಖಾನನ ದಂಡು ಈ ದೇವಾಲಯವನ್ನು ಹಾಗು ದೇವರ ವಿಗ್ರಹವನ್ನು ಧ್ವಂಸಮಾಡಿದರು.[೨೪] ಆಗ ೧೬೯೮ರಲ್ಲಿ ಬಿಚ್ಚುಗತ್ತಿ ಭರಮಣ್ಣನಾಯಕ ತುರುಕರೊಂದಿಗೆ ಸಂಧಾನ ಮಾಡಿಕೊಂಡು, ಈ ದೇವಾಲಯವನ್ನು ದುರಸ್ತಿಗೊಳಿಸಿ, ಜೀರ್ಣೋದ್ಧಾರ ಮಾಡಿ, ಪುನಃ ದೇವತಾ ಪ್ರತಿಷ್ಠಾಪನೆ ಮಾಡಿ ಎಮ್ಮೆಹಟ್ಟಿ ಗ್ರಾಮವನ್ನು ಉಂಬಳಿ ನೀಡಿ ಶಾಸನ ಹಾಕಿಸಿದ.[೨೫] ಈ ಶಾಸನವನ್ನು ದೇವಾಲಯದ ಉತ್ತರದ ಪ್ರವೇಶಮಂಟಪದ ಹೊರಗೆ ಕಾಣಬಹುದು. ಈ ಶಾಸನದಲ್ಲಿ ದಾವಣಗೆರೆ ತಾಲ್ಲೂಕಿನ ನೀರ್ಥಡಿ ಗ್ರಾಮದಲ್ಲಿರುವ ಅಹೋಬಲನರಸಿಂಹಸ್ವಾಮಿ ದೇವಾಲಯವನ್ನು ಬಾದಷಹನ ದಂಡು ಬಂದು ಧ್ವಂಸ ಮಾಡಿ ದೇವರನ್ನು ಭಿನ್ನ ಮಾಡಿ ಹೋದರೆಂದೂ, ಭರಮಣ್ಣನಾಯಕ ದೇವರನ್ನು ಪುನಃ ಪ್ರತಿಷ್ಠಾಪಿಸಿ ಗುಡಿಯನ್ನು ಜೀರ್ಣೋದ್ಧಾರ ಮಾಡಿಸಿದ ಎಂದು ಉಕ್ತವಾಗಿದೆ.[೨೬]

೨. ಉತ್ಸವಾಂಬೆ ದೇವಾಲಯ

ಗ್ರಾಮ	:	ಚಿತ್ರದುರ್ಗ (ನಗರ)
ಸ್ಥಾನನಿರ್ದೇಶನ	:	ದೊಡ್ಡಪೇಟೆ-ಚಿಕ್ಕಪೇಟೆಗಳು ಹಾಗೂ ಬೆಟ್ಟಕ್ಕೆ ಹೋಗುವ ಮಾರ್ಗ ಸಂಧಿಸುವ ಸ್ಥಳ.
ಮುಖದಿಕ್ಕು	:	ಪೂರ್ವ
ಶಾಸನ ಮತ್ತು ಕಾಲ	:	ಮೂಲ-ಎರಡನೆಯ ಮದಕರಿನಾಯಕ(೧೬೬೫),
ದುರಸ್ತಿ	:	ಬಿಚ್ಚುಗತ್ತಿ ಭರಮಣ್ಣನಾಯಕ (೧೬೮೯-೧೭೨೧), ಮತ್ತು ಹಿರೇಮದಕರಿನಾಯಕ (೧೭೨೧-೧೭೪೮).
ನಿರ್ಮಾಣ ಸಾಮಾಗ್ರಿ	:	ಕಣಶಿಲೆ, ಇಟ್ಟಿಗೆ, ಗಾರೆ.
ವಾಸ್ತುಭಾಗಗಳು	:	ಗರ್ಭಗೃಹ, ಅಂತರಾಳ, ಸಭಾಮಂಟಪ, ಮುಖಮಂಟಪ, ಪ್ರಾಕಾರ, ಮಹಾದ್ವಾರಮಂಟಪ, ದ್ವಾರಗೋಪುರ, ದೀಪಸ್ತಂಭ, ಉಯ್ಯಾಲೆಕಂಬ.

ಚಿತ್ರದುರ್ಗ ಪಾಳೆಯಗಾರರ ಕಾಲದ ಮತ್ತೊಂದು ಪ್ರಸಿದ್ಧ ದೇವಾಲಯ ಎಂದರೆ ನಗರದ ಮಧ್ಯದಲ್ಲಿರುವ ಉತ್ಸವಾಂಬೆ ದೇವಾಲಯ. ಚಿತ್ರದುರ್ಗ ಸಂಸ್ಥಾನವನ್ನು ಆಳಿದ ಇಷ್ಟದೇವತೆ ಈ ಉಚ್ಚಂಗಿ ಎಲ್ಲಮ್ಮ. ಶಕವರ್ಷ ೧೪೮೦ ರಿಂದ ಸುಮಾರು ೨೧೧ ವರ್ಷಗಳ ಕಾಲ ಸುಧೀರ್ಘವಾಗಿ ಆಳಿದ ಕಾಮಗೇತಿ ವಂಶದವರ ಮನೆದೇವತೆಯಾಗಿದ್ದಳು.

ದೇವಾಲಯದ ಗರ್ಭಗೃಹವು ಒಂದು ಅಂಕಣದಲ್ಲಿದೆ. ಇದರ ನಾಲ್ಕು ಮೂಲೆಗಳಲ್ಲಿ ಕಂಬಗಳಿವೆ. ದ್ವಾರಬಂಧದಲ್ಲಿ ಶೈವ ದ್ವಾರಪಾಲಕರ ಶಿಲ್ಪಗಳಿದ್ದು, ದ್ವಾರಬಂಧಕ್ಕೆ ಕಂಚಿನ

ಹೊದಿಕೆಯಿರುವುದರಿಂದ ಮೂಲ ರಚನೆ ಕಾಣಿಸುವುದಿಲ್ಲ. ದ್ವಾರಬಂಧದ ಇಕ್ಕೆಲಗಳಲ್ಲಿ ಪೂರ್ಣಕುಂಭಗಳ, ಲಲಾಟಬಿಂಬದಲ್ಲಿ ಪುಷ್ಪಾಕೃತಿಯ ರಚನೆಗಳಿವೆ. ಇದು ಗಜವಕ್ತ್ರ ಜಲಪ್ರಣಾಳವನ್ನು ಹೊಂದಿದೆ.

ಅಂತರಾಳವು ಗರ್ಭಗೃಹಕ್ಕಿಂತ ಕಡಿಮೆ ಅಳತೆಯನ್ನು ಹೊಂದಿದ್ದು, ಅದರ ದ್ವಾರವು ರತ್ನಶಾಖೆ, ಲತಾಶಾಖೆ, ಸ್ತಂಭಶಾಖೆ ಹಾಗು ಪದ್ಮಶಾಖೆಗಳನ್ನು ಹೊಂದಿದೆ. ದ್ವಾರದ ಇಕ್ಕೆಲಗಳಲ್ಲಿ ಶೈವ ದ್ವಾರಪಾಲಕರ ಶಿಲ್ಪಗಳಿವೆ. ಆದರೆ ದ್ವಾರಬಂಧಕ್ಕೆ ಹಿತ್ತಾಳೆಯ ಹೊದಿಕೆ ಹಾಕಿರುವುದರಿಂದ ಮೂಲ ರಚನೆಗಳನ್ನು ಗುರುತಿಸಲು ಸಾಧ್ಯವಾಗುತ್ತಿಲ್ಲ.

ನವರಂಗ ಅಥವಾ ಸಭಾಮಂಟಪವು ವಿಶಾಲವಾಗಿದ್ದು, ಸುತ್ತಲೂ ಹತ್ತು ಗೋಡೆಗಂಬಗಳಿವೆ. ಮಧ್ಯ ಬೃಹತ್ ಗಾತ್ರದ ಆರು ಕಂಬಗಳು ನವರಂಗದ ಛತ್ತನ್ನು ಎತ್ತಿ ಹಿಡಿದಿವೆ. ಕಂಬಗಳು ಪೀಠ, ಕಾಂಡ, ಕುಂಭ, ಕಳಸ ಹಾಗು ಫಲಕಗಳನ್ನು ಹೊಂದಿದ್ದು, ಚಾಲುಕ್ಯರ ಶೈಲಿಯಲ್ಲಿವೆ. ಚಿಕ್ಕ ಪೀಠದ ಮೇಲಿರುವ ಈ ಕಂಬಗಳ ಕಾಂಡಭಾಗಗಳಲ್ಲಿ ಕೆಳಗೆ ಮತ್ತು ಮಧ್ಯ ಅಸಮ ಚೌಕಭಾಗಗಳಿದ್ದು, ಕೆಳ ಚೌಕದ ನಾಲ್ಕು ಮೂಲೆಗಳು ಎಲೆಯಾಕಾರದ ರಚನೆಯನ್ನು ಒಳಗೊಂಡಿವೆ. ಅದರ ಮೇಲೆ ಎಂಟು-ಹದಿನಾರು ಮುಖಗಳ ಲಂಬ ಮತ್ತು ಅಡ್ಡಪಟ್ಟಿಕೆಗಳಿದ್ದು, ಮೇಲ್ಭಾಗದಲ್ಲಿ ಸುರುಳಿಯಾಕಾರದ ಬೋದುಗೆಗಳಿವೆ. ಇಲ್ಲಿನ ಕಂಬಗಳ ಮೇಲೆ ಕಾಳಿಂಗಮರ್ದನ ಕೃಷ್ಣ, ಗಂಡಬೇರುಂಡ, ದೇವಿ, ಭಕ್ತ, ಹಾಲುಣಿಸುತ್ತಿರುವ ಹಸು, ನಾಗಮಂಡಲ, ಹಂಸ, ಪೂಜಾರಿ ಚೌಡಿಕೆ, ಆಂಜನೇಯ, ವೀಣಾವಾದಕಿ ಮುಂತಾದ ಉಬ್ಬುಶಿಲ್ಪಗಳಿವೆ. ನವರಂಗದ ಮಧ್ಯದ ಅಂಕಣದ ಛತ್ತಿನಲ್ಲಿ ಮೊಗಚಿ ಹಾಕಿದ ಅರಳು ಕಮಲಾಕೃತಿಯ ಭುವನೇಶ್ವರಿ ಅತ್ಯಂತ ಆಕರ್ಷಕವಾಗಿದೆ. ಛತ್ತಿನ ಎಂಟು ದಿಕ್ಕುಗಳಲ್ಲಿ ವಿವಿಧ ರೀತಿಯ ಪುಷ್ಪಗಳ ಅಲಂಕರಣೆಗಳಿವೆ. ಸಭಾಮಂಟಪವು ಮುಖಭಾಗದಲ್ಲಿ ಸಂಪೂರ್ಣ ತೆರೆದಿದ್ದು, ಅದರ ಗೋಡೆಗಳಲ್ಲಿ ಕೈಪಿಡಿ ರೀತಿಯ ರಚನೆಗಳಿವೆ.

ಮುಖಮಂಟಪವು ಸಭಾಮಂಟಪಕ್ಕಿಂತ ಎರಡು ಅಂಕಣ ದೊಡ್ಡದಾಗಿದ್ದು, ತನ್ನ ಭವ್ಯತೆ ಮತ್ತು ಗಾತ್ರದಿಂದಾಗಿ ಗಮನ ಸೆಳೆಯುತ್ತದೆ. ಎರಡೂ ಬದಿಯ ಹೆಚ್ಚುವರಿ ವಿಸ್ತೃತ ಅಂಕಣಗಳು ನವರಂಗದ ಮಟ್ಟದಲ್ಲಿದ್ದು, ಮಧ್ಯದ ಎರಡು ಅಂಕಣಗಳು ಪಾತಾಳಮಟ್ಟದಲ್ಲಿವೆ. ಅಂದರೆ ಮುಖಮಂಟಪ ಸಭಾಮಂಟಪಕ್ಕಿಂತ ಕೆಳಮಟ್ಟದಲ್ಲಿದೆ. ಇಲ್ಲಿಂದ ಸಭಾಮಂಟಪಕ್ಕೆ ತೆರಳಲು ಮೆಟ್ಟಿಲು(ಸೋಪಾನ)ಗಳಿವೆ. ಈ ಮಂಟಪದಲ್ಲಿ ನಾಲ್ಕು ಅರ್ಧಗಂಬಗಳು, ಎರಡು ಮೂಲೆಗಂಬಗಳು, ಎಂಟು ಸ್ವತಂತ್ರ ಕಂಬಗಳಿದ್ದು, ಇವುಗಳಲ್ಲಿ ಮಧ್ಯದ ನಾಲ್ಕು ಕಂಬಗಳು

ಬೃಹತ್ ಪ್ರಮಾಣ ಹಾಗು ಗಾತ್ರದಿಂದಾಗಿ ಗಮನ ಸೆಳೆಯುತ್ತವೆ. ಈ ಕಂಬಗಳು ಕೆಳಗೆ, ಮಧ್ಯ ಮತ್ತು ಮೇಲೆ ಅಸಮವಾದ ಚೌಕಭಾಗಗಳನ್ನು ಹೊಂದಿದ್ದು, ಕೆಳಭಾಗದಲ್ಲಿ ಹಾವಾಡಿಗ, ಹಠಯೋಗಿ, ಮೃದಂಗವಾದಕ, ಸಿಂಹ, ಗೊಲ್ಲ, ಪೂರ್ಣಕುಂಭ, ಬೇಡತಿ, ಛಾಮರಧಾರಿಣಿ, ಗಂಡಬೇರುಂಡ, ಕುಂಭಧಾರಿಣಿ, ವೀಣಾವಾದಕ, ಸೈನಿಕ, ಭಕ್ತ, ಗರುಡ, ಗಜಸವಾರ, ಕುಳಿತಸಿಂಹ, ನೃತ್ಯಗಾತಿ ಹಾಗು ವಿವಿಧ ಪುಷ್ಪಾಲಂಕಾರದ ಉಬ್ಬುಶಿಲ್ಪಗಳಿವೆ. ಮಧ್ಯದ ನಾಲ್ಕು ಕಂಬಗಳ ಮೇಲ್ಭಾಗದಲ್ಲಿ ನಾಲ್ಕು ಕಡೆ ಪುಷ್ಪಬೋದುಗೆ ಹಾಗು ನಾಲ್ಕು ಬದಿಗೆ ಸ್ತಂಭಮಂಟಪಗಳ ಅಲಂಕರಣೆ ಕಂಬದುದ್ದಕ್ಕೂ ಇರುವುದು ವಿಶೇಷವಾಗಿದೆ. ಈ ಮಂಟಪದ ಛತ್ತು ಸರಳ ಮತ್ತು ಸಮತಟ್ಟಾಗಿದ್ದು, ಎರಡೂ ಬದಿಯ ಅಂಕಣಗಳ ಮತ್ತು ನವರಂಗದ ಮುಂದಿನ ಅಧಿಷ್ಠಾನವು ಇಲ್ಲಿ ಗೋಚರಿಸುತ್ತದೆ. ಈ ಅಧಿಷ್ಠಾನದಲ್ಲಿ ಉಪಾನ, ತ್ರಿಪಟ್ಟ ಕುಮುದ, ಜಗತಿಗಳಿದ್ದು, ಉಪಾನವು ವಿಶೇಷವಾದ ಕಮಲಗಳ ಸಾಲಿನ ಅಲಂಕರಣೆಯಿಂದ ಆಕರ್ಷಕವಾಗಿ ಗೋಚರಿಸುತ್ತದೆ. ಜಗತಿಯೂ ಕೂಡ ಊರ್ಧ್ವ ಮುಖದಲ್ಲಿ ಸಾಲಾಗಿ ಕಂಗೂರಾಕೃತಿಗಳ ಅಲಂಕರಣೆಗಳನ್ನು ಹೊಂದಿದ್ದು, ಅದರ ಮೇಲ್ಭಾಗದಲ್ಲಿ ಅಲ್ಲಲ್ಲಿ ಚೈತ್ಯಾಕೃತಿಗಳಿವೆ. ನವರಂಗದ ಕುಮುದ ಭಾಗವು ಅರೆವೃತ್ತಾಕಾರದಲ್ಲಿದ್ದು, ಮುಖಪಟ್ಟಿಕೆಯಲ್ಲಿ ರತ್ನದಾಕೃತಿಯ ಅಲಂಕರಣೆಯ ಸಾಲು ಇದೆ.

ಹೊರಭಾಗದಲ್ಲಿ ದೇವಾಲಯವು ಏರುವಿನ್ಯಾಸದಲ್ಲಿ ಅಧಿಷ್ಠಾನ, ಭಿತ್ತಿ, ಕಪೋತ ಹಾಗು ಶಿಖರಗಳನ್ನು ಹೊಂದಿದೆ. ಮುಖಮಂಟಪವು ನವರಂಗಕ್ಕಿಂತ ಕೆಳಮಟ್ಟದಲ್ಲಿರುವುದರಿಂದ ದೇವಾಲಯದ ಭಿತ್ತಿಯನ್ನು ಸರಿದೂಗಿಸುವ ಉದ್ದೇಶದಿಂದ ಮುಖಮಂಟಪಕ್ಕೆ ಮಾತ್ರ ಎರಡು ಅಧಿಷ್ಠಾನಗಳನ್ನು ನಿರ್ಮಿಸಲಾಗಿದೆ. ಕೆಳ ಅಧಿಷ್ಠಾನವು ಮಂಚಬಂಧ ಶೈಲಿಯಲ್ಲಿದ್ದು, ಉಪಾನ, ಜಗತಿಗಳನ್ನೊಳಗೊಂಡಿದ್ದು ತಂಬಾ ಸರಳವಾಗಿದೆ. ಮೇಲಿನ ಅಧಿಷ್ಠಾನವು ಉಪಾನ, ಕುಮುದ ಮತ್ತು ಜಗತಿಗಳನ್ನೊಳಗೊಂಡು ಹೆಚ್ಚಿನ ಅಲಂಕರಣೆ ಹೊಂದಿದೆ. ಇದರ ಭಿತ್ತಿಯನ್ನು ಸಮವಾದ ಬೃಹತ್ ಕಲ್ಲುಗಳಿಂದ ನಿರ್ಮಿಸಲ್ಪಟ್ಟಿದ್ದು, ಯಾವುದೇ ಕೆತ್ತನೆಗಳಿಲ್ಲ. ಮಾಡಿನಲ್ಲಿ ಇಳಿಜಾರಾದ ಮುಂಜೂರು ಇದೆ. ಸಭಾಮಂಟಪದ ಭಿತ್ತಿಯ ಮೇಲೆ ಶಿವಲಿಂಗ ಪೂಜಿಸುವ ನರಶಾರ್ದೂಲ, ಜೋಡಿ ಆನೆ, ವಾನರ, ವೀರಭದ್ರ, ಮತ್ಸ್ಯಕನ್ಯೆ, ಕಾಳಿಂಗಮರ್ದನ ಕೃಷ್ಣ, ಮಿಥುನಶಿಲ್ಪ, ಹಂಸ, ಒಂದೇ ದೇಹ ಐದು ಮುಖಗಳ ಹಾಗು ಐದು ಭಂಗಿಗಳಲ್ಲಿ ಕಾಣುವ ಹಸು ಮುಂತಾದ ಉಬ್ಬುಶಿಲ್ಪಗಳಿವೆ. ಅಂತರಾಳದ ಮಾಡಿನಲ್ಲಿ ಕಂಗೂರಾಕೃತಿಗಳ ಸಾಲುಗಳ ರಚನೆಯಿದ್ದು, ಗರ್ಭಗೃಹದ ಮೇಲೆ ಫಾಂಸನ (ಕದಂಬನಾಗರ) ಶೈಲಿಯ ಕಲ್ಲಿನ ಶಿಖರವಿದೆ. ಈ ಶಿಖರದ ಮೇಲೆ ಚೌಕಾಕಾರದ

ಸ್ತೂಪಿಯಿದ್ದು, ಅದರ ನಾಲ್ಕು ಬದಿಗೆ ಕೀರ್ತಿ ಮುಖಗಳಿದ್ದರೆ, ಕೆಳಗೆ ನಾಲ್ಕು ಮೂಲೆಗಳಲ್ಲಿ ಸಿಂಹಗಳ ಶಿಲ್ಪಗಳಿವೆ. ಸುತ್ತಲೂ ವಿಶಾಲವಾದ ಪ್ರದಕ್ಷಿಣಾ ಪಥವಿದೆ.

ದೇವಾಲಯದ ಸುತ್ತಲೂ ಪ್ರಾಂಗಣವಿದೆ. ಎರಡನೆಯ ಮದಕರಿನಾಯಕನ ಕಾಲದಲ್ಲಿ ಇದು ಕೇವಲ ಇಪ್ಪತ್ತೆರಡು ಅಂಕಣಗಳಲ್ಲಿದ್ದು, ಬಿಚ್ಚುಗತ್ತಿ ಭರಮಣ್ಣನಾಯಕನ ಕಾಲದಲ್ಲಿ ೧೧೭ ಕಂಬಗಳ ೧೦೮ ಅಂಕಣಗಳು ನಿರ್ಮಾಣವಾದವು.[೨೭] ಪ್ರಾಕಾರವು ಬೃಹತ್ ಅಳತೆಕಲ್ಲುಗಳಿಂದ ನಿರ್ಮಾಣವಾಗಿದ್ದು ಕಂಬಗಳು ಮತ್ತು ಶಿಲಾಭಿತ್ತಿಗಳಲ್ಲಿ ಪೂಜಾರಿ ಚೌಡಿಕೆಯವನು, ಭರಮಣ್ಣನಾಯಕ ಮತ್ತು ಅವನ ಪುತ್ರರು, ವೀರನೊಬ್ಬನ ಸಮರವಿಜಯ, ಬೇಡರಕಣ್ಣಪ್ಪ ಮುಂತಾದ ಉಬ್ಬುಶಿಲ್ಪಗಳನ್ನು ಕೆತ್ತಲಾಗಿದೆ. ಈ ಪ್ರಾಕಾರಕ್ಕೆ ದೇವಾಲಯದ ಮುಂಭಾಗಕ್ಕೆ ಸರಿಹೊಂದುವಂತೆ ಉತ್ತರ ಮತ್ತು ದಕ್ಷಿಣ ದಿಕ್ಕಿಗೆ ಉಪಪ್ರವೇಶದ್ವಾರಗಳಿದ್ದು, ಪ್ರಧಾನ ದ್ವಾರಮಂಟಪ ಪೂರ್ವದಿಕ್ಕಿಗಿದೆ. ಪ್ರಾಕಾರದಲ್ಲಿ ಅಥವಾ ಮಹಾದ್ವಾರಮಂಟಪಕ್ಕೆ ಹೊಂದಿಕೊಂಡಂತೆ ದೇವಾಲಯಕ್ಕೆ ಅಭಿಮುಖವಾಗಿ ಎಡಬಲಕ್ಕೆ ಮಾತಂಗಿ, ಮಾವುರಾಣಿಯರು ಎಂದು ಕರೆಯುವ ಶಕ್ತಿದೇವತೆಯರ ಎರಡು ಚಿಕ್ಕ ಗುಡಿಗಳಿವೆ.

ಮಹಾದ್ವಾರವು ಪೂರ್ವಾಭಿಮುಖವಾಗಿದ್ದು ದ್ರಾವಿಡ ಶೈಲಿಯಲ್ಲಿದೆ. ಈ ಮಹಾದ್ವಾರ ಮಂಟಪವು ದೇವಾಲಯದ ಆವರಣಕ್ಕಿಂತ ನೆಲ ಹಂತದಲ್ಲಿದೆ. ಆವರಣಕ್ಕೆ ಹತ್ತಿ ಬರಲು ಮೆಟ್ಟಿಲುಗಳಿವೆ. ಈ ದ್ವಾರಮಂಟಪದ ಎರಡೂ ಬದಿಗೆ ಬೃಹತ್ ಬಾಗಿಲು ಚೌಕಟ್ಟುಗಳಿವೆ. ಚೌಕಟ್ಟುಗಳ ಮೇಲೆ ಪೂರ್ಣ ಕುಂಭಗಳ ಅಲಂಕರಣೆಯಿದ್ದು, ಪ್ರಧಾನ ಚೌಕಟ್ಟಿನ ಬದಿಯಲ್ಲಿ ಮತ್ತೊಂದು ವಿಶಿಷ್ಟ ಚೌಕಟ್ಟನ್ನು ರಚಿಸಲಾಗಿದೆ. ಎರಡೂ ಬದಿಯ ಕೆಳಭಾಗದಲ್ಲಿ ಬಳ್ಳಿಗಳನ್ನು ಹಿಡಿದು ಕೈಯಲ್ಲಿ ಮೇಲಕ್ಕೆತ್ತಿ ನಿಂತಿರುವ ಸ್ತ್ರೀಯರ ಉಬ್ಬುಶಿಲ್ಪಗಳಿವೆ. ಈ ಬಳ್ಳಿಯು ಪಟ್ಟಿಯುದ್ದಕ್ಕೂ ಮೇಲೇರಿದ್ದು, ಅದರ ಮೇಲ್ಭಾಗದಲ್ಲಿ ಪುಷ್ಪಬೋದುಗೆ, ಅದರ ಮೇಲೆ ಸಿಂಹದ ಆಕೃತಿಗಳ ರಚನೆಯನ್ನು ಕಾಣಬಹುದು. ಪ್ರಧಾನ ದ್ವಾರದ ಮಧ್ಯದಲ್ಲಿ ಜಗತಿಗಳಿದ್ದು ನಾಲ್ಕು ಬೃಹತ್ ಕಂಬಗಳನ್ನು ಹೊಂದಿದೆ. ಕಂಬಗಳ ಕಾಂಡಭಾಗಗಳಲ್ಲಿ ಕೆಳಗೆ, ಮಧ್ಯ ಮತ್ತು ಮೇಲೆ ಮೂರು ಅಸಮವಾದ ಚೌಕ ಭಾಗಗಳಿದ್ದು, ಇವುಗಳ ಮಧ್ಯದಲ್ಲಿ ಹದಿನಾರು ಮುಖಗಳ ಲಂಬಪಟ್ಟಿಕೆಗಳಿವೆ. ಕೆಳಗಿನ ಚೌಕಭಾಗಗಳಲ್ಲಿ ಆಂಜನೇಯ, ಶ್ರೀರಾಮ, ಗಜಾನನ, ಸರ್ಪ, ಹಾವಾಡಿಗ, ದೇವಿ, ಕುಳಿತಸಿಂಹ, ಸಿಂಹ, ಆನೆ, ಭಕ್ತ ಹಾಗು ವಿವಿಧ ಪುಷ್ಪಾಕೃತಿಗಳ ಉಬ್ಬುಶಿಲ್ಪಗಳಿವೆ. ಕಂಬಗಳ ಮೇಲ್ಭಾಗದಲ್ಲಿ ನಾಲ್ಕು ಬದಿಗೆ ಪುಷ್ಪಬೋದುಗೆಗಳಿವೆ.

ಮಹಾದ್ವಾರವು ದ್ವಿಶಾಖೆಗಳಲ್ಲಿದ್ದು, ಮೊದಲನೆಯದು ಲತಾಶಾಖೆ, ಎರಡನೆಯದು ಪುಷ್ಪಶಾಖೆ. ಇಕ್ಕೆಲಗಳಲ್ಲಿ ಶೈವದ್ವಾರಪಾಲಕರ, ಲಲಾಟಬಿಂಬದಲ್ಲಿ ಗಜಾನನ, ಉಬ್ಬುಶಿಲ್ಪಗಳಿವೆ.

ಮಹಾದ್ವಾರದ ಅಧಿಷ್ಠಾನವು ದೇವಾಲಯದ ಅಧಿಷ್ಠಾನದ ಮಾದರಿಯಲ್ಲಿದ್ದು, ಉಪಾನ, ಗಳ, ತ್ರಿಪಟ್ಟಕುಮುದ ಮತ್ತು ಅಲಂಕಾರಿಕ ಜಗತಿಗಳನ್ನೊಂದಿದೆ. ಅಧಿಷ್ಠಾನದ ಮೇಲ್ಭಾಗದ ಭಿತ್ತಿಯು ಮೂರು ಹಂತಗಳಲ್ಲಿದ್ದು, ಮೊದಲ ಹಂತದಲ್ಲಿ ಶಿಖರ ಮಾದರಿಗಳು, ಎರಡನೆಯ ಹಂತದಲ್ಲಿ ಮಂಟಪದ ಮಾದರಿಗಳು ಹಾಗು ದೇವತೆಗಳ ಶಿಲ್ಪಗಳಿದ್ದು, ಮೂರನೆಯ ಹಂತವು ಸರಳವಾಗಿದೆ. ದ್ವಾರಮಂಟಪದ ಮೇಲೆ ಒಂದು ಅಂತಸ್ತಿದ್ದು[೨೮] ಎರಡು ಬದಿಗೂ ಪ್ರತಿ ನಾಲ್ಕು ಅಂಕಣದ ಮಂಟಪಗಳನ್ನು ನಿರ್ಮಿಸಲಾಗಿದೆ. ಈ ಮಂಟಪಗಳ ಮೇಲೆ ಅಂತಸ್ತುಗಳಿವೆ. ಕೆಳಮಂಟಪಗಳಲ್ಲಿ ಒಟ್ಟು ಹತ್ತು ಕಂಬಗಳು ನಿಂತ ಸಿಂಹ ಶೈಲಿಯಲ್ಲಿ ರಚಿಸಲ್ಪಟ್ಟಿದ್ದು ಗಮನ ಸೆಳೆಯುತ್ತವೆ. ಮೇಲಿನ ಮಂಟಪದ ಮೊದಲಿನ ಸಾಲಿನ ಕಂಬಗಳೂ ಸಹ ವೃತ್ತಾಕಾರದ ವಿಶಿಷ್ಟ ರಚನೆಯಿಂದಾಗಿ ವಿಶೇಷವಾಗಿವೆ.

ದೇವಾಲಯದ ಮುಂದೆ ಏಕಶಿಲೆಯ ದೀಪಸ್ತಂಭವಿದ್ದು, ಅದರ ಕೆಳಭಾಗದಲ್ಲಿ ಕೆತ್ತಿರುವ ಮೂರ್ತಿಯನ್ನು ಕುಕ್ಕುಲಮ್ಮ ಎಂದು ಕರೆಯುತ್ತಾರೆ.[೨೯] ಇದರ ಮುಂದೆ ಅನತಿ ದೂರದಲ್ಲಿ ಉಯ್ಯಾಲೆ ಕಂಬವಿದೆ.

ದೇವಾಲಯದ ಗರ್ಭಗೃಹದ ಮಧ್ಯದಲ್ಲಿ ಉತ್ಸವಾಂಬೆಯ ಮೂರ್ತಿಯಿದೆ. ಆಕೆಯ ಬಲಪಾರ್ಶ್ವದ ಗೋಡೆಯ ಪಕ್ಕದಲ್ಲಿ ಪರಶುರಾಮನ ವಿಗ್ರಹವನ್ನು ಪ್ರತಿಷ್ಠಾಪಿಸಲಾಗಿದೆ.

ಕ್ರಿ.ಶ. ೧೬೬೫ರಲ್ಲಿ ಪೂಜಾರಿ ಕೆಂಚಯ್ಯ ಮತ್ತು ಚೌಡಿಕೆ ಸಿದ್ದಯ್ಯರ ಸಹಾಯದಿಂದ ಉಚ್ಚಂಗಿದುರ್ಗದಿಮದ ಉತ್ಸವಾಂಬೆಯ ಉತ್ಸವ ಮೂರ್ತಿಯನ್ನು ತರಿಸಿ, ತಾತ್ಕಾಲಿಕವಾಗಿ ಉತ್ಸವಾಂಬೆಯ ಮರದ ಗುಡಿಯನ್ನು ಕಟ್ಟಿಸಿ ಪ್ರತಿಷ್ಠಾಪಿಸಿದನು.[೩೦] ನಂತರ ಕ್ರಿ.ಶ. ೧೬೮೯ ರಿಂದ ೧೭೨೧ರವರೆಗೆ ಆಳ್ವಿಕೆ ಮಾಡಿದ ಬಿಚ್ಚುಗತ್ತಿ ಭರಮಣ್ಣನಾಯಕ ಮತ್ತು ೧೭೨೧ರಿಂದ ೧೭೪೮ರವರೆಗೆ ಅಳಿದ ಇವರ ಮಗ ಹಿರೇಮದಕರಿನಾಯಕರ ಕಾಲಾವಧಿಯಲ್ಲಿ ಚಿನ್ಮೂಲಾದ್ರಿಯ ತಪ್ಪಲಲ್ಲಿ ಈಗಿರುವ ಭವ್ಯವಾದ ಶಿಲಾದೇವಾಲಯವನ್ನು ನಿರ್ಮಿಸಿದರು.[೩೧] ಅಲ್ಲದೆ ಬಿಚ್ಚುಗತ್ತಿ ಭರಮಣ್ಣನಾಯಕ ತಲತಲಾಂತರದಿಂದ ನಡೆಯುವ ಈ ದೇವಿಯ ಚೌಡಿಕೆ ಸೇವೆಗಾಗಿ ಚೌಡಿಕೆ ಮನೆತನದವರಿಗೆ ಒಂದು ಚೌಡಿಕೆ ಮಾಡಿಸಿ ಕೊಟ್ಟು, ಅದರ ಮೇಲೆ ೩೩ ಸಾಲಿನ ಶಾಸನವನ್ನು ಕೆತ್ತಿಸಿದನೆಂದು ತಿಳಿದುಬಂದಿದೆ.[೩೨]

೩. ಚನ್ನಕೇಶವ ದೇವಾಲಯ

ಗ್ರಾಮ : ಚಿತ್ರದುರ್ಗ (ನಗರ)

ಸ್ಥಾನನಿರ್ದೇಶನ : ಚಿತ್ರದುರ್ಗದ ಪೂರ್ವ ದಿಕ್ಕಿನಲ್ಲಿನ ಚನ್ನಕೇಶವಪುರ ಬಡಾವಣೆ ಅಥವಾ ಗೋಸಾಯಿಮಠದ ಆಗ್ನೇಯ ದಿಕ್ಕಿನ ಕೆರೆಯ ಅಂಗಳದಲ್ಲಿ.

ಮುಖದಿಕ್ಕು : ಪೂರ್ವ

ಶಾಸನ ಮತ್ತು ಕಾಲ : ಚಿತ್ರದುರ್ಗ ಪಾಳೆಯಗಾರರು (ಬಹುಶಃ ರಾಜಾವೀರ ಮದಕರಿನಾಯಕ).

ನಿರ್ಮಾಣ ಸಾಮಾಗ್ರಿ : ಕಣಶಿಲೆ, ಇಟ್ಟಿಗೆ, ಗಾರೆ.

ವಾಸ್ತು ಭಾಗಗಳು : ಗರ್ಭಗೃಹ, ಅಂತರಾಳ, ನವರಂಗ ಮುಖಮಂಟಪ, ಪ್ರಾಕಾರ, ಮಹಾದ್ವಾರಮಂಟಪ, ದೀಪಸ್ತಂಭ, ಪುಷ್ಕರಣಿ.

ಚಿತ್ರದುರ್ಗ ನಗರದಲ್ಲಿರುವ ಪಾಳೆಯಗಾರರ ಪ್ರಮುಖ ದೇವಾಲಯಗಳಲ್ಲಿ ಚನ್ನಕೇಶವ ದೇವಾಲಯವೂ ಒಂದಾಗಿದೆ. ಪಾಳೆಯಗಾರರ ಕಾಲದ ಕಲೆ ಮತ್ತು ವಾಸ್ತುಶಿಲ್ಪ ವನ್ನು ತಿಳಿಯುಲು ಈ ದೇವಾಲಯ ಸಹಕಾರಿಯಾಗಿದೆ.

ದೇವಾಲಯದ ಗರ್ಭಗೃಹವು ನಾಲ್ಕು ಮೂಲೆಗಂಬಗಳನ್ನು ಹೊಂದಿದ್ದು ಸರಳವಾಗಿದೆ. ಇದರ ದ್ವಾರಬಾಗಿಲು ದ್ವಿಶಾಖೆಗಳಲ್ಲಿದ್ದು ಚೌಕಟ್ಟುಗಳು ಸರಳವಾಗಿವೆ. ಬಾಗಿಲ ಇಕ್ಕೆಲಗಳಲ್ಲಿ ವೃತ್ತಾಕಾರದ ಪುಷ್ಪದಳಗಳಿವೆ.

ಅಂತರಾಳವು ಎರಡು ಬದಿಯಲ್ಲಿ ಪುಟ್ಟ ಗರ್ಭಗೃಹಗಳನ್ನು ಹೊಂದಿದೆ. ಈ ಗರ್ಭಗೃಹಗಳ ಪ್ರವೇಶದ್ವಾರಗಳು ಅಂತರಾಳದಂತೆ ಸಭಾಮಂಟಪದಲ್ಲಿವೆ. ಅಂತರಾಳದ ದ್ವಾರಬಂಧದ ಇಕ್ಕೆಲಗಳಲ್ಲಿ ವೈಷ್ಣವ ದ್ವಾರಪಾಲಕರ ಶಿಲ್ಪಗಳಿದ್ದು, ಲಲಾಟಬಿಂಬದಲ್ಲಿ ಗಜಾನನ ಶಿಲ್ಪವಿದೆ.

ಸಭಾಮಂಟಪವು ಮೂರು ಸಾಲಿನಲ್ಲಿ ಒಟ್ಟು ಒಂಭತ್ತು ಅಂಕಣಗಳಲ್ಲಿದ್ದು, ಮಧ್ಯದಲ್ಲಿ ಆರು ಸ್ವತಂತ್ರ ಕಂಬಗಳು, ಎರಡು ಮೂಲೆಗಂಬಗಳು, ಎಂಟು ಅರ್ಧಗಂಬಗಳನ್ನು ಹೊಂದಿದೆ. ಕಂಬಗಳು ಪೀಠ, ಕಾಂಡ ಮತ್ತು ಬೋದುಗೆಗಳನ್ನೊಂದಿವೆ. ಪೀಠವು ಅಧಿಷ್ಠಾನ ಮಾದರಿಯಲ್ಲಿದ್ದು, ಉಪಾನ, ಕುಮುದ ಮತ್ತು ಜಗತಿಗಳನ್ನು ಹೊಂದಿದೆ. ಪೀಠಭಾಗದಲ್ಲಿ ನಾಲ್ಕು ಬದಿಗೆ ವಿವಿಧ ಪುಷ್ಪಾಕೃತಿಗಳ ಅಲಂಕರಣೆಯಿದೆ. ಕಾಂಡ ಭಾಗದಲ್ಲಿ ಕೆಳಗೆ ಮತ್ತು ಮೇಲೆ ಅಸಮವಾದ ಚೌಕಭಾಗಗಳು, ಮಧ್ಯದಲ್ಲಿ ಎಂಟು-ಹದಿನಾರು ಮುಖಗಳ ಲಂಬಪಟ್ಟಿಕೆಗಳಿವೆ. ಕೆಳಚೌಕ ಭಾಗದಲ್ಲಿ ಗಣೇಶ, ಶಿವಭಕ್ತ, ನಂದಿ, ಹಂಸ, ಯತಿ, ನರಸಿಂಹ, ಶಿವಲಿಂಗ, ವಿಷ್ಣು, ಗಂಡಬೇರುಂಡ ಹಾಗು ವಿವಿಧ ಪುಷ್ಪಾಕೃತಿಗಳ ಉಬ್ಬುಶಿಲ್ಪಗಳಿವೆ. ಮೇಲೆ ಕುಂಭ, ಕಳಸ ಭಾಗಗಳಿದ್ದು, ಚಾಲುಕ್ಯ ಶೈಲಿಯನ್ನು ಹೋಲುತ್ತವೆ. ಮೇಲ್ಭಾಗದಲ್ಲಿ ನಾಲ್ಕು ಬದಿಗೆ ಸುರುಳಿಯಾಕಾರದ ಬೋದುಗೆಗಳಿವೆ. ಆದರೆ ಈ ಸಭಾಮಂಟಪದ ಪ್ರವೇಶದ್ವಾರದ ನಾಲ್ಕು ಕಂಬಗಳು ಸರಳವಾಗಿದ್ದರೂ, ಬೋದುಗೆಗಳು ಮಾತ್ರ ಪುಷ್ಪಬೋದುಗೆಗಳಾಗಿದ್ದು, ವಿಜಯನಗರ ಶೈಲಿಯ ಕಂಬಗಳನ್ನು ನೆನಪಿಸುತ್ತವೆ.

ಮುಖಮಂಟಪವು ಗರ್ಭಗೃಹ, ಅಂತರಾಳ, ನವರಂಗ ಮಂಟಪಗಳಿಗಿಂತ ಎರಡು ಅಡಿ ಕೆಳಮಟ್ಟದಲ್ಲಿದ್ದು, ನವರಂಗಕ್ಕೆ ಹತ್ತಿ ಹೋಗಲು ಮೂರು ಮೆಟ್ಟಿಲುಗಳಿವೆ. ಇಲ್ಲಿ ಪ್ರತಿಸಾಲಿನಲ್ಲಿ ಐದರಂತೆ, ಎರಡು ಸಾಲಿನಲ್ಲಿ ಒಟ್ಟು ಹತ್ತು ಅಂಕಣಗಳಿದ್ದು, ನವರಂಗದ ಎರಡು ಬದಿಗೆ ಒಂದೊಂದು ಅಂಕಣಗಳ ಹೆಚ್ಚಿನ ವಿಸ್ತೀರ್ಣತೆಯನ್ನು ಹೊಂದಿದೆ. ಈ ಮುಖಮಂಟಪವು ಮುಂಬದಿಯನ್ನು ಹೊರತುಪಡಿಸಿ, ಎರಡು ಬದಿಗೆ ಬೃಹತ್ ಅಳತೆಕಲ್ಲುಗಳಿಂದ ನಿರ್ಮಿಸಿದ ಭಿತ್ತಿಯನ್ನು ಹೊಂದಿದೆ. ಇಲ್ಲಿನ ಮುಖಭಾಗ ಮತ್ತು ಹಿಂಭಾಗಕ್ಕೆ ಪ್ರತಿ ಸಾಲಿನಲ್ಲಿ ನಾಲ್ಕರಂತೆ, ಎರಡು ಸಾಲಿನಲ್ಲಿ ಎಂಟು ಸ್ವತಂತ್ರ ಕಂಬಗಳಿದ್ದು, ಮೊದಲ ಸಾಲಿನ ಕಂಬಗಳು ಎತ್ತರವಾದ ಏಕಶಿಲಾ ಸ್ತಂಭಗಳಾಗಿವೆ. ಈ ಕಂಬಗಳ ಇಡೀ ಕಾಂಡವು ಕೆಳಗೆ ಆಯತಾಕಾರದ ಚೌಕಭಾಗ, ಮೇಲೆ ದೀರ್ಘವಾದ ಹದಿನಾರು ಮುಖಗಳ ಲಂಬಪಟ್ಟಿಕೆಗಳಿದ್ದು, ಅದರ ಮೇಲೆ ಚಚ್ಚೌಕದ ಕಿರುಭಾಗವಿದೆ. ಇದೇ ಸಾಲಿನ ಮಧ್ಯದ ಎರಡು ಕಂಬಗಳಲ್ಲಿ ಸಾಮಾನ್ಯವಾದ ಬೋದುಗೆಗಳಿದ್ದರೆ, ಬದಿಯ ಎರಡು ಕಂಬಗಳು ಪುಷ್ಪಬೋದುಗೆಗಳನ್ನೊಂದಿವೆ. ಎರಡನೆಯ ಸಾಲಿನ ಕಂಬಗಳು ಮೊದಲ ಸಾಲಿನ ಮಧ್ಯದ ಎರಡು ಕಂಬಗಳಂತಿವೆ. ಈ ಎಲ್ಲಾ ಕಂಬಗಳ ಕಾಂಡಭಾಗದ ನಾಲ್ಕು ಚೌಕಭಾಗಗಳ ಮೇಲೆ ಆನೆಸವಾರ, ಗರುಡ, ಆಂಜನೇಯ, ಸಿಂಹ, ಮೂರುಮುಖ ಒಂದೇ ದೇಹದ ಜಿಂಕೆ, ಕಳಸ ಮುಂತಾದ ಉಬ್ಬುಶಿಲ್ಪಗಳಿವೆ. ಈ ಮಂಟಪದ ಛತ್ತನ್ನು ಇತ್ತೀಚೆಗೆ ಪುನರ್ ನವೀಕರಿಸಲಾಗಿದೆ. ಭಿತ್ತಿ ಮಾತ್ರ ಮೂಲದ್ದಾಗಿದ್ದು ಸರಳವಾಗಿದೆ.

ಗರ್ಭಗೃಹ, ಅಂತರಾಳ ಹಾಗು ಸಭಾಮಂಟಪಕ್ಕೆ ಮಂಚಬಂಧ ಶೈಲಿ ಅಧಿಷ್ಠಾನವಿದ್ದು, ಅದರಲ್ಲಿ ಉಪಾನ, ಗಳ ಮತ್ತು ಕಪೋತ ಭಾಗಗಳಿವೆ. ಭಿತ್ತಿ ಸರಳವಾಗಿದ್ದು, ಬೃಹತ್ ಅಳತೆಕಲ್ಲುಗಳಿಂದ ನಿರ್ಮಾಣಗೊಂಡಿದೆ. ಅಂತರಾಳದ ಎಡಬದಿಯ ಭಿತ್ತಿಯ ಮೇಲೆ ಹಾವಾಡಿಗನ ಉಬ್ಬು ಶಿಲ್ಪವಿದೆ. ಮಾಡಿನಲ್ಲಿ ಕಲ್ಲಿನ ಹಲಗೆಯ ಮುಂಜೂರು ಇದ್ದು, ಅದರ ಮೇಲ್ಭಾಗದಲ್ಲಿ ಮಾಡಿನ ಅಂಚಿನುದ್ದಕ್ಕೂ ಇಟ್ಟಿಗೆ, ಗಾರೆಯಿಂದ ನಿರ್ಮಿಸಿರುವ ಕಂಗೂರಾಕೃತಿಗಳ ಸಾಲುಗಳಿವೆ. ಈ ದೇವಾಲಯದ ವಾಸ್ತು ಲಕ್ಷಣಗಳನ್ನು ಅವಲೋಕಿಸಿದಾಗ ಮುಖಮಂಟಪವನ್ನು ನಂತರದ ಕಾಲದಲ್ಲಿ ರಚಿಸಿದ್ದೆಂದು ತೋರುತ್ತದೆ. ಕಾರಣ ಇದಕ್ಕೆ ಅಧಿಷ್ಠಾನವಿಲ್ಲ. ಸುತ್ತಲೂ ಪ್ರಾಕಾರವಿದ್ದು, ಅದಕ್ಕೆ ಸಂಖ್ಯಾರೀತಿಯಲ್ಲಿ ಕಲ್ಲುಗಳನ್ನು ಜೋಡಿಸಲಾಗಿದೆ. ಈ ಪ್ರಾಂಗಣದ ಬಲಭಾಗದಲ್ಲಿ ಶ್ರೀದೇವಿ–ಭೂದೇವಿಯರ ಗುಡಿಗಳಿದ್ದು, ಎದುರಿಗೆ ನವಗ್ರಹ ಕಟ್ಟೆಯಿದೆ. ಎಡಮೂಲೆಯಲ್ಲಿ ದಕ್ಷಿಣಾಭಿಮುಖವಾಗಿ ಲಕ್ಷ್ಮಿಯ ಚಿಕ್ಕ ಗುಡಿಯಿದ್ದು, ದ್ವಾರದ ಇಕ್ಕೆಲಗಳಲ್ಲಿ ವೈಷ್ಣವ ದ್ವಾರಪಾಲಕರ ಶಿಲ್ಪಗಳಿವೆ.

ಮಹಾದ್ವಾರಮಂಟಪವು ಪ್ರತಿ ಭಾಗದಲ್ಲಿ ಮೂರು ಅಂಕಣಗಳಂತೆ ಎರಡು ಭಾಗಗಳಲ್ಲಿದೆ. ಮೊದಲ ಅಥವಾ ಹೊರಭಾಗದ ಮೂರು ಅಂಕಣಗಳಲ್ಲಿ ಮಧ್ಯದ ಅಂಕಣ ಪ್ರವೇಶ ದಾರಿಯಾಗಿದೆ. ಉಳಿದ ಎರಡು ಅಂಕಣಗಳು ಕಟ್ಟೆಗಳಿಂದ ಕೂಡಿವೆ. ಪ್ರತಿ ಕಟ್ಟೆಯ ಎರಡು ಮೂಲೆಗೆ ನಾಲ್ಕು ಕಂಬಗಳಿದ್ದು, ಅವುಗಳ ಬೋದುಗೆಗಳು ಸ್ವಲ್ಪ ವಿಭಿನ್ನವಾಗಿವೆ. ಛತ್ತು ಸಮತಟ್ಟಾಗಿದೆ. ಒಳಭಾಗದ ಮಂಟಪದ ಅಂಕಣಗಳು ಸಹ ಎರಡು ಕಟ್ಟೆಗಳನ್ನು ಹೊಂದಿದ್ದು, ಮೊದಲ ಭಾಗದ ಮಂಟಪಗಳಿಗಿಂತ ಸ್ವಲ್ಪ ಕೆಳಮಟ್ಟದಲ್ಲಿವೆ. ಮಧ್ಯದಲ್ಲಿ ಪ್ರಾಂಗಣಕ್ಕೆ ಇಳಿದು ಹೋಗಲು ಮೆಟ್ಟಿಲುಗಳಿವೆ. ಈ ಮಂಟಪದ ಕಂಬಗಳು ಸಹ ವಿಭಿನ್ನವಾಗಿವೆ. ಈ ಪ್ರವೇಶ ಮಹಾದ್ವಾರ ಮಂಟಪದ ಇಕ್ಕೆಲಗಳಲ್ಲಿ ಸುರುಳಿಯಾಕಾರದ ಕೈಪಿಡಿಗಳಿವೆ. ಈ ಮಂಟಪದ ಎದುರಿಗೆ ಮೂವತ್ತು ಅಡಿ ಎತ್ತರವಾದ ಏಕಶಿಲಾ ದೀಪಸ್ತಂಭವಿದ್ದು, ಅದರ ಕೆಳಭಾಗದಲ್ಲಿ ಕೈಮುಗಿದು ನಿಂತಿರುವ ಗರುಡನ ಶಿಲ್ಪವಿದೆ. ಈ ದೇವಾಲಯದ ಹಿಂಭಾಗದಲ್ಲಿ ವಿಶಾಲವಾದ ಪುಷ್ಕರಣಿಯಿದೆ.

ದೇವಾಲಯದ ಗರ್ಭಗೃಹದಲ್ಲಿ ಪಂಚಲೋಹದ ಚನ್ನಕೇಶವನ ವಿಗ್ರಹವಿದೆ. ಇದು ತುಂಬಾ ಆಕರ್ಷಕವಾಗಿದೆ. ಅಂತರಾಳದ ಬಲಭಾಗದ ಉಪಗರ್ಭಗೃಹದಲ್ಲಿ ಈಶ್ವರ, ಎಡಭಾಗದ ಗರ್ಭಗೃಹದಲ್ಲಿ ಆಂಜನೇಯನ ಶಿಲ್ಪಗಳಿವೆ. ಹಾಗೆಯೆ ಮುಖಮಂಟಪದಿಂದ ಸಭಾಮಂಟಪಕ್ಕೆ ಹತ್ತಿ ಹೋಗುವ ಪ್ರವೇಶದ ಮೆಟ್ಟಿಲುಗಳ ಇಕ್ಕೆಲಗಳಲ್ಲಿ ಎತ್ತರವಾದ ಪೀಠದ ಮೇಲಿರುವ ೧.೧೫ ಮೀಟರ್ ಎತ್ತರ, ೧.೨೦ ಮೀಟರ್ ಉದ್ದ ಹಾಗು ೫೦ ಸೆ.ಮೀ. ದಪ್ಪದ ಏಕಶಿಲೆಯ ಕುದುರೆಗಳ ಪ್ರತಿಮೆಗಳಿವೆ. ಇವು ಕಪ್ಪುಕಣಶಿಲೆಯಿಂದ ನಿರ್ಮಿಸಲ್ಪಟ್ಟಿದ್ದು, ತುಂಬಾ ಆಕರ್ಷಕವಾಗಿವೆ. ಇವು ನಿಂತಭಂಗಿಯಲ್ಲಿದ್ದು ಜೀನು, ಥಡಿ, ಕೊರಳಲ್ಲಿ ಲೋಹದ ಸರಪಳಿ ಮಾದರಿ, ಗೆಜ್ಜೆಹಾರ, ಕಾಲ್ಕಡಗ, ಹಾರ ಮುಂತಾದುವುಗಳಿಂದ ಅಲಂಕೃತಗೊಂಡಿದೆ. ಹಾಗೆಯೆ ಈ ಕುದುರೆಗಳ ಇಕ್ಕೆಲಗಳಲ್ಲಿ ೭೦ ಸೆ.ಮೀ. ಎತ್ತರ, ೯೫ ಸಿ.ಮೀ. ಉದ್ದ, ೩೫ ಸೆ.ಮೀ. ದಪ್ಪವಿರುವ ಕಪ್ಪುಕಣಶಿಲೆಯ ಆನೆಗಳ ಶಿಲ್ಪಗಳು ಸಹ ಮನಮೋಹಕವಾಗಿವೆ. ಇವು ಕೂಡ ನಿಂತಭಂಗಿಯಲ್ಲಿದ್ದು, ಮೈಮೇಲೆ ಥಡಿ, ಕೊರಳಲ್ಲಿ ಗೆಜ್ಜೆಹಾರ, ತಲೆಯ ಮೇಲೆ ಪದಕಹಾರ, ಕಾಲ್ಕಡಗಗಳಿಂದ ಅಲಂಕೃತಗೊಂಡಿವೆ. ಮುಖಮಂಟಪದ ಎದುರಿಗೆ ಪ್ರಾಂಗಣದಲ್ಲಿ ಚಿಕ್ಕಮಂಟಪದಲ್ಲಿ ಗರ್ಭಗುಡಿಗೆ ಅಭಿಮುಖವಾಗಿ ಕೈಮುಗಿದು ಕುಳಿತಿರುವ ಗರುಡನ ವಿಗ್ರಹವಿದೆ.

ಈ ದೇವಾಲಯವು ಬಹುಶಃ ಚಿತ್ರದುರ್ಗದ ಕೊನೆಯ ಪಾಳೆಯಗಾರ ರಾಜಾವೀರ ಮದಕರಿನಾಯಕನ ಕಾಲದಲ್ಲಿ ನಿರ್ಮಿಸಲ್ಪಟ್ಟಿದೆ ಎಂಬುದು ದೇವಾಲಯದ ವಾಸ್ತು ಲಕ್ಷಣಗಳನ್ನು

ಅವಲೋಕಿಸಿದಾಗ ತಿಳಿದುಬರುತ್ತದೆ. ಅಲ್ಲದೆ ಇವನ ಬಳಿ ಸೇವೆಯಲ್ಲಿದ್ದ ಫೌಜುದಾರ ಗೋವಿಂದರಾಯ ಕ್ರಿ.ಶ.೧೮೦೮ರಲ್ಲಿ ಈ ದೇವಾಲಯವನ್ನು ಪೂರ್ಣಗೊಳಿಸಿದನೆಂದು ತಿಳಿದು ಬರುತ್ತದೆ.[೩೩] ಹಾಗಾಗಿ ರಾಜಾವೀರ ಮದಕರಿನಾಯಕನ ಕಾಲದಲ್ಲಿ ದೇವಾಲಯದ ನಿರ್ಮಾಣ ಅಪೂರ್ಣವಾಗಿತ್ತೆಂದು ತಿಳಿಯಬಹುದಾಗಿದೆ.

೪. ವೆಂಕಟರಮಣ ದೇವಾಲಯ

ಗ್ರಾಮ	:	ಚಿತ್ರದುರ್ಗ (ನಗರ)
ಸ್ಥಾನನಿರ್ದೇಶನ	:	ನಗರ ಹೊರವಲಯದ ಉತ್ತರ ದಿಕ್ಕಿನ ಚಿತ್ರದುರ್ಗ–ತುರುವನೂರು ರಸ್ತೆಯ ಬಲಗಡೆಗೆ.
ಮುಖದಿಕ್ಕು	:	ಪೂರ್ವ
ಶಾಸನ ಮತ್ತು ಕಾಲ	:	ಶಾಸನ : ಚಿತ್ರದುರ್ಗ ೩೧.
ಮೂಲ	:	ಎರಡನೆಯ ಮದಕರಿನಾಯಕ,
ಜೀರ್ಣೋದ್ಧಾರ	:	ಬಿಚ್ಚುಗತ್ತಿ ಭರಮಣ್ಣನಾಯಕ.
ನಿರ್ಮಾಣ ಸಾಮಾಗ್ರಿ	:	ಕಣಶಿಲೆ, ಇಟ್ಟಿಗೆ, ಗಾರೆ.
ವಾಸ್ತು ಭಾಗಗಳು	:	ಗರ್ಭಗೃಹ, ಅಂತರಾಳ, ಸಭಾಮಂಟಪ, ಮಹಾರಂಗಮಂಟಪ, ಗರುಡ ಮಂಟಪ, ಧ್ವಜಸ್ತಂಭ, ಬಲಿಪೀಠ, ಪ್ರಾಕಾರ, ಪ್ರಾಕಾರ ಮಂಟಪಗಳು, ದೀಪಸ್ತಂಭ.

ನಗರದ ಹೊರವಲಯದ ಉತ್ತರ ದಿಕ್ಕಿನಲ್ಲಿ ತುರುವನೂರು ರಸ್ತೆಯಲ್ಲಿರುವ ವೆಂಕಟರಮಣ ದೇವಾಲಯವು ಚಿತ್ರದುರ್ಗ ಪಾಳೆಯಗಾರರ ಪ್ರಮುಖ ದೇವಾಲಯಗಳಲ್ಲಿ ಒಂದಾಗಿದೆ. ಚಿತ್ರದುರ್ಗ ಪಾಳೆಯಗಾರರು ವಿಜಯನಗರ ಕಾಲದ ಕಲಾಶೈಲಿಯನ್ನು ಹೇಗೆ ಮುಂದುವರೆಸಿಕೊಂಡು ಬಂದರೆಂದು ತಿಳಿಸಿಕೊಡುವ ಪ್ರಮುಖ ದೇವಾಲಯವಾಗಿದೆ.

ದೇವಾಲಯದ ಗರ್ಭಗೃಹವು ಸರಳವಾಗಿದ್ದು, ಭಿತ್ತಿ ಮತ್ತು ದ್ವಾರಬಾಗಿಲಿಗೆ ಅಮೃತ ಶಿಲೆಯ ಹಾಸುಗಲ್ಲುಗಳನ್ನು ಹಾಕಿರುವುದರಿಂದ ಮೂಲ ರಚನೆ ಕಾಣಿಸುತ್ತಿಲ್ಲ. ಉಳಿದಂತೆ ಛತ್ತು ಸರಳವಾಗಿದೆ.

ಅಂತರಾಳವು ಸರಳ ಹಾಗು ಚಿಕ್ಕದಾಗಿದ್ದು, ದ್ವಾರಬಂಧದ ಇಕ್ಕೆಲಗಳಲ್ಲಿ ವೈಷ್ಣವ ದ್ವಾರಪಾಲಕರ ಶಿಲ್ಪಗಳಿವೆ. ಲಲಾಟಬಿಂಬದಲ್ಲಿ ಗಜಲಕ್ಷ್ಮಿಯ ಶಿಲ್ಪವಿದೆ. ಈ ಮಂಟಪದ ದ್ವಾರಬಂಧಕ್ಕೂ ಸಂಪೂರ್ಣವಾಗಿ ಹಿತ್ತಾಳೆಯ ಕವಚವನ್ನು ಹೊದಿಸಿರುವುದರಿಂದ ಮೂಲ ರಚನೆಗಳು ಗೋಚರಿಸುವುದಿಲ್ಲ.

ಸಭಾಮಂಟಪವು ದಕ್ಷಿಣಕ್ಕೆ ಪ್ರವೇಶದ್ವಾರವನ್ನು ಹೊಂದಿದ್ದು, ದ್ವಾರಬಂಧದ ಇಕ್ಕೆಲಗಳಲ್ಲಿ ವೈಷ್ಣವ ದ್ವಾರಪಾಲಕರ ಶಿಲ್ಪಗಳು, ಲಲಾಟಬಿಂಬದಲ್ಲಿ ಗಜಲಕ್ಷ್ಮಿಯ ಶಿಲ್ಪಗಳಿವೆ. ಈ ಶಿಲ್ಪಗಳು ತೀರಾ ಜಾನಪದೀಯ ಲಕ್ಷಣಗಳಿಂದ ಕೂಡಿದ್ದು ಪರಿಪೂರ್ಣವಾಗಿಲ್ಲ. ಈ ಮಂಟಪದ ಅಥವಾ ಅಂತರಾಳದ ದ್ವಾರಬಂಧದ ಬಲಬದಿಯ ಗೋಡೆಯಲ್ಲಿ, ಸಾಲಾಗಿ ಹನ್ನೆರಡು ಜನ ಆಳ್ವಾರರ ಮತ್ತು ವಿಶ್ವಕ್ಸೇನ(ಗಣೇಶ)ನ ಶಿಲ್ಪಗಳನ್ನು ಖಂಡರಿಸಲಾಗಿದೆ. ಇಲ್ಲಿ ಗಣೇಶನಿಗೆ ವಿಶ್ವರೂಪ ಕೊಟ್ಟಿರುವುದು ವಿಶೇಷವಾಗಿದೆ. ಅಂದರೆ ರಾಮಾನುಜಾಚಾರ್ಯರ ಶ್ರೀವೈಷ್ಣವ ಪಂಥದಲ್ಲಿ ಗಣೇಶನನ್ನು ವಿಶ್ವಕ್ಸೇನನ ರೂಪದಲ್ಲಿ ಆರಾಧಿಸಲಾಗುತ್ತದೆ. ಇವನನ್ನು ಚತುರ್ಭುಜವುಳ್ಳವನಾಗಿ, ಅವುಗಳಲ್ಲಿ ಶಂಖ, ಚಕ್ರ, ಅಭಯಹಸ್ತಗಳನ್ನು ಚಿತ್ರಿಸಿ ವಿಷ್ಣುರೂಪ ಕೊಟ್ಟಿರುವುದು, ಅದೂ ಅಲ್ಲದೇ ಹನ್ನೆರಡು ಜನ ವೈಷ್ಣವ ಆಳ್ವಾರರ ಜೊತೆಯಲ್ಲಿಯೇ ರಚಿಸಿರುವುದು ಅಪರೂಪದ್ದೆನಿಸುತ್ತದೆ. ಹಾಗೆಯೇ ಎಡಬದಿಯ ಭಿತ್ತಿಯ ಮೇಲೆ ಹಂಸ, ಲಕ್ಷ್ಮಿ, ರಥಸವಾರ, ಆನೆಕಾಳಗ, ಅದರ ಮೇಲೆ ಸವಾರರು, ವೀಣೆ ನುಡಿಸುತ್ತಿರುವ ನರಹಂಸ (ಮನುಷ್ಯನ ಮುಖ, ಕೈ ಮತ್ತು ಎದೆಗಳು, ದೇಹ ಪಕ್ಷಿಯದು), ನರಸಿಂಹ, ಧನುರ್ಧಾರಿ ದೇವತೆ, ಗಜಸವಾರರ ಉಬ್ಬುಶಿಲ್ಪಗಳಿವೆ.

ಸಭಾಮಂಟಪದ ಮಧ್ಯದಲ್ಲಿ ನಾಲ್ಕು ಸ್ವತಂತ್ರ ಕಂಬಗಳಿದ್ದು, ಪೀಠ, ಕಾಂಡ ಮತ್ತು ಬೋದುಗೆಗಳನ್ನು ಹೊಂದಿವೆ. ಪೀಠವು ಅಧಿಷ್ಠಾನ ಮಾದರಿಯಲ್ಲಿದ್ದು, ಉಪಾನ, ಕುಮುದ, ಹಾಗು ಕಪೋತಗಳನ್ನು ಹೊಂದಿದೆ. ಕಾಂಡ ಭಾಗದಲ್ಲಿ ಕೆಳಗೆ ಮಧ್ಯ ಮತ್ತು ಮೇಲೆ ಮೂರು ಅಸಮವಾದ ಚೌಕ ಭಾಗಗಳಿದ್ದು, ಅವುಗಳ ಮಧ್ಯದಲ್ಲಿ ಎಂಟು-ಹದಿನಾರು ಮುಖಗಳ ಲಂಬಪಟ್ಟಿಕೆಗಳಿವೆ. ಮೇಲೆ ನಾಲ್ಕು ಬದಿಗೆ ಪುಷ್ಪಬೋದುಗೆಗಳಿವೆ. ಕೆಳಭಾಗದ ಚೌಕಭಾಗಗಳಲ್ಲಿ ಕುಳಿತ ಸಿಂಹ, ಅವುಗಳ ಮೇಲೆ ಕಂಬದುದ್ದಕ್ಕೂ ಬಳ್ಳಿಯಾಕಾರ, ಮೂಲೆಗಳಲ್ಲಿ ಎಲೆಯಾಕಾರ, ಯತಿ, ಪುಷ್ಪ, ಎಲೆ, ಹಂಸ, ಚಂದ್ರ, ನಗ್ನಸ್ತ್ರೀ ಮುಂತಾದ ಉಬ್ಬುಶಿಲ್ಪಗಳ ರಚನೆಯಿದೆ. ಮಧ್ಯದ ಅಂಕಣದಲ್ಲಿ ಛತ್ತು ಆಕರ್ಷಕವಾಗಿದ್ದು ಮೊಗಚಿ ಹಾಕಿದ ಅರಳು ಕಮಲಾಕೃತಿಯ ಭುವನೇಶ್ವರಿಯಿದೆ.

ಸಭಾಮಂಟಪದ ನಂತರ ಮಹಾರಂಗಮಂಟಪವಿದ್ದು, ತನ್ನ ಭವ್ಯತೆಯಿಂದ ವಿಶೇಷ ಗಮನಸೆಳೆಯುತ್ತದೆ. ಇದು ಪ್ರತಿಸಾಲಿನಲ್ಲಿ ಐದರಂತೆ, ಐದು ಸಾಲಿನಲ್ಲಿ ಒಟ್ಟು ಇಪ್ಪತ್ತೈದು ಅಂಕಣಗಳಲ್ಲಿ ನಿರ್ಮಾಣಗೊಂಡಿದ್ದು ವಿಶೇಷವಾಗಿದೆ. ಮಧ್ಯದ ಒಂಭತ್ತು ಅಂಕಣಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ಅಂಕಣಗಳು ಸುತ್ತಲೂ ಕಟ್ಟೆಯನ್ನು ಹೊಂದಿವೆ. ಮಧ್ಯದ ಒಂಭತ್ತು ಅಂಕಣಗಳು ಮತ್ತು ಪ್ರವೇಶದ ಅಂಕಣ ಇಡೀ ದೇವಾಲಯದ ನೆಲಮಟ್ಟಕ್ಕಿಂತ

ಕೆಳಮಟ್ಟದಲ್ಲಿವೆ. ಈ ಕಟ್ಟೆಯ ಸುತ್ತಲೂ ಒಳಬದಿಯಲ್ಲಿ ಮಧ್ಯದಲ್ಲಿ ಎಂಟು, ನಾಲ್ಕು ಮೂಲೆಗಳಲ್ಲಿ ಒಂದೊಂದರಂತೆ ಒಟ್ಟು ಹನ್ನೆರಡು ಬೃಹತ್ ಕಂಬಗಳಿದ್ದು ದ್ವಿಕಾಂಡದಲ್ಲಿವೆ. ಇವುಗಳು ವಿಜಯನಗರ ಶೈಲಿಯ ಕಂಬಗಳಾಗಿವೆ. ಕಂಬಗಳ ಪ್ರಧಾನ ಕಾಂಡದಲ್ಲಿ ಕೆಳಗೆ, ಮಧ್ಯ ಮತ್ತು ಮೇಲೆ ಮೂರು ಅಸಮವಾದ ಚೌಕಭಾಗಗಳಿದ್ದು, ಇವುಗಳ ಮೇಲೆ ಯಾವುದೇ ಉಬ್ಬುಶಿಲ್ಪಗಳಿಲ್ಲ. ಉಪಕಾಂಡಗಳಲ್ಲಿ ಆನೆಯನ್ನು ಮರ್ಧಿಸುತ್ತಿರುವ ಸಿಂಹಗಳು, ಅದರ ಮೇಲೆ ಸವಾರರ ಶಿಲ್ಪಗಳಿವೆ. ಈ ಕಂಬಗಳ ಪ್ರಧಾನ ಕಾಂಡದ ಮೇಲ್ಭಾಗದಲ್ಲಿ ಸರಳ ಬೋದುಗೆಗಳಿದ್ದರೆ, ಉಪಕಾಂಡದ ಮೇಲೆ ಆಕರ್ಷಕವಾದ ಪುಷ್ಪಬೋದುಗೆಗಳಿವೆ. ಈ ಕಂಬಗಳು ಮತ್ತು ಭಿತ್ತಿನ ನಡುವೆ ಅಂತರವಿದ್ದು, ಪ್ರಾಯಶಃ ಗಾರೆಯ ಬಿಂಬಗಳನ್ನು ಮಾಡುವ ಉದ್ದೇಶದಿಂದ ನಿರ್ಮಿಸಿದ ಮಂಟಪಗಳಿವೆ. ಆದರೆ ಆ ಮಂಟಪಗಳಲ್ಲಿ ಯಾವುದೇ ಬಿಂಬಗಳಿಲ್ಲ. ಸರಿಸುಮಾರಾಗಿ ಬೃಹತ್ ಕಂಬಗಳ ಮೇಲ್ಭಾಗದಲ್ಲಿ ಕಿರಿದಾದ ಸಿಂಹಸ್ತಂಭಗಳನ್ನು, ಅವುಗಳ ಮೇಲೆ ಬೋದುಗೆಗಳನ್ನು ಅಳವಡಿಸಲಾಗಿದೆ. ನಾಲ್ಕು ಮೂಲೆಗಂಬಗಳ ಮೇಲ್ಭಾಗದಲ್ಲಿ ಕುಳಿತ ಮಂಗಗಳ ಶಿಲ್ಪಗಳಿವೆ. ಮಧ್ಯದ ಭಿತ್ತಿನಲ್ಲಿ ತುಂಬಾ ವಿಶಾಲವಾದ, ಆಳವಾದ ಮೊಗಚಿಹಾಕಿದ ಅರಳುಕಮಲದ ಭುವನೇಶ್ವರಿಯಿದ್ದು, ಅದರ ಮೊಗ್ಗು ತುಂಬಾ ದೊಡ್ಡದಾಗಿದೆ. ಪ್ರವೇಶದ್ವಾರವನ್ನು ಹೊರತುಪಡಿಸಿ ಸುತ್ತಲೂ ಭಿತ್ತಿಯಿದ್ದು, ಕಟ್ಟೆಯ ಮೇಲೆ ಉತ್ತರ ಮತ್ತು ದಕ್ಷಿಣ ದಿಕ್ಕುಗಳಲ್ಲಿ ಪ್ರವೇಶದ್ವಾರಗಳಿವೆ.

ದೇವಾಲಯವು ಅಧಿಷ್ಠಾನ ಭಿತ್ತಿ, ಕಪೋತ ಹಾಗು ಶಿಖರಗಳನ್ನು ಹೊಂದಿದೆ. ಅಧಿಷ್ಠಾನವು ಮಂಚಬಂಧ ಶೈಲಿಯಲ್ಲಿದ್ದು, ಉಪಾನ, ಕಪೋತಗಳಿಂದ ಕೂಡಿದೆ. ಉಪಾನ ಮತ್ತು ಕಪೋತದಲ್ಲಿ ಅಲ್ಲಲ್ಲಿ ಪರಸ್ಪರ ಅಭಿಮುಖವಾಗಿರುವ ಅರೆವೃತ್ತಾಕಾರದ ರಚನೆಯಿದ್ದು, ಭಿತ್ತಿ ಸರಳವಾಗಿದೆ. ಗರ್ಭಗೃಹದ ಮೇಲೆ ಇಟ್ಟಿಗೆ ಮತ್ತು ಗಾರೆಗಳಿಂದ ನಿರ್ಮಿಸಿದ ಶಿಖರವಿದ್ದು, ಸ್ತೂಪಿ ವೃತ್ತಾಕಾರವಾಗಿದೆ. ಶಿಖರದ ಕೆಳಮೂಲೆಯಲ್ಲಿ ನಾಲ್ಕು ದಿಕ್ಕುಗಳಿಗೆ ಸಿಂಹಗಳು, ಸ್ತೂಪಿಯಲ್ಲಿ ನಾಲ್ಕು ಬದಿಗೆ ಪ್ರಭಾವಳಿ ಮತ್ತು ಕೀರ್ತಿಮುಖಗಳಿವೆ. ಶಿಖರಕ್ಕೆ ಈಗ ಬಣ್ಣ ಬಳಿಯಲಾಗಿದೆ. ಗರ್ಭಗೃಹದ ಭಿತ್ತಿಯಲ್ಲಿ ಹಾವಾಡಿಗ ಮತ್ತು ಸರ್ಪದ ಉಬ್ಬುಶಿಲ್ಪಗಳಿವೆ. ಸಭಾಮಂಟಪದ ಭಿತ್ತಿಯು ಸರಳವಾಗಿದ್ದು, ದಕ್ಷಿಣ ಬದಿಯಲ್ಲಿ ಪ್ರವೇಶದ್ವಾರವನ್ನು ಹೊಂದಿದೆ. ಈ ದ್ವಾರವು ಮೂರು ಶಾಖೆಗಳಲ್ಲಿದ್ದು, ಇಕ್ಕೆಲಗಳಲ್ಲಿ ವೈಷ್ಣವ ದ್ವಾರಪಾಲಕರ ಶಿಲ್ಪಗಳಿವೆ. ಲಲಾಟಬಿಂಬದಲ್ಲಿ ಸರಳ ಪುಷ್ಪಾಕೃತಿಯ ಶಿಲ್ಪವಿದೆ. ಮಹಾರಂಗಮಂಟಪವು ಉತ್ತರ ಮತ್ತು ದಕ್ಷಿಣ ಬದಿಯಲ್ಲಿ ಪ್ರವೇಶದ್ವಾರಗಳನ್ನು ಹೊಂದಿದ್ದು, ಈ ದ್ವಾರಗಳು ಮೂರು ಶಾಖೆಗಳಲ್ಲಿದ್ದು, ಇಕ್ಕೆಲಗಳಲ್ಲಿ ವೈಷ್ಣವ ದ್ವಾರಪಾಲಕರ ಹಾಗು

ಲಲಾಟಬಿಂಬದಲ್ಲಿ ಸರಳ ಪುಷ್ಪಾಕೃತಿಗಳ ಶಿಲ್ಪಗಳಿವೆ. ಈ ಮಂಟಪದ ಉತ್ತರ ಬದಿಯ ಪ್ರವೇಶದ್ವಾರದ ಇಕ್ಕೆಲಗಳಲ್ಲಿ ಕುಳಿತ ಮಂಗಗಳ ಕಲ್ಲಿನ ಕೈಪಿಡಿಗಳಿವೆ.

ಮಾಡಿನ ಮೇಲಿನ ಕಂಗೂರಾಕೃತಿಗಳ ಸಾಲು, ಗೋಪುರ, ಗೋಪುರದ ಸುತ್ತಲಿನ ಕಟ್ಟೆಗಳು ನಂತರದ ಕಾಲದ ರಚನೆಗಳಾಗಿದ್ದು, ಇಸ್ಲಾಂ ಶೈಲಿಯನ್ನು ಹೋಲುತ್ತವೆ. ಇದು ಬಹುಶಃ ಟಿಪ್ಪುಸುಲ್ತಾನನ ಆಡಳಿತಾವಧಿಯಲ್ಲಿ ನಿರ್ಮಾಗೊಂಡಿರಬಹುದೆಂದು ಊಹಿಸಬಹುದು. ಉಳಿದಂತೆ ಈ ಮಂಟಪದ ಭಿತ್ತಿಯು ಸರಳವಾಗಿದೆ. ದೇವಾಲಯದ ಎಡಭಾಗಕ್ಕೆ ಹಿಂಬದಿಯಲ್ಲಿ ಚಿಕ್ಕ ಲಕ್ಷ್ಮಿಯ ಗುಡಿಯಿದೆ. ಬಲಭಾಗದಲ್ಲಿ ಪ್ರಾಕಾರ ಮಂಟಪಗಳಿವೆ. ಈ ಮಂಟಪಗಳು ಮೂಲ ರಚನೆಗಳಾಗಿದ್ದು, ವಿಜಯನಗರ ಶೈಲಿಯನ್ನು ನೆನಪಿಸುತ್ತವೆ. ಮಹಾರಂಗಮಂಟಪದ ಮುಂದಿನ ಪ್ರಾಂಗಣದಲ್ಲಿ ಗರುಡನ ಚಿಕ್ಕಗುಡಿ, ಅದರೆ ಹಿಂದೆ ಧ್ವಜಸ್ತಂಭ, ನಂತರದಲ್ಲಿ ಬಲಿಪೀಠವಿದೆ. ಪ್ರಾಕಾರದ ಹೊರಗಡೆ ಮಧ್ಯಮ ಪ್ರಮಾಣದ ದೀಪಸ್ತಂಭವಿದೆ.

ದೇವಾಲಯದ ಗರ್ಭಗೃಹದ ಮಧ್ಯಭಾಗದಲ್ಲಿ ಪೀಠದ ಮೇಲೆ ಶ್ರೀದೇವಿ-ಭೂದೇವಿ ಸಮೇತ ಕಪ್ಪುಶಿಲೆಯ ವೇಕಟೇಶ್ವರನ ವಿಗ್ರಹವಿದ್ದು, ಆಕರ್ಷಕವಾಗಿದೆ. ಈ ಪೀಠದ ಮೇಲೆ ಕಮಲಾಕೃತಿಯ ರಚನೆಯಿದೆ.

ಈ ದೇವಾಲಯವು ಬಿಚ್ಚುಗತ್ತಿ ಭರಮಣ್ಣನಾಯಕನ ಕಾಲದಲ್ಲಿ ರಚನೆಗೊಂಡಿತೆಂಬುದು ಪಿಳ್ಳೇಕೇರನಹಳ್ಳಿಯ ಆಂಜನೇಯ ದೇವಾಲಯದ ಮುಂಭಾಗದ ಶಾಸನದಿಂದ ತಿಳಿದುಬರುತ್ತದೆ.[೩೪]

೫. ಏಕನಾಥೇಶ್ವರಿ ದೇವಾಲಯ

ಗ್ರಾಮ	:	ಚಿತ್ರದುರ್ಗ (ಬೆಟ್ಟದಮೇಲೆ)
ಸ್ಥಾನ ನಿರ್ದೇಶನ	:	ಮೊದಲ ಸುತ್ತಿನಲ್ಲಿ ಝೇಂಡಾ ಬತೇರಿಯ ದಕ್ಷಿಣಕ್ಕೆ, ಅಥವಾ ಕೋಟೆಯ ಏಳನೆಯ ಮಹಾದ್ವಾರದ ನಂತರ ಉತ್ತರಕ್ಕೆ.
ಮುಖದಿಕ್ಕು	:	ಪೂರ್ವ
ಶಾಸನ ಮತ್ತು ಕಾಲ	:	ಮತ್ತಿತಿಮ್ಮಣ್ಣನಾಯಕ[೩೫]
ನಿರ್ಮಾಣ ಸಾಮಾಗ್ರಿ	:	ನೈಸರ್ಗಿಕ ಶಿಲೆ, ಇಟ್ಟಿಗೆ ಗಾರೆ.
ವಾಸ್ತುಭಾಗಗಳು	:	ಗವಿಗರ್ಭಗೃಹ, ಅಂತರಾಳ, ಮುಖಮಂಟಪ, ದೀಪಸ್ತಂಭ.

ಬೆಟ್ಟದ ತಪ್ಪಲಿನಲ್ಲಿರುವ ಈ ಗುಹಾಂತರ್ಗತ ದೇವಾಲಯವು ಚಿತ್ರದುರ್ಗ ಪಾಳೆಯ ಗಾರರ ಮನೆದೇವತೆಯ ಆಲಯವಾಗಿತ್ತು. ಇವರು ಯುದ್ಧಕ್ಕೆ ಹೋಗುವ ಮುನ್ನ ಈ ದೇವಿಯ ಅಪ್ಪಣೆಯನ್ನು ಪಡೆಯುತ್ತಿದ್ದರೆಂಬುದು ಜನಪದ ಸಾಹಿತ್ಯದಲ್ಲಿ ವರ್ಣಿಸಲಾಗಿದೆ.

ಮೇಲುದುರ್ಗದಲ್ಲಿರುವ ಈ ಏಕನಾಥೇಶ್ವರಿ ದೇವಾಲಯವು ನೈಸರ್ಗಿಕ ಏಕಶಿಲೆಯಿಂದ ನಿರ್ಮಿತವಾಗಿದೆ. ಈ ಗವಿಗರ್ಭಗೃಹದ ಬಾಗಿಲ ಇಕ್ಕೆಲಗಳಲ್ಲಿ ಸುಮಾರು ಮೂರು ಅಡಿ ಎತ್ತರದ ಶೈವದ್ವಾರಪಾಲಕರ ಶಿಲ್ಪಗಳಿದ್ದು, ಲಲಾಟಬಿಂಬದಲ್ಲಿ ಅರಳುಪುಷ್ಪಗಳಿವೆ. ಉಳಿದಂತೆ ದ್ವಾರವು ಸರಳವಾಗಿದ್ದು ಇಕ್ಕೆಲಗಳಲ್ಲಿ ಕಳಸಾಕಾರದ ಪೂರ್ಣಕುಂಭಗಳಿವೆ. ದ್ವಾರದ ಮುಂದೆ ಮತ್ತೊಂದು ದ್ವಾರ ಪಟ್ಟಿಕೆಯಿದ್ದು, ಸುತ್ತಲೂ ದೀಪದ ಗೂಡುಗಳಿವೆ. ಬಲಭಾಗಕ್ಕೆ ಭೈರವನ ಮೂರ್ತಿಯಿದೆ.

ಸುಖನಾಸಿ ಅಥವಾ ಅಂತರಾಳ ಸರಳವಾಗಿದ್ದು, ಇದು ಕೂಡ ನೈಸರ್ಗಿಕ ಗವಿಯಾಗಿದೆ. ಇದರ ನಂತರ ಮುಖಮಂಟಪವಿದ್ದು, ಅದರ ಪ್ರವೇಶಕ್ಕೆ ಆರು ಮೆಟ್ಟಿಲು ಗಳಿವೆ. ಇಕ್ಕೆಲಗಳಲ್ಲಿ ಸುರುಳಿಯಾಳಿಗಳ ಕೈಪಿಡಿಗಳಿವೆ. ಈ ಮಂಟಪವನ್ನು ಉಪಾನ, ಗಳ ಮತ್ತು ಕಪೋತಗಳ ಮಂಚಬಂಧ ಶೈಲಿಯ ಎರಡುವರೆ ಅಡಿ ಎತ್ತರದ ಅಧಿಷ್ಠಾನದ ಮೇಲೆ ನಿರ್ಮಿಸಲಾಗಿದೆ. ಅಧಿಷ್ಠಾನವು ತುಂಬಾ ಸರಳವಾಗಿದೆ. ಮಂಟಪದಲ್ಲಿ ಮೂರು ಸಾಲಿನಲ್ಲಿ ಎಂಟು ಸ್ವತಂತ್ರ ಕಂಬಗಳು, ಹತ್ತು ಗೋಡೆಗಂಬಗಳಿವೆ. ಮುಖಭಾಗದ ನಾಲ್ಕು ಕಂಬಗಳು ಮತ್ತು ಅದರ ಹಿಂದಿನ ಕಂಬಗಳು ತುಂಬಾ ಎತ್ತರವಾಗಿರುವುದು ವಿಶೇಷ. ಕಂಬಗಳ ಕಾಂಡಭಾಗದಲ್ಲಿ ಆಯತಾಕಾರದ ಭಾಗವಿದ್ದು, ಅದರ ಮೂಲೆಗಳು ಎಲೆಯ ಆಕೃತಿಯನ್ನು ಹೊಂದಿವೆ. ಅದರ ಮೇಲೆ ಎಂಟು ಹಾಗು ಹದಿನಾರು ಮುಖಗಳ ಲಂಬಪಟ್ಟಿಕೆಗಳಿವೆ. ಅದರ ತುತ್ತತುದಿಯಲ್ಲಿ ಚಚ್ಚೌಕ ಭಾಗವಿದ್ದು, ಕಂಬಗಳು ಕೆಳಗಿನಿಂದ ಮೇಲಕ್ಕೆ ಸಪೂರವಾಗಿವೆ. ಕಂಬಗಳ ಮೇಲ್ಭಾಗದಲ್ಲಿ ಸರಳವಾದ ಬೋದುಗೆಗಳಿವೆ. ಮಂಟಪದ ಛತ್ತು ಸಮತಟ್ಟಾಗಿದೆ. ಇದರ ನಂತರ ಚಿಕ್ಕಮಂಟಪ, ಅದರ ಹಿಂಭಾಗದಲ್ಲಿ ವಿಶಾಲವಾದ ಗವಿಯಿದ್ದು, ಅದು ಎರಡು ಭಾಗಗಳಾಗಿ ವಿಭಜನೆಯಾಗಿದೆ. ಮುಖಮಂಟಪದ ಮಾಡಿನಲ್ಲಿ ಇಟ್ಟಿಗೆ ಮತ್ತು ಗಾರೆಗಳಿಂದ ನಿರ್ಮಿಸಲಾದ ಕಂಗೂರಾಕೃತಿಗಳ ಸಾಲುಗಳಿದ್ದು, ಅವುಗಳ ಮೇಲೆ ಶಾಲ, ಕೂಟ, ಹಾರಗಳಿದ್ದು, ಶಾಲದಲ್ಲಿ ಪ್ರಧಾನ ದೇವಿಯ ಪ್ರತಿಕೃತಿಯಿದೆ. ಉಳಿದಂತೆ ಶಿಲ್ಪಗಳು ಭಗ್ನವಾಗಿದ್ದು, ಸ್ಪಷ್ಟವಾಗಿಲ್ಲ. ಇದರ ಮುಂದೆ ಚಿಕ್ಕ ದೀಪಸ್ತಂಭವಿದೆ.

ದೇವಾಲಯದ ಮುಂದೆ ಅತ್ಯಂತ ಕೆಳಭಾಗದಲ್ಲಿ ವಿಶಾಲ ಅಂಗಳದಲ್ಲಿ ನಲವತ್ತು ಅಡಿ ಎತ್ತರದ ಬೃಹತ್ ಏಕಶಿಲಾ ದೀಪಸ್ತಂಭವಿದ್ದು ಮೂರು ಅಡಿ ಎತ್ತರದ ಅಧಿಷ್ಠಾನದ ಮೇಲೆ ನಿರ್ಮಿಸಲಾಗಿದೆ.

ಗವಿಗರ್ಭಗೃಹದಲ್ಲಿ ಹುಟ್ಟುಬಂಡೆಯಲ್ಲಿ ಎರಡು ಅಡಿ ಎತ್ತರದಷ್ಟು ದೇವಿಯ ರುಂಡವನ್ನು ಕೆತ್ತಲಾಗಿದ್ದು, ದೇಹ ಸಂಪೂರ್ಣವಾಗಿ ಹೂತುಹೋಗಿದೆ. ಕಿರೀಟಧಾರಿಣಿಯಾಗಿರುವ

ದೇವಿಯ ಪಕ್ಕದಲ್ಲಿ ತ್ರಿಶೂಲ, ಡಮರು ಮತ್ತು ಖಡ್ಗಪಾಣಿಯಾದ ಕಾಳಿಕಾ ದೇವಿಯ ವಿಗ್ರಹವಿದೆ.

ಈ ದೇವಾಲಯವು ಚಿತ್ರದುರ್ಗದ ಮೊದಲನೆಯ ಪಾಳೆಯಗಾರನಾದ ಮತ್ತಿತಿಮ್ಮಣ್ಣನಾಯಕನಿಂದ ನಿರ್ಮಿಸಲ್ಪಟ್ಟಿದ್ದು, ನಂತರದ ಪಾಳೆಯಗಾರರಿಂದ ಪೋಷಿಸಲ್ಪಟ್ಟಿತೆಂದು ತಿಳಿದುಬಂದಿದೆ.

೬. ಗೋಪಾಲಸ್ವಾಮಿ ದೇವಾಲಯ

ಗ್ರಾಮ : ಚಿತ್ರದುರ್ಗ (ಬೆಟ್ಟ)

ಸ್ಥಾನನಿರ್ದೇಶನ : ಗರುಡಾಂಜನೇಯ ಬಾಗಿಲ ನಂತರ ಎತ್ತರವಾದ ದಿನ್ನೆಯ ಮೇಲೆ

ಮುಖದಿಕ್ಕು : ಪೂರ್ವ

ಶಾಸನ ಮತ್ತು ಕಾಲ : ಮೂಲ : ವಿಜಯನಗರ, ಜೀರ್ಣೋದ್ಧಾರ : ಪಾಳೆಯಗಾರರು.[೩೬]
ಶಾಸನ : ಚಿತ್ರದುರ್ಗ–೬

ನಿರ್ಮಾಣ ಸಾಮಾಗ್ರಿ : ಕಣಶಿಲೆ

ವಾಸ್ತುಭಾಗಗಳು : ಗರ್ಭಗೃಹ, ಅಂತರಾಳ, ಪ್ರದಕ್ಷಿಣಾಪಥ, ಗೂಢಮಂಟಪ, ಸಭಾಮಂಟಪ, ಮುಖಮಂಟಪ, ಪ್ರಾಕಾರ, ಬಲಿಪೀಠ, ಧ್ವಜಕಟ್ಟೆ

ಚಿತ್ರದುರ್ಗ ಬೆಟ್ಟದ ಮೇಲಿನ ಗೋಪಾಲಸ್ವಾಮಿ ಹೊಂಡದ ಮೇಲ್ಭಾಗದ ದಿಬ್ಬದ ಮೇಲಿರುವ ಈ ದೇವಾಲಯವು ದ್ರಾವಿಡ ಶೈಲಿಯಲ್ಲಿದೆ.[೩೭] ಈ ದೇವಾಲಯವು ತನ್ನ ಕಲಾ ವೈಶಿಷ್ಟ್ಯತೆಯಿಂದ ಎಲ್ಲರ ಗಮನ ಸೆಳೆಯುತ್ತದೆ. ಚಿತ್ರದುರ್ಗ ಪಾಳೆಯಗಾರರ ಕಾಲದಲ್ಲಿ ಜೀರ್ಣೋದ್ಧಾರಗೊಂಡ ದೇವಾಲಯಗಳಲ್ಲಿ ಇದೂ ಒಂದಾಗಿದೆ.

ಗರ್ಭಗೃಹದ ಸುತ್ತಲೂ ಇರುವ ಪ್ರದಕ್ಷಿಣಾ ಪಥಕ್ಕೆ ಒಂದು ಬದಿಯಲ್ಲಿ ಮೆಟ್ಟಿಲುಗಳನ್ನು ಇಳಿದು ಹೋದರೆ, ಮತ್ತೊಂದು ಬದಿಯಿಂದ ಮೇಲಕ್ಕೆ ಬರಬಹುದಾಗಿದೆ. ಈ ರೀತಿಯ ಪ್ರದಕ್ಷಿಣಾಪಥ ವಿಜಯನಗರದ ವಿಶಿಷ್ಟ ಶೈಲಿಯಾಗಿದ್ದು, ಹಂಪಿಯ ವಿಜಯವಿಠ್ಠಲ ದೇವಾಲಯದಲ್ಲಿ ಇಂತಹ ಪ್ರದಕ್ಷಿಣಾಪಥವನ್ನು ಕಾಣಬಹುದು. ಗರ್ಭಗೃಹದ ಸುತ್ತಲೂ ಪ್ರದಕ್ಷಿಣಾಪಥವಿರುವುದರಿಂದ ಇದನ್ನು ಸಾಂಧಾರ ದೇವಾಲಯವೆಂದು ಗುರುತಿಸ ಬಹುದಾಗಿದೆ. ಗರ್ಭಗೃಹದ ಸುತ್ತಲೂ ಪ್ರದಕ್ಷಿಣಾ ಪಥವಿರುವುದರಿಂದ ಗರ್ಭಗೃಹದ ಅಧಿಷ್ಠಾನವು ಗೋಚರಿಸುತ್ತದೆ. ಪ್ರದಕ್ಷಿಣಾಪಥವು ಗೋಡೆಯಿಂದಾವೃತವಾಗಿದೆ. ಗರ್ಭಗೃಹ ಮತ್ತು ಅಂತರಾಳದ ಬಾಗಿಲ ಇಕ್ಕೆಲಗಳಲ್ಲಿ ವೈಷ್ಣವ ದ್ವಾರಪಾಲಕರ ಶಿಲ್ಪಗಳಿದ್ದು, ಅವುಗಳು ಬಾಗಿಲಿನಷ್ಟೇ ಎತ್ತರವಾಗಿರುವುದು, ಅಲ್ಲದೇ ದ್ವಾರಪಾಲಕರನ್ನು ಬಿಡಿಶಿಲ್ಪಗಳಂತೆ ಪ್ರಭಾವಳಿ

ಹಾಗೂ ಕೀರ್ತಿಮುಖಗಳ ಜೊತೆ ಬಿಡಿಸಿರುವುದು ಇಲ್ಲಿಯ ವಿಶೇಷವಾಗಿದೆ. ಈ ದ್ವಾರಪಾಲಕರುಗಳ ಕೈಗಳಲ್ಲಿ ಶಂಖ, ಚಕ್ರ, ಗಧೆ, ಅಭಯ ಮುದ್ರೆಗಳಿದ್ದು, ಲಲಾಟಬಿಂಬದಲ್ಲಿ ಗಜಲಕ್ಷ್ಮಿಯ ಶಿಲ್ಪವಿದೆ. ದ್ವಾರಪಾಲಕರುಗಳ ಬದಿಯಲ್ಲಿ ಪೂರ್ಣಕುಂಭಗಳ ತೋರಣಗಳ ರಚನೆಯಿದ್ದು, ದ್ವಾರಬಂಧವು ಅತ್ಯಂತ ಕಲಾತ್ಮಕವಾಗಿದೆ. ಅಂತರಾಳದಲ್ಲಿ ಲಕ್ಷ್ಮಿಯ ವಿಗ್ರಹವಿದೆ. ಗರ್ಭಗೃಹ ಮತ್ತು ಅಂತರಾಳಕ್ಕೆ ಪ್ರದಕ್ಷಿಣಾ ಪಥವಿರುವುದರಿಂದ, ಅಂತರಾಳ ಮತ್ತು ಸಭಾಮಂಟಪಗಳ ಮಧ್ಯೆ ಒಂದು ವಿಶೇಷ ಅಂಕಣ ಸೃಷ್ಟಿಯಾಗಿದೆ. ಇದರ ಎಡಭಾಗದಲ್ಲಿ ಸಣ್ಣ ಜಾಲಂಧ್ರವಿದೆ.

ಸಭಾಮಂಟಪವು ಬೃಹತ್ ಗಾತ್ರದ ಕಂಬಗಳನ್ನು ಹೊಂದಿದೆ. ಸಭಾಂಗಣದ ಮಧ್ಯದ ನಾಲ್ಕು ಕಂಬಗಳು ರಚನೆ ಮತ್ತು ವಿನ್ಯಾಸದಿಂದ ತುಂಬಾ ಆಕರ್ಷಕವಾಗಿವೆ. ಇವುಗಳು ಶಿಲ್ಪಿಯ ಕಲಾನೈಪುಣ್ಯತೆಗೆ ಸಾಕ್ಷಿಯಾಗಿವೆ. ಇವುಗಳು ಪೀಠ, ಕಾಂಡಗಳನ್ನು ಹೊಂದಿದ್ದು, ಪೀಠದ ನಾಲ್ಕು ಬದಿಗೆ ಕೆಲವು ಮುಖ್ಯ ಉಬ್ಬುಶಿಲ್ಪಗಳಿವೆ. ಕಂಬಗಳ ಕಾಂಡಭಾಗದಲ್ಲಿ ದ್ರಾವಿಡ ಮಾದರಿಯ ಮಂಟಪವಿದ್ದಂತೆ, ಒಂದರ ಮೇಲೊಂದರಂತೆ ಮೂರು ಮಂಟಪಗಳ ವಿನ್ಯಾಸಗಳಿವೆ. ಪ್ರತಿ ಹಂತದಲ್ಲೂ ನಾಲ್ಕು ಮೂಲೆಗಳಲ್ಲಿ ಒಟ್ಟು ಐದು ಉಪಕಂಬಗಳಿದ್ದು, ಅವುಗಳ ಮೇಲೆ ಚಿಕ್ಕಚಿಕ್ಕ ಉಬ್ಬುಶಿಲ್ಪಗಳಿವೆ. ಈ ಕಂಬಗಳ ಮಧ್ಯ ಮತ್ತು ಮೇಲೆ ದೇವಾಲಯದ ಕಪೋತ ರೀತಿಯ ಭಾಗವಿದ್ದು, ಬಾಲಕೃಷ್ಣ ಮತ್ತು ಇತರ ಶಿಲ್ಪಗಳ ರಚನೆಯಿದೆ. ಇದೇ ಅಲಂಕರಣೆ ಮೇಲಿನ ಎರಡು ಹಂತದಲ್ಲಿ ಪುನರಾವರ್ತನೆಯಾಗಿದ್ದು, ಒಂಭತ್ತು ಉಪಕಂಬಗಳಿರುವುದು ಇಲ್ಲಿಯ ವಿಶೇಷ. ಈ ಕಂಬಗಳನ್ನು ನೋಡಿದರೆ ವಿಜಯನಗರೋತ್ತರ ಕಾಲದ ವಿಶಿಷ್ಟ ರಚನೆಗಳೆಂದು ತಿಳಿಯಬಹುದಾಗಿದೆ. ಈ ಕಂಬಗಳ ಮೇಲ್ಭಾಗದಲ್ಲಿ ನಾಲ್ಕು ಬದಿಗೆ ಪುಷ್ಪಬೋದುಗೆಗಳಿದ್ದು, ಮಧ್ಯದ ಅಂಕಣದಲ್ಲಿ ಅರೆಗೋಲಾಕಾರಾದ ಭುವನೇಶ್ವರಿಯಿದ್ದು, ಮೊಗಚಿ ಹಾಕಿದ ಅರಳು ಕಮಲದ ರಚನೆಯಿದೆ. ಇದರ ಮಧ್ಯದ ಮೊಗ್ಗು ದೊಡ್ಡ ಪ್ರಮಾಣದಲ್ಲಿದೆ. ಭುವನೇಶ್ವರದ ಮೆಲಿನ ತೊಲೆಯಲ್ಲಿ ಗರ್ಭಗೃಹಕ್ಕೆ ಅಭಿಮುಖವಾಗಿ ಒಂದು ಸಾಲಿನಲ್ಲಿ ವಿವಿಧ ಶಿಲ್ಪಗಳು, ಕೆಳಭಾಗದ ಚೌಕಟ್ಟಿನಲ್ಲಿ ಸುತ್ತಲೂ ಬಳ್ಳಿಯಾಕಾರದ ರಚನೆಯಿದೆ. ಉಳಿದಂತೆ ಅಂಕಣದ ಛತ್ತು ಸಮತಟ್ಟಾಗಿದೆ. ಸಭಾಮಂಟಪಕ್ಕೆ ಉತ್ತರ ಮತ್ತು ದಕ್ಷಿಣ ದಿಕ್ಕಿನಲ್ಲಿ ಪ್ರವೇಶದ್ವಾರಗಳಿವೆ. ಈ ಸಭಾಮಂಟಪದ ದ್ವಾರದ ಇಕ್ಕೆಲಗಳಲ್ಲಿ ತಮ್ಮ ಬಲಗಾಲನ್ನು ಎತ್ತಿನಿಂತ ಭಂಗಿಯ ದ್ವಾರಪಾಲಕರ ಶಿಲ್ಪಗಳು, ಲಲಾಟಬಿಂಬದಲ್ಲಿ ವಿಷ್ಣುವಿನ ಲಾಂಛನದ ಚಿತ್ರವಿದೆ.

ಮುಖಮಂಟಪವು ಸಭಾಮಂಟಪಕ್ಕಿಂತ ಅತ್ಯಂತ ಕೆಳಮಟ್ಟದಲ್ಲಿದ್ದು, ಅಲ್ಲಿಂದ ಇಳಿದು ಬರಲು ಮೆಟ್ಟಿಲುಗಳಿವೆ. ಈ ಮಂಟಪವು ಎರಡೂ ಬದಿಗೆ ಕಲ್ಲಿನ ಜಗಲಿಗಳನ್ನು ಹೊಂದಿದ್ದು, ಇವುಗಳ ಮೇಲೆ ಒಟ್ಟು ಮೂರರಂತೆ ಆರು ಕಂಬಗಳಿವೆ. ಕೆಳಭಾಗದಲ್ಲಿ ಮಧ್ಯದಲ್ಲಿ ಬೃಹತ್ ಆರು ಕಂಬಗಳಿದ್ದು, ಪೀಠ, ಕಾಂಡಗಳಿಂದ ಕೂಡಿವೆ. ಮೇಲೆ ಮತ್ತು ಕೆಳಗೆ ಅಸಮವಾದ ಆಯತಾ ಭಾಗಗಳಿವೆ. ಕೆಳಭಾಗದಲ್ಲಿ ಕುಳಿತ ಸಿಂಹ, ಮಂಟಪ, ಪೂರ್ಣಕುಂಭ, ವಿವಿಧ ಪುಷ್ಪಾಕೃತಿಯ ಉಬ್ಬುಶಿಲ್ಪಗಳಿವೆ. ಮಧ್ಯಭಾಗದಲ್ಲಿ ಎಂಟು–ಹದಿನಾರು ಮುಖಗಳ ಲಂಬಪಟ್ಟಿಕೆಗಳಿದ್ದು, ಮೇಲ್ಭಾಗದಲ್ಲಿ ನಾಲ್ಕು ಬದಿಗೆ ಪುಷ್ಪಬೋದುಗೆಗಳಿವೆ. ಛತ್ತು ಸಮತಟ್ಟಾಗಿದೆ. ಭಿತ್ತಿಯಲ್ಲಿ ಯಾವುದೇ ಅಲಂಕರಣೆಯಿಲ್ಲದೆ ನಿರಾಡಾಂಭರವಾಗಿದೆ. ಇದರ ಮುಂದೆ ತೆರೆದ ಪ್ರಾಂಗಣವಿದ್ದು, ಮುಂದೆ ಬಲಿಪೀಠ ಹಾಗು ಧ್ವಜಕಟ್ಟೆಗಳಿವೆ.

ಇಡೀ ದೇವಾಲಯವು ಸುತ್ತಲೂ ಪ್ರಾಂಗಣವನ್ನು ಹೊಂದಿದ್ದು, ಎಡಭಾಗದಲ್ಲಿ ಪುಟ್ಟ ಆಂಜನೇಯ ಗುಡಿ ಮತ್ತು ಪಾಕಶಾಲೆ ಎಂದು ಗುರುತಿಸುವ ಚಿಕ್ಕ ಕಲ್ಲು ಮಂಟಪವಿದೆ. ದೇವಾಲಯದ ಅಧಿಷ್ಠಾನವು ಮಂಚಬಂಧ ಶೈಲಿಯಲ್ಲಿದ್ದು, ಗರ್ಭಗೃಹ, ಅಂತರಾಳ, ಪ್ರದಕ್ಷಿಣಾಪಥ, ಸಭಾಮಂಟಪಗಳು ಒಂದೇ ಆಳತೆಯಲ್ಲಿ ನಿರ್ಮಾಣವಾಗಿವೆ. ಅಧಿಷ್ಠಾನವು ಉಪಾನ, ಗಳ, ಜಗತಿಗಳಿಂದ ಕೂಡಿದೆ. ಮುಖಮಂಟಪದ ವಿಸ್ತೀರ್ಣ ೯.೩೪ ಮೀಟರ್ ಉದ್ದ, ೧೪.೩೩ ಮೀಟರ್ ಅಗಲವಿದೆ. ದೇವಾಲಯದ ಹೊರಭಿತ್ತಿಯನ್ನು ಅಳತೆಗಳಿಂದ ಕಟ್ಟಲಾಗಿದ್ದು, ಭಿತ್ತಿಯಲ್ಲಿ ಅರ್ಧಕಂಬಗಳು ಗೋಚರಿಸುತ್ತವೆ. ಅಲ್ಲಲ್ಲಿ ಜೋಡಿ ಮೀನು, ಸರ್ಪ, ಹಾವು ಹಿಡಿಯುತ್ತಿರುವ ಮುಂಗಸಿ ಮುಂತಾದ ಉಬ್ಬುಶಿಲ್ಪಗಳಿವೆ. ಅಂತರಾಳದ ನಂತರದ ಅಂಕಣವು ಎಡಭಾಗಕ್ಕೆ ಸಣ್ಣ ಜಾಲಂಧ್ರವನ್ನು ಹೊಂದಿದ್ದು ಸರಳವಾಗಿದೆ. ನವರಂಗದ ದಕ್ಷಿಣ ದಿಕ್ಕಿನ ಪ್ರವೇಶದ್ವಾರದ ಇಕ್ಕೆಲಗಳಲ್ಲಿ ನೃತ್ಯಭಂಗಿಯ ವೈಷ್ಣವ ದ್ವಾರಪಾಲಕರ, ಲಲಾಟಬಿಂಬದಲ್ಲಿ ಗಜಲಕ್ಷ್ಮಿಯ ಉಬ್ಬುಶಿಲ್ಪಗಳಿವೆ. ಅಲ್ಲಲ್ಲಿ ಕೆಲವು ಉಬ್ಬುಶಿಲ್ಪಗಳಿವೆ. ಮಾಡಿನಲ್ಲಿ ಇಡೀ ದೇವಾಲಯದ ಉದ್ದಕ್ಕೂ ಇಳಿಜಾರಾದ ಮುಂಜೂರು ಇದೆ.

ಗರ್ಭಗೃಹದಲ್ಲಿ ಮೂರೂವರೆ ಅಡಿ ಎತ್ತರದ ಹೊಯ್ಸಳರ ಕಾಲದ ಕಲಾಕೃತಿಯನ್ನು ಹೋಲುವ ಶ್ರೀಕೃಷ್ಣನ ಮೂರ್ತಿಯಿದೆ.[೩೮] ಕೊಳಲನ್ನೂದುವ ಭಂಗಿಯಲ್ಲಿರುವ ಈ ಮೂರ್ತಿಯಲ್ಲಿ ಮುರುಳಿನಾದವನ್ನು ಆಲಿಸುವುದರಲ್ಲಿ ಮಗ್ನರಾದ ಗೋಪಿಕಾಸ್ತ್ರೀಯರು ಮತ್ತು ಗೋವುಗಳನ್ನು ಬಿಡಿಸಲಾಗಿದ್ದು ತುಂಬಾ ಆಕರ್ಷಕವಾಗಿದೆ. ವಲ್ಲಿಯ ಸುರುಳಿಗಳಲ್ಲಿ ವಿಷ್ಣುವಿನ ದಶಾವತಾರದ ಚಿಕಣಿ ಬಿಂಬಗಳನ್ನು ಕೆತ್ತಲಾಗಿದೆ. ಅವತಾರಗಳಲ್ಲಿ ಬಲರಾಮ

ಮತ್ತು ಬುದ್ಧನ ಚಿತ್ರಗಳೂ ಇವೆ. ಪ್ರಭಾವಳಿಯ ಮಧ್ಯದಲ್ಲಿರುವ ಸಿಂಹಲಲಾಟದ ಕೆಳಗೆ ವೇಣುಗೋಪಾಲಸ್ವಾಮಿಯು ಬಲಗಾಲನ್ನು ಕರ್ತರಿ ಕಾಲಾಗಿಸಿ ತ್ರಿಭಂಗಿಯಲ್ಲಿ ನಿಂತು ವೇಣುವನ್ನು ನುಡಿಸುತ್ತಿದ್ದಾನೆ. ಸ್ವಾಮಿಯ ತಲೆಯಲ್ಲಿ ಕೇಶವನ್ನು, ಎಡಭಾಗದಲ್ಲಿ ಮುಡಿಗಟ್ಟಿದ ದಪ್ಪವಾದ ತುರುಬಿನ ಅಲಂಕರಣೆಯಿದೆ. ಮುಖ ಅಂಡಾಕಾರವಾಗಿದ್ದು ಕಣ್ಣು ಅರೆಮುಚ್ಚಿದ ರೀತಿಯಲ್ಲಿವೆ. ಇದು ವೇಣುಗಾನದಲ್ಲಿ ತಲ್ಲೀನನಾಗಿರುವುದನ್ನು ಬಿಂಬಿಸುತ್ತದೆ. ಕೊರಳಲ್ಲಿ ಪದಕಹಾರ, ಭುಜಕೀರ್ತಿ, ತೋಳ್ಬಂದಿ, ಕೈಕಡಗ, ಕಟೀಬಂಧ ಹಾಗು ಮುತ್ತಿನಹಾರಗಳಿದ್ದು, ಸವಿಯ ಇಕ್ಕೆಲಗಳಲ್ಲಿ ವಸ್ತ್ರವನ್ನು ಬಿಡಿಸಲಾಗಿದೆ. ಮೊಣಕಾಲಿನಲ್ಲಿ ದಪ್ಪನೆಯ ಅಂದುಗೆಯಿದ್ದು, ವೈಜಯಂತಿ ಹಾರವನ್ನು ಹೊಂದಿದೆ. ಈ ಶಿಲ್ಪವು ತನ್ನ ಲಕ್ಷಣಗಳಿಂದ ಕಲ್ಯಾಣಚಾಲುಕ್ಯ ಶೈಲಿಯದೆಂದು ತಿಳಿದುಬರುತ್ತದೆ.[೩೯] ಅಂತರಾಳದಲ್ಲಿ ಸುಂದರವಾದ ಲಕ್ಷ್ಮೀಯ ವಿಗ್ರಹವಿದೆ. ಸಭಾಮಂಟಪದ ಬಲ ಮತ್ತು ಎಡಬದಿಗೆ ಹನ್ನೆರಡು ಜನ ಆಳ್ವಾರರ ಶಿಲ್ಪಗಳಿವೆ. ಇಲ್ಲಿರುವ ವಿಷ್ಣುವಿನ ಶಿಲ್ಪವು ಪದ್ಮಾಸನದಲ್ಲಿದ್ದು,

ಚತುರ್ಭುಜಗಳನ್ನು ಹೊಂದಿದೆ. ಕೈಗಳಲ್ಲಿ ಶಂಖ, ಚಕ್ರ, ಗದೆ ಮತ್ತು ಅಭಯಮುದ್ರೆಗಳಿದ್ದು, ಕಿರೀಟಮುಕುಟ, ಕೌಸ್ತುಭಹಾರ, ಕೊರಳಹಾರ, ಪ್ರಭಾವಳಿ, ಕೀರ್ತಿಮುಖ, ಕಿವಿಯಲ್ಲಿ ಕರ್ಣ ಕುಂಡಲ ಹಾಗು ತೋಳ್ಬಂದಿಗಳಿಂದ ಅಲಂಕೃತಗೊಂಡಿದೆ.

ಈ ದೇವಾಲಯವು ಹೊಯ್ಸಳರ ಕಾಲದಲ್ಲಿ ನಿರ್ಮಾಣವಾದರೂ, ವಿಜಯನಗರ ಹಾಗು ಚಿತ್ರದುರ್ಗ ಪಾಳೆಯಗಾರರ ಕಾಲದಲ್ಲಿ ಜೀರ್ಣೋದ್ಧಾರಗೊಳ್ಳುತ್ತಾ ಬಂದಿದೆ.

೭. ತೇರುಮಲ್ಲೇಶ್ವರ ದೇವಾಲಯ

ಗ್ರಾಮ	:	ಹಿರಿಯೂರು (ನಗರ)
ಸ್ಥಾನನಿರ್ದೇಶನ	:	ಕ್ಷೇತ್ರಶಿಕ್ಷಣಾಧಿಕಾರಿಗಳ ಕಚೇರಿ ಮಾರ್ಗ.
ಮುಖದಿಕ್ಕು	:	ದಕ್ಷಿಣ
ಶಾಸನ ಮತ್ತು ಕಾಲ	:	ಜೀರ್ಣೋದ್ಧಾರ : ಚಿತ್ರದುರ್ಗ ಪಾಳೆಯಗಾರರು.
ನಿರ್ಮಾಣ ಸಾಮಾಗ್ರಿ	:	ಕಣಶಿಲೆ, ಇಟ್ಟಿಗೆ, ಗಾರೆ
ವಾಸ್ತುಭಾಗಗಳು	:	ಗರ್ಭಗೃಹ, ಅಂತರಾಳ, ಪರಿವಾರದೇವತೆಗಳ ಮಂಟಪ, ನವರಂಗ, ಮಹಾರಂಗಮಂಟಪ, ಮುಖಮಂಟಪ, ನವಗ್ರಹ ಮಂಟಪ, ದೀಪಸ್ತಂಭ, ಪ್ರಾಕಾರ, ಮಹಾದ್ವಾರಮಂಟಪ, ಗೋಪುರ, ದೀಪಸ್ತಂಭ, ಉಯ್ಯಾಲೆಕಂಬ

ಹೊಸದುರ್ಗ ತಾಲ್ಲೂಕಿನ ಯಗಟಗ್ರಾಮದ ದೇವರಾದ ಮಲ್ಲೇಶನ ತೇರು ಉತ್ಸವ ನಡೆಯುತ್ತಿದ್ದ ಸಂದರ್ಭದಲ್ಲಿ ಇದ್ದಕ್ಕಿದ್ದ ಹಾಗೆ ಭೀಕರ ಮಳೆಗಾಳಿ ಬಂದು ತೇರು

ವೇದಾವತಿನದಿಗೆ ಬಿದ್ದು ತೇಲುತ್ತಾ ಹಿರಿಯೂರಿನ ವಿಶಾಲ ನದಿದಡದಲ್ಲಿ ನಿಂತ ತೇರನ್ನು ಹಿರಿಯೂರಿನ ಮಲ್ಲೇಶ್ವರನ ಗುಡಿಯಲ್ಲಿರಿಸಿದರಿಂದ ಮಲ್ಲೇಶನಿಗೆ ತೇರುಮಲ್ಲೇಶ್ವರನೆಂದು ಹೆಸರಾಯಿತೆಂದು ಸ್ಥಳೀಯ ಮಾಹಿತಿಗಳಿಂದ ತಿಳಿದುಬರುತ್ತದೆ.

ದೇವಾಲಯದ ಗರ್ಭಗೃಹವು ನಾಲ್ಕು ಮೂಲೆಗಂಬಗಳನ್ನು ಹೊಂದಿದ್ದು, ಹಿಂದಿನ ಗೋಡೆಯಲ್ಲಿ ಕೈಪಿಡಿಗಳಿವೆ. ದ್ವಾರಬಂಧವು ದ್ವಿಶಾಖೆಗಳಲ್ಲಿದ್ದು ಸರಳವಾಗಿದೆ. ದ್ವಾರದ ಇಕ್ಕೆಲಗಳಲ್ಲಿ ಕಳಸಯುಕ್ತ ಪೂರ್ಣಕುಂಭಗಳ ಆಕೃತಿಗಳಿವೆ. ಲಲಾಟಬಿಂಬದಲ್ಲಿ ಪ್ರಭಾವಳಿಸಹಿತ ಶಿವಲಿಂಗವಿದೆ. ಶಿವಲಿಂಗದ ಹಿಂಬದಿಯಲ್ಲಿ ಹಿತ್ತಾಳೆಯ ಆಕರ್ಷಕವಾದ ಪ್ರಭಾವಳಿಯಿದೆ. ಶಿವಲಿಂಗವು ಮೂರು ಅಡಿ ಎತ್ತರ, ಎರಡು ಅಡಿ ಅಗಲವಿದೆ. ಪ್ರಭಾವಳಿಯ ಮೇಲ್ಭಾಗದಲ್ಲಿ ಕೀರ್ತಿಮುಖ, ಅದರ ಕೆಳಭಾಗದಲ್ಲಿ ಏಳು ಹೆಡೆಯ ಸರ್ಪವಿದೆ. ಲಿಂಗದ ಮೇಲೆ ಭಕ್ತಮಾರ್ಕಂಡೇಯ ಲಿಂಗವನ್ನು ಅಪ್ಪಿ ಹಿಡಿದಿರುವುದು ಇಲ್ಲಿಯ ವೈಶಿಷ್ಟ್ಯವಾಗಿದೆ. ಗರ್ಭ ಗೃಹದ ಗೋಡೆ ಮತ್ತು ಛತ್ತುಗಳು ಸರಳ ಹಾಗು ಸಮತಟ್ಟಾಗಿವೆ.

ಗರ್ಭಗೃಹಕ್ಕೆ ಹೊಂದಿಕೊಂಡಂತೆ ನಾಲ್ಕು ಅರ್ಧಗಂಬಗಳ ಮುಚ್ಚಿದ ಅಂತರಾಳವಿದೆ. ಮೇಲ್ಛತ್ತಿನ ಭುವನೇಶ್ವರಿಯಲ್ಲಿ ಮೊಗಚಿ ಹಾಕಿದ ಕಮಲವಿದೆ. ಪ್ರವೇಶದ್ವಾರವು ದ್ವಿಶಾಖೆಗಳನ್ನು ಹೊಂದಿದ್ದು, ಅವುಗಳಲ್ಲಿ ಸರಳವಾದ ಬಳ್ಳಿಗಳ ಅಲಂಕರಣವಿದೆ. ಲಲಾಟಬಿಂಬದಲ್ಲಿ ಗಜಾನನ ಶಿಲ್ಪವಿದೆ. ದ್ವಾರದ ಇಕ್ಕೆಲಗಳಲ್ಲಿ ಶೈವದ್ವಾರಪಾಲಕರ ಶಿಲ್ಪಗಳಿವೆ. ತ್ರಿಶೂಲ, ಡಮರು ಹಾಗು ಗದಾದಾರಿಗಳಾದ ದ್ವಾರಪಾಲಕರ ಕಿರೀಟಮುಕುಟವು ಎತ್ತರವಾಗಿದ್ದು, ಗಮನ ಸೆಳೆಯುತ್ತದೆ. ಬಲದ್ವಾರಪಾಲಕನ ಬದಿಯ ಗೋಡೆಯಲ್ಲಿ ಪ್ರಾಯಶಃ ದೇವಾಲಯದ ನಿರ್ಮಾತೃ ಪಾಳೆಯಗಾರ ಮತ್ತು ಅವನ ರಾಣಿಯ ಶಿಲ್ಪಗಳಿವೆ. ಪಾಳೆಯಗಾರನ ತಲೆಯ ಮೇಲೆ ತಿರುಪತಿಯಲ್ಲಿರುವ ಶ್ರೀಕೃಷ್ಣದೇವರಾಯನ ವಿಗ್ರಹದ ತಲೆಯ ಮೇಲಿರುವಂತೆ ಎತ್ತರವಾದ ಟೊಪ್ಪಿಗೆಯಿದೆ. ಅಂತರಾಳ ಗೋಡೆಗಳು ಮತ್ತು ಛತ್ತು ಸರಳವಾಗಿವೆ.

ಅಂತರಾಳ ಅಥವಾ ನಂದಿಮಂಟಪದ ಮುಂದೆ ಅರ್ಧಮಂಟಪವಿದ್ದು, ಇದರ ಪ್ರವೇಶದ್ವಾರದಲ್ಲಿ ಮೂರು ಶಾಖೆಗಳಿವೆ. ಅವುಗಳು ಬಳ್ಳಿಯ ಅಲಂಕರಣೆಗಳನ್ನು ಹೊಂದಿವೆ. ಇಕ್ಕೆಲಗಳಲ್ಲಿ ಶೈವದ್ವಾರಪಾಲಕರ, ಲಲಾಟಬಿಂಬದಲ್ಲಿ ಗಜಾನನ ಉಬ್ಬುಶಿಲ್ಪಗಳಿವೆ. ದ್ವಾರಪಾಲಕರ ಕೆಳಗೆ ಸರ್ಪಶಿಲ್ಪಗಳಿವೆ. ಈ ಮಂಟಪದ ಎಡಭಾಗದ ಗರ್ಭಗೃಹದಲ್ಲಿ ಯಾವುದೇ ಶಿಲ್ಪಗಳಿಲ್ಲ. ಆದರೆ ಕೆಲವು ಹಿತ್ತಾಳೆಯ ಪ್ರತಿಮೆಗಳಿವೆ. ದ್ವಾರದ ಇಕ್ಕೆಲಗಳಲ್ಲಿ ಯತಿ ಮತ್ತು ಶಿವನ ಆಶೀರ್ವಾದ ಪಡೆಯುತ್ತಿರುವ ಭಕ್ತರಿದ್ದಾರೆ. ಬಲಬದಿಯ ಗರ್ಭಗೃಹದ ದ್ವಾರದ ಇಕ್ಕೆಲಗಳಲ್ಲಿ ಮಂಗಳಾರತಿ ಹಿಡಿದ ಸ್ತ್ರೀಯರ ಶಿಲ್ಪಗಳಿವೆ. ವಿಜಯನಗರೋತ್ತರ ಕಾಲದ ದೇವಾಲಯಗಳಲ್ಲಿ

ಈ ರೀತಿ ಪರಿವಾರ ದೇವತೆಗಾಗಿ ಮಂಟಪವನ್ನು ನಿರ್ಮಿಸಿರುವುದು ವಿಶೇಷ ರಚನೆಯಾಗಿದೆ. ಇಂತಹ ರಚನೆ ಅಪರೂಪವೇ ಸರಿ. ಉಳಿದಂತೆ ಈ ಮಂಟಪದ ಭಿತ್ತಿ ಮತ್ತು ಛತ್ತುಗಳು ಸರಳವಾಗಿವೆ.

ಪರಿವಾರದೇವತೆಗಳ ಮಂಟಪದ ನಂತರದ ಭಾಗವೇ ನವರಂಗ. ಇದರ ದ್ವಾರಬಂಧವು ತ್ರಿಶಾಖೆಗಳಲ್ಲಿದ್ದು, ಬಳ್ಳಿಗಳ ಕೆತ್ತನೆಯನ್ನು ಹೊಂದಿವೆ. ಲಲಾಟಬಿಂಬದಲ್ಲಿ ಗಜಾನನ ಶಿಲ್ಪವಿದೆ. ದ್ವಾರದ ಇಕ್ಕೆಲಗಳಲ್ಲಿ ತ್ರಿಶೂಲ, ಡಮರು ಮತ್ತು ಗದಾದಾರಿಗಳಾದ ಶೈವದ್ವಾರಪಾಲಕರುಗಳ ಶಿಲ್ಪಗಳಿವೆ. ಅದರ ಬದಿಯ ಗೋಡೆಗಳಲ್ಲಿ ವಾದ್ಯಗಾರರ ಶಿಲ್ಪಗಳಿವೆ. ಇದು ಒಂಭತ್ತು ಅಂಕಣಗಳಿಂದ ಕೂಡಿದ್ದು, ಸುತ್ತಲೂ ಗೋಡೆಯಿದ್ದು, ಪೂರ್ವ ಮತ್ತು ಪಶ್ಚಿಮ ದಿಕ್ಕುಗಳಲ್ಲಿ ಪ್ರವೇಶದ್ವಾರಗಳಿವೆ. ಇಲ್ಲಿ ಮಧ್ಯದಲ್ಲಿ ನಾಲ್ಕು ಸ್ವತಂತ್ರ ಕಂಬಗಳು, ನಾಲ್ಕು ಮೂಲೆಗಂಬಗಳು, ಎಂಟು ಅರ್ಧಗಂಬಗಳಿವೆ. ಮಧ್ಯದ ಕಂಬಗಳು ಮಾತ್ರ ಆಕರ್ಷಕವಾಗಿವೆ. ಇವುಗಳು ಕೆಳಗೆ, ಮಧ್ಯ ಹಾಗು ಮೇಲೆ ಮೂರು ಚೌಕಭಾಗಗಳನ್ನು ಹೊಂದಿದ್ದು, ಚೌಕಭಾಗಗಳ ನಾಲ್ಕು ಮೂಲೆಗಳಲ್ಲಿ(ನವರಂಗದ ಬಲಕಂಬದ ಮೇಲೆ ಶಾಸನವಿದ್ದು, ಅಕ್ಷರಗಳು ಸ್ಪಷ್ಟವಾಗುತ್ತಿಲ್ಲ) ಕುಳಿತ ಭಂಗಿಯ ಶಿವ, ಲಿಂಗಾದಾರಿ ಯತಿ, ಗಜಬೇಟೆಗಾರ, ಕಾಲಭೈರವ, ಹಾಲುಣಿಸುತ್ತಿರುವ ಹಸು, ವಾದ್ಯಗಾರ, ಮಲ್ಲಯುದ್ಧ, ಬೇಡರಕಣ್ಣಪ್ಪ, ಗಜಾನನ, ಅಷ್ಟದಿಕ್ಪಾಲಕರು ಪರಶುರಾಮ, ಪಾರ್ವತಿ, ಸಿಂಹದೇಹ ಮನುಷ್ಯ ಮುಖಧಾರಿ, ಹಂಸ, ಹಾವಾಡಿಗ, ನೃತ್ಯಗಾರ ಮುಂತಾದ ಉಬ್ಬುಶಿಲ್ಪಗಳಿವೆ ಇಲ್ಲಿಯ ಶಿಲ್ಪಗಳು ದೇವಾಲಯದ ಉಳಿದ ಕಂಬಗಳ ಮೇಲಿನ ಶಿಲ್ಪಗಳಿಗಿಂತ ಹೆಚ್ಚು ಆಕರ್ಷಕವಾಗಿವೆ. ಸ್ಪಷ್ಟವಾಗಿ ಹಾಗು ಆಳವಾಗಿ ಕೊರೆಯಲ್ಪಟ್ಟಿವೆ. ಈ ಶಿಲ್ಪಗಳು ಲಕ್ಷಣಗಳಲ್ಲಿ ಮಹಾರಂಗಮಂಟಪದ ವರ್ಣಚಿತ್ರಗಳನ್ನು ಹೋಲುತ್ತವೆ. ನವರಂಗದ ಇತರ ಕಂಬಗಳು, ಬೋದುಗೆಗಳು ಮತ್ತು ಭಿತ್ತಿಗಳು ತೀರಾ ಸರಳವಾಗಿವೆ. ಮಧ್ಯದ ಅಂಕಣದ ಛತ್ತಿನಲ್ಲಿ ಭುವನೇಶ್ವರಿಯಿದ್ದು, ಇಲ್ಲಿ ಪದ್ಮದ ಅಲಂಕರಣ, ಅದರ ಸುತ್ತಲೂ ವಜ್ರಪುಷ್ಪದಳಗಳ ಚಿತ್ರಣಗಳಿವೆ.

ಮಹಾರಂಗಮಂಟಪವು ದೇವಾಲಯದ ಅತ್ಯಂತ ಪ್ರಧಾನ ವಾಸ್ತು ಭಾಗವಾಗಿದ್ದು, ಒಂಭತ್ತು ಅಂಕಣಗಳಿಂದ ಕೂಡಿದೆ. ಇದು ಪೂರ್ವ ಮತ್ತು ಪಶ್ಚಿಮ ದಿಕ್ಕುಗಳಲ್ಲಿ ಪ್ರವೇಶ ಮಂಟಪಗಳನ್ನು ಹೊಂದಿದೆ. ಉತ್ತರ ಬದಿಯನ್ನು ಹೊರತುಪಡಿಸಿ, ಇಡೀ ಮಂಟಪವು ತೆರೆದ ರೀತಿಯಲ್ಲಿದೆ. ಮಂಟಪದ ಸುತ್ತಲೂ ಕಕ್ಷಾಸನವಿದ್ದು, ಅದರ ಮೇಲೆ ಪೂರ್ವ ಮತ್ತು ಪಶ್ಚಿಮ ಬದಿಗಳಲ್ಲಿ ತಲಾ ನಾಲ್ಕು ಕಂಬಗಳಿವೆ. ಮಧ್ಯದಲ್ಲಿ ನಾಲ್ಕು ಬೃಹತ್ ಕಂಬಗಳಿದ್ದು, ಅತ್ಯಂತ ಆಕರ್ಷಕವಾಗಿವೆ. ಇವು ವಿಜಯನಗರ ಶೈಲಿಯ ಕಂಬಗಳಂತೆ

ದ್ವಿಕಾಂಡಗಳನ್ನು ಹೊಂದಿದ್ದು, ಪ್ರಧಾನ ಕಾಂಡವು ಕೆಳಗೆ ಮಧ್ಯ ಮತ್ತು ಮೇಲೆ ನಾಲ್ಕು ಚೌಕ ಭಾಗಗಳನ್ನು ಹೊಂದಿವೆ. ಅವುಗಳ ನಡುವೆ ಅಡ್ಡ ಪಟ್ಟಿಕೆಗಳಿವೆ. ಕಂಬಗಳ ಮೂರು ಬದಿಯ ಚೌಕಭಾಗಗಳಲ್ಲಿ ಹಂಸ, ಪೂರ್ಣಚಂದ್ರ, ಯತಿ, ನಂದಿ, ವಾದ್ಯಗಾರರು, ಕುಳಿತಸಿಂಹ, ಗಜಾನನ, ನೃತ್ಯಗಾರರು, ಅಂಜಲಿಮುದ್ರೆಯಲ್ಲಿರುವ ಭಕ್ತ, ಶಂಖ ಹಾಗು ವಿವಿಧ ರೀತಿಯ ಪುಷ್ಪಾಕೃತಿಗಳ ಉಬ್ಬುಶಿಲ್ಪಗಳಿವೆ. ನಾಲ್ಕು ಪ್ರಧಾನ ಕಂಬಗಳ ಉಪಕಾಂಡಗಳಲ್ಲಿ ಸಿಂಹಸವಾರರ ಶಿಲ್ಪಗಳಿವೆ. ಈ ಸಿಂಹಗಳು ತಮ್ಮ ಹಿಂಗಾಲುಗಳನ್ನು ಆನೆಗಳ ಮೇಲಿಟ್ಟು ಮುಂಗಾಲುಗಳನ್ನು ಮೇಲಕ್ಕೆತ್ತಿ ನಿಂತಿವೆ. ಇವು ವಿಜಯನಗರ ಶೈಲಿಯ ಕಂಬಗಳನ್ನು ನೆನಪಿಸುತ್ತವೆ. ಈ ನಾಲ್ಕು ಕಂಬಗಳ ದಕ್ಷಿಣ ಬದಿಗೆ ಮಾತ್ರ ಪುಷ್ಪಬೋದುಗೆಗಳಿದ್ದು, ಉಳಿದವು ಸಾಮಾನ್ಯವಾಗಿವೆ. ಕಕ್ಷಾಸನದ ಮೇಲಿನ ಸುತ್ತಲಿನ ಕಂಬಗಳು ಕೆಳಗೆ, ಮಧ್ಯ ಮತ್ತು ಮೇಲೆ ನಾಲ್ಕು ಮುಖಗಳ ನಾಲ್ಕು ಚೌಕ ಕಾಂಡಭಾಗಗಳನ್ನು ಹೊಂದಿದ್ದು, ಅದರ ಮೇಲ್ಭಾಗದಲ್ಲಿ ತುಂಬಾ ಸರಳವಾದ ಬೋದುಗೆಗಳಿವೆ. ಕಂಬಗಳ ಚೌಕ ಭಾಗಗಳಲ್ಲಿ ನಾಲ್ಕು ಬದಿಗೆ ಹಂಸ, ಸಿಂಹ, ಗಜ, ನೃತ್ಯಗಾರರು, ಗರುಡ, ವಾನರ, ಮೀನು, ಶಿವಲಿಂಗ, ಭೈರವ, ಯತಿ, ತಪೋನಿರತ ಯತಿ, ವಾದ್ಯಗಾರ, ವಾಮನ, ಕುಳಿತಸಿಂಹ, ನಂದಿ, ಪೂರ್ಣ ಮತ್ತು ಅರ್ಧಚಂದ್ರ, ಆಂಜನೇಯ, ಕುಂಭ, ಹಠಯೋಗಿ, ಗಣೇಶ, ವಿವಿಧ ದೇವತೆಗಳು ಹಾಗು ಪುಷ್ಪಾಕೃತಿಗಳ ಉಬ್ಬುಶಿಲ್ಪಗಳಿವೆ.

ಮಹಾರಂಗಮಂಟಪದ ಪೂರ್ವ ಮತ್ತು ಪಶ್ಚಿಮ ದಿಕ್ಕುಗಳ ಪ್ರವೇಶಮಂಟಪಗಳು ಪ್ರಧಾನ ಪ್ರವೇಶ ಮಂಟಪದಂತಿವೆ. ಆದರೆ ಪೂರ್ವ ದಿಕ್ಕಿನ ಪ್ರವೇಶ ಮಂಟಪದ ಮುಖಭಾಗದ ಎರಡು ಕಂಬಗಳ ಉಪಕಾಂಡದಲ್ಲಿ ಸಿಂಹಸವಾರರ ಶಿಲ್ಪಗಳಿವೆ. ಮಹಾರಂಗಮಂಟಪದ ಛತ್ತು ಸಮತಟ್ಟಾಗಿದೆ. ಮಧ್ಯದ ಮೂರು ಅಂಕಣಗಳಿಗಿಂತ ಎರಡೂ ಬದಿಯ ಅಂಕಣಗಳ ಛತ್ತು ಸ್ವಲ್ಪ ಕೆಳಮಟ್ಟದಲ್ಲಿದೆ. ಮಧ್ಯದ ಅಂಕಣದಲ್ಲಿ ಮಾತ್ರ ವಿಶಿಷ್ಟ ರಚನೆಯನ್ನು ಮಾಡಲಾಗಿದೆ. ಮಧ್ಯದ ಮೂರು ಅಂಕಣಗಳಲ್ಲಿ ಅರಳು ಕಮಲಾಕೃತಿಯ ಮಂದಬಳ್ಳಿಯಾಕಾರದ ಆಕರ್ಷಕ ಭುವನೇಶ್ವರಿಯಿದೆ. ಈ ಎಲ್ಲಾ ಅಂಕಣಗಳ ಮೇಲೆ ಅಪೂರ್ವವಾದ ವರ್ಣಚಿತ್ರಗಳಿವೆ. ಆದರೆ ದುರಾದೃಷ್ಟವಶಾತ್ ಮಧ್ಯದ ಮೂರು ಅಂಕಣಗಳನ್ನು ಹೊರತುಪಡಿಸಿ, ಉಳಿದ ಆರು ಅಂಕಣಗಳ ಮೇಲಿನ ವರ್ಣಚಿತ್ರಕಲೆ ಸಂಪೂರ್ಣ ನಾಶವಾಗಿದೆ. ಮಧ್ಯದ ಅಂಕಣದ ಉಳಿದ ಚಿತ್ರಕಲೆ ಕೂಡ ಬಹುಮಟ್ಟಿಗೆ ನಾಶವಾಗಿದೆ. ಛತ್ತಿನ ಮೊದಲ ಅಂಕಣದ ಮಧ್ಯಭಾಗದಲ್ಲಿ ಸರ್ಪಬಳೆಯಿದ್ದು, ಗಮನ ಸೆಳೆಯುತ್ತದೆ. ಒಂದರ ಒಳಗೆ ಒಂದರಂತೆ ಕೂಡಿರುವ ಈ ಬಳೆಗಳನ್ನು ಸ್ವತಂತ್ರವಾಗಿ

ತಿರುಗಿಸಲು ಬರುತ್ತಿದ್ದು, ಶಿಲ್ಪಿಗಳ ಕಲಾನೈಪುಣ್ಯತೆಗೆ ಸಾಕ್ಷಿಯಾಗಿದೆ. ಮಧ್ಯದ ಅಂಕಣದ ಛತ್ತಿನಲ್ಲಿ ಸರಳ ಕಮಲಾಕೃತಿಯ ಭುವನೇಶ್ವರಿಯಿದ್ದು, ಅದನ್ನು ಬಣ್ಣದಿಂದ ಅಲಂಕರಿಸಲಾಗಿದೆ. ಅದರ ಎಂಟು ದಿಕ್ಕುಗಳಿಗೆ ಅಷ್ಟದಿಕ್ಪಾಲಕರುಗಳ ಚಿತ್ರಗಳಿವೆ.

ದೇವಾಲಯದ ದಕ್ಷಿಣ ದಿಕ್ಕಿನ ಪ್ರವೇಶದಲ್ಲಿ ತೆರೆದ ಮುಖಮಂಟಪವಿದ್ದು, ನಾಲ್ಕು ಕಂಬಗಳಿಂದ ಕೂಡಿದೆ. ಈ ಮಂಟಪವು ಮಂಚಬಂಧ ಅಧಿಷ್ಠಾನದ ಮೇಲೆ ನಿರ್ಮಿತವಾಗಿದ್ದು, ಪೂರ್ವ ಮತ್ತು ಪಶ್ಚಿಮ ಬದಿಯಲ್ಲಿ ಕಕ್ಷಾಸನಗಳನ್ನು ಹೊಂದಿದೆ. ಅಧಿಷ್ಠಾನದ ಒಳಮೈಯಲ್ಲಿ ಆನೆಗಳು, ಕಾದಾಡುತ್ತಿರುವ ವೀರರು, ನೃತ್ಯಗಾರರು, ಸಿಂಹ, ಕುದುರೆ, ಹೋರಾಡುತ್ತಿರುವ ದೃಶ್ಯ, ಸವಾರರು ಮುಂತಾದ ಉಬ್ಬುಶಿಲ್ಪಗಳಿವೆ. ಈ ಕಂಬಗಳು ವಿಜಯನಗರ ಶೈಲಿಯಲ್ಲಿದ್ದು, ದ್ವಿಕಾಂಡಗಳನ್ನು ಹೊಂದಿವೆ. ಪ್ರಧಾನ ಕಾಂಡದಲ್ಲಿ ಕೆಳಗೆ, ಮಧ್ಯ ಮತ್ತು ಮೇಲೆ ನಾಲ್ಕು ಚೌಕ ಭಾಗಗಳಿದ್ದು, ಅವುಗಳ ಮೇಲೆ ಕಾಲಭೈರವ, ಹಂಸ, ಗಜ, ನೃತ್ಯಗಾರರು, ಯತಿ, ವೀರಭದ್ರ ಮುಂತಾದ ಉಬ್ಬುಶಿಲ್ಪಗಳಿವೆ. ಪ್ರವೇಶದ ಎರಡು ಕಂಬಗಳಲ್ಲಿ ಕಿರುಕಂಬಗಳ ಉಪಕಾಂಡಗಳಿದ್ದು, ಕೆಳಭಾಗದಲ್ಲಿ ಸಿಂಹಶಿಲ್ಪಗಳು ಆ ಕಿರುಕಂಬಗಳನ್ನು ಹೊತ್ತಿವೆ. ಮೇಲ್ಭಾಗದಲ್ಲಿ ಒಳಭಾಗದಲ್ಲಿ ಮಾತ್ರ ವಿಜಯನಗರ ಶೈಲಿಯ ಬೋದುಗೆಗಳಿವೆ. ಈ ಪುಷ್ಪಬೋದುಗೆಗಳು ಮತ್ತು ಕಂಬಗಳು ಹಂಪಿಯ ದೇವಾಲಯಗಳಂತೆ ಪರಿಪೂರ್ಣವಾಗಿ ರಚಿಸಲ್ಪಟ್ಟಿವೆ. ಇದರ ಛತ್ತು ಸರಳವಾಗಿದೆ.

ತೆರೆದ ಮುಖಮಂಟಪದ ಮುಂಭಾಗದಲ್ಲಿ ನವಗ್ರಹ ಮಂಟಪವಿದ್ದು, ನಾಲ್ಕು ಕಂಬಗಳಿಂದ ಕೂಡಿದೆ. ಮೇಲೆ ಗಾರೆ ಮತ್ತು ಇಟ್ಟಿಗೆಯಿಂದ ನಿರ್ಮಿಸಿದ ಗೋಪುರವಿದೆ. ಕಂಬಗಳು ಕೆಳಭಾಗದಲ್ಲಿ ನಾಲ್ಕು, ಅದರ ಮೇಲೆ ಎಂಟು, ನಂತರ ಭಾಗದಲ್ಲಿ ಹದಿನಾರು ಮುಖಗಳ ಲಂಬಪಟ್ಟಿಕೆಗಳನ್ನೊಳಗೊಂಡಿವೆ. ಮಂಟಪದ ಛತ್ತಿನಲ್ಲಿ ಅರಳು ಕಮಲದ ಭುವನೇಶ್ವರಿಯಿದೆ. ಮಂಟಪದ ಮಧ್ಯ ನವಗ್ರಹ ಮಂಟಪವಿದ್ದು, ಅದರ ಮೇಲಿನ ಗೋಪುರವನ್ನು ಇಟ್ಟಿಗೆ ಮತ್ತು ಗಾರೆಯಿಂದ ಇತ್ತೀಚೆಗೆ ಹಳೆಯ ಮಾದರಿಗನುಗುಣವಾಗಿ ದುರಸ್ತಿಗೊಳಿಸಲಾಗಿದೆ. ಇಲ್ಲಿ ನಾಲ್ಕು ದಿಕ್ಕಿಗೆ ದಿಕ್ಪಾಲಕರ ಶಿಲ್ಪಗಳು ಮತ್ತು ನಾಲ್ಕು ಮೂಲೆಗೆ ನಂದಿಯ ವಿಗ್ರಹಗಳು ಹಾಗು ವಿವಿಧ ದೇವತೆಗಳ ಶಿಲ್ಪಗಳಿವೆ. ಶಾಲ ಮತ್ತು ಕೂಟಗಳ ರಚನೆಯಿದೆ.

ನವಗ್ರಹ ಮಂಟಪದ ಮುಂದೆ ನಲವತ್ತೆರಡು ಅಡಿ ಎತ್ತರದ ಏಕಶಿಲೆಯ ಬೃಹತ್ ದೀಪಸ್ತಂಭವಿದ್ದು, ಅದರ ಕೆಳಭಾಗದಲ್ಲಿ ನಾಲ್ಕು ಮುಖಗಳ ಕಾಂಡವಿದೆ. ಅದರ

ಮೇಲ್ಭಾಗದಲ್ಲಿ ಎಂಟು ಮುಖಗಳ ಕಾಂಡ, ನಂತರದ ಸ್ಥಾನದಲ್ಲಿ ಹದಿನಾರು ಮುಖಗಳ ಕಾಂಡವಿದ್ದು, ನಾಲ್ಕು ದಿಕ್ಕಿಗೆ ಎಂಟು ದೀಪಗಳಿವೆ. ಅದರ ಮೇಲ್ಭಾಗದಲ್ಲಿ ಚಿಕ್ಕಮಂಟಪದಲ್ಲಿ ನಂದಿಯ ವಿಗ್ರಹವಿದೆ.

ದೇವಾಲಯವು ಏರುವಿನ್ಯಾಸದಲ್ಲಿ ಗರ್ಭಗೃಹ, ನವರಂಗ, ಮುಖಮಂಟಪ ಮತ್ತು ಮಹಾರಂಗಮಂಟಪಗಳು ಅಧಿಷ್ಠಾನವನ್ನು ಹೊಂದಿದ್ದು, ಅಧಿಷ್ಠಾನವು ಉಪಾನ, ಜಗತಿ, ತ್ರಿಪಟ್ಟ ಕುಮುದ ಹಾಗು ಕಪೋತಗಳಿಂದ ಕೂಡಿದೆ. ಮೂರು ಕಡೆಯ ಪ್ರವೇಶಮಂಟಪಗಳ ಅಧಿಷ್ಠಾನ ಮಂಚಬಂಧ ಶೈಲಿಯಲ್ಲಿದ್ದು, ಉಪಾನ, ಜಗತಿ ಹಾಗು ಕಪೋತಗಳನ್ನೊಳಗೊಂಡಿದ್ದು ತೀರಾ ಸರಳವಾಗಿದೆ. ಅಧಿಷ್ಠಾನದಲ್ಲಿ ಅಲ್ಲಲ್ಲಿ ಉಬ್ಬುಶಿಲ್ಪಗಳಿದ್ದು ಸ್ಪಷ್ಟವಾಗಿಲ್ಲ. ಮಹಾರಂಗಮಂಟಪದ ಅಧಿಷ್ಠಾನವು ೮೭ ಸೆಂಟಿಮೀಟರ್ ಎತ್ತರವಿದ್ದು, ಉಪಾನ, ತ್ರಿಪಟ್ಟ ಕುಮುದ ಮತ್ತು ಜಗತಿಗಳನ್ನೊಳಗೊಂಡಿದೆ. ನವರಂಗ ಮತ್ತು ಗರ್ಭಗೃಹಗಳ ಅಧಿಷ್ಠಾನವು ಮಹಾರಂಗ ಮಂಟಪದಂತಿದೆ. ಭಿತ್ತಿಯನ್ನು ಬೃಹತ್ ಅಳತೆಕಲ್ಲುಗಳಿಂದ ಕಟ್ಟಲಾಗಿದ್ದು, ಬಹುಮಟ್ಟಿಗೆ ಸರಳವಾಗಿದೆ. ಅಂದರೆ ಭಿತ್ತಿಯು ನಿರಾಡಂಭರವಾಗಿದೆ. ಭಿತ್ತಿಯಲ್ಲಿ ಅಲ್ಲಲ್ಲಿ ಉಬ್ಬುಶಿಲ್ಪಗಳಿವೆ. ಅವುಗಳಲ್ಲಿ ಮಿಥುನಶಿಲ್ಪಗಳು, ಶಿವಲಿಂಗಕ್ಕೆ ಹಾಲೆರೆಯುತ್ತಿರುವ ಹಸು, ಶಿವಲಿಂಗ, ಅಶ್ವ, ವೀರ, ವೃಷಭಾರೂಢ ಶಿವಪಾರ್ವತಿ, ಶಿವಭಕ್ತ, ಬೇಡರ ಕಣ್ಣಪ್ಪ, ಕಿರತಾರ್ಜುನ ಸಂಹಾರ, ಶಿವಪುರಾಣ, ವಾಲೀಸುಗ್ರೀವ ಹಾಗು ಬೃಂದಾವನದ ಚಿತ್ರಗಳಿವೆ. ನವರಂಗದ ಪೂರ್ವ ಮತ್ತು ಪಶ್ಚಿಮ ದಿಕ್ಕುಗಳ ಪ್ರವೇಶದ್ವಾರದ ಹೊರಭಾಗದ ಇಕ್ಕೆಲಗಳಲ್ಲಿ ಆಕರ್ಷಕವಾದ ಶೈವದ್ವಾರಪಾಲಕರ ಶಿಲ್ಪಗಳಿದ್ದು, ಲಲಾಟ ಬಿಂಬದಲ್ಲಿ ಶಿವಪಾರ್ವತಿಯರ ಬಿಂಬಗಳಿವೆ. ಇಲ್ಲಿ ದ್ವಾರಬಂಧದ ದ್ವಿಶಾಖೆಗಳಲ್ಲಿ ಸಿಂಹ ಮತ್ತು ಮಕರತೋರಣಗಳಿವೆ. ದ್ವಾರಪಾಲಕರ ಬದಿಯ ಭಿತ್ತಿಯ ಮೇಲ್ಭಾಗದಲ್ಲಿ ಮೂಲ ಮಾದರಿಯ ಪ್ರತಿಕೃತಿಯಂತೆ ಇತ್ತೀಚಿಗೆ ಸಿಮೆಂಟಿನ ಶಾಲ, ಕೂಟ ಮತ್ತು ಹಾರಗಳನ್ನು ರಚಿಸಲಾಗಿದೆ. ಗರ್ಭಗೃಹದ ಮೇಲೆ ಏಕತಲ ವಿಮಾನ ಮಾದರಿಯ ದ್ರಾವಿಡ ಶೈಲಿಯ ಶಿಖರವಿದ್ದು, ವೃತ್ತಾಕಾರದ ಸ್ತೂಪಿಯನ್ನು ಹೊಂದಿದೆ. ಈ ಶಿಖರವನ್ನು ಸಹ ಇತ್ತೀಚೆಗೆ ದುರಸ್ತಿಗೊಳಿಸಲಾಗಿದೆ. ದೇವಾಲಯದ ಭಿತ್ತಿಯ ಮೇಲೆ ಕಪೋತವಿದ್ದು, ಅದರ ಮೇಲೆ ಇಟ್ಟಿಗೆ, ಗಾರೆಗಳಿಂದ ಕೂಡಿದ ದೇವಕೋಷ್ಟಗಳಿವೆ(ಸಭಾಮಂಟಪಕ್ಕೆ ಮಾತ್ರ). ಈ ದೇವಕೋಷ್ಟಗಳಲ್ಲಿ ಶಿಖರಗಳು, ಶಾಲಾಕಾರದಲ್ಲಿದ್ದು, ನೋಡಲು ದೇವಾಲಯದ ಮಹಾದ್ವಾರದ ಮಾದರಿಗಳಂತಿವೆ. ದೇವಾಲಯದ ಸುತ್ತಲೂ ಪ್ರಾಂಗಣವಿದೆ. ಈ ಪ್ರಾಂಗಣಕ್ಕೆ ಪೂರ್ವ ಮತ್ತು ದಕ್ಷಿಣ ದಿಕ್ಕುಗಳಿಗೆ ಮುಖ್ಯ ದ್ವಾರಗಳಿವೆ.

ದೇವಾಲಯದ ಪೂರ್ವದಿಕ್ಕಿಗೆ ಪ್ರವೇಶಮಹಾದ್ವಾರವಿದ್ದು, ಗಾತ್ರ ಮತ್ತು ಅಳತೆಯಲ್ಲಿ ಬೃಹತ್ ಪ್ರಮಾಣದಿಂದಾಗಿ ಗಮನ ಸೆಳೆಯುತ್ತದೆ. ಈ ಗೋಪುರವು ಚಿತ್ರದುರ್ಗ ಪಾಳೆಯಗಾರರ ಕಾಲದಲ್ಲಿ ಕಟ್ಟಲ್ಪಟ್ಟಿತು.[೪೦] ಮಹಾದ್ವಾರಮಂಟಪದ ಮುಂಭಾಗದಲ್ಲಿ ಬೃಹತ್ ತೆರೆದ ಮಂಟಪವಿದ್ದು, ಅದರ ಇಕ್ಕೆಲಗಳಲ್ಲಿ ಜಗತಿಗಳಿವೆ. ಅವುಗಳ ಮೇಲೆ ಬೃಹತ್ ಕಂಬಗಳಿದ್ದು, ಕಂಬಗಳ ಮೇಲೆ ಗಜಾನನ ಹಾಗು ಭೈರವನ ಶಿಲ್ಪಗಳನ್ನು ಕೆತ್ತಲಾಗಿದೆ. ದ್ವಾರಮಂಟಪದ ಎರಡು ಬದಿಗೆ ಬೃಹತ್ ಬಾಗಿಲು ಚೌಕಟ್ಟುಗಳು, ಅವುಗಳಲ್ಲಿ ಸ್ತ್ರೀದ್ವಾರ ಪಾಲಕರುಗಳ ಶಿಲ್ಪಗಳಿವೆ. ಲಲಾಟಬಿಂಬದಲ್ಲಿ ಗಜಾನನ ಲಿಂಗವಿದೆ. ದ್ವಾರಮಂಟಪದ ಒಳಭಾಗದಲ್ಲಿ ಎರಡೂ ಬದಿಯಲ್ಲಿ ಮಾಡುಗಳಿವೆ. ದ್ವಾರಮಂಟಪದ ಮೇಲೆ ಇಟ್ಟಿಗೆ ಮತ್ತು ಗಾರೆಯಿಂದ ನಿರ್ಮಿಸಿರುವ ಮೂಲ ಮಾದರಿಯ ಐದು ತಲದ ಗೋಪುರವನ್ನು ಇತ್ತೀಚೆಗೆ ಪುನರ್‌ನಿರ್ಮಿಸಲಾಗಿದೆ. ಈ ಗೋಪುರವು ದ್ರಾವಿಡ ಶೈಲಿಯಲ್ಲಿದ್ದು ಶಾಲ, ಕೂಟ, ಹಾರಗಳನ್ನು ಹೊಂದಿದೆ. ಅದರ ಮುಖ್ಯದ್ವಾರದ ಮೇಲ್ಭಾಗದಲ್ಲಿ ಪ್ರತಿ ಅಂತಸ್ತಿಗೂ ಒಂದೊಂದು ದ್ವಾರಬಾಗಿಲಿದ್ದು ಹಂಪಿಯ ವಿರೂಪಾಕ್ಷ ದೇವಾಲಯದ ಗೋಪುರವನ್ನು ನೆನಪಿಸುತ್ತದೆ. ಇದರ ಮುಂದೆ ದೀಪಸ್ತಂಭ ಹಾಗು ಉಯ್ಯಾಲೆಕಂಬಗಳಿವೆ.

ದೇವಾಲಯದ ಗರ್ಭಗೃಹದಲ್ಲಿ ಮೂಲ ಮಲ್ಲೇಶ್ವರನ ಶಿವಲಿಂಗವಿದೆ. ಅಂತರಾಳದ ಮಧ್ಯದಲ್ಲಿ ಎದುರು ನಂದಿಯ ಪುಟ್ಟ ವಿಗ್ರಹವಿದೆ. ಅರ್ಧಮಂಟಪದ ಬಲಬದಿಯ ಗರ್ಭಗೃಹದಲ್ಲಿ ಪಾರ್ವತಿ ಶಿಲ್ಪವಿದ್ದು, ಮುಂಭಾಗದಲ್ಲಿ ಚಿಕ್ಕ ಗಜಾನನ ಮತ್ತು ಅಯ್ಯಪ್ಪಸ್ವಾಮಿಯ ಶಿಲ್ಪಗಳಿವೆ. ನವರಂಗದ ಬಲಬದಿಯ ಕಟ್ಟೆಯ ಮೇಲೆ ಪಾರ್ವತಿ ಸಮೇತ ಚಂದ್ರಮೌಳೇಶ್ವರ, ಪಾರ್ವತಿ ಸಮೇತ ತೇರುಮಲ್ಲೇಶ್ವರ, ಪಾರ್ವತಿ ಸಮೇತ ವೃಷಭಾರೂಢ ಶಿವನ ಸುಂದರವಾದ ಪಂಚಲೋಹ ಮತ್ತು ಹಿತ್ತಾಳೆಯ ಶಿಲ್ಪಗಳಿವೆ.

ಈ ದೇವಾಲಯವು ಮತ್ತಿತಿಮ್ಮಣ್ಣನಾಯಕ[೪೧] ಇಲ್ಲವೇ ಬಿಚ್ಚುಗತ್ತಿ ಭರಮಣ್ಣನಾಯಕ[೪೨] ನಿಂದ ನಿರ್ಮಿತವಾಗಿರಬಹುದು ಎಂದು ತಿಳಿದುಬರುತ್ತದೆ.

೮. ರಂಗನಾಥಸ್ವಾಮಿ ದೇವಾಲಯ

ಗ್ರಾಮ : ಅಂಬಲಗೆರೆ (ಹಿರಿಯೂರು ತಾಲ್ಲೂಕು)

ಸ್ಥಾನನಿರ್ದೇಶನ : ಹಿರಿಯೂರಿನಿಂದ ಚಳ್ಳಕೆರೆ ಮಾರ್ಗದಲ್ಲಿ ೧೦೩ ರಿಂದ ಬಲಕ್ಕೆ ಐದು ಮೈಲಿ ಅಂತರದಲ್ಲಿದೆ.

ಮುಖದಿಕ್ಕು : ಪೂರ್ವ

ಶಾಸನ ಮತ್ತು ಕಾಲ : ಮೂಲ ವಿಜಯನಗರ, ಜೀರ್ಣೋದ್ಧಾರ : ಚಿತ್ರದುರ್ಗ ಪಾಳೆಯಗಾರರು ಶಾಸನ : ಹಿರಿಯೂರು-೨೨

ನಿರ್ಮಾಣ ಸಾಮಾಗ್ರಿ : ಕಣಶಿಲೆ, ಇಟ್ಟಿಗೆ, ಗಾರೆ

ವಾಸ್ತುಭಾಗಗಳು : ಗರ್ಭಗೃಹ, ಅಂತರಾಳ, ಸಭಾಮಂಟಪ, ಮಹಾರಂಗಮಂಟಪ, ಮುಖಮಂಟಪ, ಪ್ರಾಕಾರ, ಮಹಾದ್ವಾರಮಂಟಪ, ದೀಪಸ್ತಂಭ, ಗರುಡಸ್ತಂಭ, ಉಯ್ಯಾಲೆಕಂಬ.

ಹಿರಿಯೂರು ತಾಲ್ಲೂಕಿನ ಅಂಬಲಗೆರೆ ಗ್ರಾಮದಲ್ಲಿರುವ ಈ ದೇವಾಲಯವು ಉತ್ತಮ ಕಲಾಶೈಲಿಯನ್ನು ಹೊಂದಿದೆ. ಚಿತ್ರದುರ್ಗ ಪಾಳೆಯಗಾರರ ಕಾಲದ ಕಲೆಯ ಉತ್ಕೃಷ್ಟತೆಯನ್ನು ತಿಳಿಸುವ ಪ್ರಮುಖ ದೇವಾಲಯವಾಗಿದೆ. ಮಹಾರಂಗಮಂಟಪದ ಒಂದು ಕಂಬಕ್ಕೆ ತಂಗಡಿ ಕಟ್ಟಿಗೆಯ ಬೃಹತ್ ಕಂಬವೊಂದು ಆಶ್ರಯ ನೀಡಿರುವುದರಿಂದ ಊರಲ್ಲಿ ಅಡುಗೆಗೆ ಯಾರೂ ತಂಗಡಿ ಕಟ್ಟಿಗೆಯನ್ನು ಬಳಸುವುದಿಲ್ಲ ಎಂದು ಸ್ಥಳೀಯರಿಂದ ತಿಳಿದುಬಂದಿತು.

ಗರ್ಭಗೃಹವು ಸರಳವಾಗಿದ್ದು, ಒಂದೇ ಅಂಕಣದಲ್ಲಿದೆ. ಗರ್ಭಗೃಹಕ್ಕೆ ದ್ವಾರಬಂಧವಿಲ್ಲ. ಅಂತರಾಳವು ನಾಲ್ಕು ಅರೆಗಂಬಗಳನ್ನು ಹೊಂದಿದ್ದು, ದ್ವಾರಬಂಧದಲ್ಲಿ ವೈಷ್ಣವ ದ್ವಾರಪಾಲಕರ ಶಿಲ್ಪಗಳು, ಲಲಾಟಬಿಂಬದಲ್ಲಿ ಗಜಲಕ್ಷ್ಮಿಯ ಶಿಲ್ಪಗಳಿವೆ. ಈ ದ್ವಾರಬಂಧವು ಎರಡು ಪಟ್ಟಿಕೆಗಳಲ್ಲಿ ಮೂರು ಶಾಖೆಗಳನ್ನು ಹೊಂದಿದ್ದು, ಒಂದು ಶಾಖೆ ಸರಪಳಿಯಾಕಾರ, ಉಳಿದವು ಲತಾಬಳ್ಳಿಗಳ ಅಲಂಕರಣೆಯನ್ನು ಹೊಂದಿವೆ. ಅಂತರಾಳವು ನಿರಾಡಂಭರವಾಗಿದ್ದು, ಅತ್ಯಂತ ಸರಳವಾಗಿದೆ. ದ್ವಾರಬಂಧದ ಎರಡು ಬದಿಯ ಕಂಬಗಳು ಉಪಕಾಂಡದಲ್ಲಿ ಕಿರುಕಂಬಗಳನ್ನು ಹೊಂದಿವೆ. ಉತ್ತಿರಾಂಗ ಭಾಗದಲ್ಲಿ ಅನಂತಶಯನ ವಿಷ್ಣುವಿನ ಶಿಲ್ಪವಿದ್ದು, ಪಾದಗಳ ಬಳಿ ಶ್ರೀದೇವಿ, ಭೂದೇವಿಯರ ಶಿಲ್ಪಗಳಿವೆ. ಈ ಉತ್ತಿರಾಂಗವು ಇತ್ತೀಚೆಗೆ ಜೀರ್ಣೋದ್ಧಾರಗೊಂಡಿದೆ.

ನವರಂಗಮಂಟಪವು ದಕ್ಷಿಣ ದಿಕ್ಕಿಗೆ ಪ್ರವೇಶದ್ವಾರವನ್ನು ಹೊಂದಿದ್ದು, ಸುತ್ತಲೂ ಭಿತ್ತಿಯಿಂದ ಮುಚ್ಚಲ್ಪಟ್ಟಿದೆ. ಇಲ್ಲಿಯ ಭಿತ್ತಿಯ ಹನ್ನೆರೆಡು ಕಂಬಗಳಲ್ಲಿ ಸರಳವಾದ ಚೌಕಕಾಂಡಗಳಿದ್ದು, ಯಾವುದೇ ಕೆತ್ತನೆಗಳಿಲ್ಲ. ಪ್ರಧಾನವಾದ ನಾಲ್ಕು ಕಂಬಗಳು ಮಾತ್ರ ತುಂಬಾ ಆಕರ್ಷಕವಾಗಿದ್ದು, ಅವುಗಳ ಮಧ್ಯ ಅರ್ಧ ಅಡಿಯಷ್ಟು ಜಗತಿಯಿದೆ. ಇವು ಪೀಠ, ಕಾಂಡ ಮತ್ತು ಬೋದುಗೆಗಳನ್ನೊಳಗೊಂಡಿದ್ದು, ಕಾಂಡಭಾಗದಲ್ಲಿ ಕೆಳಗೆ ಮಧ್ಯ ಮತ್ತು ಮೇಲೆ ಮೂರು ಚೌಕ ಭಾಗಗಳನ್ನು ಹೊಂದಿದ್ದು, ಚೌಕ ಭಾಗಗಳ ಮೂಲೆಗಳ ಅಲಂಕರಣೆ ಕಂಬಗಳ ರೀತಿಯಲ್ಲಿದ್ದು ವಿಶೇಷವಾಗಿವೆ. ಕಂಬಗಳ ಚೌಕ ಭಾಗಗಳ ಮೇಲೆ ಕುಳಿತಸಿಂಹ, ಹಾಲುಣಿಸುತ್ತಿರುವ ಹಸು, ಶಿವಲಿಂಗ ಮತ್ತು ಭಕ್ತ, ಭಕ್ತಾಂಜನೇಯ, ಯತಿ, ಬಾಲಕೃಷ್ಣ, ದೇವಿ, ಬೇಡತಿ, ವಿಷ್ಣು, ಕುಬ್ಜ, ಕಾಳಿಂಗಮರ್ದನ ಕೃಷ್ಣ, ಅರಸ, ಗರುಡ,

ಅರಳು ಕಮಲ, ವಾದ್ಯಗಾರರು, ವೀರಾಂಜನೇಯ, ಶಂಖ, ಮೊಸರು ಕಡೆಯುತ್ತಿರುವ ಗೋಪಿಕೆಯರು ಮತ್ತು ಕೃಷ್ಣ, ಮತ್ಸ್ಯಕನ್ಯೆ, ಅಂತರಾಳದ ದ್ವಾರಬಂಧದ ಮುಂದಿನ ಬಲಭಾಗದ ಮೊದಲನೆಯ ಕಂಬದಲ್ಲಿ ಶಿಲಾಶಾಸನ, ಕಾಲ್ಪನಿಕ ಚಿತ್ರಗಳು, ನೃತ್ಯಗಾರರು, ಹಂಸ ಮುಂತಾದ ಉಬ್ಬುಶಿಲ್ಪಗಳಿವೆ. ನಾಲ್ಕು ಕಂಬಗಳ ನಾಲ್ಕು ಬದಿಗೆ ಪುಷ್ಪಬೋದುಗೆಗಳನ್ನು, ಚೌಕ ಭಾಗದ ಮಧ್ಯ ಎಂಟು ಮತ್ತು ಹದಿನಾರು ಮುಖಗಳ ಲಂಬಪಟ್ಟಿಕೆಗಳನ್ನು ಹೊಂದಿದ್ದು, ಮಧ್ಯದ ಅಂಕಣ ಆಕರ್ಷಕವಾದ ಭುವನೇಶ್ವರಿಯನ್ನು ಹೊಂದಿದೆ. ಇದರಲ್ಲಿ ಮೊಗಚಿ ಹಾಕಿದ ಕಮಲವಿದ್ದು, ದಳಗಳು ಸ್ಪಷ್ಟವಾಗಿರುವುದು ವಿಶೇಷ. ಉಳಿದಂತೆ ಛತ್ತು ಸಮತಟ್ಟಾಗಿದೆ.

ಪ್ರಧಾನ ದೇವಾಲಯದ ಮಹಾರಂಗಮಂಟಪವು ಹಿರಿಯೂರಿನ ತೇರುಮಲ್ಲೇಶ್ವರ ದೇವಾಲಯದ ಮಹಾರಂಗಮಂಟಪವನ್ನು ಹೋಲುತ್ತಿದ್ದು, ಇದೂ ಸಹ ಉತ್ತರ, ದಕ್ಷಿಣ ಹಾಗು ಪೂರ್ವ ದಿಕ್ಕಿಗೆ ಪ್ರವೇಶಮಂಟಪಗಳನ್ನು ಹೊಂದಿದೆ. ಈ ಮಹಾರಂಗಮಂಟಪವು ತೆರೆದ ರೀತಿಯಲ್ಲಿದೆ. ಪ್ರವೇಶಮಂಟಪದ ಮುಂಭಾಗದಲ್ಲಿ (ಪೂರ್ವ) ಎರಡು ಕಂಬಗಳಿದ್ದು, ಅವು ದ್ವಿಕಾಂಡದಲ್ಲಿವೆ. ಪ್ರಧಾನ ಕಾಂಡದಲ್ಲಿ ಕೆಳಗೆ, ಮಧ್ಯ ಮತ್ತು ಮೇಲೆ ಚೌಕ ಭಾಗಗಳಿದ್ದು, ಅವುಗಳ ಮೇಲೆ ವಿವಿಧ ರೀತಿಯ ಉಬ್ಬುಶಿಲ್ಪಗಳಿವೆ. ಉಪಕಾಂಡದಲ್ಲಿ ಆನೆಯ ಮೇಲೆ ತಮ್ಮ ಹಿಂಗಾಲುಗಳನ್ನು ಹೂರಿ, ಮುಂಗಾಲುಗಳನ್ನು ಮೇಲಕ್ಕೆ ಎತ್ತಿ ನಿಂತ ಸಿಂಹದ ಆಕೃತಿಗಳಿವೆ. ಉತ್ತರ ಮತ್ತು ದಕ್ಷಿಣ ದಿಕ್ಕುಗಳ ಪ್ರವೇಶ ಮಂಟಪಗಳ ಕಂಬಗಳೂ ಕೂಡ ಇದೇ ರೀತಿ ಇವೆ.

ಮಹಾರಂಗಮಂಟಪ ಸುತ್ತಲೂ ಕಕ್ಷಾಸನ ಹೊಂದಿದ್ದು, ಅದರ ಮೇಲೆ ಕುಳ್ಳಾಗಿ ಕಾಣುವ ಇಪ್ಪತ್ತೆರಡು ಕಂಬಗಳಿವೆ. ಪ್ರವೇಶದ ಎರಡು ಕಂಬಗಳನ್ನು ಹೊರತುಪಡಿಸಿ, ಉಳಿದ ಎಲ್ಲಾ ಕಂಬಗಳು ಒಂದೇ ಶೈಲಿಯಲ್ಲಿವೆ. ಇವುಗಳು ವಿಜಯನಗರ ಶೈಲಿಯ ಕಂಬಗಳಂತೆ ಕೆಳಗೆ, ಮಧ್ಯ ಮತ್ತು ಮೇಲೆ ಮೂರು ಚೌಕ ಭಾಗಗಳನ್ನು ಹೊಂದಿದ್ದರೂ ಕೂಡ ಮಧ್ಯ ಮತ್ತು ಮೇಲಿನ ಚೌಕ ಭಾಗದಲ್ಲಿ ಅಧಿಕವಾದ ಅಲಂಕರಣೆಯನ್ನು ಕಾಣಬಹುದು. ಇದು ಈ ಕಂಬಗಳ ವಿಶೇಷ. ನಾಲ್ಕು ಮೂಲೆಯ ಸ್ವತಂತ್ರ ಕಂಬಗಳು ನಾಲ್ಕು ಬದಿಗೆ ವಿಜಯನಗರ ದೇವಾಲಯಗಳ ಗೋಡೆಗಳ ಮೇಲಿರುವಂತೆ ಕುಂಭಪಂಜರಗಳನ್ನು ಹೊಂದಿರುವುದು ಗಮನಾರ್ಹ. ಮಹಾರಂಗಮಂಟಪದ ಮೊದಲ ಎರಡು ಕಂಬಗಳು ಸಭಾಮಂಟಪದ ಮೊದಲ ಎರಡು ಕಂಬಗಳಂತೆ ಇದ್ದರೂ ಕೂಡ ಇಲ್ಲಿ ಉಪಕಾಂಡದ ಸಿಂಹಗಳ ಮೇಲೆ ಸವಾರರಿರುವುದು ವಿಶೇಷ.

ಮಹಾರಂಗಮಂಟಪದ ಮಧ್ಯದಲ್ಲಿರುವ ನಾಲ್ಕು ಕಂಬಗಳು ತಮ್ಮ ಬೃಹತ್ ಗಾತ್ರದಿಂದ ಗಮನಸೆಳೆಯುತ್ತವೆ. ಇವು ಕೂಡ ವಿಜಯನಗರದ ಸಿಂಹಸ್ತಂಭ ಶೈಲಿಯಲ್ಲಿ ಕೆತ್ತಲ್ಪಟ್ಟಿವೆ. ಅಂದರೆ ಪೀಠ, ಕಾಂಡದಲ್ಲಿ ಚೌಕಾಕಾರ, ಮೇಲೆ ತರಂಗ ಹಾಗು ಪುಷ್ಪಾಲಂಕಾರ ಬೋದುಗೆಗಳಿವೆ. ಕಂಬಗಳ ಒಂದು ಬದಿಯಲ್ಲಿ ಮಕರದ ಮೇಲೆ ಮಾನವ ಗಾತ್ರದ ನಿಂತಿರುವ ಶಿಲ್ಪಗಳಿದ್ದು, ಇನ್ನೊಂದು ರೀತಿಯ ಕಂಬಗಳಲ್ಲಿ ಚೌಕಾಕಾರ, ಅಷ್ಟಮುಖಗಳ ಪಟ್ಟಿಕೆ, ಮತ್ತೆ ಚೌಕಾಕಾರ, ಅಷ್ಟಮುಖಗಳ ಪಟ್ಟಿಕೆ, ಮತ್ತೆ ಚೌಕ, ಮೇಲೆ ತರಂಗ ಬೋದುಗೆಗಳಿವೆ. ಈ ಕಂಬಗಳ ಬೋದುಗೆಗಳ ಎರಡು ಬದಿಗೆ ಮಾತ್ರ ಪುಷ್ಪಬೋದುಗೆಗಳಿವೆ. ಎಲ್ಲಾ ಕಂಬಗಳ ಮೇಲೆ ಕಂಡು ಬರುವ ಉಬ್ಬುಶಿಲ್ಪಗಳೆಂದರೆ ಕುಳಿತ ಸಿಂಹ, ಕೂರ್ಮ, ಶಂಖ, ಚಕ್ರ, ಅನಂತಶಯನ, ಆಂಜನೇಯ, ವಾಲಿಸುಗ್ರೀವರ ಕಾಳಗ, ಧನುರ್ಧಾರಿ, ಕೇಶವ, ಹಂಸ, ಮಿಥುನಶಿಲ್ಪಗಳು, ಹಾವಾಡಿಗ, ಅರ್ಧಚಂದ್ರ, ಯತಿ, ಗೊಲ್ಲ, ಗರುಡ, ವಾಮನ ಮುಂತಾದವು. ಸಾಮಾನ್ಯವಾಗಿ ಕಂಬಗಳ ಅಲಂಕರಣೆಯ ಉದ್ದೇಶದಿಂದ ಉಬ್ಬುಶಿಲ್ಪಗಳನ್ನು ಖಂಡರಿಸಲಾಗುತ್ತದೆ. ಹಾಗೆಯೇ ತನ್ಮೂಲಕ ದೇವಾಲಯದ ಧಾರ್ಮಿಕ ಪರಂಪರೆಗೆ ಸಂಬಂಧಿಸಿದ ಮತ್ತು ಸಮಕಾಲೀನ ಸಾಮಾಜಿಕ ಸಂಗತಿಗಳನ್ನು ಬಿಂಬಿಸುವ ಉದ್ದೇಶವನ್ನು ಈ ಉಬ್ಬುಶಿಲ್ಪಗಳ ಕೆತ್ತನೆಯಲ್ಲಿ ಗುರುತಿಸಬಹುದು. ಆದರೆ ಇವು ಕಕ್ಷಾಸನದ ಮೇಲಿನ ಕಂಬಗಳ ಉಬ್ಬುಶಿಲ್ಪಗಳು. ಪೂರ್ವದಿಕ್ಕಿನ ಪ್ರವೇಶಮಂಟಪದ ಕಕ್ಷಾಸನದ ಮೇಲಿನ ಕಂಬಗಳು ನಾಲ್ಕು ದಿಕ್ಕಿಗೂ ಪೂರ್ಣಕುಂಭಗಳನ್ನು ಹೊಂದಿದ್ದು, ವಿಜಯನಗರ ಶೈಲಿಯ ಕಂಬಗಳನ್ನು ನೆನಪಿಸುತ್ತವೆ. ಮಧ್ಯದ ನಾಲ್ಕು ಪ್ರಧಾನ ಕಂಬಗಳ ಕಾಂಡಗಳ ಮೇಲೆ ಯಾವುದೇ ಶಿಲ್ಪಗಳಿಲ್ಲ. ಈ ಮಂಟಪದ ಛತ್ತು ಸರಳವಾಗಿದೆ. ಆದರೆ ಅಧಿಷ್ಠಾನದ ಒಳಭಾಗದಲ್ಲಿ ಆನೆಗಳ ಸಾಲುಗಳು, ಅಲ್ಲಲ್ಲಿ ಕುಳಿತಸಿಂಹ, ವಾನರ ಶಿಲ್ಪಗಳಿವೆ. ಎಡಭಾಗದ ಕಕ್ಷಾಸನದಲ್ಲಿ ವರಾಹ ಲಾಂಛನವಿದ್ದು (ಕಾಲು ಕುದುರೆ, ಮುಖ ವರಾಹ, ದೇಹ ಆನೆ, ಮುಂಭಾಗ ಖಡ್ಗ) ವಿಜಯನಗರ ಅರಸರ ಕಾಲವನ್ನು ನೆನಪಿಸುತ್ತದೆ.

ಅಧಿಷ್ಠಾನವು ಸರಳವಾಗಿದ್ದು, ಹಿರಿಯೂರಿನ ತೇರುಮಲ್ಲೇಶ್ವರ ದೇವಾಲಯದ ಅಧಿಷ್ಠಾನದಂತಿದೆ. ಅಧಿಷ್ಠಾನವು ಉಪಾನ, ಜಗತಿ, ಪದ್ಮದಳ, ತ್ರಿಪಟ್ಟ ಕುಮುದ ಹಾಗು ಕಪೋತ ಭಾಗಗಳನ್ನು ಹೊಂದಿದೆ. ಗರ್ಭಗೃಹದ ಮೇಲೆ ದ್ವಿತಲದ ಶಿಖರ ದ್ರಾವಿಡ ಶೈಲಿಯಲ್ಲಿದ್ದು, ಹಾರ ಹಾಗು ಕೋಷ್ಟಗಳನ್ನು ಸುಣ್ಣಬಣ್ಣಗಳಿಂದ ಅಲಂಕರಿಸಿರುವುದರಿಂದ ಶಿಲ್ಪಗಳು ಸ್ಪಷ್ಟವಾಗಿ ಕಾಣಿಸುತ್ತಿಲ್ಲ. ಭಿತ್ತಿಯು ಸರಳವಾಗಿದ್ದು, ಮೇಲ್ಭಾಗದಲ್ಲಿ ಮೊಗಚಿದ ಕಪೋತವಿದೆ. ಕಪೋತ ಭಾಗದವರೆಗೆ ಮಾತ್ರ ಸುಸ್ಥಿತಿಯಲ್ಲಿದೆ. ಕಪೋತದಲ್ಲಿ ಕೀರ್ತಿ

ಮುಖಗಳ ಅಲಂಕರಣೆ ವಿಶೇಷವಾಗಿದೆ. ನವರಂಗದ ದಕ್ಷಿಣ ದಿಕ್ಕಿನ ಉಪಪ್ರವೇಶದ್ವಾರದ ದ್ವಾರಬಂಧವು ಸರಳವಾಗಿದೆ.

ದೇವಾಲಯದ ಸುತ್ತಲೂ ಎತ್ತರವಾದ ಪ್ರಾಕಾರ ಗೋಡೆಯಿದ್ದು, ಅದರ ಮೇಲೆ ಆನೆ, ನಾಗಸರ್ಪ, ಹಾವನ್ನು ಹಿಡಿದಿರುವ ಹಂಸ, ಕಮಲ, ಪೂರ್ಣಚಂದ್ರ, ಅರ್ಧಚಂದ್ರ ಮುಂತಾದ ಉಬ್ಬುಶಿಲ್ಪಗಳಿವೆ.

ಮಹಾದ್ವಾರ ಮಂಟಪವನ್ನು ದೊಡ್ಡ ಅಳತೆಕಲ್ಲುಗಳಿಂದ ಕಟ್ಟಲಾಗಿದ್ದು ಮೇಲೆ ಗೋಪುರವಿಲ್ಲ. ಮಹಾದ್ವಾರದ ದ್ವಾರಬಂಧದ ಸುತ್ತಲೂ ವಿವಿಧ ಉಬ್ಬುಶಿಲ್ಪಗಳು ಹಾಗು ಬಳ್ಳಿಯಾಕಾರದ ರಚನೆ ಈ ದ್ವಾರದ ವಿಶೇಷವಾಗಿದೆ. ಇದರ ಮುಂದೆ ಮೂವತ್ತೈದು ಅಡಿ ಎತ್ತರದ ದೀಪಸ್ತಂಭವಿದ್ದು, ಮೂಲೆಗಳಲ್ಲಿ ದೀಪವನ್ನು ಹೊತ್ತ ಕುಬ್ಜರ ಚಿತ್ರಗಳು ಇಲ್ಲಿಯ ವಿಶೇಷವಾಗಿದೆ. ದೀಪಸ್ತಂಭದ ಮುಂದೆ ನಲವತ್ತೈದು ಅಡಿ ಎತ್ತರದ ಏಕಶಿಲೆಯ ಗರುಡಗಂಬವಿದೆ. ಇದರ ಮುಂದೆ ಉಯ್ಯಾಲೆ ಕಂಬವಿದ್ದು, ಇದೂ ಸಹ ಗರುಡಗಂಬದಷ್ಟೇ ಎತ್ತರವಾಗಿದೆ.

ಗರ್ಭಗೃಹದಲ್ಲಿ ಶ್ರೀರಂಗನಾಥಸ್ವಾಮಿಯ ದುಂಡು ಶಿಲ್ಪವು ಸಮಭಂಗಿಯಲ್ಲಿದ್ದು ಚತುರ್ಭುಜಗಳನ್ನು ಹೊಂದಿದೆ. ಹಿಂದಿನ ಬಲಗೈಯಲ್ಲಿ ಶಂಖ, ಎಡಗೈಯಲ್ಲಿ ಚಕ್ರ, ಮುಂದಿನ ಬಲಗೈಯಲ್ಲಿ ಗದಾದಂಡಗಳಿದ್ದರೆ, ಎಡಗೈ ಅಭಯ ಹಸ್ತವಾಗಿದೆ. ಬಲಗಾಲ ಹೆಬ್ಬೆರಳು ನೆಲಕ್ಕೆ ಹೂರಿಲ್ಲದಿರುವುದು ಈ ಶಿಲ್ಪದ ವಿಶೇಷವಾಗಿದೆ. ಆದ್ದರಿಂದ ಇದನ್ನು ಗಮನಮೂರ್ತಿಯೆಂತಲೂ ಕರೆಯುತ್ತಾರೆ. ಇದು ಕಿರೀಟಮುಕುಟ, ಕಿವಿಯಲ್ಲಿ ಕುಂಡಲ, ಯಜ್ಞೋಪವೀತ, ಕಟೀಬಂಧ, ಕೊರಳಹಾರ, ಕೌಸ್ತುಭಹಾರ, ಕೈಕಡಗ, ಕಾಲ್ಕಡಗ, ಎಡಬಲಬದಿಯಲ್ಲಿ ಶ್ರೀದೇವಿ-ಭೂದೇವಿಯರ ಶಿಲ್ಪಗಳು, ಪೀಠದಲ್ಲಿ ಗರುಡ ವಾಹನಗಳನ್ನು ಹೊಂದಿದೆ.

ಪ್ರಾಂಗಣದಲ್ಲಿ ಗರ್ಭಗೃಹದ ಎಡಬದಿಯಲ್ಲಿ ಲಕ್ಷ್ಮೀದೇವಿಯ ಚಿಕ್ಕ ಮಂಟಪವಿದ್ದು, ಒಂದು ಅಡಿ ಎತ್ತರದ ಪೀಠದ ಮೇಲೆ ಒಂದೂವರೆ ಅಡಿ ಎತ್ತರದ ಲಕ್ಷ್ಮಿಯ ವಿಗ್ರಹವಿದೆ. ಪದ್ಮಾಸನದಲ್ಲಿರುವ ಈ ವಿಗ್ರಹವು ಚತುರ್ಭುಜಗಳನ್ನು ಹೊಂದಿದ್ದು, ಹಿಂದಿನ ಎರಡು ಕೈಗಳಲ್ಲಿ ಕಮಲ ಪುಷ್ಪಗಳನ್ನು, ಕಿರೀಟಮುಕುಟ, ಸೊಂಟಪಟ್ಟಿ, ಕೈಕಡಗ, ಕಾಲ್ಕಡಗಗಳನ್ನು ಹೊಂದಿದ್ದಾಳೆ. ಪ್ರಾಕಾರದ ಉತ್ತರ ಗೋಡೆಯ ಒಂದು ಗೂಡಿನಲ್ಲಿ ಕಾಲಭೈರವನ ಶಿಲ್ಪವಿದ್ದು, ಅದರ ಪೀಠದ ಮೇಲೆ ಚೇಳು(ಭೈರವನ ವಾಹನ) ಇದೆ. ವೀರಭದ್ರ ಉಗ್ರರೂಪದಲ್ಲಿದ್ದಾಗ ಕಾಲಭೈರವನೆನಿಸಿಕೊಂಡ. ಈ ಶಿಲ್ಪವು ತ್ರಿಭಂಗಿಯಲ್ಲಿದ್ದು ಚತುರ್ಭುಜಗಳನ್ನು ಹೊಂದಿದೆ.

ಡಮರು, ತ್ರಿಶೂಲ, ಖಡ್ಗ, ದಕ್ಷನ ರುಂಡಗಳನ್ನು ತನ್ನ ಕೈಗಳಲ್ಲಿ ಹಿಡಿದಿದೆ. ಬಲಬದಿಗೆ ದಕ್ಷನ ಹೆಂಡತಿಯಿದ್ದು, ಎಡಗಡೆಗೆ ದಕ್ಷನ ರುಂಡದ ರಕ್ತವನ್ನು ಕುಡಿಯಲು ಪ್ರಯತ್ನಿಸುತ್ತಿರುವ ನಾಯಿಯ ಶಿಲ್ಪವಿದೆ. ತಲೆಯಲ್ಲಿ ಜಟಾಮುಕುಟ, ಕಟೀಬಂಧ, ನಾಗಬಂಧ, ಚನ್ನವೀರಬಂಧ ಹಾಗು ರುಂಡಮಾಲೆಯನ್ನು ಹೊಂದಿದ್ದು, ಒಂದೂವರೆ ಅಡಿ ಎತ್ತರವಾಗಿದೆ.

ಈ ದೇವಾಲಯವು ಬಹುಶಃ ಮತ್ತಿತಿಮ್ಮಣ್ಣನಾಯಕ, ಇಲ್ಲವೇ ಬಿಚ್ಚುಗತ್ತಿ ಭರಮಣ್ಣ ನಾಯಕ ಕಾಲದಲ್ಲಿ ನಿರ್ಮಿಸಲಾಗಿದೆ ಎಂದು ಊಹಿಸಬಹುದು. ಕಾರಣ ನೀರ್ಥಡಿಯ ರಂಗನಾಥಸ್ವಾಮಿ, ಹಿರಿಯೂರಿನ ತೇರುಮಲ್ಲೇಶ್ವರ ಹಾಗು ಅಂಬಲಗೆರೆ ರಂಗನಾಥಸ್ವಾಮಿ ಈ ಮೂರು ದೇವಾಲಯಗಳು ಕೆಲವು ವಾಸ್ತು ಭಾಗಗಳಲ್ಲಿ ಅಥವಾ ಲಕ್ಷಣಗಳಲ್ಲಿ ಸಾಮಿಪ್ಯವನ್ನು ಹೊಂದಿವೆ.

೯. ವೇಣುಗೋಪಾಲಸ್ವಾಮಿ ದೇವಾಲಯ

ಗ್ರಾಮ	:	ಹೊಳಲ್ಕೆರೆ (ನಗರ)
ಸ್ಥಾನನಿರ್ದೇಶನ	:	ವೀರಭದ್ರ ದೇವಾಲಯದ ಕೆಳಕ್ಕೆ
ಮುಖದಿಕ್ಕು	:	ಪೂರ್ವ
ಶಾಸನ ಮತ್ತು ಕಾಲ	:	ಮತ್ತಿತಿಮ್ಮಣ್ಣ ನಾಯಕ.[೪೩] (೧೫೬೩) ಶಾಸನ : ಹೊಳಲ್ಕೆರೆ–೬,೭, ರಂಗಮಂಟಪದ ಕಂಭಶಾಸನ
ನಿರ್ಮಾಣ ಸಾಮಾಗ್ರಿ	:	ಕಣಶಿಲೆ, ಇಟ್ಟಿಗೆ, ಗಾರೆ
ವಾಸ್ತುಭಾಗಗಳು	:	ಗರ್ಭಗೃಹ, ಅಂತರಾಳ, ಸಭಾಮಂಟಪ, ಮಹಾರಂಗಮಂಟಪ, ಗರುಡಮಂಟಪ.

ನಗರದ ಮಧ್ಯಭಾಗದಲ್ಲಿರುವ ಈ ದೇವಾಲಯವು ನಗರದಲ್ಲೇ ಪ್ರಸಿದ್ಧ ದೇವಾಲಯವಾಗಿದೆ. ಚಿತ್ರದುರ್ಗ ಪಾಳೆಯಗಾರರ ದೊಡ್ಡ ಪ್ರಮಾಣದ ದೇವಾಲಯಗಳಲ್ಲಿ ಒಂದಾಗಿದೆ. ಚಿತ್ರದುರ್ಗ ಪಾಳೆಯಗಾರರು ಹೇಗೆ ವಿಜಯನಗರದ ಕಲಾಶೈಲಿಯನ್ನು ಅನುಸರಿಸಿಕೊಂಡು ದೇವಾಲಯಗಳನ್ನು ನಿರ್ಮಿಸಿದ್ದಾರೆಂದು ಇದರಿಂದ ತಿಳಿಯಬಹುದಾಗಿದೆ.

ದೇವಾಲಯದ ಪ್ರಧಾನ ವಾಸ್ತು ಭಾಗವೆಂದರೆ ಮಹಾರಂಗಮಂಟಪ. ಇದು ಪ್ರತಿಸಾಲಿನಲ್ಲಿ ಐದರಂತೆ ಐದು ಸಾಲಿನಲ್ಲಿ ಒಟ್ಟು ಇಪ್ಪತ್ತೈದು ಅಂಕಣಗಳನ್ನು ಹೊಂದಿದೆ. ಮಧ್ಯದ ಹನ್ನೆರೆಡು ಅಂಕಣಗಳನ್ನು ಹೊರತುಪಡಿಸಿ, ಸುತ್ತಲೂ ಕಟ್ಟೆಯಿದೆ. ಇದಕ್ಕೆ ಮುಖ್ಯ ಪ್ರವೇಶ ಬದಿಸಹಿತ ನಾಲ್ಕು ಬದಿಗೆ ಪ್ರವೇಶದ್ವಾರಗಳಿವೆ(ಈಗ ಬದಿಯ ಎರಡು ಪ್ರವೇಶ ದ್ವಾರಗಳಿಗೆ ಗೋಡೆಯನ್ನು ನಿರ್ಮಿಸಲಾಗಿದೆ). ಈ ಮಹಾರಂಗಮಂಟಪದ ಮಧ್ಯದಲ್ಲಿ

ನಾಲ್ಕು ಬೃಹತ್ ಪೂರ್ಣಕುಂಭಗಳು, ಕಟ್ಟೆಯ ಮೇಲಿನ ಹನ್ನೆರಡು ಕಂಬಗಳು, ಹದಿನಾಲ್ಕು ಗೋಡೆಗಂಬಗಳಿದ್ದು, ಸಭಾಂಗಣ ಮಧ್ಯದ ಕಂಬಗಳು ಎತ್ತರದಿಂದಾಗಿ ಗಮನಸೆಳೆಯುತ್ತವೆ. ಇವು ಕೆಳಗೆ, ಮಧ್ಯ ಮತ್ತು ಮೇಲೆ ಮೂರು ಅಸಮ ಚೌಕ ಭಾಗಗಳನ್ನು ಹೊಂದಿದ್ದು, ಈ ಚೌಕ ಭಾಗಗಳ ನಾಲ್ಕು ಮುಖಗಳ ಮೇಲೆ ಗಜ, ಸಿಂಹ, ವೀರಾಂಜನೇಯ, ವಿಷ್ಣು, ಬಾಲಕೃಷ್ಣ, ಭಕ್ತಾಂಜನೇಯ, ಕಾಳಿಂಗಮರ್ದನ ಕೃಷ್ಣ, ಗಜಾನನ, ಹಂಸ, ನರಸಿಂಹ, ಗರುಡ, ವೈಷ್ಣವಿ, ಬೇಡ, ಧನುರ್ಧಾರಿ, ಮತ್ಸ್ಯಯಂತ್ರ ಬೇಧಿಸುತ್ತಿರುವ ಅರ್ಜುನ, ರಾಮ, ಬಲರಾಮ, ಪರಶುರಾಮ, ಯಕ್ಷ, ತೀರ್ಥಂಕರ, ಸೂರ್ಯ, ರಾಮಾನುಜ, ಕಾರ್ತಿಕೇಯ, ಲಿಂಗಕ್ಕೆ ಕ್ಷೀರಾಭಿಷೇಕ ಮಾಡುತ್ತಿರುವ ಹಸು, ಬೆಣ್ಣೆಕೃಷ್ಣ, ವರಹಾವತಾರಿ ವಿಷ್ಣು, ವಾಮನ ಅವತಾರ ಮುಂತಾದ ಉಬ್ಬುಶಿಲ್ಪಗಳಿವೆ. ಈ ಕಂಬಗಳ ಮೇಲ್ಭಾಗದಲ್ಲಿ ಎರಡು ಕಡೆಗೆ ಮಾತ್ರ ಪುಷ್ಪಬೋದುಗೆಗಳಿವೆ. ಈ ಮಂಟಪದ ಛತ್ತು ಸಮತಟ್ಟಾಗಿದೆ.

ಮಹಾರಂಗಮಂಟಪ ಮತ್ತು ಸಭಾಮಂಟಪದ ಮಧ್ಯ ಮೂರು ಅಂಕಣದ ಪ್ರವೇಶಮಂಟಪ ಅಥವಾ ಅರ್ಧಮಂಟಪವಿದೆ. ಮಧ್ಯದ ಪ್ರವೇಶದ ಹಾದಿಯನ್ನು ಹೊರತುಪಡಿಸಿ ಇಕ್ಕೆಲಗಳ ಅಂಕಣಗಳಲ್ಲಿ ಕಟ್ಟೆಗಳಿವೆ. ಇವುಗಳ ಮೇಲಿನ ಎರಡು ಕಂಬಗಳು ಶೈಲಿ ಮತ್ತು ಕೆತ್ತನೆಯಿಂದ ಆಕರ್ಷಕವಾಗಿದ್ದು, ವಿಜಯನಗರದ ಮೂಲ ಶೈಲಿಯನ್ನು ಪ್ರತಿನಿಧಿಸುತ್ತವೆ. ಈ ಕಂಬಗಳ ಮೇಲೆ ಬಾಲಕೃಷ್ಣ, ಗಜಾನನ, ಪೂತನಿಸಂಹಾರ, ಬೇಡರಕಣ್ಣಪ್ಪ, ಗೋಪಾಲಕೃಷ್ಣ ಮುಂತಾದ ಶಿಲ್ಪಗಳಿವೆ. ಉಳಿದಂತೆ ಭಿತ್ತಿ ಮತ್ತು ಛತ್ತು ಸರಳವಾಗಿವೆ.

ಸಭಾಮಂಟಪದ ದ್ವಾರಬಂಧ ಎರಡು ಪ್ರಧಾನ ಪಟ್ಟಿಕೆಗಳಲ್ಲಿದೆ. ಮೊದಲ ಪಟ್ಟಿಕೆಯ ಮೇಲೆ ಮುಖಭಾಗದಲ್ಲಿ ವೀರರ ಶಿಲ್ಪಗಳಿದ್ದರೆ, ಮೇಲೆ ಕುಂಭಗಳು ಮತ್ತು ಸ್ತಂಭಗಳ ಅಲಂಕರಣೆಯಿದೆ. ಇದರ ಲಲಾಟಬಿಂಬದಲ್ಲಿ ಜೋಡಿ ಹಂಸಗಳಿದ್ದು ಅವುಗಳ ಬದಿಯಲ್ಲಿ ಕೀರ್ತಿಮುಖಗಳಿವೆ. ಈ ಕೀರ್ತಿಮುಖಗಳಲ್ಲಿ ರುಂಡಗಳು ಗೋಚರಿಸುತ್ತವೆ. ಪ್ರಧಾನ ಪಟ್ಟಿಕೆಯ ಒಳ ಅಥವಾ ಬದಿಯ ಭಾಗದಲ್ಲಿ ಲತೆಯನ್ನು ಆಶ್ರಯಿಸಿ ನಿಂತ ಶಿಲಾಬಾಲಿಕೆಯರ ಪ್ರತಿಮೆಗಳಿವೆ. ದ್ವಾರಬಂಧದ ಪ್ರಧಾನ ಪಟ್ಟಿಕೆಯಲ್ಲಿ ನಾಲ್ಕು ಶಾಖೆಗಳಿದ್ದು, ಅಲ್ಲಿ ಬಳ್ಳಿಗಳ ಅಲಂಕರಣೆಗಳಿವೆ. ಬಾಗಿಲ ಬದಿಯಲ್ಲಿ ಶಂಖ, ಚಕ್ರ ಹಾಗು ಗದಾದಾರಿಗಳಾದ ವೈಷ್ಣವ ದ್ವಾರಪಾಲಕರುಗಳ ಉಬ್ಬುಶಿಲ್ಪಗಳಿವೆ. ಲಲಾಟದಲ್ಲಿ ಗಜಲಕ್ಷ್ಮಿಯ ಬಿಂಬವಿದೆ.

ಸಭಾಮಂಟಪವು ಒಂಭತ್ತು ಅಂಕಣಗಳಲ್ಲಿದೆ. ಇಲ್ಲಿನ ಮಧ್ಯದ ಕಂಬಗಳು ಆಕರ್ಷಕವಾಗಿದ್ದು, ವಿಜಯನಗರ ಶೈಲಿಯಲ್ಲಿವೆ. ಈ ಕಂಬಗಳ ಕುಂಭ ಹಾಗು ಕಳಸ ಭಾಗಗಳಲ್ಲಿರುವ ಕಮಲ ದಳಗಳು ಹಾಗು ಸರಪಳಿಯಾಕೃತಿಗಳು ವಿಶೇಷವೆನಿಸುತ್ತವೆ. ಈ

ಕಂಬಗಳ ಮೇಲೆ ವೀರಾಂಜನೇಯ, ಹಂಸ, ಶಿವಲಿಂಗ ಪೂಜಿಸುತ್ತಿರುವ ರಾಮ, ಕಾಳಿಂಗ ಮರ್ದನ ಕೃಷ್ಣ, ಭಕ್ತಾಂಜನೇಯ, ಕುಳಿತಸಿಂಹ, ನಗ್ನಸ್ತ್ರೀ, ಶಿವಲಿಂಗಕ್ಕೆ ಕ್ಷೀರಧಾರೆಯೆರೆಯುತ್ತಿರುವ ಹಸು, ಶಂಖ, ಚಕ್ರ, ಬಾಲಕೃಷ್ಣ, ದೊರೆ, ಮೊಸರು ಕಡೆಯುತ್ತಿರುವ ಗೋಪಿಕಾಸ್ತ್ರೀ ಮತ್ತು ಬಾಲಕೃಷ್ಣ, ವಾದ್ಯಗಾರರು, ನೃತ್ಯಗಾತಿ ಮುಂತಾದ ಉಬ್ಬುಶಿಲ್ಪಗಳಿವೆ. ಈ ಮಂಟಪದ ಮಧ್ಯದ ಅಂಕಣದ ಛತ್ತಿನಲ್ಲಿ ಅರಳು ಕಮಲದ ಭುವನೇಶ್ವರಿಯಿದ್ದು, ಅದರ ಮಧ್ಯದಲ್ಲಿ ಮೊಗಚಿ ಹಾಕಿದ ಮೊಗ್ಗು ಇದೆ. ಇಲ್ಲಿ ವೈಷ್ಣವಿ ಶಿಲ್ಪವಿದೆ. ಈ ಮಂಟಪದ ಬಲಭಾಗದಲ್ಲಿ ಉಪಪ್ರವೇಶದ್ವಾರವಿದೆ.

ಅಂತರಾಳವು ಸರಳವಾಗಿದ್ದು, ಅದರ ದ್ವಾರದ ಇಕ್ಕೆಲಗಳಲ್ಲಿ ವೈಷ್ಣವ ದ್ವಾರಪಾಲಕರ, ಲಲಾಟದಲ್ಲಿ ಕಾಳಿಂಗಮರ್ದನ ಕೃಷ್ಣನ ಉಬ್ಬುಶಿಲ್ಪಗಳಿವೆ. ಗರ್ಭಗೃಹದ ದ್ವಾರಬಾಗಿಲ ಇಕ್ಕೆಲಗಳಲ್ಲಿ ಕೂಡ ಚಿಕ್ಕ ದ್ವಾರಪಾಲಕರುಗಳ ಶಿಲ್ಪಗಳು ಮತ್ತು ಉತ್ತಿರಾಂಗ ಭಾಗವಿದೆ. ಗರ್ಭಗೃಹ ಚಿಕ್ಕದಾಗಿದ್ದು, ಇದರ ಭಿತ್ತಿ ಮತ್ತು ಛತ್ತು ಸರಳವಾಗಿದೆ.

ದೇವಾಲಯದ ಹೊರಭಾಗದ ಅಧಿಷ್ಠಾನವು ಮಂಚಬಂಧ ಶೈಲಿಯಲ್ಲಿದ್ದು, ಉಪಾನ, ತ್ರಿಪಟ್ಟಕುಮುದ, ಕಪೋತ ಭಾಗಗಳನ್ನು ಹೊಂದಿದೆ. ಭಿತ್ತಿಯು ಅಳತೆಕಲ್ಲುಗಳಿಂದ ಕಟ್ಟಲ್ಪಟ್ಟಿದ್ದು ಸರಳವಾಗಿದೆ. ಕಪೋತದ ಮೇಲಿನ ಭಾಗದಲ್ಲಿ ಅಲ್ಲಲ್ಲಿ ಕೀರ್ತಿಮುಖಗಳ ಅಲಂಕರಣೆಗಳಿವೆ. ಸಭಾಮಂಟಪ ಮತ್ತು ಮಹಾರಂಗಮಂಟಪದ ಮಾಡಿನ ಅಂಚಿನಲ್ಲಿ ಗಾರೆಯ ಕಂಗೂರಾಕೃತಿಗಳ ರಚನೆಯಿದೆ. ಗರ್ಭಗೃಹದ ಮೇಲೆ ದ್ರಾವಿಡ ವಿಮಾನ ಮಾದರಿಯ ನಾಲ್ಕು ತಲದ ಗಾರೆಯ ಶಿಖರವಿದೆ. ಇದರ ಮುಂದೆ ಅಂತರಾಳದ ಮೇಲೆ ಸುಖನಾಸವಿದೆ. ಶಿಖರ ಮತ್ತು ಸುಖನಾಸಗಳು ಯಾವುದೇ ವಿಶೇಷ ಅಲಂಕರಣೆಯನ್ನು ಹೊಂದಿಲ್ಲ. ದೇವಾಲಯದ ಆವರಣದಲ್ಲಿ ಗರ್ಭಗೃಹಕ್ಕೆ ಅಭಿಮುಖವಾಗಿ ಚಿಕ್ಕ ಗರುಡ ಮಂಟಪವಿದೆ. ವೇಣುಗೋಪಾಲಸ್ವಾಮಿ ದೇವಾಲಯದ ಆವರಣದಲ್ಲಿ ಪಾಳೆಯಗಾರರ ಕಾಲದ ರಾಮದೇವರ ಮತ್ತೊಂದು ದೇವಾಲಯವಿದೆ. ಇದು ಸಭಾಮಂಟಪ ಮತ್ತು ಗರ್ಭಗೃಹಗಳನ್ನು ಹೊಂದಿದ್ದು ಸರಳವಾಗಿದೆ. ಗರ್ಭಗೃಹದಲ್ಲಿ ಆಕರ್ಷಕವಾದ ವೇಣುಗೋಪಾಲಸ್ವಾಮಿಯ ವಿಗ್ರಹವಿದೆ.

ರಂಗಮಂಟಪದ ಕಂಭಶಾಸನದಿಂದ ಕಾಮಗೇತಿ ವಂಶದ ಮತ್ತಿತಿಮ್ಮಣ್ಣನಾಯಕನಿಗೆ ವಿಜಯನಗರದ ಅಳಿಯ ರಾಮರಾಯನ ತಮ್ಮ ತಿರುಮಲರಾಯನು ಹೊಳಲ್ಕೆರೆ ಸೀಮೆ ಯನ್ನು ಅಮರ ಮಾಗಣಿಯನ್ನಾಗಿ ಕೊಟ್ಟ ವಿಚಾರ, ಈ ನಾಯಕನು ಮುಂದೆ ಈ ಸೀಮೆಯನ್ನು ಗುಲ್ಲೆಪ್ಪನಾಯಕನಿಗೆ ವಹಿಸಿಕೊಟ್ಟ ವಿಚಾರ, ಈ ದೇವಾಲಯವನ್ನು ಜೀರ್ಣೋದ್ಧಾರ ಮಾಡಿ ಅರ್ಚಕರನ್ನು ನೇಮಿಸಿದ ವಿಚಾರ ಹಾಗು ಹೊಳಲ್ಕೆರೆ ಮಾಗಣಿಗೆ

ಸೇರಿದ ಭೀಮಸಮುದ್ರ, ದೊಡ್ಡಾಪುರ, ಗಿಲ್ಕೇನಹಳ್ಳಿ, ಹಳೇಹಳ್ಳಿ, ಎಮ್ಮಿಗನೂರು, ಬೊಮ್ಮನ ಕಟ್ಟೆ, ಹನುಮಂತನಹಳ್ಳಿ, ಹಿರೆಹಳ್ಳಿ, ಭೈರವನಹಳ್ಳಿ ಮುಂತಾದವುಗಳನ್ನು ಶ್ರೀಗೋಪಾಲಸ್ವಾಮಿಗೆ ದತ್ತಿಬಿಟ್ಟ ವಿಚಾರ ತಿಳಿದುಬರುತ್ತದೆ.

೧೦. ಸಿದ್ದೇಶ್ವರ ದೇವಾಲಯ

ಗ್ರಾಮ : ಹುಲ್ಲೂರು (ಚಿತ್ರದುರ್ಗ ತಾಲ್ಲೂಕು)

ಸ್ಥಾನನಿರ್ದೇಶನ : ಚಿತ್ರದುರ್ಗ-ಹೊಳಲ್ಕೆರೆ ಮಾರ್ಗದ ಹೆದ್ದಾರಿಯಲ್ಲಿ ಬಲಕ್ಕೆ ೨ ಕಿ.ಮೀ. ಅಂತರ.

ಮುಖದಿಕ್ಕು : ಪೂರ್ವ

ಶಾಸನ ಮತ್ತು ಕಾಲ : ಶಾಸನ : ಚಿತ್ರದುರ್ಗ-೨೨, ಎರಡನೆಯ ಮದಕರಿನಾಯಕ[೪೪]

ನಿರ್ಮಾಣ ಸಾಮಾಗ್ರಿ : ಕಣಶಿಲೆ, ಇಟ್ಟಿಗೆ, ಗಾರೆ

ವಾಸ್ತುಭಾಗಗಳು : ಗರ್ಭಗೃಹ, ಅಂತರಾಳ, ಅರ್ಧಮಂಟಪ, ಮಹಾಮಂಟಪ, ಮುಖಮಂಟಪ, ದೀಪಸ್ತಂಭ, ಉಯ್ಯಾಲೆಕಂಬ.

ಸುಮಾರು ಮೂರು ಶತಮಾನಗಳ ಕಾಲದ ಹಳೆಯದಾದ ಶ್ರೀಸಿದ್ದೇಶ್ವರಸ್ವಾಮಿ ದೇವಾಲಯವು ದ್ರಾವಿಡ ಶೈಲಿಯಲ್ಲಿದ್ದು, ಚಿತ್ರದುರ್ಗ ಪಾಳೆಯಗಾರರ ಕಾಲದ ಶೈವ ದೇವಾಲಯಗಳಲ್ಲಿ ಪ್ರಮುಖ ದೇವಾಲಯವಾಗಿದೆ.

ಗರ್ಭಗೃಹದ ಮೇಲ್ಛಾವಣಿಯಲ್ಲಿ ಬಾಲೆದಿಂಡಿನ ಆಕೃತಿಯಲ್ಲಿ ಕೆತ್ತಿರುವ ಸುಂದರವಾದ ಭುವನೇಶ್ವರಿ ಇದೆ. ಮೇಲ್ಛಾವಣಿಯನ್ನು ಚಪ್ಪಡಿ ಕಲ್ಲುಗಳಿಂದ ಮುಚ್ಚಲಾಗಿದೆ. ಉಳಿದಂತೆ ಗರ್ಭಗೃಹ ಸರಳವಾಗಿದೆ. ಗರ್ಭಗೃಹವು ಒಂಭತ್ತು ಅಡಿ ಉದ್ದ-ಅಗಲದ ಸುತ್ತಳತೆಯನ್ನು ಹೊಂದಿದ್ದು ಚಚ್ಚೌಕಾಕಾರದಲ್ಲಿದೆ.

ಗರ್ಭಗೃಹದ ನಂತರದ ಭಾಗ ಸುಖನಾಸಿಯಾಗಿದ್ದು, ಸುಖನಾಸಿಯ ನಂತರದಲ್ಲಿ ಹದಿನಾರು ಅಡಿ ಉದ್ದ, ೨೨ ಅಡಿ ಅಗಲದ ವಿಸ್ತೀರ್ಣದ ಅಳತೆಯನ್ನು ಹೊಂದಿರುವ ಅರ್ಧಮಂಟಪವಿದೆ. ಇದರ ದಕ್ಷಿಣಕ್ಕೆ ಉಪಪ್ರವೇಶದ್ವಾರವಿದ್ದು, ಈಗ ಅದನ್ನು ಮುಚ್ಚಲಾಗಿದೆ.

ಮಹಾಮಂಟಪವು ಒಂಭತ್ತು ಅಂಕಣಗಳಲ್ಲಿದ್ದು ಮಧ್ಯದಲ್ಲಿ ನಾಲ್ಕು ಬೃಹತ್ ಕಂಬಗಳಿವೆ. ಈ ಕಂಬಗಳು ಪೀಠ, ಕಾಂಡ ಹಾಗು ಬೋದುಗೆಗಳನ್ನು ಹೊಂದಿದ್ದು, ಕಾಂಡಭಾಗದಲ್ಲಿ ಕೆಳಗೆ, ಮಧ್ಯ ಮತ್ತು ಮೇಲೆ ಮೂರು ಅಸಮ ಚೌಕಭಾಗಗಳಿವೆ. ಈ ಕಂಬಗಳ ಚೌಕಭಾಗಗಳ ಮೇಲೆ ನೆಗೆಯುತ್ತಿರುವ ಟಗರು, ಲಜ್ಜಾಗೌರಿ, ಆನೆಸವಾರ, ಸಖಿ, ನಂದಿ, ಯತಿ, ಲಿಂಗ, ಹನುಮಂತನ ಉಬ್ಬುಶಿಲ್ಪಗಳಿವೆ. ಈ ಕಂಬಗಳ ಬೋದುಗೆಗಳು

ಪುಷ್ಪಬೋದುಗೆಗಳಾಗಿದ್ದು, ವಿಜಯನಗರ ಶೈಲಿಯ ಕಂಬಗಳ ಬೋದುಗೆಗಳಂತಿವೆ. ಇದರ ದ್ವಾರದಲ್ಲಿ ವೈಷ್ಣವ ದ್ವಾರಪಾಲಕರುಗಳ ಶಿಲ್ಪಗಳು, ಲಲಾಟ ಬಿಂಬದಲ್ಲಿ ಗಜಲಕ್ಷ್ಮಿಯ ಶಿಲ್ಪವಿದೆ. ಶೈವ ದೇವಾಲಯದಲ್ಲಿ ವೈಷ್ಣವ ದ್ವಾರಪಾಲಕರುಗಳನ್ನು ರಚಿಸಿರುವುದು ಇಲ್ಲಿಯ ಕುತೂಹಲದಾಯಕವಾದ ವಿಷಯವಾಗಿದೆ. ಈ ಮಂಟಪದ ಮಧ್ಯದ ಛತ್ತಿನಲ್ಲಿ ಅರಳು ಕಮಲದ ಭುವನೇಶ್ವರಿಯಿದೆ. ಅದರ ಸುತ್ತಲೂ ಬಳ್ಳಿಯಾಕಾರದ ರಚನೆಯಿದ್ದು, ಬಳ್ಳಿಯ ರೇಖೆಗಳಿಗೆ ಕೆಂಪು (ಹುರಿಮಂಜು) ಬಣ್ಣವನ್ನು ಲೇಪಿಸಲಾಗಿದೆ. ಅಲ್ಲದೆ ಮೇಲ್ಛಾವಣಿಯಲ್ಲಿ ಅಲ್ಲಲ್ಲಿ ಕೊರೆದು ಬಿಡಿಸಿರುವ ಬಣ್ಣದ ಅಲಂಕಾರದ ಹೂಗಳ ಚಿತ್ರಗಳಿವೆ. ಮೇಲ್ಛಾವಣಿಯನ್ನು ಕಲ್ಲು ಚಪ್ಪಡಿ ಮತ್ತು ಗಾರೆಗಳಿಂದ ಕಟ್ಟಲಾಗಿದ್ದು, ಮಳೆ ನೀರು ಸೋರದ ಹಾಗೆ ರಕ್ಷಣೆ ಮಾಡಲಾಗಿದೆ. ಈ ಮಂಟಪದ ಉತ್ತರ ಭಾಗದಲ್ಲಿ ೨೨ಅಡಿ ಉದ್ದ, ೬.೫ಅಡಿ ಅಗಲದ ಪ್ರತ್ಯೇಕ ಅಂಕಣವಿದ್ದು, ದ್ವಾರಬಂಧದ ಇಕ್ಕೆಲಗಳಲ್ಲಿ ಶೈವ ದ್ವಾರಪಾಲಕರುಗಳ ಶಿಲ್ಪಗಳಿವೆ.

ಮುಖಮಂಟಪವು ಮುಂಭಾಗದಲ್ಲಿ ಸಂಪೂರ್ಣ ತೆರೆದ ರೀತಿಯಲ್ಲಿದ್ದು, ಇಕ್ಕೆಲಗಳಲ್ಲಿ ಜಗಲಿ ಕಟ್ಟೆಗಳನ್ನು ಹೊಂದಿದೆ. ಇದು ಮೂರು ಅಂಕಣದಲ್ಲಿದ್ದು, ಮಧ್ಯದ ಅಂಕಣ ಪ್ರವೇಶ ಹಾದಿಯಾಗಿದೆ. ಉಳಿದ ಎರಡು ಅಂಕಣಗಳ ಕಟ್ಟೆಗಳ ಮೇಲೆ ತಲಾ ಒಂದರಂತೆ ಎರಡು ಕಂಬಗಳಿವೆ. ಈ ಕಂಬಗಳು ಪೀಠ, ಕಾಂಡ ಹಾಗು ಬೋದುಗೆಗಳನ್ನು ಹೊಂದಿದ್ದು ಸರಳವಾಗಿವೆ. ಕಾಂಡಭಾಗದಲ್ಲಿನ ಚೌಕಾಭಾಗಗಳಲ್ಲಿ ಯತಿ, ಯಕ್ಷಿಣಿಯರ ಉಬ್ಬುಶಿಲ್ಪಗಳಿವೆ. ಈ ಮಂಟಪದ ದ್ವಾರಬಂಧದ ಇಕ್ಕೆಲಗಳಲ್ಲಿ ಶೈವ ದ್ವಾರಪಾಲಕರುಗಳ ಉಬ್ಬುಶಿಲ್ಪಗಳಿವೆ.

ದೇವಾಲಯದ ಮುಂಭಾಗದಲ್ಲಿ ಶಿಥಿಲಗೊಂಡಿರುವ ಎರಡು ಕಲ್ಲಿನ ಕಟ್ಟೆಗಳಿದ್ದು, ಅವುಗಳ ನೈರುತ್ಯಕ್ಕೆ ಹತ್ತು ಅಡಿ ಎತ್ತರದ ಅಷ್ಟೇನು ಅಲಂಕರಣವಿಲ್ಲದ ಏಕಶಿಲೆಯ ದೀಪಸ್ತಂಭವಿದೆ. ಅಲ್ಲದೇ ಈ ಎರಡು ಕಟ್ಟೆಗಳ ಮುಂಭಾಗದಲ್ಲಿ ೮.೫ ಅಡಿ ಸುತ್ತಳತೆ ಹಾಗೂ ೨೫ ಅಡಿ ಎತ್ತರದಲ್ಲಿರುವ ಮತ್ತೊಂದು ಏಕಶಿಲೆಯ ದೀಪಸ್ತಂಭವಿದೆ. ಇದು ೧೬ ದಿಂಡುಗಳನ್ನು ಹೊಂದಿದ್ದು, ಮೂರು ಅಂತಸ್ತುಗಳಲ್ಲಿದೆ. ಈ ದೀಪಸ್ತಂಭದ ಉತ್ತರದಲ್ಲಿ ನಂದಿ, ಪಶ್ಚಿಮದಲ್ಲಿ ಹನುಮಂತನ ಉಬ್ಬುಶಿಲ್ಪಗಳಿವೆ. ದೀಪಸ್ತಂಭಕ್ಕೆ ರಕ್ಷಣೆ ಅಥವಾ ಭದ್ರತೆಯನ್ನು ಒದಗಿಸಲು ೧.೫ ಮೀಟರ್ ವೇದಿಕೆಯ ಮೇಲೆ ನಿರ್ಮಿಸಲಾಗಿದೆ.

ದೀಪಸ್ತಂಭದ ಮುಂಭಾಗದಲ್ಲಿ ಸ್ವಲ್ಪ ಅನತಿ ದೂರದಲ್ಲಿ ಪ್ರಾಂಗಣಕ್ಕೆ ಕಳಸಪ್ರಾಯವಾಗಿ ದ್ರಾವಿಡ ಶೈಲಿಯ ಮೂವತ್ತೇಳು ಅಡಿ ಎತ್ತರದ ಏಕಶಿಲೆಯ ಎರಡು ಬೃಹತ್ ಕಂಬಗಳ ಉಯ್ಯಾಲೆ ಕಂಬವಿದೆ. ಈ ಕಂಬಗಳು ೮.೫ ಅಡಿ ಗಳ ವಿಶಾಲ ಅಂತರದಲ್ಲಿವೆ. ಇವು

೩೨x೧೦ ಅಂಗುಲ ಗಾತ್ರವನ್ನು ಹೊಂದಿದ್ದು, ಇಪ್ಪತ್ತೇಳು ಅಡಿ ಎತ್ತರವಾಗಿವೆ. ಇವು ಮೇಲಿನ ಎರಡು ಅಂತಸ್ತುಗಳಿಗೆ ಹಾಗೂ ತುತ್ತತುದಿಯ ಕಳಸಕ್ಕೆ ಆಧಾರಸ್ತಂಭಗಳಾಗಿವೆ. ಇದು ದೂರದಿಂದಲೇ ದೇವಾಲಯದ ಇರುವಿಕೆಯ ಸಂಕೇತವನ್ನು ಸಾರುತ್ತದೆ. ಈ ಉಯ್ಯಾಲೆ ಕಂಬವು ಯಾವುದೇ ಪ್ರಕೃತಿಯ ವಿಕೋಪಗಳಿಗೆ ಸಿಕ್ಕಿ ಹಾಳಾಗದೆ, ಇನ್ನೂ ಅಚ್ಚಳಿಯದೇ ಉಳಿದಿದ್ದು ಬಹಳ ಸುಂದರವಾಗಿದೆ. ಈ ಕಂಬದ ತುತ್ತತುದಿಯಲ್ಲಿ ಶಿಖರ, ವಿಮಾನಗಳು, ಕೆಳಭಾಗದಲ್ಲಿ ಎರಡು ಅಂತಸ್ತುಗಳಲ್ಲಿ ಕಲ್ಲಿನಲ್ಲಿ ಕೆತ್ತಿದ ಅಲಂಕಾರವಿದ್ದು, ಅತ್ಯಂತ ಕೆಳಭಾಗದಲ್ಲಿ, ಅಂದರೆ ತಳಭಾಗದಲ್ಲಿ ಅಕ್ಕಪಕ್ಕ ಎರಡು ಕಲ್ಲಿನ ಕಟಾಂಜನಗಳು ಇವೆ. ಇವು ಉಯ್ಯಾಲೆ ಕಂಬಕ್ಕೆ ಆಧಾರಸ್ತಂಭಗಳಂತಿದ್ದು, ಉತ್ತರ-ದಕ್ಷಿಣವಾಗಿ ಇಪ್ಪತ್ತಮೂರು ಅಡಿ, ಪೂರ್ವ-ಪಶ್ಚಿಮವಾಗಿ ಹದಿನಾರು ಅಡಿ ಅಳತೆಯನ್ನು ಹೊಂದಿವೆ. ಉಯ್ಯಾಲೆ ಕಂಬದ ಎರಡು ಕಂಬಗಳ ಹಿಂಭಾಗ ಮತ್ತು ಮುಂಭಾಗಕ್ಕೆ ಪೂರ್ವ-ಪಶ್ಚಿಮವಾಗಿ ನಾಲ್ಕು ಬೃಹತ್ ಗಾತ್ರದ ಆನೆಗಳು ಇವೆ. ಇವು ಉಯ್ಯಾಲೆ ಕಂಬವನ್ನು ಎರಡು ದಿಕ್ಕುಗಳಲ್ಲಿ ಎಳೆಯುತ್ತಿದ್ದು, ತಮ್ಮ ಶಕ್ತಿ ಪರಾಕ್ರಮವನ್ನು ಪ್ರದರ್ಶಿಸುವ ರೀತಿಯಲ್ಲಿವೆ. ಈ ಆನೆಗಳನ್ನು ನೋಡಿದರೆ ಬಹಳ ಪುಷ್ಟಿಕರವಾಗಿದ್ದು, ಪಳಗಿಸಿರುವ ಆನೆಗಳಂತೆ ಸ್ಪಷ್ಟವಾಗಿ ಮೂಡಿಬಂದಿವೆ. ಪೂರ್ವಕ್ಕೆ ಇರುವ ಆನೆಗಳ ಬಾಲ ಬೆನ್ನಿನ ಮೇಲೆ, ಪಶ್ಚಿಮಕ್ಕೆ ಇರುವ ಆನೆಗಳ ಬಾಲ ಕೆಳಗೆ ಇದ್ದು, ತಮ್ಮ ತಮ್ಮ ಶಕ್ತಿ ಸಾಮರ್ಥ್ಯಗಳಿಂದ ಜಟಾಪಟಿಯಾಗಿ ಉಯ್ಯಾಲೆ ಕಂಬವನ್ನು ಎಳೆಯುವಂತಹ ನೈಜ ಚಿತ್ರಣ ಕಣ್ಣಿಗೆ ಕಟ್ಟುವಂತಿದೆ. ಬಲಭಾಗದ ಕಂಬದ ಮೇಲೆ ಕಪಿಯ ಉಬ್ಬುಶಿಲ್ಪವಿದ್ದು, ತನ್ನ ಎರಡು ಕಾಲುಗಳ ಮೇಲೆ ಎಡಗೈ ಇಟ್ಟು ಬಲಗೈಯಲ್ಲಿ ಹಣ್ಣು ತಿನ್ನುತ್ತಿರುವಂತಹ ದೃಶ್ಯವಿದೆ. ಹೀಗೆ ಇಡೀ ಉಯ್ಯಾಲೆ ಕಂಬ ಕಲಾತ್ಮಕವಾಗಿದೆ.

ಗರ್ಭಗೃಹದ ಮಧ್ಯದಲ್ಲಿ ಒಂದು ಸಿದ್ದಲಿಂಗೇಶ್ವರನ ಶಿಲೆಯ ಮೂರ್ತಿಯಿದೆ. ಮೊದಲು ಇಲ್ಲಿ ಉದ್ಭವಗೊಂಡ ಲಿಂಗವಿದ್ದು, ಈಗ ಬಹುಪಾಲು ಮುಚ್ಚಿಹೋಗಿದೆ. ನಂತರ ಊರಿನ ಗಣ್ಯರು ಲಿಂಗದ ಪ್ರತೀಕವಾಗಿ ಶಿವನ ಪ್ರತಿರೂಪವಾದ ಶ್ರೀಸಿದ್ದೇಶ್ವರನ ಕಲ್ಲಿನ ಮೂರ್ತಿಯನ್ನು ಲಿಂಗದ ಹಿಂಭಾಗದಲ್ಲಿ ಗೋಡೆಗೆ ಅಂಟಿಕೊಂಡಂತೆ ಪ್ರತಿಷ್ಠಾಪಿಸಿದ್ದಾರೆಂದು ಸ್ಥಳೀಯರಿಂದ ತಿಳಿದುಬಂದಿದೆ. ಈ ಶಿಲ್ಪವು ಪೀಠದ ಮೇಲೆ ಪದ್ಮಾಸನದಲ್ಲಿ ಕುಳಿತಿದ್ದು, ಚತುರ್ಭುಜಗಳನ್ನು ಹೊಂದಿದೆ. ತನ್ನ ಬಲಗೈಗಳಲ್ಲಿ ಜಪಮಣಿ, ತ್ರಿಶೂಲ, ಎಡಗೈಗಳಲ್ಲಿ ಶಿವಲಿಂಗ ಹಾಗು ಖಡ್ಗಗಳನ್ನು ಹಿಡಿದಿದ್ದಾನೆ. ಜಟಾಧಾರಿಯಾದ ಶಿಲ್ಪವು ಕೊರಳಲ್ಲಿ ರುದ್ರಾಕ್ಷಿ, ಹಣೆಯಲ್ಲಿ ಈಶ್ವರನನ್ನು ಹೊಂದಿದೆ. ಮೂರ್ತಿಯು ಉತ್ತಮ . ದೇಹದಾರ್ಢ್ಯವನ್ನು ಸೂಚಿಸುವಂತಹ ಲಕ್ಷಣಗಳಾದ ದಪ್ಪವಾದ ಮೀಸೆ, ಉಬ್ಬುಕಣ್ಣುಗಳು ಹಾಗು ಅಗಲವಾದ ಕಿವಿಗಳನ್ನು ಹೊಂದಿದೆ. ಗರ್ಭಗೃಹದ ಎಡಬದಿಯಲ್ಲಿ ಮೂರು ಅಡಿ ಎತ್ತರ, ಎರಡು ಅಡಿ ಅಗಲದ ಒಂದು ಸ್ತ್ರೀಯ ಮೂರ್ತಿಶಿಲ್ಪವಿದ್ದು, ಒಂದು ಕೈಯಲ್ಲಿ ತ್ರಿಶೂಲ, ಮತ್ತೊಂದ

ರಲ್ಲಿ ಶಂಖವನ್ನು ಹಿಡಿದು ತಪಸ್ಸಿನಲ್ಲಿ ಮಗ್ನಳಾಗಿರುವ ರೀತಿಯಲ್ಲಿ ಕುಳಿತಿದ್ದಾಳೆ. ಪ್ರಾಯಶಃ ಈ ಶಿಲ್ಪವು ಸಿದೇಶ್ವರನ ಧರ್ಮಪತ್ನಿಯದಾಗಿರಬಹುದು. ಗರ್ಭಗೃಹದ ನಂತರದ ಸುಖ ನಾಸಿಯ ಎಡ-ಬಲ ಭಾಗಗಳಲ್ಲಿ ವಿಷ್ಣುವಿನ ಸುಂದರವಾದ ಶಿಲ್ಪಗಳಿವೆ ಪ್ರಾಂಗಣದಲ್ಲಿ ಶಿಥಿಲಗೊಂಡಿರುವ ಎರಡು ಕಟ್ಟೆಗಳಿಗೆ ಹೊಂದಿಕೊಂಡಂತೆ ಆರು ಅಡಿ ಎತ್ತರ, ೧.೫ ಅಡಿ ಅಗಲ ಹಾಗೂ ೧೦ ಸೆ.ಮೀ. ದಪ್ಪವಿರುವ ಬೃಹತ್ ಆಕಾರದ ನಾಗರಶಿಲ್ಪವಿದೆ. ಈ ಶಿಲ್ಪವು ಏಳು ಹೆಡೆಗಳು, ನಾಮ, ಲಿಂಗ, ಕೆಳಭಾಗದಲ್ಲಿ ಗಣೇಶನನ್ನು ಹೊಂದಿದೆ. ಅದೇ ಕಲ್ಲಿಗೆ ಹೊಂದಿಕೊಂಡಂತೆ ಸಣ್ಣ ಕಲ್ಲಿನ ಮಂಟಪದಲ್ಲಿ ಎರಡು ವೀರಗಲ್ಲುಗಳ ಮೂರ್ತಿಶಿಲ್ಪಗಳಿವೆ. ಒಂದು ಶಿಲ್ಪದಲ್ಲಿ ಹುರುಮೆ ಭಾರಿಸುತ್ತಿರುವ ಯೋಧ, ಪಕ್ಕದಲ್ಲಿ ಅವನ ಹೆಂಡತಿ ಇರುವುದನ್ನು ನೋಡಿದರೆ ದೇವಾಲಯದ ಕಾರ್ಯವನ್ನು ನಿಷ್ಠೆಯಿಂದ ಪಾಲಿಸಿ, ನಿಸ್ವಾರ್ಥ ಸೇವೆ ಸಲ್ಲಿಸಿದ್ದಕ್ಕೆ ಈ ವೀರಗಲ್ಲನ್ನು ನೆಟ್ಟಿರಬಹುದೆಂದು ತಿಳಿಯಬಹುದಾಗಿದೆ. ಎರಡನೆಯ ಶಿಲ್ಪವು ಎಡಗೈಯಲ್ಲಿ ಖಡ್ಗ, ಬಲಗೈಯಲ್ಲಿ ಕತ್ತಿ ಹಿಡಿದಿರುವ ಯೋಧ, ತ್ರಿಶೂಲಧಾರಿ ಸತಿಯ ಕೆತ್ತನೆಗಳ ಶಿಲ್ಪಗಳಿವೆ. ಇಡೀ ದೇವಾಲಯದ ಪ್ರಾಂಗಾಣದಲ್ಲಿ ಒಟ್ಟು ನಾಲ್ಕು ನಾಗಶಿಲ್ಪಗಳು, ಎರಡು ಮಿಥುನ ಶಿಲ್ಪಗಳಿವೆ.

೧೧. ಆಂಜನೇಯ ದೇವಾಲಯ

ಗ್ರಾಮ	:	ಹುಲ್ಲೂರು (ಚಿತ್ರದುರ್ಗ ತಾಲ್ಲೂಕು)
ಸ್ಥಾನನಿರ್ದೇಶನ	:	ಚಿತ್ರದುರ್ಗ-ಹೊಳಲ್ಕೆರೆ ಮಾರ್ಗದಲ್ಲಿ ಹೆದ್ದಾರಿಗೆ ಎರಡು ಕಿ.ಮೀ. ಅಂತರದಲ್ಲಿದೆ.
ಮುಖದಿಕ್ಕು	:	ದಕ್ಷಿಣ
ಶಾಸನ ಮತ್ತು ಕಾಲ	:	ಚಿತ್ರದುರ್ಗ ಪಾಳೆಯಗಾರರು
ನಿರ್ಮಾಣ ಸಾಮಾಗ್ರಿ	:	ಕಣಶಿಲೆ, ಇಟ್ಟಿಗೆ, ಗಾರೆ.
ವಾಸ್ತುಭಾಗಗಳು	:	ಗರ್ಭಗೃಹ, ಅಂತರಾಳ, ಸಭಾಮಂಟಪ, ಮುಖಮಂಟಪ, ಪ್ರಾಕಾರ, ದೀಪಸ್ತಂಭ.

ಚಿತ್ರದುರ್ಗ ಪಾಳೆಯಗಾರರ ಕಾಲದಲ್ಲಿ ನಿರ್ಮಾಣವಾದ ಅನೇಕ ಆಂಜನೇಯ ದೇವಾಲಯಗಳಲ್ಲಿ ಹುಲ್ಲೂರಿನ ಆಂಜನೇಯ ದೇವಾಲಯವು ಕಲಾದೃಷ್ಟಿಯಿಂದ ಪ್ರಮುಖವಾಗಿದೆ.

ಗರ್ಭಗೃಹದ ಭಿತ್ತಿ ಮತ್ತು ಛತ್ತು ಸರಳವಾಗಿದೆ. ದ್ವಾರಬಂಧವು ಸರಳವಾಗಿದ್ದು, ಇಕ್ಕೆಲಗಳಲ್ಲಿ ವೈಷ್ಣವ ದ್ವಾರಪಾಲಕರುಗಳ ಶಿಲ್ಪಗಳಿವೆ. ಲಲಾಟಬಿಂಬದಲ್ಲಿ ಬಾಲಕೃಷ್ಣನ ಬಿಂಬವಿದ್ದು ವಿಶೇಷವಾಗಿದೆ. ಅಂತರಾಳವು ಕೂಡ ಸಭಾಮಂಟಪದಷ್ಟೇ ಅಗಲವಾಗಿದ್ದು ದ್ವಾರಬಾಗಿಲು ತುಂಬಾ ಸರಳವಾಗಿದೆ.

ಸಭಾಮಂಟಪವು ಮುಖಮಂಟಪಕ್ಕಿಂತ ಎತ್ತರದಲ್ಲಿದ್ದು, ಇದರ ಅಧಿಷ್ಠಾನವು ಮುಖಮಂಟಪದಲ್ಲಿ ಗೋಚರಿಸುತ್ತದೆ. ಈ ಮಂಟಪದ ಪ್ರವೇಶಕ್ಕೆ ಮುಖಮಂಟಪದಲ್ಲಿ ನಾಲ್ಕು ಮೆಟ್ಟಿಲುಗಳಿದ್ದು, ಇಕ್ಕೆಲಗಳಲ್ಲಿ ಸುರಳಿಯಾಳಿಗಳ ಕೈಪಿಡಿಗಳಿವೆ. ಸಭಾಮಂಟಪವು ಎರಡು ಸಾಲಿನಲ್ಲಿ ಆರು ಅಂಕಣಗಳನ್ನು ಹೊಂದಿದ್ದು, ಸುತ್ತಲೂ ಭಿತ್ತಿಯಿದೆ. ಮುಖಭಾಗದಲ್ಲಿ ಎರಡು, ಮಧ್ಯದಲ್ಲಿ ಎರಡು ಸ್ವತಂತ್ರ ಕಂಬಗಳು ಹಾಗು ಎಂಟು ಗೋಡೆಗಂಬಗಳಿವೆ. ಸ್ವತಂತ್ರ ಕಂಬಗಳು ಮಾತ್ರ ಮೂರು ಅಸಮವಾದ ಚೌಕಭಾಗಗಳನ್ನು ಹೊಂದಿದ್ದು, ಮೇಲೇರಿದಂತೆ ಸಪೂರವಾಗುತ್ತವೆ. ಚೌಕಕಾಂಡಗಳ ಮಧ್ಯದಲ್ಲಿ ಹದಿನಾರು ಮುಖಗಳ ಪಟ್ಟಿಕೆಗಳಿವೆ. ಮುಂಭಾಗದ ಕೆಳ ಚೌಕಭಾಗದಲ್ಲಿ ಮಾತ್ರ ಲಿಂಗಕ್ಕೆ ಹಾಲೆರೆಯುತ್ತಿರುವ ಮೂರು ಭಂಗಿಯ ಹಸು, ದ್ವಾರಪಾಲಕರ ಉಬ್ಬುಶಿಲ್ಪಗಳಿವೆ. ಭಿತ್ತಿಯನ್ನು ಬೃಹತ್ ಅಳತೆಕಲ್ಲುಗಳಿಂದ ನಿರ್ಮಿಸಲಾಗಿದೆ. ಭಿತ್ತಿಯ ಮಧ್ಯಭಾಗದಲ್ಲಿ ಕೈಪಿಡಿ ಗೋಚರಿಸುತ್ತದೆ. ಮಧ್ಯದ ಛತ್ತಿನಲ್ಲಿ ಭುವನೇಶ್ವರಿಯಿದೆ.

ಮುಖಮಂಟಪವು ಸಭಾಮಂಟಪದಷ್ಟೇ ಅಗಲವಾಗಿದ್ದು, ಒಂದೇ ಸಾಲಿನಲ್ಲಿ ಮೂರು ಅಂಕಣಗಳನ್ನು ಹೊಂದಿದೆ. ಇಲ್ಲಿ ಮುಖಭಾಗದಲ್ಲಿ ನಾಲ್ಕು ಕಂಬಗಳಿವೆ. ಎರಡು ಬದಿಯಲ್ಲಿ ಕಕ್ಷಾಸನಗಳಿದ್ದು, ಇಡೀ ಮಂಟಪವು ತೆರೆದ ರೀತಿಯಲ್ಲಿದೆ. ಕಂಬಗಳು ಪೀಠ, ಕಾಂಡ ಸಂಯೋಜನೆಗೊಂಡ ಏಕಶಿಲಾ ಸ್ತಂಭಗಳಾಗಿದ್ದು, ಗಾತ್ರ ಮತ್ತು ಪ್ರಮಾಣದಲ್ಲಿ ಮಧ್ಯಮ ಪ್ರಮಾಣದಲ್ಲಿದ್ದು ಗಮನ ಸೆಳೆಯುತ್ತವೆ. ಈ ಕಾಂಡದ ಕೆಳಭಾಗದಲ್ಲಿ ಚಚ್ಚೌಕ ಭಾಗವಿದ್ದು, ಅದರ ನಾಲ್ಕು ಮೂಲೆಯ ಭಾಗಗಳನ್ನು ಎಲೆಯಾಕಾರದಲ್ಲಿ ಕೆತ್ತಲಾಗಿದೆ. ಮಧ್ಯದಲ್ಲಿ ಹದಿನಾರು ಮುಖಗಳ ದೀರ್ಘ ಲಂಬಪಟ್ಟಿಕೆಗಳಿದ್ದು, ಮಧ್ಯದಲ್ಲಿ ಎಂಟು ಮುಖಗಳ ಅಡ್ಡಪಟ್ಟಿಕೆ ಇದೆ. ಕಂಬದ ತುದಿಯಲ್ಲಿ ಚೌಕ ಭಾಗಗಳಿದ್ದು, ಅವುಗಳ ಮೇಲೆ ಯಾವುದೇ ಶಿಲ್ಪಗಳಿಲ್ಲ. ಬೋದುಗೆಗಳು ಸರಳವಾಗಿವೆ. ಮುಖಮಂಟಪದ ಛತ್ತು ಸರಳವಾಗಿದ್ದು, ಈ ಮಂಟಪವು ದೇವಾಲಯದ ಇತರ ವಾಸ್ತುಭಾಗಗಳಿಗಿಂತ ಕೆಳಹಂತದಲ್ಲಿದೆ.

ದೇವಾಲಯದ ಹೊರಭಾಗದ ಅದಿಷ್ಠಾನವು ಮಂಚಬಂಧ ಶೈಲಿಯಲ್ಲಿದ್ದು ಉಪಾನ, ಗಳ, ಕಪೋತ ಭಾಗಗಳನ್ನು ಹೊಂದಿದೆ. ಭಿತ್ತಿಯು ಸಮತಟ್ಟಾದ ಅಳತೆಕಲ್ಲುಗಳಿಂದ ನಿರ್ಮಿಸಲ್ಪಟ್ಟಿದ್ದು, ಕಂಬಗಳು ಮತ್ತು ಬೋದುಗೆಗಳು ಗೋಚರಿಸುತ್ತವೆ. ಭಿತ್ತಿಯ ಮಾಡಿನಲ್ಲಿ ಅಂಚಿನುದ್ದಕ್ಕೂ ಸ್ವಲ್ಪ ಇಳಿಜಾರಾದ ಮುಂಜೂರು ಇದೆ. ದೇವಾಲಯದ ಪಶ್ಚಿಮ ದಿಕ್ಕಿನ ಭಿತ್ತಿಯಲ್ಲಿ ಅಭಿಮುಖವಾಗಿರುವ ಮತ್ಸ್ಯಗಳು ಹಾಗು ನಾಗಸರ್ಪದ ಉಬ್ಬುಶಿಲ್ಪಗಳಿವೆ. ಗರ್ಭ ಗೃಹದ ಶಿಖರವನ್ನು ಇತ್ತೀಚೆಗೆ ನಿರ್ಮಿಸಲಾಗಿದೆ. ದೇವಾಲಯದ ಪಶ್ಚಿಮದಲ್ಲಿ ದೀಪಸ್ತಂಭದ ಕಟ್ಟೆಯಿದ್ದು, ಮೇಲೆ ಸತಿಕಲ್ಲುಗಳ ಶಿಲ್ಪಗಳಿವೆ. ಸುತ್ತಲೂ ಪ್ರಾಕಾರವಿದೆ.

ಗರ್ಭಗೃಹದಲ್ಲಿ ವೀರಾಂಜನೇಯ ಉಬ್ಬುಶಿಲ್ಪವಿದ್ದು, ತುಂಬಾ ಆಕರ್ಷಕವಾಗಿದೆ. ದೇವಾಲಯದ ಆವರಣದಲ್ಲಿ ಸೂರ್ಯದೇವನ ಶಿಲ್ಪವಿದ್ದು ಸಮಭಂಗಿಯಲ್ಲಿದೆ. ಅದರ ಎರಡೂ ಕೈಗಳಲ್ಲಿ ಕಮಲ ಪುಷ್ಪಗಳಿದ್ದು, ಎರಡು ಬದಿಗೆ ಉಷಾ, ಪ್ರತ್ಯುಷರಿದ್ದಾರೆ.

೧೨. ಲಕ್ಷ್ಮಿರಂಗನಾಥಸ್ವಾಮಿ ದೇವಾಲಯ

ಗ್ರಾಮ	:	ಹೊರಕೆರೆದೇವರಪುರ (ಹೊಳಲ್ಕೆರೆ ತಾಲ್ಲೂಕು)
ಸ್ಥಾನನಿರ್ದೇಶನ	:	ಚಿತ್ರದುರ್ಗ–ಹೊಳಲ್ಕೆರೆ ಹೆದ್ದಾರಿಯಲ್ಲಿ ಚಿತ್ರಹಳ್ಳಿ ಕ್ರಾಸ್‌ನಿಂದ ಏಳು ಕಿ.ಮೀ. ಅಂತರದಲ್ಲಿದೆ.
ಮುಖದಿಕ್ಕು	:	ಪೂರ್ವ
ಶಾಸನ ಮತ್ತು ಕಾಲ	:	ಶಾಸನ: ಹೊಳಲ್ಕೆರೆ– ೫೫, ದುರಸ್ತಿ : ಚಿತ್ರದುರ್ಗ ಪಾಳೆಯಗಾರರು
ನಿರ್ಮಾಣ ಸಾಮಾಗ್ರಿ	:	ಕಣಶಿಲೆ, ಇಟ್ಟಿಗೆ, ಗಾರೆ.
ವಾಸ್ತು ಭಾಗಗಳು	:	ಗರ್ಭಗೃಹ, ಅಂತರಾಳ, ಸಭಾಮಂಟಪ, ಅರ್ಧಮಂಟಪ, ಮಹಾರಂಗ ಮಂಟಪ, ಮುಖಮಂಟಪ, ಪ್ರವೇಶಮಂಟಪ, ಗರುಡಮಂಟಪ, ಧ್ವಜಸ್ತಂಭ, ದೀಪಸ್ತಂಭ, ಬಲಿಪೀಠ, ಪ್ರಾಕಾರ, ಪ್ರಾಕಾರ ಮಂಟಪಗಳು, ಪರಿವಾರದೇವತೆಗಳ ಮಂಟಪಗಳು, ಮಹಾದ್ವಾರ ಮಂಟಪ. ಮಹಾದ್ವಾರ ಗೋಪುರ, ಉಯ್ಯಾಲೆ ಕಂಬ, ದೀಪಸ್ತಂಭ

ಊರಹೊರಗೆ ಒಂದು ಕೆರೆ ಇದ್ದು, ಕೆರೆಯ ಬಳಿ ದೇವಾಲಯವಿರುವುದರಿಂದ ಹೊರಕೆರೆದೇವರಪುರವೆಂದು ಹೆಸರು ಬಂದಿದೆ ಎಂದು ತಿಳಿದುಬರುತ್ತದೆ. ವಿಶಾಲವಾದ ತಲವಿನ್ಯಾಸವನ್ನು ಹೊಂದಿರುವ ಈ ದೇವಾಲಯವು ವಿಜಯನಗರದ ಬೃಹತ್ ದೇವಾಲಯಗಳನ್ನು ಹೋಲುತ್ತದೆ. ಚಿತ್ರದುರ್ಗ ಪಾಳೆಯಗಾರರ ಕಾಲದ ದೇವಾಲಯಗಳಲ್ಲಿ ಇದೇ ದೊಡ್ಡ ಗಾತ್ರದ ದೇವಾಲಯವಾಗಿದೆ.

ದೇವಾಲಯದ ಗರ್ಭಗೃಹವು ನಾಲ್ಕು ಮೂಲೆಗಂಬಗಳನ್ನು ಹೊಂದಿದ್ದು, ಛತ್ತು ಸರಳವಾಗಿದೆ. ದ್ವಾರಬಂಧದ ಇಕ್ಕೆಲಗಳಲ್ಲಿ ಪೂರ್ಣಕುಂಭಗಳ ಅಲಂಕರಣೆಯಿದ್ದು, ಲಲಾಟಬಿಂಬದಲ್ಲಿ ಅರಳು ಪುಷ್ಪಾಕೃತಿಯ ರಚನೆಯಿದೆ. ಅಂತರಾಳವು ಎರಡು ಮೂಲೆಗಂಬಗಳಿಂದ ಕೂಡಿದ್ದು, ದ್ವಾರದ ಇಕ್ಕೆಲಗಳಲ್ಲಿ ವೈಷ್ಣವ ದ್ವಾರಪಾಲಕರುಗಳ ಶಿಲ್ಪಗಳಿವೆ. ದ್ವಾರಬಂಧಕ್ಕೆ ಹಿತ್ತಾಳೆಯ ಕವಚ ಹೊದಿಸಿರುವುದರಿಂದ ಮೂಲ ರಚನೆಗಳು ಸ್ಪಷ್ಟವಾಗಿ ಕಾಣುತ್ತಿಲ್ಲ. ಉಳಿದಂತೆ ಸಾಧಾರಣವಾಗಿದೆ.

ನವರಂಗವು ಆರು ಅರ್ಧಗಂಬಗಳು, ನಾಲ್ಕು ಮೂಲೆಗಂಬಗಳು ಹಾಗು ಮಧ್ಯ ನಾಲ್ಕು ಸ್ವತಂತ್ರ ಕಂಬಗಳಿಂದ ಕೂಡಿದೆ. ಮಧ್ಯದ ಕಂಬಗಳು ಉಳಿದ ಕಂಬಗಳಿಗಿಂತ ತುಂಬಾ ಅಲಂಕರಣೆಯಿಂದ ಕೂಡಿವೆ. ಇವುಗಳು ಪೀಠ, ಕಾಂಡ ಹಾಗು ಕಳಸಗಳನ್ನು ಹೊಂದಿದ್ದು, ಕಾಂಡಭಾಗದಲ್ಲಿ ಕೆಳಗೆ ಮತ್ತು ಮೇಲೆ ಅಸಮವಾದ ಎರಡು ಚೌಕಭಾಗಗಳಿವೆ. ಕೆಳಚೌಕ ಭಾಗದ ಮೂಲೆಯನ್ನು ಎಲೆಯಾಕಾರದ ಕೆತ್ತನೆಯಿಂದ ರಚಿಸಲಾಗಿದ್ದು, ಮೇಲಿನ ಚೌಕಭಾಗದಲ್ಲಿ ಮಾತ್ರ ಪುಷ್ಪಾಕೃತಿಗಳನ್ನು ಕೆತ್ತಲಾಗಿದೆ. ಬೋದುಗೆಗಳು ತುಂಬಾ ಸರಳವಾಗಿವೆ. ನವರಂಗದ ಮಧ್ಯದ ಅಂಕಣದ ಛತ್ತಿನಲ್ಲಿ ಅರಳುಕಮಲದ ಭುವನೇಶ್ವರಿ ಇದೆ. ಈ ಮಂಟಪಕ್ಕೆ ಉತ್ತರ ಮತ್ತು ದಕ್ಷಿಣ ದಿಕ್ಕುಗಳಲ್ಲಿ ಮೂಲ ಪ್ರವೇಶ ದ್ವಾರಗಳಿದ್ದು, ಉತ್ತರ ದ್ವಾರಬಾಗಿಲ ಮುಂದೆ ಈ ಉಗ್ರಾಣವನ್ನು ಕಟ್ಟಲಾಗಿದೆ. ದಕ್ಷಿಣ ಪ್ರವೇಶದ್ವಾರದ ಮುಂದೆ ಚಿಕ್ಕ ಪ್ರವೇಶಮಂಟಪವನ್ನು ರಚಿಸಲಾಗಿದೆ. ಸಭಾಮಂಟಪದ ದ್ವಾರಬಂಧವು ಹಲವು ಶಾಖೆಗಳಿಂದ ಕೂಡಿದ್ದು, ಹಿತ್ತಾಳೆಯ ಕವಚವನ್ನು ಹೊದಿಸಲಾಗಿದೆ. ದ್ವಾರಬಂಧದ ಇಕ್ಕೆಲಗಳಲ್ಲಿ ವೈಷ್ಣವ ದ್ವಾರಪಾಲಕರುಗಳ ಶಿಲ್ಪಗಳು, ಲಲಾಟಬಿಂಬದಲ್ಲಿ ಗಜಲಕ್ಷ್ಮಿಯ ಶಿಲ್ಪವಿದೆ. ಈ ಮಂಟಪದ ದ್ವಾರದ ಎಡ ಕಂಬದ ಮೇಲೆ ಹನ್ನೆರೆಡು ಸಾಲುಗಳ ಶಾಸನವಿದೆ.

ಸಭಾಮಂಟಪ ಮತ್ತು ಮಹಾರಂಗಮಂಟಪಗಳ ಮಧ್ಯದಲ್ಲಿ ಒಂದು ಅರ್ಧಮಂಟಪವಿದ್ದು, ಅದು ಮೂರು ಅಂಕಣಗಳಲ್ಲಿದೆ. ಮಧ್ಯದ ಅಂಕಣ ಪ್ರವೇಶ ದ್ವಾರವಾಗಿದ್ದು, ಇಕ್ಕೆಲಗಳ ಅಂಕಣಗಳಲ್ಲಿ ಎರಡು ಜಗಲಿ ಕಟ್ಟೆಗಳಿವೆ. ಇದರ ಛತ್ತು ಸಮತಟ್ಟಾಗಿದ್ದು ಎರಡು ಮೂಲೆಗಂಬಗಳು ಮತ್ತು ಎರಡು ಅರ್ಧಗಂಬಗಳನ್ನು ಹೊಂದಿದೆ. ಜಗಲಿ ಕಟ್ಟೆಗಳ ಮೂಲೆಗಳಲ್ಲಿ ಎರಡು ಅರ್ಧಗಂಬಗಳು, ಮಧ್ಯ ಎರಡು ಕಂಬಗಳಿದ್ದು, ರಚನೆಯಲ್ಲಿ ನವರಂಗಮಂಟಪದ ಕಂಬಗಳಂತಿವೆ. ಕಂಬಗಳ ಮೇಲೆ ಇಳಿಜಾರಾದ ಮುಂಜೂರು ಇದೆ.

ಮಹಾರಂಗಮಂಟಪವು ಅತ್ಯಂತ ವಿಶಾಲವಾಗಿದ್ದು, ಇದರ ಮುಖಭಾಗವನ್ನು ಹೊರತುಪಡಿಸಿ ಸುತ್ತಲೂ ಗೋಡೆಯಿದೆ. ಈ ಗೋಡೆಯನ್ನು ನಯಗೊಳಿಸಿದ ಬೃಹತ್ತಾದ ಕಲ್ಲುಗಳಿಂದ ಕಟ್ಟಲಾಗಿದೆ. ಪ್ರವೇಶದ್ವಾರವನ್ನು ಹೊರತುಪಡಿಸಿ ಸುತ್ತಲೂ ಕಕ್ಷಾಸನವಿದೆ. ಈ ಮಂಟಪವು ಪ್ರತಿ ಸಾಲಿನಲ್ಲಿ ಐದು ಅಂಕಣಗಳಂತೆ, ಐದು ಸಾಲಿನಲ್ಲಿ ಒಟ್ಟು ಇಪ್ಪತ್ತೈದು ಅಂಕಣಗಳಿಂದ ಕೂಡಿದೆ. ಮಧ್ಯದ ಅಂಕಣಗಳು ನಾಲ್ಕು ಮೂಲೆಯ ಅಂಕಣಗಳಿಗಿಂತ ಅಳತೆಯಲ್ಲಿ ದೊಡ್ಡದಾಗಿವೆ. ಇಲ್ಲಿ ಇಪ್ಪತ್ತು ಸ್ವತಂತ್ರ ಕಂಬಗಳಿದ್ದು, ಅವುಗಳಲ್ಲಿ ಮಧ್ಯದ ಹತ್ತು ಕಂಬಗಳು ಮಾತ್ರ ಆಕರ್ಷಕವಾದ ಶಿಲ್ಪಗಳಿಂದ ಕೂಡಿದ್ದು ಕಲಾತ್ಮಕವಾಗಿವೆ. ಈ ಕಂಬಗಳು ಅಳತೆ ಮತ್ತು ಗಾತ್ರದಲ್ಲಿ ಬೃಹತ್ ಪ್ರಮಾಣದಲ್ಲಿದ್ದು, ರಚನೆಯಲ್ಲಿ ವಿಜಯನಗರ

ಶೈಲಿಯನ್ನು ಹೋಲುತ್ತವೆ. ಈ ಕಂಬಗಳು ಪೀಠಸಹಿತ ಏಕಶಿಲೆ ಕಂಬಗಳಾಗಿದ್ದು, ಕೆಳಗೆ, ಮಧ್ಯ ಮತ್ತು ಮೇಲೆ ಮೂರು ಅಸಮವಾದ ಚೌಕಭಾಗಗಳನ್ನು ಹೊಂದಿವೆ. ಅವುಗಳ ಮಧ್ಯ ಎಂಟು ಮತ್ತು ಹದಿನಾರು ಮುಖಗಳ ಲಂಬಪಟ್ಟಿಕೆಗಳಿವೆ. ಈ ಮೂರು ಚೌಕಭಾಗಗಳಲ್ಲಿ ಲಕ್ಷ್ಮಿನರಸಿಂಹ, ವೈಷ್ಣವ, ಯತಿ, ಹಾವಾಡಿಗ, ಭಕ್ತ, ಆಂಜನೇಯ, ರಾಮಾನುಜಾಚಾರ್ಯ, ಬಾಳೆಹಣ್ಣು ತಿನ್ನುತ್ತಿರುವ ಮಂಗ, ಸರ್ಪ ಹಿಡಿದು ಕುಳಿತಿರುವ ಯತಿ, ಕಾಳಿಂಗಮರ್ದನ ಕೃಷ್ಣ, ನಗ್ನ ಬೇಡತಿ, ಜಾಗಟೆ ಬಾರಿಸುವವ, ಸೂರ್ಯ, ಛಾಮರಧಾರಿಣಿ, ವಿಷ್ಣು, ನೃತ್ಯಗಾರ, ಆರತಿ ಹಿಡಿದಿರುವ ಭಕ್ತೆ, ಮೃದಂಗವಾದಕ, ಮಲ್ಲಯುದ್ಧ, ಕುದುರೆ, ಭೈರವ, ಗಣೇಶ, ಶ್ರೀದೇವಿ–ಭೂದೇವಿ ಸಮೇತ ರಂಗನಾಥಸ್ವಾಮಿ, ನಂದಿ, ಗರುಡ, ಹಂಸ, ಸಂತ, ಗೊಲ್ಲ ಮುಂತಾದ ಉಬ್ಬುಶಿಲ್ಪಗಳಿವೆ. ಮಧ್ಯದ ಛತ್ತು ಸರಳವಾಗಿದೆ.

ಮುಖಮಂಟಪವು ಭವ್ಯವಾಗಿದ್ದು, ಸಂಪೂರ್ಣ ತೆರೆದಿದೆ. ಈ ಮಂಟಪದಲ್ಲಿ ಪ್ರತಿಸಾಲಿನಲ್ಲಿ ಮೂರರಂತೆ ಎರಡು ಸಾಲಿನಲ್ಲಿ ಒಟ್ಟು ಆರು ಅಂಕಣಗಳಿವೆ. ಮೊದಲ ಸಾಲಿನ ನಾಲ್ಕು ಕಂಬಗಳು ಮತ್ತು ಎರಡನೆಯ ಸಾಲಿನ ಮೂರು ಕಂಬಗಳು ಬೃಹತ್ ಗಾತ್ರ ಮತ್ತು ಪ್ರಮಾಣದಿಂದಾಗಿ ಗಮನಸೆಳೆಯುತ್ತವೆ. ಇವುಗಳು ಕೆಳಗೆ, ಮಧ್ಯ ಮತ್ತು ಮೇಲೆ ಮೂರು ಅಸಮವಾದ ಚೌಕಭಾಗಗಳನ್ನು ಹೊಂದಿದ್ದು, ಪೀಠದಿಂದ ಏಕಶಿಲಾ ಸ್ತಂಭಗಳಾಗಿವೆ. ಕೆಳಗಿನ ಮತ್ತು ಮೇಲಿನ ಚೌಕಭಾಗಗಳ ಮಧ್ಯದಲ್ಲಿ ಹದಿನಾರು ಮುಖಗಳ ದೀರ್ಘಲಂಬಪಟ್ಟಿಕೆಗಳು, ಅದರ ಮಧ್ಯದಲ್ಲಿ ಎಂಟು ಮುಖಗಳ ಲಂಬಪಟ್ಟಿಕೆಗಳಿದ್ದು, ಕೆಳಚೌಕದ ನಾಲ್ಕು ಮೂಲೆಗಳಲ್ಲಿ ಎಲೆಯಾಕಾರದ ರಚನೆ ಹಾಗು ಮಧ್ಯದಲ್ಲಿ ಕೆಲವು ಉಬ್ಬುಶಿಲ್ಪಗಳ ಮತ್ತು ವಿವಿಧ ಪುಷ್ಪರೇಖಾಕೃತಿಗಳನ್ನು ಕೆತ್ತಲಾಗಿದೆ. ಮೊದಲ ಸಾಲಿನ ಕಂಬಗಳಲ್ಲಿ ಆಂಜನೇಯ, ಗರುಡ ಮತ್ತು ದ್ವಾರಪಾಲಕರುಗಳ ಶಿಲ್ಪಗಳಿದ್ದರೆ, ಎರಡನೆಯ ಸಾಲಿನ ಕಂಬಗಳಲ್ಲಿ ಬಾಲಕೃಷ್ಣ, ಮಿಥುನಶಿಲ್ಪಗಳು, ಲಿಂಗಕ್ಕೆ ಹಾಲೆರೆಯುತ್ತಿರುವ ಹಸು (ಮೂರು ಮುಖ ಒಂದೇ ದೇಹ), ದೇವಾಲಯದ ನಿರ್ಮಾತೃಗಳಾದ ರಾಜರಾಣಿಯರ ಶಿಲ್ಪಗಳಿವೆ. ಕಂಬಗಳ ಮೇಲ್ಭಾಗದಲ್ಲಿ ಪುಷ್ಪಬೋದುಗೆಗಳಿದ್ದು, ವಿಜಯನಗರ ಶೈಲಿಯ ಕಂಬಗಳನ್ನು ನೆನಪಿಸುತ್ತವೆ. ಮುಂದಿನ ಸಾಲಿನ ಮಧ್ಯದ ಛತ್ತಿನಲ್ಲಿ ಮೊಗಚಿಹಾಕಿದ ಅರಳು ಕಮಲದ ಭುವನೇಶ್ವರಿಯಿದ್ದು, ಅದರಲ್ಲಿ ದೀರ್ಘವಾದ ಮೊಗ್ಗು ಇರುವುದು ವಿಶೇಷ. ಮುಖಮಂಟಪದ ಎಡಭಾಗದ ಎರಡನೆ ಸಾಲಿನ ಅಂಕಣಕ್ಕೆ ಹೊಂದಿಕೊಂಡಂತೆ ಆಂಜನೇಯನ ಚಿಕ್ಕ ಗುಡಿಯಿದ್ದು, ದ್ವಾರಬಂಧದ ಇಕ್ಕೆಲಗಳಲ್ಲಿ ವೈಷ್ಣವ ದ್ವಾರಪಾಲಕರು, ಲಲಾಟಬಿಂಬದಲ್ಲಿ ಗಜಲಕ್ಷ್ಮಿಯ ಶಿಲ್ಪಗಳಿವೆ.

ಮುಖಮಂಟಪದ ಎದುರಿಗೆ ಚಿಕ್ಕ ಪ್ರವೇಶ ಮಂಟಪವಿದೆ. ಎರಡು ಹಂತದಲ್ಲಿರುವ ಈ ಮಂಟಪ ಪ್ರತಿಸಾಲಿನಲ್ಲಿ ಮೂರರಂತೆ ಎರಡು ಸಾಲಿನಲ್ಲಿ ಒಟ್ಟು ಆರು ಅಂಕಣಗಳನ್ನು ಹೊಂದಿದ್ದು, ಮಧ್ಯದ ಪ್ರವೇಶ ಹಾದಿಯನ್ನು ಹೊರತುಪಡಿಸಿ ಎರಡು ಬದಿಗೆ ಕಟ್ಟೆಗಳಿವೆ. ಈ ಪ್ರವೇಶಮಂಟಪದ ಮೇಲೆ ಗಾರೆ ಮತ್ತು ಇಟ್ಟಿಗೆಗಳಿಂದ ನಿರ್ಮಿಸಿದ ದೇವಕೋಷ್ಠಗಳಿವೆ. ಕಂಬಗಳು ಮತ್ತು ಭಿತ್ತಿ ತುಂಬಾ ಸರಳವಾಗಿದ್ದು, ಮೇಲಿನ ದೇವಕೋಷ್ಠಕದಲ್ಲಿ ಯಾವುದೇ ದೇವತಾಶಿಲ್ಪಗಳಿಲ್ಲ. ಈ ಪ್ರವೇಶ ಮಂಟಪದ ಎಡಕ್ಕೆ ಶಾಸನವಿದ್ದು, ಅದು ಸ್ವಲ್ಪ ಹೊತು ಹೋಗಿರುವುದರಿಂದ ಶಾಸನದ ಪಾಠ ಸರಿಯಾಗಿ ಕಾಣಿಸುತ್ತಿಲ್ಲ.

ಪ್ರವೇಶಮಂಟಪದ ನಂತರ ತುಂಬಾ ಆಕರ್ಷಕ ಹಾಗು ಕಲಾತ್ಮಕವಾದ ಗರುಡನ ಚಿಕ್ಕಗುಡಿಯಿದ್ದು, ಎರಡು ಅಂತಸ್ತಿನಲ್ಲಿ ನಿರ್ಮಿಸಲ್ಪಟ್ಟಿದೆ. ಕೆಳ ಅಂತಸ್ತು ತೆರೆದ ಮಂಟಪವಾಗಿದ್ದು, ನಾಲ್ಕು ಮೂಲೆಗೆ ನಾಲ್ಕು ಪುಟ್ಟ ಕಂಬಗಳಿವೆ. ಈ ಕಂಬಗಳ ಮೇಲೆ ಪುಷ್ಪಬೋದುಗೆಗಳಿವೆ. ಮೇಲಿನ ಅಂತಸ್ತಿನಲ್ಲಿ ಚಿಕ್ಕಗುಡಿಯಿದ್ದು, ಸುತ್ತಲೂ ಗೋಡೆಯಿಂದ ಕಟ್ಟಲ್ಪಟ್ಟಿದೆ. ಈ ಮಂಟಪವು ಸಹ ನಾಲ್ಕು ಮೂಲೆ ಕಂಬಗಳನ್ನು ಹೊಂದಿದ್ದು ಪುಷ್ಪಬೋದುಗೆಗಳಿಂದ ಕೂಡಿವೆ. ಮಂಟಪದ ಮೇಲೆ ಏಕತಲ ದ್ರಾವಿಡ ವಿಮಾನ ಮಾದರಿಯ ಚಿಕ್ಕ ಗೋಪುರವಿದ್ದು, ಅದರ ಮೇಲೆ ಸ್ತೂಪಿ, ಅದರ ಮೇಲೆ ಗುಮ್ಮಟಾಕಾರದ ಕಳಸ ಹಾಗು ಶಿಖರದ ಮೇಲೆ ನಾಲ್ಕು ಮೂಲೆಗಳಲ್ಲಿ ಕೀರ್ತಿಮುಖಗಳ ರಚನೆಯಿದೆ.

ಗರುಡ ಗುಡಿಯ ನಂತರ ೧.೩೯ ಉದ್ದ, ೧.೪೨ ಮೀಟರ್ ಅಗಲದ ಪೀಠದ ಮೇಲೆ ಧ್ವಜಸ್ತಂಭವಿದ್ದು, ತಾಮ್ರದ ಕವಚವನ್ನು ಹೊದಿಸಲಾಗಿದೆ. ಅದರ ಮುಂದೆ ಬಲಿಪೀಠ ತುಂಬಾ ಆಕರ್ಷಕ ಹಾಗು ವಿಶಿಷ್ಟವಾಗಿದ್ದು, ನೋಡಿದ ತಕ್ಷಣ ಹಂಪಿಯ ಕಲ್ಲಿನ ರಥದ ರೀತಿ ಕಾಣಿಸುತ್ತದೆ. ಈ ಬಲಿಪೀಠಕ್ಕೆ ಮಂಚಬಂಧ ರೀತಿಯ ಅಧಿಷ್ಠಾನವಿದ್ದು, ಇದರ ನಾಲ್ಕು ಮೂಲೆಗೆ ಮತ್ತು ಮಧ್ಯದಲ್ಲಿ ಕಂಬಗಳ ರೀತಿಯ ಅಲಂಕರಣೆ, ಅವುಗಳ ಮೇಲೆ ಪುಷ್ಪಾಕೃತಿ, ನಂತರದಲ್ಲಿ ಉಪಾನ, ಕುಮುದ, ಮತ್ತೆ ಕಿರುಮಂಟಪದ ಚಿಕ್ಕ ಮಾದರಿಗಳಿದ್ದು, ಅದರ ಮೇಲೆ ಪುಟ್ಟ ಸ್ತಂಭಮಂಟಪಗಳ ಮಾದರಿ, ಮೇಲೆ ಕಪೋತ, ಅದರ ಮೇಲೆ ವೃತ್ತಾಕಾರದ ಸ್ತೂಪಿ ಹೀಗೆ ವಿವಿಧ ವಿಶಿಷ್ಟ ಲಕ್ಷಣಗಳಿಂದ ಕೂಡಿರುವ ಬಲಿಪೀಠವು ವಿಜಯನಗರ ಮತ್ತು ವಿಜಯನಗರೋತ್ತರ ಕಾಲದ ದೇವಾಲಯಗಳಲ್ಲೇ ತುಂಬಾ ವಿಶಿಷ್ಟವಾಗಿ ರಚನೆಗೊಂಡಿದೆ. ಇದರ ಎತ್ತರ ಮತ್ತು ಅಲಂಕರಣೆಗಳು ವಿಭಿನ್ನವೆನಿಸತ್ತದೆ.

ಬಲಿಪೀಠದ ನಂತರ ಪುಟ್ಟ ಪೀಠದ ಮೇಲೆ ಏಕಶಿಲೆಯ ಬೃಹತ್ ದೀಪಸ್ತಂಭವಿದೆ. ಈ ಸ್ತಂಭ ಕೆಳಭಾಗದಲ್ಲಿ ನಾಲ್ಕು ಮುಖಗಳ ಚೌಕಭಾಗವನ್ನು ಹೊಂದಿದ್ದು, ಉಳಿದಂತೆ

ಹದಿನಾರು ಮುಖಗಳ ದೀರ್ಘಲಂಬಪಟ್ಟಿಕೆಗಳು, ಮಧ್ಯದಲ್ಲಿ ಎಂಟು ಮುಖಗಳ ಎರಡು ಅಡ್ಡಪಟ್ಟಿಕೆಗಳು, ತುದಿಯಲ್ಲಿ ನಾಲ್ಕುಮುಖಗಳ ಚೌಕಭಾಗವನ್ನು, ಮೇಲೆ ಕುಂಭ ಕಳಸವನ್ನು ಹೊಂದಿದೆ.

ಮಹಾದ್ವಾರಮಂಟಪವು ಮಧ್ಯಮ ಪ್ರಮಾಣದಲ್ಲಿದ್ದು, ಒಂಭತ್ತು ಅಂಕಣಗಳನ್ನು ಹೊಂದಿದೆ. ಮಧ್ಯದ ಮೂರು ಅಂಕಣಗಳು ಪ್ರವೇಶದ್ವಾರಗಳಾಗಿದ್ದು, ಎರಡು ಬದಿಯ ಅಂಕಣಗಳು ಜಗಲಿ ಕಟ್ಟೆಗಳನ್ನು ಹೊಂದಿವೆ. ಈ ಕಟ್ಟೆಗಳು ಅಧಿಷ್ಠಾನ, ಉಪಾನ, ಗಳ, ಜಗತಿಗಳನ್ನು ಹೊಂದಿವೆ. ಪ್ರವೇಶ ಮಹಾದ್ವಾರವು ಎತ್ತರವಾದ ಜಗಲಿ ಮತ್ತು ಅಧಿಷ್ಠಾನದ ಮೇಲೆ ಕಟ್ಟಲ್ಪಟ್ಟಿದ್ದು, ಆರು ಮೆಟ್ಟಿಲುಗಳನ್ನು ಏರಿ ಪ್ರವೇಶಮಂಟಪವನ್ನು ಪ್ರವೇಶಿಸಲಾಗುತ್ತದೆ. ದ್ವಾರಮಂಟಪದ ಅಧಿಷ್ಠಾನ ಆಕರ್ಷಕವಾದ ಉಪಾನ, ತ್ರಿಪಟ್ಟ ಕುಮುದ ಮತ್ತು ಜಗತಿಗಳನ್ನು ಹೊಂದಿದೆ. ಮಹಾದ್ವಾರದ ಪ್ರಧಾನ ಬಾಗಿಲು ಎರಡು ಚೌಕಟ್ಟುಗಳಿಂದ ಕೂಡಿದ್ದು, ಮೊದಲ ಚೌಕಟ್ಟಿನ ಮುಂಭಾಗದಲ್ಲಿ ಇಕ್ಕೆಲಗಳಲ್ಲಿ ಸಿಂಹಗಳ ಬಾಯಿಂದ ಹೊರಟ ಲತಾತೋರಣಗಳು ಇಡೀ ಚೌಕಟ್ಟಿನ ತುಂಬಾ ವ್ಯಾಪಿಸಿದ್ದು ಆಕರ್ಷಕವಾಗಿದೆ. ಇದರ ಲಲಾಟಬಿಂಬದಲ್ಲಿ ನಾಲ್ಕು ದಳದ ಪುಷ್ಪಾಕೃತಿಯ ರಚನೆಯಿದೆ. ಈ ಚೌಕಟ್ಟಿನ ಒಳಮುಖ ಭಾಗದಲ್ಲಿ ಕೆಳಗೆ ಆಂಜನೇಯ ಮತ್ತು ಗರುಡನ ಶಿಲ್ಪಗಳಿದ್ದು ಮೇಲೆ ಲತಾತೋರಣವಿದೆ. ಎರಡನೆ ಚೌಕಟ್ಟು ದ್ವಾರಬಂಧವಾಗಿದ್ದು, ಇಕ್ಕೆಲಗಳಲ್ಲಿ ಕುಂಭತೋರಣಗಳಿವೆ. ಅವುಗಳ ಮೇಲೆ ಸ್ತಂಭಶಾಖೆಗಳಿವೆ. ಲಲಾಟಬಿಂಬದಲ್ಲಿ ಲಕ್ಷ್ಮಿಯ ಬಿಂಬವಿದ್ದು, ಇದರ ಇಕ್ಕೆಲಗಳಲ್ಲಿ ಕುಡ್ಮಲಗಳಿವೆ. ಮಹಾದ್ವಾರ ಮಂಟಪದ ಹೊರಭಿತ್ತಿಯಲ್ಲಿ ಒಳಕಂಬಗಳ ಮೇಲಿನ ಪುಷ್ಪಬೋದುಗೆಗಳು ಹೊರಗೆ ಗೋಚರಿಸುತ್ತವೆ. ಮಂಟಪದ ಒಳಭಾಗದಲ್ಲಿ ಇಕ್ಕೆಲಗಳ ಕಟ್ಟೆಗಳ ಮೇಲೆ ನಾಲ್ಕು ಕಂಬಗಳಿದ್ದು, ಇವುಗಳು ಕೆಳಗೆ, ಮಧ್ಯ ಮತ್ತು ಮೇಲೆ ಅಸಮವಾದ ಮೂರು ಚೌಕಭಾಗಗಳನ್ನು ಹೊಂದಿವೆ. ಇವುಗಳ ಮಧ್ಯ ಹದಿನಾರು ಮುಖಗಳ ಲಂಬಪಟ್ಟಿಕೆಗಳಿವೆ. ಈ ಮೂರು ಚೌಕಭಾಗಗಳಲ್ಲಿ ನಾಲ್ಕು ಮುಖಗಳಲ್ಲಿ ಕುಳಿತಸಿಂಹ, ಆಂಜನೇಯ, ಕಾಳಿಂಗಮರ್ದನ ಕೃಷ್ಣ, ನರಸಿಂಹ, ಪೂತನಿಸಂಹಾರ, ವೃತ್ತಾಕಾರಾದಲ್ಲಿ ನಿಂತು ಪರಸ್ಪರ ಕೈಕಾಲುಗಳನ್ನು ಹಿಡಿದ ಸ್ತ್ರೀಯರು, ಕೃಷ್ಣನ ರಾಸಕ್ರೀಡೆ, ಮಿಥುಶಿಲ್ಪಗಳು, ಒಂದೇ ದೇಹ ಐದು ತಲೆಗಳಿದ್ದು ವಿವಿಧ ಭಂಗಿಯಲ್ಲಿರುವ ಹಸು, ಆನೆ, ಹಂಸ, ಬೇಡರಕಣ್ಣಪ್ಪ, ವೀರಭದ್ರ, ಗರುಡ, ತಮಟೆವಾದಕರು, ವೃಷಭಾರೂಢ ಉಮಾಮಹೇಶ್ವರ, ನಂದಿ, ಬಾಲವಿರುವ ಕುಳಿತ ಸಿಂಹ, ಗಜಾನನ, ಶಿವಲಿಂಗ ಪೂಜಿಸುತ್ತಿರುವ ಬಾಲವಿರುವ ಯತಿ, ಭೈರವ, ಕುದುರೆಗೆ ಬಾಣ ಬಿಡುತ್ತಿರುವ ರಾಜ, ಕೇಶವ, ಗೋಪಿಕಾಸ್ತ್ರೀಯರ ವಸ್ತ್ರಾಪಹರಣ, ಮೊಸರು ಕಡೆಯುತ್ತಿರುವ ಗೋಪಿಕಾಸ್ತ್ರೀಯರು ಮತ್ತು ಕೃಷ್ಣ, ವೀಣಾಧಾರಿ

ಸ್ತ್ರೀ, ಶಂಖವಾದಕ, ಶಹನಾಯಿ ವಾದಕರು, ಯತಿ, ಖಡ್ಗಧಾರಿ ಸ್ತ್ರೀ, ರಾಮಾನುಜಾಚಾರ್ಯ, ಲಕ್ಷ್ಮೀನಾರಾಯಣ, ಅರಸ ಮತ್ತು ಅವನ ಪತ್ನಿಯರು, ಗೋಪಾಲಕೃಷ್ಣ, ಮೃದಂಗವಾದಕ, ನೃತ್ಯಗಾತಿ, ಅಂಜಲಿಮುದ್ರೆಯಲ್ಲಿರುವ ಭಕ್ತಾಂಜನೇಯ, ಕಹಳೆವಾದಕ, ಬಾಲಕೃಷ್ಣ, ವೀಣಾವಾದಕ, ಶೇಷಶಯನ, ಶ್ರೀದೇವಿ ಸಮೇತ ರಂಗನಾಥ ಮುಂತಾದ ಉಬ್ಬುಶಿಲ್ಪಗಳಿವೆ.

ಪ್ರವೇಶಮಹಾದ್ವಾರ ಮಂಟಪವು ಐದು ಅಂತಸ್ತುಗಳಲ್ಲಿದ್ದು ಹಿಂದೂ, ಮುಸ್ಲಿಂ ಶೈಲಿಯಲ್ಲಿದೆ. ಮೊದಲ ಅಂತಸ್ತು ಕೆಳಮಂಟಪದ ಮಾದರಿಯಲ್ಲಿದ್ದು, ಅದಕ್ಕೂ ಚಿಕ್ಕ ಪ್ರಮಾಣದಲ್ಲಿದೆ. ಇಲ್ಲಿಯ ಬಾಗಿಲ ಇಕ್ಕೆಲಗಳಲ್ಲಿ ವೈಷ್ಣವ ದ್ವಾರಪಾಲಕರ ಶಿಲ್ಪಗಳಿದ್ದು, ಕಂಬಗಳ ಮೇಲೆ ಮಾಡಿನಲ್ಲಿ ಇಳಿಜಾರಾದ ಮುಂಜೂರು ಇದೆ. ಆದರೆ ಮೇಲಿನ ಅಂತಸ್ತು ಅಷ್ಟಮುಖಗಳ ಒಂದು ಮಂಟಪ ಹಾಗು ಎಂಟುಮುಖಗಳಲ್ಲಿ ಕಮಾನಿನಾಕಾರಾದ ಬಾಗಿಲುಗಳಿದ್ದು, ಮುಸ್ಲಿಂ ಶೈಲಿಯನ್ನು ಹೋಲುತ್ತವೆ. ಪ್ರತಿ ಮೂಲೆಯ ಕಂಬಗಳ ಮೇಲೆ ಪುಷ್ಪಬೋದುಗೆಗಳಿದ್ದು ಹಿಂದೂ ಶೈಲಿಯನ್ನು ಹೋಲುತ್ತವೆ. ಒಟ್ಟಾರೆ ಈ ಅಂತಸ್ತು ಹಿಂದೂ-ಮುಸ್ಲಿಂ ಶೈಲಿಯ ಸಮ್ಮಿಲನವಾಗಿದ್ದು, ಅವರ ನಡುವಿನ ಸಾಮರಸ್ಯವನ್ನು ಪ್ರತಿನಿಧಿಸುತ್ತದೆ. ಈ ಅಂತಸ್ತಿನ ಮಾಡಿನಲ್ಲಿ ಎಂಟು ಕಡೆ ಇಳಿಜಾರಾದ ಮುಂಜೂರು ಇದೆ. ಇದರ ಮೇಲಿನ ಅಂತಸ್ತು ಪುನಃ ಚೌಕಾಕಾರದಲ್ಲಿದ್ದು, ನಾಲ್ಕು ಮೂಲೆಗೆ ಕಂಬಗಳು, ಅವುಗಳ ಮೇಲೆ ಪುಷ್ಪಬೋದುಗೆಗಳಿವೆ. ಕಂಬಗಳ ಮಧ್ಯ ಗೋಡೆಗಳಿಂದ ಮುಚ್ಚಲಾಗಿದ್ದು, ನಾಲ್ಕು ದಿಕ್ಕಿಗೆ ಬಾಗಿಲುಗಳಿವೆ. ಈ ಬಾಗಿಲುಗಳು ಕಮಾನಿನಾಕಾರದಲ್ಲಿದ್ದರೂ ವಿಭಿನ್ನ ವಿನ್ಯಾಸವನ್ನು ಹೊಂದಿವೆ. ಈ ಬಾಗಿಲುಗಳ ಮೇಲೆ ಕಂಗೂರಾಕೃತಿಗಳ ರಚನೆಯಿದ್ದು, ಮಂಟಪದ ಮೇಲೆ ಏಕತಲ ದ್ರಾವಿಡ ವಿಮಾನ ಮಾದರಿಯ ಶಿಖರವಿದೆ. ಇಲ್ಲಿ ಗೋಪುರವನ್ನು ಸಂಪೂರ್ಣ ಶಿಲೆಯಿಂದಲೇ ನಿರ್ಮಿಸಲಾಗಿದೆ. ಈ ಮಂಟಪದ ಕಂಬಗಳಾಗಲಿ, ಗೋಡೆಗಳಾಗಲೀ ಹೆಚ್ಚಿನ ಅಲಂಕರಣೆಯನ್ನು ಹೊಂದಿರದೆ ಸರಳವಾಗಿವೆ.

ಸಾಮಾನ್ಯವಾಗಿ ವಿಜಯನಗರ ವಾಸ್ತುಶೈಲಿಯಲ್ಲಿ ಮಹಾದ್ವಾರ ಮಂಟಪದ ಮೇಲೆ ಇಟ್ಟಿಗೆ ಮತ್ತು ಗಾರೆಗಳಿಂದ ನಿರ್ಮಿಸಲಾದ ದ್ರಾವಿಡ ವಿಮಾನ ಮಾದರಿಯ ಅನೇಕ ತಲಗಳ ಶಿಖರಗಳನ್ನು ಕಾಣಬಹುದು. ಆದರೆ ಇಲ್ಲಿ ಆ ಮಾದರಿಯನ್ನು ಕೈಬಿಟ್ಟು ಸಂಪೂರ್ಣ ಕಲ್ಲಿನಲ್ಲಿಯೇ ಹೊಸ ಬಗೆಯ ಗೋಪುರ ಕಟ್ಟಿರುವುದು ಗಮನಾರ್ಹವೆನಿಸುತ್ತದೆ. ಅಲ್ಲದೇ ವಿಜಯನಗರ ವಾಸ್ತುಶೈಲಿಗೆ ಇದು ಪಾಳೆಯಗಾರರ ವಿಶೇಷ ಕೊಡುಗೆಯೆಂದೇ ಹೇಳಬಹುದು. ಮಹಾದ್ವಾರ ಪ್ರವೇಶಮಂಟಪದ ದಕ್ಷಿಣಬದಿಯ ದ್ವಾರಬಂಧದಲ್ಲಿ ಎರಡು ಚೌಕಟ್ಟುಗಳಿದ್ದು, ಮೊದಲ ಚೌಕಟ್ಟಿನಲ್ಲಿ ಸಿಂಹಗಳ ಬಾಯಿಂದ ಹೊರಟಿರುವ ಸಿಂಹತೋರಣಗಳಿವೆ.

ಒಳಬದಿಯಲ್ಲಿ ಲತೆಯನ್ನು ಆಶ್ರಯಿಸಿ ನಿಂತಿರುವ ಸ್ತ್ರೀಯರ ಶಿಲ್ಪಗಳಿದ್ದು, ಚೌಕಟ್ಟಿನುದ್ದಕ್ಕೂ ಲತಾತೋರಣಗಳ ಅಲಂಕರಣೆಯಿದೆ. ಎರಡನೆಯ ಚೌಕಟ್ಟಿನಲ್ಲಿ ಮೂರು ಶಾಖೆಗಳಿದ್ದು, ಅವುಗಳಲ್ಲಿ ಬಳ್ಳಿಗಳ ಅಲಂಕರಣೆಯಿದೆ. ಇಕ್ಕೆಲಗಳಲ್ಲಿ ವೈಷ್ಣವ ದ್ವಾರಪಾಲಕರ ಶಿಲ್ಪಗಳು, ಲಲಾಟಬಿಂಬದಲ್ಲಿ ಅರಳುಕಮಲಾಕೃತಿ, ಅದರ ನಡುವೆ ಗಾರೆಯ ಮೊಗ್ಗುಗಳು ತೋರಿಸಿರುವುದು ವಿಶೇಷವಾಗಿದೆ.

ದೇವಾಲಯದ ಹೊರಭಾಗದಲ್ಲಿ ಗರ್ಭಗೃಹ ಮತ್ತು ಅಂತರಾಳಗಳ ಅಧಿಷ್ಠಾನ ಎತ್ತರವಾದ ಉಪಾನ, ದ್ವಿಪಟ್ಟ ಕುಮುದ ಮತ್ತು ಕಪೋತಗಳಿಂದ ಕೂಡಿದ್ದು, ಮಹಾರಂಗ ಮಂಟಪದ ಅಧಿಷ್ಠಾನಕ್ಕಿಂತ ಸ್ವಲ್ಪ ಆಕರ್ಷಕವಾಗಿದೆ. ಗರ್ಭಗೃಹದ ಭಿತ್ತಿ ಸಮಗೊಳಿಸಿದ ಬೃಹತ್ ಕಲ್ಲುಗಳಿಂದ ನಿರ್ಮಿತವಾಗಿದ್ದು, ಕಪೋತದಲ್ಲಿ ಸಾಲಾಗಿ ಚೈತ್ಯಾಕೃತಿಗಳ ಅಲಂಕರಣೆಯಿದೆ. ಅದರ ಮೇಲೆ ಏಕತಲದ ದ್ರಾವಿಡ ವಿಮಾನ ಮಾದರಿಯ ಶಿಖರವಿದ್ದು, ವೃತ್ತಾಕಾರಾದ ಸ್ತೂಪಿಯಿದೆ. ಈ ಶಿಖರವನ್ನು ಇತ್ತೀಚೆಗೆ ಪುನರ್‌ನವೀಕರಿಸಲಾಗಿದೆ. ಮಹಾರಂಗಮಂಟಪದ ಭಿತ್ತಿಯು ಸರಳವಾಗಿದ್ದು ಅರ್ಧಗಂಬಗಳು ಮತ್ತು ಬೋದುಗೆಗಳು ಗೋಚರಿಸುತ್ತವೆ. ಈ ಮಂಟಪದ ಅಧಿಷ್ಠಾನವು ಮಂಚಬಂಧ ಶೈಲಿಯಲ್ಲಿದ್ದು, ಉಪಾನ, ಗಳ, ಮತ್ತು ಕಪೋತಗಳನ್ನು ಹೊಂದಿ ಸರಳವಾಗಿದೆ.

ದೇವಾಲಯದ ಸುತ್ತಲೂ ವಿಶಾಲ ಮತ್ತು ಎತ್ತರವಾದ ಪ್ರಾಕಾರ ಗೋಡೆಯಿದ್ದು, ಇದರ ಒಳಗೆ ಪ್ರತಿಬದಿಗೆ ಮೂವತ್ತರಂತೆ ಒಟ್ಟು ಅರವತ್ತು, ಹಿಂಬದಿಯಲ್ಲಿ ಹತ್ತು ಕಂಬಗಳ ಪ್ರಾಕಾರ ಮಂಟಪಗಳು ಎದುರಿಗೆ ಮಹಾದ್ವಾರ ಮಂಟಪದ ಬದಿಯಲ್ಲಿ ಐದು ಕಂಬಗಳ ಮಂಟಪಗಳಿವೆ. ಈ ಪ್ರಾಕಾರದ ಒಳಗಡೆ ವಿಶಾಲವಾದ ತೆರೆದ ಪ್ರಾಂಗಣವಿದ್ದು, ಅದರಲ್ಲಿ ವಿಷ್ಣು, ಶಿವ, ನಂದಿ ಲಕ್ಷ್ಮಿ, ಆದಿಶೇಷ, ವಾಸುಕಿ, ನವಗ್ರಹ, ಕಾಲಭೈರವ ಮುಂತಾದ ಚಿಕ್ಕಗುಡಿಗಳಿವೆ. ದೇವಾಲಯದ ಎಡಭಾಗದ ಪ್ರಾಂಗಣದಲ್ಲಿ ಶಾಸನವಿದ್ದು, ಅದನ್ನು ಸರಿಯಾಗಿ ರಕ್ಷಿಸಲ್ಪಟ್ಟಿಲ್ಲ. ಅಕ್ಷರಗಳು ಸವೆದಿರುವುದರಿಂದ ಸರಿಯಾಗಿ ಕಾಣಿಸುತ್ತಿಲ್ಲ.

ಮಹಾದ್ವಾರದ ಎದುರಿಗೆ ಬೃಹತ್ ಏಕಶಿಲಾ ಸ್ತಂಭಗಳ ಉಯ್ಯಾಲೆಕಂಬವಿದ್ದು, ಪರಸ್ಪರ ಏಳು ಅಡಿ ಅಂತರದಲ್ಲಿ ನಿಲ್ಲಿಸಲಾಗಿದೆ. ಈ ಕಂಬಗಳ ಮೇಲೆ ಎರಡು ಅಡ್ಡ ತೊಲೆಗಳಿದ್ದು, ಮಧ್ಯದಲ್ಲಿ ಉಯ್ಯಾಲೆಯ ಕಬ್ಬಿಣದ ಸರಪಳಿಯಿದೆ. ಈ ಕಂಬಗಳು ಅಪೂರ್ಣಗೊಂಡಿದ್ದು, ಮಟ್ಟಸಗೊಳಿಸಲಾಗಿಲ್ಲ. ಇವುಗಳ ಮೇಲೆ ಕೆತ್ತಬೇಕಾಗಿದ್ದ ಶಿಲ್ಪಗಳ ಅಪೂರ್ಣ ರೇಖಾಕೃತಿಗಳು ಕಂಡುಬರುತ್ತವೆ. ಉಯ್ಯಾಲೆ ಕಂಬದ ಮುಂದೆ ಸ್ವಲ್ಪ ಅನತಿ ದೂರದಲ್ಲಿ ಎತ್ತರವಾದ ಕಟ್ಟೆಯಿದ್ದು ಅದಕ್ಕೆ ಸೋಪಾನಗಳಿವೆ. ಈ ಸೋಪಾನಗಳ ಬದಿಯಲ್ಲಿ ಆನೆಗಳ ಕೈಪಿಡಿಗಳಿದ್ದು, ಕಟ್ಟೆಯ ಮೇಲೆ ಮಂಟಪವನ್ನು ಈಚೆಗೆ ನಿರ್ಮಿಸಲಾಗಿದೆ. ಈ

ಎತ್ತರವಾದ ವೇದಿಕೆಯ ಉತ್ತರ ಮತ್ತು ದಕ್ಷಿಣ ಬದಿಗೆ ಒಂದೊಂದು ಕಂಬಗಳ ಮಂಟಪಗಳಿವೆ. ದೇವಾಲಯದ ಹೊರಗಡೆ ಬಲಭಾಗಕ್ಕೆ ಎರಡು ಚಿಕ್ಕಮಂಟಪಗಳಿದ್ದು ಯಜ್ಞ ಅಥವಾ ಹೋಮಗಳನ್ನು ಆಚರಿಸುತ್ತಿದ್ದ ಮಂಟಪಗಳೆಂದು ಊಹಿಸಬಹುದು.

ಗರ್ಭಗೃಹದ ಮಧ್ಯದಲ್ಲಿ ಲಕ್ಷ್ಮಿನರಸಿಂಹನ ಶಿಲ್ಪವು ತುಂಬಾ ಆಕರ್ಷಕವಾಗಿದೆ. ಮುಖಮಂಟಪದ ಎಡಭಾಗದಲ್ಲಿರುವ ಆಂಜನೇಯ ಗುಡಿಯಲ್ಲಿ ಆಂಜನೇಯನ ಶಿಲ್ಪವಿದ್ದು, ವಿಗ್ರಹದ ಸುತ್ತಲೂ ಆಂಜನೇಯನ ಜೀವನದ ವಿವಿಧ ದೃಶ್ಯಾವಳಿಗಳನ್ನು ಕೆತ್ತಲಾಗಿರುವುದು ಈ ಶಿಲ್ಪದ ವಿಶೇಷವಾಗಿದೆ. ಇದೇ ರೀತಿ ತಾಳ್ಯದ ಆಂಜನೇಯ ವಿಗ್ರಹದ ಮೇಲೂ ವಿವಿಧ ದೃಶ್ಯಾವಳಿಗಳ ಕೆತ್ತನೆಯನ್ನು ಕಾಣಬಹುದಾಗಿದೆ. ಪ್ರವೇಶಮಂಟಪದ ನಂತರದ ಗರುಡ ಮಂಟಪದಲ್ಲಿ ಸುಂದರ ಗರುಡನ ಶಿಲ್ಪವಿದೆ. ಹೊರಭಾಗದಲ್ಲಿ ಉಯ್ಯಾಲೆಕಂಬದ ಎಡಕ್ಕೆ ಪಾರ್ಶ್ವನಾಥ ತೀರ್ಥಂಕರನ ಶಿಲ್ಪವಿದೆ.

ಈ ದೇವಾಲಯದ ಗರ್ಭಗುಡಿಯ ಬಾಗಿಲ ಎಡಗಡೆ ಇರುವ ಶಾಸನದಿಂದ ಕ್ರಿ.ಶ. ೧೪೬೪ರಲ್ಲಿ ಹೊರಕೆರೆಯ ತಿರುವೆಂಗಳನಾಥರಿಗೆ ದುಮ್ಮಿಯ ವೀರಪ್ಪನಾಯಕ ಇಲ್ಲಿನ ರಂಗಮಂಟಪವನ್ನು ಕಟ್ಟಿಸಿದ ಎಂದು ತಿಳಿದುಬರುತ್ತದೆ.[೪೫] ಆದರೆ ಇಡೀ ದೇವಾಲಯದ ವಾಸ್ತುಲಕ್ಷಣಗಳನ್ನು ಗಮನಿಸಿದರೆ ಚಿತ್ರದುರ್ಗ ಪಾಳೆಯಗಾರ ರಾಜಾವೀರಮದಕರಿನಾಯಕನ ಕಾಲದಲ್ಲಿ ದುರಸ್ತಿಗೊಂಡಿರಬಹುದೆಂದು[೪೬] ತಿಳಿಯಬಹುದಾಗಿದೆ.

೧೩. ಆಂಜನೇಯಸ್ವಾಮಿ ದೇವಾಲಯ

ಗ್ರಾಮ : ತಾಳ್ಯ (ಹೊಳಲ್ಕೆರೆ ತಾಲ್ಲೂಕು)

ಸ್ಥಾನನಿರ್ದೇಶನ : ಚಿತ್ರದುರ್ಗ-ಹೊಳಲ್ಕೆರೆ ಮಾರ್ಗದ ಶಿವಗಂಗದಿಂದ ಎಂಟು ಕಿ.ಮೀ. ಅಂತರದಲ್ಲಿದೆ.

ಮುಖದಿಕ್ಕು : ದಕ್ಷಿಣ

ಶಾಸನ ಮತ್ತು ಕಾಲ : ಚಿತ್ರದುರ್ಗ ಪಾಳೆಯಗಾರರು

ನಿರ್ಮಾಣ ಸಾಮಾಗ್ರಿ : ಕಣಶಿಲೆ, ಇಟ್ಟಿಗೆ ಗಾರೆ,

ವಾಸ್ತುಭಾಗಗಳು : ಗರ್ಭಗೃಹ, ಅಂತರಾಳ, ಸಭಾಮಂಟಪ, ಪ್ರಾಕಾರ, ದೀಪಸ್ತಂಭ

ಹೊಳಲ್ಕೆರೆ ತಾಲ್ಲೂಕಿನ ತಾಳ್ಯ ಗ್ರಾಮದಲ್ಲಿರುವ ಆಂಜನೇಯ ದೇವಾಲಯವು ಕೆಲವೊಂದು ವಾಸ್ತುಭಾಗಗಳಿಂದ ವಿಶಿಷ್ಟವಾಗಿದೆ. ಇದು ಊರಿನಲ್ಲಿ ತುಂಬಾ ಪ್ರಸಿದ್ಧವಾದ ದೇವಾಲಯವಾಗಿದೆ. ಹಾಗೆಯೇ ಪಾಳೆಯಗಾರರ ಕಲೆ ಮತ್ತು ವಾಸ್ತುಶಿಲ್ಪ ದೃಷ್ಟಿಯಿಂದ ತುಂಬಾ ಉತ್ತಮವಾದ ದೇವಾಲಯವಾಗಿದೆ.

ದೇವಾಲಯದ ಗರ್ಭಗೃಹವು ನಾಲ್ಕು ಮೂಲೆಗಂಬಗಳಿಂದ ಕೂಡಿದ್ದು ಅತ್ಯಂತ ಸರಳವಾಗಿದೆ. ಗರ್ಭಗೃಹದ ದ್ವಾರಬಂಧದ ಇಕ್ಕೆಲಗಳಲ್ಲಿ ವೈಷ್ಣವ ದ್ವಾರಪಾಲಕರ ಉಬ್ಬುಶಿಲ್ಪಗಳಿವೆ. ಲಲಾಟಬಿಂಬದಲ್ಲಿ ಗಜಲಕ್ಷ್ಮಿಯ ಶಿಲ್ಪವಿದೆ. ಆದರೆ ಈ ದ್ವಾರಬಂಧಕ್ಕೆ ಹಿತ್ತಾಳೆಯಿಂದ ಮಾಡಿಸಿದ ರಾಮಾಯಣದ ದೃಶ್ಯಗಳನ್ನೊಳಗೊಂಡಿರುವ ಚಿತ್ತಾರಗಳ ತಗಡನ್ನು ಅಳವಡಿಸಿರುವುದರಿಂದ ಮೂಲ ರಚನೆ ಕಾಣಿಸುವುದಿಲ್ಲ.

ಅಂತರಾಳವು ಸರಳವಾಗಿದ್ದು ಮುಂಬದಿಯಲ್ಲಿ ಎರಡು ಮೂಲೆಗಂಬಗಳನ್ನು ಹೊಂದಿದೆ. ಸಭಾಮಂಟಪವು ಒಂಭತ್ತು ಅಂಕಣಗಳಲ್ಲಿದ್ದು, ಮಧ್ಯದಲ್ಲಿ ನಾಲ್ಕು, ಪ್ರವೇಶದಲ್ಲಿ ಎರಡು ಮೂಲೆಗಂಬಗಳು, ಆರು ಗೋಡೆಗಂಬಗಳು, ಒಟ್ಟು ಹನ್ನೆರಡು ಕಂಬಗಳಿಂದ ಕೂಡಿದೆ. ಮಧ್ಯ ಮತ್ತು ಪ್ರವೇಶದ ಕಂಬಗಳು ಪೀಠ, ಕಾಂಡ, ಬೋದುಗೆಗಳಿಂದ ಕೂಡಿದ್ದು, ಕಾಂಡ ಭಾಗದಲ್ಲಿ ಕೆಳಗೆ, ಮಧ್ಯ ಮತ್ತು ಮೇಲೆ ಮೂರು ಅಸಮವಾದ ಚೌಕಭಾಗಗಳಿವೆ. ಆ ಚೌಕಭಾಗಗಳ ನಡುವೆ ಎಂಟು ಮತ್ತು ಹದಿನಾರು ಮುಖಗಳ ಲಂಬಪಟ್ಟಿಕೆಗಳಿವೆ. ಮೂರು ಚೌಕಭಾಗಗಳಲ್ಲೂ ರಾಮ, ನಿಂತನಂದಿ, ಹಂಸ, ವಿವಿಧ ಭಂಗಿಯ ಆಂಜನೇಯ, ಕೇಶವ, ನೃತ್ಯಗಾತಿ, ಮೃದಂಗವಾದಕ, ರಾಮಾನುಜಾಚಾರ್ಯ, ಸಿಂಹ, ಶಿವಲಿಂಗ, ದೇವಾಲಯದ ನಿರ್ಮಾತೃಗಳು, ಸೈನಿಕ, ಆನೆಸವಾರ, ಕಾಳಿಂಗಮರ್ದನಕೃಷ್ಣ, ವಿವಿಧ ಭಂಗಿಯ ಗಣೇಶ, ಮಗುವನ್ನು ಎತ್ತಿಕೊಂಡಿರುವ ತಾಯಿ, ಯತಿ, ನಂದಿ, ಮೀನಿನ ಮೇಲೆ ಕುಳಿತಿರುವ ಯತಿ, ನರಸಿಂಹ ಹಾಗು ವಿವಿಧ ಪುಷ್ಪಾಕೃತಿಗಳ ಉಬ್ಬುಶಿಲ್ಪಗಳಿವೆ. ಮೇಲ್ಭಾಗದಲ್ಲಿ ಪುಷ್ಪಬೋದುಗೆಗಳಿವೆ. ಮಧ್ಯದ ಛತ್ತಿನಲ್ಲಿರುವ ವೃತ್ತಾಕಾರದ ಭುವನೇಶ್ವರಿ ಅರೆಗುಮ್ಮಟಾಕಾರದಲ್ಲಿದೆ. ಈ ಭುವನೇಶ್ವರಿಯು ಐದು ಹಂತದಲ್ಲಿದ್ದು, ಮಧ್ಯದಲ್ಲಿ ಮೊಗಚಿಹಾಕಿದ ಅರಳು ಕಮಲಾಕೃತಿಯ ರಚನೆಯಿದೆ. ಅದರ ಮಧ್ಯದ ಮೊಗ್ಗು ತುಂಬಾ ದೊಡ್ಡದಾಗಿದೆ. ಅರಳು ಕಮಲದ ಸುತ್ತಲೂ ಗಿಳಿಗಳ ಸಾಲುಗಳನ್ನು ಕೆತ್ತಲಾಗಿದೆ. ಭುವನೇಶ್ವರಿಯ ನಾಲ್ಕು ಮೂಲೆಗಳಲ್ಲಿ ಜೋಡಿ ದೇಹದ ಸಿಂಹಗಳಿವೆ. ಛತ್ತಿನ ಕೆಳಗೆ ಕಂಬಗಳ ತೊಲೆಯ ಮೇಲೆ ಸುತ್ತಲೂ ಹಂಸಗಳ ಸಾಲುಗಳಿವೆ. ಈ ಹಂಸಗಳ ಸಾಲಿನ ನಡುವೆ ನಾಲ್ಕು ದಿಕ್ಕಿಗೆ ನಾಲ್ಕು ಶಿಲ್ಪಗಳಿದ್ದು, ಅವುಗಳಲ್ಲಿ ಯತಿಗಳ ಹಾಗು ಬೇಡರಕಣ್ಣಪ್ಪರ ಶಿಲ್ಪಗಳು ಸ್ಪಷ್ಟವಾಗಿವೆ. ಪಾಳೆಯಗಾರರ ದೇವಾಲಯಗಳಲ್ಲಿ ಈ ಛತ್ತು ಗುಮ್ಮಟಾಕಾರದಲ್ಲಿರುವುದು ವಿಶೇಷವಾಗಿದೆ. ಉಳಿದಂತೆ ಭಿತ್ತಿ ಸರಳವಾಗಿದೆ.

ನವರಂಗದ ಪ್ರವೇಶಕ್ಕೆ ನಾಲ್ಕು ಸೋಪಾನಗಳಿದ್ದು, ಇಕ್ಕೆಲಗಳಲ್ಲಿ ಸಿಂಹದ ಬಾಯಿಂದ ಹೊರಟಿರುವ ಸುರುಳಿಯಾಳಿಗಳ ಕೈಪಿಡಿಗಳಿವೆ. ದೇವಾಲಯದ ಭಿತ್ತಿಯನ್ನು ಮಟ್ಟಸಗೊಳಿಸಿದ

ಬೃಹತ್ ಕಲ್ಲುಗಳಿಂದ ಕಟ್ಟಲಾಗಿದ್ದು, ಭಿತ್ತಿಯಲ್ಲಿ ಅರ್ಧಗಂಬಗಳು ಮತ್ತು ಬೋದುಗೆಗಳು ಗೋಚರಿಸುತ್ತವೆ. ಗರ್ಭಗೃಹ, ಅಂತರಾಳಗಳು ಮಂಚಬಂಧಶೈಲಿಯ ಅಧಿಷ್ಠಾನವನ್ನು ಹೊಂದಿದ್ದು, ಅದರ ಮೇಲೆ ಮತ್ತೊಂದು ಉಪಅಧಿಷ್ಠಾನವನ್ನು ಹೊಂದಿವೆ. ಕೆಳಅಧಿಷ್ಠಾನವು ಉಪಾನ, ಗಳ, ಕಪೋತಗಳನ್ನು ಹೊಂದಿದೆ. ಇಲ್ಲಿ ಯಾವುದೇ ಶಿಲ್ಪಗಳಿರದೆ ಸರಳವಾಗಿದೆ. ಎರಡನೆಯ ಅಧಿಷ್ಠಾನವು ಉಪಾನ, ತ್ರಿಪಟ್ಟ ಕುಮುದ ಮತ್ತು ಕಪೋತಗಳನ್ನು ಹೊಂದಿದ್ದು, ಸ್ವಲ್ಪ ಆಕರ್ಷಕವಾಗಿದೆ. ಗರ್ಭಗೃಹದ ಮೇಲೆ ಇಟ್ಟಿಗೆ ಮತ್ತು ಗಾರೆಯಿಂದ ನಿರ್ಮಿಸಿದ ಏಕತಲದ ದ್ರಾವಿಡ ವಿಮಾನ ಮಾದರಿಯ ಶಿಖರವಿದೆ. ಶಿಖರದ ಕೆಳಹಂತದಲ್ಲಿ ದೇವಕೋಷ್ಟ ಮತ್ತು ಕಂಬಗಳು, ಮೇಲ್ಭಾಗದಲ್ಲಿ ನಾಲ್ಕು ಮೂಲೆಗಳಲ್ಲಿ ಸಿಂಹಶಿಲ್ಪಗಳಿವೆ. ಅದರ ಮೇಲಿನ ಸ್ತೂಪಿಯು ವೃತ್ತಾಕಾರದಲ್ಲಿದ್ದು, ಅದರ ನಾಲ್ಕು ಬದಿಗೆ ಕೀರ್ತಿಮುಖಗಳಿವೆ. ಸ್ತೂಪಿಯ ಮೇಲೆ ಕಳಸವಿದೆ. ಶಿಖರದ ಮುಂದೆ ಸುಖನಾಸವಿದ್ದು, ಇದು ಈ ದೇವಾಲಯದ ವಿಶೇಷವಾಗಿದೆ. ಸಾಮಾನ್ಯವಾಗಿ ಈ ಪಾಳೆಯಗಾರರ ಕಾಲದ ಹೆಚ್ಚಿನ ದೇವಾಲಯಗಳಲ್ಲಿ ಸುಖನಾಸ ಕಂಡುಬಂದಿಲ್ಲ. ಸಭಾಮಂಟಪವು ಕೇವಲ ಒಂದೇ ಒಂದು ಅಧಿಷ್ಠಾನ ಹೊಂದಿದ್ದು, ಮಂಚಬಂಧ ಶೈಲಿಯಲ್ಲಿದೆ. ಈ ಮಂಟಪದ ಮಾಡಿನ ಅಂಚಿನಲ್ಲಿ ಮಾತ್ರ ಇಳಿಜಾರಾದ ಮುಂಜೂರು ಹಾಗು ಮಾಡಿನಲ್ಲಿ ಸುತ್ತಲೂ ಹೊಸದಾಗಿ ನಿರ್ಮಿಸಿದ ದೇವಕೋಷ್ಟಗಳಿವೆ.

ದೇವಾಲಯದ ಸುತ್ತಲೂ ಪ್ರಾಕಾರಗೋಡೆಯಿದೆ. ಪ್ರವೇಶದಲ್ಲಿ ಎತ್ತರವಾದ ಮಹಾದ್ವಾರಬಾಗಿಲಿದ್ದು ಇತ್ತೀಚಿನ ನಿರ್ಮಾಣವಾಗಿದೆ. ಅದರ ಮೇಲೆ ಆಕರ್ಷಕವಾದ ರಾಮ–ಲಕ್ಷ್ಮಣರ ಬೃಹತ್ ಮೂರ್ತಿಗಳಿವೆ. ಮಹಾದ್ವಾರದ ಬಲಬದಿಗೆ ಚಿಕ್ಕಮಂಟಪವಿದ್ದು ಅದರಲ್ಲಿ ರಾಮಬಾಣಗಳು ಎಂದು ಹೇಳುವ ಉದ್ದವಾದ ಲೋಹದ ಹಾಗು ಮಾಸ್ತಿಕಲ್ಲುಗಳ ಶಿಲ್ಪಗಳಿವೆ. ಮಹಾದ್ವಾರದ ಮುಂದೆ ಅಧಿಷ್ಠಾನದ ಮೇಲೆ ಏಕಶಿಲೆಯ ಮಧ್ಯಮ ಪ್ರಮಾಣದ ದೀಪಸ್ತಂಭವಿದೆ. ಈ ಅಧಿಷ್ಠಾನದ ಮೇಲೆ ಉಪಅಧಿಷ್ಠಾನವಿದೆ. ಅಧಿಷ್ಠಾನವು ಉಪಾನ, ತ್ರಿಪಟ್ಟಕುಮುದ ಹಾಗು ಕಪೋತಗಳನ್ನು ಹೊಂದಿದೆ. ಉಪಅಧಿಷ್ಠಾನ ಊರ್ಧ್ವಮುಖ ಕಪೋತವನ್ನು ಹೊಂದಿದೆ. ದೀಪಸ್ತಂಭದ ಕೆಳಭಾಗದಲ್ಲಿ ಚೌಕಭಾಗಗಳಿದ್ದು, ನಾಲ್ಕು ಮೂಲೆಗಳಲ್ಲಿ ಎಲೆಯಾಕಾರದ ರಚನೆಯಿದೆ. ಮೇಲ್ಭಾಗದಲ್ಲಿ ಕಂಬದುದ್ದಕ್ಕೂ ದೀರ್ಘವಾದ ಹದಿನಾರು ಲಂಬಪಟ್ಟಿಕೆಗಳಿದ್ದು ಮೇಲೇರಿದಂತೆ ಸಪೂರವಾಗಿದೆ.

ಗರ್ಭಗೃಹದಲ್ಲಿ ಹತ್ತು ಅಡಿ ಎತ್ತರದ ಅಜಾನುಬಾಹುವಾಗಿ ನಿಂತಿರುವ ವೀರಾಂಜನೇಯನ ವಿಗ್ರಹವಿದ್ದು, ಅದರ ಸುತ್ತಲೂ ರಾಮಾಯಣದ ಸುಂದರಕಾಂಡದ ಹಾಗು ಆಂಜನೇಯನ

ಜೀವನದ ವಿವಿಧ ದೃಶ್ಯಾವಳಿಗಳ ಕೆತ್ತನೆಯನ್ನು ಕಾಣಬಹುದು. ಮಹಾದ್ವಾರದ ಮೇಲೆ ಆಕರ್ಷಕವಾದ ರಾಮ-ಲಕ್ಷ್ಮಣರ ಬೃಹತ್ ಮೂರ್ತಿಗಳಿವೆ.

೧೪. ರಂಗನಾಥ ದೇವಾಲಯ

ಗ್ರಾಮ	:	ಕೊಣಚಗಲ್ (ಜಗಲೂರು ತಾಲ್ಲೂಕು)
ಸ್ಥಾನನಿರ್ದೇಶನ	:	ಬಿಸ್ತುವಳ್ಳಿಯ ಬಳಿಯ ಅಡ್ಡರಸ್ತೆಯಲ್ಲಿ ಮೆದುಗಿನ ಕೆರೆ ಮಾರ್ಗದಲ್ಲಿ ಎರಡು ಕಿ.ಮೀ. ಅಂತರದಲ್ಲಿದೆ.
ಮುಖದಿಕ್ಕು	:	ಪೂರ್ವ
ಶಾಸನ ಮತ್ತು ಕಾಲ	:	ಹಿರೇಮದಕರಿನಾಯಕ
ನಿರ್ಮಾಣ ಸಾಮಾಗ್ರಿ	:	ಕಣಶಿಲೆ
ವಾಸ್ತು ಭಾಗಗಳು	:	ಗರ್ಭಗೃಹ, ಸಭಾಮಂಟಪ, ಪುಷ್ಕರಣಿ

ಜಗಲೂರು ತಾಲ್ಲೂಕಿನ ಕೊಣಚಗಲ್ ಗ್ರಾಮದಲ್ಲಿ ಬೆಟ್ಟದ ಕೆಳಗೆ ಪೂರ್ವಭಿಮುಖವಾಗಿ ಇರುವ ಶ್ರೀರಂಗನಾಥಸ್ವಾಮಿ ದೇವಾಲಯವು ಚಿತ್ರದುರ್ಗ ಪಾಳೆಯಗಾರರ ವಾಸ್ತುಕಲೆಯನ್ನು ಪ್ರತಿಬಿಂಬಿಸುವ ಪ್ರಮುಖ ದೇವಾಲಯವಾಗಿದೆ. ಇವರ ಕಾಲದಲ್ಲಿ ನಿರ್ಮಾಣವಾದ ಸಣ್ಣ ಪ್ರಮಾಣದ ದೇವಾಲಯಗಳಲ್ಲಿ ಇದೂ ಒಂದಾಗಿದೆ.

ಗರ್ಭಗೃಹ ಮತ್ತು ಸಭಾಮಂಟಪಗಳನ್ನು ಹೊಂದಿರುವ ಈ ದೇವಾಲಯವು, ಗರ್ಭಗೃಹದ ಒಳಗಡೆ ಸದ್ಯ ಯಾವುದೇ ದೇವತಾಮೂರ್ತಿಯಿಲ್ಲ. ಗರ್ಭಗೃಹದ ಛತ್ತು ಆಳವಾಗಿದ್ದರೂ, ಅಲ್ಲಿ ಭುವನೇಶ್ವರಿಯ ಕೆತ್ತನೆಯಿಲ್ಲ. ಗರ್ಭಗೃಹದ ದಾರಬಂಧದ ಇಕ್ಕೆಲಗಳಲ್ಲಿ ಮೂರು ಅಡಿ ಎತ್ತರದ ವೈಷ್ಣವ ದ್ವಾರಪಾಲಕರ ಶಿಲ್ಪಗಳಿವೆ. ಈ ಶಿಲ್ಪಗಳ ಹಿಂಬದಿಯಲ್ಲಿ ಪ್ರಭಾವಳಿ, ತಲೆಯ ಮೇಲೆ ಕೀರ್ತಿ ಮುಖಗಳನ್ನು ತೋರಿಸಿರುವುದು ವಿಶೇಷವಾಗಿದೆ. ಲಲಾಟದಲ್ಲಿ ಗಜಲಕ್ಷ್ಮಿಯ ಬಿಂಬವಿದೆ.

ಸಭಾಮಂಟಪ ಎರಡು ಸಾಲುಗಳಲ್ಲಿ ಆರು ಅಂಕಣಗಳಿಂದ ಕೂಡಿದೆ. ಇಲ್ಲಿನ ಮಧ್ಯ ಮತ್ತು ಮುಂದಿನ ಕಂಬಗಳು ಪೀಠ ಸಹಿತ ಏಕಶಿಲಾ ಸ್ತಂಭಗಳಾಗಿವೆ. ಕಾಂಡಭಾಗದಲ್ಲಿ ಕೆಳಗೆ, ಮಧ್ಯ ಮತ್ತು ಮೇಲೆ ಮೂರು ಅಸಮವಾದ ಚೌಕಭಾಗಗಳಿದ್ದು, ಮಧ್ಯದಲ್ಲಿ ಎಂಟು ಮತ್ತು ಹದಿನಾರು ಮುಖಗಳ ಲಂಬಪಟ್ಟಿಕೆಗಳಿವೆ. ಕಂಬಗಳ ಚೌಕಭಾಗಗಳ ನಾಲ್ಕು ಮೂಲೆಗಳಲ್ಲಿ ಅರ್ಧಚಂದ್ರ, ಹಂಸ, ಫಲತಿನ್ನುತ್ತಿರುವ ಮಂಗ, ವೀರಾಂಜನೇಯ, ಕಾಳಿಂಗಮರ್ದನಕೃಷ್ಣ, ನಾಗಬಂಧ, ಗರುಡ, ನಾಗಮಂಡಲ, ಎತ್ತು, ಕೂರ್ಮಾವತಾರಕೃಷ್ಣ, ಗಜಶಾರ್ದೂಲ, ಶಂಖ, ಚಕ್ರ, ತ್ರಿನಾಮ, ವೇಣುಗೋಪಾಲ, ತ್ರಿಭಂಗಿಯ ಹಸು ಹಾಗು

ವಿವಿಧ ರೀತಿಯ ಪುಷ್ಪಾಕೃತಿಗಳ ಉಬ್ಬುಶಿಲ್ಪಗಳಿವೆ. ಬೋದುಗೆಗಳಲ್ಲಿ ನಾಲ್ಕು ಬದಿಗೆ ಸುರುಳಿಯಾಕಾರದ ಕೆತ್ತನೆಗಳಿವೆ. ಭಿತ್ತಿಗಳನ್ನು ಮಟ್ಟಸಗೊಳಿಸಿದ ಬೃಹತ್ ಕಲ್ಲುಗಳಿಂದ ನಿರ್ಮಿಸಲಾಗಿದೆ. ಭಿತ್ತಿಯಲ್ಲಿ ಕಂಬಗಳು, ಬೋದುಗೆಗಳು ಹಾಗು ಭಿತ್ತಿಯುದ್ದಕ್ಕೂ ಕೈಪಿಡಿಗಳು ಗೋಚರಿಸುತ್ತವೆ.

ಹೊರಭಾಗದ ಅಧಿಷ್ಠಾನವು ಮಂಚಬಂಧ ಶೈಲಿಯಲ್ಲಿದ್ದು, ಉಪಾನ, ಗಳ, ಕಪೋತ ಭಾಗಗಳನ್ನು ಹೊಂದಿದೆ. ಕಪೋತವು ಅಲಂಕರಣೆಯಿಂದ ಕೂಡಿದ್ದು ಆಕರ್ಷಕವಾಗಿದೆ. ಹೊರಭಿತ್ತಿಯಲ್ಲೂ ಕಂಬಗಳು, ಬೋದುಗೆಗಳು ಗೋಚರಿಸುತ್ತವೆ. ಸಭಾಮಂಟಪದ ಉತ್ತರ ಮತ್ತು ದಕ್ಷಿಣ ಭಿತ್ತಿಗಳಲ್ಲಿ ಚಿತ್ರದುರ್ಗ ಪಾಳೆಯಗಾರರ ದೇವಾಲಯಗಳ ಮೇಲಿನ ಸಾಮಾನ್ಯ ಶಿಲ್ಪಗಳಾದ ನಾಗಸರ್ಪ, ಪರಸ್ಪರ ಕಾದಾಡುವ ಜೋಡಿ ಆನೆಗಳು, ಪರಸ್ಪರ ಅಭಿಮುಖವಾದ ಜೋಡಿಮೀನುಗಳ ಉಬ್ಬುಶಿಲ್ಪಗಳಿವೆ. ಗರ್ಭಗೃಹದ ದಕ್ಷಿಣ ಭಿತ್ತಿಯಲ್ಲಿ ಪರಸ್ಪರ ಅಭಿಮುಖ ವಾಗಿರುವ ಜೋಡಿಮೀನುಗಳ ಶಿಲ್ಪಗಳಿವೆ. ದೇವಾಲಯದ ಮಾಡಿನುದ್ದಕ್ಕೂ ಇಳಿಜಾರಾದ ಮುಂಜೂರು ಇದ್ದು, ಗರ್ಭಗೃಹದ ಮೇಲೆ ಶಿಖರವಿಲ್ಲ. ದೇವಾಲಯದ ಮುಂದೆ ಸ್ವಲ್ಪದೂರದಲ್ಲಿ ವಿಶಾಲವಾದ ಪುಷ್ಕರಣಿಯಿದೆ. ಇದನ್ನು ಹಿರೇಮದಕರಿನಾಯಕನ ದಳವಾಯಿ ಯಾದ ದಳವಾಯಿಮುದ್ದಣ್ಣ ನಿರ್ಮಿಸಿದನು.[೪೭] ಹಾಗಾಗಿ ಇದು ದಳವಾಯಿ ಹೊಂಡವೆಂದೇ ಹೆಸರಾಗಿದೆ. ಆದ್ದರಿಂದ ಈ ದೇವಾಲಯವು ಸಹ ಇವನ ಕಾಲದಲ್ಲೇ ನಿರ್ಮಿತವಾಗಿರ ಬಹುದೆಂದು ತಿಳಿಯಬಹುದಾಗಿದೆ.

೧೫. ರಂಗನಾಥಸ್ವಾಮಿ ದೇವಾಲಯ

ಗ್ರಾಮ	:	ಹಂಪನೂರು (ಚಿತ್ರದುರ್ಗ ತಾಲ್ಲೂಕು)
ಸ್ಥಾನ ನಿರ್ದೇಶನ	:	ರಾಷ್ಟ್ರೀಯ ಹೆದ್ದಾರಿ ನಾಲ್ಕರಲ್ಲಿ ಭರಮಸಾಗರ–ಎಮ್ಮೆಹಟ್ಟಿ ಬಳಿ
ಮುಖದಿಕ್ಕು	:	ಪೂರ್ವ
ಶಾಸನ ಮತ್ತು ಕಾಲ	:	ಚಿತ್ರದುರ್ಗ ಪಾಳೆಯಗಾರರು
ನಿರ್ಮಾಣ ಸಾಮಾಗ್ರಿ	:	ಕಣಶಿಲೆ, ಇಟ್ಟಿಗೆ, ಗಾರೆ
ವಾಸ್ತು ಭಾಗಗಳು	:	ಗರ್ಭಗೃಹ, ಅಂತರಾಳ, ಸಭಾಮಂಟಪ, ಮುಖಮಂಟಪ, ದೀಪಸ್ತಂಭ

ಎತ್ತರವಾದ ದಿನ್ನೆಯ ಮೇಲೆ ಊರಿನ ಹೊರಗಡೆ ನಿರ್ಮಾಣವಾಗಿರುವ ಶ್ರೀರಂಗನಾಥ ದೇವಾಲಯ ಊರಿನ ಪ್ರಮುಖ ದೇವಾಲಯವಾಗಿದೆ.

ದೇವಾಲಯದ ಗರ್ಭಗೃಹವು ಒಂದೇ ಅಂಕಣದಲ್ಲಿದ್ದು ಸರಳವಾಗಿದೆ. ಭಿತ್ತಿ ಹಾಗು ಛತ್ತುಗಳು ಸಹ ಯಾವುದೇ ಅಲಂಕರಣೆಯನ್ನು ಹೊಂದಿಲ್ಲ. ಗರ್ಭಗೃಹದ ಬಾಗಿಲ ಇಕ್ಕೆಲ

ಗಳಲ್ಲಿ ವೈಷ್ಣವ ದ್ವಾರಪಾಲಕರ ಉಬ್ಬುಶಿಲ್ಪಗಳಿದ್ದು, ಲಲಾಟದಲ್ಲಿ ಪುಷ್ಪಾಕೃತಿಯ ರಚನೆಯಿದೆ. ಅಂತರಾಳವು ಮೂರು ಅಂಕಣಗಳಲ್ಲಿದ್ದು ಸಭಾಮಂಟಪದಷ್ಟೇ ಅಗಲವಾಗಿರುವುದು ವಿಶೇಷವೆನಿಸುತ್ತದೆ. ಇದರ ಬಾಗಿಲ ಇಕ್ಕೆಲಗಳ ಭಿತ್ತಿಯಲ್ಲಿ ಪ್ರತಿಭಾಗದಲ್ಲಿ ಐದರಂತೆ ಒಟ್ಟು ಹತ್ತು ದೀಪಗಳನ್ನಿಡಲು ಪುಟ್ಟದಾದ ಮಾಡುಗಳಿವೆ. ಅಂತರಾಳದ ಬಾಗಿಲು ಕಮಾನಿನ ಆಕಾರದಲ್ಲಿರುವುದು ಮತ್ತು ಬಾಗಿಲ ಇಕ್ಕೆಲಗಳಲ್ಲಿ ಪೂರ್ಣಕುಂಭಗಳ ಶಿಲ್ಪಗಳಿರುವುದು ವಿಶಿಷ್ಟಪೂರ್ಣವಾಗಿದೆ.

ಸಭಾಮಂಟಪವು ಪ್ರತಿಸಾಲಿನಲ್ಲಿ ಮೂರರಂತೆ ಎರಡು ಸಾಲಿನಲ್ಲಿ ಒಟ್ಟು ಆರು ಅಂಕಣಗಳನ್ನು ಹೊಂದಿದ್ದು, ಮಧ್ಯದಲ್ಲಿ ಎರಡು ಮತ್ತು ಮುಂಭಾಗದಲ್ಲಿ ಎರಡು, ಒಟ್ಟು ನಾಲ್ಕು ಕಂಬಗಳಿವೆ. ಕಂಬಗಳು ಪೀಠ, ಕಾಂಡಗಳನ್ನು ಹೊಂದಿದ್ದು, ಕಾಂಡದ ಕೆಳಗೆ, ಮಧ್ಯ ಮತ್ತು ಮೇಲೆ ಮೂರು ಅಸಮ ಚೌಕಭಾಗಗಳಿದ್ದು, ಅವುಗಳ ಮಧ್ಯದಲ್ಲಿ ಎಂಟು ಮುಖಗಳ ಅಡ್ಡಪಟ್ಟಿಕೆಗಳು, ಹದಿನಾರು ಮುಖಗಳ ಲಂಬಪಟ್ಟಿಕೆಗಳಿವೆ. ಬೋದುಗೆಯ ನಾಲ್ಕು ಮಗ್ಗುಲಲ್ಲಿ ಸುರುಳಿಗಳ ಅಲಂಕರಣೆಗಳಿವೆ. ಸಭಾಮಂಟಪದ ಭಿತ್ತಿಯಲ್ಲಿ ಸುತ್ತಲೂ ಕೈಪಿಡಿಗಳಿದ್ದು, ಭಿತ್ತಿಯಿಂದ ಹೊರಗೆ ಬಂದಿವೆ. ಸಭಾಮಂಟಪವು ಒಂಭತ್ತು ಅಂಕಣಗಳಲ್ಲಿದ್ದಾಗ ಮಾತ್ರ ಮಧ್ಯದ ಅಂಕಣದ ಛತ್ತಿನಲ್ಲಿ ಭುವನೇಶ್ವರಿಯನ್ನು ರೂಪಿಸಬಹುದು. ಆದರೆ ಇಲ್ಲಿ ಕೇವಲ ಆರು ಅಂಕಣಗಳಿರುವುದರಿಂದ ಮುಂದಿನ ಸಾಲಿನ ಮಧ್ಯದ ಅಂಕಣದ ಛತ್ತಿನಲ್ಲಿ ಅರಳು ಕಮಲಾಕೃತಿಯ ಭುವನೇಶ್ವರಿಯಿದ್ದು, ಉಳಿದ ಐದು ಅಂಕಣಗಳ ಛತ್ತಿನಲ್ಲಿ ವಿವಿಧ ರೀತಿಯ ಪುಷ್ಪಾಕೃತಿಗಳಿವೆ.

ಮುಖಮಂಟಪವು ಸಭಾಮಂಟಪಕ್ಕಿಂತ ಎರಡೂ ಬದಿಗಳಲ್ಲಿ ಒಂದೊಂದು ಹೆಚ್ಚುವರಿ ಅಂಕಣಗಳನ್ನು ಹೊಂದಿದ್ದು, ಒಟ್ಟು ಸಾಲಾಗಿ ಐದು ಅಂಕಣಗಳಲ್ಲಿದೆ. ಜೊತೆಗೆ ಸಭಾಮಂಟಪ ಮತ್ತು ಗರ್ಭಗೃಹದ ನೆಲಮಟ್ಟಕ್ಕಿಂತ ಸುಮಾರು ಒಂದೂವರೆ ಅಡಿ ಕೆಳಮಟ್ಟದಲ್ಲಿದೆ. ಈ ಎರಡು ಅಂಶಗಳು ದೇವಾಲಯದ ವಾಸ್ತುವೈಶಿಷ್ಟ್ಯವನ್ನು ಬಿಂಬಿಸುತ್ತವೆ. ಮುಖಮಂಟಪವು ಮುಂಭಾಗದಲ್ಲಿ ಮಾತ್ರ ತೆರೆದಿದ್ದು, ಎರಡೂ ಬದಿಗೆ ಭಿತ್ತಿಯನ್ನು ಹೊಂದಿದೆ. ಇಲ್ಲಿಯ ಛತ್ತು ತುಂಬಾ ಸರಳವಾಗಿದೆ. ಸಭಾಮಂಟಪದ ಮುಂದಿನ ಕಂಬಗಳು ಕೆಳಗೆ ಮತ್ತು ಮೇಲೆ ಅಸಮವಾದ ಚೌಕಭಾಗಗಳನ್ನು ಹೊಂದಿದ್ದು ಏಕಶಿಲಾ ಸ್ತಂಭಗಳಾಗಿವೆ. ಎರಡು ಚೌಕಭಾಗಗಳ ಮಧ್ಯ ದೀರ್ಘವಾದ ನಾಲ್ಕು ಚೌಕಪಟ್ಟಿಗಳು ಹಾಗು ನಾಲ್ಕು ಮೂಲೆಪಟ್ಟಿಗಳಿದ್ದು, ಕಂಬಗಳು ಅಷ್ಟಕೋನಾಕಾರದಲ್ಲಿ ರಚಿತವಾಗಿವೆ. ಕಂಬಗಳ ಮೇಲಿನ ಬೋದುಗೆಗಳು ಸಾಮಾನ್ಯ ರೀತಿಯಲ್ಲಿವೆ.

ಅಧಿಷ್ಠಾನವು ಮಂಚಬಂಧ ಶೈಲಿಯಲ್ಲಿದ್ದು, ಉಪಾನ, ಗಳ, ಕಪೋತ ಭಾಗಗಳನ್ನು ಹೊಂದಿದೆ. ಭಿತ್ತಿಯನ್ನು ಮಟ್ಟಸಗೊಳಿಸಿದ ಬೃಹತ್ ಕಲ್ಲುಗಳಿಂದ ನಿರ್ಮಿಸಲಾಗಿದೆ. ಭಿತ್ತಿಯಲ್ಲಿ ಕೈಪಿಡಿ, ಕಂಬಗಳು ಹಾಗು ಬೋದುಗೆಗಳು ಗೋಚರಿಸುತ್ತವೆ. ಗರ್ಭಗೃಹ ಹಾಗು ಸಭಾಮಂಟಪದ ದಕ್ಷಿಣ ಗೋಡೆಗಳಲ್ಲಿ ಬೃಹತ್ ಸರ್ಪಗಳ ಉಬ್ಬುಶಿಲ್ಪಗಳಿವೆ. ದೇವಾಲಯದ ಮಾಡಿನಲ್ಲಿ ಅಲ್ಲಲ್ಲಿ ಇಟ್ಟಿಗೆ ಮತ್ತು ಗಾರೆಯ ಕಂಗೂರಾಕೃತಿಗಳನ್ನು, ಮೂಲೆಗಳಲ್ಲಿ ಸಿಂಹಶಿಲ್ಪಗಳನ್ನು ರಚಿಸಲಾಗಿದೆ. ಮುಖಮಂಟಪದ ಮುಂಭಾಗದಲ್ಲಿ ಮಾತ್ರ ಇಳಿಜಾರಾದ ಮುಂಜೂರು ಇದೆ. ಗರ್ಭಗೃಹದ ಮೇಲೆ ಇತ್ತೀಚಿನ ಶಿಖರವಿದೆ. ದೇವಾಲಯದ ಎದುರಿಗೆ ದೀಪಸ್ತಂಭವಿದ್ದು, ಮುಖ್ಯದೇವರ ಬಹುಶಃ ಪಾಳೆಯಗಾರರ ದಂಪತಿಗಳ ಉಬ್ಬುಶಿಲ್ಪಗಳಿವೆ. ದೇವಾಲಯದ ಸುತ್ತಲೂ ಆವರಣವಿದ್ದು ಕಲ್ಲಿನಿಂದ ಹೊದಿಸಲಾಗಿದೆ. ಗರ್ಭಗೃಹದಲ್ಲಿ ರಂಗನಾಥನ ಶಿಲ್ಪವಿದೆ.

೧೬. ಮಾರಿಕಾಂಭ ದೇವಾಲಯ

ಗ್ರಾಮ	:	ಮಾರಿಕಣಿವೆ (ಹಿರಿಯೂರು ತಾಲ್ಲೂಕು)
ಸ್ಥಾನನಿರ್ದೇಶನ	:	ವಾಣಿವಿಲಾಸ ಸಾಗರದ ಹಿಂಭಾಗ
ಮುಖದಿಕ್ಕು	:	ಪೂರ್ವ
ಶಾಸನ ಮತ್ತು ಕಾಲ	:	ಚಿತ್ರದುರ್ಗ ಪಾಳೆಯಗಾರರು
ನಿರ್ಮಾಣ ಸಾಮಾಗ್ರಿ	:	ಕಣಶಿಲೆ, ಇಟ್ಟಿಗೆ, ಗಾರೆ
ವಾಸ್ತುಭಾಗಗಳು	:	ಗರ್ಭಗೃಹ, ಅಂತರಾಳ, ಸಭಾಮಂಟಪ, ಮುಖಮಂಟಪ.

ಹಿರಿಯೂರು ತಾಲ್ಲೂಕಿನ ಮಾರಿಕಣಿವೆ ಗ್ರಾಮದಲ್ಲಿರುವ ಮಾರಿಕಾಂಭ ದೇವಾಲಯವು ಚಿತ್ರದುರ್ಗ ಪಾಳೆಯಗಾರರ ಕಾಲದ ಶಾಕ್ತ ದೇವಾಲಯಗಳಲ್ಲಿ ಪ್ರಮುಖವಾಗಿದೆ.

ದೇವಾಲಯದ ಗರ್ಭಗೃಹವು ಸರಳವಾಗಿದ್ದು, ಇದರ ದ್ವಾರಬಾಗಿಲ ಇಕ್ಕೆಲಗಳಲ್ಲಿ ಶೈವ ಸ್ತ್ರೀದ್ವಾರಪಾಲಕರ ಶಿಲ್ಪಗಳಿದ್ದು, ತುಂಬಾ ಸ್ಥಳೀಯ ಅಥವಾ ಜಾನಪದೀಯ ಶೈಲಿಯಲ್ಲಿವೆ. ಪ್ರಮಾಣಬದ್ಧತೆಯಲ್ಲಾಗಲಿ, ಆಕರ್ಷಕವಾಗಿಯಾಗಲಿ ರಚನೆಯಾಗಿಲ್ಲ. ಅಂತರಾಳವು ಸಭಾಮಂಟಪದಷ್ಟೇ ಅಗಲವಾಗಿದ್ದು, ಐದು ಅಂಕಣಗಳಿಂದ ಕೂಡಿದೆ. ಇದರ ದ್ವಾರಬಂಧವನ್ನು ಇಟ್ಟಿಗೆಯಿಂದ ಕಟ್ಟಿರುವುದರಿಂದ ವಿವರಗಳು ಲಭ್ಯವಾಗುವುದಿಲ್ಲ.

ಸಭಾಮಂಟಪವು ವಿಶಾಲವಾಗಿದ್ದು, ಪ್ರತಿಸಾಲಿನಲ್ಲಿ ಐದರಂತೆ ಮೂರು ಸಾಲುಗಳಲ್ಲಿ, ಒಟ್ಟು ಹದಿನೈದು ಅಂಕಣಗಳನ್ನು ಹೊಂದಿದೆ. ಇಲ್ಲಿ ಒಟ್ಟು ಹನ್ನೆರಡು ಕಂಬಗಳಿದ್ದು, ಮೊದಲ ಸಾಲನ್ನು ಹೊರತುಪಡಿಸಿ, ಉಳಿದೆರಡು ಸಾಲುಗಳ ಕಂಬಗಳ ಕೆತ್ತನೆ

ಅಪೂರ್ಣವಾಗಿದೆ. ಈ ಕಂಬಗಳು ಕೆಳಗೆ, ಮಧ್ಯ ಮತ್ತು ಮೇಲೆ ಮೂರು ಅಸಮವಾದ ಚೌಕಭಾಗಗಳನ್ನು ಹೊಂದಿದ್ದು, ಅವುಗಳ ಮಧ್ಯದಲ್ಲಿ ಎಂಟು ಮುಖಗಳ ಅಟ್ಟಪಟ್ಟಿಕೆಗಳಿವೆ. ಕೆಳ ಚೌಕಭಾಗದ ನಾಲ್ಕು ಮೂಲೆಗಳನ್ನು ಎಲೆಯಾಕಾರದಲ್ಲಿ ತೋರಿಸಲಾಗಿದೆ. ಮುಂದಿನ ಸಾಲಿನ ಕಂಬಗಳ ಕೆಳಗೆ ಮತ್ತು ಮಧ್ಯದ ಭಾಗಗಳಲ್ಲಿ ಗರುಡ, ತಂಬೂರಿ ವಾದಕ, ಪಟ್ಟದನಂದಿ, ಜಿಂಕೆ, ಒಂಟೆ, ಕುದುರೆ, ಆಂಜನೇಯ, ಹಂಸ, ಆಮೆ, (ಹಂಸದ ಸುತ್ತಲೂ ಏಡಿ, ಕಪ್ಪೆ, ಮೀನು, ಆಮೆಗಳಿರುವುದು ವಿಶೇಷ), ಪೂರ್ಣಕುಂಭ, ಕಳಸ, ಜೋಡಿಗಿಳಿ, ವೃಕ್ಷ ಮುಂತಾದ ಉಬ್ಬುಶಿಲ್ಪಗಳಿವೆ. ಇಲ್ಲಿಯ ಕಂಬಗಳ ಬೋದುಗೆಗಳು ಎರಡು ರೀತಿಯಲ್ಲಿದ್ದು, ನಾಲ್ಕು ಬದಿಗೆ ಸುರುಳಿಯಾಕಾರದ ಕೆತ್ತನೆಗಳಿರುವುದು ಒಂದು ರೀತಿಯಾದರೆ, ನಾಲ್ಕು ಸುರುಳಿಗಳ ಕೆತ್ತನೆ ಬೋದುಗೆಗಳು ಇನ್ನೊಂದು ರೀತಿಯದವುಗಳಾಗಿವೆ. ಈ ಮಂಟಪದ ಛತ್ತು ಆಳವಾಗಿದ್ದು, ಅರಳುಕಮಲದ ಪುಷ್ಪಾಕೃತಿಯಿದೆ.

ಮುಖಮಂಟಪವು ಸಭಾಮಂಟಪದಷ್ಟೇ ಅಗಲವಾಗಿದ್ದು, ಸಭಾಮಂಟಪಕ್ಕಿಂತ ಕೆಳಹಂತದಲ್ಲಿದೆ. ಇಲ್ಲಿ ಸಭಾಮಂಟಪದ ಪ್ರವೇಶಕ್ಕೆ ಮೂರು ಮೆಟ್ಟಿಲುಗಳಿದ್ದು, ಇಕ್ಕೆಲಗಳಲ್ಲಿ ಆನೆಸೊಂಡಿಲ ಕೈಪಿಡಿಗಳಿವೆ. ಸಭಾಮಂಟಪ ಮುಖಮಂಟಪಕ್ಕಿಂತ ಎತ್ತರದಲ್ಲಿರುವುದರಿಂದ ಸಭಾಮಂಟಪದ ಅಧಿಷ್ಠಾನ ಇಲ್ಲಿ ಗೋಚರಿಸುತ್ತದೆ. ಈ ಮಂಟಪವು ತೆರೆದಿದ್ದು ಮುಂಭಾಗ ದಲ್ಲಿ ಆರು ಕಂಬಗಳಿವೆ. ಇವು ಉಳಿದ ಕಂಬಗಳ ಮಾದರಿಯಲ್ಲಿದ್ದರೂ ಹೆಚ್ಚು ಎತ್ತರವಾಗಿವೆ. ಇವುಗಳ ಮಧ್ಯದ ಚೌಕಭಾಗದಲ್ಲಿ ಮಾತ್ರ ಆನೆ, ನಾಗಬಂಧ, ಹಂಸ, ಹುಲಿ, ಕುದುರೆ ಹಾಗು ವಿವಿಧ ರೀತಿಯ ಪುಷ್ಪಾಕೃತಿಗಳ ಉಬ್ಬುಶಿಲ್ಪಗಳಿವೆ. ಮುಖಮಂಟಪದ ಮೂರನೆಯ ತೊಲೆಯ ಮೇಲೆ ಸರ್ಪ, ಪರಸ್ಪರ ಎರಡೂ ಬದಿಗಳಿಂದ ಮೀನುಗಳನ್ನು ನುಂಗುತ್ತಿರುವ ಜೋಡಿ ಸರ್ಪಗಳ ಕೆತ್ತನೆ ಇದೆ.

ದೇವಾಲಯದ ಸುತ್ತಲಿನ ಅಧಿಷ್ಠಾನ ಗೋಚರಿಸುತ್ತಿಲ್ಲವಾದರೂ, ಸಭಾಮಂಟಪದಲ್ಲಿ ಗೋಚರಿಸುವ ಅಧಿಷ್ಠಾನದಿಂದ ಇದು ಮಂಚಬಂಧ ಶೈಲಿಯಲ್ಲಿದ್ದು ಉಪಾನ, ಗಳ, ಕಪೋತ ಭಾಗಗಳನ್ನು ಹೊಂದಿದೆ ಎಂದು ಹೇಳಬಹುದು. ಭಿತ್ತಿಯನ್ನು ಮಟ್ಟಸಗೊಳಿಸಿದ ಕಲ್ಲುಗಳಿಂದ ಕಟ್ಟಲ್ಪಟ್ಟಿದ್ದು ಸರಳವಾಗಿದೆ. ಇಲ್ಲಿ ಕಂಬಗಳು ಹಾಗು ಬೋದುಗೆಗಳು ಗೋಚರಿಸುತ್ತವೆ. ಈ ಬೋದುಗೆಗಳನ್ನು ಪೂರ್ಣರೂಪದಲ್ಲಿ ಕೆತ್ತಲಾಗಿರುವುದು ಇಲ್ಲಿನ ವಿಶೇಷ. ಭಿತ್ತಿಯ ಮೇಲೆ ನಾಗಸರ್ಪ, ಜೋಡಿಮೀನು, ಮಿಥುನ ಶಿಲ್ಪಗಳಿವೆ. ದೇವಾಲಯದ ಭಿತ್ತಿಯ ಮಾಡಿನಲ್ಲಿ ಮುಖಮಂಟಪದ ಮೇಲೆ ಶಾಲ, ಹಾರ, ಕೂಟಗಳಿವೆ. ಹಾಗೆಯೇ ಗರ್ಭಗೃಹದ ಮೇಲೆ ಇಟ್ಟಿಗೆ, ಗಾರೆಯಿಂದ ನಿರ್ಮಿಸಿದ ಶಿಖರವಿದ್ದು, ಶಾಲ, ಕೂಟ ಮತ್ತು ಹಾರಗಳನ್ನು ಹೊಂದಿದೆ. ಈ ಶಿಖರವು ಹೆಚ್ಚಾಗಿ ಸ್ಥಳೀಯ ಶೈಲಿಯನ್ನು

ಬಿಂಬಿಸುತ್ತದೆ. ಸಭಾಮಂಟಪದ ಮಾಡಿನಲ್ಲಿ ಕಂಗೂರಾಕೃತಿಗಳಿವೆ. ದೇವಾಲಯದ ಮಾಡಿನ ಸುತ್ತಲೂ ಇಳಿಜಾರಾದ ಮುಂಜೂರು ಇದೆ.

ನಾಯಕರ ಕಾಲದ ದೇವಾಲಯಗಳು ಕೆಲವು ವಿಶಿಷ್ಟ ಲಕ್ಷಣಗಳನ್ನು ಹೊಂದಿದ್ದರೆ, ಪ್ರಸುತ್ತ ಈ ದೇವಾಲಯವು ಕೆಲವು ವಿಭಿನ್ನ ವಾಸ್ತು ವಿಷಯಗಳನ್ನು ಹೊಂದಿದ್ದು, ಅವು ತೀರಾ ಪ್ರಾದೇಶಿಕ ಆಂಶವನ್ನು ವ್ಯಕ್ತಪಡಿಸುತ್ತವೆ. ಉದಾಹರಣೆಗೆ ಗರ್ಭಗೃಹದ ದ್ವಾರಬಾಗಿಲ ಇಕ್ಕೆಲಗಳಲ್ಲಿ ಸ್ತ್ರೀ ದ್ವಾರಪಾಲಕರನ್ನು ತೋರಿಸಿರುವುದು ಮತ್ತು ಅವು ಅಸಹಜವಾಗಿರುವುದು, ದೇವಾಲಯಗಳ ಕಂಬಗಳ ಮೇಲೆನ ಬೋದುಗೆಗಳನ್ನು ನಾಲ್ಕು ಸುರುಳಿಗಳಲ್ಲಿ ತೋರಿಸಿರುವುದು, ಕಂಬಗಳ ಮೇಲೆ ವೈವಿಧ್ಯಮಯವಾದ ಪ್ರಾಣಿ, ಪಕ್ಷಿ, ಸಸ್ಯ, ಗಿಡ, ಹೂದಾನಿ ಹಾಗೂ ವಿವಿಧ ರೀತಿಯ ಪುಷ್ಪಗಳನ್ನು ತೋರಿಸಿರುವುದು, ಅವುಗಳ ಕೆತ್ತನೆಯೂ ಕೂಡ ಜಾನಪದೀಯವಾಗಿರುವುದು. ಇವು ಬುಡಕಟ್ಟು ಸಮುದಾಯಗಳು ತಮ್ಮ ಮನೆಗಳ ಮೇಲೆ ಬಿಡಿಸುವ ಚಿತ್ರಗಳನ್ನು ಹೋಲುತ್ತವೆ. ಹಾಗಾಗಿ ಇಂತಹ ಶಿಲ್ಪಗಳನ್ನು ಕೆತ್ತಿರುವಲ್ಲಿ ಸ್ಥಳೀಯ ಕಲಾವಿದರನ್ನು ಬಳಸಿಕೊಂಡಿರುವುದನ್ನು ಗುರುತಿಸಬಹುದು.

ಎರಡನೆಯದಾಗಿ ಸಾಮಾನ್ಯವಾಗಿ ಪಾಳೆಯಗಾರರ ಕಾಲದ ಎಲ್ಲಾ ದೇವಾಲಯಗಳ ಭಿತ್ತಿಯಲ್ಲಿ ಕಂಬಗಳು, ಬೋದುಗೆಗಳು ಗೋಚರಿಸುತ್ತವಾದರೂ, ಪೂರ್ಣವಾದ ಕೆತ್ತನೆಯನ್ನು ಒಳಗೊಂಡಿರುವುದಿಲ್ಲ. ಆದರೆ ಮಾರಿಕಾಂಭ ದೇವಾಲಯದ ಸಭಾಮಂಟಮದ ಹೊರಗೋಡೆಯಲ್ಲಿ ಪೂರ್ಣವಾಗಿ ಕೆತ್ತಿದ ಬೋದುಗೆಗಳು ಕಾಣಿಸುವುದು ವಿಶೇಷವೆನಿಸುತ್ತದೆ. ಮೂರನೆಯದಾಗಿ ಶಿಖರ, ಶಾಲ, ಕೂಟ ಹಾಗು ಹಾರಗಳ ರಚನೆಯಲ್ಲೂ ತೀರಾ ಸ್ಥಳೀಯ ಲಕ್ಷಣಗಳನ್ನು ಅಳವಡಿಸಿಕೊಂಡಿರುವುದು. ಗರ್ಭಗೃಹದಲ್ಲಿ ದೇವಿಯ ವಿಗ್ರಹವಿದೆ.

೧೭. ಲಕ್ಷ್ಮೀರಂಗನಾಥಸ್ವಾಮಿ ದೇವಾಲಯ

ಗ್ರಾಮ	:	ಗಿಲಕೇನಹಳ್ಳಿ (ಹೊಳಲ್ಕೆರೆ ತಾಲ್ಲೂಕು)
ಸ್ಥಾನನಿರ್ದೇಶನ	:	ಚಿತ್ರದುರ್ಗ–ಹೊಳಲ್ಕೆರೆ ರಸ್ತೆಯಲ್ಲಿ ಗಿಲಕೇನಹಳ್ಳಿ ಕ್ರಾಸ್‌ನಿಂದ ೨ಕಿ.ಮೀ ಅಂತರದಲ್ಲಿದೆ.
ಮುಖದಿಕ್ಕು	:	ಪೂರ್ವ
ಶಾಸನ ಮತ್ತು ಕಾಲ	:	ಚಿತ್ರದುರ್ಗ ಪಾಳೆಯಗಾರರು (ಪ್ರಾಯಶಃ ಮತ್ತಿತಿಮ್ಮಣ್ಣನಾಯಕ)
ನಿರ್ಮಾಣ ಸಾಮಾಗ್ರಿ	:	ಕಣಶಿಲೆ, ಇಟ್ಟಿಗೆ, ಗಾರೆ
ವಾಸ್ತುಭಾಗಗಳು	:	ಗರ್ಭಗೃಹ, ಅಂತರಾಳ, ಸಭಾಮಂಟಪ, ಮಹಾರಂಗಮಂಟಪ, ಮುಖಮಂಟಪ, ಪ್ರಾಕಾರ, ಪ್ರವೇಶ ಮಹಾದ್ವಾರ, ಮಹಾದ್ವಾರ ಮಂಟಪ, ಉಯ್ಯಾಲೆಕಂಬ. ದೀಪಸ್ತಂಭ.

ಹೊಳಲ್ಕೆರೆ ತಾಲ್ಲೂಕಿನ ಗಿಲಕೇನಹಳ್ಳಿ ಗ್ರಾಮದಲ್ಲಿರುವ ಶ್ರೀರಂಗನಾಥಸ್ವಾಮಿ ದೇವಾಲಯವು ಅನೇಕ ವಾಸ್ತುಭಾಗಗಳನ್ನು ಹೊಂದಿದ್ದು, ಪಾಳೆಯಗಾರರ ಕಾಲದ ಬೃಹತ್ ದೇವಾಲಯಗಳಲ್ಲಿ ಒಂದೆನೆಸಿದೆ.

ಗರ್ಭಗೃಹವು ಅತ್ಯಂತ ಸರಳವಾಗಿದ್ದು, ದ್ವಾರಬಂಧದ ಇಕ್ಕೆಲಗಳಲ್ಲಿ ವೈಷ್ಣವ ದ್ವಾರಪಾಲಕರುಗಳ ಉಬ್ಬುಶಿಲ್ಪಗಳಿವೆ. ಲಲಾಟಬಿಂಬದ ಶಿಲ್ಪಗಳು ಸ್ಪಷ್ಟವಾಗಿ ಕಾಣುತ್ತಿಲ್ಲ. ಅಂತರಾಳವು ಸರಳವಾಗಿದ್ದು ದ್ವಾರಬಾಗಿಲ ಇಕ್ಕೆಲಗಳಲ್ಲಿ ವೈಷ್ಣವ ದ್ವಾರಪಾಲಕರ ಶಿಲ್ಪಗಳಿವೆ. ಇದರ ಲಲಾಟಬಿಂಬದ ಶಿಲ್ಪವೂ ಸಹ ಸ್ಪಷ್ಟವಾಗಿ ಕಾಣುತ್ತಿಲ್ಲ.

ಸಭಾಮಂಟಪವು ಒಂಭತ್ತು ಅಂಕಣಗಳಲ್ಲಿದ್ದು ಕಂಬಗಳು ಸರಳವಾಗಿವೆ. ಕೆಳಗೆ ಮತ್ತು ಮೇಲೆ ಚೌಕಭಾಗಗಳಿದ್ದು, ಮಧ್ಯದಲ್ಲಿ ಎಂಟು ಮುಖಗಳ ಲಂಬಪಟ್ಟಿಯನ್ನು ಹೊಂದಿವೆ, ಕಂಬಗಳ ಬೋದುಗೆಗಳು ಸರಳವಾಗಿವೆ. ಮಧ್ಯದ ಅಂಕಣದ ಛತ್ತಿನಲ್ಲಿ ಅರಳುಕಮಲದ ಭುವನೇಶ್ವರಿಯಿದ್ದು, ಅದರ ಮಧ್ಯದಲ್ಲಿ ಮೊಗಚಿ ಹಾಕಿದ ಮೊಗ್ಗು ಇದೆ. ಭಿತ್ತಿ ಸರಳವಾಗಿದೆ.

ಮಹಾಮಂಟಪವು ಪ್ರತಿ ಸಾಲಿನಲ್ಲಿ ನಾಲ್ಕರಂತೆ ನಾಲ್ಕು ಸಾಲುಗಳಲ್ಲಿ ಒಟ್ಟು ಹದಿನಾರು ಅಂಕಣಗಳನ್ನು ಹೊಂದಿದೆ. ಮೊದಲ ಮೂರು ಅಂಕಣಗಳು ಮಾತ್ರ ತೆರೆದ ರೀತಿಯಲ್ಲಿದ್ದು, ಮುಖಮಂಟಪದಂತೆ ತೋರುತ್ತದೆ. ಮಹಾಮಂಟಪದ ಎರಡೂ ಬದಿಗೆ ಭಿತ್ತಿಯನ್ನು ನಿರ್ಮಿಸಲಾಗಿದೆ. ಇಲ್ಲಿಯ ಕಂಬಗಳು ತೀರಾ ಸರಳವಾಗಿದ್ದು, ಕೆಳಗೆ ಮತ್ತು ಮೇಲೆ ಚೌಕಭಾಗಗಳನ್ನು ಹೊಂದಿದ್ದು, ಮಧ್ಯದಲ್ಲಿ ಎಂಟು ಮುಖಗಳ ಲಂಬಪಟ್ಟಿಕೆಯಿದೆ. ಈ ಕಂಬಗಳ ಬೋದುಗೆಗಳು ಸರಳವಾಗಿವೆ. ಮಹಾಮಂಟಪದ ಭಿತ್ತಿ ಮತ್ತು ಛತ್ತು ಕೂಡ ಸರಳವಾಗಿದೆ.

ದ್ವಾರಮಂಟಪಕ್ಕೆ ಮೂರು ಮೆಟ್ಟಿಲುಗಳಿದ್ದು ಇಕ್ಕೆಲಗಳಲ್ಲಿ ಸುರುಳಿಯಾಳಿಗಳ ಕೈಪಿಡಿಗಳಿವೆ. ಮಹಾದ್ವಾರದ ಬಾಗಿಲ ಚೌಕಟ್ಟಿನಲ್ಲಿ ಪೂರ್ಣಕುಂಭಗಳು, ಅವುಗಳ ಮೇಲೆ ರತ್ನಶಾಖೆಗಳಿದ್ದು, ಲಲಾಟದಲ್ಲಿ ಕಾಳಿಂಗಮರ್ದನಕೃಷ್ಣನ ಬಿಂಬವಿದೆ. ಒಳಪಟ್ಟಿಕೆಯಲ್ಲಿ ಲತೆಯನ್ನು ಆಶ್ರಯಿಸಿ ನಿಂತ ಶಿಲಾಬಾಲಕಿಯರ ಉಬ್ಬುಶಿಲ್ಪಗಳಿವೆ. ಮಂಟಪವು ಆರು ಅಂಕಣಗಳಲ್ಲಿದ್ದು ಮಧ್ಯದ ಎರಡು ಅಂಕಣಗಳು ಪ್ರವೇಶ ಹಾದಿಯನ್ನು, ಬದಿಯ ನಾಲ್ಕು ಅಂಕಣಗಳು ಎತ್ತರವಾದ ಕಟ್ಟೆಗಳನ್ನು ಹೊಂದಿವೆ. ಮಧ್ಯದ ಎರಡು ಕಂಬಗಳು ಕೆಳಗೆ, ಮಧ್ಯ ಮತ್ತು ಮೇಲೆ ಮೂರು ಅಸಮವಾದ ಚೌಕಭಾಗಗಳನ್ನು ಹೊಂದಿದ್ದು, ಅವುಗಳ ಮೇಲೆ ವೇಣುಗೋಪಾಲ, ಪಾಳೆಯಗಾರ, ಗರುಡ ಹಾಗು ವಿವಿಧ ಪುಷ್ಪಾಕೃತಿಗಳ ಉಬ್ಬುಶಿಲ್ಪಗಳಿವೆ.

ದ್ವಾರಮಂಟಪದ ಎದುರಿಗೆ ಮೂವತ್ತು ಮೀಟರ್ ಅಂತರದಲ್ಲಿ ಇಪ್ಪತ್ತೈದು ಮೀಟರ್ ಎತ್ತರದ ಉಯ್ಯಾಲೆ ಕಂಬವಿದೆ. ಇದರ ಇಕ್ಕೆಲಗಳಲ್ಲಿ ಆನೆಗಳ ಶಿಲ್ಪಗಳಿವೆ. ಉಯ್ಯಾಲೆ ಕಂಬದ ತುತ್ತ ತುದಿಯಲ್ಲಿ ದ್ರಾವಿಡ ಶೈಲಿಯ ಶಿಖರ, ವಿಮಾನಗಳು ಕೆಳಭಾಗದಲ್ಲಿ ಎರಡು ಅಂತಸ್ತುಗಳಲ್ಲಿ ಕಲ್ಲಿನಲ್ಲಿ ಕೆತ್ತಿದ ಅಲಂಕಾರವಿದ್ದು, ಅತ್ಯಂತ ಕೆಳಭಾಗದಲ್ಲಿ ಇಕ್ಕೆಲಗಳಲ್ಲಿ ಕಲ್ಲಿನ ಕಟಾಂಜನಗಳು ಇವೆ. ಈ ಉಯ್ಯಾಲೆ ಕಂಬವು ಹುಲ್ಲೂರಿನ ಸಿದ್ದೇಶ್ವರ ದೇವಾಲಯದ ಉಯ್ಯಾಲೆ ಕಂಬದಂತಿದೆ.

ದೇವಾಲಯದ ಅಧಿಷ್ಠಾನವು ಮಂಚಬಂಧ ಶೈಲಿಯಲ್ಲಿದ್ದು ಉಪಾನ, ಗಳ ಹಾಗು ಕಪೋತ ಭಾಗಗಳನ್ನು ಹೊಂದಿದೆ. ಭಿತ್ತಿಯು ತೀರಾ ಸರಳವಾಗಿದ್ದು, ಕಂಬ ಮತ್ತು ಬೋದುಗೆಗಳು ಗೋಚರಿಸುತ್ತವೆ. ಭಿತ್ತಿಯಲ್ಲಿ ಮೀನು, ಆನೆ ಮತ್ತು ಮಿಥುನಶಿಲ್ಪಗಳಿವೆ. ಗರ್ಭಗೃಹದ ಮೇಲಿನ ಶಿಖರವನ್ನು ಇತ್ತೀಚೆಗೆ ನಿರ್ಮಿಸಲಾಗಿದೆ. ಗರ್ಭಗೃಹದ ಮಧ್ಯದಲ್ಲಿ ರಂಗನಾಥಸ್ವಾಮಿಯ ಶಿಲ್ಪವಿದೆ.

೧೮. ವೀರಭದ್ರಸ್ವಾಮಿ ದೇವಾಲಯ

ಗ್ರಾಮ	:	ಹೊಳಲ್ಕೆರೆ (ನಗರ)
ಸ್ಥಾನನಿರ್ದೇಶನ	:	ಬಯಲು ಗಣಪತಿ ದೇವಸ್ಥಾನಕ್ಕೆ ಹೋಗುವ ಮಾರ್ಗದಲ್ಲಿ
ಮುಖದಿಕ್ಕು	:	ಉತ್ತರ
ಶಾಸನ ಮತ್ತು ಕಾಲ	:	ಮೂಲ: ಹೊಯ್ಸಳರು,[೪೮] ಜೀರ್ಣೋದ್ಧಾರ: ಚಿತ್ರದುರ್ಗ ಪಾಳೆಯಗಾರರು
ನಿರ್ಮಾಣ ಸಾಮಾಗ್ರಿ	:	ಕಣಶಿಲೆ
ವಾಸ್ತು ಭಾಗಗಳು	:	ಗರ್ಭಗೃಹ, ಸಭಾಮಂಟಪ ಅಂತರಾಳ, ಪ್ರವೇಶಮಂಟಪ, ಪ್ರಾಕಾರ, ಶಿಖರ

ನಗರದ ಮಧ್ಯಭಾಗದಲ್ಲಿರುವ ವೀರಭದ್ರಸ್ವಾಮಿ ದೇವಾಲಯವು ಚಿತ್ರದುರ್ಗ ಪಾಳೆಯಗಾರರ ಕಾಲದ ಶೈವ ದೇವಾಲಯಗಳಲ್ಲಿ ಪ್ರಮುಖವಾಗಿದೆ. ಇದು ತನ್ನ ವಿವಿಧ ವಾಸ್ತುಲಕ್ಷಣಗಳಿಂದ ವಿಶಿಷ್ಟವೆನಿಸುತ್ತದೆ.

ದೇವಾಲಯವು ಮೂರು ಗರ್ಭಗೃಹಗಳನ್ನು ಹೊಂದಿದ್ದು, ತ್ರಿಕೂಟ ಮಾದರಿಯಲ್ಲಿದೆ. ಮೂರು ಗರ್ಭಗೃಹಗಳ ಭಿತ್ತಿ ಮತ್ತು ಛತ್ತುಗಳು ಸರಳವಾಗಿವೆ. ಎಡಬಲ ಬದಿಯ ಗರ್ಭಗೃಹಗಳ ದ್ವಾರದ ಇಕ್ಕೆಲಗಳಲ್ಲಿ ಪೂರ್ಣಕುಂಭಗಳ ಉಬ್ಬುಶಿಲ್ಪಗಳಿವೆ. ಪ್ರಧಾನ ಗರ್ಭಗೃಹದ ದ್ವಾರಬಂಧವು ಸ್ತಂಭಶಾಖೆಯಲ್ಲಿದ್ದು, ಇಕ್ಕೆಲಗಳಲ್ಲಿ ಶೈವದ್ವಾರಪಾಲಕರ ಶಿಲ್ಪಗಳಿವೆ. ಬಲಬದಿಯ ದ್ವಾರಪಾಲಕ ತ್ರಿಶೂಲ, ಸರ್ಪ, ಗದಾದಾರಿಯಾಗಿದ್ದರೆ, ಎಡಬದಿಯ

ದ್ವಾರಪಾಲಕ ತ್ರಿಶೂಲ, ಡಮರು ಗದಾದಾರಿಯಾಗಿದ್ದಾನೆ. ಲಲಾಟದಲ್ಲಿ ಶಿವಪಾರ್ವತಿಯರ ಉಬ್ಬುಶಿಲ್ಪಗಳಿವೆ. ಬದಿಯಲ್ಲಿ ಕುಡ್ಮಲಗಳಿವೆ. ಪ್ರಧಾನ ಗರ್ಭಗೃಹದ ಮುಂಭಾಗದಲ್ಲಿ ಯಾವುದೇ ಕಂಬಗಳಿರದ ಒಂದೇ ಅಂಕಣದ ಅಂತರಾಳವಿದೆ.

ಸಭಾಮಂಟಪವು ಮೂರು ಗರ್ಭಗೃಹಗಳಿಗೆ ಹೊಂದಿಕೊಂಡಿದ್ದು, ಮಧ್ಯದಲ್ಲಿ ಎತ್ತರವಾದ ವೇದಿಕೆಯನ್ನು ಹೊಂದಿದೆ. ಈ ವೇದಿಕೆಯ ನಾಲ್ಕು ಮೂಲೆಗಳಿಗೆ ನಾಲ್ಕು ಸ್ವತಂತ್ರ ಕಂಬಗಳು, ಸುತ್ತಲೂ ಹತ್ತು ಗೋಡೆಗಂಬಗಳಿವೆ. ಸಭಾಮಂಟಪದ ಪ್ರವೇಶದಲ್ಲಿ ಮಧ್ಯದ ನಾಲ್ಕು ಕಂಬಗಳಿಗೆ ಸಮಾನವಾಗಿ ಎರಡು ಕಂಬಗಳಿವೆ. ಈ ಕಂಬಗಳು ಪೀಠಸಹಿತ ಕಾಂಡದವರೆಗೆ ಏಕಶಿಲೆಯ ಸ್ತಂಭಗಳಾಗಿದ್ದು, ಕೆಳಗೆ, ಮಧ್ಯ ಮತ್ತು ಮೇಲೆ ಮೂರು ಅಸಮವಾದ ಚೌಕಭಾಗಗಳನ್ನು ಹೊಂದಿವೆ. ಕೆಳಗಿನ ಚೌಕಭಾಗಕ್ಕಿಂತ ಮಧ್ಯದ್ದು ಅದರ ಅರ್ಧಭಾಗದಲ್ಲಿದ್ದರೆ, ಮೇಲಿನದು ಮಧ್ಯದ ಚೌಕಭಾಗದ ಅರ್ಧದಷ್ಟಿದೆ. ಈ ಕಂಬಗಳ ನಾಲ್ಕು ಚೌಕಪಟ್ಟಿಕೆಗಳ ಮುಖಭಾಗಗಳಲ್ಲಿ ಮೃದಂಗವಾದಕ, ನಂದಿ, ಕುಬ್ಜ, ಖಡ್ಗಾದಾರಿ ವೀರ, ತಂಬೂರಿವಾದಕ, ಹಟಯೋಗಿ, ಭಕ್ತ, ಶಿವಲಿಂಗಕ್ಕೆ ಕ್ಷೀರಧಾರೆ ಯೆರೆಯುತ್ತಿರುವ ಹಸು, ಸಿಂಹಸವಾರ, ಗಣೇಶ, ಭೈರವ, ನೃತ್ಯಗಾತಿ, ಆನೆ, ಹಂಸ, ಗಂಡಬೇರುಂಡ, ಚರ್ತುಮುಖ ಬ್ರಹ್ಮ, ಷಣ್ಮುಖ ಮುಂತಾದ ಉಬ್ಬುಶಿಲ್ಪಗಳಿವೆ. ಕಂಬಗಳ ಮೇಲ್ಭಾಗದಲ್ಲಿ ಕಳಸ ಹಾಗು ತಾಡಿಗಳಿದ್ದು ಅವುಗಳ ಮೇಲೆ ಪುಷ್ಪಬೋದುಗೆಗಳಿವೆ, ಸಭಾಂಗಣದ ಮಧ್ಯದ ಛತ್ತಿನಲ್ಲಿ ಅರಳುಕಮಲದ ಭುವನೇಶ್ವರಿಯಿದ್ದು, ಅದರ ಮಧ್ಯದಲ್ಲಿ ಮೊಗಚಿಹಾಕಿದ ದೀರ್ಘವಾದ ಮೊಗ್ಗು ಇದೆ. ಉಳಿದಂತೆ ಭಿತ್ತಿ ಮತ್ತು ಛತ್ತು ಸರಳವಾಗಿವೆ.

ದೇವಾಲಯದ ಹೊರಭಾಗದಲ್ಲಿ ಸಭಾಮಂಟಪಕ್ಕೆ ಎರಡು ಮೆಟ್ಟಿಲುಗಳಿದ್ದು, ಇಕ್ಕೆಲಗಳಲ್ಲಿ ಆನೆಗಳ ಕೈಪಿಡಿಗಳಿವೆ. ಅಧಿಷ್ಠಾನವು ಮಂಚಬಂಧ ಶೈಲಿಯಲ್ಲಿದ್ದು, ಉಪಾನ, ಗಳ ಮತ್ತು ಕುಮುದ ಭಾಗಗಳನ್ನು ಹೊಂದಿದೆ. ಉಪಾನ ಮತ್ತು ಕುಮುದ ಭಾಗದಲ್ಲಿ ಅಲ್ಲಲ್ಲಿ ಪರಸ್ಪರ ಅಭಿಮುಖವಾಗಿ ಚೈತ್ಯಾಕೃತಿಗಳ ಅಲಂಕರಣೆಯಿದೆ. ದೇವಾಲಯದ ಭಿತ್ತಿಯನ್ನು ಮಟ್ಟಸಗೊಳಿಸಿದ ಬೃಹತ್ ಅಳತೆಕಲ್ಲುಗಳಿಂದ ಕಟ್ಟಲಾಗಿದೆ. ಭಿತ್ತಿಯಲ್ಲಿ ಕಂಬಗಳು ಮತ್ತು ಬೋದುಗೆಗಳು ಗೋಚರಿಸುತ್ತವೆ. ಗರ್ಭಗೃಹದ ಗೋಡೆಯ ಮೇಲೆ ನಾಗಸರ್ಪದ ಬೃಹತ್ ಉಬ್ಬುಶಿಲ್ಪವಿದೆ. ಭಿತ್ತಿಯ ಮೇಲಿನ ಮಾಡಿನಲ್ಲಿ ದೇವಾಲಯದುದ್ದಕ್ಕೂ ಇಳಿಜಾರಾದ ಮುಂಜೂರು ಇದೆ. ಮೂರು ಗರ್ಭಗೃಹಗಳ ಮೇಲೆ ಶಿಖರಗಳು, ಕಂಗೂರಾಕೃತಿಗಳು, ನಂದಿಶಿಲ್ಪಗಳು ಹಾಗು ದೇವಕೋಷ್ಠಗಳಿದ್ದು, ಅವುಗಳು ನಂತರದ ರಚನೆಗಳಾಗಿ ತೋರುತ್ತವೆ.

ದೇವಾಲಯದ ಎದುರಿಗೆ ದ್ವಾರಮಂಟಪವಿದೆ. ಮಧ್ಯದ ಪ್ರವೇಶ ಹಾದಿಯನ್ನು ಹೊರತುಪಡಿಸಿ ಅಕ್ಕಪಕ್ಕದಲ್ಲಿ ಹೊರ-ಒಳ ಬದಿಗೂ ಕಟ್ಟೆಗಳಿದ್ದು, ಅವುಗಳ ತುದಿಗೆ ಕಂಬಗಳಿವೆ. ಈ ಮಂಟಪದ ಮೇಲೆ ನಂತರದ ಕಾಲದಲ್ಲಿ ನಿರ್ಮಿಸಿದ ಕಂಗೂರಾಕೃತಿಗಳಿವೆ.

ಇಡೀ ದೇವಾಲಯವನ್ನು ಪರಿಶೀಲಿಸಿದಾಗ ಇಲ್ಲಿ ಬೇರೆ ಬೇರೆ ಕಾಲದ ವಾಸ್ತುಭಾಗಗಳು ಕಂಡುಬರುತ್ತವೆ. ಇದರ ಪ್ರವೇಶಮಂಟಪದ ಮೂರು ಕಂಬಗಳು ಪ್ರಾಯಶಃ ಚಾಲುಕ್ಯ ಶೈಲಿಯನ್ನು ಹೋಲಿದರೆ, ಮಧ್ಯದ ಸಭಾಮಂಟಪದ ನಾಲ್ಕು ಕಂಬಗಳು, ಅವುಗಳ ಮೇಲಿನ ಬೋದುಗೆಗಳು ಹಾಗು ಅಂತರಾಳದ ದ್ವಾರಬಂಧ ವಿಜಯನಗರ ಶೈಲಿಯಲ್ಲಿದ್ದರೆ, ಉಳಿದ ಎಲ್ಲಾ ವಾಸ್ತುಭಾಗಗಳು ಪಾಳೆಯಗಾರರ ಕಾಲದ್ದಾಗಿವೆ. ಹೀಗಾಗಿ ಈ ದೇವಾಲಯದ ನಿರ್ಮಾಣ ಸಂದರ್ಭದಲ್ಲಿ ಚಾಲುಕ್ಯ ಮತ್ತು ವಿಜಯನಗರ ಕಾಲದ ಸ್ತಂಭಗಳನ್ನು ಹಾಗು ದ್ವಾರಬಂಧವನ್ನು ಬಳಸಿಕೊಂಡಿರುವುದು ಇಲ್ಲಿ ವಿಧಿತವಾಗಿರುತ್ತದೆ.

ದೇವಾಲಯದ ಪ್ರಧಾನ ಗರ್ಭಗೃಹದಲ್ಲಿ ವೀರಭದ್ರಸ್ವಾಮಿಯ ವಿಗ್ರಹವಿದ್ದರೆ, ಅದರ ಎಡಬದಿಯ ಗರ್ಭಗೃಹದಲ್ಲಿ ಶಿವಲಿಂಗ, ಬಲಬದಿಯ ಗರ್ಭಗೃಹದಲ್ಲಿ ನಂದಿಯ ವಿಗ್ರಹಗಳಿವೆ.

೧೯. ವೀರಭದ್ರಸ್ವಾಮಿ ದೇವಾಲಯ

ಗ್ರಾಮ	:	ಕುಂದುರ್ಪಿ (ಆಂಧ್ರಪ್ರದೇಶ)
ಸ್ಥಾನ ನಿರ್ದೇಶನ	:	ಚಳ್ಳಕೆರೆ-ಪಾವಗಡ ಮಾರ್ಗದಲ್ಲಿ ನಾಗಪ್ಪನಹಳ್ಳಿ ಗೇಟ್‌ನಿಂದ ೮ ಕಿ.ಮೀ.ಅಂತರದಲ್ಲಿದೆ.
ಮುಖದಿಕ್ಕು	:	ಉತ್ತರ
ಶಾಸನ ಮತ್ತು ಕಾಲ	:	ಚಿತ್ರದುರ್ಗ ಪಾಳೆಯಗಾರರು (ಜೀರ್ಣೋದ್ಧಾರ)
ನಿರ್ಮಾಣ ಸಾಮಾಗ್ರಿ	:	ಕಣಶಿಲೆ, ಇಟ್ಟಿಗೆ, ಗಾರೆ
ವಾಸ್ತುಭಾಗಗಳು	:	ಗರ್ಭಗೃಹ, ಅಂತರಾಳ, ನವರಂಗ, ಮಹಾಮಂಟಪ, ಮುಖಮಂಟಪ.

ಕರ್ನಾಟಕದ ಗಡಿಭಾಗದಲ್ಲಿರುವ ಕುಂದುರ್ಪಿ ಗ್ರಾಮವು ಅನೇಕ ಬೃಹತ್ ದೇವಾಲಯಗಳನ್ನು ಹೊಂದಿದೆ. ಇವುಗಳಲ್ಲಿ ವೀರಭದ್ರಸ್ವಾಮಿ ದೇವಾಲಯವು ಪ್ರಮುಖವಾಗಿದ್ದು, ಚಿತ್ರದುರ್ಗ ಪಾಳೆಯಗಾರರ ಕಲೆಯನ್ನು ತಿಳಿದುಕೊಳ್ಳಲು ಸಹಾಯಕವಾಗಿದೆ.

ಗರ್ಭಗೃಹವು ಅತ್ಯಂತ ಸರಳವಾಗಿದ್ದು ಒಂದೇ ಅಂಕಣದಲ್ಲಿದೆ. ಇದರ ದ್ವಾರಬಾಗಿಲ ಇಕ್ಕೆಲಗಳಲ್ಲಿ ಶೈವದ್ವಾರಪಾಲಕರುಗಳ ಶಿಲ್ಪಗಳಿವೆ. ಲಲಾಟದಲ್ಲಿ ಶಿವಪಾರ್ವತಿಯರ ಬಿಂಬವಿದೆ.

ಉಳಿದಂತೆ ಭಿತ್ತಿ ಮತ್ತು ಛತ್ತು ಸರಳವಾಗಿವೆ. ಅಂತರಾಳವು ಸರಳವಾಗಿದ್ದು ಇದರ ದ್ವಾರಬಂಧದ ಇಕ್ಕೆಲಗಳಲ್ಲಿ ಶೈವದ್ವಾರಪಾಲಕರುಗಳ ಶಿಲ್ಪಗಳಿವೆ. ಲಲಾಟದಲ್ಲಿ ಪುಷ್ಪಾಕೃತಿಯ ಬಿಂಬವಿದೆ. ನಾಲ್ಕು ಕಂಬಗಳನ್ನು ಹೊಂದಿದ ಸಭಾಮಂಟಪವು ಸರಳವಾಗಿದ್ದು. ಕಂಬಗಳ ಕೆಳಗೆ ಮತ್ತು ಮಧ್ಯ ಅಸಮವಾದ ಚೌಕಭಾಗಗಳಿವೆ. ಇವುಗಳ ಮಧ್ಯ ಅಷ್ಟಮುಖಗಳ ಲಂಬಪಟ್ಟಿಕೆಗಳಿವೆ. ತುದಿಯಲ್ಲಿ ಕುಂಭ ಮತ್ತು ಕಳಸಗಳಿದ್ದು ಮೇಲೆ ಬೋದುಗೆಗಳು ತೀರಾ ಸರಳವಾಗಿವೆ.

ಮಹಾಮಂಟಪವು ವಿಶಿಷ್ಟವಾಗಿದ್ದು ಒಟ್ಟು ಹದಿನೈದು ಅಂಕಣಗಳ ವಿಸ್ತಾರವನ್ನು ಹೊಂದಿದೆ. ಎರಡು ಬದಿಗೆ ಮುಖಮಂಟಪದಂತೆ ತಲಾ ಮೂರು ಅಂಕಣಗಳನ್ನು ಆವರಿಸಿರುವ ಕಟ್ಟೆಗಳಿದ್ದು ಅವುಗಳ ಮೇಲೆ ಕಂಬಗಳಿವೆ. ಈ ಮಂಟಪವು ನೋಡಿದ ತಕ್ಷಣ ಚಿತ್ರದುರ್ಗದ ವೆಂಕಟರಮಣಸ್ವಾಮಿ ದೇವಾಲಯದ ಮಹಾಮಂಟಪದಂತೆ ತೋರುತ್ತದೆ. ಈ ಕಟ್ಟೆಗಳ ಒಳಮುಖದ ಅಧಿಷ್ಠಾನದ ಮೇಲೆ ಸ್ತ್ರೀ, ಪುರುಷ ಹಾಗು ಗಜಗಳ ಉಬ್ಬುಶಿಲ್ಪಗಳಿವೆ. ಮಧ್ಯದ ಒಂಭತ್ತು ಅಂಕಣಗಳ ನಡುವೆ ವಿಜಯನಗರ ಶೈಲಿಯ ವಿಶಿಷ್ಟ ರೀತಿಯ ನಾಲ್ಕು ಕಂಬಗಳಿವೆ. ಈ ಕಂಬಗಳ ಚೌಕಭಾಗಗಳಲ್ಲಿ ಶಿವಲಿಂಗ, ಮೃದಂಗವಾದಕ, ಕುಬ್ಜ, ನೃತ್ಯಗಾತಿ, ಮಂಟಪ, ನಂದಿ, ಹಂಸ, ಗಜಶಾರ್ದೂಲ, ಭಕ್ತ, ಕುಳಿತಸಿಂಹ ಹಾಗು ವಿವಿಧ ಪುಷ್ಪಾಕೃತಿಗಳ ಉಬ್ಬುಶಿಲ್ಪಗಳಿವೆ. ಮಧ್ಯದ ಕಂಬಗಳ ಮೇಲೆ ನಾಲ್ಕು ಬದಿಗೆ ಮೊಗ್ಗುಗಳಿರುವ ಪುಷ್ಪಬೋದುಗೆಗಳಿವೆ. ಮಧ್ಯದ ಅಂಕಣದ ಛತ್ತಿನಲ್ಲಿ ಸುಂದರವಾದ ಭುವನೇಶ್ವರಿಯಿದೆ. ಅರ್ಧಗುಮ್ಮಟಾಕಾರದಲ್ಲಿರುವ ಈ ಭುವನೇಶ್ವರಿಯ ಸುತ್ತಲೂ ಅಲಂಕರಣೆಗಳಿದ್ದು, ಪುಷ್ಪದಳಗಳು ಹಾಗು ಅದರ ನಡುವೆ ಮೊಗಚಿಹಾಕಿದ ಮೊಗ್ಗು ಇದೆ.

ಮಹಾಮಂಟಪದ ಪಶ್ಚಿಮದಿಕ್ಕಿಗೆ ಉಪಪ್ರವೇಶದ್ವಾರವಿದ್ದು, ಭಿತ್ತಿಯಲ್ಲಿ ಪಾಳೆಯಗಾರರ ಅನೇಕ ದೇವಾಲಯಗಳಲ್ಲಿ ಕಂಡುಬರುವ ಸಾಮಾನ್ಯ ಶಿಲ್ಪವಾದ ಮೀನಿನ ಉಬ್ಬುಶಿಲ್ಪವಿದೆ. ಮಹಾಮಂಟಪದ ದ್ವಾರಬಾಗಿಲ ಇಕ್ಕೆಲಗಳಲ್ಲಿ ಶೈವ ದ್ವಾರಪಾಲಕರುಗಳ ಶಿಲ್ಪಗಳಿದ್ದು, ಲಲಾಟದಲ್ಲಿ ಶಿವಪಾರ್ವತಿಯರ ಬಿಂಬವಿದೆ. ಮಹಾಮಂಟಪ ಮತ್ತು ಸಭಾಮಂಟಪದ ಮಧ್ಯದಲ್ಲಿ ಮೂರು ಅಂಕಣಗಳ ಚಿಕ್ಕ ಮಂಟಪವಿದೆ. ಇಲ್ಲಿ ಎರಡು ಕಂಬಗಳಿದ್ದು, ಸರಳವಾಗಿವೆ. ಉಳಿದಂತೆ ಭಿತ್ತಿ ಮತ್ತು ಛತ್ತು ಸರಳವಾಗಿವೆ.

ಮುಖಮಂಟಪವು ತೆರೆದ ರೀತಿಯಲ್ಲಿದ್ದು, ಆರು ಅಂಕಣಗಳನ್ನು ಹೊಂದಿದೆ. ಎರಡು ಬದಿಯ ಎರಡು ಅಂಕಣಗಳಲ್ಲಿ ಕಟ್ಟೆಗಳಿವೆ. ಈ ಮಂಟಪದ ಮಧ್ಯದಲ್ಲಿ ನಾಲ್ಕು ವಿಶಿಷ್ಟವಾದ

ಕಂಬಗಳಿವೆ. ಕಂಬಗಳ ಕಾಂಡದಲ್ಲಿ ಕೆಳಗೆ ಮತ್ತು ಮೇಲೆ ಅಸಮವಾದ ಚೌಕಾಭಾಗಗಳಿದ್ದು, ಅವುಗಳ ಮಧ್ಯದಲ್ಲಿ ಹದಿನಾರು ಮುಖಗಳ ಚತುರಸ್ರಾಕಾರದ ಲಂಬಪಟ್ಟಿಕೆಗಳಿವೆ. ಮುಂದಿನ ಎರಡು ಕಂಬಗಳ ಕೆಳಚೌಕಭಾಗದ ನಾಲ್ಕು ಮೂಲೆಗಳಲ್ಲಿ ಕುಳಿತಸಿಂಹ ಮತ್ತು ಮಂಗಗಳನ್ನು ತೋರಿಸಿರುವುದು ಇಲ್ಲಿಯ ವೈಶಿಷ್ಟ್ಯ. ಈ ಕಂಬಗಳ ಚೌಕಭಾಗಗಳಲ್ಲಿ ಭಕ್ತ, ಕುಳಿತಸಿಂಹ, ಕುಬ್ಜ, ನಂದಿ, ಭದ್ರಕಾಳಿ, ಬೇಡತಿ, ಮಿಥುನಶಿಲ್ಪ, ಹಂಸ, ನಾಟ್ಯಗಣಪತಿ, ಇಷ್ಟಲಿಂಗದಾರಿ, ವಿದೂಷಕ, ತಮಟೆವಾದಕ ಮುಂತಾದ ಉಬ್ಬುಶಿಲ್ಪಗಳಿದ್ದು, ಮೇಲಿನ ಬೋದುಗೆಗಳು ಸ್ವಲ್ಪಮಟ್ಟಿಗೆ ಅಲಂಕೃತವಾಗಿವೆ.

ಎರಡೂ ಬದಿಯ ಕಟ್ಟೆಗಳ ಮೇಲಿನ ಕಂಬಗಳು ತುಂಬಾ ಆಕರ್ಷಕವಾಗಿದ್ದು, ಹಸು–ಕರು, ಸಿಂಹ, ಹಂಸ, ಪುಷ್ಪ, ನಗ್ನಪುರುಷ, ವೀಣಾವಾದಕಿ, ನರಶಾರ್ದೂಲ, ಯತಿ, ನಾಗಬಂಧ, ಈಶ್ವರ, ಛಾಮರಧಾರಿಣಿ ಮುಂತಾದ ವೈವಿಧ್ಯಮಯ ಉಬ್ಬುಶಿಲ್ಪಗಳನ್ನು ಹೊಂದಿವೆ. ಈ ಕಟ್ಟೆಗಳ ಅಧಿಷ್ಠಾನದ ಒಳ ಮತ್ತು ಹೊರಭಾಗಗಳಲ್ಲಿ ಗಜಕಾಳಗ, ಅಶ್ವ, ಹಂಸ ಹಾಗು ವಿವಿಧ ಭಂಗಿಯ ಗಜಗಳ ಉಬ್ಬುಶಿಲ್ಪಗಳ ಅಲಂಕರಣೆಯಿದೆ.

ದೇವಾಲಯದ ಹೊರಭಾಗದ ಅಧಿಷ್ಠಾನವು ಮಂಚಬಂಧ ಶೈಲಿಯಲ್ಲಿದ್ದು, ಉಪಾನ, ಗಳ, ಕಪೋತಗಳನ್ನು ಹೊಂದಿದೆ. ಭಿತ್ತಿಯನ್ನು ಮಟ್ಟಸಗೊಳಿಸಿದ ಬೃಹತ್ ಅಳತೆ ಕಲ್ಲುಗಳಿಂದ ನಿರ್ಮಿಸಲಾಗಿದೆ. ಗರ್ಭಗೃಹದ ಮೇಲೆ ಗಾರೆ ಮತ್ತು ಇಟ್ಟಿಗೆಯಿಂದ ನಿರ್ಮಿಸಿರುವ ಶಿಖರವಿದೆ. ಏಕತಲ ದ್ರಾವಿಡ ವಿಮಾನ ಮಾದರಿಯ ಈ ಶಿಖರವು ಗರ್ಭಗೃಹದ ಉದ್ದಗಲಕ್ಕೂ ವ್ಯಾಪಿಸಿದೆ. ಶಿಖರದ ಕೆಳಭಾಗದಲ್ಲಿರುವ ಶಾಲ, ಕೂಟ, ಹಾರಗಳಲ್ಲಿ ಯಾವುದೇ ಶಿಲ್ಪಗಳಿಲ್ಲ. ಸ್ತೂಪಿಯು ಗುಮ್ಮಟಾಕಾರದಲ್ಲಿದೆ.

ಗರ್ಭಗೃಹದ ಮಧ್ಯದಲ್ಲಿ ರಂಗನಾಥಸ್ವಾಮಿಯ ಶಿಲ್ಪವಿದೆ. ದೇವಾಲಯದ ಎದುರಿಗೆ ಎರಡೂವರೆ ಅಡಿ ಎತ್ತರ, ಎರಡು ಅಡಿ ಅಗಲದ ಕಪ್ಪುಕಣಶಿಲೆಯ ಭದ್ರಕಾಳಿ ಶಿಲ್ಪವಿದ್ದು, ಸವ್ಯಲಲಿತಾಸನದಲ್ಲಿ ಕುಳಿತಿದ್ದಾಳೆ. ಚತುರ್ಭುಜಳಾಗಿದ್ದು, ಹಿಂದಿನ ಕೈಗಳಲ್ಲಿ ಡಮರು, ತ್ರಿಶೂಲ, ಮುಂದಿನ ಕೈಗಳಲ್ಲಿ ಪಾನಬಟ್ಟಲು, ಖಡ್ಗಗಳನ್ನು ಹೊಂದಿದೆ. ತಲೆಯಲ್ಲಿ ಕರಂಡಮುಕುಟ, ಕಿವಿಯಲ್ಲಿ ಕರ್ಣಕುಂಡಲ, ಕೊರಳಹಾರ, ಭುಜಹಾರ, ಕೌಸ್ತುಭಹಾರ, ತೋಳ್ಬಂದಿ, ಕೈಕಡಗ, ಕಾಲ್ಕಡಗ, ಪಾದಸರ, ರುಂಡಮಾಲೆ ಹಾಗು ಚನ್ನವೀರಗಳಿವೆ. ಹಿಂದೆ ಪ್ರಭಾವಳಿಯಿದ್ದು, ಮೇಲ್ಭಾಗದಲ್ಲಿ ಕೀರ್ತಿಮುಖವಿದೆ.

ದೇವಾಲಯದ ಎಲ್ಲಾ ವಾಸ್ತುವನ್ನು ಅವಲೋಕಿಸಿದಾಗ ಗರ್ಭಗೃಹ, ಅಂತರಾಳ ಮತ್ತು ಸಭಾಮಂಟಪಗಳು ಹದಿಮೂರನೆಯ ಶತಮಾನದ ರಚನೆಗಳೆಂದು ತೋರುತ್ತವೆ.

ಉಳಿದಂತೆ ಮಹಾಮಂಟಪ ಮತ್ತು ಮುಖಮಂಟಪ ಹಾಗು ಗರ್ಭಗೃಹದ ಮೇಲಿನ ಶಿಖರಗಳು ಪಾಳೆಯಗಾರರ ಕಾಲದ ರಚನೆಗಳೆಂದು ಸ್ಪಷ್ಟವಾಗುತ್ತದೆ.

ಮಠಗಳು

ಧಾರ್ಮಿಕ ಕಟ್ಟಡಗಳಲ್ಲಿ ಸಮಾವೇಶವಾಗುವ ಮಠಗಳು ಬೇರೆ ಬೇರೆ ಮತಪಂಥಗಳ ಸ್ವಾಮಿಗಳ ವಾಸಸ್ಥಾನಗಳಾಗಿರುತ್ತವೆ. ಹಾಗಾಗಿ ಇವುಗಳಲ್ಲಿ ದೇವಾಲಯದ ಲಕ್ಷಣಗಳು ಕಂಡುಬರುವುದಿಲ್ಲ ಆದರೆ ಕೆಲವು ಮಠಗಳಲ್ಲಿ ಪ್ರತ್ಯೇಕವಾಗಿ ದೇವಾಲಯಗಳನ್ನು ನಿರ್ಮಿಸಲಾಗಿರುತ್ತದೆ. ಚಿತ್ರದುರ್ಗದ ಪಾಳೆಯಗಾರರು ದೇವಾಲಯಗಳ ಜೊತೆಗೆ ಕೆಲವು ಮಠಮಾನ್ಯಗಳನ್ನು ನಿರ್ಮಿಸಿ ದಾನದತ್ತಿಗಳನ್ನು ನೀಡಿದ್ದಾರೆ. ಕೂಡಲಿ ಶೃಂಗೇರಿಮಠ, ಸತ್ಯಭೋಧಾಚಾರ್ಯರಮಠ, ರಾಘವೇಂದ್ರಸ್ವಾಮಿಗಳಮಠ, ಅಂಕಲಿಮಠ, ತಾತಾಚಾರ್ಯರ ಮಠ, ಮುರುಘರಾಜೇಂದ್ರ ಬೃಹನ್ಮಠ, ಉಜ್ಜಯಿನಿಮಠ, ಮಧ್ವಾಚಾರ್ಯರಮಠ, ಮೈಸೂರು ಮಠ, ಮುಷ್ಟೂರುಮಠ ಮಂತಾದುವುಗಳು ಇವರ ಕಾಲದ ನಿರ್ಮಾಣಗಳಾಗಿವೆ.[೪೯] ಇವುಗಳಲ್ಲಿ ಕೆಲವು ಸಾಕಷ್ಟು ಅಭಿವೃದ್ಧಿಯನ್ನು ಹೊಂದಿ ಈಗಲೂ ವಿದ್ಯಾಭ್ಯಾಸ ಹಾಗು ಭಕ್ತಾಧಿಗಳಿಗೆ ಆಶ್ರಯನೀಡುವ ತಾಣಗಳಾಗಿದ್ದರೆ, ಮತ್ತೆ ಕೆಲವು ಬಹಳಷ್ಟು ಬೆಳೆಯಬೇಕಾಗಿದ.

ಇವುಗಳಲ್ಲಿ ಪ್ರಧಾನವಾದುದು ಎಂದರೆ ಚಿತ್ರದುರ್ಗದ ಬೆಟ್ಟದ ಮೇಲಿರುವ ಮುರುಘರಾಜೇಂದ್ರಮಠ. ಇದು ಕ್ರಿ.ಶ. ೧೬೮೯ರಿಂದ ೧೭೨೧ರವರೆಗೆ ಆಳ್ವಿಕೆ ನಡೆಸಿದ ಬಿಚ್ಚುಗತ್ತಿ ಭರಮಣ್ಣನಾಯಕನು ಚಿತ್ರದುರ್ಗ ಬೃಹನ್ಮಠದ ಪರಂಪರೆಯಲ್ಲಿನ ಎಂಟನೆಯ ಪಟ್ಟಾಧಿಕಾರಿಗಳಾಗಿದ್ದ ಶ್ರೀಮುರಿಗೇಂದ್ರಸ್ವಾಮಿಗಳ ಆಶೀರ್ವಾದಂತೆ ಚಿತ್ರದುರ್ಗದ ರಾಜನಾಗಿದ್ದರಿಂದ ತನ್ನ ಭಕ್ತಿಪೂರ್ವಕ ಕಾಣಿಕೆಯಾಗಿ ಬೆಟ್ಟದ ಮೇಲಿನ ಸಂಪಿಗೆಸಿದ್ದೇಶ್ವರ ದೇವಾಲಯದ ಪಕ್ಕದಲ್ಲಿ ೩೬೦ ಅಂಕಣಗಳ ವಿಸ್ತಾರವಾದ ದೊಡ್ಡ ಮಠವನ್ನು ಕಟ್ಟಿಸಿಕೊಟ್ಟನು. ಅಲ್ಲದೇ ತನ್ನ ಮಕ್ಕಳಲ್ಲೊಬ್ಬನನ್ನು ಅವರ ಸೇವೆಗೆ ನೇಮಿಸಿದ. ಈ ಪ್ರಸಂಗವನ್ನು ಚಿತ್ರದುರ್ಗ ಇತಿಹಾಸದ ಕಡತಗಳಲ್ಲಿ ಸಂಕ್ಷಿಪ್ತವಾಗಿಯೂ, 'ಮಹಾದೇವನ ಮಹಲಿಂಗೇಂದ್ರ ವಿಜಯ'[೫೦] ಎಂಬ ಸಾಹಿತ್ಯ ಕೃತಿಯಲ್ಲಿ ವಿವರವಾಗಿಯೂ ವರ್ಣಿಸಲಾಗಿದೆ. ಇವನು ಈ ಮಠಕ್ಕೆ ನೀಡಿದ ಘಂಟೆಯಲ್ಲಿ ಇವನ ಹೆಸರಿದೆ. ಆದರೆ ಬೆಟ್ಟದ ಮೇಲಿರುವ ಈ ಮೂಲ ಮಠ ಈಗ ಬಳಕೆಯಲ್ಲಿಲ್ಲ. ನಂತರ ಬೆಟ್ಟದ ಕೆಳಗಿರುವ ಈಗಿನ ಮುರುಘಾಮಠವನ್ನು ಕ್ರಿ.ಶ.೧೭೦೩ರಲ್ಲಿ ಸ್ಥಾಪಿಸಲಾಯಿತೆಂದು ತಿಳಿದುರುತ್ತದೆ.

ಬೆಟ್ಟದ ಕೆಳಗಿರುವ ಈ ಮಠವು ನಗರದ ದಕ್ಷಿಣ ಭಾಗದಲ್ಲಿದೆ. ಇದು ವಿಶಾಲವಾದ ವಾಸ್ತುಸ್ಮಾರಕವಾಗಿದ್ದು, ಚಿತ್ರದುರ್ಗ ಪಾಳೆಯಗಾರರ ಧಾರ್ಮಿಕ ವೈಶಾಲ್ಯಕ್ಕೆ ಸಾಕ್ಷಿಯಾಗಿದೆ.

ಈ ಮಠದಲ್ಲಿ ಮಹಾದ್ವಾರ, ಕಂಬಗಳ ಬೃಹತ್ ಹಜಾರ, ಅದಕ್ಕೆ ಹೊಂದಿಕೊಂಡಂತೆ ಅಷ್ಟಕೋನಾಕಾರದ ಗರ್ಭಗೃಹ, ಅದಕ್ಕೆ ಸುತ್ತಲೂ ಪ್ರಾಕಾರ ರೀತಿಯ ಕಂಬಗಳ ಮಂಟಪಗಳನ್ನು ಕಾಣಬಹುದಾಗಿದೆ. ಮಹಾದ್ವಾರವು ವಿಜಯನಗರ ಶೈಲಿಯಲ್ಲಿದೆ. ಪ್ರವೇಶ ಹಾದಿಯ ಇಕ್ಕೆಲಗಳಲ್ಲಿ ಜಗತಿಗಳಿದ್ದು, ಅದರ ಸುತ್ತಲೂ ಭಿತ್ತಿಯಿದೆ. ಮಧ್ಯದಲ್ಲಿ ಒಂದೊಂದು ಕಂಬಗಳಿವೆ. ಈ ದ್ವಾರಮಂಟಪಕ್ಕೆ ಮುಖಭಾಗದಲ್ಲಿ ಹೊಂದಿಕೊಂಡಂತೆ ತೆರೆದ ಮುಖ ಮಂಟಪವಿದ್ದು, ಅದರ ಜಗತಿಯ ಮೇಲೆ ದ್ವಿಕಾಂಡ ಶೈಲಿಯ ಕಂಬಗಳಿವೆ. ಉಪಕಾಂಡದಲ್ಲಿ ಅಶ್ವಸವಾರರ ಶಿಲ್ಪಗಳಿವೆ. ಮಂಟಪದ ಮೇಲೆ ಹದಿನೆಂಟನೆಯ ಶತಮಾನ ದಲ್ಲಿ ನಿರ್ಮಿಸಿದ ಗೋಪುರವಿದ್ದು, ಪ್ರತ್ಯೇಕ ವಾಸ್ತುಲಕ್ಷಣಗಳನ್ನು ಹೊಂದಿದೆ.

ಪ್ರಧಾನ ಸಭಾಂಗಣ ಕಟ್ಟಡವು ಪೂರ್ವ-ಪಶ್ಚಿಮವಾಗಿ ಹದಿನೈದು ಅಂಕಣಗಳನ್ನು, ಉತ್ತರ-ದಕ್ಷಿಣವಾಗಿ ಒಂಭತ್ತು ಅಂಕಣಗಳನ್ನು ಹೊಂದಿ ವಿಶಾಲವಾಗಿದೆ. ಇದರಲ್ಲಿ ಪೂರ್ವಕ್ಕೆ ಮುಖ್ಯ ಪ್ರವೇಶದ್ವಾರ, ಉತ್ತರ ಮತ್ತು ದಕ್ಷಿಣ ದಿಕ್ಕಿಗೆ ಉಪದ್ವಾರಗಳಿವೆ. ಈ ವಿಶಾಲ ಮಂಟಪದ ಪೂರ್ವ, ಉತ್ತರ ಮತ್ತು ದಕ್ಷಿಣ ದಿಕ್ಕಿನ ಒಳಬದಿಯಲ್ಲಿ ಒಂದು ಅಂಕಣದ ಕಂಬಗಳ ಮಂಟಪಗಳಿವೆ. ಪಶ್ಚಿಮ ದಿಕ್ಕಿನಲ್ಲಿ ಮಾತ್ರ ಐದು ಅಂಕಣಗಳನ್ನೊಳಗೊಂಡ ವಿಶಾಲವಾದ ಕಂಬಗಳ ಮಂಟಪವಿದ್ದು, ಅದು ಉಳಿದ ಭಾಗಕ್ಕಿಂತ ಆರು ಅಡಿ ಎತ್ತರದಲ್ಲಿದೆ. ಹಾಗಾಗಿ ಈ ಮಂಟಪಕ್ಕೆ ತೆರಳಲು ಎರಡೂ ಬದಿಯಲ್ಲಿ ಸೋಪಾನಗಳಿವೆ. ಈ ಮಂಟಪದ ಮಧ್ಯದ ನಾಲ್ಕು ಕಂಬಗಳ ನಡುವೆ ಒಂದು ವೇದಿಕೆಯನ್ನು ನಿರ್ಮಿಸಲಾಗಿದೆ. ಈ ಎಲ್ಲಾ ಕಂಬಮಂಟಪಗಳಿಗೆ ಮಟ್ಟಸವಾದ ಬಂಡೆಗಳ ಚಾವಡಿ ಇದ್ದರೆ, ಮುಂದಿನ ವಿಶಾಲವಾದ ಪ್ರಾಂಗಣದಲ್ಲಿ ಈಚೆಗೆ ನಿರ್ಮಿಸಿದ ಎತ್ತರವಾದ ಪ್ರಾಯಶಃ ಲೋಹದ ಚಾವಣಿಯಿದೆ. ಈ ಹಜಾರದಲ್ಲಿ ಎರಡು ರೀತಿಯ ಕಂಬಗಳು ಕಂಡುಬರುತ್ತವೆ. ಮೊದಲನೆಯ ರೀತಿಯ ಕಂಬಗಳು ಎತ್ತರದ ಮಂಟಪದಲ್ಲಿದ್ದು ಕೆಳಗೆ, ಮಧ್ಯ ಮತ್ತು ಮೇಲೆ ಮೂರು ಅಸಮ ಚೌಕಭಾಗಗಳನ್ನು ಒಳಗೊಂಡಿದ್ದು, ಅವುಗಳ ನಡುವೆ ಆರು ಮತ್ತು ಎಂಟು ಮುಖಗಳ ಪಟ್ಟಿಕೆಗಳಿವೆ. ಎರಡನೆಯ ರೀತಿಯ ಕಂಬಗಳು ಕೆಳ ಹಜಾರದ ಸುತ್ತಲಿನ ಮಂಟಪಗಳಲ್ಲಿವೆ. ಇವು ಕೆಳಗೆ ಮತ್ತು ಮೇಲೆ ಅಸಮವಾದ ಚೌಕಭಾಗಗಳನ್ನು ಹೊಂದಿದ್ದು, ಮಧ್ಯದಲ್ಲಿ ದೀರ್ಘವಾಗಿ ಹದಿನಾರು-ಎಂಟು-ಹದಿನಾರು ಮುಖಗಳ ಲಂಬಪಟ್ಟಿಕೆಗಳನ್ನು ಹೊಂದಿವೆ. ಈ ಕಂಬಗಳು ಮೊದಲಿನ ಕಂಬಗಳಿಗಿಂತ ಎತ್ತರವಾಗಿವೆ. ಈ ಎರಡೂ ರೀತಿಯ ಕಂಬಗಳ ಮೇಲೆ ಕೇವಲ ಬೆರಳೆಣಿಕೆಯ ಉಬ್ಬು ಶಿಲ್ಪಗಳು ಕಂಡುಬರುತ್ತವೆ.

ಈ ಕಟ್ಟಡಕ್ಕೆ ಹೊಂದಿಕೊಂಡಂತೆ ದಕ್ಷಿಣಕ್ಕೆ ಇದರಷ್ಟೇ ವಿಸ್ತೀರ್ಣದ ಮತ್ತೊಂದು ಕಟ್ಟಡವಿದೆ. ಅದು ಚಚ್ಚೌಕ ತಲವಿನ್ಯಾಸದ ನಾಲ್ಕು ಅಂಕಣಗಳ ಅಗಲದ ಪ್ರಾಕಾರ ರೀತಿಯ ಮಂಟಪ. ಇದರ ಎರಡೂ ಬದಿಯಲ್ಲಿ ಭಿತ್ತಿಗಳು ಇರುವುದರಿಂದ ಇದು ವಿಶಾಲವಾದ ಮಂಟಪವಾಗಿದೆ. ಈ ಕಟ್ಟಡದ ಮಧ್ಯದಲ್ಲಿ ಅಷ್ಟಕೋನಾಕಾರದ ಮಂಟಪವೊಂದು ಗಮನ ಸೆಳೆಯುತ್ತದೆ. ಅದು ಮಠದ ಕತೃಗುರುಗಳ ಗದ್ದುಗೆ ಗರ್ಭಗೃಹ. ಇದು ಅಷ್ಟಭುಜಾಕೃತಿಯಲ್ಲಿದ್ದು, ಅದರ ಸುತ್ತಲಿನ ಪ್ರದಕ್ಷಿಣಾಪಥವು ಸಹ ಅದೇ ವಿನ್ಯಾಸದಲ್ಲಿದೆ. ಹೀಗಾಗಿ ಚಿತ್ರದುರ್ಗ ಪರಿಸರದಲ್ಲಿ ಇದೊಂದು ವಿಶಿಷ್ಟ ವಿನ್ಯಾಸದ ಕಟ್ಟಡವೆಂದು ಗುರುತಿಸಬಹುದು.

ಒಟ್ಟಿನಲ್ಲಿ ಈ ಮಠವು ಸ್ಥಾಪನೆಯಾದಾಗಿನಿಂದ ಪಾಳೆಯಗಾರರು ಹಾಗು ಇನ್ನಿತರ ಸಂಸ್ಥಾನಗಳವರಿಂದ, ಎಲ್ಲಕ್ಕಿಂತ ಮಿಗಿಲಾಗಿ ಜನಸಾಮಾನ್ಯ ಭಕ್ತರಿಂದ ಗೌರವಾದರಗಳು ಸಲ್ಲುತ್ತಲೇ ಬಂದಿವೆ.

ಅಂಕಲಿಮಠ

ಮುರುಘರಾಜೇಂದ್ರ ಮಠದಂತೆ ಐತಿಹಾಸಿಕವಾಗಿ ಮಹತ್ವ ಪಡೆದ ಚಿತ್ರದುರ್ಗದ ಪಶ್ಚಿಮಕ್ಕಿರುವ ಚಂದ್ರವಳ್ಳಿ ಕೆರೆಯ ದಡದ ಮೇಲೆ ಇರುವ ಅಂಕಲಿಮಠವು ತನ್ನದೇ ಆದ ವೈಶಿಷ್ಟ್ಯವನ್ನು ಹೊಂದಿದ್ದು ಇಂದಿಗೂ ಬಹು ಆಕರ್ಷಣೀಯ ತಾಣವಾಗಿದೆ. ಈ ಮಠವು ಮೂಲತಃ ನೈಸರ್ಗಿಕವಾಗಿರುವ ವಿಶಾಲ ಗವಿಮಠವಾಗಿದೆ. ಇದನ್ನು ಬಿಚ್ಚುಗತ್ತಿ ಭರಮಣ್ಣನಾಯಕನ ಕಾಲದಲ್ಲಿ ಪರದೇಸಪ್ಪನ ಗವಿಯೆಂದು ಕರೆಲಾಗುತ್ತಿತ್ತೆಂದು ಕೆಲವು ಗ್ರಂಥಗಳಲ್ಲಿ ಉಲ್ಲೇಖಗೊಂಡಿದೆ. ಆದರೆ ಬೆಳಗಾಂ ಜಿಲ್ಲೆಯ ಅಂಕಲಗಿ ಎಂಬ ಊರಿನಿಂದ ಬಂದಿದ್ದ ವೀರಶೈವ ಸ್ವಾಮಿಗಳು ಈ ಮಠದಲ್ಲಿ ವಾಸವಾಗಿದ್ದುದರಿಂದ ಈ ಮಠಕ್ಕೆ ಅಂಕಲಿಮಠ ಎಂಬ ಹೆಸರು ಬಂದಿರುವುದಾಗಿ ತಿಳಿದುಬರುತ್ತದೆ.[೫೧] ಈ ಮಠವನ್ನು ವಾಸಕ್ಕಾಗಿ ಬಳಸಿದ್ದು ಕೆಲವು ಕಟ್ಟಡಗಳನ್ನು ಇಲ್ಲಿ ನಿರ್ಮಿಸಲಾಗಿದೆ. ಒಳಗಡೆ ಇಳಿಯಲು ಕಲ್ಲುಚಪ್ಪಡಿಗಳ ಮೆಟ್ಟಿಲುಗಳಿವೆ. ಇದು ಬಹುಪ್ರಾಚೀನ ಸ್ಥಳವಾದರೂ ಇದರಲ್ಲಿ ಪಾಳೆಯಗಾರರು ಕೆಲವು ನಿರ್ಮಿತಿಗಳನ್ನು, ವಿಭಜಕ ಗೋಡೆಗಳನ್ನು ಮತ್ತು ಗವಿಯ ಮುಂಭಾಗದಲ್ಲಿ ಕಂಬಗಳ ಮಂಟಪವನ್ನು ನಿರ್ಮಿಸಿದ್ದಾರೆ.

ಗವಿಯ ಒಳಭಾಗದಲ್ಲಿ ಕೆಲವು ಗಾರೆಯ ಅಲಂಕರಣೆಗಳು ವಿಶೇಷವಾಗಿದ್ದು ಗಮನಸೆಳೆಯುತ್ತವೆ. ಮಾಡಿನ ಸುತ್ತಲಿನ ಗಾರೆಯ ಅಲಂಕರಣೆ ಹೆಚ್ಚು ಕುಸುರಿಯಿಂದ ಕೂಡಿದ್ದು, ಕಲಾತ್ಮಕವಾಗಿದೆ. ಇಲ್ಲಿ ವರ್ಣಚಿತ್ರಕಲೆಯು ಕಂಡುಬರುತ್ತಿದ್ದು ಬಹುಮಟ್ಟಿಗೆ ಮಾಸಿ ಹೋಗಿದೆ. ಉಳಿದ ಚಿತ್ರಗಳಲ್ಲಿ ನಮಸ್ಕಾರ ಮುದ್ರೆಯಲ್ಲಿರುವ ಒಬ್ಬ ವ್ಯಕ್ತಿ ಮತ್ತು ಪುಷ್ಪದ

ಆಕೃತಿಗಳು ಗೋಚರಿಸುತ್ತವೆ. ವ್ಯಕ್ತಿಯ ವೇಷಭೂಷಣಗಳನ್ನು ಗಮನಿಸಿದರೆ ಅದರಲ್ಲಿ ವಿಜಯನಗರದ ಚಿತ್ರಕಲಾಶೈಲಿಗಳು ಕಂಡುಬರುತ್ತವೆ. ಹೊರಭಾಗದ ಮಂಟಪ ತೀರಾ ಸರಳವಾಗಿದೆ.

ಉಳಿದಂತೆ ಮುಷ್ಟೂರುಮಠ, ಶೃಂಗೇರಿಮಠ, ಉಜ್ಜಿನಿಮಠ, ರಾಘವೇಂದ್ರಸ್ವಾಮಿಮಠ, ತಾತಾಚಾರ್ಯರಮಠ ಮುಂತಾದ ಮಠಗಳು ಮೂಲತಃ ಚಿಕ್ಕಚಿಕ್ಕ ಸಮಾಧಿ ಹಾಗು ಮಂಟಪಗಳಾಗಿದ್ದು, ಕ್ರಮೇಣ ಮಠಗಳಾಗಿ ರೂಪುಗೊಂಡಿವೆ. ಇಲ್ಲಿಯ ಕಟ್ಟಡಗಳಲ್ಲಿ ಅಂತಹ ವಿಶೇಷವಾದ ವಾಸ್ತುಲಕ್ಷಣಗಳೇನು ಕಂಡುಬರುವುದಿಲ್ಲ.

ಲೌಕಿಕ ಕಟ್ಟಡಗಳು

ಚಿತ್ರದುರ್ಗ ಪಾಳೆಯಗಾರರ ಕಾಲದಲ್ಲಿ ಧಾರ್ಮಿಕ ಕಟ್ಟಡಗಳಂತೆ ಕೆಲವು ಲೌಕಿಕ ಸ್ಮಾರಕಗಳೂ ನಿರ್ಮಾಣವಾಗಿವೆ. ಅವುಗಳಲ್ಲಿ ಕೋಟೆಗಳು, ಅರಮನೆಗಳು, ಬಾವಿ, ಪುಷ್ಕರಣಿ, ಗರಡಿಮನೆ, ಬೊಂಬೆಚಾವಡಿ ಮುಂತಾದುವುಗಳು ಪ್ರಮುಖವಾಗಿವೆ. ಚಿತ್ರದುರ್ಗ ಪಾಳೆಯಗಾರರು ಚಿತ್ರದುರ್ಗ ಕೋಟೆ ಸಹಿತ ಬ್ರಹ್ಮಗಿರಿ ಕೋಟೆ, ಮೊಳಕಾಲ್ಮೂರು ಕೋಟೆ, ಜಟಂಗರಾಮೇಶ್ವರ ಕೋಟೆ, ವೇಣುಕಲ್ಲುಗುಡ್ಡ, ಹೊಸದುರ್ಗ ಕೋಟೆ, ಭರಮಣ್ಣನಾಯಕನದುರ್ಗ, ಜಾನಕಲ್ಲು ಕೋಟೆ, ಐಮಂಗಲ ಕೋಟೆ, ಸಂತೆಗುಡ್ಡ ಕೋಟೆ, ಸಿಂಗೇನಹಳ್ಳಿ ಕೋಟೆ, ಸುಲ್ತಾನಿಪುರ ಕೋಟೆ ಮುಂತಾದ ಕೋಟೆಗಳನ್ನು ನಿರ್ಮಿಸಿದ್ದಾರೆ. ಈ ಕೋಟೆಗಳನ್ನು ಕಣಿವೆ ಪ್ರದೇಶಗಳಲ್ಲಿ ಪ್ರಾಕೃತಿಕ ಬಂಡೆಗಲ್ಲುಗಳನ್ನು ಬಳಸಿ ನಿರ್ಮಿಸಿದ ತಡೆಗೋಡೆಯ ಕೋಟೆಗಳು, ಪ್ರಾಕೃತಿಕ ಬೆಟ್ಟಗುಡ್ಡಗಳನ್ನು ಕೂಡಿಸಿಕೊಂಡು ರಚಿಸಿರುವ ಕೋಟೆಗಳು, ದಿಂಡುಗಲ್ಲಿನಿಂದ ನಿರ್ಮಿಸಿದ ಕೋಟೆಗಳು, ಬೃಹತ್ ಕಲ್ಲುಗಳಿಂದ ಹಾಗು ಚಿಕ್ಕಚಿಕ್ಕ ಚೆಕ್ಕೆಕಲ್ಲುಗಳನ್ನು ಸೇರಿಸಿ ನಿರ್ಮಿಸಲಾದ ಕೋಟೆಗಳು, ಒರಟುಕಲ್ಲು ಮತ್ತು ಮಣ್ಣಿನಿಂದ ನಿರ್ಮಿಸಿದ ಕೋಟೆಗಳು, ಇಟ್ಟಿಗೆ ಮತ್ತು ಗಾರೆಗಳನ್ನು ಬಳಸಿ ನಿರ್ಮಿಸಿದ ಕೋಟೆಗಳೆಂದು ಗುರುತಿಸಲಾಗಿದೆ.೫೨ ಈ ಕೋಟೆಗಳಲ್ಲಿ ಚಿತ್ರದುರ್ಗ ಕೋಟೆ ಮಾತ್ರ ಅತ್ಯಂತ ವಿಸ್ತಾರವೂ, ಸುಭದ್ರವೂ ಹಾಗು ರಕ್ಷಣಾತ್ಮಕವಾಗಿ ಮಹತ್ವದ್ದಾಗಿದೆ. ಈ ಕೋಟೆಯಲ್ಲಿ ಏಳುಸುತ್ತುಗಳು ಇರುವುವೆಂದು ಹೇಳಲಾಗಿದೆ.

ಕೋಟೆಯ ಒಳಭಾಗದಲ್ಲಿ ಅನೇಕ ದೇವಾಲಯಗಳು, ಮಠ, ಗರಡಿಮನೆ, ಅರಮನೆಯ ನಿವೇಶನ, ಉಗ್ರಾಣಗಳು, ಟಂಕಶಾಲೆ, ಹೊಂಡಗಳು, ಪುಷ್ಕರಣಿಗಳು ಇದ್ದು ಕರ್ನಾಟಕದ ಮಹತ್ವದ ಕೋಟೆಗಳಲ್ಲಿ ಒಂದೆನಿಸಿದೆ. ಇದರ ರಚನೆ, ಆಯಾಕಟ್ಟು ಗಮನಿಸಿದರೆ ರಕ್ಷಣಾವಾಸ್ತು ಕಲೆಗೆ ಪಾಳೆಯಗಾರರು ಸಲ್ಲಿಸಿದ ವಿಶೇಷ ಕೊಡುಗೆಯಾಗಿದೆ

ಎಂದೇ ಹೇಳಬಹುದು. ಉಳಿದ ಕೋಟೆಗಳು ರಚನೆ ಹಾಗು ವಿನ್ಯಾಸದಲ್ಲಾಗಲಿ ಗಮನಸೆಳೆಯುವುದಿಲ್ಲ. ಇವು ಹೊರಗಿನ ಯಾವುದೇ ಪ್ರಬಲ ಆಕ್ರಮಣಗಳನ್ನು ತಡೆಯಲು ನಿರ್ಮಿಸಿದ ಕೋಟೆಗಳಲ್ಲ ಎಂದು ಹೇಳಬಹುದು. ಒಟ್ಟಾರೆ ಕರ್ನಾಟಕದ ರಕ್ಷಣಾ ವಾಸ್ತು ಪರಂಪರೆಯನ್ನು ಹದಿನೆಂಟನೆಯ ಶತಮಾನದವರೆಗೂ ಮುಂದುವರೆಸಿಕೊಂಡು ಬಂದ ಕೀರ್ತಿಗೆ ಇವರು ಪಾತ್ರರಾಗಿದ್ದಾರೆ.

ಪಾಳೆಯಗಾರರು ನಿರ್ಮಿಸಿದ ಜಲಸಂಬಂಧಿ ಕಟ್ಟಡಗಳಲ್ಲಿ ಬಾವಿಗಳು, ಪುಷ್ಕರಣಿಗಳು, ಹೊಂಡಗಳು ಪ್ರಮುಖವಾಗಿವೆ. ಇವುಗಳಲ್ಲಿ ಚಿತ್ರದುರ್ಗದ ಸಂತೆಹೊಂಡವು ಅತ್ಯಂತ ವಿಶಾಲವಾಗಿದ್ದು ಸುತ್ತಲೂ ಮೆಟ್ಟಿಲುಗಳನ್ನು ನಿರ್ಮಿಸಲಾಗಿದೆ. ಈ ಹೊಂಡಕ್ಕೆ ನೀರನ್ನು ತುಂಬಿಸಲು ಮಾಡಿರುವ ವ್ಯವಸ್ಥೆ ಗಮನ ಸೆಳೆಯುತ್ತದೆ. ಅಂತೆಯೇ ಚಿತ್ರದುರ್ಗ ಬೆಟ್ಟದಲ್ಲಿರುವ ಅಕ್ಕ-ತಂಗಿಯರ ಹೊಂಡಗಳು ನೈಸರ್ಗಿಕ ನೀರು ಸಂಗ್ರಹದ ದೊಡ್ಡ ನಿರ್ಮಿತಿಗಳಾಗಿವೆ. ಹೊಳಲ್ಕೆರೆಯ ಒಂಟಿಕಲ್ಲು ಮಠ, ಕಾವಾಡಿಗರಹಟ್ಟಿ, ಚಿತ್ರದುರ್ಗದ ಚನ್ನಕೇಶವ ದೇವಾಲಯದ ಹಿಂದಿನ ಹಾಗು ಕೊಣಚಗಲ್ಲಿನ ಪುಷ್ಕರಣಿಗಳು ತುಂಬಾ ಆಕರ್ಷಕವಾಗಿವೆ. ವಿರಳ ಮಳೆಯಿರುವ ಬಯಲು ಸೀಮೆಯ ಪ್ರದೇಶವಾಗಿರುವ ಚಿತ್ರದುರ್ಗ ಪ್ರದೇಶದಲ್ಲಿ ಇಂತಹ ಬಾವಿ, ಹೊಂಡ, ಕೆರೆ ಹಾಗು ಪುಷ್ಕರಣಿಗಳ ನಿರ್ಮಾಣದ ಮೂಲಕ ಪಾಳೆಯಗಾರರು ಮಳೆ ನೀರು ಸಂಗ್ರಹಿಸುವ ಯೋಜನೆಯನ್ನು ರೂಪಿಸಿರುವುದು ಮಹತ್ವದ ಸಂಗತಿಯಾಗಿದೆ. ಇವುಗಳೇ ಪ್ರಧಾನ ಜಲಮೂಲಗಳಾಗಿದ್ದರಿಂದ ನೀರು ವ್ಯರ್ಥವಾಗಿ ಇಂಗದಂತೆ ಅವುಗಳ ತಳಸಹಿತ ಸುತ್ತಲೂ ಬಂಡೆಗಳಿಂದ ಕಟ್ಟಿ ನೀರು ಇಂಗಿ ಹೋಗದಂತೆ ಮಾಡಿರುವ ತಾಂತ್ರಿಕತೆ ಗಮನಾರ್ಹವೆನಿಸುತ್ತದೆ. ಈ ಬಾವಿ, ಪುಷ್ಕರಣಿ, ಕೆರೆ, ಹೊಂಡಗಳ ತಾಂತ್ರಿಕತೆಯ ಬಗೆಗೆ ಪ್ರತ್ಯೇಕ ಅಧ್ಯಯನದ ಅವಶ್ಯಕತೆಯಿದೆ ಎಂಬುದು ಬಿಂಬಿತವಾಗುತ್ತದೆ. ಲೌಕಿಕ ಸ್ಮಾರಕಗಳಲ್ಲಿ ಅರಮನೆಗಳು ಪ್ರಮುಖವಾಗಿವೆ. ಆದರೆ ಪಾಳೆಯಗಾರರ ಕಾಲದ ಅರಮನೆಯ ನಿವೇಶನದ ಅವಶೇಷವನ್ನು ಮಾತ್ರ ಇಂದು ಕಾಣಬಹುದಾಗಿದೆ.

ಅಡಿಟಿಪ್ಪಣಿಗಳು

೧. ಗೋಪಾಲ್ ಬಾ.ರಾ., ೧೯೯೩, **ಕಲೆ ಮತ್ತು ವಾಸ್ತು**, ಪು.೧

೨. ಬ್ರೂನೋಡಗೆನ್ಸ್, ೧೯೮೫, **ಮಯಮತ'**, ಪು.೩೫

೩. ಗೋಪಾಲ್ ಬಾ.ರಾ., **ಪೂರ್ವೋಕ್ತ**, ಪು.೧

೪. ಪ್ರಭಾಕರ್ ಎಂ.ಎನ್., ೧೯೯೯, **ದೇವಾಲಯಗಳ ವಾಸ್ತುಚಂದ್ರಿಕೆ**, ಪು.೩

೫. ಫಣೀಂದ್ರನಾಥ್‌ಬೋಸ್, ೧೯೭೮, **ಪ್ರಿನ್ಸಿಪಾಲ್ ಆಫ್ ಇಂಡಿಯನ್ ಶಿಲ್ಪಶಾಸ್ತ್ರ**, ಪು.೮

೬. ಆಚಾರ್ಯ ಪಿ.ಕೆ., ೧೯೩೪, **ಎ ಡಿಕ್ಷನರಿ ಆಫ್ ಹಿಂದೂ ಆರ್ಕಿಟೆಕ್ಚರ್ ಆಕಾರ್ಡಿಂಗ್ ಟು ಮಾನಾಸಾರ**

ಶಿಲ್ಪಶಾಸ್ತ್ರ, ಪು.೧

೭. ಪ್ರಭಾಕರ್ ಎಂ.ಎನ್., ೧೯೯೯, **ಪೂರ್ವೋಕ್ತ**, ಪು.೪

೮. ಪ್ರಭಾಕರ್ ಎಂ.ಎನ್., ೧೯೮೭, 'ವಾಸ್ತುಶಿಲ್ಪ' ಕೆಲವು ಟಿಪ್ಪಣಿಗಳು, **ಹರತಿಸಿರಿ**, ಲಕ್ಷ್ಮಣ್‌ತೆಲಗಾವಿ(ಸಂ), ಪು. ೬೦, ೬೧, ೬೨.

೯. ಮುಜುಂದಾರ್ ಆರ್.ಸಿ., **ಭಾರತದ ಪ್ರೌಢ ತಿಹಾಸ**, ಪು.೮೬

೧೦. ರಘುನಾಥ್‌ಭಟ್ ಎಚ್.ಆರ್., ೧೯೭೮, 'ಆರ್ಟ್ ಅಂಡ್ ಆರ್ಕಿಟೆಕ್ಚರ್ ಆಫ್ ಶಾತವಾಹನ ಕದಂಬ ಪಿರಿಯಡ್, ನರಸಿಂಹಮೂರ್ತಿ' (ಸಂ), **ಆರ್ಕಿಯಾಲಾಜಿ ಆಫ್ ಕರ್ನಾಟಕ**, ಪು.೨೧೬ ೨೨೩

೧೧. ಶಿಮರಾಮಕಾರಂತ, ೧೯೯೧, **ಚಾಲುಕ್ಯ ವಾಸ್ತುಶಿಲ್ಪ**, ಪು.೧೨, ೧೯

೧೨. ಗೋಪಾಲ್ ಬಾ.ರಾ., ೧೯೯೩, **ಪೂರ್ವೋಕ್ತ**, ಪು.೧

೧೩. ಸಿಂದಗಿ ರಾಜಶೇಖರ್., ೧೯೮೮, **ಕರ್ನಾಟಕ ವಾಸ್ತುಶಿಲ್ಪ ಮತ್ತು ಚಿತ್ರಕಲೆ**, ಪು.೬೭

೧೪. ಶ್ರೀಕಂಠಶಾಸ್ತ್ರಿ ಎಸ್., ೧೯೯೫, **ಹೊಯ್ಸಳ ವಾಸ್ತುಶಿಲ್ಪ**, ಪು.೨೬

೧೫. ನಾಗರಾಜ್‌ರಾವ್ ಎಚ್.ಎಂ., ೧೯೮೫, **ಹೊಯ್ಸಳ ವಾಸ್ತುಶಿಲ್ಪ**, ಪು.೧೮

೧೬. ದೇವರಕೊಂಡಾರೆಡ್ಡಿ., ೧೯೯೪, **ತಲಕಾಡಿನ ಗಂಗರ ದೇವಾಲಯಗಳ ಒಂದು ಅಧ್ಯಯನ**, ಪು.೧೨೫

೧೭. ಸಾಲತೊರೆ ಆರ್.ಎಸ್., ೧೯೮೨, **ವಿಜಯನಗರ ಆರ್ಟ್**, ಪು.೨೫, ೫೨.

೧೮. ಸಿಂದಗಿ ರಾಜಶೇಖರ್., ೧೯೮೮, **ಪೂರ್ವೋಕ್ತ**, ಪು.೧೮೧

೧೯. ಅದೇ ಪು.೧೭೫

೨೦. ಅದೇ ಪು.೧೮೦

೨೧. ಶಂಕರಯ್ಯ ಅ.ರಾ., ೧೯೭೬, 'ನೀರ್ಥಡಿ ರಂಗನಾಥ ದೇವಾಲಯ', **ಚಂದ್ರವಳ್ಳಿ**, ಭಾಗ-೩, ಎಂ.ವಿ.ಶ್ರೀನಿವಾಸ್, ಲಕ್ಷ್ಮಣ್‌ತೆಲಗಾವಿ (ಸಂ), ಪು.೨೮

೨೨. ಸುರೇಶ್ ಬಿ., ೨೦೦೨, 'ಚಿತ್ರದುರ್ಗ-ದಾವಣಗೆರೆ ಜಿಲ್ಲೆಗಳ ಪುರಾತತ್ವ ಅಧ್ಯಯನ', (ಅಪ್ರಕಟಿತ ಮಹಾಪ್ರಬಂಧ), ಪು.೨೧೯, ೨೨೦

೨೩. ಗಿರಿಜ ಟಿ., ೧೯೮೪, **ಚಿತ್ರದುರ್ಗ ಜಿಲ್ಲಾ ದರ್ಶಿನಿ**, ಪು.೫೪೯.

೨೪. ಎ.ಕ. ಸಂ.೧೧, ದಾವಣಗೆರೆ-೧೬೪(೧೬೬೮ ಎಡಿ), ಮತ್ತು ಅ.ರಾ.ಶಂಕರಯ್ಯ, ೧೯೭೬, **ಪೂರ್ವೋಕ್ತ**, ಪು.೨೮

೨೫. ಎ.ಕ. ಸಂ.೯, ದಾವಣಗೆರೆ-೧೫೭, ಐಬಿಡ್, ದಾವಣಗೆರೆ-೧೬೪, ೧೬೪೮ ಎಡಿ

೨೬. ಎ.ಕ. ಸಂ.೧೧, ದಾ-೧೬೪, ಮತ್ತು ಹಿ.ಚಿ.ಶಾಂತವೀರಯ್ಯ, ೧೯೭೬, 'ಶಾಸನಸ್ಥ ನಾಯಕರು', **ಚಂದ್ರವಳ್ಳಿ**, ಭಾಗ-೨, ಪು.೧೩

೨೭. ಗಿರಿಜ ಟಿ., **ಪೂರ್ವೋಕ್ತ**, ಪು.೨೯

೨೮. ಗೌಡೂರ್ ಎಸ್.ವಿ., ೧೯೭೯, 'ಚಿತ್ರದುರ್ಗದ ದೇವಮಂದಿರಗಳು', **ಐತಿಹಾಸಿಕ ಚಿತ್ರದುರ್ಗ** ಲಕ್ಷ್ಮಣ್‌ತೆಲಗಾವಿ, ಕೆ.ವೆಂಕಣ್ಣಾಚಾರ್ (ಸಂ), ಜಿಲ್ಲಾ ಇತಿಹಾಸ ಸಂಶೋಧನ ಮಂಡಲಿ, ಪು.೬೧, ೬೩,. ಹಿಂದೆ ಐದು ಅಂತಸ್ತುಗಳನ್ನು, ಮೇಲೆ ಬಂಗಾರದ ಕಳಸವನ್ನು ಹೊಂದಿತ್ತು ಎಂದಿದೆ.

೨೯. ಲಕ್ಷ್ಮಣ್‌ತೆಲಗಾವಿ, ಕೆ.ವೆಂಕಣ್ಣಾಚಾರ್, ಹು.ಶ್ರೀ.ಪಾ.ಜೋ (ಸಂ), ೧೯೮೦: **ಚಿತ್ರದುರ್ಗ ದರ್ಶಿನಿ**, ಪು.೯, ೧೦

೩೦. ಲಕ್ಷ್ಮಣ್‌ತೆಲಗಾವಿ, ಎಂ.ವಿ.ಶ್ರೀನಿವಾಸ್ (ಸಂ), ೧೯೯೫, ಹು.ಶ್ರೀ.ಜೋ.ಐ.ಲೇ., ಪು.೨೯೦

೩೧. ಅದೇ ಪು.೩೯೦

೩೨. ಚಿತ್ರದುರ್ಗ ದರ್ಶಿನಿ, **ಪೂರ್ವೋಕ್ತ**, ಪು.೯, ೧೦

೩೩. ಗೌಡೂರ್ ಎಸ್.ವಿ., **ಪೂರ್ವೋಕ್ತ**, ಪು.೬೦

೩೪. ಎ.ಕ. ಸಂ.೧೧, ಚಿತ್ರದುರ್ಗ-೩೧, ಪೂಜಾರಿ ಹೇಳಿಕೆಯ ಪ್ರಕಾರ ಎರಡನೆಯ ಮದಕರಿನಾಯಕನ ಕಾಲದಲ್ಲಿ ನಿರ್ಮಾಣವಾಗಿ ಬಿಚ್ಚುಗತ್ತಿ ಭರಮಣ್ಣನಾಯಕನ ಕಾಲದಲ್ಲಿ ಜೀರ್ಣೋದ್ಧಾರವಾಯಿತು ಎಂದು ತಿಳಿದುಬರುತ್ತದೆ.

೩೫. ಮಂಜುನಾಥ ಕೆ.ವಿ. ೧೯೭೯, 'ಚಿತ್ರದುರ್ಗ ಇತಿಹಾಸದಲ್ಲಿ ಐತಿಹ್ಯ' **ಐತಿಹಾಸಿಕ ಚಿತ್ರದುರ್ಗ**, ಪು.೧೧೭, ೧೧೮

೩೬. ಗೌಡೂರ್ ಎಸ್.ವಿ., **ಪೂರ್ವೋಕ್ತ**, ಪು.೬೮

೩೭. ಅದೇ ಪು.೬೮

೩೮. ಅದೇ ಪು.೬೮

೩೯. ವಸಂತಲಕ್ಷ್ಮಿ ಕೆ., ೨೦೦೫, 'ಚಿತ್ರದುರ್ಗ ಜಿಲ್ಲೆಯ ಕಲ್ಯಾಣ ಚಾಲುಕ್ಯರ ದೇವಾಲಯಗಳು' **ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ**, ಅರ್.ಗೋಪಾಲ್ (ಸಂ), ಪು.೧೯೧

೪೦. **ಮೈಸೂರ್ ಸ್ಟೇಟ್ ಗೆಜೆಟೀರ್- ಚಿತ್ರದುರ್ಗ ಡಿಸ್ಟ್ರಿಕ್ಟ್**, ಪು.೩೯

೪೧. ಲಕ್ಷ್ಮಣ್‌ತೆಲಗಾವಿ (ಸಂ), ೨೦೦೪, 'ಹೆಚ್.ವಿ.ವೀರನಾಯಕ ಹರತಿ', ಪು.೬ (ರಾಜಾ ಕೆಂಚಪ್ಪ ಅಧಿಕಾರಕ್ಕೆ ಬಂದದ್ದು ಕ್ರಿ.ಶ. ೧೫೬೮ರಲ್ಲಿ ಎಂದಿದೆ. ಆದರೆ ಈ ವೇಳೆಗಾಗಲೇ ಅಂದರೆ ಕ್ರಿ.ಶ.೧೫೫೬ರಲ್ಲಿ ಹಿರಿಯೂರು ಮತ್ತಿತಿಮ್ಮಣ್ಣನಾಯಕನ ಸ್ವತಂತ್ರಕ್ಕೆ ಒಳಪಟ್ಟಿತ್ತು.)

೪೨. ಮುಕುಂದರೆಡ್ಡಿ ಮಾ.ನಾ., ಹಿರಿಯೂರು ತಾಲ್ಲೂಕು ದರ್ಶನ, ಪು.೧೦ (ಬಿಚ್ಚುಗತ್ತಿ ಭರಮಣ್ಣನಾಯಕ ತೇರುಮಲ್ಲೇಶ್ವರ ದೇವರ ಪರಮ ಭಕ್ತನಾಗಿದ್ದನೆಂಬುದು ಭರಮಣ್ಣ ನಾಯಕನ ಸಮರ ವಿಜಯದಿಂದ ತಿಳಿದುಬರುತ್ತದೆ. ಅಲ್ಲದೇ ಹಿರಿಯೂರು ಇವನ ಕಾಲದಲ್ಲಿ ಹೆಚ್ಚಿನ ಅಭಿವೃದ್ಧಿಯನ್ನು ಕಂಡಿತು ಎಂದು ತಿಳಿದುಬಂದಿದೆ.)

೪೩. ಪುಟ್ಟಣ್ಣ ಎಂ.ಎಸ್., ೧೯೨೪, **ಚಿತ್ರದುರ್ಗದ ಪಾಳೆಯಗಾರರು**, ಪು.೫

೪೪. ಎ.ಕ. ಸಂ.೧೧

೪೫. ಎಂ.ಎ.ಅರ್. ೧೯೩೯.

೪೬. ಎ.ಕ. ಸಂ.೧೧ ಹೊಳಲ್ಕೆರೆ-೫೪

೪೭. ಮೈಸೂರು ಸ್ಟೇಟ್ ಗೆಜೆಟೀರ್, ಚಿತ್ರದುರ್ಗ ಡಿಸ್ಟ್ರಿಕ್ಟ್, ಪು.೩೪೯

೪೮. ರಂಗಸ್ವಾಮಿ ಡಿ.ಟಿ., ೨೦೦೭, **ಹೊಳಲ್ಕೆರೆ ತಾಲ್ಲೂಕಿನ ಪ್ರಸಿದ್ಧ ದೇವಾಲಯಗಳ ಒಂದು ಸಾಂಸ್ಕೃತಿಕ ಅಧ್ಯಯನ**, ಪು.೧೭

೪೯. ತಿಪ್ಪಣ್ಣ ಮರಿಕುಂಟೆ ಬಿ., ೧೯೭೯, 'ಚಿತ್ರದುರ್ಗದ ಮಠಮಾನ್ಯಗಳು', **ಐತಿಹಾಸಿಕ ಚಿತ್ರದುರ್ಗ**, ಪು.೮೬

೪೯. ಬಸವರಾಜು ಎಲ್.(ಸಂ), ೧೯೮೧, **ಚಿತ್ರದುರ್ಗ**, ಹಾಗು **ತಿಪ್ಪಣ್ಣ** ಮರಿಕುಂಟೆ, **ಪೂರ್ವೋಕ್ತ**, ಪು.೮೯

೫೦. ತಿಪ್ಪಣ್ಣ ಮರಿಕುಂಟೆ ಬಿ., **ಪೂರ್ವೋಕ್ತ**, ಪು.೯೪

೫೧. ತಿಪ್ಪೇಸ್ವಾಮಿ ಎಸ್., ೨೦೦೪, **ರಕ್ಷಣಾ ವಾಸ್ತುಶಿಲ್ಪ-ಚಿತ್ರದುರ್ಗ ಜಿಲ್ಲೆ** (ಅಪ್ರಕಟಿತ ಮಹಾಪ್ರಬಂಧ), ಪು.೧೫೮

ಅಧ್ಯಾಯ ೪

ಮೂರ್ತಿಶಿಲ್ಪ ಮತ್ತು ಚಿತ್ರಕಲೆ

೪

ಮೂರ್ತಿಶಿಲ್ಪ ಮತ್ತು ಚಿತ್ರಕಲೆ

ಮಾನವ ಅಲೆಮಾರಿಯಾಗಿ ಕಾಡಿನಲ್ಲಿ ವಾಸಿಸುವಾಗ ಪ್ರಾಣಿ, ಮಳೆ, ಗುಡುಗು, ಸಿಡಿಲು, ಕಾಳ್ಗಿಚ್ಚು ಮುಂತಾದ ಪ್ರಕೃತಿಯ ಶಕ್ತಿಗಳಿಂದ ಭಯಭೀತನಾಗಿ ತನ್ನ ರಕ್ಷಣೆಗಾಗಿ ದೇವರ ಮೊರೆ ಹೋಗತೊಡಗಿದನು. ನಿಸರ್ಗದಲ್ಲಿ ಎಲ್ಲಕ್ಕಿಂತಲೂ ಮಿಗಿಲಾದ ದೇವರು ಎಂಬ ಅದ್ಭುತ ಶಕ್ತಿ ಇದೆ ಎಂಬ ನಂಬಿಕೆಯುಂಟಾಗಿ ನಿಸರ್ಗದ ರಹಸ್ಯಗಳನ್ನು ಅರಿಯಲು ಮುಂದಾದನು. ಅಷ್ಟೇ ಅಲ್ಲದೆ ನಿಸರ್ಗಶಕ್ತಿಗಳನ್ನು ಪವಿತ್ರ ಪೂಜಾರ್ಹ 'ಆಶ್ಚರ್ಯವತ್ ಪಶ್ಯತಿ' ಎಂದು ಭಾವಿಸಿ ಆರಾಧಿಸಲು ಪ್ರಾರಂಭಿಸಿದರು. ಇದರಿಂದ ಅಂತಹ ಅಗೋಚರ ಶಕ್ತಿಗೆ ಒಂದು ರೂಪ ನೀಡಿ, ಅದನ್ನು ಪ್ರತಿಮೆಯನ್ನಾಗಿಸಿ ಪೂಜಿಸುವ ಪದ್ಧತಿ ಪ್ರಾರಂಭವಾಯಿತು. ಕ್ರಮೇಣ ಇಂತಹ ಪವಿತ್ರ ಸ್ಥಳಕ್ಕೆ ಬೇರೆ ಯಾರೂ ಅಜಾಗರೂಕರಾಗಿ ಓಡಾಡುವುದನ್ನು ನಿಷೇದಿಸಿ, ಅದಕ್ಕೆ ರಕ್ಷಣೆಯನ್ನು ಒದಗಿಸಬೇಕೆಂದು ದೇವಾಲಯಗಳ ರಚನೆ ಪ್ರಾರಂಭವಾಯಿತು.[೧]

ಭಾರತದಲ್ಲಿ ದೇವತಾರಾಧನೆ ಹಾಗು ವ್ಯವಸ್ಥಿತ ದೇವಾಲಯಗಳ ನಿರ್ಮಾಣ ಕಾರ್ಯ ಪ್ರಾರಂಭವಾದಂದಿನಿಂದ ದೇವತಾಮೂರ್ತಿಗಳ ಪ್ರತಿಷ್ಠಾಪನೆ ಹಾಗು ಆರಾಧನೆ ಆರಂಭವಾಯಿತು. ಪ್ರತಿಯೊಂದು ಪಂಥದ ದೇವಾಲಯದಲ್ಲಿ ಆಯಾ ಪಂಥದ ದೇವತಾಮೂರ್ತಿ ಇದ್ದೇ ಇರುತ್ತದೆ. ಇಂತಹ ಮೂರ್ತಿಗಳನ್ನು ಕುರಿತು ಶಾಸ್ತ್ರೀಯವಾಗಿ ಅಧ್ಯಯನ ಮಾಡುವ ಶಾಸ್ತ್ರವನ್ನು ಸ್ಥೂಲವಾಗಿ 'ಮೂರ್ತಿಶಿಲ್ಪಶಾಸ್ತ್ರ' ಎಂದು ಕರೆಯಲಾಗಿದೆ. ಸಾಮಾನ್ಯವಾಗಿ 'ಮೂರ್ತಿ' ಎಂಬ ಶಬ್ಧಗಳನ್ನೊಳಗೊಂಡು ಅದಕ್ಕೆ ಪರ್ಯಾಯವಾಗಿ ಬಳಸಿದ ಶಬ್ಧಗಳಲ್ಲಿ 'ಮೂರ್ತಿ' ಎಂಬುದೊಂದು ಭೌತಿಕವಸ್ತು ಎಂದು ಪರಿಗಣಿಸಲಾಗುತ್ತದೆ. ಏಕೆಂದರೆ 'ದೇವತಾಮೂರ್ತಿ' ಎಂಬ ಶಬ್ಧದಲ್ಲಿ ಮೂರ್ತಿಯೇ ದೇವತೆಯಲ್ಲ, ಮೂರ್ತಿ ದೇವತೆಯದು. ಈ ಕುರಿತು ಇರುವ 'ಪ್ರತಿಮಾ', 'ಬಿಂಬ', 'ಪ್ರತಿಕೃತಿ', 'ವಿಗ್ರಹ', ಮುಂತಾದ ಶಬ್ಧಗಳು ಇದನ್ನು ಇನ್ನೂ ಸ್ಪಷ್ಟವಾಗಿ ಸೂಚಿಸುತ್ತವೆ. ಇಲ್ಲಿ ಒಂದು ನಿರಾಕಾರ ಕಲ್ಪನೆಯನ್ನು ಯಥಾವತ್ತಾಗಿ ಅನುಕರಿಸಿ 'ಸಾಕಾರವಸ್ತು' ಎಂಬ ಪರಿಕಲ್ಪನೆಯಿದೆ.[೨] 'ಅರ್ಚ್ಯ' ಎಂಬ ಶಬ್ಧ

ಪೂಜಿಸಲ್ಪಡುವಂತದ್ದು ಎಂಬ ಅರ್ಥ ನೀಡಿದರೆ, 'ತನು' 'ವಪು' ಮುಂತಾದ ಶಬ್ಧಗಳು ಮೂರ್ತಿಯನ್ನು ದೇಹವನ್ನಾಗಿ ಗ್ರಹಿಸಲು ಹಾಗು ದೇವರನ್ನು ಅದರ ಆತ್ಮವನ್ನಾಗಿ ಪ್ರತ್ಯೇಕಿಸುತ್ತವೆ.[೩]

'ಮೂರ್ತಿ' ಎಂಬ ಪದಕ್ಕೆ ಸಮನಾರ್ಥವಾಗಿ 'ಪ್ರತಿಮೆ' ಎಂಬ ಪದ ಬಳಕೆಯಲ್ಲಿದ್ದು, ಮೂರ್ತಿಶಾಸ್ತ್ರವನ್ನು 'ಪ್ರತಿಮಾಶಾಸ್ತ್ರ' ಎಂದು ಕರೆಯಲಾಗಿದೆ. ಪ್ರತಿಮಾಶಾಸ್ತ್ರ ಅಥವಾ ಪ್ರತಿಮಾಲಕ್ಷಣ ಎಂದರೆ ಒಂದು ದೇವತೆಯ ಲಕ್ಷಣವನ್ನು ಮೂರ್ತಿರೂಪದಲ್ಲಿ ಪ್ರಮಾಣಬದ್ಧವಾಗಿ ಹೇಗೆ ಹಿಡಿಯಬೇಕೆಂಬುದನ್ನು ವಿಧಿಸುವ ಶಾಸ್ತ್ರ. ಅಂದರೆ ಮೂರ್ತಿಯು ಯಾವ ಯಾವ ಅಂಶಗಳನ್ನು ಹೊಂದಿರಬೇಕೆಂದು ತಿಳಿಸುತ್ತದೆ. ಹಾಗಾಗಿ ಶಾಸ್ತ್ರೀಯ ನಿರೂಪಣೆಯ ಪ್ರಕಾರ ಮೂರ್ತಿಯು ಒಂದು ರೂಪ, ಒಂಭತ್ತು ಅಂಗಗಳನ್ನು ಒಳಗೊಂಡಿರಬೇಕು. ಅವುಗಳೆಂದರೆ ನ್ಯಾಸ(ರೂಪಸಂಯೋಜನೆ), ಅಲಂಕಾರ(ಆಭರಣ, ವಸ್ತ್ರ, ಕೇಶ ಮುಂತಾದ), ಮುದ್ರಾ (ಹಸ್ತಮುದ್ರೆಗಳು), ಆಯುಧ(ದೇವತೆಯ ಕೈಯಲ್ಲಿರುವ ಆಯುಧಗಳು), ಭಾಗ್ರಕಕ್ಷ(ಆಸನ), ವಾಹನ(ದೇವತೆಯು ಸವಾರಿಗಾಗಿ ಬಳಸುವ ಪ್ರಾಣಿಗಳು) ಉಪದೇವ(ಮುಖ್ಯ ದೇವತೆಯ ಜೊತೆ ತೋರಿಸುವ ಇತರ ಕಡಿಮೆ ಮಹತ್ವದ ದೇವತೆಗಳು. ಅಂದರೆ ಪುರುಷ ದೇವರ ಸಂದರ್ಭದಲ್ಲಿ ಅವರ ಸ್ತ್ರೀ ದೇವತೆಗಳು), ಅರಿ (ದೇವತೆಯ ವೈರಿ) ಹಾಗೂ ಸ್ತುವಕ (ಭಕ್ತರು ಹಾಗು ಇತರ ಸೇವಕರು).[೪] ಈ ಶಾಸ್ತ್ರೀಯ ಸಂಪ್ರದಾಯಕ್ಕನುಗುಣವಾಗಿಯೇ ದೇವತಾಮೂರ್ತಿಗಳು ರೂಪುಗೊಳ್ಳುತ್ತವೆ.

'ಶಿಲ್ಪ' ಎನ್ನುವ ಪದವು ಮೂರ್ತಿಶಿಲ್ಪ ಎಂಬ ಅರ್ಥದಲ್ಲಿ ರೂಢಿಗತವಾಗಿದ್ದರೂ, ಅದಕ್ಕೆ ತನ್ನದೇ ಆದ ಖಚಿತಾರ್ಥವಿದೆ. 'ಶಿಲ್ಪಕರ್ಮ ಕಲಾಧಿಕಂ'[೫] ಇದು ಅಮರಸಿಂಹನ ಅಮರಕೋಶದ ವಿವರಣೆ. ಕರ್ತೃವಿನ ಅಧಿಕ ಕೌಶಲ್ಯಗಳನ್ನೊಳಗೊಂಡ ಕರ್ಮ ಅಥವಾ ಕ್ರಿಯೆಗೆ 'ಶಿಲ್ಪ'ವೆಂದು ಹೆಸರು ಇದು ತಾಂತ್ರಿಕ ಪರಿಣಿತಿಯನ್ನು ಅಪೇಕ್ಷಿಸುತ್ತದೆ. 'ಶಿಲ್ಪ ಶಬ್ಧಸ್ತಯ ಪುನಃ ಶೀಲ ಸಮಾಧೌ ಇತಿಧಾತೋರ್ಮನಸಃ ಸಮಾಧಾನಕಾರಕಂ ವಸ್ತು ಜಾತಮಿತಿ ಉತ್ಪದ್ಯತೇ'. ಶಿಲ್ಪ ಎಂಬ ಶಬ್ಧವು ಮನಸ್ಸಿಗೆ ಸಮಾಧಾನವನ್ನುಂಟು ಮಾಡುವ ಕ್ರಿಯೆಯಾಗಿದ್ದು, ಕಲೆಯ ದೃಷ್ಟಿಯನ್ನು ಪ್ರತಿಬಿಂಬಿಸುತ್ತದೆ.

ಸಾಮಾನ್ಯವಾಗಿ ಕೆಲವೊಮ್ಮೆ ಶಿಲ್ಪಶಾಸ್ತ್ರವೆಂದರೆ ಮೂರ್ತಿ ಅಥವಾ ಪ್ರತಿಮಾ ರಚನೆ, ಲಕ್ಷಣಗಳು, ಚಿತ್ರರಚನೆ, ತಾಳಮಾನ ಇತ್ಯಾದಿಗಳನ್ನು ಹೆಸರಿಸಿರುವುದುಂಟು. ಆದರೆ ಪ್ರೊ. ಫಣೀಂದ್ರನಾಥಬೋಸ್‌ರವರು ಭಾರತೀಯ ಶಿಲ್ಪಶಾಸ್ತ್ರದ ಮೂಲತತ್ವಗಳನ್ನು ಗುರುತಿಸುವಾಗ ಶಿಲ್ಪಶಾಸ್ತ್ರವೆಂಬ ಪದವನ್ನು ವಾಸ್ತು ಹಾಗು ಪ್ರತಿಮಾಶಾಸ್ತ್ರ ಎರಡನ್ನು ಒಳಗೊಂಡಂತೆ

ವಿವರಿಸಿದ್ದಾರೆ.[೬] ಅದೇ ರೀತಿ ಶುಕ್ರನೀತಿ ಗ್ರಂಥವು ದೇವಾಲಯ, ಅರಮನೆ, ದೇವತಾಮೂರ್ತಿ, ಸಾರ್ವಜನೋಪಯೋಗಿ ಗೃಹಗಳು,ಬಾವಿ, ಪುಷ್ಕರಣಿ ಮುಂತಾದುವುಗಳ ರಚನೆಯನ್ನು ಶಿಲ್ಪಶಾಸ್ತ್ರದಡಿಯಲ್ಲಿ ಗುರುತಿಸುತ್ತದೆ.[೭] ಹಾಗಾಗಿ 'ಶಿಲ್ಪ' ಎಂಬ ಪದವನ್ನು ವಾಸ್ತುಶಿಲ್ಪ ಹಾಗು ಮೂರ್ತಿ ಶಿಲ್ಪಕ್ಕೂ ಬಳಸಲಾಗುತ್ತದೆ.

ಕರ್ನಾಟಕ ಸಹಿತ ಭಾರತ ದೇಶದಲ್ಲಿ ಮೂರ್ತಿಶಿಲ್ಪಕ್ಕೆ ಅನೇಕ ಶತಮಾನಗಳ ಇತಿಹಾಸವಿದೆ. ಪ್ರಾಗೈತಿಹಾಸಿಕ ಕಾಲದಿಂದಲೂ ಶಿಲ್ಪಗಳು ಕಂಡುಬಂದಿವೆ. ವಿಶೇಷವಾಗಿ ಕರ್ನಾಟಕದ ಕಪ್ಪುಗಲ್, ತೆಕ್ಕಲಕೋಟೆ, ಸಂಗನಕಲ್ಲು, ಪಿಕ್ಲಿಹಾಳ್, ಮಸ್ಕಿ ಮುಂತಾದ ನೆಲೆಗಳಲ್ಲಿ ಕೈಗೊಂಡ ಉತ್ಖನನಗಳಿಂದ ನೂತನಶಿಲಾಯುಗ ಹಾಗು ಶಿಲಾತಾಮ್ರಯುಗಕ್ಕೆ ಸೇರಿದ ಎತ್ತು, ಕುರಿ, ಪಕ್ಷಿ, ಮನುಷ್ಯಾಕೃತಿಯ ಸುಡಾವೆಮಣ್ಣಿನ ಬೊಂಬೆಗಳು ದೊರೆತಿವೆ.[೮] ಕೊಪ್ಪಳ ಜಿಲ್ಲೆಯ ಹಿರೇಬೆಣಕಲ್, ಆಗೋಲಿ ಮತ್ತು ಕಲ್ಲಪ್ಪನ ಕ್ಯಾಂಪ್, ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲ್ಲೂಕಿನ ಕುಮತಿ, ಹುಲಿಕುಂಟೆಗಳಲ್ಲಿ ಬೃಹತ್ ಶಿಲಾಯುಗಕ್ಕೆ ಸೇರಿದ ಏಕಶಿಲಾ ಮಾನವಾಕಾರದ ಗೊಂಬೆಗಳು ದೊರೆತಿವೆ.[೯] ಶಿಲಾಯುಗದ ಈ ಸುಡಾವೆ ಮಣ್ಣಿನ ಗೊಂಬೆಗಳು ಮತ್ತು ಕಲ್ಲುಗೊಂಬೆಗಳು ಅಂದಿನ ಜನರ ಧಾರ್ಮಿಕ ನಂಬಿಕೆ, ಮನೋಧರ್ಮ ಮತ್ತು ಕಲಾಭಿಜ್ಞತೆಗಳನ್ನು ನಿದರ್ಶಿಸುತ್ತವೆ. ಇವು ಕರ್ನಾಟಕದ ಮೂರ್ತಿಶಿಲ್ಪದ ಪೂರ್ವಭಾವಿ ಹಂತವನ್ನು ಸೂಚಿಸುತ್ತಾ, ಇತಿಹಾಸ ಕಾಲದ ಮೂರ್ತಿಶಿಲ್ಪ ಕಲೆಗೆ ನಾಂದಿಯಾಗಿವೆ. ಸರಳ, ಚತುರ, ತಾಂತ್ರಿಕ ಕುಶಲತೆಯನ್ನು ತೋರಿಸುವುದರ ಜೊತೆಗೆ, ಆ ಕಾಲದಲ್ಲಿ ಶಿಲ್ಪಿಯು ಕಲ್ಲಿನಲ್ಲಿ ಕೆತ್ತುವ ತಾಂತ್ರಿಕ ಪರಿಣಿತಿಯನ್ನು ಹೊಂದಿದ್ದ ಎಂಬುದಕ್ಕೆ ಸಾಕ್ಷಿಗಳಾಗಿವೆ.[೧೦]

ಭಾರತದ ಪ್ರಾಚೀನ ನಾಗರಿಕತೆಯಾದ ಹರಪ್ಪ ನಾಗರಿಕತೆಯಲ್ಲೂ ಮೂರ್ತಿಶಿಲ್ಪ ತಾಂತ್ರಿಕತೆ ಉತ್ತಮವಾಗಿಯೇ ಬೆಳವಣಿಗೆಯನ್ನು ಸಾಧಿಸಿತ್ತು. ಆ ಕಾಲದ ಅನೇಕ ಲೋಹ ಮತ್ತು ಸುಡಾವೆ ಮಣ್ಣಿನ ವಿಗ್ರಹಗಳು ದೊರೆತಿವೆ. ಅವುಗಳಲ್ಲಿ ಕಂಚಿನ ನರ್ತಕಿಯ ಶಿಲ್ಪ, ಕಲ್ಲಿನ ಗಡ್ಡಧಾರಿ ಮನುಷ್ಯ, ನಗ್ನಪುರುಷ, ನೃತ್ಯನಿರತ ಪುರುಷನ ಶಿಲ್ಪಗಳು ಮತ್ತು ಸುಡಾವೆ ಮಣ್ಣಿನ ಸ್ತ್ರೀ(ದೇವತೆ) ಶಿಲ್ಪಗಳು ಚಕ್ಕಡಿ, ಎತ್ತು, ಆನೆ, ಪಕ್ಷಿ, ಖಡ್ಗಮೃಗ, ಗೂಳಿ ಮೊದಲಾದ ಶಿಲ್ಪಗಳು ದೊರೆತಿವೆ.[೧೧] ಇವು ಮೂರ್ತಿರೂಪಣ ದೃಷ್ಟಿಯಿಂದ ಉತ್ತಮ ಮಟ್ಟದಲ್ಲಿವೆ. ಮತ್ತು ಕ್ರಿಪೂ. ಐದನೆಯ ಶತಮಾನಕ್ಕೆ ಸಂಬಧಿಸಿದ ಕೆಲವು ಮೂರ್ತಿಶಿಲ್ಪಗಳು, ಗಂಗಾಬಯಲಿನ ಮಥುರಾ, ಅಹಿಚಿತ್ರ್, ಬಿಹಾರದ ಚಿರಾಂಡ, ಮಧ್ಯಪ್ರದೇಶದ ಕಾಯಥ್‌ನವ ದಾಥೋಲಿ, ಮಹಾರಾಷ್ಟ್ರದ ನೆವಾಸ,[೧೨] ರಾಜಸ್ತಾನದ ಅರೋರ,[೧೩] ಉತ್ತರ ಪ್ರದೇಶದ ಲಾಲ್‌ಖಿಲಾಗಳಲ್ಲಿ ಕೈಗೊಂಡ ಉತ್ಖನನಗಳಲ್ಲಿ ಪ್ರಾಣಿಗಳ ಮತ್ತು ಮಾತೃದೇವತೆಗಳ

ಮೃಣ್ಮೂರ್ತಿಗಳು ದೊರೆತಿವೆ. ಶಿಲಾಯುಗದ ಮತ್ತು ನಾಗರಿಕತೆಯ ಕಾಲದ ಈ ಮೂರ್ತಿಗಳು ಭಾರತೀಯ ಮೂರ್ತಿಶಿಲ್ಪ ಪರಂಪರೆಗೆ ಮೂಲ ಪ್ರೇರಣೆಗಳಾಗಿವೆ.

ವೇದಗಳ ಕಾಲದ ಸಂಸ್ಕೃತಿಯಲ್ಲಿ ಪ್ರಕೃತಿಶಕ್ತಿಗಳ ಆರಾಧನೆ ಹೆಚ್ಚಾಗಿದ್ದು, ವಿಗ್ರಹ ಅಥವಾ ಮೂರ್ತಿಗಳ ಆರಾಧನೆ ಇರಲಿಲ್ಲ. ಆದರೂ ಇಂದ್ರ, ವರುಣ, ರುದ್ರ ಮುಂತಾದ ಪ್ರಕೃತಿ ದೇವತೆಗಳಿಗೆ ಮನುಷ್ಯ ಅಥವಾ ಮೂರ್ತಿಯಾಕಾರದ ಕಲ್ಪನೆಯನ್ನು ಕೊಟ್ಟಿರುವುದು ಕಂಡುಬರುತ್ತದೆ.[೧೪] ಹಾಗೆಯೇ ರಾಮಾಯಣ, ಮಹಾಭಾರತ ಗ್ರಂಥಗಳಲ್ಲಿಯೂ ದೇವಾಲಯಗಳ ಉಲ್ಲೇಖವಿರುವುದರಿಂದ ಆ ವೇಳೆಗಾಗಲೇ ವಿಗ್ರಹಾರಾಧನೆ ಸ್ವಲ್ಪಮಟ್ಟಿಗೆ ಪ್ರಚಲಿತದಲ್ಲಿತ್ತೆಂಬುದು ತಿಳಿದುಬರುತ್ತದೆ. ವೇದೋತ್ತರ ಕಾಲದ ಗೃಹ್ಯಸೂತ್ರಗಳಲ್ಲಿ ಮೂರ್ತಿಪೂಜೆಯ ಮೊದಲ ಉಲ್ಲೇಖ ಕಂಡುಬರುತ್ತದೆ. ನಂತರದ ಸಾಹಿತ್ಯ ಗ್ರಂಥವಾದ ಶತರುದ್ರೀಯದಲ್ಲಿ ಬ್ರಾಹ್ಮಣ ಸಂಸ್ಕೃತಿಯ ಕೆಲವು ಪ್ರಮುಖ ದೇವತೆಗಳಾದ ವಿಷ್ಣು, ಶಿವ, ಬ್ರಹ್ಮಕುಮಾರ, ವಕ್ರತುಂಡ, ದುರ್ಗ, ಆದಿತ್ಯ ಮುಂತಾದ ದೇವತೆಗಳ ಉಲ್ಲೇಖ ಹಾಗು ದೇವತಾತನಯಗಳಿಗೆ ಗ್ರಾಂಥಿಕ ಆಧಾರಗಳು ಆ ಕಾಲದಲ್ಲೇ ಸಿಗುತ್ತವೆ.[೧೫]

ಚಾರಿತ್ರಿಕ ಕಾಲದಲ್ಲಿ ಮೌರ್ಯ, ಶಾತವಾಹನ ಕಾಲದಿಂದ ಪ್ರಾರಂಭವಾದ ಮೂರ್ತಿ ಶಿಲ್ಪದ ಬೆಳವಣಿಗೆ ಗುಪ್ತರು ಮತ್ತು ಬಾದಾಮಿ ಚಾಲುಕ್ಯರ ಕಾಲದಲ್ಲಿ ಪ್ರವರ್ಧಮಾನವಾಗಿ ಬೆಳೆದು ನಿಂತಿದೆ. ವಿಶೇಷವಾಗಿ ಕರ್ನಾಟಕದಲ್ಲಿ ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯರ ಕಾಲದಲ್ಲಿ ವಿವಿಧ ಆಯಾಮಗಳನ್ನು ಪಡೆಯುತ್ತಾ, ಹೊಯ್ಸಳರ ಕಾಲದಲ್ಲಿ ಉತ್ಕೃಷ್ಟ ಹಂತವನ್ನು ಕಂಡಿದೆ. ವಿಜಯನಗರದ ಅಸ್ತಿತ್ವದೊಂದಿಗೆ ಕರ್ನಾಟಕದ ಮೂರ್ತಿಶಿಲ್ಪ ಮತ್ತೊಂದು ಆಯಾಮವನ್ನು ಪಡೆದುಕೊಳ್ಳುತ್ತದೆ. ಇಲ್ಲಿ ಸಂಖ್ಯಾತ್ಮಕವಾಗಿ ವಿಪುಲವಾಗಿ ಮೂರ್ತಿಶಿಲ್ಪಗಳು ರಚನೆಯಾದರೆ, ಗಾತ್ರದ ದೃಷ್ಟಿಯಿಂದ ಬೃಹತ್ ಪ್ರಮಾಣದ ಶಿಲ್ಪಗಳು ಸೃಷ್ಟಿಯಾಗಿ ಕರ್ನಾಟಕದ ಮೂರ್ತಿಶಿಲ್ಪ ಕಲೆಯನ್ನು ವೈಭವೀಕರಿಸಿದವು.

ವಿಜಯನಗರದ ಕಲಾಪರಂಪರೆ ಮತ್ತು ಸಂಸ್ಕೃತಿಯನ್ನು ಬಳುವಳಿಯಾಗಿ ಪಡೆದುಕೊಂಡ ಅವರ ಅಧೀನ ಪಾಳೆಯಗಾರಿಕ ರಾಜ್ಯಗಳು ವಿಜಯನಗರದ ನೆರಳಿನಲ್ಲಿ ಸಾಗಿದರೂ, ರಾಜಕೀಯ ಮತ್ತು ಆರ್ಥಿಕ ಇತಿಮಿತಿಗಳಿಂದಾಗಿ ವಿಜಯನಗರದ ವೈಭವವನ್ನು ಮುಂದುವರೆಸಲು ಆಗಲಿಲ್ಲ. ಹಾಗಾಗಿ ಪ್ರಾದೇಶಿಕ ಸಂಪನ್ಮೂಲ ಹಾಗು ಸಂಗತಿಗಳಿಗೆ ಆದ್ಯತೆ ನೀಡುವುದು ಅನಿವಾರ್ಯವಾಯಿತು. ಅದರ ಪರಿಣಾಮವಾಗಿ ಮೂರ್ತಿಶಿಲ್ಪ ಕ್ಷೇತ್ರದಲ್ಲಿ ಮತ್ತೊಂದು ಬೆಳವಣಿಗೆ ಉಂಟಾಯಿತು. ಅದು ಪ್ರಾದೇಶಿಕ ಸಂಸ್ಕೃತಿಯನ್ನು ಬಿಂಬಿಸುವ ಶಿಲ್ಪ ಪ್ರಕಾರ ಮತ್ತು ಶೈಲಿಯ ಸೃಷ್ಟಿ. ಸಂಪ್ರದಾಯಬದ್ಧವಾಗಿರದ ಈ ಶೈಲಿ

ಅನೇಕ ಹೊಸ ಅಂಶಗಳನ್ನು ಅಳವಡಿಸಿಕೊಂಡು ಕರ್ನಾಟಕ ಮೂರ್ತಿಶಿಲ್ಪ ಪರಂಪರೆಯನ್ನು ಮುಂದುವರೆಸಿತು. ಈ ಪ್ರಕ್ರಿಯೆಯಲ್ಲಿ ಚಿತ್ರದುರ್ಗ ಪಾಳೆಯಗಾರರ ಪಾತ್ರವೂ ಮಹತ್ವದ್ದಾಗಿದೆ. ಆ ಮಹತ್ವವನ್ನು ಅವರ ಕಾಲದ ಮೂರ್ತಿಶಿಲ್ಪಗಳ ಅಧ್ಯಯನದಿಂದ ಈ ಮುಂದಿನಂತೆ ಗುರುತಿಸಬಹುದಾಗಿದೆ.

ಮೂರ್ತಿಶಿಲ್ಪ

ಚಿತ್ರದುರ್ಗದ ಪಾಳೆಯಗಾರರು ಹಲವಾರು ದೇವಾಲಯ ಸ್ಮಾರಕಗಳನ್ನು ನಿರ್ಮಿಸಿದಂತೆ, ಅವುಗಳಿಗೆ ಪೂರಕವಾಗಿ ಮೂರ್ತಿಶಿಲ್ಪಗಳನ್ನು ಅಳವಡಿಸಿದ್ದಾರೆ. ವಿಜಯನಗರದ ಪ್ರಭಾವದಿಂದಾಗಿ ಈ ಕಾಲದಲ್ಲೂ ಮೂರ್ತಿಶಿಲ್ಪ ಕಲೆ ಹಲವು ಪ್ರಕಾರಗಳಲ್ಲಿ ಬೆಳೆದುಬಂದಿದೆ. ಸಾಮಾನ್ಯವಾಗಿ ದೇವಾಲಯಗಳ ಗರ್ಭಗೃಹಗಳಲ್ಲಿ ಮತ್ತು ಇತರ ಮಂಟಪಗಳಲ್ಲಿ ಬಿಡಿಶಿಲ್ಪಗಳನ್ನು ಕಾಣಬಹುದು. ಈ ಬಿಡಿಶಿಲ್ಪಗಳು ಕೆಲವು ಪೂರ್ಣ ರೂಪದಲ್ಲಿದ್ದರೆ, ಕೆಲವು ಉಬ್ಬುಶಿಲ್ಪಗಳ ರೂಪದಲ್ಲಿವೆ. ದೇವಾಲಯ ಕಟ್ಟಡಗಳ ಕಂಬಗಳ ಮೇಲೆ ವಿಪುಲ ಸಂಖ್ಯೆಯಲ್ಲಿ ಉಬ್ಬುಶಿಲ್ಪಗಳು ಕಂಡುಬರುತ್ತವೆ. ಆದರೆ ಭಿತ್ತಿಗಳ ಮೇಲೆ ಇವು ವಿರಳವಾಗಿವೆ. ದೇವಾಲಯ ಗಳ ಮುಖಮಂಟಪ, ಸಭಾಮಂಟಪಗಳ ಮಾಡಿನ ಅಂಚಿನಲ್ಲಿರುವ ದೇವಕೋಷ್ಠಗಳಲ್ಲಿ ಮತ್ತು ಗರ್ಭಗೃಹಗಳ ಮೇಲಿನ ಶಿಖರ, ಮಹಾದ್ವಾರಗಳ ಮೇಲಿನ ಗೋಪುರಗಳಲ್ಲಿ ಗಾರೆಯ ಪ್ರತಿಮೆಗಳು ಕಂಡುಬರುತ್ತವೆ. ಕೆಲವು ಪ್ರಮುಖ ದೇವಾಲಯಗಳಲ್ಲಿ ದೇವರ ಉತ್ಸವಮೂರ್ತಿಗಳ ಲೋಹದ ಪ್ರತಿಮೆಗಳು ಕೂಡ ಇವೆ. ಮತ್ತು ದೇವಾಲಯಗಳ ರಥಗಳಲ್ಲಿ ಕಾಷ್ಠಶಿಲ್ಪಗಳು ಇವೆಯಾದರೂ, ಅವು ತೀರಾ ಇತ್ತೀಚಿನ ರಚನೆಗಳಾಗಿವೆ.

ಚಿತ್ರದುರ್ಗ ಪಾಳೆಯಗಾರರ ಶಿಲ್ಪಗಳನ್ನು ಧಾರ್ಮಿಕವಾಗಿ ಶೈವ, ವೈಷ್ಣವ ಹಾಗು ಶಾಕ್ತ ಶಿಲ್ಪಗಳೆಂದು ಪ್ರಧಾನವಾಗಿ ವಿಂಗಡಿಸಬಹುದು. ಜೊತೆಗೆ ಜನಪ್ರಿಯ ಪಂಥದಲ್ಲಿ ಆಂಜನೇಯನ ಅನೇಕ ಪ್ರತಿಮೆಗಳನ್ನು ಕಾಣಬಹುದು. ವಿರಳವಾಗಿ ಸೂರ್ಯ, ಪರಶುರಾಮ, ಮುಂತಾದ ಶಿಲ್ಪಗಳೂ ಇವೆ. ಲೌಕಿಕವಾಗಿ ಅರಸರ ಪ್ರತಿಮೆಗಳು, ವೀರಗಲ್ಲುಗಳು, ಮಾಸ್ತಿಕಲ್ಲುಗಳು, ಸ್ಮಾರಕಶಿಲೆಗಳು ಕಂಡುಬರುತ್ತವೆ. ಈ ಎಲ್ಲಾ ಶಿಲ್ಪಗಳ ಶಿಷ್ಟ ರಚನೆಯನ್ನು ಎರಡು ಶೈಲಿಗಳನ್ನಾಗಿ ಗುರುತಿಸಬಹುದು. ಮೊದಲನೆಯದು ಶಿಷ್ಟ ಶೈಲಿ, ಎರಡನೆಯದು ಜಾನಪದೀಯ ಅಥವಾ ಸ್ಥಳೀಯ ಶೈಲಿ. ಶಿಷ್ಟ ಶೈಲಿಯ ಶಿಲ್ಪಗಳು ಪ್ರಾಚೀನ ಪರಂಪರೆಯಂತೆ ಹೆಚ್ಚು ಸಂಪ್ರದಾಯಬದ್ಧವಾಗಿ ರಚಿತವಾಗಿವೆ. ಆದರೆ ಜಾನಪದೀಯ ಶಿಲ್ಪಗಳು ಹೆಚ್ಚು ಪ್ರಾದೇಶಿಕತೆಯನ್ನು ವ್ಯಕ್ತಗೊಳಿಸುತ್ತವೆ. ಈ ಎಲ್ಲಾ ಮೂರ್ತಿಶಿಲ್ಪಗಳ ಮುಖ್ಯ ಪ್ರತಿಮಾ ಲಕ್ಷಣಗಳನ್ನು ಮತ್ತು ವೈಶಿಷ್ಟ್ಯಗಳನ್ನು ಈ ಮುಂದಿನಂತೆ ಗಮನಿಸಬಹುದು.

ಬಿಡಿಶಿಲ್ಪಗಳು

ಶೈವಶಿಲ್ಪಗಳು : ಚಿತ್ರದುರ್ಗ ಪಾಳೆಯಗಾರರ ಕಾಲದ ದೇವಾಲಯಗಳಲ್ಲಿ ಕಂಡು ಬರುವ ಶೈವಶಿಲ್ಪಗಳಲ್ಲಿ ಶಿವ, ಗಣೇಶ, ವೀರಭದ್ರ ಮತ್ತು ಭೈರವನ ಶಿಲ್ಪಗಳು ಮುಖ್ಯವಾಗಿವೆ. ಇವುಗಳಲ್ಲಿ ದೊಡ್ಡೇರಿಯ ಕನೇಶ್ವರ ದೇವಾಲಯ, ಹಂಪನೂರಿನ ರಂಗನಾಥ, ಹುಲ್ಲೂರಿನ ಕಾಳಿಕಾಂಭ, ಜಾನಕಲ್ಲಿನ ಶಂಕರಲಿಂಗೇಶ್ವರ ದೇವಾಲಯಗಳಲ್ಲಿ ಶಿವನ ಕೆಲವು ಅಪರೂಪದ ಶಿಲ್ಪಗಳಿವೆ. ಸಾಮಾನ್ಯವಾಗಿ ಶಿವನನ್ನ ಲಿಂಗರೂಪದಲ್ಲಿ ಪ್ರತಿಷ್ಠಾಪಿಸಿ ಆರಾಧಿಸುವ ಪದ್ಧತಿಯೇ ಹೆಚ್ಚಾಗಿ ಬೆಳೆದು ಬಂದಿದೆ. ಚಿತ್ರದುರ್ಗ ಪರಿಸರದ ದೊಡ್ಡೇರಿಯ ಕನ್ನೇಶ್ವರ, ಜಾನಕಲ್ಲಿನ ಶಂಕರಲಿಂಗೇಶ್ವರ ದೇವಾಲಯಗಳ ಗರ್ಭಗೃಹಗಳಲ್ಲೂ ಇಂತಹ ಶಿವಲಿಂಗಗಳಿವೆ. ಜೊತೆಗೆ ಶಿವನ ಬೇರೆ ಬೇರೆ ರೂಪ ಭಂಗಿಯ ಪ್ರತಿಮೆಗಳನ್ನು ಇಂತಹ ದೇವಾಲಯಗಳಲ್ಲಿ ಪ್ರತಿಷ್ಠಾಪಿಸಲಾಗಿದೆ. ಈ ಶಿಲ್ಪಗಳು ಅಂರತಾಳದಲ್ಲೊ ಅಥವಾ ದೇವಾಲಯದ ಹೊರಗಿನ ವೃಕ್ಷಗಳ ಕಟ್ಟೆಗಳ ಮೇಲೊ ಕಂಡುಬರುತ್ತವೆ.

ಶಿವನ ಶಿಲ್ಪಗಳು : ಹಂಪನೂರು ಮತ್ತು ಹುಲ್ಲೂರಿನ ಶಿವನ ಪ್ರತಿಮೆಗಳು ಹೆಚ್ಚು ಕಡಿಮೆ ಪರಸ್ಪರ ಹೋಲಿಕೆಯಾಗುತ್ತವೆ. ಹುಲ್ಲೂರಿನ ಶಿವ ಸವ್ಯಲಲಿತಾಸನದಲ್ಲಿ ಕುಳಿತಿದ್ದರೆ, ಹಂಪನೂರಿನಲ್ಲಿ ಪದ್ಮಾಸನದಲ್ಲಿ ಕುಳಿತಿದ್ದಾನೆ. ಎರಡಕ್ಕೂ ಚತುರ್ಭುಜಗಳಿದ್ದು, ಹಿಂದಿನ ಕೈಗಳಲ್ಲಿ ತ್ರಿಶೂಲ, ಡಮರುಗಳಿವೆ. ಮುಂದಿನ ಕೈಗಳಲ್ಲಿ ಖಡ್ಗ ಮತ್ತು ಪಾನಬಟ್ಟಲುಗಳಿವೆ. ಹುಲ್ಲೂರಿನಲ್ಲಿನ ಶಿವನ ತಲೆಯ ಮೇಲೆ ಕೀರಿಟ ಮುಕುಟವಿದ್ದು, ಕರಂಡಮುಕುಟ ಮೂರು ಹಂತದಲ್ಲಿದೆ. ಹಂಪನೂರಿನಲ್ಲಿ ಚಿಕ್ಕ ಕರಂಡ ಮುಕುಟವಿದೆ. ಕಿವಿಯಲ್ಲಿ ಪತ್ರಕುಂಡಗಳು ಕೊರಳಲ್ಲಿ ಮಣಿಸರ, ಪದಕಹಾರಗಳಿವೆ. ಹುಲ್ಲೂರಿನ ಶಿವನ ದೇಹದಲ್ಲಿ ಮಾತ್ರ ವೈಜಯಂತಿ ಹಾರವಿದೆ. ತಿಳಿಹಸಿರುಗಪ್ಪಿನ ಈ ಪ್ರತಿಮೆಗಳಲ್ಲಿ ಹಂಪನೂರು ರಂಗನಾಥ ದೇವಾಲಯದ ಶಿಲ್ಪವು ಶೈಲಿ ಮತ್ತು ನಿರೂಪಣೆಯಿಂದ ಹೆಚ್ಚು ಶಿಷ್ಟರೂಪದ್ದೆನಿಸುತ್ತದೆ. ಮೈಮೇಲಿನ ಆಭರಣಗಳು, ಸೊಂಟದ ಸುತ್ತ ಹರಡಿರುವ ಮಣಿಸರಗಳು ಹೆಚ್ಚು ಕುಸುರಿನಿಂದ ಕೆತ್ತಲ್ಪಟ್ಟಿವೆ. ಆದರೆ ಹುಲ್ಲೂರಿನ ಶಿವನ ಶಿಲ್ಪದಲ್ಲಿ ಹೆಚ್ಚು ಪ್ರಾದೇಶಿಕತೆ ವ್ಯಕ್ತವಾಗುತ್ತಿದ್ದು, ಪರಿಪೂರ್ಣತೆ ಕಂಡುಬರುವುದಿಲ್ಲ. ಕಾಲಮಾನ ದೃಷ್ಟಿಯಿಂದಲೂ ಭಿನ್ನವಾಗಿರುವ ಈ ಶಿಲ್ಪಗಳಲ್ಲಿ ಸಂಪ್ರದಾಯ ಬದ್ಧತೆ ಮತ್ತು ಸಂಪ್ರದಾಯ ಸಡಿಲತೆಯ ಸಂದರ್ಭಗಳು ವ್ಯಕ್ತವಾಗುತ್ತವೆ. ದೊಡ್ಡೇರಿಯ ಕನ್ನೇಶ್ವರಸ್ವಾಮಿ ದೇವಾಲಯದಲ್ಲಿ ಇರುವ ಶಿವನ ಶಿಲ್ಪಗಳಲ್ಲಿ ಕುಳಿತ ಭಂಗಿಯಲ್ಲಿರುವ ಶಿವನ ಶಿಲ್ಪವೊಂದು ಮನಹೋಹಕವಾಗಿದೆ. ಅರ್ಧಪದ್ಮಾಸನದಲ್ಲಿ ಕುಳಿತ ಶಿವ ಚತುರ್ಭುಜನಾಗಿದ್ದಾನೆ. ಹಿಂದಿನ ಕೈಗಳಲ್ಲಿ ತ್ರಿಶೂಲ, ಡಮರುಗಳಿವೆ. ಮುಂದಿನ

ಕೈಗಳಲ್ಲಿ ವೀಣೆ ಇದ್ದು ಅದನ್ನು ನುಡಿಸುತ್ತಿರುವಂತಿದೆ. ತಲೆಯ ಮೇಲೆ ಕಿರೀಟ ಮುಕುಟ, ಕಿವಿಗಳಲ್ಲಿ ಪತ್ರಕುಂಡಲ, ಕೊರಳಲ್ಲಿ ಪದಕಹಾರ, ತೋಳುಗಳಲ್ಲಿ ತೋಳ್ಬಂದಿ, ಕೈಕಡಗ, ಕಾಲ್ಕಡಗ, ಯಜ್ಞೋಪವೀತ ಹಾಗು ಕಟೀಬಂಧಗಳಿವೆ. ಹಣೆಯಲ್ಲಿ ಹಣೆಗಣ್ಣು ತೋರಿಸಲಾಗಿದೆ. ಅರೆತೆರೆದ ಕಣ್ಣುಗಳಿದ್ದು, ಕಣ್ಣಿನ ಹುಬ್ಬುಗಳು, ಬಾಯಿ ಎಲ್ಲವೂ ಸಮರ್ಪಕವಾಗಿವೆ. ಆದರೆ ಮೂಗು ಭಗ್ನವಾಗಿರುವುದು ದುರದೃಷ್ಟಕರ ಸಂಗತಿ. ಈ ಶಿಲ್ಪದ ಮುಖದಲ್ಲಿ ಪ್ರಶಾಂತಭಾವ ಹೊಮ್ಮುತ್ತಿದೆ. ಕಿರೀಟ, ಮುಖಭಾವ, ಕೊರಳ ಆಭರಣಗಳನ್ನು ಗಮನಿಸಿದಾಗ ಈ ಶಿಲ್ಪವು ಅಜಂತಾದ ಚಿತ್ರಕಲೆಯ ಕೆಲವು ವ್ಯಕ್ತಿಗಳ ರೂಪವನ್ನು ಹೋಲುತ್ತದೆ. ತಿಳಿಕಪ್ಪು, ತಿಳಿಹಸಿರು ಶಿಲೆಯ ಈ ಶಿಲ್ಪವು ಪ್ರಾಯಶ: ಪಾಳೆಯಗಾರರ ಆರಂಭಿಕ ಕಾಲದ್ದೆಂದು ತೋರುತ್ತಿದ್ದು, ಮೂರ್ತಿಶಿಲ್ಪ ಕ್ಷೇತ್ರಕ್ಕೆ ಅವರ ವಿಶಿಷ್ಟ ಕೊಡುಗೆ ಎಂದೇ ಹೇಳಬಹುದು.

ವೀರಭದ್ರನ ಶಿಲ್ಪಗಳು : ಶೈವ ಶಿಲ್ಪಗಳಲ್ಲಿ ಶಿವನ ರೂಪಗಳಾದ ವೀರಭದ್ರ ಹಾಗು ಭೈರವನ ಶಿಲ್ಪಗಳು ಕಂಡುಬಂದಿವೆ. ಹಿರಿಯೂರು ಮತ್ತು ಹೊಸದುರ್ಗದ ವೀರಭದ್ರೇಶ್ವರ ದೇವಾಲಯಗಳಲ್ಲಿ ವೀರಭದ್ರನ ಶಿಲ್ಪಗಳಿವೆ. ವೀರಭದ್ರನು ತ್ರಿಭಂಗಿಯಲ್ಲಿ ನಿಂತಿದ್ದು, ಚರ್ತುಭುಜನಾಗಿದ್ದಾನೆ. ಹಿಂದಿನ ಕೈಗಳಲ್ಲಿ ಬಿಲ್ಲು ಬಾಣಗಳು, ಮುಂದಿನ ಕೈಗಳಲ್ಲಿ ಖಡ್ಗ, ಖೇಟಕಗಳಿವೆ. ತಲೆಯ ಮೇಲೆ ಕರಂಡ ಮುಕುಟ, ಕಿವಿಯೋಲೆ, ಭುಜಹಾರ, ಕೊರಳಲ್ಲಿ ಮಣಿಸರ, ತೋಳ್ಬಂದಿ, ಕೈಕಡಗ, ಕಾಲ್ಕಡಗ ಮುಂತಾದ ಆಭರಣಗಳಿವೆ. ಸೊಂಟದಲ್ಲಿ ದೋತಿಯಿದ್ದು, ಮೇಲೆ ಕೀರ್ತಿಮುಖದ ಡಾಬು ಇದೆ. ಅದಕ್ಕೆ ಮಣಿಸರಗಳು ಇಳಿಬಿದ್ದಿವೆ. ಈ ಶಿಲ್ಪಗಳಲ್ಲಿ ಹಿರಿಯೂರಿನ ಶಿಲ್ಪವು ಪಾಳೆಯಗಾರರ ಕಾಲದ ಶಿಲ್ಪ ಲಕ್ಷಣಗಳನ್ನು ಸಂಪೂರ್ಣವಾಗಿ ಬಿಂಬಿಸುತ್ತದೆ. ಶಿಷ್ಟ ಮತ್ತು ಜಾನಪದೀಯ ಅಂಶಗಳು ಬಹಳ ಹದವಾಗಿ ಬೆರೆತ ಸಂದರ್ಭ ಈ ಶಿಲ್ಪದಲ್ಲಿ ವ್ಯಕ್ತವಾಗುತ್ತದೆ. ಹಿರಿಯೂರಿನ ತೇರುಮಲ್ಲೇಶ್ವರ ದೇವಾಲಯದಲ್ಲಿನ ನವಗ್ರಹ ಮಂಟಪದಲ್ಲಿರುವ ವೀರಭದ್ರನ ಶಿಲ್ಪವು ಪ್ರಾಯಶಃ ಪಾಳೆಯಗಾರರ ಕೊನೆಗಾಲದಲ್ಲಿ ರಚನೆಯಾದಂತೆ ತೋರುತ್ತಿದ್ದು ತೀರಾ ಜಾನಪದೀಯ ಆಂಶಗಳನ್ನು ಹೊಂದಿದೆ. ಮುಖ ಹಾಗು ದೇಹದ ರಚನೆ ಪ್ರಮಾಣಬದ್ಧವಾಗಿಲ್ಲ. ಇಡೀ ಶಿಲ್ಪದಲ್ಲಿ ಯಾವುದೇ ಭಾವವು ಸ್ಪಷ್ಟತೆಯಿಂದ ಕೂಡಿಲ್ಲ. ಹೀಗಾಗಿ ವಾಸ್ತುಶಿಲ್ಪದಂತೆ ಮೂರ್ತಿಶಿಲ್ಪವೂ ಕೂಡ ಸಾಂಪ್ರದಾಯಿಕ ನೆಲೆಯನ್ನು ದಾಟಿ ಸಾಮಾನ್ಯ ಸಮುದಾಯದ ಅಭಿವ್ಯಕ್ತಿಯಾಗಿ ಮೂಡಿಬಂತು ಎಂಬುದನ್ನು ಈ ಶಿಲ್ಪಗಳು ಅಭಿವ್ಯಕ್ತಗೊಳಿಸುತ್ತವೆ.

ಭೈರವನ ಶಿಲ್ಪಗಳು : ಅಂಬಲಗೆರೆ ಮತ್ತು ಜಾನಕಲ್ಲುಗಳಲ್ಲಿ ಭೈರವನ ಶಿಲ್ಪಗಳಿವೆ. ಜಾನಕಲ್ಲಿನ ಭೈರವನ ಶಿಲ್ಪ ಒಂದು ವಿಶಿಷ್ಟ ರಚನೆ. ತ್ರಿಭಂಗಿಯಲ್ಲಿ ನಿಂತಿರುವ ಭೈರವ ಚರ್ತುಬಾಹುವಾಗಿದ್ದು,

ಹಿಂದಿನ ಕೈಗಳಲ್ಲಿ ತ್ರಿಶೂಲ, ಡಮರುಗಳಿದ್ದು, ಮುಂದಿನ ಕೈಗಳಲ್ಲಿ ಖಡ್ಗ ಮತ್ತು ದಕ್ಷನ ರುಂಡವಿದೆ. ತಲೆಯ ಮೇಲಿರುವ ಜಟಾಮುಕುಟ ತುರುಬಿನಂತೆ ಕಟ್ಟಿದ್ದು ತುಂಬಾ ವಿಶಿಷ್ಟವೆನಿಸುತ್ತದೆ. ಕಿವಿಯಲ್ಲಿ ವಿಶಾಲವಾದ ಪತ್ರಕುಂಡಲಗಳು ಗಮನಸೆಳೆಯುತ್ತವೆ. ವೈಜಯಂತಿಹಾರ, ಕಟೀಬಂಧ, ಯಜ್ಞೋಪವೀತ, ಪದಕಹಾರಗಳಿವೆ. ಸೊಂಟದಲ್ಲಿ ಚೂರಿ ಇದೆ. ನಗ್ನರೂಪದಲ್ಲಿರುವ ಈ ಶಿಲ್ಪ ಕುಸುರಿ ಅಂಶಗಳಿಂದಾಗಿ ಗಮನಸೆಳೆಯುವಂತಹುದು. ಪ್ರಾಯಶಃ ಪಾಳೆಯಗಾರರ ಆರಂಭದ ಕಾಲದ್ದಾಗಿರಬಹುದಾದ ಈ ಶಿಲ್ಪದಲ್ಲಿ ಚಾಲುಕ್ಯ ಶೈಲಿಯ ಅಂಶಗಳು ಕಂಡುಬರುತ್ತವೆ. ಇದೊಂದು ಚಿತ್ರದುರ್ಗ ಪರಿಸರದ ವಿಶಿಷ್ಟ ಶಿಲ್ಪವೆಂದೇ ಹೇಳಬಹುದು.

ಅಂಬಲಗೆರೆಯ ರಂಗನಾಥ ದೇವಾಲಯದಲ್ಲಿರುವ ಭೈರವನ ಶಿಲ್ಪ ಪಾಳೆಯಗಾರರ ಕಾಲದ ಶಿಲ್ಪ ಲಕ್ಷಣಗಳನ್ನು ಸಶಕ್ತವಾಗಿ ಅಭಿವ್ಯಕ್ತಗೊಳಿಸುತ್ತದೆ. ಹರಡಿರುವ ಜಟಾಗಳು, ಮುಖಭಾವ, ದೇಹದ ಅಂಗಿಕ ರಚನೆ, ಮೈಮೇಲಿನ ಆಭರಣಗಳಲ್ಲಿ ಪ್ರಾದೇಶಿಕತೆ ಅಂಶಗಳು ದಟ್ಟವಾಗಿವೆ. ವೈಜಯಂತಿ ಹಾರದಲ್ಲಿ ರುಂಡ ಮಾಲೆಗಳನ್ನು ಬಿಡಿಸಿರುವುದು ವಿಶೇಷವಾಗಿದೆ. ಜಾನಕಲ್ಲಿನ ಭೈರವ ಶಿಲ್ಪಕ್ಕೂ ಮತ್ತು ಈ ಶಿಲ್ಪಕ್ಕೂ ಸಾಕಷ್ಟು ವ್ಯತ್ಯಾಸಗಳಿವೆ. ಒಂದು ಶಿಷ್ಟ ಶೈಲಿಯು ಜಾನಪದೀಯಗೊಂಡಾಗ ಯಾವ ರೂಪದಲ್ಲಿರುತ್ತದೆ ಎನ್ನುವುದಕ್ಕೆ ಇವೆರೆಡೂ ಶಿಲ್ಪಗಳು ಸಾಕ್ಷಿಯಾಗುತ್ತವೆ.

ಗಣೇಶ ಶಿಲ್ಪಗಳು : ಶಿವನ ಮಗನಾದ ಗಣೇಶ, ಸರ್ವಪಂಥಗಳಿಗೂ ಪ್ರಿಯನಾದ ದೇವರು. ಹಾಗಾಗಿ ಎಲ್ಲಾ ಪಂಥದ ದೇವಾಲಯಗಳಲ್ಲಿ ಗಣೇಶನ ಶಿಲ್ಪಗಳು ಕಂಡುಬರುತ್ತವೆ. ಚಿತ್ರದುರ್ಗ ಪರಿಸರವೂ ಕೂಡ ಇದಕ್ಕೆ ಹೊರತಾಗಿಲ್ಲ. ಚಿತ್ರದುರ್ಗ ಬೆಟ್ಟದ ವಿನಾಯಕ, ಚಿತ್ರದುರ್ಗದ ಚನ್ನಕೇಶವ, ಹೊಳಲ್ಕೆರೆ ಬಯಲುಗಣಪತಿ, ದೊಡ್ಡೇರಿ, ಜಾನಕಲ್ಲು, ಹುಲ್ಲೂರಿನ ದೇವಾಲಯಗಳಲ್ಲಿ ಗಣೇಶನ ವಿಗ್ರಹಗಳಿವೆ. ಈ ವಿಗ್ರಹಗಳು ಸಾಮಾನ್ಯವಾಗಿ ಸುಖಾಸೀನದಲ್ಲಿ ಕುಳಿತ ಭಂಗಿಯಲ್ಲಿದ್ದು ಚತುರ್ಭುಜಗಳನ್ನು ಹೊಂದಿವೆ. ಹಿಂದಿನ ಕೈಗಳಲ್ಲಿ ಪಾಶಾಂಕುಶಗಳು, ಮುಂದಿನ ಕೈಗಳಲ್ಲಿ ಭಗ್ನದಂತ ಮತ್ತು ಫಲ(ಬೀಜಪೂರ)ಗಳಿವೆ. ತಲೆಯ ಮೇಲೆ ಕರಂಡಮುಕುಟವಿದ್ದು, ಕೊರಳಲ್ಲಿ ಪದಕಹಾರ, ಕೈಕಡಗ ಕಾಲ್ಕಡಗ, ಪಾದಸರ, ಭುಜಹಾರ, ವೈಜಯಂತಿಹಾರಗಳಿಂದ ಅಲಂಕೃತಗೊಂಡಿವೆ. ಹೊಟ್ಟೆಗೆ ಹಾವನ್ನು (ನಾಗೋದರಬಂಧ) ಸುತ್ತಲಾಗಿರುತ್ತದೆ. ಇವಿಷ್ಟು ಸಾಮಾನ್ಯ ಲಕ್ಷಣಗಳು. ಇದರಲ್ಲಿ ಜಾನಕಲ್ಲು, ದೊಡ್ಡೇರಿ ಮತ್ತು ಹುಲ್ಲೂರಿನ ದೇವಾಲಯಗಳಲಿರುವ ಶಿಲ್ಪಗಳಲ್ಲಿ ಈ ಎಲ್ಲಾ ಸಂಗತಿಗಳು ಇಲ್ಲದೆ ಸರಳವಾಗಿವೆ. ಈ ಗಣೇಶ ಶಿಲ್ಪಗಳಲ್ಲಿ ಪ್ರಾದೇಶಿಕವಾಗಿ ಮೂರು ಶೈಲಿಗಳನ್ನು

ಗುರುತಿಸಬಹುದು. ಹೊಳಲ್ಕೆರೆಯ ಬಯಲು ಗಣಪತಿಯ ಶಿಲ್ಪ ಶೈಲಿ, ಕೆತ್ತನೆ ಮತ್ತು ಸಾಂಪ್ರದಾಯಿಕ ಲಕ್ಷಣಗಳಿಂದ ಪರಿಪೂರ್ಣವೆನಿಸಿದರೆ, ಹೊಳಲ್ಕೆರೆಯ ಬಯಲು ಗಣಪತಿ ದೇವಾಯಲದ ಗರ್ಭಗೃಹದಲ್ಲಿರುವ ಚಿಕ್ಕ ಗಣೇಶನ ಶಿಲ್ಪವು ಎಲ್ಲಾ ಪ್ರತಿಮಾ ಲಕ್ಷಣಗಳನ್ನು ಒಳಗೊಂಡು ಪ್ರಾದೇಶಿಕ ಶೈಲಿಯಲ್ಲಿ ಬಿಂಬಿತವಾಗಿದೆ. ಉಳಿದ ಶಿಲ್ಪಗಳು ಲಕ್ಷಣಗಳಲ್ಲಾಗಲಿ, ಶೈಲಿಯಲ್ಲಾಗಲಿ ಪರಿಪೂರ್ಣವೆನಿಸುವುದಿಲ್ಲ. ಇವು ಹೆಚ್ಚು ಸಾಂಕೇತಿಕ ರೂಪದಲ್ಲಿವೆ.

ದೊಡ್ಡೇರಿಯ ಕನ್ನೇಶ್ವರ ದೇವಾಲಯದ ಆವರಣದಲ್ಲಿರುವ ಗಣೇಶನ ಶಿಲ್ಪವಂತೂ ಪ್ರಮಾಣ ಮತ್ತು ಶೈಲಿಯಲ್ಲಿ ಅಸಹಜತೆಯಿಂದ ಕೂಡಿದೆ. ಪ್ರಾಯಶಃ ಇದು ಆಧುನಿಕ ಸಂದರ್ಭದಲ್ಲಿ ಗಣೇಶನನ್ನು ಕೆಲವು ಸಾಂಕೇತಿಕ ರೂಪಗಳಲ್ಲಿ ತೋರಿಸುವ ಪದ್ಧತಿಯ ಮೂಲ ರೂಪಗಳೆಂದು ಗುರುತಿಸಬಹುದಾಗಿದೆ. ಹೀಗೆ ಶಿಷ್ಟ ಪರಿಧಿಯಿಂದ ಹೊರಬಂದ ಸಂಪ್ರದಾಯಗಳು ಜನಸಮುದಾಯದ ಕೈವಶವಾದಾಗ ಹೇಗೆ ಸಾಮಾನ್ಯ ವಿಭಿನ್ನ ರೂಪು ಪಡೆದುಕೊಳ್ಳುತ್ತವೆ ಎಂಬುದಕ್ಕೆ ಈ ಶಿಲ್ಪಗಳು ಸಾಕ್ಷಿಯಾಗಿವೆ. ಗಣೇಶನಿಗೆ ಸಂಬಂಧಿಸಿದ ಪ್ರಾದೇಶಿಕ ಅಂಶಗಳ ಸೇರ್ಪಡೆಯ ದೃಷ್ಟಿಯಿಂದ ಹೊಳಲ್ಕೆರೆಯ ಬಯಲು ಗಣೇಶ ಗಮನಸೆಳೆಯುತ್ತದೆ. ಈ ಶಿಲ್ಪಕ್ಕೆ ತಲೆಯ ಹಿಂದೆ ಆಭರಣಸಹಿತ ಜಡೆಯಿರುವುದು ಕುತೂಹಲದಾಯಕವಾಗಿದೆ.

ದೊಡ್ಡೇರಿಯ ಕನ್ನೇಶ್ವರಸ್ವಾಮಿ ದೇವಾಲಯದಲ್ಲಿ ವೃಷಭಾರೂಢನಾದ ವ್ಯಕ್ತಿಯ ಒಂದು ಶಿಲ್ಪವಿದೆ. ಇದರ ಮುಖ ಭಗ್ನವಾಗಿದೆ. ಕಿವಿಯಲ್ಲಿ ಓಲೆಗಳು, ಕೊರಳಲ್ಲಿ ಸರಗಳು, ತೋಳ್ಬಂದಿ, ಮುಂಗೈ ಮತ್ತು ಕಾಲುಗಳಲ್ಲಿ ಕಡಗಗಳನ್ನು ಹೊಂದಿದ್ದು, ಬಲಗೈಯಲ್ಲಿ ಘಂಟೆಯನ್ನು ಹಿಡಿದಿದ್ದಾನೆ. ಅಪರೂಪವೆನಿಸುವ ಈ ಶಿಲ್ಪ ಶೈವ ಸಂತನದೆಂದು ತೋರುತ್ತದೆ. ಪ್ರಾದೇಶಿಕ, ಧಾರ್ಮಿಕ ಸಂಗತಿಗಳು ಶಿಲ್ಪದ ರಚನೆಯಲ್ಲಿ ವ್ಯಕ್ತವಾಗಿರುವುದು ಇದರಿಂದ ತಿಳಿಯುತ್ತದೆ.

ಇತರೆ ಶಿಲ್ಪಗಳು : ಮೇಲಿನ ಶಿಲ್ಪಗಳ ಜತೆಗೆ ಶೈವಪರಂಪರೆಗೆ ಸಂಬಂಧಿಸಿದ ಗುಂಡಬ್ರಹ್ಮಯ್ಯಗಳ(ಶೂಲಬ್ರಹ್ಮ) ಶಿಲ್ಪ, ಶೈವಯತಿಗಳ ಮತ್ತು ನಂದಿಯ ಶಿಲ್ಪಗಳು ಇವೆ. ಹೊಸದುರ್ಗದ ವೀರಭದ್ರಸ್ವಾಮಿ ದೇವಾಲಯದಲ್ಲಿರುವ ಶೂಲಬ್ರಹ್ಮ ಶಿಲ್ಪವು ಪಾಳೆಯಗಾರರ ಕಾಲದ ಶಿಲ್ಪ ಲಕ್ಷಣಗಳನ್ನು ಒಳಗೊಂಡಿದೆ. ವೀರಶೈವ ಪರಂಪರೆಯ ಗುಂಡಯ್ಯ ಮತ್ತು ಬ್ರಹ್ಮಯ್ಯರೆಂಬ ವ್ಯಕ್ತಿಗಳು ಅಕ್ಕಪಕ್ಕದಲ್ಲಿ ನಿಂತಿದ್ದು ಒಂದೊಂದು ಕೈಗಳಲ್ಲಿ ಖಡ್ಗವನ್ನು ಎತ್ತಿಹಿಡಿದಿದ್ದಾರೆ. ಇವರಿಬ್ಬರ ಮಧ್ಯೆ ಶೂಲವಿದೆ. ಹಾಗೆಯೆ ಇವರಿಬ್ಬರ ಬದಿಯಲ್ಲಿ ಸ್ತ್ರೀಶಿಲ್ಪಗಳಿವೆ. ಇವರ ವೇಷಭೂಷಣಗಳು ಪಾಳೆಯಗಾರರ ಕಾಲದ ವೇಷಭೂಷಣಗಳನ್ನು

ಸ್ಪಷ್ಟವಾಗಿ ಪ್ರತಿಬಿಂಬಿಸುತ್ತವೆ. ಪ್ರಾಚೀನ ಸಂಗತಿಯನ್ನು ಅಭಿವ್ಯಕ್ತಿಸುವಾಗ ಪಾಳೆಯಗಾರರ ಶಿಲ್ಪಗಳು ಅದನ್ನು ಸಮಕಾಲೀನಗೊಳಿಸಿರುವ ಸಂಗತಿ ಈ ಶಿಲ್ಪದ ಮೂಲಕ ವ್ಯಕ್ತವಾಗುತ್ತದೆ. ಅದೇ ರೀತಿ ಚಿತ್ರದುರ್ಗ ಬೆಟ್ಟದ ಮೇಲಿನ ಸಂಪಿಗೆಸಿದ್ದೇಶ್ವರ ದೇವಾಲಯದಲ್ಲಿರುವ ಶೂಲಬ್ರಹ್ಮ ಶಿಲ್ಪವು ಸ್ವಲ್ಪ ಲಕ್ಷಣಗಳಿಂದ ವಿಭಿನ್ನವಾಗಿದೆ. ಇಲ್ಲಿ ಗುಂಡಯ್ಯ ಮತ್ತು ಬ್ರಹ್ಮಯ್ಯರು ಅಕ್ಕಪಕ್ಕದಲ್ಲಿ ನಿಂತಿದ್ದಾರೆ. ಒಬ್ಬನು ಎಡಗೈಯಲ್ಲಿ, ಮತ್ತೊಬ್ಬನು ಬಲಗೈಯಲ್ಲಿ ಶೂಲವನ್ನು ಹಿಡಿದಿದ್ದಾರೆ. ಇವರ ಇನ್ನೊಂದು ಕೈಗಳಲ್ಲಿ ಲಿಂಗಗಳಿವೆ. ಇವರ ದೇಹದ ಮೇಲೆಲ್ಲಾ ಆಭರಣಗಳಿವೆ. ಇದು ಪಾಳೆಯಗಾರರ ಆರಂಭಿಕ ಕಾಲದ ಶಿಲ್ಪವೆಂದು ತೋರುತ್ತದೆ. ಇದು ಹೆಚ್ಚು ಶಿಷ್ಟರೂಪದಲ್ಲಿದೆ. ಇವುಗಳಲ್ಲದೆ ಹಿರಿಯೂರಿನ ತೇರುಮಲ್ಲೇಶ್ವರ ದೇವಾಲಯದಲ್ಲಿ ಯತಿಯ ಶಿಲ್ಪವಿದ್ದು, ಪೀಠದ ಮೇಲೆ ಕುಳಿತ ಯತಿಯ ಪಾದಸೇವೆಯನ್ನು ಓರ್ವ ರಾಣಿ ಮಾಡುತ್ತಿರುವ ದೃಶ್ಯ ಹಾಗು ಹುಲ್ಲೂರಿನ ಸಿದ್ದೇಶ್ವರ ದೇವಾಲಯದ ಧ್ಯಾನಾಸಕ್ತ ಯತಿಯ ಶಿಲ್ಪಗಳು ಸಾಮಾನ್ಯವಾಗಿವೆ. ಜಾನಕಲ್ಲಿನ ಶಂಕರಲಿಂಗೇಶ್ವರ ದೇವಾಲಯದಲ್ಲಿರುವ ನಂದಿಯ ಶಿಲ್ಪವು ಮಧ್ಯಮ ಪ್ರಮಾಣದಲ್ಲಿದ್ದು ಹಣೆಪಟ್ಟಿ, ಜೂಲು, ಕೊರಳ ಘಂಟೆ, ಗೆಜ್ಜೆಸರಗಳಿಂದ ಅಲಂಕೃತವಾಗಿದ್ದು, ಆಕರ್ಷಕವಾಗಿದೆ.

ವೈಷ್ಣವ ಶಿಲ್ಪಗಳು : ವಿಷ್ಣು ಪ್ರಧಾನವಾಗಿ ವೈಷ್ಣವ ಮತ ಬೆಳೆದು ಬಂದಿತು. ವಿಷ್ಣುವನ್ನು ಇಪ್ಪತ್ನಾಲ್ಕು ರೂಪಗಳಲ್ಲಿ ಆರಾಧಿಸುವ ಪರಂಪರೆಯಿದೆ. ಅವನ ಬೇರೆ ಬೇರೆ ರೂಪದ ಶಿಲ್ಪಗಳನ್ನು ಚರಿತ್ರೆಯುದ್ದಕ್ಕೂ ಕಾಣಬಹುದು. ಚಿತ್ರದುರ್ಗ ಪರಿಸರದಲ್ಲಿ ಕೂಡ ರಂಗನಾಥನ ಹೆಸರಿನಲ್ಲಿ ವಿಷ್ಣುವಿನ ಆರಾಧನೆ ಅತ್ಯಂತ ಜನಪ್ರಿಯವಾಗಿದೆ. ಚಿತ್ರದುರ್ಗ ಪಾಳೆಯಗಾರರು ಕಟ್ಟಿಸಿದ ದೇವಾಲಯಗಳಲ್ಲಿ ಹೆಚ್ಚಿನವು ವೈಷ್ಣವ ಪಂಥದ ರಂಗನಾಥ ದೇವಾಲಯಗಳೆಂಬುದು ಗಮನಾರ್ಹ. ಇಲ್ಲಿಯ ಎಲ್ಲಾ ಗರ್ಭಗೃಹಗಳಲ್ಲಿ ವೆಂಕಟೇಶ್ವರ ರೂಪದ ವಿಷ್ಣುವಿನ ಶಿಲ್ಪಗಳು ಹೆಚ್ಚಾಗಿವೆ. ಜೊತೆಗೆ ವೇಣುಗೋಪಾಲ ಹಾಗು ಪ್ರಸನ್ನ ನರಸಿಂಹ ಶಿಲ್ಪಗಳೂ ಉಂಟು. ಚಿತ್ರದುರ್ಗದ ಬೆಟ್ಟದ ಮೇಲಿನ ಗೋಪಾಲಸ್ವಾಮಿ ಮತ್ತು ಹೊಳಲ್ಕೆರೆಯ ವೇಣುಗೋಪಾಲಸ್ವಾಮಿ ದೇವಾಲಯಗಳಲ್ಲಿ ವೇಣುಗೋಪಾಲನ ಶಿಲ್ಪಗಳಿವೆ. ಕೃಷ್ಣ ದ್ವಿಭಂಗಿಯಲ್ಲಿ ನಿಂತು ಕೊಳಲು(ವೇಣು) ನುಡಿಸುತ್ತಿದ್ದಾನೆ. ತಲೆಯಲ್ಲಿ ಕೇಶವನ್ನು ತುರುಬು ಕಟ್ಟಲಾಗಿದೆ. ಕೊರಳಲ್ಲಿ ಪದಕಹಾರ, ಭುಜಕೀರ್ತಿ, ತೋಳ್ಬಂದಿ, ಕೈಕಡಗ, ಕಾಲ್ಕಡಗ, ಯಜ್ಞೋಪವೀತ, ಮಣಿಮಾಲೆಯುಳ್ಳ ಕಟೀಬಂಧಗಳಿವೆ. ವೇಣುಗೋಪಾಲನ ಇಕ್ಕೆಲಗಳಲ್ಲಿ ಗೋಪಿಕಾ ಸ್ತ್ರೀಯರಿದ್ದಾರೆ. ಪ್ರಭಾವಳಿಯಲ್ಲಿ ಮಕರತೋರಣದ ವೃತ್ತಗಳಲ್ಲಿ ವಿಷ್ಣುವಿನ ದಶಾವತಾರದ ಚಿತ್ರಗಳನ್ನು ರೂಪಿಸಲಾಗಿದೆ. ಎರಡೂ ಶಿಲ್ಪಗಳು ಕೆತ್ತನೆಯಲ್ಲಿ ಸೂಕ್ಷ್ಮತೆಯನ್ನು ಹೊಂದಿದ್ದು, ಚಾಲುಕ್ಯ ಶೈಲಿಯನ್ನು ಬಿಂಬಿಸುತ್ತವೆ. ಈ ಶಿಲ್ಪಗಳಲ್ಲಿ ಹೆಚ್ಚು ಪರಿಪೂರ್ಣತೆಯಿರುವುದರಿಂದ ಪಾಳೆಯಗಾರರ

ಪ್ರಾರಂಭಿಕ ಕಾಲದ ಶಿಲ್ಪಗಳೆಂದು ತೋರುತ್ತವೆ. ರಂಗನಾಥ ಎಂದು ಕರೆಯುವ ವೆಂಕಟೇಶ್ವರನ ಶಿಲ್ಪಗಳು ಜಾನಕಲ್ಲು, ಅಬ್ಬಿನಹೊಳೆ, ನೀರ್ಥಡಿ, ಅಂಬಲಗೆರೆ, ಜೋಡಿರಂಗಾಪುರ, ಹೊಳಲ್ಕೆರೆ, ಹೊರಕೆರೆದೇವರಪುರ, ಪಂಡರಹಳ್ಳಿ, ಚಿತ್ರದುರ್ಗದ ವೆಂಕಟರಮಣ, ಚನ್ನಕೇಶವ ದೇವಾಲಯಗಳಲ್ಲಿ ಕಂಡುಬರುತ್ತವೆ. ಈ ಎಲ್ಲಾ ಶಿಲ್ಪಗಳು ಸಾಮಾನ್ಯವಾಗಿ ಗರ್ಭಗೃಹದಲ್ಲಿರುತ್ತವೆ.

ಈ ಶಿಲ್ಪಗಳಲ್ಲಿ ವಿಷ್ಣು ಸಮಭಂಗಿಯಲ್ಲಿದ್ದು ಚತುರ್ಭುಜಗಳನ್ನು ಹೊಂದಿದ್ದಾನೆ. ಹಿಂದಿನ ಕೈಗಳಲ್ಲಿ ಶಂಖ, ಚಕ್ರಗಳಿವೆ. ಮುಂದಿನ ಕೈಗಳು ಅಭಯ ಮತ್ತು ವರದ ಮುದ್ರೆಯಲ್ಲಿವೆ. ಆದರೆ ಅಂಬಲಗೆರೆ, ಜೋಡಿರಂಗಾಪುರದ ಶಿಲ್ಪಗಳಲ್ಲಿ ಅಭಯ ಮುದ್ರೆ ಬದಲಿಗೆ ಗದಾಗಳಿವೆ. ತಲೆಯ ಮೇಲೆ ಕಿರೀಟ ಮುಕುಟವಿದ್ದು, ಕಿವಿಯಲ್ಲಿ ಕುಂಡಲಗಳು, ಭುಜಕೀರ್ತಿಗಳು, ಕೊರಳಲ್ಲಿ ವಿವಿಧ ರೀತಿಯ ಸರಗಳು ಕೌಸ್ತುಭಹಾರ, ಭುಜಸರ, ತೋಳ್ಬಂದಿ, ಕೈಕಡಗ, ಕಾಲ್ಕಡಗಳಿವೆ. ಜಾನಕಲ್ಲಿನ ವೆಂಕಟೇಶ್ವರ ಶಿಲ್ಪವು ಆಕರ್ಷಕವಾಗಿದ್ದು, ಶಿಲ್ಪಕಲೆಯ ದೃಷ್ಟಿಯಿಂದ ಪರಿಪೂರ್ಣವೆನಿಸುತ್ತದೆ. ಈ ಶಿಲ್ಪ ಮತ್ತು ಅಂಬಲಗೆರೆಯ ಶಿಲ್ಪಗಳ ಇಕ್ಕೆಲಗಳಲ್ಲಿ ಶ್ರೀದೇವಿ, ಭೂದೇವಿಯರ ಶಿಲ್ಪಗಳಿವೆ. ನೀರ್ಥಡಿಯ ರಂಗನಾಥ ಶಿಲ್ಪವು ನೀಳವಾಗಿದ್ದು ಹೆಚ್ಚಿನ ಅಲಂಕರಣೆಯನ್ನು ಹೊಂದಿಲ್ಲ. ಇದೇ ರೀತಿ ಅಬ್ಬಿನಹೊಳೆ, ಅಂಬಲಗೆರೆ, ಹೊರಕೆರೆದೇವರಪುರ ಹಾಗು ಚಿತ್ರದುರ್ಗದ ವೆಂಕಟರಮಣ ದೇವಾಲಯಗಳ ಶಿಲ್ಪಗಳು ಜಾನಪದೀಯ ಅಂಶಗಳನ್ನು ಹೆಚ್ಚಾಗಿ ಪ್ರತಿಬಿಂಬಿಸುತ್ತವೆ. ಇವುಗಳ ವೇಷಭೂಷಣಗಳು, ಪ್ರಭಾವಳಿಯಲ್ಲಿನ ಹೂಬಳ್ಳಿಗಳ ರಚನೆಗಳು, ಕೀರ್ತಿಮುಖದ ಅಲಂಕರಣೆ ಎಲ್ಲವೂ ಶಾಸ್ತ್ರೀಯವಾಗಿಲ್ಲ. ಸ್ಥಳೀಯ ಶಿಲ್ಪಗಳು ಮೂಲ ಮೂರ್ತಿಯಲ್ಲಿ ಶಿಲ್ಪಶಾಸ್ತ್ರೀಯ ಅಂಶಗಳನ್ನಿಟ್ಟುಕೊಂಡು ಪ್ರಭಾವಳಿ, ಕೀರ್ತಿಮುಖ ಮತ್ತು ದೇಹದ ಆಭರಣ, ವಸ್ತ್ರಗಳ ವಿನ್ಯಾಸದಲ್ಲಿ ತಮ್ಮ ಸ್ವಂತಿಕೆಯನ್ನು ಪ್ರದರ್ಶಿಸಿರುವುದು ಇವುಗಳಿಂದ ವ್ಯಕ್ತವಾಗುತ್ತದೆ.

ವೈಷ್ಣವ ಪರಂಪರೆಗೆ ಸಂಬಂಧಿಸಿದ ಇತರ ಶಿಲ್ಪಗಳು ಕೂಡ ಇವೆ. ಅವುಗಳಲ್ಲಿ ಹೊಳಲ್ಕೆರೆ, ನೀರ್ಥಡಿ, ಚಿತ್ರದುರ್ಗ, ಹೊರಕೆರೆದೇವರಪುರ, ನಂದಿಹಳ್ಳಿಗಳಲ್ಲಿ ಗರುಡನ ಶಿಲ್ಪಗಳು, ಜೋಡಿರಂಗಾಪುರದಲ್ಲಿ ಪ್ರಸನ್ನನರಸಿಂಹ, ಚಿತ್ರದುರ್ಗದ ಗೋಪಾಲಸ್ವಾಮಿ ಮತ್ತು ನೀರ್ಥಡಿಯ ರಂಗನಾಥಸ್ವಾಮಿ ದೇವಾಲಯಗಳಲ್ಲಿ ಆಳ್ವಾರರ ಪ್ರತಿಮೆಗಳಿವೆ. ಗರುಡ ಶಿಲ್ಪಗಳು ಸಾಮಾನ್ಯವಾಗಿ ಮಧ್ಯಮ ಮತ್ತು ಚಿಕ್ಕ ಪ್ರಮಾಣದಲ್ಲಿವೆ. ಗರುಡನು ಗರುಡಾಸನದಲ್ಲಿ(ಹಾರುವ ಭಂಗಿ)ಕುಳಿತಿದ್ದಾನೆ. ತಲೆಯ ಮೇಲೆ ಕರಂಡಮುಕುಟ, ಕಿವಿಯಲ್ಲಿ ಪದ್ಮಕುಂಡಲಗಳು, ಕೊರಳಲ್ಲಿ ಮಣಿಸರಗಳು, ಭುಜಹಾರ, ಯಜ್ಞೋಪವಿತ, ವೈಜಯಂತಿಮಾಲೆ, ಕಟೀಬಂಧ, ಕೈಕಡಗ, ಕಾಲ್ಕಡಗ ಹಾಗು ತೋಳ್ಬಂದಿಗಳಿವೆ. ಕೈಗಳು ಅಂಜಲಿಮುದ್ರೆ

(ಕೈಮುಗಿಯುವ)ಯಲ್ಲಿವೆ. ಈಶಿಲ್ಪಗಳಲ್ಲಿ ಹೊಳಲ್ಕೆರೆ, ಹೊರಕೆರೆದೇವರಪುರದ ಶಿಲ್ಪಗಳು ಆಕರ್ಷಕವಾಗಿವೆ. ಇವುಗಳಲ್ಲಿ ಚಾಲುಕ್ಯಶೈಲಿಯ ಪ್ರಭಾವವನ್ನು ಗುರುತಿಸಬಹುದು. ಉಳಿದಂತೆ ಎಲ್ಲಾ ಶಿಲ್ಪಗಳು ಪಾಳೆಯಗಾರರ ಲಕ್ಷಣಗಳನ್ನು ಒಳಗೊಂಡಿವೆ.

ಜೋಡಿರಂಗಾಪುರದ ಲಕ್ಷ್ಮೀನರಸಿಂಹ ಶಿಲ್ಪವು ಪದ್ಮಾಸನದಲ್ಲಿ ಕುಳಿತಿದ್ದು, ಚರ್ತುಭಾಹುಗಳನ್ನು ಹೊಂದಿದೆ. ಹಿಂದಿನ ಕೈಗಳಲ್ಲಿ ಶಂಖಚಕ್ರಗಳಿದ್ದು, ಮುಂದಿನ ಕೈಗಳು ಮಂಡಿಯ ಮೇಲಿಟ್ಟಿವೆ. ತೊಡೆಯ ಮೇಲೆ ಲಕ್ಷ್ಮಿ ಆಸೀನಳಾಗಿದ್ದಾಳೆ. ಈ ಮೂರ್ತಿ ಪ್ರಮಾಣಬದ್ಧವಾಗಿಲ್ಲ. ಕೆತ್ತನೆಯಲ್ಲಿ ಪರಿಪೂರ್ಣತೆಯಿಲ್ಲ ಹಾಗು ಶೈಲಿಯಲ್ಲಿ ಆಕರ್ಷಣೆಯಿಲ್ಲ. ಆದರೆ ವಿಷಯದ ಆಯ್ಕೆಯ ದೃಷ್ಟಿಯಿಂದ ಇದು ಈ ಪ್ರದೇಶದಲ್ಲಿ ಅಪರೂಪದ್ದೆನಿಸುತ್ತದೆ. ನೀರ್ಥಡಿಯ ರಂಗನಾಥ ಮತ್ತು ಚಿತ್ರದುರ್ಗದ ಗೋಪಾಲಸ್ವಾಮಿ ದೇವಾಲಯಗಳಲ್ಲಿ ಹನ್ನೆರಡು ಜನ ಆಳ್ವಾರರ ವಿಗ್ರಹಗಳು ಕಂಡುಬರುತ್ತವೆ. ಅವರುಗಳಲ್ಲಿ ಪೆರಿಯಾಳ್ವಾರ್, ತಿರುಮುಂಗೈಳ್ವಾರ್, ಪುದುತ್ತಾಳ್ವಾರ್, ಕುಲಶೇಖರಾಳ್ವರ್, ತೊಡರಾಳ್ವಾರ್, ಭಾಷ್ಯಕಾರ, ಮಧುರಕವಿ, ನಮ್ಮಾಳ್ವಾರ್ ಮತ್ತು ವಿಪ್ರನಾರಾಯಣರು ಪ್ರಮುಖವಾಗಿದ್ದಾರೆ. ಇವು ಪದ್ಮಾಸನದಲ್ಲಿ ಕುಳಿತ ಭಂಗಿಯಲ್ಲಿದ್ದು ಕೈಗಳು ಅಂಜಲಿಮುದ್ರೆಯಲ್ಲಿವೆ. ತಲೆಯ ಹಿಂಬದಿಯಲ್ಲಿ ಜುಟ್ಟುಗಳಿವೆ. ಸಾಮಾನ್ಯವಾಗಿ ಭಾರತದ ಪ್ರಸಿದ್ಧ ವೈಷ್ಣವ ದೇವಾಲಯಗಳಲ್ಲಿ ಆಳ್ವಾರರ ವಿಗ್ರಹಗಳಿವೆ. ಆ ಪರಂಪರೆಯಂತೆ ಪಾಳೆಯಗಾರರು ತಾವು ನಿರ್ಮಿಸಿದ ಎಲ್ಲಾ ವೈಷ್ಣವ ದೇವಾಲಯಗಳಲ್ಲಿ ಸಾಧ್ಯವಾಗದೇ ಹೋದರೂ, ಒಂದೆರೆಡು ದೇವಾಲಯಗಳಲ್ಲಿ ಆಳ್ವಾರರ ವಿಗ್ರಹಗಳನ್ನು ಪ್ರತಿಷ್ಠಾಪಿಸಿ ಆ ಪರಂಪರೆಯನ್ನು ಮುಂದುವರೆಸಿರುವುದು ಮಹತ್ವದ ವಿಷಯವಾಗಿದೆ. ಶಿಲ್ಪಶಾಸ್ತ್ರ ದೃಷ್ಟಿಯಿಂದ ನೋಡುವುದಾದರೆ ಇಂತಹ ಶಿಲ್ಪಗಳ ಕೆತ್ತನೆಗೆ ವಿಶೇಷ ಪರಿಶ್ರಮವೇನು ಬೇಕಾಗುವುದಿಲ್ಲ. ಕೆಲವು ಸಾಮಾನ್ಯ ಲಕ್ಷಣಗಳಲ್ಲಿಯೇ ಆಳ್ವಾರರನ್ನು ಪ್ರತಿಬಿಂಬಿಸಬಹುದು. ಹಾಗಾಗಿ ಈ ಪ್ರಾದೇಶಿಕ ಹಾಗು ಸ್ಥಳೀಯ ಸಂಗತಿಗಳು ಹೆಚ್ಚು ಪ್ರಕಟವಾಗಲು ಆಸ್ಪದವಿರುವುದಿಲ್ಲ. ಆದ್ದರಿಂದ ಇಂತಹ ಶಿಲ್ಪಗಳು ಯಾವುದೇ ಕಾಲದಲ್ಲಿ ರಚನೆಯಾದರೂ ಅವು ಪ್ರಾಚೀನ ಶಿಲ್ಪಗಳಂತೆಯೇ ತೋರುತ್ತವೆ.

ಶಾಕ್ತ ಶಿಲ್ಪಗಳು : ಚಿತ್ರದುರ್ಗ ಪಾಳೆಯಗಾರರ ಕಾಲದ ಪ್ರತಿಮೆಗಳಲ್ಲಿ ಶಿವ ಮತ್ತು ವಿಷ್ಣು ದೇವತೆಗಳ ಸಂಗಾತಿಯಾಗಿ ಅನೇಕ ದೇವಿಯ ಶಿಲ್ಪಗಳು ಕಂಡುಬರುತ್ತವೆ. ದೇವಿಯ ಶಿಲ್ಪಗಳಲ್ಲಿ ಶೈವ ಮತ್ತು ವೈಷ್ಣವ ಪರಂಪರೆಯನ್ನು ಒಳಗೊಂಡಂತೆ ಕಾಳಿ, ಮಹಾಲಕ್ಷ್ಮಿಯ ಶಿಲ್ಪಗಳು ಹೆಚ್ಚಾಗಿವೆ. ಮಾರ್ಕಂಡೇಯಪುರಾಣ ದೇವಿಮಹಾತ್ಮೆಯಲ್ಲಿ ಆಕೆಯ ಸಾತ್ವಿಕ ಅಭಿವ್ಯಕ್ತಿಯು ಸರಸ್ವತಿ ಎಂದು, ರಾಜಸಾಂಶವು ಲಕ್ಷ್ಮಿ ಎಂದು, ತಾಮಸಿಕ ಅಭಿವ್ಯಕ್ತಿಯು

ಮಹಾಕಾಳಿಯೆಂದು ಪ್ರಸ್ತಾಪಗಳಿವೆ. ಹಾಗಾಗಿ ಲಕ್ಷ್ಮಿಯನ್ನು ವೈಷ್ಣವ ಪಂಥಕ್ಕೆ, ಕಾಳಿಯನ್ನು ಶೈವ ಪಂಥಕ್ಕೆ ಸೇರಿಸಲಾಗದು. ಈ ಎಲ್ಲಾ ದೇವತೆಗಳು ಪ್ರಧಾನವಾಗಿ ಶಾಕ್ತಪಂಥ ಪ್ರತ್ಯೇಕವಾಗಿ ಬೆಳೆದಿದೆ. ಇದರಲ್ಲಿ ದೇವಿಯನ್ನು ಬೇರೆಬೇರೆ ರೂಪದಲ್ಲಿ ಆರಾಧಿಸುವ ಕ್ರಮ ಪ್ರಾಚೀನ ಕಾಲದಿಂದಲೂ ಬೆಳೆದುಬಂದಿದೆ.

ಮಹೇಶ್ವರಿ ಅಥವಾ ರೌದ್ರಿಯ ಕೆಲವು ಶಿಲ್ಪಗಳಿವೆ. ಇವುಗಳಲ್ಲಿ ಕುಂದುರ್ಪಿಯ ವೀರಭದ್ರಸ್ವಾಮಿ ದೇವಾಲಯದ ಮಹೇಶ್ವರಿಯ ಶಿಲ್ಪವು ಪ್ರಾಚೀನದ್ದಾಗಿದೆ. ದ್ವಿಬಾಹುವುಳ್ಳ ದೇವಿಯು ಸವ್ಯಲಲಿತಾಸನದಲ್ಲಿ ಆಸೀನಳಾಗಿದ್ದಾಳೆ. ಬಲಗೈಯಲ್ಲಿ ಖಡ್ಗ, ಎಡಗೈಯಲ್ಲಿ ಪಾನಬಟ್ಟಲು ಇದೆ. ತಲೆಯ ಮೇಲೆ ಕರಂಡಮುಕುಟ, ಕೊರಳಲ್ಲಿ ಪದಕಹಾರಗಳು, ಮಣಿಸರ, ಭುಜಹಾರ, ತೋಳಿನಲ್ಲಿ ನಾಗಬಂಧಿ, ಕೈಕಡಗ, ಕಾಲ್ಕಡಗ, ಚನ್ನವೀರ, ದೀರ್ಘವಾದ ರುಂಡಮಾಲೆಗಳಿವೆ. ಶಿಲ್ಪವು ಕೆತ್ತನೆಯ ದೃಷ್ಟಿಯಿಂದ ಸಾಮಾನ್ಯವಾದರೂ, ಅಂಗಸೌಷ್ಠವತೆಗಳ ಕೆತ್ತನೆ ದೃಷ್ಟಿಯಿಂದ ಪರಿಪೂರ್ಣವಾಗಿದೆ. ಇದು ಪಾಳೆಯಗಾರರ ಕಾಲದ ಆರಂಭಿಕ ಹಂತದ ಶಿಲ್ಪವಾಗಿದೆ. ಇದೇ ರೀತಿಯ ಮತ್ತೊಂದು ಶಿಲ್ಪ ಹಂಪನೂರಿನ ರಂಗನಾಥಸ್ವಾಮಿ ದೇವಾಲಯದಲ್ಲಿದೆ. ಶಿವನ ಪಕ್ಕವಿರುವ ದೇವಿಯ ಶಿಲ್ಪವಿದು. ಇಲ್ಲಿಯೂ ಕೂಡ ಸವ್ಯಲಲಿತಾಸನದಲ್ಲಿ ಕುಳಿತಿದ್ದಾಳೆ. ಚತುರ್ಭುಜಗಳಿದ್ದು, ಹಿಂದಿನ ಕೈಗಳಲ್ಲಿ ತ್ರಿಶೂಲ, ಡಮರು, ಮುಂದಿನ ಕೈಗಳಲ್ಲಿ ಖಡ್ಗ ಮತ್ತು ಪಾನಬಟ್ಟಲುಗಳಿವೆ. ಸುತ್ತಲೂ ಪ್ರಭಾವಳಿಯಿದ್ದು ಅದರ ಲಲಾಟದಲ್ಲಿ ಕೀರ್ತಿಮುಖವಿದೆ. ಇದು ಕುಂದುರ್ಪಿಯ ಶಿಲ್ಪಕ್ಕಿಂತ ಸಂಪ್ರದಾಯ ಬದ್ಧವಾಗಿದೆ. ಆಭರಣಗಳ ಸೂಕ್ಷ್ಮತೆ, ಉಡುಪಿನ ವೈಶಿಷ್ಟ್ಯತೆ ಎದ್ದು ಕಾಣುತ್ತದೆ. ಆದರೆ ಇದಕ್ಕೆ ರುಂಡಮಾಲೆಯಿಲ್ಲ. ಹಾಗಾಗಿ ಇದು ಪಾರ್ವತಿ ದೇವಿಯ ಶಿಲ್ಪವೆಂದು ಗುರುತಿಸ ಬಹುದು. ಕಾಲಮಾನ ದೃಷ್ಟಿಯಿಂದ ಈ ಎರಡೂ ಶಿಲ್ಪಗಳು ವಿಭಿನ್ನವಾದರೂ ಸಾಂಪ್ರದಾಯ ಕತೆಯ ಪರಿಧಿಯೊಳಗೆ ನಿರೂಪಿಸಲ್ಪಟ್ಟಿವೆ. ಆದರೆ ಹಂಪನೂರಿನ ದೇವಿಯ ಶಿಲ್ಪಕ್ಕಿಂತ ಕುಂದುರ್ಪಿಯ ಶಿಲ್ಪವು ಪ್ರಾಚೀನವಾದರೂ ಕೆತ್ತನೆಯ ದೃಷ್ಟಿಯಿಂದ ಪರಿಪೂರ್ಣವಾಗಿಲ್ಲ. ಹಾಗಾಗಿ ಪ್ರಾಚೀನ ಶಿಲ್ಪಗಳೆಲ್ಲವೂ ಪರಿಪೂರ್ಣವೆಂದು ಹೇಳಲಾಗದು.

ತಾಂತ್ರಿಕ ನೆಲೆಯಲ್ಲಿ ಆರಂಭವಾದ ಮಾತೃಪೂಜೆಯ ಪ್ರಾಚೀನ ವಿಧಿಗಳು ಇತಿಹಾಸದ ಒತ್ತಡದಿಂದಾಗಿ ಖಂಡತುಂಡಾಗಿ ಒಡೆದು ಜಾನಪದ ಚೌಕಟ್ಟಿನಲ್ಲಿ ಉಳಿದಿವೆಯೆಂದು ತಿಳಿದೆವೆಯಷ್ಟೆ. ಈ ನೆಲೆಯಲ್ಲಿ ಉಂಡೆಯಾಗಿಯೇ ಉಳಿದು ಬಂದಿರುವ ವಿವರವೆಂದರೆ ಕಾಳಿ ಪೂಜೆ. ಒಮ್ಮೆ ದೇಶದಲ್ಲೆಲ್ಲ ಹರಡಿದ್ದ ಈ ಪ್ರಕ್ರಿಯೆ ಈಗ ಮುಖ್ಯವಾಗಿ ಬಂಗಾಳ, ಒರಿಸ್ಸಾ, ಅಸ್ಸಾಂ, ಕೇರಳಗಳಲ್ಲಿ ಕಾಣಬರುತ್ತದೆ. ಕಾಳಿ ಭೇದಗಳಲ್ಲಿ ಶ್ಮಶಾನಕಾಳಿ, ಭದ್ರಕಾಳಿ, ರಕ್ಷಾಕಾಳಿ, ಸಿದ್ಧಕಾಳಿ, ಗುಹ್ಯಕಾಳಿ ಮೊದಲಾದವುಗಳಿವೆ.[೧೬]

ಹಾಗೆಯೇ ಚಿತ್ರದುರ್ಗ ಪರಿಸರದಲ್ಲಿ ಭದ್ರಕಾಳಿಯ ಶಿಲ್ಪಗಳನ್ನು ಮಾತ್ರ ಕಾಣಬಹುದಾಗಿದೆ. ಭದ್ರಕಾಳಿಯ ಎರಡು ವಿಶಿಷ್ಟ ಶಿಲ್ಪಗಳು ಹಿರಿಯೂರಿನ ವೀರಭದ್ರೇಶ್ವರ ಮತ್ತು ಹೊಸದುರ್ಗದ ವೀರಭದ್ರಸ್ವಾಮಿ ದೇವಾಲಯಗಳಲ್ಲಿವೆ. ಇವೆರಡೂ ಪಾಳೆಯಗಾರರ ಕಾಲದ ರಚನೆಗಳು. ಹಿರಿಯೂರಿನ ಭದ್ರಕಾಳಿ ತ್ರಿಭಂಗಿಯಲ್ಲಿ ನಿಂತಿದ್ದು, ಚತುರ್ಭುಜಗಳನ್ನು ಹೊಂದಿದ್ದಾಳೆ. ಹಿಂದಿನ ಕೈಗಳಲ್ಲಿ ಬಿಲ್ಲು ಬಾಣಗಳು, ಮುಂದಿನ ಕೈಗಳಲ್ಲಿ ಚಿಕ್ಕ ಚೂರಿ ಮತ್ತು ನೆಲಕ್ಕೆ ಹೂರಿದ ಖೇಟಕಗಳಿವೆ. ತಲೆಯಲ್ಲಿ ಕರಂಡಮುಕುಟ, ಕಿವಿಯಲ್ಲಿ ಪತ್ರಕುಂಡಲ, ಕೊರಳಲ್ಲಿ ಹಾರ, ಕಟೀಬಂಧ, ಮಣಿಸರ, ಭುಜಹಾರ, ತೋಳ್ಬಂದಿ, ಕೈಕಡಗ, ಕಾಲ್ಕಡಗಗಳಿವೆ. ಸೊಂಟದಿಂದ ಕೆಳಗೆ ಸೀರೆಯನ್ನು ಧರಿಸಿದ್ದು, ಅದರ ಮೇಲೆ ಮುತ್ತಿನ ಸರ ಹಾಗು ಕುಚಬಂಧಗಳಿವೆ. ಇದೇ ರೀತಿಯ ಹೊಸದುರ್ಗದ ಕಾಳಿಯ ಶಿಲ್ಪವು ಕೆಲವು ಲಕ್ಷಣಗಳಿಂದ ವಿಭಿನ್ನವೆನಿಸುತ್ತದೆ. ಹಿಂದಿನ ಕೈಗಳು ಬಿಲ್ಲುಬಾಣಗಳನ್ನು ಹಿಡಿದಿರುವ ರೀತಿ, ಮುಂದಿನ ಕೈಗಳಲ್ಲಿ ಉದ್ದವಾದ ಖಡ್ಗ, ಚಿಕ್ಕದಾದ ಮತ್ತು ಕೈಯಲ್ಲಿ ಹಿಡಿದಿರುವ ಖೇಟಕಗಳು ಗಮನಸೆಳೆಯುತ್ತವೆ. ತಲೆಯ ಮೇಲೆ ಕಿರೀಟಮುಕುಟವಿದ್ದು, ತಲೆಯ ಹಿಂದೆ ಪ್ರಭಾಮಂಡಲವಿರುವುದು ಗಮನಾರ್ಹ. ಅದು ಅಲಂಕರಣೆಯಿಂದ ಕೂಡಿದೆ. ಮೈಮೇಲೆಲ್ಲಾ ಸೂಕ್ಷ್ಮ ಕೆತ್ತನೆಯ ಆಭರಣಗಳು ಅಧಿಕವಾಗಿವೆ. ದೇವಿಯ ಕಾಲುಗಳಲ್ಲಿ ಹಾವುಗಳಿವೆ. ಪ್ರಭಾವಳಿಯಲ್ಲಿ ಹೂವಿನ ಅಲಂಕರಣೆಗಳಿದ್ದು, ಲಲಾಟದಲ್ಲಿ ಕೀರ್ತಿಮುಖವಿದೆ. ಶಿಲ್ಪ ಕೆತ್ತನೆಯ ದೃಷ್ಟಿಯಿಂದ ಪರಿಪೂರ್ಣವಾಗಿಲ್ಲ. ಆಂಗಿಕ ರಚನೆಗಳು ಕೂಡ ಸಮರ್ಪಕವೆನಿಸುವುದಿಲ್ಲ. ಆದರೆ ಎತ್ತರವಾದ ಕೀರ್ತಿಮುಕುಟ, ಪ್ರಭಾಮಂಡಲ, ಚಿಕ್ಕದಾದ ಖೇಟಕ, ಕಾಲುಗಳಲ್ಲಿ ಹಾವುಗಳು ಈ ಶಿಲ್ಪದ ವೈಶಿಷ್ಟ್ಯಗಳಾಗಿವೆ. ಸಾಂಪ್ರದಾಯಿಕ ಲಕ್ಷಣಗಳು ಸಡಿಲವಾಗಿ, ಪ್ರಾದೇಶಿಕ ಅಂಶಗಳು ಹೆಚ್ಚು ಸೇರ್ಪಡೆಗೊಂಡಿರುವ ಸಂಗತಿ ಈ ಶಿಲ್ಪದಿಂದ ವ್ಯಕ್ತವಾಗುತ್ತದೆ. ಈ ಎರಡೂ ಶಿಲ್ಪಗಳು ವೀರಭದ್ರ ಮೂರ್ತಿಯ ಪಕ್ಕದಲ್ಲಿದ್ದು, ಪ್ರತಿಮಾ ದೃಷ್ಟಿಯಿಂದ ಭಂಗಿ ಮತ್ತು ಲಕ್ಷಣಗಳಿಂದ ವೀರಭದ್ರನನ್ನು ಹೋಲುತ್ತವೆ.

ಸಾಮಾನ್ಯವಾಗಿ ಪ್ರಾಚೀನ ಭದ್ರಕಾಳಿಯ ಶಿಲ್ಪಗಳು ಕುಳಿತ ಭಂಗಿಯಲ್ಲಿರುತ್ತವೆ. ಆದರೆ ವೀರಭದ್ರನ ಪ್ರತ್ಯೇಕ ಆರಾಧನೆ ಪ್ರಾರಂಭವಾದಾಗ ಅವನ ಜೊತೆ ಪ್ರತಿಷ್ಠಾಪಿಸಲು ದೇವಿಯ ಶಿಲ್ಪದ ಅನಿವಾರ್ಯತೆ ಅವಶ್ಯಕತೆಯಾಯಿತು. ಅದಕ್ಕಾಗಿ ಶಿಲ್ಪಿಗಳು ಯೋಚಿಸಿದ ರೀತಿ ಗಮನಾರ್ಹವಾದದ್ದು. ವೀರಭದ್ರನ ರೂಪದಲ್ಲೇ ದೇವಿಯನ್ನು ರೂಪಿಸಿ ಅದಕ್ಕೆ ಭದ್ರಕಾಳಿ ಎಂದು ಹೆಸರಿಟ್ಟಿರುವುದು ಮೂರ್ತಿಶಿಲ್ಪಶಾಸ್ತ್ರದ ಬೆಳವಣಿಗೆಯ ದೃಷ್ಟಿಯಿಂದ ಮಹತ್ವದ ಸಂಗತಿಯಾಗಿದೆ. ಪ್ರಾಚೀನ ಶಿಲ್ಪಶಾಸ್ತ್ರದಲ್ಲಿ ಇಂತಹ ದೇವತೆಗಳ ಉಲ್ಲೇಖವಿರುವುದಿಲ್ಲ.

ಹಾಗಾಗಿ ಈ ದೇವಿಗಳ ರಚನೆ ಶಿಲ್ಪಶಾಸ್ತ್ರ ದೃಷ್ಟಿಯಿಂದ ಮಹತ್ವ ಪಡೆದುಕೊಳ್ಳತ್ತವೆ. ಹಾಗಾಗಿ ಇವು ಮೂರ್ತಿಶಿಲ್ಪ ಕ್ಷೇತ್ರಕ್ಕೆ ಪಾಳೆಯಗಾರರ ವಿಶಿಷ್ಟ ಕೊಡುಗೆಗಳೆಂದೇ ಹೇಳಬಹುದು.

ಲಕ್ಷ್ಮಿಯ ಶಿಲ್ಪಗಳು ಚಿತ್ರದುರ್ಗದ ಗೋಪಾಲಸ್ವಾಮಿ, ವೆಂಕಟರಮಣ, ಅಬ್ಬಿನಹೊಳೆ ರಂಗನಾಥ, ನೀರ್ಥಡಿ ರಂಗನಾಥಸ್ವಾಮಿ ದೇವಾಲಯಗಳಲ್ಲಿ ಕಂಡುಬರುತ್ತವೆ. ಇವೆಲ್ಲವೂ ಪಾಳೆಯಗಾರರ ಲಕ್ಷಣಗಳನ್ನು ಪ್ರತಿಬಿಂಬಿಸುತ್ತವೆ. ಪ್ರತಿಮಾ ದೃಷ್ಟಿಯಿಂದ ಲಕ್ಷ್ಮೀ ಪೀಠದ ಮೇಲೆ ಪದ್ಮಾಸನದಲ್ಲಿ ಆಸೀನಳಾಗಿದ್ದಾಳೆ. ಚರ್ತುಭುಜಗಳಿದ್ದು ಹಿಂದಿನ ಕೈಗಳಲ್ಲಿ ಕಮಲದ ಪುಷ್ಪಗಳು, ಮುಂದಿನ ಕೈಗಳು ಅಭಯ ಮತ್ತು ವರದ ಮುದ್ರೆಯಲ್ಲಿವೆ. ತಲೆಯ ಮೇಲೆ ಕಿರೀಟಮುಕುಟ, ಭುಜಹಾರ, ಕೊರಳಲ್ಲಿ ಮಣಿಸರಗಳು, ಭುಜಕೀರ್ತಿಗಳು, ಬೆರಳುಂಗುರಗಳು, ಕೈಕಂಕಣಗಳು ಮುಂತಾದ ಆಭರಣಗಳಿವೆ. ಕೊರಳಲ್ಲಿ ಕುಚದ್ವಯಗಳ ಮಧ್ಯ ಇಳಿಬಿದ್ದ ದೊಡ್ಡ ಪದಕಹಾರ ಗಮನಸೆಳೆಯುತ್ತದೆ. ಕೊರಳಲ್ಲಿ ಉದ್ದವಾದ ವೈಜಯಂತಿ ಹಾರವೂ ಇದೆ. ಸೊಂಟದಿಂದ ಕೆಳಗೆ ಸೀರೆಯಿದ್ದು, ಅದರ ಮಡಿಕೆಗಳು ಸ್ಪಷ್ಟವಾಗಿ ಗೋಚರಿಸುತ್ತವೆ. ಸೀರೆಯ ನೆರಿಗೆಗಳು ಪೀಠದ ಮೇಲೆ ಅಲಂಕೃತವಾಗಿ ಹರಡಿವೆ. ಪ್ರತಿಮೆಯ ಸುತ್ತಲೂ ಪ್ರಭಾವಳಿಯಿದ್ದು, ಲಲಾಟಬಿಂಬದಲ್ಲಿ ಕೀರ್ತಿಮುಖಗಳಿವೆ. ಹೆಚ್ಚುಕಡಿಮೆ ಎಲ್ಲಾ ಶಿಲ್ಪಗಳು ಇದೇ ರೀತಿಯಲ್ಲಿದ್ದರೂ ನೀರ್ಥಡಿಯ ರಂಗನಾಥ ದೇವಾಲಯದ ಲಕ್ಷ್ಮೀಯ ಶಿಲ್ಪವು ಮಾತ್ರ ಕೆತ್ತನೆ ದೃಷ್ಟಿಯಿಂದ ಪರಿಪೂರ್ಣವಾಗಿಲ್ಲ. ಮತ್ತು ಇದು ಹೆಚ್ಚು ನೀಳವೆನಿಸುತ್ತದೆ. ಉಳಿದಂತೆ ಎಲ್ಲಾ ಶಿಲ್ಪಗಳು ಪ್ರಮಾಣಬದ್ಧವಾಗಿದ್ದು ಪಾಳೆಯಗಾರರ ಕಾಲದ ಲಕ್ಷಣಗಳನ್ನು ಪ್ರತಿಬಿಂಬಿಸುತ್ತವೆ.

ಚಿತ್ರದುರ್ಗದ ಬೆಟ್ಟದಲ್ಲಿರುವ ಏಕನಾಥೇಶ್ವರಿ ಶಿಲ್ಪ ಮತ್ತು ಕುಂದುರ್ಪಿಯ ವೀರಭದ್ರ ದೇವಾಲಯದಲ್ಲಿರುವ ದೇವಿಯ ಶಿಲ್ಪಗಳು ಸಂಪೂರ್ಣ ಸ್ಥಳೀಯ ಲಕ್ಷಣಗಳನ್ನು ಬಿಂಬಿಸುತ್ತವೆ. ಏಕನಾಥೇಶ್ವರಿ ಶಿಲ್ಪ ಕೇವಲ ರುಂಡದಿಂದ ಕೆಳಗೆ ಎದೆಯ ಮಟ್ಟದವರೆಗೆ ಮಾತ್ರ ಇದೆ. ಸರಳವಾದ ಪತ್ರಕುಂಡಲಗಳು, ಕೊರಳಲ್ಲಿ ಒಂದು ದೊಡ್ಡ ಹಾರವಿದ್ದು, ತಲೆಯ ಹಿಂದೆ ಏಳು ಹೆಡೆಯ ಸರ್ಪದ ಅಲಂಕರಣೆಯಿದೆ. ಇಲ್ಲಿ ಯಾವುದೇ ರೀತಿಯ ಪ್ರತಿಮಾ ಲಕ್ಷಣಗಳ ಅನುಕರಣೆಯಿರದೆ, ಸ್ವಯಂ ಅಭಿವ್ಯಕ್ತಿಯ ರೂಪವನ್ನು ಕಾಣಬಹುದು. ಕುಂದುರ್ಪಿಯ ಶಿಲ್ಪವು ತೀರಾ ಸ್ಥಳೀಯ ಲಕ್ಷಣಗಳನ್ನು ಹೊಂದಿದ್ದು, ಮರದಲ್ಲಿ ಕೆತ್ತಿದ ಶಿಲ್ಪದಂತಿದೆ. ಹಂಪನೂರಿನ ರಂಗನಾಥ ದೇವಾಲಯದಲ್ಲಿರುವ ದೇವಿಯ ಶಿಲ್ಪವೊಂದು ಗಮನಸೆಳೆಯುತ್ತದೆ. ಇಲ್ಲಿ ದೇವಿಯು ಪೀಠದ ಮೇಲೆ ಸವ್ಯಲಲಿತಾಸನದಲ್ಲಿ ಆಸೀನಳಾಗಿದ್ದಾಳೆ. ಚರ್ತುಭುಜಗಳಿದ್ದು, ಹಿಂದಿನ ಕೈಗಳಲ್ಲಿ ತ್ರಿಶೂಲ, ಪಾಶಗಳಿದ್ದು, ಮುಂದಿನ ಕೈ

ಅಭಯಮುದ್ರೆಯಲ್ಲಿದ್ದರೆ, ಇನ್ನೊಂದು ಕೈಯಲ್ಲಿ ಪಾನಬಟ್ಟಲಿದೆ. ಶಿಲ್ಪಶಾಸ್ತ್ರ ದೃಷ್ಟಿಯಿಂದ ಇದು ಮೂಕಾಂಬಿಕೆಯ ಶಿಲ್ಪವೆಂದು ಹೇಳಬಹುದು. ಪಾಳೆಯಗಾರರ ಅಂತಿಮ ಕಾಲದಲ್ಲಿ ರಚಿತವಾದಂತೆ ತೋರುವ ಈ ಶಿಲ್ಪವು ೧೮-೧೯ನೆಯ ಶತಮಾನದ ಚಿತ್ರಕಲಾವಿದರು ಬಿಡಿಸುವ ಚಿತ್ರಗಳಲ್ಲಿರುವಂತೆ ಕಿರೀಟ, ಮೈತುಂಬ ಸೀರೆ ಮತ್ತು ಆಭರಣಗಳಿವೆ. ಪ್ರಭಾವಳಿಯಲ್ಲಿ ಬಳ್ಳಿಯ ಅಲಂಕರಣೆಯಿದ್ದು ಲಲಾಟದಲ್ಲಿ ಕೀರ್ತಿಮುಖದ ಅಲಂಕರಣೆಯಿದೆ. ಈ ಶಿಲ್ಪದ ರಚನೆಗೆ ದೇವಿಯ ವರ್ಣಚಿತ್ರವೊಂದು ಪ್ರೇರಣೆಯಾದಂತೆ ತೋರುತ್ತದೆ. ಹೀಗಾಗಿ ಇಲ್ಲಿ ಶಾಸ್ತ್ರ ಸಂಪ್ರದಾಯಕ್ಕಿಂತ ಆಧುನಿಕ ಅಂಶಗಳು ಹೇಗೆ ಸೇರ್ಪಡೆಗೊಳ್ಳುತ್ತವೆ ಎಂಬುದಕ್ಕೆ ಇದು ಉತ್ತಮ ಉದಾಹರಣೆಯಾಗುತ್ತದೆ.

ಹುಲ್ಲೂರಿನಲ್ಲಿ ನಾಗದೇವತೆಯ ಎರಡು ಪ್ರತಿಮೆಗಳಿವೆ. ಮೊದಲನೆಯ ಶಿಲ್ಪವು ಸೊಂಟದವರೆಗೆ ಮನುಷ್ಯರೂಪದಲ್ಲಿದ್ದು, ಅಲ್ಲಿಂದ ಕೆಳಕ್ಕೆ ಹಾವಿನ ದೇಹ(ಬಾಲ)ವನ್ನು ಹೊಂದಿದೆ. ಮನುಷ್ಯ ರೂಪ ಸ್ತ್ರೀ ದೇವತೆಯದಾಗಿದ್ದು ಚತುರ್ಬಾಹುಗಳನ್ನು ಹೊಂದಿದೆ. ಹಿಂದಿನ ಕೈಗಳಲ್ಲಿ ಹೆಡೆ ಬಿಚ್ಚಿದ ಸರ್ಪಗಳಿವೆ. ಮುಂದಿನ ಕೈಗಳು ಭಗ್ನವಾಗಿವೆ. ತಲೆಯ ಮೇಲೆ ಕರಂಡಮುಕುಟ, ಕೊರಳಲ್ಲಿ ಪದಕಹಾರಗಳಿವೆ. ಇದು ಪರಿಪೂರ್ಣ ಪಾಳೆಯಗಾರರ ಶೈಲಿಯಲ್ಲಿರುವ ಶಿಲ್ಪ. ನಂತರ ಕಾಲದ ನಾಗದೇವತೆಯ ಶಿಲ್ಪ ಇದೇ ಹುಲ್ಲೂರಿನ ಕಾಳಿಕಾಂಭ ದೇವಾಲಯದ ಆವರಣದಲ್ಲಿದೆ. ಇಲ್ಲಿ ನಾಗದೇವಿಯ ರುಂಡಮುಂಡ ಮೊದಲನೆಯ ಶಿಲ್ಪದಂತಿದೆ. ಆದರೆ ದ್ವಿಬಾಹುಗಳಿದ್ದು ಎರಡೂ ಕೈಗಳು ಅಂಜಲಿ ಮುದ್ರೆಯಲ್ಲಿವೆ. ಎರಡು ತೋಳುಗಳಲ್ಲಿ ದೊಡ್ಡದಾದ ಸರ್ಪಗಳು ಜೋತುಬಿದ್ದಿದ್ದು ದೇವಿಯ ಮುಖದ ಇಕ್ಕೆಲಗಳಲ್ಲಿ ಅವುಗಳ ತಲೆಗಳಿವೆ. ನಾಗದೇವಿಯ ತಲೆಯ ಮೇಲೆ ಏಳು ಮುಖದ ಸರ್ಪ ಹೆಡೆಯನ್ನು ಬಿಚ್ಚಿ ತೆಗೆದಿದೆ. ಇದು ಶಿಲ್ಪಿಯ ಸ್ವತಂತ್ರ ಆಲೋಚನೆಯನ್ನು ಪ್ರತಿಬಿಂಬಿಸುತ್ತದೆ.

ಹೀಗೆ ಚಿತ್ರದುರ್ಗ ಪರಿಸರದಲ್ಲಿ ದೇವಿಯ ಶಿಲ್ಪಗಳು ವಿವಿಧ ರೂಪ, ಭಂಗಿ ಮತ್ತು ಶೈಲಿಗಳಿಂದ ಕೂಡಿದ್ದು, ಶಿಲ್ಪಕಲೆಯ ದೃಷ್ಟಿಯಿಂದ ವೈವಿಧ್ಯಮಯವಾಗಿವೆ. ಇವುಗಳಲ್ಲಿ ಹೆಚ್ಚು ಅಲಂಕೃತವಾಗಿ ಹೊಯ್ಸಳ ಶಿಲ್ಪದಂತೆ ತೋರುವ ಜಾನಕಲ್ಲಿನ ಪದ್ಮಾವತಿ, ಹೊಸದುರ್ಗದ ಭದ್ರಕಾಳಿ, ಹಂಪನೂರಿನ ಲಕ್ಷ್ಮೀ ಮುಂತಾದವುಗಳು ವಿಶಿಷ್ಟವೆನಿಸುತ್ತವೆ.

ಆಂಜನೇಯ ಶಿಲ್ಪಗಳು : ಒಂದು ಕಾಲಕ್ಕೆ ವಿಶೇಷವಾಗಿ ದಕ್ಷಿಣಭಾರತಕ್ಕೆ ಸೀಮಿತವಾಗಿದ್ದ ಹನುಮಂತನ ಪೂಜೆ ಈಗ ಭಾರತದಲ್ಲೆಲ್ಲ ನಡೆಯುತ್ತಿದೆ. ಆದರೆ ಕನ್ನಡ ನಾಡಿನಲ್ಲಿ ವಿಶೇಷವಾಗಿ ಪೂಜೆಗೊಳ್ಳುವ ಈ ದೇವತೆ ಅಥವಾ ಹನುಮಂತನನ್ನು ತಮ್ಮವನೇ ಎಂದು

ಕರೆದುಕೊಂಡಿರುವುದೂ ಇದೆ. ಕೋಟೆಕೊತ್ತಲಗಳಲ್ಲಿ, ಬೇಟೆಗಾರರ ವಸತಿಗಳಲ್ಲಿ ಪೂಜೆಗೊಳ್ಳುತ್ತಿದ್ದ ಈ ದೈವದ ಪ್ರಾಚೀನತೆ ಬಹಳವೇ ಇದೆ. ಈ ದೇವತೆ ಜಾನಪದ ನೆಲೆಯಿಂದ ಬಂದುದಾಗಿದೆ. ಮೂರ್ತಿಯ ಆಕಾರ, ಇತಿಹಾಸ, ಸ್ವಭಾವ, ಪೂಜಾಪದ್ಧತಿ ಎಲ್ಲವೂ ಇದನ್ನೇ ಸೂಚಿಸುವುವು. ನಾಡಿನ ಗುಡ್ಡಗಾಡುಗಳಲ್ಲಿ, ಕಾಡುಮೇಡುಗಳಲ್ಲಿ, ಮೂಲೆಮೂಲೆಯ ಹಳ್ಳಿಗಳಲ್ಲಿ ಹನುಮಂತನ ಸಣ್ಣಸಣ್ಣ ಗುಡಿಗಳು ಕಂಡುಬರುತ್ತವೆ. ಹಾಗೆಯೇ ಊರ ಹೊರಗೆ ಅವನ ಗುಡಿಯಿರುವುದು ಇನ್ನೂ ವಿಶೇಷ.[೧೭]

ಹನುಮಂತನ ತಾಂತ್ರಿಕಪ್ರಸಕ್ತಿ ಗಮನಾರ್ಹವಾದುದು. ಸಾಮಾನ್ಯವಾಗಿ ವಶೀಕರಣ ಮೊದಲಾದ ಸಿದ್ಧಿಗಳಿಗೆ 'ಓಂ ನಮೋ ಭಗವತೇ ಆಂಜನೇಯಾಯ ಮಹಾಬಲಾಯ ಸ್ವಾಹಾ' ಹಾಗು 'ಹಂ ಹನುಮತೇ ರುದ್ರಾತ್ಮಕಾಯ ಹುಂ ಫಟ್' ಎಂಬ ಮಂತ್ರಗಳು ಬಳಕೆಯಲ್ಲಿವೆ.[೧೮] ಶಿಲ್ಪದಲ್ಲಿ ಅಂಜಲಿಬದ್ಧನಾದ ಭಕ್ತವಿಗ್ರಹ ಮನೆಯಲ್ಲಿ ಪೂಜೆಗೆ ಶ್ರೇಷ್ಠವೆನ್ನುತ್ತಾರೆ. ಆದರೆ ಗುಡಿಗಳಲ್ಲಿ ರಣವೀರಾಂಜನೇಯನ ಮೂರ್ತಿಗಳಿಗೆ ಆದರ ಹೆಚ್ಚು. ನಿಂತಿರುವಂತೆ, ಕುಳಿತಿರುವಂತೆ, ನಡೆಯುತ್ತಿರುವಂತೆ, ಓಡುತ್ತಿರುವಂತೆ ಭಂಗಿಗಳನ್ನು ಮೂಡಿಸಿ, ಒಂದು ಕೈಯಲ್ಲಿ ಗದೆ ಅಥವಾ ವೀರಾವೇಶದ ಮುದ್ರೆ, ಇನ್ನೊಂದರಲ್ಲಿ ಮರವನ್ನೋ, ಬೆಟ್ಟವನ್ನೋ ಹಿಡಿದಿರುವಂತೆ ತೋರಿಸುತ್ತಾರೆ.[೧೯]

ಹಾಗೆಯೇ ಚಿತ್ರದುರ್ಗ ಪರಿಸರದಲ್ಲಿ ಆಂಜನೇಯಸ್ವಾಮಿಯ ಆರಾಧನೆ ಅತ್ಯಂತ ಜನಪ್ರಿಯವಾಗಿದೆ. ವಿಜಯನಗರದಲ್ಲಿ ಅಧಿಕ ಸಂಖ್ಯೆಯಲ್ಲಿ ಆಂಜನೇಯನ ಶಿಲ್ಪಗಳಿರುವಂತೆ ಇಲ್ಲಿ ಕೂಡ ಅನೇಕ ಆಂಜನೇಯ ಶಿಲ್ಪಗಳು ಕಂಡುಬರುತ್ತವೆ. ಆದರೆ ಇದಕ್ಕೆ ಚಿತ್ರದುರ್ಗ ಪಾಳೆಯಗಾರರು ತಮ್ಮ ಸಾರ್ವಭೌಮ ದೊರೆಗಳಾದ ವಿಜಯನಗರದ ಅರಸರನ್ನು ಅನುಸರಿಸಿ ಆಂಜನೇಯನ ಆರಾಧನೆಗೆ ಹೆಚ್ಚು ಪ್ರೋತ್ಸಾಹ ನೀಡಿರುವುದು ಕಾರಣವೆಂದು ಹೇಳಬಹುದು. ಆದರೆ ರಾಜಧಾನಿ ವಿಜಯನಗರದ ಪರಿಸರದಲ್ಲಿ ಆಂಜನೇಯನ ಶಿಲ್ಪಗಳು ಹೆಚ್ಚಾಗಿ ಬಯಲುಗಳಲ್ಲಿ, ಬಿಡಿಗುಂಡುಗಳಲ್ಲಿ ಕಂಡುಬಂದರೆ, ಚಿತ್ರದುರ್ಗ ಪರಿಸರದಲ್ಲಿ ಪ್ರತ್ಯೇಕ ಆಂಜನೇಯನ ದೇವಾಲಯಗಳನ್ನೇ ನಿರ್ಮಿಸಲಾಗಿದೆ. ಇಲ್ಲಿ ತಾಳ್ಯ, ಹಿರಿಯೂರು, ಕಣಕುಪ್ಪೆ, ಭರಮಸಾಗರ, ರೆಡ್ಡಿಹಳ್ಳಿ, ಹುಲ್ಲೂರು, ಹೊರಕೆರೆದೇವರಪುರ, ನಂದನಹೊಸೂರು, ಬಹದ್ದೂರ್‌ಘಟ್ಟ, ಚಿತ್ರಹಳ್ಳಿ, ರಾಮೇನಹಳ್ಳಿ, ನಂದಿಹಳ್ಳಿಗಳಲ್ಲಿ ಮುಂತಾದೆಡೆಗಳಲ್ಲಿ ಆಂಜನೇಯಸ್ವಾಮಿಯ ದೇವಾಲಯಗಳಿವೆ. ಇಲ್ಲಿಯ ಗರ್ಭಗೃಹಗಳಲ್ಲಿ ನಾಲ್ಕರಿಂದ ಏಳು ಅಡಿಯವರೆಗಿನ ಎತ್ತರದ ಆಂಜನೇಯನ ಉಬ್ಬುಶಿಲ್ಪಗಳಿವೆ.

ಸಾಮಾನ್ಯವಾಗಿ ಇವೆಲ್ಲಾ ವೀರಾಂಜನೇಯನ ಶಿಲ್ಪಗಳು. ಇಲ್ಲಿ ಆಂಜನೇಯನು ವಕ್ರಭಂಗಿಯಲ್ಲಿ ಕಾಲುಗಳನ್ನು ಅಗಲಿಸಿ ನಿಂತಿದ್ದು, ಬಲಗೈ ಚಪೇಟ(ಹೊಡೆಯುವ ರೀತಿ) ಮುದ್ರೆಯಲ್ಲಿದೆ. ಇದು ಮುಳಬಾಗಲಿನಲ್ಲಿ ಇರುವ ವೀರಾಂಜನೇಯನ ಮೂರ್ತಿಯನ್ನು ನೆನಪಿಸುತ್ತದೆ.[೨೦] ಎಡಗೈಯಲ್ಲಿ ಸೌಗಂಧಿಕ ಪುಷ್ಪ ಇಲ್ಲವೇ ಬೆಟ್ಟವನ್ನು ಹೊಂದಿರುತ್ತದೆ.[೨೧] ಕಾಲ ಹತ್ತಿರ ಅಕ್ಷಯಕುಮಾರನ ಶಿಲ್ಪವಿದೆ. ಆಂಜನೇಯನ ಬಾಲವು ತಲೆಯ ಮೇಲ್ಭಾಗದಲ್ಲಿ ಎತ್ತಿ ಹಿಡಿದಂತಿರುತ್ತದೆ, ತಲೆಯಲ್ಲಿ ಕೂದಲನ್ನು ಹಿಂದಕ್ಕೆ ಬಾಚಿ ಜುಟ್ಟನ್ನು ಕಟ್ಟಿದಂತಿರುತ್ತದೆ. ಸಾಮಾನ್ಯವಾಗಿ ಎಲ್ಲಾ ಶಿಲ್ಪಗಳ ಮೈಮೇಲೂ ಕೊರಳಹಾರ, ಭುಜಹಾರ, ತೋಳ್ಬಂದಿ, ಮುಂಗೈಕಡಗ, ಹಸ್ತದ ಮೇಲೆ ಹಸ್ತದ ಸರ, ಯಜ್ಞೋಪವೀತ, ಉಪವೀತ, ಕಟೀಬಂಧ, ವೈಜಯಂತಿಹಾರ, ಕಾಲ್ಕಡಗ ಹಾಗು ಪಾದಸರಗಳಿವೆ. ಸೊಂಟದಲ್ಲಿ ಲಂಗೋಟಿಯಿದ್ದು ಅದಕ್ಕೆ ಚೂರಿಯನ್ನು ಸಿಕ್ಕಿಸಲಾಗಿರುತ್ತದೆ. ಇವಿಷ್ಟು ಸಾಮಾನ್ಯ ಲಕ್ಷಣಗಳಾದರೂ, ರೆಡ್ಡಿಹಳ್ಳಿಯಲ್ಲಿ ಲಂಗೋಟಿ ಬದಲಿಗೆ ದೋತಿಯನ್ನು ತೋರಿಸಿರುವುದು(ರಾಜಸ್ತಾನದ ದಾರು ಶಿಲ್ಪದಂತೆ),[೨೨] ಹೊರಕೆದೇವರಪುರದಲ್ಲಿ ವೈಜಯಂತಿಹಾರವನ್ನು ವಸ್ತ್ರದಂತೆ ತೋರಿಸಿ ಅದಕ್ಕೆ ಅದರ ಎರಡೂ ತುದಿಗಳನ್ನು ಕೆಳಗೆ ಗಂಟು ಹಾಕಿರುವುದು ಮತ್ತು ಪ್ರಭಾವಳಿಯಲ್ಲಿ ಆಂಜನೇಯನ ಸಾಹಸದ ದೃಶ್ಯಗಳನ್ನು ತೋರಿಸಿರುವುದು, ಬಹದ್ದೂರ್‌ಘಟ್ಟದಲ್ಲಿ ಆಂಜನೇಯನ ಎರಡೂ ಕಾಲುಗಳ ಮಧ್ಯ ಅಕ್ಷಯಕುಮಾರನನ್ನು ದೀರ್ಘದಂಡ ನಮಸ್ಕಾರ ಮಾಡುವಂತೆ ತೋರಿಸಿರುವುದು, ವೈಜಯಂತಿಹಾರದ ಕೆಳಗೆ ದೊಡ್ಡ ಪದಕವನ್ನು ತೋರಿಸಿರುವುದು, ಮೇಲಕ್ಕಿರುವ ಬಾಲದ ಹೊರಗಿಂದ ಚಪೇಟ ಹಸ್ತವನ್ನು ತೋರಿಸಿರುವುದು, ಹುಲ್ಲೂರಿನಲ್ಲಿ ಅಕ್ಷಯಕುಮಾರನನ್ನು ಖಡ್ಗ ಮತ್ತು ಡಾಲು ಹಿಡಿದಂತೆ ತೋರಿಸಿರುವುದು ವಿಶೇಷವೆನಿಸುತ್ತದೆ. ಇವೆಲ್ಲಾ ಶಿಲ್ಪಕಲೆಯು ಪ್ರಾದೇಶಿಕ ರೂಪಗಳಲ್ಲಿ ಹೊಸಲಕ್ಷಣಗಳನ್ನು ಅಳವಡಿಸಿಕೊಂಡು ಬೆಳೆದುಬಂದ ಸಂದರ್ಭವನ್ನು ಸೂಚಿಸುತ್ತವೆ.

ಇತರೆ ಶಿಲ್ಪಗಳು : ಪಾಳೆಯಗಾರರ ಶಿಲ್ಪಗಳಲ್ಲಿ ತೀರಾ ಅಪರೂಪವಾಗಿ ಸೂರ್ಯ, ಪರಶುರಾಮ, ಜೈನತೀರ್ಥಂಕರ, ಕುದುರೆ, ಆನೆಗಳ ಒಂದೊಂದು ಬಿಡಿಶಿಲ್ಪಗಳು ಕಂಡುಬರುತ್ತವೆ. ದೊಡ್ಡೇರಿಯ ಕನ್ನೇಶ್ವರ ದೇವಾಲಯದಲ್ಲಿರುವ ಸೂರ್ಯನ ಶಿಲ್ಪವು ಸಮಭಂಗಿಯಲ್ಲಿದ್ದು, ಎರಡೂ ಕೈಗಳಲ್ಲಿ ತಾವರೆಪುಷ್ಪಗಳನ್ನು ಹಿಡಿದಿದ್ದಾನೆ. ತಲೆಯ ಮೇಲೆ ಕರಂಡಮುಕುಟವಿದ್ದು, ಅನೇಕ ಆಭರಣಗಳಿವೆ.

ಜಾನಕಲ್ಲಿನ ದೇವಾಲಯದಲ್ಲಿ ನೇಮಿನಾಥ ತೀರ್ಥಂಕರನ ಶಿಲ್ಪವಿದ್ದು, ಕಾಯೋತ್ಸರ್ಗ (ನಿಂತ) ಭಂಗಿಯಲ್ಲಿದೆ. ಈ ಶಿಲ್ಪಗಳು ಪಾರಂಪರಿಕ ರೂಪದಲ್ಲಿದ್ದು, ಯಾವುದೇ ಪ್ರತ್ಯೇಕ

ಲಕ್ಷಣಗಳನ್ನು ಒಳಗೊಂಡಿಲ್ಲ. ಆದರೆ ಚಿತ್ರದುರ್ಗದ ಉತ್ಸವಾಂಬೆ ದೇವಾಲಯದಲ್ಲಿರುವ ಪರಶುರಾಮನ ಶಿಲ್ಪವು ಶಿಲ್ಪಶಾಸ್ತ್ರ ದೃಷ್ಟಿಯಿಂದ ಮಹತ್ವದ್ದಾಗಿದೆ. ಸಮಭಂಗಿಯಲ್ಲಿರುವ ಇದು ಚತುರ್ಬಾಹುಗಳನ್ನು ಹೊಂದಿದ್ದು, ಹಿಂದಿನ ಕೈಗಳಲ್ಲಿ ಬಿಲ್ಲು ಬಾಣ, ಮುಂದಿನ ಕೈಗಳಲ್ಲಿ ಪರಶು ಮತ್ತು ಗದೆಗಳಿವೆ. ತಲೆಯಲ್ಲಿ ಕಿರೀಟಮುಕುಟವಿದ್ದು, ಮೈಮೇಲೆ ವಿವಿಧ ರೀತಿಯ ಆಭರಣಗಳಿವೆ. ತಲೆಯ ಹಿಂದೆ ಪ್ರಭಾಮಂಡಲವಿದ್ದು, ವೈಜಯಂತಿಹಾರ ಆಕರ್ಷಕವಾಗಿದೆ. ಸಾಮಾನ್ಯವಾಗಿ ವಿಷ್ಣುವಿನ ದಶಾವತಾರದ ಶಿಲ್ಪಪಟ್ಟಿಕೆಗಳಲ್ಲಿ ಪರಶುರಾಮನ ಶಿಲ್ಪ ಕಂಡುಬುರುವುದಾದರು, ಹೀಗೆ ಪ್ರತ್ಯೇಕ ಶಿಲ್ಪಗಳಿರುವುದು ಅಪರೂಪವೆಂದೇ ಹೇಳ ಬಹುದು. ಹಾಗಾಗಿ ಚಿತ್ರದುರ್ಗ ಪರಿಸರದಲ್ಲಿ ಪರಶುರಾಮ ಮತ್ತು ಇಂತಹ ಶಿಲ್ಪಗಳು ಮೊದಲ ಬಾರಿಗೆ ಕಾಣಿಸಿಕೊಳ್ಳುತ್ತವೆ.

ಚಿತ್ರದುರ್ಗದ ಚನ್ನಕೇಶವಸ್ವಾಮಿ ದೇವಾಲಯದಲ್ಲಿ ಕುದುರೆ ಮತ್ತು ಆನೆಗಳ ಶಿಲ್ಪಗಳು ಪರಿಪೂರ್ಣ ರೂಪದಲ್ಲಿ ಕೆತ್ತಲಾಗಿದ್ದು, ಅವುಗಳ ಅಲಂಕರಣೆ ಮತ್ತು ಆಭರಣಗಳು ಗಮನಸೆಳೆಯುತ್ತವೆ. ಇಂತಹ ಶಿಲ್ಪಗಳು ಮೂರ್ತಿಶಿಲ್ಪ ಕ್ಷೇತ್ರಕ್ಕೆ ಚಿತ್ರದುರ್ಗ ಪಾಳೆಯಗಾರರ ಕೊಡುಗೆಯೆಂದೇ ಹೇಳಬಹುದು.

ಸ್ಮಾರಕ ಶಿಲ್ಪಗಳು : ಸ್ಮಾರಕ ಶಿಲ್ಪಗಳಲ್ಲಿ ವೀರಗಲ್ಲುಗಳು, ಸತಿಕಲ್ಲುಗಳು ಮುಖ್ಯವಾಗಿವೆ. ಸಾಮಾನ್ಯವಾಗಿ ವೀರಗಲ್ಲುಗಳು ಮೂರು ಹಂತಗಳಲ್ಲಿ ಇದ್ದು, ಕೆಳ ಹಂತದಲ್ಲಿ ವೀರನ ಹೋರಾಟದ ದೃಶ್ಯ, ಮಧ್ಯದಲ್ಲಿ ಅವನನ್ನು ದೇವಕನ್ನಿಕೆಯರು ಸ್ವರ್ಗ ಲೋಕಕ್ಕೆ ಕರೆದೊಯ್ಯುತ್ತಿರುವ ದೃಶ್ಯ ಮತ್ತು ಮೇಲಿನ ಹಂತದಲ್ಲಿ ಅವನು ಸ್ವರ್ಗದಲ್ಲಿ ಸ್ಥಾನ ಪಡೆದ ದೃಶ್ಯಗಳಿರುವುದು ಪರಂಪರೆ. ಆದರೆ ವಿಜಯನಗರ ಕಾಲದಿಂದ ಈ ಸಂಪ್ರದಾಯ ಸಡಿಲಗೊಂಡು ಬಿಡಿಕಲ್ಲು, ಗುಂಡುಗಳ ಮೇಲೆಲ್ಲಾ ಕೇವಲ ವೀರರ ಶಿಲ್ಪಗಳನ್ನಷ್ಟೇ ಬಿಡಿಸುವ ಪದ್ಧತಿ ಪ್ರಾರಂಭವಾಯಿತು.

ಆ ಪರಂಪರೆ ಚಿತ್ರದುರ್ಗ ಪಾಳೆಯಗಾರರ ಕಾಲದಲ್ಲೂ ಮುಂದುವರೆದಿದೆ. ಇಲ್ಲಿ ದೊರೆಯುವ ಕೆಲವು ವೀರಗಲ್ಲು ಮತ್ತು ಮಹಾಸತಿಕಲ್ಲುಗಳು ವಾಸ್ತುಶಿಲ್ಪ ದೃಷ್ಟಿಯಿಂದ ವಿಶೇಷವಾಗಿರದೆ, ಕೇವಲ ಸಾಂಕೇತಿಕವಾಗಿವೆ. ಬಬ್ಬೂರು ಮತ್ತು ಹಿರಿಯೂರಿನ ದೇವಾಲಯ ಗಳಲ್ಲಿ ಅಶ್ವರೂಢನಾದ ವೀರನ ಶಿಲ್ಪಗಳಿದ್ದು, ಅವನ ಮುಂದೆ ಅಂಜಲಿಬದ್ಧರಾದ ಪ್ರಾಯಶಃ ಅವನ ಪತ್ನಿಯರ ಶಿಲ್ಪಗಳಿವೆ. ಇದೇ ಸ್ಥಳಗಳಲ್ಲಿ ಭರ್ಜಿಯನ್ನು ಎತ್ತಿ ಹೋರಾಟಕ್ಕೆ ಹೊರಟಿರುವ ಎರಡು ಶಿಲ್ಪಗಳಿವೆ. ಇಲ್ಲಿ ಅಂಲಕೃತವಾದ ಅಶ್ವದ ಮೇಲೆ ವೀರನು ಆಸೀನನಾಗಿದ್ದು, ಅಶ್ವದ ಹಿಂಭಾಗದಲ್ಲಿ ಸೇವಕನೊಬ್ಬನು ಛತ್ರವನ್ನು ಹಿಡಿದಿದ್ದಾನೆ. ಪ್ರಾಯಶಃ

ಇವು ಯುದ್ಧದಲ್ಲಿ ಮಡಿದ ವೀರರ ಸ್ಮರಣಾರ್ಥದ ಶಿಲೆಗಳಾಗಿವೆ. ಇವುಗಳಲ್ಲಿ ಸಮಕಾಲೀನ ವೇಷಭೂಷಣಗಳು, ಸಾಮಾಜಿಕ ಸಂಪ್ರದಾಯಗಳು ಮತ್ತು ಯುದ್ಧದ ಸಂಗತಿಗಳು ವ್ಯಕ್ತವಾಗುತ್ತವೆ.

ದೊಡ್ಡೇರಿಯ ಕನ್ನೇಶ್ವರ, ಹುಲ್ಲೂರಿನ ಸಿದ್ದೇಶ್ವರ, ತಾಳ್ಯದ ಆಂಜನೇಯ ದೇವಾಲಯಗಳ ಆವರಣದಲ್ಲಿ ಮೂರು ದಂಪತಿಗಳ ಉಬ್ಬುಶಿಲ್ಪಗಳಿವೆ. ದೊಡ್ಡೇರಿಯ ಶಿಲ್ಪದಲ್ಲಿ ಖಡ್ಗ ಮತ್ತು ಡಾಲು ಹಿಡಿದ ವೀರನ ಹಾಗು ಅವನ ಬದಿಯಲ್ಲಿ ಸರ್ವಾಲಂಕಾರ ಭೂಷಿತಳಾದ ಸ್ತ್ರೀಯ ಶಿಲ್ಪವಿದೆ. ಇವು ಯುದ್ಧದಲ್ಲಿ ಮಡಿದ ವೀರ ಮತ್ತು ಅವನ ಜೊತೆ ಸತಿ ಹೋದ ಅವನ ಪತ್ನಿಯ ಶಿಲ್ಪಗಳು ಎಂದು ಸ್ಪಷ್ಟವಾಗುತ್ತವೆ. ಉಳಿದ ಎರಡು ಶಿಲ್ಪಗಳಲ್ಲಿ ಪುರುಷರು ವೀರರಂತೆ ತೋರದಿದ್ದರೂ, ಗಣ್ಯವ್ಯಕ್ತಿಗಳಾಗಿರಬಹುದೆಂದು ತರ್ಕಿಸಬಹುದು. ಅವರ ಬದಿಯಲ್ಲಿ ಕೂಡ ಸ್ತ್ರೀಶಿಲ್ಪಗಳಿದ್ದು, ಇವು ಕೂಡ ಸ್ಮಾರಕ ಶಿಲ್ಪಗಳಾಗಿದ್ದು, ಸಮಕಾಲೀನ ಸಾಮಾಜಿಕ ಸಂಗತಿಗಳನ್ನು ಪ್ರತಿಬಿಂಬಿಸುತ್ತವೆ. ಜೋಡಿರಂಗಾಪುರದ ರಂಗನಾಥ ಮತ್ತು ಜಾನಕಲ್ಲಿನ ಶಂಕರಲಿಂಗೇಶ್ವರ ದೇವಾಲಯಗಳಲ್ಲಿ ಅರಸರ ಮತ್ತು ಅರಸು ಪರಿವಾರದವರ ಚಿಕ್ಕ ಪ್ರತಿಮೆಗಳಿವೆ. ಇವುಗಳಿಂದ ಲೌಕಿಕ ಸಂಗತಿಗಳು ಸಹ ತಿಳಿಯುತ್ತವೆ. ಹಿರಿಯೂರು ಹಾಗು ನಂದಿಹಳ್ಳಿಗಳಲ್ಲಿ ಅರಸರ ಮತ್ತು ಅರಸು ಪರಿವಾರದ ಉಬ್ಬುಶಿಲ್ಪಗಳಿವೆ.

ಜೋಡಿರಂಗಾಪುರ ಮತ್ತು ಹಂಪನೂರುಗಳಲ್ಲಿ ಮಹಾಸತಿ ಕಲ್ಲುಗಳಿವೆ. ಇಲ್ಲಿ ಸಂಪೂರ್ಣ ಸ್ತ್ರೀಯ ಶಿಲ್ಪವಿದ್ದು, ಬಲಗೈಯನ್ನು ಮೇಲಕ್ಕೆ ಎತ್ತಿ ಹಿಡಿದಿದ್ದಾಳೆ. ತಲೆಯ ಮೇಲೆ ಸಾಲಾಗಿ ಉದ್ದವಾದ ಎಲೆಗಳನ್ನು, ಇಲ್ಲವೇ ಪಕ್ಷಿಗಳ ಪುಕ್ಕಗಳನ್ನು ಸಾಲಾಗಿ ಸಿಕ್ಕಿಸಿಕೊಂಡಿರುವಂತೆ ಅಲಂಕಾರವಿದೆ. ಕಿವಿಯಲ್ಲಿ ಪತ್ರಕುಂಡಲವಿದ್ದು, ಕೊರಳಲ್ಲಿ ಸರಗಳು, ತೋಳ್ಬಂಧಿ, ಬಳೆಗಳು, ಕಾಲಿನಲ್ಲಿ ಕಾಲ್ಗೆಜ್ಜೆ ಮುಂತಾದ ಆಭರಣಗಳಿವೆ. ಎಡಗೈಯನ್ನು ಕೆಳಕ್ಕೆ ಇಳಿಬಿಟ್ಟಿದ್ದು ಹಸ್ತದಲ್ಲಿ ನಿಂಬೆಹಣ್ಣಿನಂತಹ ವಸ್ತುವಿದೆ. ಈ ಶಿಲ್ಪಗಳು ಕೆತ್ತನೆ ದೃಷ್ಟಿಯಿಂದ ಪರಿಪೂರ್ಣವಾಗಿಲ್ಲದಿದ್ದರೂ ಸಮಕಾಲೀನ ಸಂಗತಿಯನ್ನು ವ್ಯಕ್ತಪಡಿಸುತ್ತವೆ. ಈ ಶಿಲ್ಪಗಳಿಂದ ವೇದ್ಯವಾಗುವ ಮತ್ತೊಂದು ಸಂಗತಿಯೆಂದರೆ, ಸತೀ ಹೋಗುವ ಮುನ್ನ ಸ್ತ್ರೀ ಸರ್ವಾಲಂಕಾರ ಭೂಷಿತಳಾಗುತ್ತಿದ್ದಳೆಂದು. ಇಂತಹ ಬಿಡಿಶಿಲ್ಪಗಳಿಂದ ಚಿತ್ರದುರ್ಗ ಪಾಳೆಯಗಾರರ ಕಾಲದ ಯುದ್ಧದಂತಹ ರಾಜಕೀಯ, ಧಾರ್ಮಿಕ ಮತ್ತು ಸಾಮಾಜಿಕ ಜೀವನದ ಸಂಗತಿಗಳನ್ನು ತಿಳಿಯಬಹುದಾಗಿದೆ.

ಉಬ್ಬುಶಿಲ್ಪಗಳು : ಚಿತ್ರದುರ್ಗ ಪಾಳೆಯಗಾರರ ಕಾಲದ ಸ್ಮಾರಕಗಳಲ್ಲಿ ಉಬ್ಬುಶಿಲ್ಪಗಳು ಮೂರು ಪ್ರಕಾರಗಳಲ್ಲಿ ಕಂಡುಬರುತ್ತವೆ. ಅವು ಅಧಿಷ್ಠಾನಗಳ ಮೇಲಿನ ಉಬ್ಬುಶಿಲ್ಪಗಳು,

ಭಿತ್ತಿಯ ಮೇಲಿನ ಉಬ್ಬುಶಿಲ್ಪಗಳು ಮತ್ತು ಕಂಬಗಳ ಮೇಲಿನ ಉಬ್ಬುಶಿಲ್ಪಗಳು. ಅಧಿಷ್ಠಾನದ ಮೇಲಿನ ಶಿಲ್ಪಗಳು ತೀರಾ ವಿರಳವಾಗಿ, ಭಿತ್ತಿಯ ಮೇಲಿನ ಶಿಲ್ಪಗಳು ಸಾಧಾರಣವಾಗಿ ಮತ್ತು ಕಂಬಗಳ ಮೇಲಿನ ಶಿಲ್ಪಗಳು ಅಧಿಕ ಸಂಖ್ಯೆಯಲ್ಲಿ ಕಂಡುಬರುತ್ತವೆ.

ಅಧಿಷ್ಠಾನದ ಮೇಲಿನ ಉಬ್ಬುಶಿಲ್ಪಗಳು : ಚಿತ್ರದುರ್ಗ ಪರಿಸರದಲ್ಲಿಯೇ ಅತ್ಯಂತ ಆಕರ್ಷಕವಾದ ದೇವಾಲಯವೆಂದರೆ ನೀರ್ಥಡಿಯ ರಂಗನಾಥಸ್ವಾಮಿ ದೇವಾಲಯ. ಈ ದೇವಾಲಯದ ಅಧಿಷ್ಠಾನ, ಭಿತ್ತಿ, ಕಂಬಗಳು ಎಲ್ಲವೂ ಸಂಪೂರ್ಣ ವಿಜಯನಗರ ಶೈಲಿಯಲ್ಲಿ ಮನಮೋಹಕವಾಗಿ ಕೆತ್ತಲ್ಪಟ್ಟಿವೆ. ಇಲ್ಲಿಯ ಅಧಿಷ್ಠಾನವೂ ಕೂಡ ಹಂಪಿಯ ವಿಜಯವಿಠ್ಠಲ ದೇವಾಲಯದ ಅಧಿಷ್ಠಾನದಂತೆ ಆಕರ್ಷಕವಾಗಿದ್ದು, ಅಧಿಷ್ಠಾನಗಳ ಭಾಗಗಳಲ್ಲಿ ಸಾಲಾಗಿ ಉಬ್ಬುಶಿಲ್ಪಗಳು ಇವೆ. ಅಧಿಷ್ಠಾನದ ತೀರಾ ಕೆಳಗಿನ ಗಳಭಾಗದಲ್ಲಿ ಹೆಚ್ಚಾಗಿ ಆನೆಗಳ ವಿವಿಧ ಚಟುವಟಿಕೆಗೆ ಸಂಬಂಧಿಸಿದ ಉಬ್ಬುಶಿಲ್ಪಗಳು ಆಕರ್ಷಕವಾಗಿವೆ. ಗಜಕಾಳಗ, ಆನೆಗಳ ಸಾಲು, ಆನೆಯನ್ನು ಬಂಧಿಸಿ ಕರೆದೊಯ್ಯುತ್ತಿರುವ ವ್ಯಕ್ತಿಗಳು, ಮತ್ತು ಟಗರಿನ ಕಾಳಗದ ಶಿಲ್ಪಗಳಿವೆ. ಎರಡನೆಯ ಗಳಭಾಗದಲ್ಲಿ ಅಶ್ವಕ್ಕೆ ಸಂಬಂಧಿಸಿದ ವಿವಿಧ ರೀತಿಯ ಚಟುವಟಿಕೆಯ ಶಿಲ್ಪಗಳಿವೆ. ಅಶ್ವಗಳ ಸಾಲು ವಿಜಯವಿಠ್ಠಲ ದೇವಾಲಯದಲ್ಲಿರುವಂತೆ ಗಡ್ಡಧಾರಿಗಳಾದ ಅರಬ್ ದೇಶದ ಅಶ್ವವ್ಯಾಪಾರಿಗಳ ಮುಂತಾದ ಅಶ್ವ ಸಂಬಂಧಿ ಚಟುವಟಿಕೆಗಳ ಉಬ್ಬುಶಿಲ್ಪಗಳು ಸಾಲಾಗಿವೆ. ಮೂರನೆಯ ಗಳ ಭಾಗದಲ್ಲಿ ಕೋಲಾಟವಾಡುತ್ತಿರುವ ಸ್ತ್ರೀಯರ ಸಾಲುಗಳಿವೆ. ಅಧಿಷ್ಠಾನದ ಮೇಲಿನ ಉಪಭಿತ್ತಿಯಲ್ಲಿ ರಾಮಾಯಣಕ್ಕೆ ಸಂಬಂಧಿಸಿದ ದೃಶ್ಯ ಶಿಲ್ಪಗಳಿವೆ. ಹೀಗೆ ವೈವಿಧ್ಯಮಯವಾದ ಉಬ್ಬುಶಿಲ್ಪಗಳನ್ನು ಹೊಂದಿರುವ ನೀರ್ಥಡಿಯ ಶ್ರೀರಂಗನಾಥಸ್ವಾಮಿ ದೇವಾಲಯದ ಅಧಿಷ್ಠಾನ ಬಹು ವಿಶಿಷ್ಟವೆನಿಸುತ್ತದೆ.

ಇದೇ ದೇವಾಲಯದ ಧ್ವಜಸ್ತಂಬದ ಅಧಿಷ್ಠಾನದ ಪಟ್ಟಿಕೆಗಳ ಮೇಲೂ ದೇವಾಲಯ ನಿರ್ಮಾತೃ ರಾಜಪರಿವಾರದವರ ಉಬ್ಬುಶಿಲ್ಪಗಳು ಅಧಿಕ ಸಂಖ್ಯೆಯಲ್ಲಿವೆ. ಕೆಳಹಂತದಲ್ಲಿ ಆರು ಜೋಡಿದಂಪತಿಗಳ ಶಿಲ್ಪಗಳಿದ್ದು ಅಂಜಲಿಮುದ್ರೆಯಲ್ಲಿವೆ. ಮಧ್ಯದಲ್ಲಿ ಐದು ಜೋಡಿಗಳಿದ್ದು, ಅದರಲ್ಲಿ ನಟ್ಟನಡುವಿನ ಅರಸನ ಎರಡು ಬದಿಯಲ್ಲಿ ರಾಣಿಯರ ಶಿಲ್ಪಗಳಿವೆ. ಮೇಲ್ಭಾಗದಲ್ಲಿ ನಾಲ್ಕು ಜನ ಅರಸರು, ಅವರ ಇಕ್ಕೆಲಗಳಲ್ಲಿ ಒಬ್ಬೊಬ್ಬ ರಾಣಿಯ ನಾಲ್ಕು ದಂಪತಿಗಳ ಶಿಲ್ಪಗಳಿವೆ. ಇವೂ ಕೂಡ ಅಂಜಲಿಮುದ್ರೆಯಲ್ಲಿವೆ. ಇವುಗಳ ಕೇಶವಿನ್ಯಾಸ, ಮೈಮೇಲಿನ ಆಭರಣಗಳು ಮತ್ತು ವಸ್ತ್ರಗಳು ಸಮಕಾಲೀನ ಸಂಗತಿಯನ್ನು ಬಿಂಬಿಸುತ್ತವೆ. ಈ ಎಲ್ಲಾ ಶಿಲ್ಪಗಳು ಹೆಚ್ಚು ಶಿಷ್ಟಪ್ರಕಾರದಲ್ಲಿದ್ದರೆ, ಹಿರಿಯೂರಿನ ತೇರುಮಲ್ಲೇಶ್ವರ, ಕೊರಟಗೆರೆಯ ರಂಗನಾಥ, ಅಂಬಲಗೆರೆಯ ರಂಗನಾಥ ದೇವಾಲಯಗಳ ಅಧಿಷ್ಠಾನಗಳ

ಮೇಲಿನ ಉಬ್ಬುಶಿಲ್ಪಗಳು ಸ್ಥಳೀಯ ಶೈಲಿಯಲ್ಲಿವೆ. ಇಲ್ಲಿ ಅಧಿಷ್ಠಾನ ಮಂಚಬಂಧ ಶೈಲಿಯಲ್ಲಿದ್ದು, ಅಷ್ಟೇನು ಆಕರ್ಷಕವಾಗಿರುವುದಿಲ್ಲ. ಆದರೆ ಗಳಭಾಗ ಸ್ವಲ್ಪ ದೀರ್ಘವಾಗಿರುತ್ತದೆ. ಈ ಗಳಭಾಗದಲ್ಲಿ ಇಡೀ ಗಳಭಾಗವನ್ನು ಅವರಿಸಿರುವಂತೆ ಸಾಲಾಗಿ ಉಬ್ಬುಶಿಲ್ಪಗಳು ಕಂಡುಬರುತ್ತವೆ. ಹೆಚ್ಚಾಗಿ ಆನೆಗಳು, ಅವುಗಳ ಮಾವುತರು, ಅಲ್ಲಲ್ಲಿ ಅಶ್ವಗಳು, ಜೋಡಿಮೀನುಗಳ ಶಿಲ್ಪಗಳು ಇವೆ. ಅಂಬಲಗೆರೆಯ ರಂಗನಾಥಸ್ವಾಮಿ ದೇವಾಲಯದ ಅಧಿಷ್ಠಾನದಲ್ಲಿ ವಿಜಯನಗರದ ಲಾಂಛನವಾದ ವರಹ ಮತ್ತು ಖಡ್ಗದ ಶಿಲ್ಪಗಳಿರುವುದು ಗಮನಾರ್ಹವಾಗಿದೆ.

ಒಟ್ಟಿನಲ್ಲಿ ಪಾಳೆಯಗಾರರ ಕಾಲದ ದೇವಾಲಯಗಳ ಮೇಲಿನ ಅಧಿಷ್ಠಾನಗಳಲ್ಲಿ ಉಬ್ಬುಶಿಲ್ಪಗಳು ಹೆಚ್ಚಾಗಿ ಕಂಡುಬರುವುದಿಲ್ಲ. ದೇವಾಲಯ ಸಂಕೀರ್ಣ ರೂಪದಿಂದ ಸರಳಕ್ಕೆ ರೂಪಾಂತರಗೊಂಡಿರುವ ಸನ್ನಿವೇಶ ಇವುಗಳಿಂದ ವ್ಯಕ್ತವಾಗುತ್ತದೆ.

ಭಿತ್ತಿಯ ಮೇಲಿನ ಉಬ್ಬುಶಿಲ್ಪಗಳು : ಚಿತ್ರದುರ್ಗ ಪಾಳೆಯಗಾರರ ಕಾಲದ ದೇವಾಲಯಗಳ ಭಿತ್ತಿಗಳ ಮೇಲೆ ಸಾಧಾರಣವಾಗಿ ಉಬ್ಬುಶಿಲ್ಪಗಳು ಕಂಡುಬರುತ್ತವೆ. ಇವುಗಳನ್ನು ಮನುಷ್ಯ ಶಿಲ್ಪಗಳು ಮತ್ತು ಪ್ರಾಣಿಶಿಲ್ಪಗಳೆಂದು ಎರಡು ರೀತಿಯಲ್ಲಿ ವರ್ಗೀಕರಿಸಬಹುದು.

ಮನುಷ್ಯ ಶಿಲ್ಪಗಳಲ್ಲಿ ದೃಶ್ಯ ಚಿತ್ರಗಳೇ ಅಧಿಕವಾಗಿವೆ. ಇಂತಹ ಶಿಲ್ಪಗಳು ಹೆಚ್ಚಾಗಿ ಹಿರಿಯೂರಿನ ತೇರುಮಲ್ಲೇಶ್ವರ ದೇವಾಲಯದ ಭಿತ್ತಿಯ ಮೇಲೆ ಕಂಡುಬರುತ್ತವೆ. ಇಲ್ಲಿ ಶಿವಲಿಂಗ ಆರಾಧಕರು, ಶಿವಪುರಾಣದ ಕಿರಾತಾರ್ಜುನೀಯ ಸನ್ನಿವೇಶ, ತ್ರಿಪುರಾಂತಕ ಶಿವ, ಗಜಾಸುರಮರ್ಧನ ಮುಂತಾದ ಶಿವಪುರಾಣದ ದೃಶ್ಯಗಳನ್ನು ಕೆತ್ತಲಾಗಿದೆ. ಕೊಣಚಗಲ್ ರಂಗನಾಥಸ್ವಾಮಿ, ಮಾರಿಕಣಿವೆಯ ಮಾರಿಕಾಂಭ ಮತ್ತು ಹಿರಿಯೂರಿನ ತೇರುಮಲ್ಲೇಶ್ವರ ದೇವಾಲಯಗಳ ಭಿತ್ತಿಯಲ್ಲಿ ಅಲ್ಲಲ್ಲಿ ಮಿಥುನಶಿಲ್ಪಗಳಿವೆ.

ಪ್ರಾಣಿಶಿಲ್ಪಗಳಲ್ಲಿ ಪಾಳೆಯಗಾರರದೇ ಆದ ಒಂದು ವಿಶಿಷ್ಟ ಲಕ್ಷಣವನ್ನು ಗುರುತಿಸಬಹುದು. ಸಾಮಾನ್ಯವಾಗಿ ಹೆಚ್ಚಿನ ದೇವಾಲಯಗಳ ಭಿತ್ತಿಯಲ್ಲಿ ಅವರ ರಾಜಲಾಂಛನವಾದ ಏಳು ಹೆಡೆಯ ನಾಗಸರ್ಪವನ್ನು ಕೆತ್ತಲಾಗಿದೆ. ಚಿತ್ರದುರ್ಗದ ಕೋಟೆ, ಹುಲ್ಲೂರಿನ ಆಂಜನೇಯ, ಕುಂದುರ್ಪಿಯ ವೀರಭದ್ರಸ್ವಾಮಿ, ಹೊಳಲ್ಕೆರೆ ವೀರಭದ್ರಸ್ವಾಮಿ, ಅಂಬಲಗೆರೆಯ ರಂಗನಾಥ, ಚಳ್ಳಕೆರೆಯ ಚಳ್ಳಕೆರಮ್ಮ, ಕೊರಟಗೆರೆ ರಂಗನಾಥ ದೇವಾಲಯಗಳಲ್ಲಿ ಕಾಣ ಬಹುದು. ಕೆಲವು ಕಡೆ ನಾಗಸರ್ಪಕ್ಕೆ ಒಂದೇ ಹೆಡೆಯನ್ನು ತೋರಿಸಲಾಗಿದೆ. ಜೊತೆಗೆ ವಿಶಿಷ್ಟವೆನಿಸುವಂತೆ ಪರಸ್ಪರ ಅಭಿಮುಖವಾಗಿರುವ ಜೋಡಿಮೀನುಗಳು, ಹೋರಾಡುತ್ತಿರುವ ಆನೆಗಳು, ಆಮೆ,

ಮೀನು, ಗಜಶಾರ್ದೂಲ, ವಿವಿಧ ಭಂಗಿಯ ಹಸುಗಳ ಶಿಲ್ಪಗಳಿವೆ. ಇವು ಆಕರ್ಷಕವಾಗಿರದೆ ಜಾನಪದೀಯ ಅಥವಾ ಬುಡಕಟ್ಟು ಚಿತ್ರಗಳಂತೆ ತೋರುತ್ತವೆ.

ಕಂಬಗಳ ಮೇಲಿನ ಉಬ್ಬುಶಿಲ್ಪಗಳು : ಕಂಬಗಳ ಮೇಲಿನ ಉಬ್ಬುಶಿಲ್ಪಗಳು ಸಂಖ್ಯಾತ್ಮಕವಾಗಿ ವಿಪುಲವಾಗಿರುವಂತೆ, ವಿಷಯ ವೈವಿಧ್ಯತೆಯಿಂದಲೂ ಕೂಡಿವೆ. ಸಾಮಾನ್ಯವಾಗಿ ಕಂಬಗಳ ಕಾಂಡಭಾಗದ ಕೆಳಗಿನ ಚೌಕಭಾಗದ ನಾಲ್ಕು ಬದಿಯಲ್ಲಿ ಹೆಚ್ಚಾಗಿ ಇಂತಹ ಶಿಲ್ಪಗಳಿವೆ. ಜೊತೆಗೆ ಕಂಬದ ಮಧ್ಯದ ಮತ್ತು ಮೇಲಿನ ಚೌಕಭಾಗಗಳಲ್ಲೂ ಅಲ್ಲಲ್ಲಿ ಶಿಲ್ಪಗಳು ಕಂಡುಬರುತ್ತವೆ. ಕಂಬಗಳ ಮೇಲಿರುವುದರಿಂದ ಇವು ಚಿಕ್ಕ ಪ್ರಮಾಣದಲ್ಲಿರುತ್ತವೆ. ಶೈಲಿಯ ದೃಷ್ಟಿಯಿಂದ ಈ ಶಿಲ್ಪಗಳು ವಿಜಯನಗರದಂತೆ ಶಿಷ್ಟ ಪ್ರಕಾರದಲ್ಲಿ ಮತ್ತು ಪಾಳೆಯಗಾರರ ಸ್ವಂತ ಪ್ರಾದೇಶಿಕ ಶೈಲಿಗಳಲ್ಲಿವೆ. ವಿಷಯದಿಂದ ಶೈವ, ವೈಷ್ಣವ ಮುಂತಾದ ಧಾರ್ಮಿಕ ವಿಷಯಗಳ, ಲೌಕಿಕವಾಗಿ ಅರಸರ, ವಾದ್ಯಗಾರರ ಮತ್ತು ಮಿಥುನ ಶಿಲ್ಪಗಳ ಮತ್ತಿತರ ಅನೇಕ ಪ್ರಕಾರಗಳನ್ನು ಗುರುತಿಸಬಹುದು. ಜೊತೆಗೆ ಸಿಂಹ, ಹಂಸ ಮುಂತಾದ ಪ್ರಾಣಿಗಳ, ಗಿಡ, ಪುಷ್ಪ, ರಂಗೋಲಿ ಆಕೃತಿಗಳನ್ನು ಸಹ ಕಾಣಬಹುದು.

ವ್ಯಕ್ತಿಶಿಲ್ಪಗಳಲ್ಲಿ ದೇವತಾಶಿಲ್ಪಗಳು ಹೆಚ್ಚಾಗಿವೆ. ಇಂತಹ ಶಿಲ್ಪಗಳು ಸಾಮಾನ್ಯವಾಗಿ ಎಲ್ಲಾ ದೇವಾಲಯಗಳಲ್ಲಿ ಕಂಡುಬಂದರೂ, ನೀರ್ಥಡಿಯ ರಂಗನಾಥಸ್ವಾಮಿ ಮತ್ತು ಹೊರೆಕೆರೆದೇವರಪುರದ ಲಕ್ಷ್ಮೀರಂಗನಾಥಸ್ವಾಮಿ ದೇವಾಲಯದ ಶಿಲ್ಪಗಳು ಹೆಚ್ಚು ವೈಶಿಷ್ಟ್ಯಪೂರ್ಣವಾಗಿವೆ. ನೀರ್ಥಡಿಯಲ್ಲಿ ವೇಣುಗೋಪಾಲ, ಲಕ್ಷ್ಮೀನರಸಿಂಹ, ಕಾಳಿಂಗಮರ್ದನಕೃಷ್ಣ, ಪೂತನಿಸಂಹಾರದ ಕೃಷ್ಣ, ವಿಷ್ಣು ಹಾಗು ಗರುಡರ ಶಿಲ್ಪಗಳು ಪರಿಪೂರ್ಣ ಕೆತ್ತನೆ, ನೀಳತೆ ಮತ್ತು ಹೆಚ್ಚು ಕುಸುರಿಯ ಅಲಂಕರಣೆಯಿಂದ ಗಮನಸೆಳೆಯುತ್ತವೆ. ವಿಜಯನಗರದ ದೇವಾಲಯಗಳಲ್ಲಿರುವಂತೆ ಕಾಳಿಂಗಮರ್ದನ ಕೃಷ್ಣನ ಶಿಲ್ಪದ ಒಂದು ಸಾಮಾನ್ಯರೂಪ ಪದೇಪದೇ ಕಂಡುಬರುತ್ತದೆ. ಆದರೆ ಇಲ್ಲಿ ಆ ರೂಪಕ್ಕಿಂತ ವಿಭಿನ್ನವಾದ ಶೈಲಿ ಮತ್ತು ಭಂಗಿಯಿಂದ ಅಪರೂಪದ್ದೆನಿಸುತ್ತದೆ. ನೀಳವಾದ ಕಿರೀಟಮುಕುಟ, ಮೈತುಂಬಾ ಆಭರಣಗಳು, ಹಾವನ್ನು ಹಿಡಿದ ಭಂಗಿ ಎಲ್ಲವೂ ವಿಭಿನ್ನವಾಗಿದೆ. ಅದರಂತೆ ಒಂದು ರೀತಿಯಲ್ಲಿ ಸವ್ಯಲಲಿತಾಸನದಲ್ಲಿ ಕುಳಿತಿರುವ ನರಸಿಂಹನ ಶಿಲ್ಪವು ವಿಭಿನ್ನವೆನಿಸುತ್ತದೆ. ಇಡೀ ದೇಹ ತ್ರಿಭಂಗಿಯಲ್ಲಿದೆ. ಮುಖ ಎಡಕ್ಕೆ ವಾಲಿದೆ. ತೊಡೆಯ ಮೇಲೆ ಲಕ್ಷ್ಮೀ ಆಸೀನಳಾಗಿದ್ದಾಳೆ. ಹಂಪಿಯ ಪ್ರಸಿದ್ಧ ಲಕ್ಷ್ಮೀನರಸಿಂಹನ ವಿಗ್ರಹ ಮತ್ತು ಅದೇ ರೀತಿಯ ಕಂಬಗಳ ಮೇಲಿನ ವಿಗ್ರಹಗಳ ರೂಪಕ್ಕಿಂತ ಇದು ವಿಭಿನ್ನವೆನಿಸುತ್ತದೆ. ಜೊತೆಗೆ ವೇಣುಗೋಪಾಲನ ಶಿಲ್ಪದ ಬದಿಯಲ್ಲಿ ಒಂದು ಕಡೆ ಗೋವು ಮತ್ತೊಂದು ಕಡೆ ಸಿಂಹವಿರುವುದು ಕೂಡ

ಮಹತ್ವದ ಅಂಶ. ಮತ್ತು ಪೂತನಿ ಸಂಹಾರದ ದೃಶ್ಯವೊಂದು ವಿಶೇಷವಾಗಿದೆ. ಪೂತನಿ ರಾಕ್ಷಸಿಯ ಸ್ತನ್ಯಪಾನ ಮಾಡಿದ ಬಾಲಕೃಷ್ಣ ಆಕೆಯ ಶಕ್ತಿಯನ್ನೆಲ್ಲಾ ಹೀರಿದಾಗ ಅಸ್ಥಿಪಂಜರದಂತೆ ತೋರುವ ಆಕೆಯ ಬಡಕಲು ದೇಹವನ್ನು ಸಮರ್ಪಕವಾಗಿ ತೋರಿಸಲಾಗಿದೆ.[೨೩] ಹೀಗೆ ನೀರ್ಥಡಿಯ ಈ ಶಿಲ್ಪಗಳು ಶಿಷ್ಪಪ್ರಕಾರದಲ್ಲಿಯೇ ಬಹಳ ವಿಶಿಷ್ಟವೆನಿಸುತ್ತವೆ.

ಅದೇ ರೀತಿ ಇಲ್ಲಿಯೇ ಇರುವ ಭೈರವ, ಬೇಡರಕಣ್ಣಪ್ಪ ಮತ್ತು ಗಣೇಶನ ಶಿಲ್ಪಗಳು ಪರಿಪೂರ್ಣವಾಗಿವೆ. ಭೈರವನ ತಲೆಯ ಮೇಲೆ ಟೊಪ್ಪಿಗೆ ಮಾದರಿಯ ಕೇಶವಿನ್ಯಾಸವಿರುವುದು ಅಪರೂಪದ್ದೆನಿಸುತ್ತದೆ. ಜೊತೆಗೆ ಭೈರವನ ಕೈಯಲ್ಲಿರುವ ರುಂಡದಿಂದ ಸುರಿಯುತ್ತಿರುವ ರಕ್ತವನ್ನು ಕುಡಿಯುತ್ತಿರುವ ನಾಯಿಯ ಭಂಗಿಯನ್ನು ವಿಭಿನ್ನವಾಗಿ ರೂಪಿಸಲಾಗಿದೆ. ಹಿರಿಯೂರಿನ ತೇರುಮಲ್ಲೇಶ್ವರ ಮತ್ತು ಹೊರಕೆರೆದೇವರಪುರದ ಲಕ್ಷ್ಮೀರಂಗನಾಥ, ಕುಂದುರ್ಪಿಯ ವೀರಭದ್ರಸ್ವಾಮಿ ದೇವಾಲಯಗಳಲ್ಲಿ ಸ್ಥಳೀಯ ಉಬ್ಬುಶಿಲ್ಪಗಳಿವೆ. ಇವುಗಳಲ್ಲಿ ಹೊರಕೆರದೇವಪುರದ ವೀರಭದ್ರ, ಬೇಡರಕಣ್ಣಪ್ಪ, ಭೈರವ, ಗಣೇಶ, ಕುಂದುರ್ಪಿಯ ವಿವಿಧ ಭಂಗಿಯ ಗಣೇಶ ಶಿಲ್ಪಗಳು, ಹಿರಿಯೂರಿನ ಭೈರವ ಶಿಲ್ಪಗಳು ವಿಶಿಷ್ಟವಾಗಿವೆ. ಸಾಮಾನ್ಯವಾಗಿ ಗಣೇಶನ ವಿಗ್ರಹವನ್ನು ಸುಖಾಸೀನ ಭಂಗಿಯಲ್ಲಿ ಕೆತ್ತಿರುವುದು ರೂಢಿ. ಆದರೆ ಕುಂದುರ್ಪಿಯಲ್ಲಿ ನೃತ್ಯ ಮಾಡುತ್ತಿರುವ ಗಣೇಶನ ವಿಗ್ರಹವೂ ಅಪರೂಪದ್ದೆನಿಸುತ್ತದೆ. ಈ ಶಿಲ್ಪಗಳ ರೂಪಣದಲ್ಲಿ ತೀರಾ ಸರಳತೆ ಇದೆ. ಆಭರಣ, ವಸ್ತ್ರಗಳಾಗಲಿ, ಅಂಗಾಂಗಗಳಾಗಲಿ ಅಷ್ಟು ಪರಿಪೂರ್ಣತೆಯನ್ನು ಹೊಂದಿರುವುದಿಲ್ಲ. ಇವೆಲ್ಲಾ ಸ್ಥಳೀಯ ಶೈಲಿಯನ್ನು ಬಿಂಬಿಸುತ್ತವೆ. ಅದೇ ರೀತಿ ಹಿರಿಯೂರಿನಲ್ಲಿ ವಿಠ್ಠಲ, ನೀರ್ಥಡಿ ಮತ್ತು ಹೊರಕೆರೆದೇವರಪುರ ಮುಂತಾದ ದೇವಾಲಯಗಳಲ್ಲಿ ಶೇಷಶಯನ ರಂಗನಾಥ, ನೃತ್ಯ ಮಾಡುತ್ತಿರುವ ನಗ್ನ ಬಾಲಕೃಷ್ಣ, ಬೆಣ್ಣೆಕೃಷ್ಣ, ಗೋಪಿಕಾ ವಸ್ತ್ರಾಪಹರಣ ದೃಶ್ಯಗಳು, ಪೂತನಿಸಂಹಾರದ ದೃಶ್ಯಗಳು ಮನಮೋಹಕವಾಗಿವೆ.

ಹೊರಕೆರದೇವರಪುರದ ರಂಗನಾಥಸ್ವಾಮಿ ದೇವಾಲಯದಲ್ಲಿರುವ ಅನಂತಶಯನ ವಿಷ್ಣು ಸಹಜವಾಗಿದ್ದರೆ, ಅಲ್ಲಿಯ ಲಕ್ಷ್ಮಿ ದೇವಾಲಯದ ಅನಂತಶಯನ ಅಸಹಜತೆಯಿಂದ ಕೂಡಿದೆ. ಇಲ್ಲಿ ಹಾವಿನ ಮಡಿಕೆಗಳು, ಅದರ ಮೇಲೆ ವಿಷ್ಣು ಮಲಗಿದ ಭಂಗಿ, ಆತನ ವೇಷಭೂಷಣ, ನಾಭಿಯಲ್ಲಿ ಬ್ರಹ್ಮನನ್ನು ತೋರಿಸಿರುವ ರೀತಿ, ಜೊತೆಗಿರುವ ಶ್ರೀದೇವಿ ಶಿಲ್ಪ ಇವೆಲ್ಲವುಗಳಲ್ಲಿ ಹೆಚ್ಚು ಸ್ಥಳೀಯತೆ ಕಂಡುಬರುತ್ತಿದ್ದು, ಕಾಲಮಾನದ ದೃಷ್ಟಿಯಿಂದ ಇವೆರಡೂ ಬೇರೆ ಬೇರೆ ಕಾಲದ್ದೆಂದು ತಿಳಿಯುತ್ತದೆ. ಇಲ್ಲಿಯೇ ಪೂತನಿಯ ತೊಡೆಯ ಮೇಲೆ ಮಲಗಿ ಆಕೆಯ ಸ್ತನ್ಯಪಾನ ಮಾಡುತ್ತಿರುವ ಕೃಷ್ಣ, ಬೆಣ್ಣೆ ಕಡೆಯುತ್ತಿರುವ ಗೊಲ್ಲತಿಯ ಗಡಿಗೆಯಿಂದ ಬೆಣ್ಣೆ ಕದ್ದು ಮೆಲ್ಲುತ್ತಿರುವ ಕೃಷ್ಣ, ತಮ್ಮ ವಸ್ತ್ರಗಳನ್ನು ಕದ್ದು ಮರವೇರಿ

ಕುಳಿತಿರುವ ಕೃಷ್ಣನಿಗೆ ತಮ್ಮ ವಸ್ತ್ರಗಳನ್ನು ಕೊಡುವಂತೆ ಬೇಡಿಕೊಳ್ಳುತ್ತಿರುವ ನಗ್ನಗೋಪಿಕಾಸ್ತ್ರೀಯರ ಶಿಲ್ಪಗಳು ಮನಮೋಹಕವಾಗಿವೆ. ಜೊತೆಗೆ ಕೇಶವ, ಗರುಡ, ಹಾಗು ವೀರಾಂಜನೇಯ ಶಿಲ್ಪಗಳೂ ಕಂಡುಬರುತ್ತವೆ.

ವಿಜಯನಗರ ಕಾಲದಲ್ಲಿ ವೈಷ್ಣವ ದೇವಾಲಯಗಳಲ್ಲಿ ಹೆಚ್ಚಾಗಿ ಕಂಡುಬರುವ ಮತ್ತೊಂದು ಶಿಲ್ಪವೆಂದರೆ ರಾಮಾನುಜಾಚಾರ್ಯರವರದು. ದಂಡಿಯನ್ನು ಕೊಂಕಳದಲ್ಲಿ ಹಿಡಿದು ಅಂಜಲಿಬದ್ಧರಾಗಿರುವ ರಾಮಾನುಜಾಚಾರ್ಯರ ಶಿಲ್ಪಗಳನ್ನು ಕೆತ್ತುವ ಪರಂಪರೆ ಪಾಳೆಯಗಾರರ ಕಾಲದಲ್ಲೂ ಮುಂದುವರೆದಿದೆ. ನೀರ್ಥಡಿ, ಹೊರೆಕೆರೆದೇವರಪುರದ ರಂಗನಾಥ ಮತ್ತು ಲಕ್ಷ್ಮಿ ದೇವಾಲಯದಲ್ಲಿ ಇಂತಹ ಶಿಲ್ಪಗಳನ್ನು ಕಾಣಬಹುದು.

ಲೌಕಿಕ ಶಿಲ್ಪಗಳಲ್ಲಿ ಪ್ರಾಯಶಃ ದೇವಾಲಯಗಳ ನಿರ್ಮಾತೃ ಅರಸರ, ಅಧಿಕಾರಿಗಳ, ಗಣ್ಯಮಾನ್ಯರ ಶಿಲ್ಪಗಳು ಸಾಮಾನ್ಯವಾಗಿ ಪ್ರತಿ ದೇವಾಲಯಗಳಲ್ಲೂ ಕಂಡುಬರುತ್ತವೆ. ಮುಖಮಂಟಪದ ಮುಂದಿನ ಕಂಬಗಳ ಮೇಲೆ ಇಲ್ಲವೆ, ಸಭಾಮಂಟಪ ಹಾಗು ಅಂತ ರಾಳದ ಕಂಬಗಳ ಮೇಲೆ ಈ ಶಿಲ್ಪಗಳಿದ್ದು, ಗರ್ಭಗೃಹಕ್ಕೆ ಅಭಿಮುಖವಾಗಿರುತ್ತವೆ. ಹೆಚ್ಚಾಗಿ ದಂಪತಿಗಳ ಶಿಲ್ಪಗಳಿದ್ದು ದೇವರಿಗೆ ನಮಸ್ಕರಿಸುವ ಅಂಜಲಿ ಮುದ್ರೆಯಲ್ಲಿ ನಿಂತಭಂಗಿಯಲ್ಲಿರುತ್ತವೆ. ಈ ಶಿಲ್ಪಗಳಿಂದ ಸಮಕಾಲೀನ ಅರಸರ, ಗಣ್ಯರ, ಸ್ವರೂಪ, ಕೇಶವಿನ್ಯಾಸ, ಧರಿಸುವ ಆಭರಣಗಳ ವೈವಿಧ್ಯತೆ ಮತ್ತು ಶಿಷ್ಟ ಉಡುಗೆತೊಡುಗೆಗಳನ್ನು ಗ್ರಹಿಸಬಹುದಾಗಿದೆ. ಇಂತಹ ಶಿಲ್ಪಗಳಲ್ಲಿ ನೀರ್ಥಡಿಯ ಶಿಲ್ಪಗಳು ಹೆಚ್ಚು ಶಿಷ್ಟ ಪ್ರಧಾನವಾಗಿವೆ. ಅವುಗಳ ಉಡುಗೆ-ತೊಡುಗೆ. ಕಿರೀಟ ಎಲ್ಲವೂ ವಿಭಿನ್ನವೆನಿಸುತ್ತವೆ. ಉಳಿದಂತೆ ಚಿತ್ರದುರ್ಗದ ಉತ್ಸವಾಂಬೆ, ವೆಂಕಟರಮಣ, ತಾಳ್ಯದ ಆಂಜನೇಯ, ಜೋಡಿರಂಗಾಪುರದ ರಂಗನಾಥ, ಚಿತ್ರಹಳ್ಳಿ ಆಂಜನೇಯ, ಕಡ್ಲೆಗುದ್ದು ಆಂಜನೇಯ, ಕೊಣಚಕಲ್ ರಂಗನಾಥ, ಹೊರಕೆರೆದೇವರಪುರದ ರಂಗನಾಥ ಮುಂತಾದ ದೇವಾಲಯಗಳಲ್ಲಿ ಇಂತಹ ಶಿಲ್ಪಗಳಿವೆ.

ಕೆಲವು ಸವಾರರ, ಪ್ರಾಣಿಬೇಟೆಯ, ಹಾವಾಡಿಗ, ವಾದ್ಯಗಾರ, ಗೊಲ್ಲ, ಮತ್ತು ಸುಂದರಿಯರ ಶಿಲ್ಪಗಳು ಅಲ್ಲಲ್ಲಿ ಇವೆ. ಹಿರಿಯೂರಿನ ತೇರುಮಲ್ಲೇಶ್ವರ ಮತ್ತು ಚಿತ್ರದುರ್ಗದ ವೆಂಕಟರಮಣ, ಉತ್ಸವಾಂಬೆ ದೇವಾಲಯಗಳಲ್ಲಿ ಹಾವಾಡಿಗನ ಶಿಲ್ಪಗಳಿದ್ದು, ಪರಸ್ಪರ ವಿಭಿನ್ನ ಶೈಲಿಯಲ್ಲಿವೆ. ತಾಳ್ಯದಲ್ಲಿ ಅಶ್ವಸವಾರ, ಗಜಸವಾರರ ಶಿಲ್ಪಗಳಿವೆ. ಚಿತ್ರದುರ್ಗದ ದೊಡ್ಡಪೇಟೆ ಆಂಜನೇಯ ದೇವಾಲಯದಲ್ಲಿ ಹುಲಿಯೊಡನೆ ಹೋರಾಡುತ್ತಿರುವ ವೀರನೊಬ್ಬನ ಶಿಲ್ಪವಿದೆ. ಇದೇ ರೀತಿ ಕುದುರೆಗೆ ಬಾಣ ಹೂಡಿರುವ ವ್ಯಕ್ತಿ(ಹೊರಕೆರೆದೇವರಪುರ), ಅಶ್ವವನ್ನು ಹಿಡಿದಿರುವ ವ್ಯಕ್ತಿ(ಹೊರಕೆರೆದೇವರಪುರ), ವಿದೂಷಕ (ಕುಂದುರ್ಪಿ ವೀರಭದ್ರಸ್ವಾಮಿ),

ಗೊಲ್ಲ(ಹಿರಿಯೂರು ತೇರುಮಲ್ಲೇಶ್ವರ), ಪೈಲ್ವಾನ (ದೊಡ್ಡಪೇಟೆ ಆಂಜನೇಯ), ಶಂಖವಾದಕ (ಹೊರಕೆರೆದೇವರಪುರ), ದಾಸ(ನೀರ್ಥಡಿ) ಮುಂತಾದ ಶಿಲ್ಪಗಳಿವೆ. ಬೇಲೂರು, ಹಳೇಬೀಡಿನ ಶಿಲಾಬಾಲಕಿಯರನ್ನು ಹೋಲುವ ಕೆಲವು ಶಿಲ್ಪಗಳೂ ಇವೆ. ಅವುಗಳಲ್ಲಿ ಕುಂದುರ್ಪಿಯ ಛಾಮರಧಾರಿಣಿ, ನೀರ್ಥಡಿಯ ರಂಗನಾಥ ಮತ್ತು ಚಿತ್ರದುರ್ಗದ ಚನ್ನಕೇಶವ ದೇವಾಲಯಗಳ ಸುಖಭಾಷಿಣಿ ಹಾಗು ಕಾಲಿನಲ್ಲಿ ನೆಟ್ಟ ಮುಳ್ಳನ್ನು ತೆಗೆಸಿಕೊಳ್ಳುತ್ತಿರುವ ಬೇಡತಿಯ ಶಿಲ್ಪಗಳಿದ್ದು, ಪ್ರಾಚೀನ ಪರಂಪರೆ ಮುಂದುವರೆದಿರುವುದಕ್ಕೆ ಸಾಕ್ಷಿಯಾಗಿವೆ.

ಅದೇ ರೀತಿ ನೃತ್ಯಗಾತಿಯರು(ನೀರ್ಥಡಿ, ಹೊರಕೆರೆದೇವರಪುರ, ಚಿತ್ರದುರ್ಗದ ಚನ್ನಕೇಶವ),ವೀಣೆನುಡಿಸುತ್ತಿರುವ ವೀಣಾವಾದಕಿ(ಕುಂದುರ್ಪಿ ವೀರಭದ್ರ, ಹೊರಕೆರೆದೇವರಪುರದ ಲಕ್ಷ್ಮಿರಂಗನಾಥ)ಶಿಲ್ಪಗಳಿವೆ. ಅಲ್ಲಲ್ಲಿ ಮಿಥುನಶಿಲ್ಪಗಳು ಕಂಡುಬರುತ್ತವೆ. ಅವುಗಳಲ್ಲಿ ಕುಂದುರ್ಪಿಯ ವೀರಭದ್ರ ದೇವಾಲಯದಲ್ಲಿಯ ಗುಪ್ತಾಂಗವನ್ನು ಪ್ರದರ್ಶಿಸುತ್ತಿರುವ ಪುರುಷ, ಕುಳಿತಭಂಗಿಯಲ್ಲಿರುವ ನಗ್ನಸ್ತ್ರೀಯ ಶಿಲ್ಪಗಳಿವೆ. ನೀರ್ಥಡಿಯ ನಗ್ನಬಾಲಕಿಯ ಶಿಲ್ಪ ಅತ್ಯಂತ ಆಕರ್ಷಕವಾಗಿದೆ. ತಾಳ್ಯ, ಕುಂದುರ್ಪಿ, ಹೊರಕೆರೆದೇವರಪುರ ದೇವಾಲಯಗಳಲ್ಲಿ ಸಂಭೋಗ ರತಿಕ್ರೀಡೆಯ ಶಿಲ್ಪಗಳೂ ಇವೆ. ಹೀಗೆ ವ್ಯಕ್ತಿಸಂಬಂಧಿತ ಉಬ್ಬುಶಿಲ್ಪಗಳಲ್ಲಿ ಹೆಚ್ಚಿನ ವೈವಿಧ್ಯತೆ ಕಂಡುಬರುತ್ತದೆ. ಧಾರ್ಮಿಕವಾಗಿ ದೇವಾನುದೇವತೆಗಳ, ಪೌರಾಣಿಕವಾಗಿ ರಾಮಾಯಣ, ಶಿವಪುರಾಣ, ಮುಂತಾದ ಕಥಾನಕಗಳ, ಲೌಕಿಕವಾಗಿ ಅರಸ, ಗಣ್ಯಮಾನ್ಯರ ಮತ್ತು ಸಾಮಾಜಿಕ ಸಂಗತಿಗಳ ಅನೇಕ ವಿಷಯಗಳ ಸುತ್ತ ಈ ಶಿಲ್ಪಗಳು ರಚನೆಗೊಂಡಿದ್ದು, ಶಿಲ್ಪಕಲೆಯ ಬೆಳವಣಿಗೆ ಮತ್ತು ಸಂಸ್ಕೃತಿಯನ್ನು ಅರ್ಥಮಾಡಿಕೊಳ್ಳಲು ಸಹಾಯಕವಾಗುತ್ತವೆ.

ಪ್ರಾಣಿ ಸಂಬಂಧಿತ ಶಿಲ್ಪಗಳಲ್ಲೂ ವೈವಿಧ್ಯತೆ ಇದೆ. ಇವುಗಳಲ್ಲಿ ಕೆಲವು ವಿಜಯನಗರದಿಂದ ಬಂದ ಪಾರಂಪರಿಕ ಶಿಲ್ಪಗಳಾದರೆ, ಕೆಲವು ಸ್ಥಳೀಯ ಶಿಲ್ಪಗಳು ಸೇರ್ಪಡೆಗಳಾಗಿವೆ. ಪಾರಂಪರಿಕ ಶಿಲ್ಪಗಳಲ್ಲಿ ನೇರವಾಗಿ ಕುಳಿತ ಸಿಂಹ(ಹೊರಕೆರೆದೇವರಪುರ), ನೇರವಾಗಿ ಕುಳಿತು, ಮುಖವನ್ನು ವಕ್ರವಾಗಿಸಿರುವ ಸಿಂಹ(ಕುಂದುರ್ಪಿ ವೀರಭದ್ರಸ್ವಾಮಿ), ವಕ್ರವಾಗಿ ಕುಳಿತು ಮುಖವನ್ನು ನೇರವಾಗಿಸಿರುವ ಸಿಂಹ(ಚಿತ್ರದುರ್ಗದ ಉತ್ಸವಾಂಬೆ), ಮತ್ತು ಪರಸ್ಪರ ವಿರುದ್ಧ ದಿಕ್ಕಿನಲ್ಲಿ ಎದ್ದುನಿಂತು ಹಿಂದಕ್ಕೆ ಮುಖಗಳನ್ನು ಹೊರಳಿಸಿರುವ ಸಿಂಹ ಜೋಡಿಗಳು(ಕುಂದುರ್ಪಿ ವೀರಭದ್ರಸ್ವಾಮಿ) ಇವೆ. ನೀರ್ಥಡಿಯಲ್ಲಿ ನಿಂತ ಎತ್ತಿನ ಶಿಲ್ಪವಿದ್ದರೆ, ಹೊರಕೆರೆದೇವರಪುರದ ರಂಗನಾಥ ದೇವಾಲಯದಲ್ಲಿ ಕುಳಿತನಂದಿಯ ಶಿಲ್ಪವಿದೆ. ನೀರ್ಥಡಿ, ಹೊರಕೆರೆದೇವರಪುರ ಹಾಗು ಹಿರಿಯೂರುಗಳಲ್ಲಿ ಶಿವಲಿಂಗಕ್ಕೆ ಕ್ಷೀರಧಾರೆಯೆರೆಯುತ್ತಿರುವ ಗೋವಿನ ಶಿಲ್ಪಗಳಿವೆ. ಹೊರಕೆರೆದೇವರಪುರದಲ್ಲಿ ಹಸು ನೇರವಾಗಿ ನಿಂತಿದ್ದರೆ, ಉಳಿದ

ಎರಡು ಕಡೆ ಹಸು ಕೆಳಕ್ಕೆ ಬಾಗಿ ಶಿವಲಿಂಗದ ಮೇಲೆ ಬಿದ್ದ ಕ್ಷೀರವನ್ನು ನೆಕ್ಕುತ್ತಿರುವಂತೆ ಇದೆ. ಇವೆಲ್ಲಾ ಪಾರಂಪರಿಕ ಶಿಲ್ಪಗಳಾಗಿವೆ.

ಇತರೆ ಶಿಲ್ಪಗಳಲ್ಲಿ ಹಂಸ(ಕುಂದುರ್ಪಿ), ಕುದುರೆ, ಆನೆ, ಗರುಡ, (ಹೊರಕೆರೆದೇವರಪುರ, ಚಿತ್ರದುರ್ಗದ ದೊಡ್ಡಪೇಟೆ ಆಂಜನೇಯ) ಶಿಲ್ಪಗಳಿವೆ. ಚಿತ್ರದುರ್ಗದ ಉತ್ಸವಾಂಬೆ ದೇವಾಲಯದಲ್ಲಿ ಗಂಡಬೇರುಂಡದ ಅಪರೂಪದ ಶಿಲ್ಪವಿದೆ. ಒಂದೇ ದೇಹ ಎರಡು ಮುಖಗಳನ್ನುಳ್ಳ ಈ ಗಂಡಬೇರುಂಡ ಪಕ್ಷಿರೂಪದಲ್ಲಿದ್ದು, ಎರಡೂ ಬದಿಗೆ ರೆಕ್ಕೆಗಳು ಬಿಚ್ಚಿವೆ. ಎರಡೂ ಕಾಲುಗಳಲ್ಲಿ ಆನೆಗಳನ್ನು ಒತ್ತಿ ಹಿಡಿದಿದೆ. ಎರಡೂ ಕೊಕ್ಕಿನಲ್ಲಿ ಸಿಂಹಗಳನ್ನು ಹಿಡಿದಿದೆ. ಭಾರತೀಯ ಕಾಲ್ಪನಿಕ ಪಕ್ಷಿಯಾದ ಗಂಡಬೇರುಂಡವು ಇಲ್ಲಿ ಶಿಲ್ಪದ ವಸ್ತುವಾಗಿರುವುದು ಗಮನಾರ್ಹ. ಇದರಂತೆ ಇತರ ಕಾಲ್ಪನಿಕ ಪ್ರಾಣಿಗಳು ಇವೆ. ಅದರಲ್ಲಿ ಸಿಂಹದೇಹ ಆನೆಯ ಮುಖವನ್ನು ಹೊಂದಿರುವ ಗಜಶಾರ್ದೂಲ(ಚಳ್ಳಕೆರೆಯ ಚಳ್ಳಕೆರಮ್ಮ), ಸಿಂಹದೇಹ, ಮನುಷ್ಯ ಮುಖ ಮತ್ತು ಕೈಗಳನ್ನು ಹೊಂದಿದ್ದು ಶಿವಲಿಂಗವನ್ನು ಪೂಜಿಸುತ್ತಿರುವ ನರಶಾರ್ದೂಲ(ಚಿತ್ರಹಳ್ಳಿ, ತಾಳ್ಯ ಆಂಜನೇಯ) ಶಿಲ್ಪಗಳೂ ಇವೆ.

ಒಂದೇ ಮುಂಡ ಹಲವು ಮುಖಗಳ ಹಸುವಿನ ಚಿತ್ರವೊಂದು ಕುತೂಹಲದಾಯಕವಾಗಿದ್ದು, ಇಲ್ಲಿಯ ದೇವಾಲಯಗಳಲ್ಲಿ ಪದೇಪದೇ ಕಂಡುಬರುತ್ತದೆ. ಹಸು ನಿಂತಭಂಗಿಯಲ್ಲಿದ್ದು, ಬೇರೆಬೇರೆ ಭಂಗಿ ಅಥವಾ ನೋಟಗಳಲ್ಲಿರುವಂತೆ ಅದಕ್ಕೆ ಮೂರರಿಂದ ಆರರವರೆಗೆ ಮುಖಗಳನ್ನು ಕೆತ್ತಲಾಗಿರುತ್ತದೆ. ಮೂರು ಮುಖದ ಹಸುವಿನ ಶಿಲ್ಪಗಳು ಹೊರಕೆರೆದೇವರಪುರದ ರಂಗನಾಥ, ಕೊರಟಗೆರೆ ರಂಗನಾಥ, ನಾಲ್ಕು ಮುಖದ ಹಸು(ಹೊರಕೆರೆದೇವರಪುರ ಲಕ್ಷ್ಮೀರಂಗನಾಥ), ಐದು ಮುಖದ ಹಸು(ಚಿತ್ರಹಳ್ಳಿ ಆಂಜನೇಯ, ಚಿತ್ರುದುರ್ಗದ ಉತ್ಸವಾಂಬೆ, ಕಡ್ಲೆಗುದ್ದು ಆಂಜನೇಯ)ದೇವಾಲಯಗಳಲ್ಲಿ ಇದೆ. ಕೆಲವು ಕಡೆ ಈ ಹಸುವಿನ ಕೆಳಗೆ ಶಿವಲಿಂಗವಿದ್ದು, ಆ ಲಿಂಗಕ್ಕೆ ಹಸು ಕ್ಷೀರಧಾರೆಗೈಯ್ಯುತ್ತಿರುತ್ತದೆ(ಹೊರಕೆರದೇವರಪುರ, ಕಡ್ಲೆಗುದ್ದು, ಉತ್ಸವಾಂಬೆ). ಆ ಕ್ಷೀರವನ್ನು ಹಸುವಿನ ಒಂದು ಮುಖ ನೆಕ್ಕುತ್ತಿರುವಂತೆ ಇದೆ(ಹೊರಕೆರೆದೇವರಪುರ, ಕಡ್ಲೆಗುದ್ದು). ಚಿತ್ರಹಳ್ಳಿಯಲ್ಲಿ ಮಾತ್ರ ಹಸುವಿನ ಒಂದು ಮುಖ ತನ್ನ ಹಾಲನ್ನು ತಾನೇ ಕುಡಿಯುತ್ತಿರುವಂತೆ ಇದೆ. ಇಂತಹ ವಿಶಿಷ್ಟ ಶಿಲ್ಪಗಳಲ್ಲಿ ವಿಶಿಷ್ಟವಾದದು ಕಡ್ಲೆಗುದ್ದುವಿನಲ್ಲಿದೆ. ಇಲ್ಲಿ ಪರಸ್ಪರ ಎತ್ತು ಮತ್ತು ಆನೆಗಳು ಎದುರಾಗಿ ನಿಂತಿವೆ. ಅವುಗಳ ಮುಂಡ ಪ್ರತ್ಯೇಕವಾದರೂ ರುಂಡಗಳು ಒಂದರಲ್ಲಿ ಮತ್ತೊಂದು ಸೇರಿ ಹೋಗಿವೆ. ಎರಡಕ್ಕೂ ಒಂದೇ ಕಣ್ಣು ಇದ್ದು, ಆನೆಯ ಕೋರೆ, ಎತ್ತಿನ ಕೋಡಾಗಿ, ಸೊಂಡಿಲು ಭುಜವಾಗಿ(ಇಣಿ), ಹಸುವಿನ ಕಿವಿ, ಆನೆಯ ಕೆಳದವಡೆಯಾಗಿ ಅದರ ಬಾಯಿ

ಮತ್ತು ಮೂಗು ಆನೆಯ ಕುಂಭಸ್ಥಲವಾಗಿ ಗೋಚರಿಸುತ್ತವೆ. ಇಂತಹ ಶಿಲ್ಪಗಳು ಸಮಕಾಲೀನ ಶಿಲ್ಪಿಗಳ ಕ್ರಿಯಾಶೀಲತೆ ಮತ್ತು ಚಾಕಚಕ್ಯತೆಯ ಕೌಶಲ್ಯಕ್ಕೆ ಸಾಕ್ಷಿಯಾಗಿವೆ. ಇವು ಕೇವಲ ಚಮತ್ಕಾರಿಕ ಪ್ರದರ್ಶನದ ಶಿಲ್ಪಗಳಾಗಿವೆಯೇ ಹೊರತು, ಪಾರಂಪರಿಕ ಅಥವಾ ಶಾಸ್ತ್ರೀಯ ಹಿನ್ನೆಲೆಯನ್ನು ಹೊಂದಿಲ್ಲ.

ಕಂಬದ ಶಿಲ್ಪಗಳಲ್ಲಿ ತೀರಾ ಸ್ಥಳೀಯ ಶೈಲಿಯ ಇಲ್ಲವೇ ಬುಡಕಟ್ಟು ಚಿತ್ರಗಳಂತೆ ತೋರುವ ಉಬ್ಬುಶಿಲ್ಪಗಳು ಮಾರಿಕಣಿವೆಯ ಮಾರಿಕಾಂಭ ದೇವಾಲಯದ ಕಂಬಗಳಲ್ಲಿವೆ. ಇವುಗಳಲ್ಲಿ ಬೆನ್ನ ಮೇಲೆ ಪತಾಕೆಯನ್ನು ಹೊಂದಿರುವ ಎತ್ತು, ಹಾವನ್ನು ಹಿಡಿದಿರುವ ಹಂಸ, ಒಂಟೆ, ಜಿಂಕೆ, ಟಗರು, ಕುದುರೆ ಮತ್ತು ವಿವಿಧ ರೀತಿಯ ಪುಷ್ಪಾಕೃತಿಯ ಶಿಲ್ಪಗಳಿವೆ. ಇವುಗಳು ಆಂಗಿಕ ರಚನೆಯಲ್ಲಿ ಪ್ರಮಾಣಬದ್ಧವಾಗಿಲ್ಲ. ದೊಡ್ಡದೇಹ, ಚಿಕ್ಕಕಾಲುಗಳು, ಇಲ್ಲವೇ ಚಿಕ್ಕದೇಹ ದೊಡ್ಡಕಾಲುಗಳು ಇದ್ದು, ಅಸಮರ್ಪಕವೆನಿಸುತ್ತವೆ. ಇವು ತೀರಾ ಸ್ಥಳೀಯ ಶಿಲ್ಪಿಗಳ ಕೆತ್ತನೆಗಳಾಗಿದ್ದು, ಶಿಲ್ಪಗಳಲ್ಲಿ ನೈಪುಣ್ಯತೆಗಳಾಗಲಿ, ಚಿತ್ರಗಳ ಪರಿಕಲ್ಪನೆಗಾಳಗಲೀ ಇಲ್ಲದಿರುವುದು ಕಂಡುಬರುತ್ತದೆ. ಪ್ರಾಚೀನ ದೇಗುಲಗಳನ್ನು ನೋಡಿ ಅನುಭವ ಮತ್ತು ಆಳವಾದ ಜ್ಞಾನವಿಲ್ಲದ ಸ್ಥಳೀಯ ಶಿಲ್ಪಿಗಳು ದೇವಾಲಯಗಳನ್ನು ನಿರ್ಮಿಸಿದಾಗ ಇಂತಹ ಪ್ರಕಾರಗಳು ಸೃಷ್ಟಿಯಾಗುತ್ತವೆ. ಈ ದೇವಾಲಯ ಮತ್ತು ಇದರ ಶಿಲ್ಪಗಳು ಚಿತ್ರದುರ್ಗ ಪಾಳೆಯಗಾರರ ಕಾಲದ ಕೊನೆಯ ಘಟ್ಟದ ನಿರ್ಮಾಣಗಳೆಂದು ಹೇಳಬಹದು.

ಗಾರೆಶಿಲ್ಪಗಳು : ಪಾಳೆಯಗಾರರು ವಿಜಯನಗರ ಕಾಲದ ವಾಸ್ತುಶಿಲ್ಪವನ್ನು ಅನುಸರಿಸಿರುವುದರಿಂದ ಸಹಜವಾಗಿ ದೇವಾಲಯಗಳ ಮುಖಮಂಟಪ, ಸಭಾಮಂಟಪಗಳ ಮಾಡಿನ ಅಂಚಿನಲ್ಲಿ ಇಟ್ಟಿಗೆ ಮತ್ತು ಗಾರೆಯ ದೇವಕೋಷ್ಟಗಳಿದ್ದು, ಅದರಲ್ಲಿ ಹಾಗೂ ಗರ್ಭಗೃಹಗಳ ಮೇಲಿನ ಶಿಖರ ಮತ್ತು ಮಹಾದ್ವಾರಗಳ ಮೇಲಿನ ಗೋಪುರಗಳ ಮೇಲೆ ಗಾರೆಶಿಲ್ಪಗಳು ಇರುವುದು ಸ್ವಾಭಾವಿಕ. ಅಂತೆಯೇ ಚಿತ್ರದುರ್ಗ ಪಾಳೆಯಗಾರರ ಕಾಲದ ಏಕನಾಥೇಶ್ವರಿ, ಸಂಪಿಗೆಸಿದ್ದೇಶ್ವರ, ತೇರುಮಲ್ಲೇಶ್ವರ, ಮಾರಿಕಾಂಭ, ತಾಳ್ಯದ ಆಂಜನೇಯ ಮುಂತಾದ ದೇವಾಲಯಗಳಲ್ಲಿ ದೇವಕೋಷ್ಟಗಳು ಕಂಡುಬರುತ್ತವೆ. ಆದರೆ ಇವುಗಳಲ್ಲಿ ಇದ್ದ ಮೂಲ ಗಾರೆಶಿಲ್ಪಗಳು ಬಹುಮಟ್ಟಿಗೆ ಭಗ್ನವಾಗಿವೆ. ಅವುಗಳ ಸ್ಥಳದಲ್ಲಿ ಈಚೆಗೆ ಗಾರೆಯ ಹೊಸ ಶಿಲ್ಪಗಳನ್ನು ರಚಿಸಲಾಗಿದೆ. ಆದರೆ ಆ ಶಿಲ್ಪಗಳು ಮೂರ್ತಿಶಿಲ್ಪ ದೃಷ್ಟಿಯಿಂದ ಗಮನಾರ್ಹವಾಗಿಲ್ಲ. ಅದೇ ರೀತಿ ಶಿಖರಗಳ ಮೇಲಿನ ಶಿಲ್ಪಗಳು ಭಗ್ನವಾಗಿದ್ದು, ಅಲ್ಲಲ್ಲಿ ಪುನಃ ದುರಸ್ತಿಗೊಂಡು ಮೂಲಸ್ವರೂಪನ್ನು ಕಳೆದುಕೊಂಡಿವೆ.

ಚಿತ್ರದುರ್ಗ ಪಾಳೆಯಗಾರರ ಕಾಲದ ದ್ವಾರಗೋಪುರವಾಗಿದ್ದ(ಗಾರೆ) ಹಿರಿಯೂರಿನ ತೇರುಮಲ್ಲೇಶ್ವರ ದೇವಾಲಯದ ಗೋಪುರವೂ ಕೂಡ ಹಾಳಾಗಿದ್ದರಿಂದ ಅದನ್ನು ಈಚೆಗೆ ಸಂಪೂರ್ಣವಾಗಿ ತೆಗೆದು, ಅದೇ ಮಾದರಿಯಲ್ಲಿ ನೂತನ ಗೋಪುರವನ್ನು ನಿರ್ಮಿಸಲಾಗಿದೆ. ಹಾಗಾಗಿ ಚಿತ್ರದುರ್ಗ ಪಾಳೆಯಗಾರರ ಕಾಲದ ಗಾರೆಶಿಲ್ಪಗಳು ಅಧ್ಯಯನಕ್ಕೆ ಲಭ್ಯವಾಗುವುದಿಲ್ಲ. ವಿಜಯನಗರದ ಗಾರೆಶಿಲ್ಪಗಳನ್ನು ಅನುಲಕ್ಷಿಸಿ ಪಾಳೆಯಗಾರರ ಕಾಲದ ಗಾರೆಶಿಲ್ಪಗಳ ಲಕ್ಷಣಗಳನ್ನು ತರ್ಕಿಸಬಹುದಾಗಿದೆ.

ಚಿತ್ರಕಲೆ : ಮಾನವನ ಅಭಿವ್ಯಕ್ತಿಯ ಮಾಧ್ಯಮಗಳಲ್ಲಿ ಚಿತ್ರಕಲೆಗೆ ಮಹತ್ವದ ಸ್ಥಾನವಿದೆ. ಅದು ಅವನ ಮೊದಲ ಅಭಿವ್ಯಕ್ತಿಯ ಮಾಧ್ಯಮವೆಂದು ನಂಬಲಾಗಿದೆ. ಪ್ರಾಚೀನ ಮಾನವ ತನ್ನ ಬದುಕಿನ ಅನುಭವಗಳನ್ನು, ನೋವುನಲಿವುಗಳನ್ನು ಅಭಿವ್ಯಕ್ತಗೊಳಿಸಲು ಪ್ರಯತ್ನಿಸಿದಾಗಲೇ ಚಿತ್ರಕಲೆಯ ಉಗಮವಾಯಿತೆನ್ನಬಹುದು. ಪ್ರಾಯಶಃ ಅದು ಮೊದಲಿಗೆ ವರ್ಣ ಮತ್ತು ರೇಖೆಗಳ ಮೂಲಕ ಸೃಷ್ಟಿಯಾಯಿತು.[೨೪] ಹೀಗೆ ಚಿತ್ರಕಲೆ ಮೊದಲಾದುದು ಶಿಲಾಯುಗ ಕಾಲದಲ್ಲಿ. ಭಾರತ ಸಹಿತ ವಿಶ್ವದ ಅನೇಕ ದೇಶಗಳಲ್ಲಿ ಶಿಲಾಯುಗ ಕಾಲದ ಚಿತ್ರಕಲೆ ಕಂಡಿಬಂದಿದೆ. ಅವು ಪ್ರಾಚೀನ ಮಾನವನ ಖಾಯಂ ವಾಸಸ್ಥಾನಗಳಾದ ಗವಿಗಳ ಇಲ್ಲವೇ, ತಾತ್ಕಾಲಿಕ ಆಶ್ರಯತಾಣಗಳಾಗಿದ್ದ ಕಲ್ಲಾಸರೆಗಳ ಗೋಡೆ, ಇಲ್ಲವೇ ಛತ್ತಿನ ಮೇಲೆ ಕಂಡುಬರುತ್ತವೆ. ಇಂತಹ ಚಿತ್ರಗಳು ಪರಿಪೂರ್ಣ ಕಲಾಕೃತಿಗಳು ಅಲ್ಲದೇ ಹೋದರೂ ಭಾವಾಭಿವ್ಯಕ್ತಿಯಲ್ಲಿ ಪರಿಣಾಮಕಾರಿಯಾಗಿವೆ. ಇಂತಹ ಚಿತ್ರಗಳ ಅಧ್ಯಯನದಿಂದ ಪ್ರಾಚೀನ ಮಾನವನ ಜೀವನದ ಸಂಗತಿಗಳಾಗಿದ್ದ ಪಶುಪಾಲನೆ, ಬೇಟೆಗಾರಿಕೆ, ಪ್ರಾಣಿಸಂಪತ್ತು, ನಂಬಿಕೆ, ಆಚರಣೆ, ಮಾನವಸಂಬಂಧಗಳು ಮುಂತಾದ ಸಂಗತಿಗಳನ್ನು ಸಮರ್ಪಕವಾಗಿ ತಿಳಿಯಬಹುದಾಗಿದೆ.

ನಮ್ಮ ದೇಶದ ಹೆಚ್ಚಿನ ರಾಜ್ಯಗಳಲ್ಲಿ ಇಂತಹ ಚಿತ್ರಗಳು, ಅವುಗಳಲ್ಲಿ ಉತ್ತರಪ್ರದೇಶದ ಬಿಂಬೆಟ್ಕ ಪರಿಸರವು ಹೆಚ್ಚು ಪ್ರಸಿದ್ಧಿಯಾಗಿದೆ. ಅದೇ ರೀತಿ ದಕ್ಷಿಣ ಭಾರತದಲ್ಲಿ, ಕರ್ನಾಟಕದಲ್ಲಿ ಇಂತಹ ಚಿತ್ರಗಳು ಅಧಿಕವಾಗಿ ಕಂಡುಬಂದಿವೆ. ಅವುಗಳಲ್ಲಿ ಬಾದಾಮಿಯ ಐಹೊಳೆ ಪ್ರದೇಶ, ಹಂಪಿ ಪ್ರದೇಶ ಮತ್ತು ಚಿತ್ರದುರ್ಗದ ಪ್ರದೇಶ. ಮುಖ್ಯವಾಗಿ ಪ್ರಾಗಿತಿಹಾಸ ಕಾಲದ ಈ ಚಿತ್ರಗಳು ಹಂಪಿಯ ವಿರೂಪಾಕ್ಷ ದೇವಾಲಯ, ಆನೆಗೊಂದಿಯ ಹುಚ್ಚಪ್ಪಯ್ಯನ ಮಠ, ಕನಕಗಿರಿಯ ಲಕ್ಷ್ಮೀನರಸಿಂಹ ದೇವಾಲಯ, ಲೇಪಾಕ್ಷಿಯ ವೀರಭದ್ರೇಶ್ವರ ದೇವಾಲಯ, ಸೋಮಪಾಲಯಂನಲ್ಲಿಯ ಚೆನ್ನಕೇಶವ, ಕಾಂಚಿಯ ವರದರಾಜ, ತಿಳಿವಿಳಿಮಳಲೈನ ಶಿವದೇವಾಲಯ, ತಿರುಪರುತ್ತಿಕುನ್ರಮ್‌ದ ಜೈನಬಸದಿ, ತಿರುಮಲೈನ ಕುಂದಾಣಿ ಜಿನಾಲಯ,

ಚಿದಾಂಬರಂನ ಶಿವಕಾಮ ಸುಂದರಿ ಮತ್ತು ತಂಜಾವೂರಿನ ಬೃಹದೇಶ್ವರ ದೇವಾಲಯ ಮತ್ತಿತರ ದೇವಾಲಯಗಳಲ್ಲಿ ಕಾಣಬಹುದಾಗಿದೆ.[೨೫] ಈ ಚಿತ್ರಕಲೆಯಲ್ಲಿ ಧಾರ್ಮಿಕ ವಿಷಯಗಳೇ ಪ್ರಧಾನವಾಗಿವೆ. ಚಿತ್ರಗಳ ರೇಖಾವಿನ್ಯಾಸ, ಅಂಗರಚನೆ ಮತ್ತು ವರ್ಣವಿನ್ಯಾಸ ಶಿಷ್ಟವಾಗಿದ್ದು, ವಿಜಯನಗರ ಶೈಲಿಯ ಪ್ರತ್ಯೇಕ ಶೈಲಿಯನ್ನು ಪ್ರತಿಬಿಂಬಿಸುತ್ತವೆ.

ವಾಸ್ತು, ಶಿಲ್ಪ ಮತ್ತು ಚಿತ್ರಕಲೆಗಳಲ್ಲಿ ವಿಜಯನಗರದ ಶೈಲಿಯನ್ನು ಅನುಸರಿಸಿದ ಪಾಳೆಯಗಾರರು ಆ ಮಟ್ಟಿನಲ್ಲಿ ಕಲೆಯನ್ನು ಬೆಳೆಸಲು ಸಾಧ್ಯವಾಗದೆ ಇದ್ದರೂ, ಆ ಕ್ಷೇತ್ರಕ್ಕೆ ಸಲ್ಲಿಸಿದ ಕೊಡುಗೆ ಗಮನಾರ್ಹವೆಂದೇ ಹೇಳಬಹುದು. ಅಂತೆಯೇ ಚಿತ್ರದುರ್ಗ ಪಾಳೆಯಗಾರರು ತಮ್ಮ ಹಲವಾರು ಕಟ್ಟಡ ಸ್ಮಾರಕಗಳಲ್ಲಿ ತೀರಾ ವಿರಳವಾಗಿ ಹಿರಿಯೂರಿನ ತೇರುಮಲ್ಲೇಶ್ವರ, ಹುಲ್ಲೂರಿನ ಸಿದ್ದೇಶ್ವರ ದೇವಾಲಯಗಳು ಹಾಗು ಅಂಕಲಿಮಠಗಳಲ್ಲಿ ವರ್ಣಚಿತ್ರಗಳನ್ನು ಬಿಡಿಸಿದ್ದಾರೆ.

ಹಿರಿಯೂರಿನ ತೇರುಮಲ್ಲೇಶ್ವರ ದೇವಾಲಯದ ಮಹಾರಂಗಮಂಟಪದ ಛತ್ತಿನಲ್ಲಿ ಸಮಕಾಲೀನ ವರ್ಣಚಿತ್ರಗಳಿವೆ. ಆದರೆ ಬಹುಮಟ್ಟಿಗೆ ಇವು ನಾಶವಾಗಿದ್ದು, ಉಳಿದಂತೆ ಮಧ್ಯದ ಮೂರು ಅಂಕಣಗಳು ಮತ್ತು ತೊಲೆಗಳ ಮೇಲೆ ಅಲ್ಲಲ್ಲಿ ಉಳಿದಿವೆ. ಈ ಚಿತ್ರಗಳನ್ನು ಧಾರ್ಮಿಕ ಮತ್ತು ಲೌಕಿಕ ಚಿತ್ರಗಳೆಂದು ವಿಂಗಡಿಸಬಹುದು. ಧಾರ್ಮಿಕವಾಗಿ ಶಿವಲಿಂಗ ಪೂಜೆಯ ದೃಶ್ಯ, ಶಿವಪಾರ್ವತಿಯರ ದೃಶ್ಯ, ವೃಷಭಾರೂಢರಾಗಿರುವ ಶಿವಪಾರ್ವತಿಯರು, ನಟರಾಜ, ದಕ್ಷಿಣಾಮೂರ್ತಿ[೨೬] ಮುಂತಾದ ಶಿವನ ಚಿತ್ರಗಳಿವೆ. ಇವು ಹಂಪಿಯ ವಿರೂಪಾಕ್ಷ ದೇವಾಲಯದ ರಂಗಮಂಟಪದ ಭುವನೇಶ್ವರಿ ಮತ್ತು ತೊಲೆಗಳ ಮೇಲಿನ ವರ್ಣಚಿತ್ರಗಳನ್ನು ನೆನಪಿಸುತ್ತವೆ. ಇದೇ ಅಂಕಣದಲ್ಲಿ ಲೌಕಿಕವಾಗಿ ಯುದ್ಧದ ದೃಶ್ಯಗಳು, ಮಲ್ಲಯುದ್ಧ, ರಾಜಪರಿವಾರದ ಮೆರವಣಿಗೆ, ಹುಲಿಬೇಟೆ, ಸಕಲ ವಾದ್ಯಗಳೊಂದಿಗೆ ಯತಿಗಳ ಮೆರವಣಿಗೆ, ಅಂತಃಪುರದಲ್ಲಿ ಅರಸ, ಮುಂತಾದ ದೃಶ್ಯಗಳಿವೆ. ತೊಲೆಗಳ ಮೇಲೆ ಬೇಟೆಗೆ ಹೊರಟ ರಾಜನ ಪರಿವಾರ, ಬೇಡರ ಕಣ್ಣಪ್ಪ, ಗೋಪಿಕಾಕೃಷ್ಣ, ಗೋಪಿಕಾ ವಸ್ತ್ರಾಪಹರಣ ಮಾಡುತ್ತಿರುವ ಕೃಷ್ಣನ ಚಿತ್ರ, ಕಾಮಧೇನು ಮತ್ತು ವಿವಿಧ ರೀತಿಯ ಪುಷ್ಪ ಹಾಗು ಬಳ್ಳಿಯಾಕಾರದ ಅಲಂಕರಣೆ ಮುಂತಾದ ಚಿತ್ರಗಳಿವೆ. ಈ ರೀತಿಯ ಅಲಂಕರಣೆಯನ್ನು ಅಥವಾ ವರ್ಣಚಿತ್ರವನ್ನು ಹಂಪಿಯ ವಿರೂಪಾಕ್ಷ ದೇವಾಲಯದಲ್ಲಿ ಕಾಣಬಹುದಾಗಿದೆ. ಮೊದಲ ಅಂಕಣದ ಛತ್ತಿನಲ್ಲಿ ಅರಸ ಯುದ್ಧಕ್ಕೆ ತೆರಳುವ ದೃಶ್ಯ ಆಕರ್ಷಕವಾಗಿದೆ. ಹಾಗೆಯೇ ಲೇಪಾಕ್ಷಿಯ ದೇವಾಲಯದಲ್ಲಿ ಕಂಡುಬರುವಂತೆ ಸಿಂಹ, ಆನೆ, ಹಸು, ಜಿಂಕೆ ಟಗರು, ಮೊಲ ಮುಂತಾದ ಪ್ರಾಣಿಗಳನ್ನು ಒಳಗೊಂಡಿರುವ ವನದ ಚಿತ್ರ ವಿಶೇಷವಾಗಿದೆ. ಮಧ್ಯದ

ಅಂಕಣದಲ್ಲಿ ಸರಳ ಕಮಲಾಕೃತಿಯ ಭುವನೇಶ್ವರಿಯಿದ್ದು ಅದನ್ನು ಬಣ್ಣದಿಂದ ಅಲಂಕರಿಸಲಾಗಿದೆ. ಅದರ ಎಂಟು ದಿಕ್ಕುಗಳಿಗೆ ಅಷ್ಟದಿಕ್ಪಾಲಕುರುಗಳ(ಹಂಪಿಯ ವಿರೂಪಾಕ್ಷ ದೇವಾಲಯದಲ್ಲಿರುವಂತೆ) ಚಿತ್ರಗಳಿವೆ. ಮೂರನೆಯ ಅಂಕಣದಲ್ಲಿ ಶಿವಪಾರ್ವತಿಯ ದೊಡ್ಡ ಚಿತ್ರವಿದೆ. ಈ ವರ್ಣಚಿತ್ರಗಳ ವಿಶೇಷ ಲಕ್ಷಣಗಳೆಂದರೆ :

೧. ಚಿತ್ರಗಳನ್ನು ಗಾರೆಯ ಮೇಲೆ ಚಿತ್ರಿಸಲಾಗಿದೆ.

೨. ಛತ್ತು ಮತ್ತು ತೊಲೆಗಳ ಮೇಲೆ ಚಿತ್ರಗಳನ್ನು ಬಿಡಿಸಲಾಗಿದೆ

೩. ಕೇಸರಿ, ತಿಳಿಹಳದಿ, ತಿಳಿನೀಲಿ, ಹಸಿರು, ಕಪ್ಪು, ಬಿಳಿ, ಮಾಸಲುಬೂದು ಬಣ್ಣಗಳನ್ನು ಪ್ರಧಾನವಾಗಿ ಬಳಸಲಾಗಿದೆ. (ಈ ರೀತಿಯ ವರ್ಣಗಳ ಬಳಕೆ ಹಂಪಿಯ ವಿರೂಪಾಕ್ಷ ಮತ್ತು ಲೇಪಾಕ್ಷಿಯಲ್ಲಿ ಕಾಣಬಹುದು)

೪. ವ್ಯಕ್ತಿ ಚಿತ್ರಣಗಳಲ್ಲಿ ಕಣ್ಣುಗಳನ್ನು ದೊಡ್ಡದಾಗಿ ಚಿತ್ರಿಸಲಾಗಿದೆ.

೫. ಹೂಬಳ್ಳಿಗಳ ಅಲಂಕರಣೆ ಹೆಚ್ಚಾಗಿ ಇದೆ.

೬. ಸಣ್ಣ ಸಣ್ಣ ಚಿತ್ರಗಳಲ್ಲಿ ಆಭರಣ, ಶಸ್ತ್ರಾಸ್ತ್ರಗಳನ್ನು ಸ್ಪಷ್ಟವಾಗಿ ಬಿಡಿಸಲಾಗಿದೆ.

೭. ಗಿಡದ ಚಿತ್ರಗಳಲ್ಲಿ ಎಲೆ, ಹಣ್ಣು ಕಾಯಿಗಳನ್ನು ಕೂಡ ವಿವರವಾಗಿ ಬಿಡಿಸಲಾಗಿದೆ.

ಈ ಮೇಲಿನ ಲಕ್ಷಣಗಳಿಂದ ಆ ಕಾಲದ ಅರಸರ ವೈಯಕ್ತಿಕ ವಿವರಗಳು, ವೇಷಭೂಷಣ, ಉಡುಪು, ಆಭರಣ, ಶಸ್ತ್ರಾಸ್ತ್ರಗಳು, ಪ್ರಾಣಿಪಕ್ಷಿಗಳು, ಉತ್ಸವಗಳು, ನಂಬಿಕೆ, ಆಚರಣೆಗಳನ್ನು ತಿಳಿಯಬಹುದಾಗಿದೆ.

ಈ ವರ್ಣಚಿತ್ರಕಲೆ ಚಿತ್ರದುರ್ಗ ಪಾಳೆಯಗಾರರ ಕಾಲದ ಕಲಾಪ್ರಕಾರಗಳಲ್ಲಿ ಅಪರೂಪದ್ದಾಗಿದೆ. ಈ ಚಿತ್ರಗಳಲ್ಲಿ ವಿಜಯನಗರ ಶೈಲಿಯ ಜೊತೆಗೆ ಪ್ರಾದೇಶಿಕ ಲಕ್ಷಣಗಳು ಹೆಚ್ಚಾಗಿ ಬಿಂಬಿತವಾಗಿರುವುದನ್ನು ಕಾಣಬಹುದು. ವಿಜಯನಗರ ಕಲೆಯ ಚಿತ್ರಕಲೆಯನ್ನು ಅರ್ಥಮಾಡಿಕೊಳ್ಳಲು ಪಾಳೆಯಗಾರರ ಕಾಲದ ಈ ಚಿತ್ರಕಲೆ ಸಹಾಯಕವಾಗುತ್ತದೆ ಎನ್ನಬಹುದು.

ಅಡಿಟಿಪ್ಪಣಿಗಳು

೧. ಗೋಪಾಲ್ ಬಾ.ರಾ., **ವಾಸ್ತುವಿದ್ಯಾ ಶಿಲ್ಪಶಾಸ್ತ್ರ**

೨. ಪ್ರತಿಮಾ ಎಂದರೆ–ಹೋಲುವಂಥದ್ದು, ಅನುಸರಿಸಿದ್ದು, ಪಡಿಯಚ್ಚು, ಪ್ರತಿಕೃತಿ–ಪ್ರತಿ+ಕೃತಿ ಅಂದರೆ ಒಂದಕ್ಕೆ ಪ್ರತಿಯಾಗಿ ಮತ್ತೊಂದನ್ನು ಮಾಡಿದ್ದು, ವಿಗ್ರಹ–ವಿ–ಗ್ರಹ ಅಂದರೆ ಪ್ರತ್ಯೇಕಿಸಿದ ಆಕಾರ ಎಂಬ ಅರ್ಥವನ್ನು ನೀಡುತ್ತವೆ.

೩. ರಾಜಾರಾಂಹೆಗಡೆ, ೧೯೯೨, 'ಭಾರತೀಯ ಮೂರ್ತಿಶಾಸ್ತ್ರ, ಧರ್ಮ, ದೇವತಾರಾಧನೆ ಹಾಗೂ ಸಾಂಸ್ಕೃತಿಕ ರಾಜಕೀಯದ ಐತಿಹಾಸಿಕ ವಿಶ್ಲೇಷಣೆ', **ಅರಿವುಬರಹ,** ಸಂ-೩,ಭಾಗ-೧, ಪು.೩೫,೩೬

೪. ಅದೇ, ಪು.೩೫, ೩೬

೫. ಪ್ರಭಾಕರ್ ಎಂ.ಎನ್., ೧೯೯೯, **ದೇವಾಲಯಗಳ ವಾಸ್ತುಚಂದ್ರಿಕೆ,** ಪು.೪

೬. ಫಣೇಂದ್ರನಾಥಬೋಸ್, ೧೯೭೮, **ಪ್ರಿನ್ಸಿಪಲ್ ಆಫ್ ಇಂಡಿಯನ್ ಶಿಲ್ಪಶಾಸ್ತ್ರ,** ಪು.೮

೭. ಪ್ರಭಾಕರ್ ಎಂ.ಎನ್., ೧೯೯೯, **ಪೂರ್ವೋಕ್ತ,** ಪು.೩

೮. ರಾಮಚಂದ್ರರಾವ್ ಎಸ್.ಕೆ., ೧೯೯೨, **ಪ್ರತಿಮಾಕೋಶ,** ಸಂ-೬, ಪು.೨೧೩

೯. ತಿಪ್ಪೇಸ್ವಾಮಿ ಎಚ್., ೧೯೯೮, 'ಕೂಡ್ಲಿಗಿ ತಾಲ್ಲೂಕಿನ ಅಪರೂಪದ ಮಾನವಾಕೃತಿಗಳು', ನಾಗರಾಜ ಎಂ.ಜಿ.ಕೃಷ್ಣಮೂರ್ತಿ(ಸಂ), **ಇತಿಹಾಸದರ್ಶನ,** ಸಂ-೧೪, ಪು.೧೯

೧೦. ಸುಂದರ ಅ., ೧೯೯೮, 'ಪ್ರಾಗಿತಿಹಾಸಕಾಲದ ನಿರ್ಮಿತಿ ಮತ್ತು ಚಿತ್ರಕಲೆ', ಪ್ರೊ.ಷೇಕ್ಅಲಿ, ಸುಂದರ ಅ. (ಸಂ), **ಕರ್ನಾಟಕ ಚರಿತ್ರೆ ಸಂಪುಟ-೧,** ಪು.೨೪೧, ೨೪೨

೧೧. ತಿಪ್ಪೇಸ್ವಾಮಿ ಎಚ್., ೧೯೯೪, **ದಾವಣಗೆರೆ ಜಿಲ್ಲೆಯ ದೇವಾಲಯಗಳು**(ಅಪ್ರಕಟಿತ ಮಹಾಪ್ರಬಂಧ) ಪು.೧೮೨

೧೨. ಅದೇ ಪು.೧೮೩ 'ಚಿರಾಂಡದ ಉತ್ಖನನದ ನೂತನ ಶಿಲಾಯುಗ ಸ್ತರಗಳಲ್ಲಿ ಕ್ರಿ.ಪೂ.೧೮೦೦-೧೪೦೦ರ ಅವಧಿಯ ಹಾವು ಮತ್ತು ಪಕ್ಷಿಗಳ ಮೃಣ್ಮೂರ್ತಿಗಳು, ಮಧ್ಯಪ್ರದೇಶದ ನೆಲಗೆಳ ತಾಮ್ರಯುಗದ ಸ್ತರಗಳಲ್ಲಿ ಕ್ರಿ.ಪೂ.೧೭೦೦-೧೪೦೦ರ ಅವಧಿಯ ಮಾತೃದೇವತೆಯ ಹಾಗೂ ಪ್ರಾಣಿಗಳ ಮೂರ್ತಿಗಳು, ಮಹಾರಾಷ್ಟ್ರದ ನೆಲೆಗಳ ತಾಮ್ರಯುಗದ ಸ್ತರಗಳಲ್ಲಿ ಕ್ರಿ.ಪೂ. ೧೪೦೦-೯೦೦ರ ಅವಧಿಯ ಮಾತೃದೇವತೆ ಮತ್ತು ಪ್ರಾಣಿಗಳ ಮೂರ್ತಿಗಳು ದೊರೆತಿವೆ.

೧೩. ಆಲ್ಬಿನ್ ಎಫ್.ಆರ್., ೧೯೯೮, **ದಿ ರೈಸ್ ಅಂಡ್ ಬರ್ತ್ ಆಫ್ ಇಂಡಿಯನ್ ಸಿವಿಲಿಜೇಷನ್,** ಪು.೧೭೭

೧೪. ಉಮೇಶ್ ಎಸ್. ಹಿರೇಮಠ., **ಮೂರ್ತಿಶಿಲ್ಪಕಲೆ**(ಅಪ್ರಕಟಿತ ಪ್ರಬಂಧ), ಪು.೫೩

೧೫. ರಾಜಾರಾಂ ಹೆಗಡೆ, ೧೯೯೨, **ಪೂರ್ವೋಕ್ತ,** ಪು.೭೨

೧೬. ರಾಮಚಂದ್ರರಾವ್ ಎಸ್.ಕೆ., ೧೯೭೫, **ಮೂರ್ತಿಶಿಲ್ಪದ ನೆಲೆ-ಹಿನ್ನೆಲೆ,** ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

೧೭. ಅದೇ, ಪು.೩೨೩

೧೮. ಅದೇ, ಪು.೩೨೪, ೩೨೫

೧೯. ಅದೇ, ಪು.೩೨೬

೨೦. ಅದೇ, ಚಿತ್ರ-೧೬೮, ಪು.೩೨೫

೨೧. ಅದೇ ಪು.೩೨೬, ಮರವನ್ನು ಹಿಡಿದಿರುವುದು ದೈತ್ಯರ ಸಂಹಾರಕ್ಕಾಗಿ, ಬೆಟ್ಟವನ್ನು ಹಿಡಿದಿರುವುದು ರಾಮರಾವಣ ಯುದ್ಧದಲ್ಲಿ ಲಕ್ಷ್ಮಣನು ಮೂರ್ಛೆಗೊಂಡು ಬಿದ್ದಾಗ ಸಂಜೀವಿನೀ ಮೂಲಿಕೆಯನ್ನು ತರಲು ಹೊರಟ ಹನುಮಂತ ಮೂಲಿಕೆಯನ್ನು ಗುರುತಿಸಲಾರದೆ ಇಡೀ ಬೆಟ್ಟವನ್ನೇ ಬುಡಸಮೇತ ಕಿತ್ತು ಲಂಕೆಗೆ ತಂದ ಸಂದರ್ಭವಾಗಿದೆ.

೨೨. ಅದೇ ಚಿತ್ರ-೧೬೯, ಪು.೩೨೫

೨೩. ಅದೇ ಪು.೩೪೦, ೩೪೩

೨೪. ಸುಂದರ ಅ., ೧೯೯೪, **ಕರ್ನಾಟಕ ಪ್ರಾಗಿತಿಹಾಸಕಾಲದ ಕಲೆ,**

೨೫. ಸಿಂದಗಿ ರಾಜಶೇಖರ್, ೧೯೮೮, **ಪೂರ್ವೋಕ್ತ,** ಪು.೧೯೭

೨೬. ಲೇಪಾಕ್ಷಿಯ ದೇವಾಲಯದಲ್ಲಿ ಕಾಣಬಹುದು.

ಅಧ್ಯಾಯ ೫

ಸಮಾರೋಪ

೫

ಸಮಾರೋಪ

ಕನ್ನಡ ನಾಡು ಕಲೆಯ ಬೀಡು. ವಾಸ್ತುಕಲೆ, ಶಿಲ್ಪಕಲೆ, ಚಿತ್ರಕಲೆ, ನೃತ್ಯ, ಸಂಗೀತ, ಮುಂತಾದ ಕಲಾಪ್ರಕಾರಗಳಿಗೆ ಕರ್ನಾಟಕ ಆಡುಂಬೋಲಾ(ತಾಣ)ಗಿದೆ. ಇಲ್ಲಿ ಬಹುಪ್ರಾಚೀನ ಕಾಲದಿಂದಲೂ ಕಲೆ ಮತ್ತು ಅದರ ವಿವಿಧ ಪ್ರಕಾರಗಳು ಮಾನವನ ಜೀವನ ಸಂಗಾತಿಯಾಗಿ ಬೆಳೆದುಬಂದಿವೆ. ಬದುಕಿನ ಅನುಭವಗಳಿಂದಲೇ ಕಲೆ ಬೆಳೆದು ಬಂದಿರುವುದು ಒಂದೆಡೆಯಾದರೆ, ಆ ಕಲೆಯೇ ಬದುಕಿನ ಅರಿವಿಕೆಗೆ ಪ್ರಧಾನ ಆಕರವಾಗಿರುವುದು ಕಲೆಯ ವೈಶಿಷ್ಟ್ಯವೆನ್ನಬಹುದು.

ಕರ್ನಾಟಕದ ಬದುಕಿನ ಸಂಸ್ಕೃತಿಯಲ್ಲಿ ಹೆಜ್ಜೆ ಇರಿಸಿದ ಎಲ್ಲಾ ರಾಜಮನೆತನಗಳು ಇಲ್ಲಿನ ಕಲಾಪರಂಪರೆಯನ್ನು ಅನುಸರಿಸಿ, ಪೋಷಿಸಿ ಬೆಳೆಸಿದ್ದಾರೆ. ಪರಿಣಾಮವಾಗಿ ಕರ್ನಾಟಕದ ಪ್ರತಿಯೊಂದು ಪ್ರದೇಶದಲ್ಲೂ ಕಲಾಸ್ಮಾರಕಗಳಾದ ದೇವಾಲಯ ಕಟ್ಟಡಗಳನ್ನು, ಮೂರ್ತಿಶಿಲ್ಪಗಳನ್ನು, ಚಿತ್ರಕಲೆ ಮತ್ತಿತರ ಕಲಾ ಪ್ರಕಾರಗಳನ್ನು ಕಾಣಬಹುದು. ಅಂತೆಯೇ ಚಿತ್ರದುರ್ಗ ಪರಿಸರವು ಇದಕ್ಕೆ ಹೊರತಾಗಿಲ್ಲ. ಶಿಲಾಯುಗ ಕಾಲದಿಂದಲೂ ಮಾನವನ ಚಟುವಟಿಕೆಯ ತಾಣವಾದ ಈ ಪ್ರದೇಶದಲ್ಲಿ ಅವನ ಸೃಜನಶೀಲತೆಯ ಮೊದಲ ಹೆಗ್ಗುರುತಗಳಾದ ಚಿತ್ರಕಲೆಗಳನ್ನು ಬೆಟ್ಟಗುಡ್ಡಗಳಲ್ಲಿ ಕಾಣಬಹುದು. ತದನಂತರದ ಇತಿಹಾಸ ಕಾಲದುದ್ದಕ್ಕೂ ಇಲ್ಲಿ ಆಡಳಿತ ನಡೆಸಿದ ಮೌರ್ಯರು, ಶಾತವಾಹನರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣಚಾಲುಕ್ಯರು, ಹೊಯ್ಸಳಗು ಮತ್ತು ವಿಜಯನಗರದ ಅರಸರು ಇಲ್ಲಿಯ ಕಲಾಪರಂಪರೆಯನ್ನು ಪೋಷಿಸಿ ಈ ಪ್ರದೇಶವನ್ನು ವಾಸ್ತು ಮತ್ತು ಮೂರ್ತಿಶಿಲ್ಪ ಕಲೆಯ ನೆಲೆಯನ್ನಾಗಿಸಿದ್ದಾರೆ.

ವಿಜಯನಗರದ ಅರಸರ ನಂತರ ಸ್ವತಂತ್ರವಾಗಿ ಆಳ್ವಿಕೆ ನಡೆಸಿದ ಪಾಳೆಯಗಾರರಲ್ಲಿ ಚಿತ್ರದುರ್ಗದಿಂದ ಆಳಿದ ಪಾಳೆಯಗಾರರು ಪ್ರಮುಖರಾಗಿದ್ದಾರೆ. ಪಾಳೆಯಗಾರರು ಕೇವಲ ಸೀಮಿತ ರಾಜಕೀಯ ಪ್ರಭುತ್ವವನ್ನು ಮತ್ತು ಆರ್ಥಿಕ ಕ್ಷೇತ್ರವನ್ನು ಹೊಂದಿದ್ದಾಗ್ಯೂ, ಈ ಕಲಾಕ್ಷೇತ್ರಕ್ಕೆ ಅವರು ಸಲ್ಲಿಸಿದ ಸೇವೆ ಸ್ಮರಣೀಯವಾಗಿದೆ. ಚಿತ್ರದುರ್ಗ ಪಾಳೆಯಗಾರರು ತಮ್ಮ ಆಳ್ವಿಕೆಯ ಪ್ರದೇಶದಲ್ಲಿ ನೂರಾರು ಸುಂದರ ದೇವಾಲಯ, ಕಲಾಕೃತಿಗಳನ್ನು ಮಠ–

ಮಂಟಪ, ಕೋಟೆ-ಕೊತ್ತಲ, ಬಾವಿ-ಪುಷ್ಕರಣಿ ಮುಂತಾದ ಸ್ಮಾರಕಗಳನ್ನು, ಹಲವಾರು ಶಿಲ್ಪಕಲಾಕೃತಿಗಳನ್ನು ನಿರ್ಮಿಸಿ ಧರ್ಮದ ಜೊತೆ ಕಲೆಯನ್ನೂ ಬೆಳೆಸಿ ಮುನ್ನೆಡೆಸಿದ್ದಾರೆ. ಹಾಗಾಗಿ ಕರ್ನಾಟಕದ ಕಲೆ ಮತ್ತು ವಾಸ್ತುಶಿಲ್ಪದ ಅಧ್ಯಯನದ ಸಂದರ್ಭದಲ್ಲಿ ಚಿತ್ರದುರ್ಗ ಪಾಳೆಯಗಾರರ ಕಲೆ ಮತ್ತು ವಾಸ್ತುಶಿಲ್ಪ ಮಹತ್ವವನ್ನು ಪಡೆದುಕೊಳ್ಳುತ್ತದೆ. ಚಾರಿತ್ರಿಕ ಪರಂಪರೆಯಲ್ಲಿ ಚಿತ್ರದುರ್ಗ ಪಾಳೆಯಗಾರರ ಕಾಲ ಒಂದು ರೀತಿಯಲ್ಲಿ ಕೊನೆಯ ಕಾಲವೆಂದೇ ಹೇಳಬಹುದು. ಹಾಗಾಗಿ ಪಾಳೆಯಗಾರರ ಕಾಲದ ಕಲೆ ಮತ್ತು ವಾಸ್ತುಶಿಲ್ಪವನ್ನು ಹೊರತುಪಡಿಸಿದ ಕರ್ನಾಟಕದ ಕಲೆ ಮತ್ತು ವಾಸ್ತುಶಿಲ್ಪದ ಅಧ್ಯಯನ ಪರಿಪೂರ್ಣವೆನಿಸಲಾರದು. ಈ ಹಿನ್ನೆಲೆಯಲ್ಲಿ ಚಿತ್ರದುರ್ಗ ಪಾಳೆಯಗಾರರ ಕಾಲದ ಕಲೆ ಮತ್ತು ವಾಸ್ತುಶಿಲ್ಪದ ಅಧ್ಯಯನದ ಅನಿವಾರ್ಯತೆ ಮತ್ತು ಮಹತ್ವ ಬಿಂಬಿತವಾಗುತ್ತದೆ. ಈ ಅಂಶವನ್ನು ಗುರುತಿಸಿಕೊಂಡು ಪ್ರಸ್ತುತ ಸಂಶೋಧನಾ ಅಧ್ಯಯನವನ್ನು ನೆಡೆಸಲಾಯಿತು. ಈ ಅಧ್ಯಯನದ ಸಾರವನ್ನು, ಅಧ್ಯಯದನಲ್ಲಿ ಕಂಡುಕೊಂಡ ವೈಶಿಷ್ಟ್ಯಗಳನ್ನು ಮತ್ತು ಫಲಿತಗಳನ್ನು ಈ ಮುಂದಿನಂತೆ ಗಮನಿಸಬಹುದು.

೧. ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿಯನ್ನು ನಿರ್ಧರಿಸಲಾಗಿದ್ದು, ಈ ಮೂಲಕ ಪ್ರಸ್ತುತ ಅಧ್ಯಯನದ ಒಟ್ಟು ಆಶಯವನ್ನು ಸೂಚಿಸಲಾಗಿದೆ. ಕರ್ನಾಟಕದ ಮಧ್ಯಭಾಗದಲ್ಲಿರುವ ಚಿತ್ರದುರ್ಗ ಪ್ರದೇಶವನ್ನು ಮತ್ತು ಇಲ್ಲಿ ಆಡಳಿತ ನಡೆಸಿದ ಪಾಳೆಯಗಾರರ ಕುರಿತಾಗಿ ತಕ್ಕಮಟ್ಟಿಗೆ ಅಧ್ಯಯನಗಳು ನಡೆದಿವೆ. ಆದರೆ ಚಿತ್ರದುರ್ಗ ಪಾಳೆಯಗಾರರ ಕಾಲದ ಸಾಂಸ್ಕೃತಿಕ ಇತಿಹಾಸದ ಕುರಿತಾಗಿ ನಡೆಯಬೇಕಾದ ಅಧ್ಯಯನ ಸಾಕಷ್ಟಿದೆ. ಈ ಕೊರತೆಯನ್ನು ಅನುಲಕ್ಷಿಸಿಕೊಂಡು ಪ್ರಸ್ತುತ ಅಧ್ಯಯನವನ್ನು ಯೋಜಿಸಿಕೊಳ್ಳಲಾಯಿತು. ಆ ಮೂಲಕ ಸಾಂಸ್ಕೃತಿಕ ಕ್ಷೇತ್ರದ ಕೆಲವು ಅಂಶಗಳಾದ ವಾಸ್ತುಶಿಲ್ಪ, ಮೂರ್ತಿಶಿಲ್ಪ ಮತ್ತು ಚಿತ್ರಕಲೆಯ ಕುರಿತಾಗಿ ಇಲ್ಲಿ ಅಧ್ಯಯನ ನಡೆಸಲಾಯಿತು. ಪ್ರಸ್ತುತ ಅಧ್ಯಯನದ ಮೂಲಕ ಚಿತ್ರದುರ್ಗ ಪಾಳೆಯಗಾರರ ಸಾಂಸ್ಕೃತಿಕ ಕೊಡುಗೆಗಳನ್ನು ಗುರುತಿಸಿ ಅವುಗಳ ಮಹತ್ವವನ್ನು ಬಿಂಬಿಸುವುದು ಮತ್ತು ಕರ್ನಾಟಕದ ಸಾಂಸ್ಕೃತಿಕ ಇತಿಹಾಸವನ್ನು ಮತ್ತಷ್ಟು ತಿಳಿಗೊಳಿಸುವ ಉದ್ದೇಶವನ್ನು ಹೊಂದಲಾಗಿತ್ತು. ಅಧ್ಯಯನದ ನಂತರ ಬಹುಮಟ್ಟಿಗೆ ಉದ್ದೇಶವನ್ನು ಈಡೇರಿಸುವ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನವನ್ನು ಮಾಡಲಾಗಿದೆ ಎಂಬುದು ಕಂಡುಕೊಳ್ಳಲಾಗಿದೆ.

ಪ್ರಸ್ತುತ ಅಧ್ಯಯನವು ಚಿತ್ರದುರ್ಗ ಪಾಳೆಯಗಾರರ ಕಾಲದ ಕಲೆ, ವಾಸ್ತುಶಿಲ್ಪಕ್ಕೆ ಸಂಬಂಧಿಸಿರುವುದರಿಂದ, ಅದರ ಪ್ರತೀಕಗಳಾಗಿರುವ ದೇವಾಲಯಗಳು, ಮಠಗಳು,

ಕೋಟೆಗಳು, ಹೊಂಡಗಳು, ಮತ್ತಿತರ ಲೌಕಿಕ ಕಟ್ಟಡಗಳನ್ನು ಮತ್ತು ಬಿಡಿ, ಉಬ್ಬುಶಿಲ್ಪಗಳನ್ನು ಹಾಗೂ ವರ್ಣಚಿತ್ರಕಲೆ ಕುರಿತಾಗಿ ಅನುಲಕ್ಷಿಸಲಾಗಿದೆ. ಗಾರೆಶಿಲ್ಪ, ಕಾಷ್ಠಶಿಲ್ಪ ಮತ್ತು ಲೋಹಶಿಲ್ಪಗಳ ಬಗೆಗೂ ಯೋಜಿಸಿಕೊಳ್ಳಲಾಗಿತ್ತಾದರೂ, ಅವುಗಳು ಬಹುಮಟ್ಟಿಗೆ ರೂಪಾಂತರಗೊಂಡಿರುವುದರಿಂದ, ಇಲ್ಲವೇ ನಾಶವಾಗಿರುವುದರಿಂದ ಆ ಶಿಲ್ಪಗಳ ಕುರಿತಾಗಿ ವಿವೇಚನೆಯನ್ನು ಮಾಡಲಾಗಲಿಲ್ಲ. ಹೀಗೆ ಪಾಳೆಯಗಾರರ ಕಾಲದ ಸ್ಮಾರಕಗಳ ವಿವಿಧ ವಾಸ್ತು ಭಾಗಗಳಾದ ಅಧಿಷ್ಠಾನ ಭಿತ್ತಿ, ಪ್ರಸ್ತರ, ಗ್ರೀವ, ಶಿಖರ, ಸ್ತೂಪಿ, ದ್ವಾರಬಂಧ, ಸ್ತಂಭಗಳು, ಗರ್ಭಗೃಹ, ಅಂತರಾಳ, ಸಭಾಮಂಟಪ, ಅರ್ಧಮಂಟಪ, ಮಾಹಾಮಂಟಪ, ಪ್ರಾಕಾರ, ದೀಪಸ್ತಂಭಗಳು, ಉಯ್ಯಾಲೆಕಂಬಗಳು, ಗರುಡಮಂಟಪಗಳು ಮತ್ತಿತರ ವಾಸ್ತುಭಾಗಗಳನ್ನು ಮತ್ತು ಮೂರ್ತಿಶಿಲ್ಪಗಳ ಎಲ್ಲಾ ಪ್ರಕಾರ ಹಾಗು ಎಲ್ಲಾ ವಿಷಯಗಳನ್ನು ಕುರಿತಾಗಿ ವಿವೇಚಿಸುವ ಅಧ್ಯಯನದ ಸ್ವರೂಪವನ್ನು ಗೊತ್ತುಪಡಿಸಿಕೊಂಡಿದ್ದು, ಬಹುಮಟ್ಟಿಗೆ ಆ ಸ್ವರೂಪದ ನೆಲೆಯಲ್ಲಿಯೇ ಅಧ್ಯಯನ ನಡೆಸಲಾಗಿದೆ.

ವಾಸ್ತುಶಿಲ್ಪ ಹಾಗು ಮೂರ್ತಿಶಿಲ್ಪಗಳ ಕುರಿತಾದ ಈ ರೀತಿಯ ಅಧ್ಯಯನಗಳು ವ್ಯಾಪಕವಾದ ಕ್ಷೇತ್ರಕಾರ್ಯವನ್ನು ಅಪೇಕ್ಷಿಸುತ್ತವೆ. ಆದ್ದರಿಂದ ವಿಸ್ತೃತ ಕ್ಷೇತ್ರಕಾರ್ಯ ಮತ್ತು ವ್ಯವಸ್ಥಿತ ಮಾಹಿತಿ ಸಂಗ್ರಹದ ಅಧ್ಯಯನದ ಕ್ರಮವನ್ನು ಯೋಜಿಸಿಕೊಂಡಂತೆ ಅಧ್ಯಯನವನ್ನು ನಡೆಸಲಾಗಿದೆ. ಹೀಗೆ ಅಧ್ಯಯನದ ಮೊದಲ ಅಧ್ಯಾಯದಲ್ಲಿ ವ್ಯಕ್ತವಾದ ಒಟ್ಟು ಆಶಯಕ್ಕೆ ತಕ್ಕಂತೆ ಪ್ರಸ್ತುತ ಅಧ್ಯಯನವನ್ನು ಕೈಗೊಳ್ಳಲಾಗಿದೆ.

೧. ಪ್ರಸ್ತುತ ಅಧ್ಯಯನಕ್ಕೆ ಪೂರಕವಾಗಿ ಚಿತ್ರದುರ್ಗ ಪ್ರದೇಶದ ಭೌಗೋಳಿಕ ವೈಶಿಷ್ಟ್ಯ ಮತ್ತು ಚಾರಿತ್ರಿಕ ಹಿನ್ನೆಲೆಯನ್ನು ಅವಲೋಕಿಸಲಾಗಿದೆ. ಯಾವುದೇ ದೇಶದ, ಜನಾಂಗದ ನಾಗರಿಕತೆಗಳ ಜೀವನ ಸಂಸ್ಕೃತಿ ರೂಪುಗೊಳ್ಳುವಲ್ಲಿ ಅಲ್ಲಿಯ ಭೌಗೋಳಿಕ ಪರಿಸರದ ಪ್ರಭಾವ ದಟ್ಟವಾಗಿ ಆಗಿರುವುದನ್ನು ಗುರುತಿಸಬಹುದು. ಹಾಗಾಗಿ ಯಾವುದೇ ಸಾಂಸ್ಕೃತಿಕ ಅಂಶಗಳ ಅಧ್ಯಯನಗಳಿಗೆ ಅಲ್ಲಿಯ ಭೌಗೋಳಿಕ ಲಕ್ಷಣಗಳನ್ನು ಅವಲೋಕಿಸುವುದು ಅಧ್ಯಯನದ ದೃಷ್ಟಿಯಿಂದ ಅವಶ್ಯಕವಾದ ಅಂಶವಾಗಿದೆ. ಚಿತ್ರದುರ್ಗದ ಪರಿಸರವು ಇದಕ್ಕೆ ಹೊರತಾಗಿಲ್ಲ. ಇಲ್ಲಿ ವ್ಯಾಪಕವಾಗಿರುವ ಬೆಟ್ಟಗಳ ಸಾಲುಗಳು ವಿಶಾಲವಾದ ಬಯಲುಪ್ರದೇಶ, ಖನಿಜಸಂಪತ್ತು ಹಾಗೂ ಸೀಮಿತ ಜಲ, ಸಸ್ಯ ಸಂಪತ್ತುಗಳು ಇಲ್ಲಿಯ ಚರಿತ್ರೆಯನ್ನು ರೂಪಿಸುವಲ್ಲಿ ಮಹತ್ವದ ಪಾತ್ರ ವಹಿಸಿರುವುದನ್ನು ಗಮನಿಸಬಹುದು. ವಿರಳ ಮಳೆಯಿಂದ ಕೂಡಿರುವ ಈ ಪ್ರದೇಶ ಬಹುಮುಖಿ ಜೀವನ ಸಂಸ್ಕೃತಿಗೆ ಬಹುಪ್ರಾಚೀನ ಕಾಲದಿಂದಲೂ ತಾಣವಾಗಿರುವುದು ಮಹತ್ವದ ಸಂಗತಿಯಾಗಿದೆ. ಸಾಮಾನ್ಯವಾಗಿ ನೀರಿನ ಸೌಲಭ್ಯಗಳ

ಪ್ರದೇಶಗಳಲ್ಲಿಯೇ ಪ್ರಾಚೀನ ನಾಗರೀಕತೆಗಳು ಬೆಳೆದು ಬಂದಿರುವುದು ಕಂಡುಬರುತ್ತವೆ. ಅದಕ್ಕೆ ವ್ಯತಿರಿಕ್ತವಾದ ಸನ್ನಿವೇಶ ಚಿತ್ರದುರ್ಗ ಪರಿಸರ ಇದೆಯಾದರೂ ಪ್ರಾಚೀನ ಕಾಲದಿಂದಲೂ ಇಲ್ಲಿಯ ಮಾನವ ಕೃತಕವಾಗಿ ನೀರನ್ನು ಸಂಗ್ರಹಿಸುವ ವಿಧಾನಗಳನ್ನು ಕಂಡುಕೊಂಡಿದ್ದನೆಂಬುದು ಪ್ರಾಗೈತಿಹಾಸಿಕ ಕಾಲದ ಕುಂಟೆಗಳು, ಇತಿಹಾಸ ಕಾಲದ ಕೆರೆಕಟ್ಟೆಗಳು ಸಾಕ್ಷಿಯಾಗಿವೆ. ಪಾಳೆಯಗಾರರ ಕಾಲದಲ್ಲೂ ಅವು ಮುಂದುವರೆದಿದ್ದು, ವ್ಯವಸ್ಥಿತ ರೂಪಪಡೆದುಕೊಂಡಿದ್ದನ್ನು ಇಲ್ಲಿಯ ಅನೇಕ ಬಾವಿ, ಕೆರೆ, ಪುಷ್ಕರಣಿ, ಹೊಂಡಗಳ ಮೂಲಕ ಗುರುತಿಸಬಹುದಾಗಿದೆ.

ಚಿತ್ರದುರ್ಗ ಪರಿಸರದ ಪ್ರಾಗೈತಿಹಾಸದ ಸಂಸ್ಕೃತಿಯನ್ನು ಅವಲೋಕಿಸಲಾಗಿದೆ. ಈವರೆಗೆ ನಡೆದ ಸಂಶೋಧನೆಗಳಿಂದ ಈ ಪ್ರದೇಶದಲ್ಲಿ ಹಳೆಶಿಲಾಯುಗ, ಮಧ್ಯಶಿಲಾಯುಗ ಮತ್ತು ನೂತನ ಶಿಲಾಯುಗ, ಅದರಲ್ಲೇ ಶಿಲಾತಾಮ್ರಯುಗ, ಬೃಹತ್ ಶಿಲಾಯುಗ ಆದಿಶಿಲಾಯುಗ, ಆದಿಚಾರಿತ್ರಿಕ ಸಂಸ್ಕೃತಿಗಳು ಬೆಳೆದು ಬಂದಿರುವುದನ್ನು ಗುರುತಿಸಲಾಗಿದೆ. ಈ ಎಲ್ಲಾ ಸಾಂಸ್ಕೃತಿಕ ಕಾಲಘಟ್ಟಗಳ ಸುಮಾರು ಐವತ್ತಕ್ಕೂ ಹೆಚ್ಚಿನ ಪುರಾತತ್ವ ನೆಲೆಗಳು ಈ ಜಿಲ್ಲೆಯಲ್ಲಿ ಪತ್ತೆಯಾಗಿರುವುದು ಪ್ರಾಚ್ಯ ಸಂಸ್ಕೃತಿಯು, ಇಲ್ಲಿ ವಿಸ್ತೃತವಾಗಿ ಬೆಳೆದಿರುವುದಕ್ಕೆ ಸಾಕ್ಷಿಯಾಗಿದೆ.

ಚಾರಿತ್ರಿಕ ಕಾಲಘಟ್ಟಗಳಲ್ಲಿ ಮೌರ್ಯರಿಂದ ಹಿಡಿದು ಪ್ರಸ್ತುತ ದಿನದವರೆಗಿನ ಜೀವನ ಸಂಸ್ಕೃತಿಯ ನಿರಂತರತೆ ಇರುವುದನ್ನು ಗುರುತಿಸಲಾಗಿದೆ. ಅದರಲ್ಲೂ ಅಧ್ಯಯನಕ್ಕೆ ಪೂರಕವಾಗಿ ಪಾಳೆಯಗಾರರ ಕಾಲದವರೆಗಿನ ಇಲ್ಲಿಯ ಚರಿತ್ರೆಯನ್ನು ಗಮನಿಸಲಾಗಿದೆ. ಅಶೋಕನ ಶಾಸನಗಳನ್ನು ಹೊಂದಿರುವ ಈ ಜಿಲ್ಲೆ ಮೌರ್ಯ ಸಾಮ್ರಾಜ್ಯದ ಒಂದು ಪ್ರಮುಖ ಭಾಗವಾಗಿದ್ದು, ತದನಂತರ ಶಾತವಾಹನ ಮತ್ತು ಕದಂಬರ ಆಳ್ವಿಕೆಯನ್ನು ಕಂಡಿತು. ಇಲ್ಲಿನ ಚಂದ್ರವಳ್ಳಿ, ಬ್ರಹ್ಮಗಿರಿಗಳು ಶಾತವಾಹನರ ನೆಲೆಗಳಾಗಿದ್ದವೆಂದು ಅಲ್ಲಿ ದೊರೆತಿರುವ ಅನೇಕ ಪ್ರಾಚ್ಯಾವಶೇಷಗಳು ತಿಳಿಸುತ್ತವೆ. ಶಾತವಾಹನರ ನಂತರ ಅಧಿಕಾರಕ್ಕೆ ಬಂದ ಮೊದಲ ಕನ್ನಡ ದೊರೆ ಮಯೂರವರ್ಮನ ಶಾಸನವು ಚಂದ್ರವಳ್ಳಿಯಲ್ಲಿ ದೊರೆತಿದ್ದು, ಕದಂಬರ ಆರಂಭಿಕ ರಾಜಕೀಯ ಬೆಳವಣಿಗೆಗೆ ಈ ಪ್ರದೇಶ ಪೋಷಣೆಯನ್ನು ಒದಗಿಸಿದ ಬಗ್ಗೆ ತಿಳಿಸುತ್ತದೆ.

ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣಚಾಲುಕ್ಯ, ಹೊಯ್ಸಳ ಹಾಗು ಸೇವುಣರ ಆಳ್ವಿಕೆಯ ಅವಧಿಯಲ್ಲಿ ಚಿತ್ರದುರ್ಗ ಪ್ರದೇಶ ಅವರ ಪ್ರಭುತ್ವವನ್ನು ಹೊಂದಿ ಆಯಾ ರಾಜಕೀಯ ಶಕ್ತಿಗಳ ರಾಜಕೀಯ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ

ಪ್ರಮುಖ ಪಾತ್ರವಹಿಸುತ್ತಾ ಬಂದಿವೆ. ಬಾದಾಮಿ ಚಾಲುಕ್ಯರ ಕಾಲದಲ್ಲಿ 'ಸೂಳ್ಗಲ್‌ನಾಡು' ಎಂದು ಕರೆಯಲ್ಪಡುತ್ತಿತ್ತು. ರಾಷ್ಟ್ರಕೂಟ ಮನೆತನದ ಅನೇಕ ಶಾಸನಗಳು ಇಲ್ಲಿ ದೊರೆತಿವೆ. ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಇದು 'ನೊಳಂಬವಾಡಿ ಮೂವತ್ತೆರಡು ಸಾವಿರ' ಪ್ರಾಂತ್ಯದಲ್ಲಿತ್ತು. ಚಾಲುಕ್ಯರ ಮತ್ತು ಅವರ ಮಾಂಡಲೀಕರಾದ ನೊಳಂಬಪಲ್ಲವರ ಆಳ್ವಿಕೆಯನ್ನೂ ಇದು ಕಂಡಿದೆ. ಅವರ ಹಲವಾರು ಶಾಸನ ಮತ್ತು ಸ್ಮಾರಕಗಳು ಜಿಲ್ಲೆಯಲ್ಲಿ ಕಂಡುಬರುತ್ತವೆ. ಹೊಯ್ಸಳರ ಅರವತ್ತೈದಕ್ಕೂ ಹೆಚ್ಚು ಶಾಸನಗಳು ಚಿತ್ರದುರ್ಗ ಪ್ರದೇಶದಲ್ಲಿ ದೊರೆತಿವೆ. ಅದೇ ರೀತಿ ಅವರ ಅನೇಕ ದೇವಾಲಯಗಳು ಮತ್ತು ಶಿಲ್ಪಗಳು ಕಂಡುಬರುತ್ತವೆ. ಹೊಯ್ಸಳರೊಂದಿಗೆ ಈ ಪ್ರದೇಶ ಸೇವುಣರ ಆಳ್ವಿಕೆಯನ್ನು ಕಂಡಿತ್ತು ಎನ್ನುವುದಕ್ಕೆ ಅವರ ಕೆಲವು ಶಾಸನಗಳು ಮಾಹಿತಿ ನೀಡುತ್ತವೆ.

ಕ್ರಿ.ಶ. ೧೩೩೬ರಲ್ಲಿ ಅಸ್ತಿತ್ವಕ್ಕೆ ಬಂದ ವಿಜಯನಗರ ಸಾಮ್ರಾಜ್ಯ ದಕ್ಷಿಣ ಭಾರತದ ಚರಿತ್ರೆಯಲ್ಲಿ ನೂತನ ದಾಖಲೆಯನ್ನು ಬರೆಯಿತು. ಬಹುಮಟ್ಟಿಗೆ ದಕ್ಷಿಣ ಭಾರತದ ಪ್ರದೇಶಗಳು ಅವರ ಸಾರ್ವಭೌಮತ್ವಕ್ಕೆ ಒಳಗೊಂಡವು. ಚಿತ್ರದುರ್ಗ ಪ್ರದೇಶವೂ ಕೂಡ ವಿಜಯನಗರ ಸಾಮ್ರಾಜ್ಯದ ಪ್ರಮುಖ ಆಡಳಿತ ಭಾಗವಾಗಿತ್ತು. ಈ ಕಾಲಘಟ್ಟದಲ್ಲಿ ವಿಜಯನಗರ ಸಾಮ್ರಾಟರಿಗೆ ನಿಷ್ಠರಾಗಿ ಅನೇಕ ಪಾಳೆಯಪಟ್ಟುಗಳು ರೂಪುಗೊಂಡವು. ಅವುಗಳಲ್ಲಿ ಚಿತ್ರದುರ್ಗ ಪಾಳೆಯಪಟ್ಟು ಒಂದಾಗಿದೆ ಹಾಗೂ ಪ್ರಮುಖವಾಗಿದೆ.

ಚಿತ್ರದುರ್ಗ ಪಾಳೆಯಗಾರರ ರಾಜಕೀಯ ಇತಿಹಾಸವನ್ನೂ ಇಲ್ಲಿ ವಿವೇಚಿಸಲಾಗಿದ. ಮೂಲತಃ ಬೇಡ ಜನಾಂಗವಾದ ಇವರು ತಮ್ಮನ್ನು ವಾಲ್ಮೀಕಿ ಮತಸ್ಥರು, ಕಾಮಗೇತಿ ವಂಶಸ್ಥರೆಂದು ಹೇಳಿಕೊಂಡಿದ್ದಾರೆ. ಆದರೆ ಚರಿತ್ರೆಯಲ್ಲಿ ಮದಕರಿನಾಯಕರೆಂದೇ ಪ್ರಸಿದ್ಧರಾಗಿದ್ದಾರೆ. ಮತ್ತಿತಿಮ್ಮಣ್ಣನಾಯಕ ಪಾಳೆಯಪಟ್ಟನ್ನು ಕಟ್ಟಿದ ಮೊದಲ ವ್ಯಕ್ತಿ. ಇವನು ವಿಜಯನಗರದ ಸದಾಶಿವನ ಮಹಾಮಂಡಲೇಶ್ವರನಾದ ತಿರುಮಲರಾಜದೇವನಿಂದ ಹೊಳಲ್ಕೆರೆಯ ಸೀಮೆಯನ್ನು ಅಮರ ಮಾಗಣಿಯಾಗಿ ಪಡೆದುಕೊಂಡು ಆಡಳಿತ ಪ್ರಾರಂಭಿಸಿದ. ಮುಂದೆ ೧೫೫೮ರಲ್ಲಿ ಅಧಿಕಾರಕ್ಕೆ ಬಂದರೂ, ಚಿತ್ರದುರ್ಗದ ನಾಯಕತ್ವವನ್ನು ಪಡೆದು ಆಳ್ವಿಕೆ ಪ್ರಾರಂಭಿಸಿದ್ದು ೧೫೭೪ರಲ್ಲಿ. ಇವನು ವಿಜಯನಗರ ಅರಸರ ಮೆಚ್ಚುಗೆಗೆ ಪಾತ್ರನಾಗಿದ್ದನು. ಇವನು ಚಿತ್ರದುರ್ಗ ಕೋಟೆಸಹಿತ ಕೆಲವು ದೇವಾಲಯ ಸ್ಮಾರಕಗಳನ್ನು ನಿರ್ಮಿಸಿದ್ದಾನೆ. ಇವನ ನಂತರ ಓಬಣ್ಣನಾಯಕನು ೧೫೮೮ರಲ್ಲಿ ಅಧಿಕಾರಕ್ಕೆ ಬಂದನು. ಇವನ ಆಡಳಿತಾವಧಿಯಲ್ಲಿ ವಿಜಯನಗರ ಸಾಮ್ರಾಜ್ಯ ಪತನಗೊಂಡು ಚಿತ್ರದುರ್ಗವು ಸ್ವತಂತ್ರ ರಾಜ್ಯವಾಯಿತು. ಇವನು ಹುಲ್ಲೂರು ಮತ್ತು ಚಿತ್ರದುರ್ಗದಲ್ಲಿ ಕೆರೆಗಳನ್ನು ನಿರ್ಮಿಸಿ ಜನತೆಗೆ ನೀರಿನ ಅನುಕೂಲತೆ ಕಲ್ಪಿಸಿದ.

ಓಬಣ್ಣನಾಯಕನ ನಂತರ ಬಂದ ಒಂದನೆಯ ಕಸ್ತೂರಿರಂಗಪ್ಪನಾಯಕ ಕ್ರಿಶ. ೧೬೦೨ರಿಂದ ೧೬೫೨ರವರೆಗೆ ಆಳ್ವಿಕೆ ಮಾಡಿದನು. ಇವನು ಪರಾಕ್ರಮಿಯೂ, ಮುತ್ಸದ್ಧಿಯೂ ಆಗಿದ್ದನು. ಇವನು ತನ್ನ ಸಮಕಾಲೀನ ಅನೇಕ ಪಾಳೆಯಗಾರರನ್ನು ಸೋಲಿಸುತ್ತಾನೆ. ತರಿಕೆರೆಯ ಹನುಮಪ್ಪನಾಯಕ, ಚಿತ್ರಹಳ್ಳಿಯ ನೀಲಯ್ಯ, ಹರಪ್ಪನಹಳ್ಳಿ ನಾಯಕ, ಶಿರಾದ ರಂಗಪ್ಪನಾಯಕನನ್ನು ಸೋಲಿಸುತ್ತಾನೆ. ಇವನ ಕಾಲದಲ್ಲಿ ರಾಜ್ಯವು ವಿಶಾಲವಾಗಿ ಬೆಳೆದಿತ್ತು. ಇವನ ನಂತರ ಇವನ ಮೂರನೆಯ ಮಗ ಇಮ್ಮಡಿ ಮದಕರಿನಾಯಕ ಪಟ್ಟಕ್ಕೆ ಬಂದನು. ಇವನು ತರಿಕೆರೆ ಪಾಳೆಯಗಾರರನ್ನು ಸೋಲಿಸಿದನು. ಮತ್ತು ಚಿತ್ರದುರ್ಗದ ಕೋಟೆಯಲ್ಲಿ ಅನೇಕ ಕಟ್ಟಡ, ಕಣಜಗಳನ್ನು ನಿರ್ಮಿಸಿ, ಗುಡೇಕೋಟೆ, ಐಮಂಗಲ ಹಾಗೂ ಹಿರಿಯೂರಿನ ಕೋಟೆಗಳನ್ನು ವಶಪಡಿಸಿಕೊಂಡನು. ಇವನ ಕೆಲವು ಶಾಸನಗಳು ದೊರೆತಿದ್ದು, ಅವನ ವಿವಿಧ ರೀತಿಯ ಚಟುವಟಿಕೆಗಳ ಮೇಲೆ ಬೆಳಕು ಬೀರುತ್ತವೆ. ಇವನು ಪುತ್ರ ಸಂತಾನವಿರದೇ ೧೬೭೪ರಲ್ಲಿ ಮರಣ ಹೊಂದಿದಾಗ, ಈತನ ತಮ್ಮನ ಮಗ ಚಿಕ್ಕಣ್ಣನಾಯಕ ಅಧಿಕಾರಕ್ಕೆ ಬಂದನು. ಇವನು ವೀರಶೈವ ಧರ್ಮಕ್ಕೆ ಮತಾಂತರಗೊಂಡು ನಂತರ ಅದನ್ನು ತ್ಯಜಿಸಿ ಶೃಂಗೇರಿ ಮಠದೊಂದಿಗೆ ಸಂಪರ್ಕವಿಟ್ಟುಕೊಂಡದ್ದು ಗಮನಾರ್ಹವಾಗಿದೆ.

ಇವನ ನಂತರ ಮೂರನೆಯ ಮದಕರಿನಾಯಕ, ಅವನ ನಂತರ ಬಿಚ್ಚುಗತ್ತಿ ಭರಮಣ್ಣನಾಯಕ ಆಡಳಿತ ನಡೆಸಿದರು. ಇವನು ಮರಾಠ ಮತ್ತು ಬಿಜಾಪುರ ಸೈನ್ಯಗಳನ್ನು ಸೋಲಿಸಿದ್ದು ಮಹತ್ವದ ಸಂಗತಿಯಾಗಿದೆ. ಇವನು ಇಪ್ಪತ್ತು ಕೆರೆಗಳನ್ನು, ಮೂವತ್ತಕ್ಕೂ ಹೆಚ್ಚು ದೇವಾಲಯಗಳನ್ನು, ನಾಲ್ಕು ಅರಮನೆಗಳು, ಐದು ಗಡಿದುರ್ಗಗಳನ್ನು ನಿರ್ಮಿಸಿದ್ದಾನೆಂದು ತಿಳಿದುಬರುತ್ತದೆ. ಇವನು ಪಾಳೆಯಗಾರರ ಕಾಲದ ನಿರ್ಮಾಣ ಚಟುವಟಿಕೆಗಳಲ್ಲಿ ಮಹತ್ವದ ಸ್ಥಾನಪಡೆದಿದ್ದಾನೆ. ಇವನ ನಂತರ ಹಿರೇಮದಕರಿನಾಯಕ ಅಧಿಕಾರಕ್ಕೆ ಬಂದನು. ಇವನು ಮಾಯಕೊಂಡದ ಕಾಳಗದಲ್ಲಿ ಹೋರಾಡುತ್ತಲೇ ಮರಣ ಹೊಂದಿದನು. ಇವನ ಕಾಲದಲ್ಲಿ ಚಿತ್ರದುರ್ಗ ಪ್ರದೇಶದ ದೇವಾಲಯಗಳ ಹೆಚ್ಚಿನ ಉಯ್ಯಾಲೆ ಕಂಬಗಳು ಮತ್ತು ದೀಪಸ್ತಂಭಗಳು ನಿರ್ಮಾಣವಾದವು. ಇವನ ನಂತರ ಎರಡನೆಯ ಕಸ್ತೂರಿರಂಗಪ್ಪನಾಯಕ, ರಾಜಾವೀರಮದಕರಿನಾಯಕ ಆಡಳಿತ ನಡೆಸಿದರು. ಇವನು ದುರ್ಗದ ಮೇಲೆ ದಾಳಿ ನಡೆಸಿದ ಮರಾಠರು, ಹೈದರಾಲಿಯನ್ನು ಸೋಲಿಸಿ ಓಡಿಸಿದನು. ಆದರೆ ಅಂತಿಮವಾಗಿ ಹೈದರಾಲಿಯಿಂದ ಸೋತು ಹತನಾದನು. ೧೭೭೯ರಲ್ಲಿ ಚಿತ್ರದುರ್ಗ ಹೈದರನ ವಶವಾಯಿತು. ಅಲ್ಲಿಗೆ ಚಿತ್ರದುರ್ಗ ಪಾಳೆಯಗಾರರ ಆಳ್ವಿಕೆ ಕೊನೆಗೊಂಡಿತು.

ಪಾಳೆಯಗಾರರು ರಾಜಕೀಯವಾಗಿ ಮಹತ್ವದ ಪಾತ್ರ ವಹಿಸಿದಂತೆ ಸಾಂಸ್ಕೃತಿಕವಾಗಿಯೂ ಸಾಕಷ್ಟು ಪ್ರಗತಿಯನ್ನು ಸಾಧಿಸಿದರು. ಅವರ ಉದಾರ ಜನಕಲ್ಯಾಣ ನೀತಿ ಮತ್ತು ಕಲಾಪೋಷಣೆಯ ಪರಿಣಾಮವಾಗಿ ಚಿತ್ರದುರ್ಗ ಪರಿಸರದಲ್ಲಿ ಅನೇಕ ಕಲಾಸ್ಮಾರಕಗಳು ನಿರ್ಮಾಣಗೊಂಡವು.

೩. ಚಿತ್ರದುರ್ಗ ಪಾಳೆಯಗಾರರ ಆಡಳಿತ ವ್ಯಾಪ್ತಿಯ ಪ್ರದೇಶವನ್ನು ಗುರುತಿಸಿಕೊಂಡು, ಅಲ್ಲಿ ವ್ಯವಸ್ಥಿತವಾಗಿ ಕ್ಷೇತ್ರಕಾರ್ಯವನ್ನು ನಡೆಸಲಾಯಿತು. ಈ ಕ್ಷೇತ್ರಕಾರ್ಯಗಳಲ್ಲಿ ಒಟ್ಟು ಎಪ್ಪತ್ತು ದೇವಾಲಯಗಳು, ಎಂಟು ಮಠಗಳು, ಕೋಟೆಗಳು ಹಾಗೂ ಹೊಂಡಗಳನ್ನು ಗುರುತಿಸಿ ಅಧ್ಯಯನಕ್ಕೆ ಒಳಪಡಿಸಲಾಯಿತು. ಇವುಗಳಲ್ಲಿ ಪ್ರಮುಖವಾದ ದೇವಾಲಯಗಳ ಬಗೆಗೆ ಈ ಮೊದಲೇ ಅಲ್ಲಲ್ಲಿ ಬಿಡಿ ಅಧ್ಯಯನಗಳು ನಡೆದು ಅವು ಬೆಳಕಿಗೆ ಬಂದಿವೆ. ಆದರೆ ಗ್ರಾಮಾಂತರ ಪ್ರದೇಶಗಳಲ್ಲಿ ಇರುವ ಮತ್ತು ಚಿಕ್ಕ ಚಿಕ್ಕ ಗುಡಿಗಳು, ಸ್ಮಾರಕಗಳು ಇದೇ ಮೊದಲ ಬಾರಿಗೆ ಬೆಳಕು ಕಾಣುತ್ತಲಿವೆ. ಹಾಗಾಗಿ ಇಂತಹ ಅಪರಿಚಿತ ದೇವಾಲಯ ಸ್ಮಾರಕಗಳನ್ನು ಅಧ್ಯಯನಕ್ಕೆ ಒಳಪಡಿಸಿ ಬೆಳಕಿಗೆ ತರಲಾಗಿದೆ.

ಪಾಳೆಯಗಾರರ ಕಾಲದ ಮೂರ್ತಿಶಿಲ್ಪಗಳ ಸಮೀಕ್ಷೆ ಮತ್ತು ಅಧ್ಯಯನ ಬಹುಮಟ್ಟಿಗೆ ನಡೆದೇ ಇರಲಿಲ್ಲವೆಂದು ಹೇಳಬಹುದು. ಹಾಗಾಗಿ ಈ ಅಧ್ಯಯನದಲ್ಲಿ ಪಾಳೆಯಗಾರರ ಕಾಲದ ಬಿಡಿಶಿಲ್ಪಗಳು, ಉಬ್ಬುಶಿಲ್ಪಗಳು, ಗಾರೆಶಿಲ್ಪಗಳು ಎಂದು ಮುಂತಾಗಿ ವಿಭಜಿಸಿಕೊಂಡು ಅಧ್ಯಯನ ನಡೆಸಲಾಗಿದ್ದು, ಆ ಮೂಲಕ ಶಿಲ್ಪಗಳ ವೈಶಿಷ್ಟ್ಯಗಳನ್ನು ಗುರುತಿಸಲಾಗಿದೆ.

ಪಾಳೆಯಗಾರರ ಕಾಲದ ದೇವಾಲಯ ಸ್ಮಾರಕಗಳ ವಾಸ್ತು ಲಕ್ಷಣಗಳು ಪ್ರಾದೇಶಿಕ ಸ್ವಂತಿಕೆಯನ್ನು ಹೊಂದಿದ್ದು, ಅವು ಪಾರಂಪರಿಕ ವಾಸ್ತು ಸಂಪ್ರದಾಯಗಳಿಗಿಂತ ಹೆಚ್ಚು ಭಿನ್ನವಾಗಿವೆ. ದೇವಾಲಯಗಳನ್ನು ಸಾಮಾನ್ಯವಾಗಿ ಕಣಶಿಲೆಯಿಂದ ನಿರ್ಮಿಸಲಾಗಿದೆ. ದೇವಕೋಷ್ಟಗಳು, ಗರ್ಭಗೃಹದ ಮೇಲಿನ ಶಿಖರ ಇಟ್ಟಿಗೆ ಮತ್ತು ಗಾರೆಯಲ್ಲಿವೆ. ದೇವಾಲಯಗಳ ತಲವಿನ್ಯಾಸದಲ್ಲಿ ಚಿಕ್ಕ ಮತ್ತು ಮಧ್ಯಮ ಪ್ರಮಾಣದ ದೇವಾಲಯಗಳು ಹೆಚ್ಚಾಗಿ ಇವೆ. ಅಧಿಷ್ಠಾನಗಳು ಹೆಚ್ಚಿನ ಅಲಂಕರಣೆಗಳನ್ನು ಹೊಂದದೆ, ಸರಳವಾಗಿದ್ದು ಮಂಚಬಂಧಶೈಲಿಯಲ್ಲಿ ಸಾಮಾನ್ಯವಾಗಿವೆ. ಆದರೆ ನೀರ್ಥಡಿಯ ರಂಗನಾಥ ದೇವಾಲಯದ ಅಧಿಷ್ಠಾನ ಪರಿಪೂರ್ಣ ವಿಜಯನಗರ ಶೈಲಿಯಲ್ಲಿದ್ದು, ಪಾಳೆಯಗಾರರ ಕಾಲದ ದೇವಾಲಯಗಳ ಅಧಿಷ್ಠಾನಗಳಲ್ಲಿಯೇ ವಿಶಿಷ್ಟ ಮತ್ತು ಪ್ರತ್ಯೇಕ ಸ್ಥಾನವನ್ನು ಪಡೆಯುತ್ತದೆ. ಸಾಮಾನ್ಯವಾಗಿ ಭಿತ್ತಿ ಸರಳವಾಗಿರುತ್ತವೆ. ಈ ದೇವಾಲಯಗಳ ಭಿತ್ತಿಯಲ್ಲಿ ದೇವಾಲಯದ ಗೋಡೆಗಂಬಗಳು, ಮೂಲೆಗಂಬಗಳು ಹೊರಭಾಗದಲ್ಲಿ ಗೋಚರಿಸುತ್ತವೆ.

ಈ ರೀತಿಯ ಭಿತ್ತಿಯ ರಚನೆ ಪಾಳೆಯಗಾರರ ಕಾಲದ ಒಂದು ವಿಶಿಷ್ಟ ರಚನೆಯೆನ್ನಬಹುದು. ಇದಕ್ಕೆ ಅಪವಾದವೆಂಬಂತೆ ನೀರ್ಥಡಿಯ ರಂಗನಾಥಸ್ವಾಮಿ ದೇವಾಲಯದ ಭಿತ್ತಿ, ಉಪಅಧಿಷ್ಠಾನ ಮತ್ತು ಮೇಲ್ಭಾಗದಲ್ಲಿ ಶಿಲ್ಪಗಳ ಪಟ್ಟಿಕೆಯನ್ನು ಹೊಂದಿದ್ದು ಅಪರೂಪದ್ದೆನಿಸುತ್ತದೆ. ಸಾಮಾನ್ಯವಾಗಿ ಭಿತ್ತಿಯ ಮೇಲೆ ವಿರಳವಾಗಿ ಉಬ್ಬುಶಿಲ್ಪಗಳಿವೆ. ಇವುಗಳಲ್ಲಿ ಏಳುಹೆಡೆ ಸರ್ಪ, ಜೋಡಿಮೀನು, ಆಮೆ, ಕಾದಾಡುತ್ತಿರುವ ಗಜಗಳು ಸಾಮಾನ್ಯವಾಗಿದ್ದು, ಇವು ರಚನೆಯ ದೃಷ್ಟಿಯಿಂದ ಆಕರ್ಷಕವಾಗಿರುವುದಿಲ್ಲ.

ದೇವಾಲಯಗಳ ಪ್ರಸ್ತರ ಭಾಗವು ಇಳಿಜಾರಾದ ಮುಂಜೂರು, ಮೇಲೆ ಶಾಲ, ಕೂ, ಮತ್ತು ಕಂಗೂರಾಕೃತಿಗಳನ್ನು ಒಳಗೊಂಡಿರುತ್ತದೆ. ಮುಂಜೂರು ಎರಡು ವಿಧದಲ್ಲಿರುತ್ತದೆ. ಒಂದು ನೇರ ಇಳಿಜಾರಾಗಿದ್ದರೆ, ಇನ್ನೊಂದು ಅರೆವೃತ್ತಾಕಾರದಲ್ಲಿ ಮುಂದಕ್ಕೆ ಬಾಗಿದಂತೆ ಇರುತ್ತದೆ. ಇದು ವಿಜಯನಗರ ಶೈಲಿ. ಮುಖಮಂಟಪ, ಸಭಾಮಂಟಪ ಅಂತರಾಳದ ಬದಿಯ ಮಾಡಿನಲ್ಲಿ ಉದ್ದಕ್ಕೂ ಕಂಗೂರಾಕೃತಿಗಳು ಇರುತ್ತವೆ. ಕೆಲವು ಸಲ ಇವು ಬಿಡಿಯಾಗಿ ನಿರ್ಮಿಸಲ್ಪಟ್ಟಿದ್ದರೆ, ಕೆಲವು ಕಡೆ ಮಾಡಿನಲ್ಲಿ ಉದ್ದಕ್ಕೂ ಕುಂಬೆ(ಬಲ್ಪ)ಯಲ್ಲಿ ಈ ಆಕೃತಿಗಳನ್ನು ಉಬ್ಬುಶಿಲ್ಪಗಳಾಗಿ ಬಿಡಿಸಲಾಗಿರುತ್ತದೆ. ಇವೆಲ್ಲಾ ಗಾರೆಯ ರಚನೆಗಳು. ಕಂಗೂರಾಕೃತಿಗಳು ಪಾಳೆಯಗಾರರ ಕೊಡುಗೆಗಳಾಗಿವೆ.

ಗರ್ಭಗೃಹಗಳ ಮೇಲೆ ಶಿಖರಗಳನ್ನು ಸಾಮಾನ್ಯವಾಗಿ ಇಟ್ಟಿಗೆ ಮತ್ತು ಗಾರೆಗಳಿಂದ ನಿರ್ಮಿಸಲಾಗಿದೆ. ಇವು ಏಕತಲದ ದ್ರಾವಿಡ ವಿಮಾನ ಮಾದರಿಯಲ್ಲಿರುತ್ತವೆ. ಆದರೆ ಈ ಪ್ರದೇಶದ ನೀರ್ಥಡಿಯ ರಂಗನಾಥ ಮತ್ತು ಚಿತ್ರದುರ್ಗದ ಉತ್ಸವಾಂಬೆ ದೇವಾಲಯಗಳ ಶಿಖರಗಳು ಸಂಪೂರ್ಣ ಶಿಲೆಯಿಂದಲೇ ನಿರ್ಮಾಣವಾಗಿರುವುದು ವಿಶಿಷ್ಟವಾಗಿದೆ. ಇವುಗಳಲ್ಲಿ ನೀರ್ಥಡಿಯ ಶಿಖರ ಚಿತ್ರುದುರ್ಗಕ್ಕಿಂತ ಹೆಚ್ಚು ಆಕರ್ಷಕವಾಗಿದೆ. ಅದು ದ್ವಿತಲದಲ್ಲಿ ಇದ್ದು, ಶಾಲ ಕೂಟ ಹಾಗು ಕುಂಭಪಂಜರಗಳನ್ನು ಹೊಂದಿದೆ. ಹೀಗೆ ಚಿತ್ರದುರ್ಗ ಪಾಳೆಯಗಾರರ ವಾಸ್ತುಶಿಲ್ಪಗಳಲ್ಲಿ ವಿಜಯನಗರೋತ್ತರ ದ್ರಾವಿಡ ಮಾದರಿಯ ಶಿಖರಗಳು ಸಂಪೂರ್ಣ ಶಿಲೆಯಿಂದ ಕಟ್ಟಲ್ಪಟ್ಟಿರುವುದು ಒಂದು ಹೊಸ ಬೆಳವಣಿಗೆಯಾಗಿ ಗೋಚರಿಸುತ್ತದೆ. ಇದು ವಾಸ್ತುಶಿಲ್ಪ ಕ್ಷೇತ್ರಕ್ಕೆ ಪಾಳೆಯಗಾರಗ ಕೊಡುಗೆಯೆನ್ನಬಹುದು. ಉಳಿದಂತೆ ಹೆಚ್ಚಿನ ಶಿಖರಗಳು ಕಾಲಕಾಲಕ್ಕೆ ದುರಸ್ತಿಗೊಂಡಿರು ವುದರಿಂದ ಇವು ತಮ್ಮ ಮೂಲ ಸ್ವರೂಪವನ್ನು ಕಳೆದುಕೊಂಡಿವೆ.

ದೇವಾಲಯಗಳ ಗರ್ಭಗೃಹಗಳು ಒಂದೇ ಅಂಕಣದಲ್ಲಿದ್ದು ಸರಳವಾಗಿರುತ್ತವೆ. ಆದರೆ ಚಿತ್ರದುರ್ಗ ಬೆಟ್ಟದ ಮೇಲಿನ ಗೋಪಾಲಸ್ವಾಮಿ ಮತ್ತು ಕಾವಾಡಿಗರಹಟ್ಟಿ ಶಿವಾಲಯಗಳ ಗರ್ಭಗೃಹಗಳ ಸುತ್ತಲೂ ಪ್ರದಕ್ಷಣಾ ಪಥವಿದ್ದು ಸಾಂಧಾರ ಮಾದರಿಯ

ದೇವಾಲಯಗಳು ಎನಿಸುತ್ತವೆ. ಗರ್ಭಗೃಹದ ಹೊರಭಿತ್ತಿಯ ತಳಭಾಗದಲ್ಲಿ ಜಲಪ್ರಣಾಳಗಳು ಅಪರೂಪವಾಗಿ ಇವೆ. ಚಳ್ಳಕೆರೆಯ ಚಳ್ಳಕೆರೆಮ್ಮ ದೇವಾಲಯದಲ್ಲಿ ಸಿಂಹವಕ್ತ್ರಪ್ರಣಾಳ, ಚಿತ್ರದುರ್ಗದ ಉತ್ಸವಾಂಬೆ ದೇವಾಲಯದಲ್ಲಿ ಗಜವಕ್ತ್ರಪ್ರಣಾಳಗಳು ಇವೆ. ಇಂತಹ ವಾಸ್ತುಭಾಗಗಳು ಪರಿಪೂರ್ಣ ಶಿಷ್ಟ ಪ್ರಕಾರದ ದೇವಾಲಯಗಳಲ್ಲಿ ಮಾತ್ರ ಕಂಡುಬರುತ್ತವೆ. ಆದರೆ ಪ್ರಾದೇಶಿಕ ಶೈಲಿಯಲ್ಲೇ ಇರುವ ಚಿತ್ರದುರ್ಗ ಪಾಳೆಯಗಾರರ ದೇವಾಲಯಗಳಲ್ಲೂ ಕೂಡ ಇಂತಹ ಸೂಕ್ಷ್ಮ ವಾಸ್ತುಭಾಗಗಳು ಕಂಡುಬರುವುದು ವಿಶೇಷವೆನಿಸುತ್ತದೆ.

ಗರ್ಭಗೃಹದಂತೆ ಅಂತರಾಳಗಳು ಒಂದು ವಾಸ್ತು ವಿಶೇಷತೆಯನ್ನು ಹೊಂದಿರುವುದಿಲ್ಲ. ಆದರೆ ಚಿತ್ರದುರ್ಗದ ಪಾಳೆಯಗಾರರ ಕಾಲದ ದೇವಾಲಯಗಳಲ್ಲಿ ಎರಡೂ ಬದಿಯಲ್ಲಿ ಉಪಗರ್ಭಗೃಹಗಳನ್ನು ಮಾಡಿರುವುದು ಕಂಡುಬರುತ್ತದೆ. ಹಾಗಾಗಿ ಅಂತರಾಳ ಸಭಾಮಂಟಪದಷ್ಟೇ ಅಗಲವಾಗಿರುತ್ತದೆ. ಉಪಗರ್ಭಗೃಹದ ಬಾಗಿಲುಗಳು ಸಭಾಮಂಟಪದಲ್ಲಿ ಇದ್ದರೂ ಎರಡು ಉಪಗರ್ಭಗೃಹ ಮತ್ತು ಅಂತರಾಳದ ನಡುವೆ ಯಾವುದೇ ಗೋಡೆ ಇರುವುದಿಲ್ಲ. ಹೀಗಾಗಿ ಅದು ಉದ್ದಕ್ಕೂ ಅಂತರಾಳವೆನಿಸುತ್ತದೆ. ಈ ಅಂತರಾಳದ ಮೇಲೆ ಗರ್ಭಗೃಹದ ಶಿಖರಕ್ಕೆ ಹೊಂದಿಕೊಂಡಂತೆ ಸುಖನಾಸಗಳನ್ನು ನಿರ್ಮಿಸುವುದು ಪ್ರಾಚೀನ ಸಂಪ್ರದಾಯ. ಆದರೆ ಅದು ಅವಶ್ಯಕವಾದ ಭಾಗವೇನಲ್ಲ. ದೇವಾಲಯದ ಸೌಂದರ್ಯಕ್ಕಾಗಿ ಚಾಲುಕ್ಯರು ಮತ್ತು ಹೊಯ್ಸಳರು ತಮ್ಮ ಕೆಲವು ದೇವಾಲಯಗಳಿಗೆ ನಿರ್ಮಿಸಿರುವದು ಉಂಟು. ವಿಜಯನಗರ ಕಾಲದಲ್ಲೂ ಇವು ಅಪರೂಪವಾಗಿ ಕಂಡುಬರುತ್ತವೆ. ಆದರೆ ಪಾಳೆಯಗಾರರ ಕಾಲದ ಸುಮಾರು ನಾಲ್ಕೈದು ದೆವಾಲಯಗಳು ಸುಖನಾಸವನ್ನು ಹೊಂದಿರುವುದು ಗಮನಾರ್ಹ ಅಂಶವಾಗಿದೆ.

ಪಾಳೆಯಗಾರರ ಕೆಲವು ದೇವಾಲಯಗಳಲ್ಲಿ ಮಾತ್ರ ಅರ್ಧಮಂಟಪಗಳಿವೆ. ಇವು ಮೂರು ಅಂಕಣಗಳಲ್ಲಿ ಇರುವುದರಿಂದ ಸಭಾಮಂಟಪದಷ್ಟೇ ಅಗಲವಾಗಿರುತ್ತವೆ. ಮಧ್ಯದ ಪ್ರವೇಶ ಅಂಕಣವನ್ನು ಹೊರತುಪಡಿಸಿ ಬದಿಯ ಎರಡು ಅಂಕಣಗಳಲ್ಲಿ ಪರಿವಾರ ದೇವತೆಗಳ ಹಾಗೂ ಉತ್ಸವಮೂರ್ತಿಗಳನ್ನು ಇರಿಸಲಾಗಿರುತ್ತದೆ. ಇಲ್ಲವೆ ಎರಡೂ ಬದಿಗೆ ಕಟ್ಟೆಗಳಿರುತ್ತವೆ. ಹಾಗಾಗಿ ಇವು ಅವಶ್ಯಕತೆಗನುಗುಣವಾಗಿ ರೂಪುಗೊಂಡ ಹೆಚ್ಚುವರಿ ಭಾಗಗ ಳಾಗಿವೆ. ಇವೆಲ್ಲಾ ಪಾಳೆಯಗಾರರ ಸ್ವಂತಿಕೆಗಳು.

ನವರಂಗ ಅಥವಾ ಸಭಾಮಂಟಪವು ಆರರಿಂದ ಹದಿನೈದು ಅಂಕಣಗಳಷ್ಟು ವಿಶಾಲವಾಗಿರುತದೆ. ಇವು ಮುಂಭಾಗದಲ್ಲಿ ತೆರೆದಿರುತ್ತವೆ. ಆದರೆ ಸಭಾಮಂಟಪದ ಮುಂದೆ ರಂಗಮಂಟಪಗಳಿದ್ದರೆ, ಸಭಾಮಂಟಪ ಸುತ್ತಲೂ ಮುಚ್ಚಿರುತ್ತದೆ. ಸಾಮಾನ್ಯವಾಗಿ

ಒಂಭತ್ತು ಅಂಕಣಗಳ ನವರಂಗಗಳ ಬದಲಿಗೆ ಹದಿನೈದು ಅಂಕಣಗಳ ಸಭಾಮಂಟಪಗಳನ್ನು ರೂಪಿಸಿಕೊಂಡಿರುವುದು ಪಾಳೆಯಗಾರರ ಕಾಲದ ಹೊಸಬೆಳವಣಿಗೆ ಎಂದೇ ಹೇಳಬಹುದು.

ಸಭಾಮಂಟಪದ ಮುಂಭಾಗದಲ್ಲಿ ಮುಖಮಂಟಪಗಳು ಇರುವುದು ವಾಡಿಕೆಯಾದರೂ, ವಿಜಯನಗರದ ಅರಸರು ಮಹಾರಂಗಮಂಟಪವನ್ನು ನಿರ್ಮಿಸಿ ಅದನ್ನು ವಾಸ್ತುಶಿಲ್ಪ ಕಲಾಕೃತಿಗಳ ಕೇಂದ್ರ ಭಾಗವನ್ನಾಗಿಸಿದರು. ಅದನ್ನು ಅನುಸರಿಸಿದ ಪಾಳೆಯಗಾರರು ಕೂಡ ತಮ್ಮ ಕೆಲವು ದೇವಾಲಯಗಳಲ್ಲಿ ಮಹಾಮಂಟಪಗಳನ್ನು ನಿರ್ಮಿಸಿದ್ದಾರೆ. ಅವು ವಿಜಯ ನಗರದ ಮಹಾಮಂಟಪಗಳಂತೆ ವಿಶಾಲವಾಗಿರದೆ, ಮಧ್ಯಮ ಪ್ರಮಾಣದಲ್ಲಿ ಇರುತ್ತವೆ. ಈ ಮಹಾಮಂಟಪಗಳು ಒಂಭತ್ತರಿಂದ ಹದಿನೈದು, ಹದಿನಾರು ಮತ್ತು ಇಪ್ಪತ್ತೈದು ಅಂಕಣಗಳಲ್ಲಿ ಇರುತ್ತವೆ. ಈ ಮಂಟಪಗಳ ಸುತ್ತಲೂ ಕಕ್ಷಾಸನವಿದ್ದು, ಅದರ ಮೇಲೆ ಕಂಬಗಳು ಇರುತ್ತವೆ. ಕಂಬಗಳ ನಡುವೆ ಭಿತ್ತಿ ಇರುವುದಿಲ್ಲ. ಹಾಗಾಗಿ ಇದು ಸಂಪೂರ್ಣ ತೆರೆದ ರೀತಿಯಲ್ಲಿರುತ್ತದೆ. ಮಧ್ಯದ ಕಂಬಗಳು ವಿಜಯನಗರದ ವಿಶಿಷ್ಟ ಶೈಲಿಯಾದ ದ್ವಿಕಾಂಡ ಶೈಲಿಯ ಬೃಹತ್ ಕಂಬಗಳಾಗಿರುತ್ತವೆ. ಸಾಮಾನ್ಯವಾಗಿ ಮಧ್ಯದ ಅಂಕಣದಲ್ಲಿ ಭುವನೇಶ್ವರಿಯ ಅಲಂಕರಣೆ ಇದ್ದರೂ, ಹಿರಿಯೂರಿನ ತೇರುಮಲ್ಲೇಶ್ವರ ದೇವಾಲಯದಲ್ಲಿ ವರ್ಣಚಿತ್ರಗಳಿವೆ. ಹೀಗೆ ಪಾಳೆಯಗಾರರು ಪ್ರಾದೇಶಿಕ ಶಕ್ತಿಯಾದರೂ ಚಿಕ್ಕ ಪ್ರಮಾಣದಲ್ಲಿ ಮಹಾಮಂಟಪವನ್ನು ಉಳಿಸಿಕೊಂಡಿರುವುದು ಗಮನಾರ್ಹ ಸಂಗತಿಯಾಗಿದೆ.

ಮುಖಮಂಟಪಗಳು ಮೂರು ಅಂಕಣಗಳಲ್ಲಿ ಇರುವುದರಿಂದ ಸಭಾಮಂಟಪದಷ್ಟೇ ಅಗಲವಾಗಿರುತ್ತವೆ. ಮಹಾರಂಗಮಂಟಪಗಳಿದ್ದಲ್ಲಿ ಮುಖಮಂಟಪಗಳು ಒಂದೇ ಅಂಕಣದಲ್ಲಿ ಇರುತ್ತವೆ. ಈ ಮುಖಮಂಟಪಗಳು ಮುಂಭಾಗದಲ್ಲಿ ಎರಡು ಕಂಬಗಳನ್ನು ಹೊಂದಿದ್ದು ಸಂಪೂರ್ಣವಾಗಿ ತೆರೆದಿರುತ್ತವೆ. ಕೆಲವು ಮುಖಮಂಟಪಗಳಲ್ಲಿ ಎರಡೂ ಬದಿಗೆ ಕಕ್ಷಾಸನಗಳಿರುತ್ತವೆ. ಮೂರು ಅಂಕಣಗಳಲ್ಲಿರುವ ಮುಖಮಂಟಪ ಸಾಮಾನ್ಯವಾಗಿ ಸಭಾಮಂಟಪ ಸಹಿತ ಉಳಿದೆಲ್ಲಾ ವಾಸ್ತುಭಾಗಗಳ ನೆಲಮಟ್ಟಕ್ಕಿಂತ ಕೆಳಹಂತದಲ್ಲಿರುತ್ತವೆ. ಹಾಗಾಗಿ ಸಭಾಮಂಟಪವನ್ನು ಪ್ರವೇಶಿಸಲು ಇಲ್ಲಿ ಸೋಪಾನಗಳು ಇರುತ್ತವೆ. ನೀರ್ಥಡಿಯ ರಂಗನಾಥ ದೇವಾಲಯದ ಮೂರು ಬದಿಯ ಮುಖಮಂಟಪಗಳಲ್ಲಿ ಬಾಗಿಲು ತೋರಣಗಳಿರುವುದು ಅಪರೂಪದ ಸಂಗತಿಯಾಗಿದೆ.

ಸಾಮಾನ್ಯವಾಗಿ ಚಾಲುಕ್ಯರ ಕಾಲದ ದೇವಾಲಯಗಳ ಅಂತರಾಳಗಳ ಬಾಗಿಲ ಮುಂಭಾಗದಲ್ಲಿ ದ್ವಾರತೋರಣಗಳು ಕಂಡುಬರುತ್ತವೆ. ಅಂತಹ ತೋರಣವನ್ನು

ಪಾಳೆಯಗಾರರು ತಮ್ಮ ದೇವಾಲಯಗಳ ಮುಖಮಂಟಪಗಳಲ್ಲಿ ಅಳವಡಿಸಿಕೊಂಡಿರುವುದು ವಿಶೇಷ. ಇಲ್ಲಿ ಕಲಾತ್ಮಕವಾದ ಎರಡು ಕಂಬಗಳು ಮತ್ತು ಅದರ ಮೇಲೆ ತೊಲೆಯಿರುತ್ತದೆ. ತೊಲೆ ಮತ್ತು ಕಂಬಗಳು ಕೂಡುವ ಎರಡು ಮೂಲೆಗಳಲ್ಲಿ ಸಿಂಹಶಿಲ್ಪಗಳಿದ್ದು, ಅದರ ಕೆಳಗೆ ವಕ್ರವಾಗಿ ಇರುವ ಶಿಲಾಬಾಲಕಿಯರ ಪುಟ್ಟಶಿಲ್ಪಗಳಿವೆ. ಈ ತೋರಣ ಮತ್ತು ಅದರ ಶಿಲ್ಪಗಳು ಪ್ರಸಿದ್ಧ ಸಾಂಚಿ ಸ್ತೂಪದ ದ್ವಾರ ತೋರಣವನ್ನು ನೆನಪಿಸುತ್ತದೆ. ಹೀಗೆ ಚಿತ್ರದುರ್ಗ ಪರಿಸರದಲ್ಲಿ ಅಪರೂಪದ ದ್ವಾರ ತೋರಣಗಳನ್ನು ಹೊಂದಿ ನೀರ್ಥಡಿಯ ದೇವಾಲಯವು ಪ್ರತ್ಯೇಕ ಸ್ಥಾನವನ್ನು ಪಡೆಯುತ್ತದೆ. ಅದರ ಹಿರಿಮೆ ಪಾಳೆಯಗಾರರಿಗೆ ಸಲ್ಲುತ್ತದೆ.

ಪಾಳೆಯಗಾರರ ಕಾಲದ ದೇವಾಲಯಗಳ ದ್ವಾರಬಂಧಗಳು ಸಾಮಾನ್ಯವಾಗಿ ಸರಳವಾಗಿವೆ. ಇವುಗಳ ಪಟ್ಟಿಕೆಗಳಲ್ಲಿ ಕೆಲವು ಕಡೆ ಮಾತ್ರ ಲತಾಶಾಖೆ, ರತ್ನಶಾಖೆಗಳಿವೆ. ಬಾಗಿಲ ಇಕ್ಕೆಲಗಳಲ್ಲಿರುವ ದ್ವಾರಪಾಲಕರ ಭಂಗಿಗಳು ಮಾತ್ರ ವಿಭಿನ್ನವಾಗಿರುವುದು ವಿಶೇಷ. ಅಂತಹ ವಿಭಿನ್ನತೆಗಳು ಬಲಗಾಲನ್ನು ನೇರವಾಗಿರಿಸಿರುವುದು, ಎಡಗಾಲನ್ನು ವಕ್ರವಾಗಿರಿಸಿರುವುದು, ಒಂದು ಕಾಲನ್ನು ಗದಾದ ಮೇಲಿರಿಸಿರುವುದು ವಿಶೇಷವಾಗಿದೆ. ಚಳ್ಳಕೆರೆಯ ಚಳ್ಳಕೆರೆಮ್ಮ, ಹಿರಿಯೂರಿನ ತೇರುಮಲ್ಲೇಶ್ವರದ ದೇವಾಲಯಗಳ ಗರ್ಭಗುಡಿಯ ಬಾಗಿಲ ಇಕ್ಕೆಲಗಳಲ್ಲಿ ಸ್ತ್ರೀದ್ವಾರಪಾಲಕಿಯರಿರುವುದು ಹೊಸಬೆಳವಣಿಗೆಯಾಗಿದೆ. ಪ್ರಾಚೀನ ಪರಂಪರೆಯಲ್ಲಿ ದೇವಿಯ ಗರ್ಭಗೃಹಗಳಿಗೆ ಶೈವ ದ್ವಾರಪಾಲಕರೇ ಇರುವುದು ಪದ್ಧತಿಯಾಗಿದ್ದರೆ, ಪಾಳೆಯಗಾರರ ಕಾಲದಲ್ಲಿ ಅದರ ಬದಲಿಗೆ ಸ್ತ್ರೀದ್ವಾರಪಾಲಕಿಯರನ್ನು ರೂಢಿಸಿರುವುದು ವಾಸ್ತುಶಿಲ್ಪ ದೃಷ್ಟಿಯಿಂದ ಮಹತ್ವದ ಕೊಡುಗೆಯೆಂದು ಹೇಳಬಹುದು.

ಸಾಮಾನ್ಯವಾಗಿ ದ್ವಾರಪಾಲಕರು ಚತುರ್ಭುಜಗಳನ್ನು ಹೊಂದಿರುವುದು ರೂಢಿ. ಆದರೆ ನೀರ್ಥಡಿಯ ರಂಗನಾಥ ದೇವಾಲಯದ ಸಭಾಮಂಟಪದ ಉತ್ತರ ಬದಿಯ ಬಾಗಿಲಲ್ಲಿ ದ್ವಿಬಾಹುಗಳುಳ್ಳ ದ್ವಾರಪಾಲಕರಿರುವುದು ಕುತೂಹಲದಾಯಕವಾಗಿದೆ. ಈ ಬಾಗಿಲ ಪಟ್ಟಿಕೆಗಳ ಮುಂಭಾಗದಲ್ಲಿ ಆಂಜನೇಯ ಮತ್ತು ಗರುಡನ ಶಿಲ್ಪಗಳಿದ್ದು ಗಮನಸೆಳೆಯುತ್ತವೆ. ಕೆಲವು ಸಲ ಲತೆಯನ್ನು ಆಶ್ರಯಿಸಿ ನಿಂತ ಸ್ತ್ರೀಯ ಶಿಲ್ಪ ಸಾಮಾನ್ಯ. ಇಂತಹವು ಹೆಚ್ಚಾಗಿ ಮಹಾದ್ವಾರದ ದ್ವಾರಬಂಧಗಳಲ್ಲಿವೆ. ಇವೆಲ್ಲಾ ಪಾಳೆಯಗಾರರ ಕಾಲದ ಹೊಸ ಅಂಶಗಳೆಂದೇ ಗುರುತಿಸಬಹುದು. ಲಲಾಟ ಬಿಂಬದಲ್ಲಿ ಗಜಲಕ್ಷ್ಮಿ ಬಿಂಬವಿರುವುದು ರೂಢಿಯಾದರೂ, ಅದನ್ನು ಉಳಿಸಿಕೊಂಡೇ ಪಾಳೆಯಗಾರರು ವೈವಿಧ್ಯಮಯವಾದ ಇತರೇ ಶಿಲ್ಪಗಳನ್ನು ಅಳವಡಿಸಿಕೊಂಡಿದ್ದಾರೆ. ಇವುಗಳಲ್ಲಿ ಅಂಬೆಗಾಲುಕೃಷ್ಣ

ವಿಷ್ಣು, ಬಾಲಕೃಷ್ಣ, ಶಿವಪಾರ್ವತಿ, ಜೋಡಿಹಂಸಗಳು, ಕಾಳಿಂಗಮರ್ದನಕೃಷ್ಣ, ನಂದಿ, ಭಕ್ತಮಾರ್ಕಂಡೇಯ, ಬೆಣ್ಣೆಕೃಷ್ಣ ಹೀಗೆ ಸಂಪ್ರದಾಯತೆಯನ್ನು ಮೀರಿ ಹೊಸಬಿಂಬಗಳನ್ನು ಅಳವಡಿಸಿರುವುದು ಪಾಳೆಯಗಾರರ ಸ್ವತಂತ್ರ ಆಲೋಚನೆಗಳಿಗೆ ಸಾಕ್ಷಿಯಾಗಿವೆ.

ಭುವನೇಶ್ವರಿ ಅಥವಾ ಛತ್ತು ಹೆಚ್ಚಾಗಿ ಸರಳವಾಗಿದೆ. ಆದರೆ ತಾಳ್ಯದ ಆಂಜನೇಯ ದೇವಾಲಯದಲ್ಲಿ ಚಾಲುಕ್ಯ ದೇವಾಲಯಗಳಲ್ಲಿರುವಂತೆ ಗುಮ್ಮಟಾಕಾರದ ಭುವನೇಶ್ವರಿ ಇರುವುದು ವೈಶಿಷ್ಟ್ಯ. ಇದರ ಮಧ್ಯದಲ್ಲಿ ಇಳಿಬಿದ್ದ ಮೊಗ್ಗು ಸುತ್ತಲೂ ಪದ್ಮದಳಗಳಿದ್ದು ಆಕರ್ಷಕವಾಗಿದೆ. ಪ್ರಾಚೀನ ಪರಂಪರೆಯಂತೆ ಭುವನೇಶ್ವರಿಯಲ್ಲಿ ಕೆಲವು ಶಿಲ್ಪಗಳನ್ನು ಕಾಣಬಹುದು. ಗಜಸಂಹಾರಶಿವ, ಅಷ್ಟದಿಕ್ಪಾಲಕರು ಮತ್ತು ಲತಾಬಳ್ಳಿಗಳ ಅಲಂಕರಣೆಗಳು ಕೆಲವೊಮ್ಮೆ ಕಂಡುಬರುತ್ತವೆ.

ಪಾಳೆಯಗಾರರ ಕಾಲದ ಕಂಬಗಳು ಎರಡು ಪ್ರಕಾರಗಳಲ್ಲಿವೆ. ಅವು ಏಕಕಾಂಡ ಮತ್ತು ದ್ವಿಕಾಂಡ. ಏಕಕಾಂಡಗಳಲ್ಲಿ ಹತ್ತು ಪ್ರಕಾರಗಳನ್ನು ಗುರುತಿಸಲಾಗಿದೆ. ಕೆಳಗೆ, ಮಧ್ಯ ಮತ್ತು ಮೇಲೆ ಮೂರು ಅಸಮ ಚೌಕಭಾಗಗಳು, ಆ ಚೌಕಭಾಗಗಳ ನಡುವೆ ಎಂಟು–ಹದಿನಾರು ಮುಖಗಳ ಲಂಬ–ಅಡ್ಡಪಟ್ಟಿಕೆಗಳು ಪ್ರಧಾನವಾಗಿರುವ ಈ ಎಲ್ಲಾ ಪ್ರಕಾರದ ಕಂಬಗಳು, ಅವುಗಳ ಚೌಕವಿನ್ಯಾಸ, ಅಡ್ಡಪಟ್ಟಿಕೆಗಳಲ್ಲಿ ಅಲಂಕರಣೆಗಳು, ಚೌಕಭಾಗಗಳಲ್ಲಿ ಶಿಲ್ಪಗಳ ಸಂಯೋಜನೆ, ಮೇಲ್ಭಾಗದಲ್ಲಿ ಚಾಲುಕ್ಯ ಶೈಲಿಯಂತೆ ಕುಂಭ, ಕಳಸ, ಫಲಕಗಳನ್ನು ಹೊಂದಿದ್ದು ವೈವಿಧ್ಯಮಯವಾಗಿವೆ. ದ್ವಿಕಾಂಡ ಕಂಬಗಳು ಉಪಕಾಂಡದಲ್ಲಿ ಆಶ್ವಸವಾರ, ಸಿಂಹಸವಾರ, ಉಪಸ್ತಂಭಗಳ ಶಿಲ್ಪಗಳನ್ನು ಹೊಂದಿರುತ್ತವೆ. ಇವು ವಿಜಯನಗರದ ವಿಶಿಷ್ಟ ಶೈಲಿಯಲ್ಲಿದ್ದು, ಸಾಮಾನ್ಯವಾಗಿ ಮಹಾಮಂಟಪ ಮತ್ತು ಮುಖಮಂಟಪಗಳಲ್ಲಿ ಕಂಡುಬರುತ್ತವೆ. ಸಂಪ್ರದಾಯಬದ್ಧವಾದ ಇಂತಹ ಬೃಹತ್ ಕಂಬಗಳ ವಿನ್ಯಾಸದಲ್ಲಿ ಪಾಳೆಯಗಾರರು ಹೆಚ್ಚಿನ ಬದಲಾವಣೆಯನ್ನು ಮಾಡಿಲ್ಲ. ಆದರೆ ಏಕಕಾಂಡ ಕಂಬಗಳಲ್ಲಿ ಹೊಸಪ್ರಯೋಗಗಳನ್ನು ಮಾಡಿ ಸಾಂಪ್ರದಾಯಿಕ ಕಂಬಗಳ ಜೊತೆಗೆ ತಮ್ಮ ಸ್ವಂತಿಕೆಯನ್ನು ಬಿಂಬಿಸಿದ್ದಾರೆ.

ವಿಶೇಷವಾಗಿ ಮಾರಿಕಣಿವೆಯ ಮಾರಿಕಾಂಭ ದೇವಾಲಯದ ಕಂಬಗಳು ವಾಸ್ತುಶಿಲ್ಪದ ಬಗೆಗಿನ ತೀರಾ ಪ್ರಾದೇಶಿಕ ಚಿಂತನೆಗಳಿಗೆ ನಿದರ್ಶನಗಳಾಗಿವೆ. ಈ ಎಲ್ಲಾ ಕಂಬಗಳ ಮೇಲಿನ ಬೋದುಗೆಗಳು ಸಾಮಾನ್ಯವಾಗಿ ಎರಡು ರೀತಿಯಲ್ಲಿವೆ. ಮೊದಲನೆಯದು ಪಾರಂಪರಿಕವಾದ ಸರಳ ಬೋದುಗೆಯಾದರೆ, ಎರಡನೆಯದು ಆಕರ್ಷಕವಾದ ಪುಷ್ಪಬೋದುಗೆಗಳು. ಇದು ವಿಜಯನಗರದ ಬಳುವಳಿ. ಪಾಳೆಯಗಾರರು ತಮ್ಮ

ದ್ವಿಕಾಂಡ ಮತ್ತು ವಿಶಿಷ್ಟ ಕಂಬಗಳ ಮೇಲೆ ಈ ಪುಷ್ಪಬೋದುಗೆಗಳನ್ನು ಬಳಸಿದ್ದಾರೆ. ಇವುಗಳ ವಿನ್ಯಾಸ ಮತ್ತು ಆಕಾರದಲ್ಲಿ ಹಲವು ಭಿನ್ನತೆಗಳನ್ನು ಗುರುತಿಸಬಹುದು.

ಪಾಳೆಯಗಾರರ ಕಾಲದ ಕೆಲವು ದೇವಾಲಯಗಳಲ್ಲಿ ಸೋಪಾನಗಳಿವೆ. ಅವುಗಳಲ್ಲಿ ಹೆಚ್ಚಿನವು ಸರಳವಾಗಿದ್ದರೆ, ಕೆಲವು ಸುರುಳಿಯಾಳಿಗಳ, ಗಜಗಳ, ಸಿಂಹಗಳ ಕೈಪಿಡಿಗಳನ್ನು ಹೊಂದಿವೆ. ಇವೆಲ್ಲಾ ವಿಜಯನಗರದ ರೀತಿಯವು. ಆದರೆ ಚಿತ್ರದುರ್ಗದ ಚನ್ನಕೇಶವ ದೇವಾಲಯದ ಸೋಪಾನದ ಇಕ್ಕೆಲಗಳಲ್ಲಿ ಪೂರ್ಣರೂಪದ ಕುದುರೆಗಳು ಮತ್ತು ಆನೆಗಳಿರು ವುದು ಗಮನಾರ್ಹ. ಇವು ಕಪ್ಪುಕಲ್ಲಿನಲ್ಲಿ ಆಕರ್ಷಕವಾಗಿ ಕೆತ್ತಲ್ಪಟ್ಟಿವೆ. ಕರ್ನಾಟಕದ ವಾಸ್ತುಶಿಲ್ಪ ಕ್ಷೇತ್ರದಲ್ಲಿ ಪ್ರಥಮಬಾರಿಗೆ ಕಾಣಿಸಿಕೊಳ್ಳುವ ಇಂತಹ ಕೈಪಿಡಿಗಳು ವಾಸ್ತುಶಿಲ್ಪ ಕ್ಷೇತ್ರಕ್ಕೆ ಪಾಳೆಯಗಾರರ ವಿಶಿಷ್ಟ ಕೊಡುಗೆಯೆಂದೇ ಹೇಳಬಹುದು.

ಪಾಳೆಯಗಾರರ ಕಾಲದ ಮಧ್ಯಮ ಮತ್ತು ದೊಡ್ಡ ದೇವಾಲಯಗಳು ದೀಪಸ್ತಂಭ, ಧ್ವಜಸ್ತಂಭ, ಗರುಡಸ್ತಂಭ, ಗರುಡಮಂಟಪ, ಬಲಿಪೀಠ, ಪರಿವಾರ ದೇವತೆಗಳ ಗುಡಿಗಳನ್ನು ಹೊಂದಿವೆ. ಇವುಗಳಲ್ಲಿ ದೀಪಸ್ತಂಭ ಮತ್ತು ಗರುಡಸ್ತಂಭಗಳು ಅಧಿಕವಾಗಿವೆ. ಪ್ರಾಕಾರದ ಹೊರಗೆ ಇಲ್ಲವೇ ಒಳಗೆ ಪುಟ್ಟ ಜಗತಿಗಳ ಮೇಲೆ ಎತ್ತರವಾದ ದೀಪಸ್ತಂಭ, ಇಲ್ಲವೇ ಗರುಡಸ್ತಂಭ (ವೈಷ್ಣವ ದೇವಾಲಯಗಳಲ್ಲಿ ಮಾತ್ರ) ಗಳು ಕಂಡುಬರುತ್ತವೆ. ದೀಪಸ್ತಂಭಗಳ ಮೇಲೆ ಲೋಹದ ಪ್ರಣತಿಗಳಿರುತ್ತವೆ. ಗರುಡಸ್ತಂಭಗಳ ತುದಿಯಲ್ಲಿ ಗರುಡನ ಶಿಲ್ಪಗಳಿದ್ದು, ಬಹಳಷ್ಟು ಕಡೆ ನಾಶವಾಗಿದೆ. ಈ ದೀಪಸ್ತಂಭಗಳು ಮತ್ತು ಗರುಡಸ್ತಂಭಗಳು ಏಕಶಿಲೆಯ ಬೃಹತ್ ನಿರ್ಮಾಣಗಳು. ಇವುಗಳ ರಚನೆಗೆ ಪಾಳೆಯಗಾರರು ಎಲ್ಲಿಲ್ಲದ ಉತ್ಸಾಹವನ್ನು ತೋರಿಸಿದ್ದಾರೆ. ಇವುಗಳು ನಿರ್ಮಾಣಕ್ಕೆ ತಾಂತ್ರಿಕ ಕೌಶಲ್ಯವನ್ನು ಬಯಸುವಂತಹವುಗಳು. ದೊರೆಗಳ ಉತ್ಸಾಹ ಮತ್ತು ಶಿಲ್ಪಿಗಳ ಕೌಶಲ್ಯ ಸೇರಿಕೊಂಡು ಇಂತಹ ಬೃಹತ್ ವಾಸ್ತು ರಚನೆಯಾಗಿರುವುದನ್ನು ಗುರುತಿಸಬಹುದು.

ಅಂತೆಯೇ ಇಲ್ಲಿಯ ದೇವಾಲಯಗಳ ಮತ್ತೊಂದು ವಿಶಿಷ್ಟ ವಾಸ್ತುಭಾಗವೆಂದರೆ ಉಯ್ಯಾಲೆ ಕಂಬಗಳು. ಇವುಗಳು ಅಚ್ಚರಿಯ ನಿರ್ಮಿತಿಗಳಾಗಿವೆ. ಗಾತ್ರ ಮತ್ತು ಎತ್ತರದಲ್ಲಿ ಬೃಹತ್ತಾಗಿರುವ ಎರಡು ಕಂಬಗಳನ್ನು ನಿಲ್ಲಿಸಿ ಇಂತಹ ಉಯ್ಯಾಲೆ ಕಂಬಗಳನ್ನು ಮಾಡಲಾಗಿದೆ. ಕೆಲವು ದೇವಾಲಯಗಳು ಚಿಕ್ಕ ಪ್ರಮಾಣದಲ್ಲಿದ್ದರೂ, ಅವುಗಳ ಉಯ್ಯಾಲೆ ಕಂಬಗಳು ಮಾತ್ರ ಬೃಹತ್ ಪ್ರಮಾಣದಲ್ಲಿರುವುದು ಪಾಳೆಯಗಾರರು ಅವುಗಳಿಗೆ ನೀಡಿದ್ದ ಮಹತ್ವ ವ್ಯಕ್ತವಾಗುತ್ತದೆ. ಪ್ರಾಯಶಃ ಕರ್ನಾಟಕದ ವಾಸ್ತುಶಿಲ್ಪ ಪರಂಪರೆಯಲ್ಲಿ ಇಂತಹ ಉಯ್ಯಾಲೆ ಕಂಬಗಳು ಪಾಳೆಯಗಾರರ ಕಾಲದಲ್ಲೇ ಹೆಚ್ಚು ವಿಸ್ತೃತ ಸ್ವರೂಪವನ್ನು

ಪಡೆದಿರುವುದನ್ನು ಗುರುತಿಸಬಹುದು. ಹಾಗಾಗಿ ಇವೂ ಕೂಡ ವಾಸ್ತುಶಿಲ್ಪ ಕ್ಷೇತ್ರಕ್ಕೆ ಪಾಳೆಯಗಾರರ ವಿಶಿಷ್ಟ ಕೊಡುಗೆಗಳೆಂದೇ ಪರಿಗಣಿಸಬಹುದಾಗಿದೆ.

ಕೆಲವು ದೊಡ್ಡ ದೇವಾಲಯಗಳ ಸುತ್ತಲೂ ಪ್ರಾಕಾರಗಳಿವೆ. ಪ್ರಾಕಾರದಲ್ಲಿ ಅಲ್ಲಲ್ಲಿ ಪರಿವಾರದೇವತೆಗಳ ಗುಡಿಗಳು ಮತ್ತು ಒಳಗಡೆ ಕಂಬಗಳ ಸಾಲುಮಂಟಪಗಳು ಇವೆ. ಉಳಿದಂತೆ ಹೆಚ್ಚು ವಿಶಿಷ್ಟತೆಯಿಂದ ಕೂಡಿರುವುದಿಲ್ಲ. ಆದರೆ ದ್ವಾರಮಂಟಪಗಳು ಭವ್ಯವಾಗಿವೆ. ಇವು ವಿಜಯನಗರದ ದ್ವಾರಮಂಟಪಗಳಂತಿವೆ. ಈ ಮಂಟಪಗಳಲ್ಲಿ ಹಿರಿಯೂರಿನ ತೇರುಮಲ್ಲೇಶ್ವರ ಮತ್ತು ಹೊರಕೆರೆದೇವರಪುರದ ಲಕ್ಷ್ಮೀರಂಗನಾಥ ದೇವಾಲಯಗಳ ದ್ವಾರಮಂಟಪಗಳ ಮೇಲೆ ಮಾತ್ರ ಗೋಪುರಗಳಿವೆ. ಹಿರಿಯೂರಿನ ದ್ವಾರ ಗೋಪುರವನ್ನು ಸಂಪೂರ್ಣವಾಗಿ ತೆಗೆದು ಹಾಕಿ ಹೊಸದಾಗಿ ನಿರ್ಮಿಸಲಾಗಿದೆ. ಹೊರಕೆರದೇವರಪುರದ ದ್ವಾರವು ಸಂಪೂರ್ಣ ಶಿಲೆಯಲ್ಲಿ ನಿರ್ಮಿತವಾಗಿದೆ. ಇದು ನಾಲ್ಕು ತಲಗಳಲ್ಲಿದ್ದು, ಮೊದಲ ತಲವು ಚಚ್ಚೌಕ ಆಕಾರದಲ್ಲಿ, ಎರಡನೆಯ ತಲವು ಅಷ್ಟಕೋನಾಕಾರದಲ್ಲಿರುವುದು ವಿಶಿಷ್ಟ ಮತ್ತು ಅಪರೂಪದ್ದೆನಿಸುತ್ತದೆ. ಮೂರು ಮತ್ತು ನಾಲ್ಕನೆಯ ತಲಗಳು ಪುನಃ ಚೌಕಾಕಾರದಲ್ಲಿದ್ದು ವಿಶಿಷ್ಟವೆನಿಸುತ್ತದೆ.

ಸಾಮಾನ್ಯವಾಗಿ ಗೋಪುರಗಳು ಎತ್ತರದ ನಿರ್ಮಿತಿಗಳಾಗಿರುವುದರಿಂದ ದ್ವಾರಮಂಟಪಗಳ ಮೇಲೆ ಹೆಚ್ಚಿನ ಭಾರವನ್ನು ತಡೆಯುವುದಕ್ಕಾಗಿ ಗೋಪುರವನ್ನು ಇಟ್ಟಿಗೆ ಮತ್ತು ಗಾರೆಗಳಿಂದ ನಿರ್ಮಿಸುವುದು ವಾಡಿಕೆ. ಆದರೆ ಇಲ್ಲಿ ವಿಶಾಲವಾದ, ಪೊಳ್ಳಾದ ಮಂಟಪಗಳನ್ನು ಅಳವಡಿಸಿರುವುದರ ಮೂಲಕ ಇಟ್ಟಿಗೆ ಗಾರೆಗಿಂತಲೂ ಕಡಿಮೆ ಭಾರದ ಗೋಪುರವನ್ನು ನಿರ್ಮಿಸಿರುವುದನ್ನು ಕಂಡುಕೊಳ್ಳಬಹುದು. ವಾಸ್ತು ದೃಷ್ಟಿಯಿಂದ ಆಕರ್ಷಕವಲ್ಲದಿದ್ದರೂ ಗೋಪುರ ವಿನ್ಯಾಸ ಮತ್ತು ಹೊಸ ಪ್ರಯೋಗದಿಂದಾಗಿ ಗಮನಸೆಳೆಯುತ್ತದೆ. ಅದರ ಶ್ರೇಯಸ್ಸು ಕೂಡ ಪಾಳೆಯಗಾರರಿಗೆ ಸಲ್ಲುತ್ತದೆ.

ಪಾಳೆಯಗಾರರು ದೇವಾಲಯಗಳ ಜೊತೆಗೆ ಕೆಲವಾರು ಮಠಗಳನ್ನು ನಿರ್ಮಿಸಿದ್ದಾರೆ. ಭಾರತದಲ್ಲಿ ಮಠಗಳಿಗೆ ಪ್ರತ್ಯೇಕ ವಾಸ್ತು ಪರಂಪರೆಯೇನಿಲ್ಲ. ಅನುಕೂಲಕ್ಕೆ ತಕ್ಕಂತೆ ಅವುಗಳನ್ನು ನಿರ್ಮಿಸಲಾಗುತ್ತದೆ. ಚಿತ್ರದುರ್ಗದ ಬೆಟ್ಟ, ಚಿತ್ರದುರ್ಗದ ನಗರದಲ್ಲಿರುವ ಮುರುಘಾಮಠಗಳು, ಚಂದ್ರವಳ್ಳಿಯ ಗುಹಾಂತರ ಅಂಕಲಿಮಂಠ, ಮುಷ್ಟೂರು ಮಠ, ಶೃಂಗೇರಿ ಮಠ, ರಾಘವೇಂದ್ರಮಠ, ತಾತಾಚಾರ್ಯರ ಮಠಗಳು ಪಾಳೆಯಗಾರರ ಉದಾರ ಧಾರ್ಮಿಕ ಮನೋಭಾವದಿಂದಾಗಿ ನಿರ್ಮಾಣಗೊಂಡಿವೆ. ಇವುಗಳಲ್ಲಿ ಮುರುಘಾಮಠಗಳು, ವಿಶಾಲವಾದ ಕಂಬಗಳ ಮಂಟಪ, ಕಂಬಗಳ ಹಜಾರಗಳು,

ಸಭಾಮಂಟಪಗಳು ಮತ್ತು ವಿಶಿಷ್ಟವಾದ ದ್ವಾರಮಂಟಪಗಳಿಂದ ಗಮನಸೆಳೆಯುತ್ತವೆ. ನಗರದಲ್ಲಿರುವ ಮುರುಘಾ ಮಠದಲ್ಲಿ ಕರ್ತೃ ಗುರುಗಳ ಗದ್ದಿಗೆಗೆ ಅಷ್ಟಕೋನಾಕಾರದ ಮಂಟಪವನ್ನು ರಚಿಸಿರುವುದು ವಿಶಿಷ್ಟ. ಅದರ ಪ್ರದಕ್ಷಣಾಪಥವೂ ಕೂಡ ಅಷ್ಟಕೋನಾಕಾರದಲ್ಲಿಯೇ ಇದೆ. ಚಂದ್ರವಳ್ಳಿಯ ಗುಹಾಂತರ ಅಂಕಲಿಮಠದಲ್ಲಿ ಒಳಭಾಗದಲ್ಲಿರುವ ಗಾರೆಯ ಅಲಂಕರಣೆಗಳು ವಿಶೇಷವಾದ ಗಮನಸೆಳೆಯುತ್ತವೆ. ಉಳಿದಂತೆ ಮಠಗಳು ಸಾಮಾನ್ಯ ರೀತಿಯಲ್ಲಿವೆ.

ಲೌಕಿಕ ಕಟ್ಟಡಗಳಲ್ಲಿ ಕೋಟೆಗಳು, ಅರಮನೆಗಳು, ಬಾವಿ, ಪುಷ್ಕರಣಿ, ಗರಡಿಮನೆ, ಬೊಂಬೆಚಾವಡಿ ಮುಂತಾದವು ಪ್ರಮುಖವಾಗಿವೆ. ಕೋಟೆಗಳನ್ನು ಅವುಗಳ ನಿರ್ಮಾಣದ ಸ್ವರೂಪದಿಂದ ಇಷ್ಟು ಪ್ರಕಾರದಲ್ಲಿ ವಿಂಗಡಿಸಬಹುದು. ಕಣಿವೆ ಪ್ರದೇಶಗಳಲ್ಲಿ ಪ್ರಾಕೃತಿಕ ಬಂಡೆಗಲ್ಲುಗಳನ್ನು ಸರಿಸಿ ನಿರ್ಮಿಸಿದ ತಡೆಗೋಡೆಯ ಕೋಟೆಗಳು, ಪ್ರಾಕೃತಿಕ ಬೆಟ್ಟಗುಡ್ಡಗಳನ್ನು ಕೂಡಿಸಿಕೊಂಡು ರಚಿಸಿರುವ ಕೋಟೆಗಳು, ದಿಂಡುಗಲ್ಲಿನಿಂದ ನಿರ್ಮಿಸಿದ ಕೋಟೆಗಳು, ಚೆಕ್ಕೆಕಲ್ಲುಗಳನ್ನು ಸೇರಿಸಿ ನಿರ್ಮಿಸಿದ ಕೋಟೆಗಳು, ಒರಟು ಕಲ್ಲು ಮತ್ತು ಮಣ್ಣಿನಿಂದ ನಿರ್ಮಿಸಿದ ಕೋಟೆಗಳು, ಇಟ್ಟಿಗೆ ಮತ್ತು ಗಾರೆಯಿಂದ ನಿರ್ಮಿಸಿದ ಕೋಟೆಗಳು. ಇವುಗಳಲ್ಲಿ ಚಿತ್ರದುರ್ಗ ಕೋಟೆಯು ಹೆಚ್ಚು ಬಲಿಷ್ಟವಾಗಿದ್ದು, ಇಂದಿಗೂ ಬಹುಮಟ್ಟಿಗೆ ಸುಸ್ಥಿತಿಯಲ್ಲಿ ಉಳಿದಿದೆ. ಇದು ಪ್ರಾಚೀನ ರಕ್ಷಣಾವಾಸ್ತು ತಾಂತ್ರಿಕತೆಗೆ ಉತ್ತಮ ನಿದರ್ಶನವಾಗಿದೆ. ಮತ್ತು ಕರ್ನಾಟಕದ ಉಳಿದೆಲ್ಲಾ ಪಾಳೆಯಗಾರರಿಗಿಂತ ಚಿತ್ರದುರ್ಗ ಪಾಳೆಯಗಾರರು ರಕ್ಷಣಾ ವಾಸ್ತು ನಿರ್ಮಾಣಕ್ಕೆ ಹೆಚ್ಚಿನ ಮಹತ್ವ ನೀಡಿದ್ದಾರೆ ಎನ್ನುವುದು ಈ ಕೋಟೆಗಳಿಂದ ವ್ಯಕ್ತವಾಗುತ್ತದೆ. ಅವುಗಳ ನಿರ್ಮಾಣ ತಾಂತ್ರಿಕತೆಯ ದೃಷ್ಟಿಯಿಂದಲೂ ಚಿತ್ರದುರ್ಗ ಪಾಳೆಯಗಾರರಿಗೆ ಉಳಿದ ಪಾಳೆಯಗಾರರಿಗಿಂತ ಮೊದಲ ಸ್ಥಾನವನ್ನು ನೀಡಬಹುದು. ಉಳಿದ ಕಟ್ಟಡಗಳು ಬಹುಮಟ್ಟಿಗೆ ಶಿಥಿಲವಾಗಿವೆ. ಆದರೆ ಹೊಂಡಗಳು ಗಮನಸೆಳೆಯುತ್ತವೆ. ಇವುಗಳಲ್ಲಿ ಚಿತ್ರದುರ್ಗದ ಸಂತೆಹೊಂಡ ಕಲಾತ್ಮಕತೆ ಮತ್ತು ತಾಂತ್ರಿಕತೆ ದೃಷ್ಟಿಯಿಂದ ಮಹತ್ವದ್ದಾಗಿದೆ. ನೀರಿನ ತೊಂದರೆಯಿರುವ ಚಿತ್ರದುರ್ಗದಂತಹ ಬಯಲು ಪ್ರದೇಶಗಳಲ್ಲಿ ಆ ಸಮಸ್ಯೆಯ ನಿವಾರಣೆಗಾಗಿ ಪಾಳೆಯಗಾರರು ಚಿಂತಿಸಿದ ಫಲವಾಗಿ ಇಂತಹ ಹೊಂಡಗಳು ರೂಪುಗೊಂಡಿವೆ. ವಾಸ್ತುವಿನ್ಯಾಸ ದೃಷ್ಟಿಯಿಂದಲೂ ಗಮನಸೆಳೆದ ಇವು ಇಂತಹ ಬಾವಿ, ಪುಷ್ಕರಣಿ ಮತ್ತು ಹೊಂಡಗಳ ರಚನೆ ಇತಿಹಾಸದಲ್ಲಿ ಪಾಳೆಯಗಾರರಿಗೆ ವಿಶೇಷ ಸ್ಥಾನವನ್ನು ಕಲ್ಪಿಸುತ್ತವೆ ಎಂದು ಹೇಳಬಹುದು.

೪. ಪಾಳೆಯಗಾರರ ಕಾಲದ ಮೂರ್ತಿಶಿಲ್ಪ ಮತ್ತು ಚಿತ್ರಕಲೆಯ ವೈಶಿಷ್ಟ್ಯತೆಗಳನ್ನು ಗುರುತಿಸಲಾಗಿದೆ. ಪಾಳೆಯಗಾರರು ದೇವಾಲಯಗಳಿಗೆ ಪೂರಕವಾಗಿ ಮೂರ್ತಿಶಿಲ್ಪಗಳನ್ನು ನಿರ್ಮಿಸಿದ್ದಾರೆ. ಈ ಮೂರ್ತಿಶಿಲ್ಪಗಳಲ್ಲಿ ಬಿಡಿಶಿಲ್ಪಗಳು, ಉಬ್ಬುಶಿಲ್ಪಗಳು ಗಾರೆಶಿಲ್ಪಗಳು ಹಾಗೂ ಕಾಷ್ಟಶಿಲ್ಪಗಳೆಂದು ವಿಂಗಡಿಸಬಹುದು. ಬಿಡಿಶಿಲ್ಪಗಳು ಮುಖ್ಯವಾಗಿ ದೇವಾಲಯಗಳ ಗರ್ಭಗೃಹ ಹಾಗೂ ಇತರೆ ಮಂಟಪಗಳು ಮತ್ತು ಪ್ರಾಕಾರಗಳಲ್ಲಿ, ಇಲ್ಲವೇ ಸ್ವತಂತ್ರ ಕಟ್ಟೆಗಳ ಮೇಲೆ ಪ್ರಾಚೀನ ನೆಲೆಗಳಲ್ಲಿ ಕಂಡುಬರುತ್ತವೆ. ಉಬ್ಬುಶಿಲ್ಪಗಳು ದೇವಾಲಯಗಳ ಅಧಿಷ್ಠಾನ ಮತ್ತು ಭಿತ್ತಿಗಳ ಮೇಲೆ ವಿರಳವಾಗಿದ್ದರೆ, ಕಂಬಗಳ ಮೇಲೆ ಅಧಿಕ ಸಂಖ್ಯೆಯಲ್ಲಿವೆ. ಬಿಡಿಶಿಲ್ಪಗಳನ್ನು ಧಾರ್ಮಿಕ ಮತ್ತು ಲೌಕಿಕ ಶಿಲ್ಪಗಳೆಂದು ಎರಡು ವಿಷಯಗಳಲ್ಲಿ ವಿಂಗಡಿಸಬಹುದು.

ಧಾರ್ಮಿಕ ಶಿಲ್ಪಗಳಲ್ಲಿ ಶೈವ, ವೈಷ್ಣವ, ಶಾಕ್ತ ಮತ್ತು ಆಂಜನೇಯ ಶಿಲ್ಪಗಳು ಪ್ರಧಾನವಾಗಿವೆ. ಶೈವ ಶಿಲ್ಪಗಳಲ್ಲಿ ಗಣೇಶ, ವೀರಭದ್ರ, ಭೈರವನ ಶಿಲ್ಪಗಳು ಹೆಚ್ಚಾಗಿವೆ. ಸಾಮಾನ್ಯವಾಗಿ ಶಿವನನ್ನು ಲಿಂಗರೂಪದಲ್ಲಿ ಆರಾಧಿಸುವ ಪದ್ಧತಿಯಿದ್ದರೂ, ಈ ಪರಿಸರದಲ್ಲಿ ಶಿವನ ಕೆಲವು ಮೂರ್ತಿಗಳು ಕೂಡ ದೊರೆಯುವುದು ವಿಶೇಷವಾಗಿದೆ. ಅವುಗಳಲ್ಲಿ ದೊಡ್ಡೇರಿಯ ಕನ್ನೇಶ್ವರಸ್ವಾಮಿ ದೇವಾಲಯದ ಶಿವನ ಶಿಲ್ಪವೊಂದು ವಿಶಿಷ್ಟವೆನಿಸುತ್ತದೆ. ವೀಣೆಯನ್ನು ನುಡಿಸುವಂತೆ ಇರುವ ಶಿವನ ಈ ಶಿಲ್ಪದಲ್ಲಿ ಮುಖದ ಭಾವ ಮತ್ತು ಕೊರಳ ಆಭರಣಗಳು ಅಪರೂಪವೆನಿಸುತ್ತಿದ್ದು, ಅದು ಒಂದು ರೀತಿಯಲ್ಲಿ ಅಜಂತಾದ ಚಿತ್ರಕಲೆಯ ಮನುಷ್ಯ ಚಿತ್ರಗಳನ್ನು ಹೋಲುತ್ತದೆ. ಹೀಗೆ ಚಿತ್ರದುರ್ಗ ಪರಿಸರದಲ್ಲಿ ಇದೊಂದು ಗಮನಾರ್ಹ ಶಿಲ್ಪವಾಗಿದೆ.

ಪಾಳೆಯಗಾರರ ಕಾಲ ಶಿಷ್ಟ ಮತ್ತು ಜಾನಪದ ಸಂಪ್ರದಾಯಗಳ ಸ್ಥಿತ್ಯಂತರ ಕಾಲವೆಂದು ಗುರುತಿಸಬಹುದು. ವಿಜಯನಗರ ಶೈಲಿಯ ಶಿಷ್ಟ ಪರಂಪರೆ ಕೊನೆಗೊಳ್ಳುವ ಸಂದರ್ಭವನ್ನು ಪಾಳೆಯಗಾರರ ಕಾಲದ ನೀರ್ಥಡಿಯ ರಂಗನಾಥಸ್ವಾಮಿ ದೇವಾಲಯದ ಶಿಲ್ಪಗಳಲ್ಲಿ ಗುರುತಿಸಬಹುದು. ಉಳಿದಂತೆ ಹೆಚ್ಚಿನ ಶಿಲ್ಪಗಳು ಪಾಳೆಯಗಾರರ ಸ್ವಂತ ಅಥವಾ ಸ್ಥಳೀಯ ಶೈಲಿಯಲ್ಲಿ ರಚನೆಗೊಂಡಿವೆಯಾದರೂ ಕೆಲವು ಶಿಲ್ಪಗಳು ಶಿಷ್ಟ ಮತ್ತು ಜಾನಪದೀಯ ಶೈಲಿಗಳನ್ನು ಹದವಾಗಿ ಮಿಳಿತಗೊಳಿಸಿಕೊಂಡು ರೂಪುಗೊಂಡಿವೆ. ಅಂತಹವುಗಳಲ್ಲಿ ಹಿರಿಯೂರಿನ ವೀರಭದ್ರನ ಶಿಲ್ಪ ಉತ್ತಮ ನಿದರ್ಶನವಾಗಿದೆ. ಇದು ಪಾಳೆಯಗಾರರ ಕಾಲದ ಕಲೆಯ ಪ್ರಬುದ್ಧತೆಗೆ ಸಾಕ್ಷಿಯಾಗಿದೆ. ಅಂತೆಯೇ ಜಾನಕಲ್ಲಿನ ಭೈರವನ ಶಿಲ್ಪ ಶೈಲಿಯಿಂದ ಗಮನಸೆಳೆಯುತ್ತದೆ. ಇದರ ಸೂಕ್ಷ್ಮ ಕೆತ್ತನೆಗಳು ಅದನ್ನು

ಚಾಲುಕ್ಯ ಶೈಲಿಯ ಶಿಲ್ಪಗಳಿಗೆ ಹೋಲಿಕೆಯಾಗಿಸುತ್ತದೆ. ಸ್ಥಳೀಯ ಶೈಲಿಯ ಶಿಲ್ಪಗಳ ಮಧ್ಯಯೇ ಅಲ್ಲಲ್ಲಿ ಕಂಡುಬರುವ ಇಂತಹ ಶಿಲ್ಪಗಳು ಕೆಲವು ವಿಶೇಷ ನೈಪುಣ್ಯತೆಯ ಶಿಲ್ಪಿಗಳ ಅಸ್ತಿತ್ವಕ್ಕೆ ಸಾಕ್ಷಿ ಒದಗಿಸುತ್ತವೆ.

ಭಾರತೀಯ ದೇವತೆಗಳಲ್ಲಿ ಗಣೇಶನಿಗೆ ಅಗ್ರಸ್ಥಾನ. ಎಲ್ಲಾ ಪಂಥಗಳ ದೇವಾಲಯಗಳಲ್ಲೂ ಗಣೇಶನ ಇರುವಿಕೆ ಮಹತ್ವ ಪಡೆದುಕೊಳ್ಳುತ್ತದೆ. ಚಿತ್ರದುರ್ಗ ಪಾಳೆಯಗಾರರ ಶಿಲ್ಪಗಳಲ್ಲೂ ಗಣೇಶ ಹೆಚ್ಚಾಗಿ ಸಂಪ್ರದಾಯಬದ್ಧವಾಗಿ ನಿರೂಪಿತವಾಗಿದ್ದರೂ, ಶೈಲಿಯಲ್ಲಿ ಭಿನ್ನತೆಯಿದೆ. ಆದರೆ ಹೊಳಲ್ಕೆರೆಯ ಬೃಹತ್ ಗಣೇಶನ ಶಿಲ್ಪಕ್ಕೆ ತಲೆಯ ಹಿಂದೆ ಆಭರಣಸಹಿತ ಜಡೆ ಇರುವುದು ಕುತೂಹಲ ಮೂಡಿಸುತ್ತದೆ. ಇದು ಗಣೇಶನ ಮಾತೃರೂಪದ ಅಂಶವೆಂದು ಸ್ಥಳೀಯ ನಂಬಿಕೆಯಿದೆ. ಪ್ರಾಯಶಃ ಮೂರ್ತಿಶಿಲ್ಪದ ಸಂಪ್ರದಾಯವನ್ನು ಮೀರಿ ಪ್ರಾದೇಶಿಕವಾದ ಭಾವನೆಗಳನ್ನು ಪ್ರತಿಮೆಯಲ್ಲಿ ಅಳವಡಿಸಿರುವ ಸಂಗತಿಯನ್ನು ಇಲ್ಲಿ ಕಾಣಬಹುದು. ಹಾಗಾಗಿ ಕರ್ನಾಟಕದ ಮೂರ್ತಿಶಿಲ್ಪ ಕ್ಷೇತ್ರಕ್ಕೆ ಇದೊಂದು ವಿಶಿಷ್ಟ ಕೊಡುಗೆಯೆಂದೇ ಹೇಳಬಹುದಾಗಿದೆ.

ವೈಷ್ಣವ ಶಿಲ್ಪಗಳಲ್ಲಿ ರಂಗನಾಥ ಮತ್ತು ವೆಂಕಟೇಶ ರೂಪದ ಹೆಚ್ಚಿನ ಶಿಲ್ಪಗಳನ್ನು ಈ ಪ್ರದೇಶದಲ್ಲಿ ಕಾಣಬಹುದು. ವಿಷ್ಣುವಿನ ಆರಾಧನೆ ಪಾಳೆಯಗಾರರ ಕಾಲದಲ್ಲಿ ಹೆಚ್ಚು ಪ್ರಚಲಿತವಾಗಿತ್ತೆಂಬುದನ್ನು ಇವು ನಿದರ್ಶಿಸುತ್ತವೆ. ಹೆಚ್ಚಾಗಿ ಈ ಎಲ್ಲಾ ಶಿಲ್ಪಗಳು ಸಂಪ್ರದಾಯಬದ್ಧವಾಗಿದ್ದರೂ, ಕೆಲವು ಶಿಲ್ಪಗಳಲ್ಲಿ ವೈಶಿಷ್ಟ್ಯಗಳಿವೆ. ಹೊಳಲ್ಕೆರೆಯ ವೇಣುಗೋಪಾಲನ ಪ್ರಭಾವಳಿಯಲ್ಲಿ ವಿಷ್ಣುವಿನ ದಶಾವತಾರದ ಚಿತ್ರಗಳಿರುವುದು ಈ ಪ್ರದೇಶದ ಮಟ್ಟಿಗೆ ಅಪರೂಪವೆಂದೇ ಹೇಳಬಹುದು. ಹೆಚ್ಚಾಗಿ ವಿಷ್ಣುವಿನ ಶಿಲ್ಪಗಳು ಪ್ರಾದೇಶಿಕ ಅಥವಾ ಸ್ಥಳೀಯ ಶೈಲಿಯಲ್ಲಿ ಬಿಂಬಿತವಾಗಿವೆ. ಆದರೆ ಹೊಳಲ್ಕೆರೆ ಮತ್ತು ಹೊರಕೆರೆದೇವರಪುರದ ಗರುಡನ ಶಿಲ್ಪಗಳು ಹೆಚ್ಚು ಕುಸುರಿ ಕೆತ್ತನೆಗಳಿಂದ ಚಾಲುಕ್ಯ ಶಿಲ್ಪಗಳಂತೆ ತೋರುತ್ತವೆ.

ಶಾಕ್ತಶಿಲ್ಪಗಳಲ್ಲಿ ವೈಷ್ಣವ ದೇವಾಲಯಗಳಲ್ಲಿರುವ ಲಕ್ಷ್ಮಿ, ಶಿವದೇವಾಲಯಗಳಲ್ಲಿರುವ ಪಾರ್ವತಿಯ ಅಥವಾ ಮಹೇಶ್ವರಿಯ ಶಿಲ್ಪಗಳು ಸಮಾವೇಶವಾಗುತ್ತವೆ. ಭದ್ರಕಾಳಿಯ ಕೆಲವು ವಿಶಿಷ್ಟ ಶಿಲ್ಪಗಳು ಹಿರಿಯೂರು ಮತ್ತು ಹೊಸದುರ್ಗಗಳಲ್ಲಿವೆ. ಇವು ವೀರಭದ್ರ ಶಿಲ್ಪದ ಬದಿಯಲ್ಲಿವೆ. ಶಿವ ವೀರಭದ್ರನಾದರೆ ಪಾರ್ವತಿ ಭದ್ರಕಾಳಿಯಾಗಿರುವುದು ಇಲ್ಲಿಯ ವೈಶಿಷ್ಟ್ಯ. ಸಾಮಾನ್ಯವಾಗಿ ಮೂರ್ತಿಶಿಲ್ಪ ಶಾಸ್ತ್ರದಲ್ಲಿ ಭದ್ರಕಾಳಿ ಪೀಠದ ಮೇಲೆ ಸವ್ಯಲಲಿತಾಸನದಲ್ಲಿ ಆಸೀನಳಾಗಿರುತ್ತಾಳೆ. ಚತುರ್ಭುಜಳಾಗಿದ್ದು ಹಿಂದಿನ ಕೈಗಳಲ್ಲಿ

ತ್ರಿಶೂಲ, ಪಾಶಗಳಿದ್ದರೆ, ಮುಂದಿನ ಕೈಗಳಲ್ಲಿ ಖಡ್ಗ ಮತ್ತು ಪಾನಪಾತ್ರೆಗಳಿರುತ್ತವೆ. ಆದರೆ ಇಲ್ಲಿ ಭದ್ರಕಾಳಿ ತ್ರಿಭಂಗಿಯಲ್ಲಿ ನಿಂತಿದ್ದು, ವೀರಭದ್ರನಂತೆ ನಾಲ್ಕು ಕೈಗಳಲ್ಲಿ ಬಿಲ್ಲು, ಬಾಣ, ಖಡ್ಗ ಮತ್ತು ಖೇಟಕಗಳನ್ನು ಹೊಂದಿದ್ದಾಳೆ. ವೀರಭದ್ರ ಮತ್ತು ಭದ್ರಕಾಳಿಯ ನಡುವೆ ಹೆಚ್ಚಿನ ವ್ಯತ್ಯಾಸಗಳಿಲ್ಲ. ಭದ್ರಕಾಳಿಯಲ್ಲಿ ಸ್ತ್ರೀತ್ವದ ಅಂಗಗಳನ್ನು ಹೊರತುಪಡಿಸಿದರೆ ಎರಡೂ ಒಂದೇ ರೀತಿಯಲ್ಲಿವೆ. ಇಲ್ಲಿ ಭದ್ರಕಾಳಿಯ ಪರಿಕಲ್ಪನೆ ಮೂರ್ತಿಶಿಲ್ಪ ದೃಷ್ಟಿಯಿದ ಒಂದು ವಿಶಿಷ್ಟ ಬೆಳವಣಿಗೆ. ವಿಷ್ಣುವಿಗೆ ಲಕ್ಷ್ಮಿ, ಶಿವನಿಗೆ ಪಾರ್ವತಿಯಿದ್ದಂತೆ, ವೀರಭದ್ರನಿಗೆ ಭದ್ರಕಾಳಿಯನ್ನು ಜೊತೆಯಾಗಿಸಬೇಕೆಂಬ ಸ್ಥಳೀಯ ಆಲೋಚನೆಯ ಫಲವಾಗಿ ಈ ಶಿಲ್ಪ ರೂಪುಗೊಂಡಿದೆ. ಹಾಗಾಗಿ ಮೂರ್ತಿಶಿಲ್ಪ ಕ್ಷೇತ್ರಕ್ಕೆ ಇವು ಪಾಳೆಯಗಾರರ ಕಾಲದ ಮಹತ್ವದ ಕೊಡುಗೆಗಳೆಂದೇ ಹೇಳಬಹುದು.

ಸಾಮಾನ್ಯವಾಗಿ ಎಲ್ಲಾ ವೈಷ್ಣವ ದೇವಾಲಯಗಳಲ್ಲಿ ಲಕ್ಷ್ಮಿಯ ಶಿಲ್ಪಗಳು ಸಾಮಾನ್ಯವಾಗಿವೆ. ಇವು ರಂಗನಾಥನ ಶಿಲ್ಪಗಳಂತೆ ಸ್ಥಳೀಯ ಶೈಲಿಯಲ್ಲಿ ರಚನೆಗೊಂಡಿದ್ದು ಸಂಪ್ರದಾಯಬದ್ಧವಾಗಿವೆ. ಆದರೆ ಹಂಪನೂರಿನ ದೇವಿಯ ಶಿಲ್ಪ ಪಾಳೆಯಗಾರರ ಕಾಲದ ಕೊನೆಯ ಕಾಲದಲ್ಲಿ ನಿರ್ಮಾಣಗೊಂಡಂತೆ ತೋರುತ್ತಿದ್ದು, ಅದರ ವೇಷಭೂಷಣ, ಮೈತುಂಬಾ ಸೀರೆ ಇರುವುದು ಸಮಕಾಲೀನತೆಯ ಪ್ರಭಾವವನ್ನು ಗುರುತಿಸಬಹುದು.

ಕನ್ನಡ ನಾಡಿನ ಕುವರನೆಂದೇ ನಂಬಲ್ಪಟ್ಟಿರುವ ಆಂಜನೇಯ ಕನ್ನಡಿಗರ ಜನಪ್ರಿಯ ಆರಾಧ್ಯ ದೈವ. ವಿಜಯನಗರ ಕಾಲದಲ್ಲಿ ಈ ಆರಾಧನೆಯ ಜನಪ್ರಿಯತೆ ಉತ್ತುಂಗದಲ್ಲಿತ್ತೆಂದೇ ಹೇಳಬಹುದು. ವಿಜಯನಗರದ ನಂತರ ಆ ಆರಾಧನೆ ಚಿತ್ರದುರ್ಗ ಪರಿಸರದ ಕಡೆ ಹೊರಳಿ ಪಾಳೆಯಗಾರರ ಕಾಲದಲ್ಲಿ ಮತ್ತೆ ವಿಜೃಂಭಿಸಿದ ಸಂದರ್ಭವನ್ನು ಇಲ್ಲಿಯ ಅಧಿಕ ಸಂಖ್ಯೆಯ ಆಂಜನೇಯ ದೇವಾಲಯ ಮತ್ತು ಶಿಲ್ಪಗಳಿಂದ ಗ್ರಹಿಸಬಹುದು. ಸಾಮಾನ್ಯವಾಗಿ ಆಂಜನೇಯನ ಉಬ್ಬುಶಿಲ್ಪಗಳು ವೀರಾಂಜನೇಯನ ಭಂಗಿಯಲ್ಲಿರುವುದು ವಾಡಿಕೆ. ಪಾಳೆಯಗಾರರ ಶಿಲ್ಪಗಳು ಅದಕ್ಕೆ ವ್ಯತಿರಿಕ್ತವಾಗಿಯೇನಿಲ್ಲ. ಆದರೆ ಕೆಲವೊಂದು ಅಂಶಗಳು ಗಮನಸೆಳೆಯುತ್ತವೆ. ಹೊರಕೆರೆದೇವರಪುರದ ಶಿಲ್ಪದ ಪ್ರಭಾವಳಿಯಲ್ಲಿ ಆಂಜನೇಯನ ಸಾಹಸದ ದೃಶ್ಯಗಳನ್ನು ತೋರಿಸಿರುವುದು, ಬಹದ್ದೂರ್‌ಘಟ್ಟದಲ್ಲಿ ಆಂಜನೇಯನ ಎರಡೂ ಕಾಲುಗಳ ಮಧ್ಯ ಅಕ್ಷಯಕುಮಾರನನ್ನು ದೀರ್ಘದಂಡ ನಮಸ್ಕಾರ ಮಾಡುವಂತೆ ತೋರಿಸಿರುವುದು ವಿಶೇಷವೆನಿಸುತ್ತವೆ. ಇವೆಲ್ಲಾ ಶಿಲ್ಪಕಲೆಯ ಪ್ರಾದೇಶಿಕ ರೂಪಗಳಲ್ಲಿ ಹೊಸ ಅಂಶಗಳನ್ನು ಅಳವಡಿಸಿಕೊಂಡದ್ದನ್ನು ನಿದರ್ಶಿಸುತ್ತವೆ.

ಇತರೆ ಶಿಲ್ಪಗಳಲ್ಲಿ ಸೂರ್ಯ, ಪರಶುರಾಮ, ಜೈನತೀರ್ಥಂಕರರ ಒಂದೊಂದೇ ಶಿಲ್ಪಗಳು ದೊರೆತಿದ್ದು, ಆ ದೇವತೆಗಳ ವಿರಳ ಆರಾಧನೆಯನ್ನು ಸೂಚಿಸುತ್ತದೆ. ಇವುಗಳಲ್ಲಿ ಪರಶುರಾಮ ಶಿಲ್ಪ ಅಪರೂಪದ್ದು. ಸಾಮಾನ್ಯವಾಗಿ ಪರಶುರಾಮನ ಶಿಲ್ಪ ವಿಷ್ಣುವಿನ ದಶಾವತಾರ ಶಿಲ್ಪಪಟ್ಟಿಕೆಗಳಲ್ಲಿ ಕಂಡುಬರುತ್ತದೆ. ಆದರೆ ಚಿತ್ರದುರ್ಗದ ಉತ್ಸವಾಂಬೆ ದೇವಾಲಯದಲ್ಲಿ ಬಿಡಿಯಾಗಿರುವ ಪರಶುರಾಮನ ಶಿಲ್ಪ ಅಪರೂಪವಾಗಿದ್ದು ಕರ್ನಾಟಕದ ಮೂರ್ತಿಶಿಲ್ಪ ಪರಂಪರೆಯಲ್ಲೇ ವಿರಳವಾದ ಶಿಲ್ಪಗಳಲ್ಲಿ ಒಂದೆನಿಸುತ್ತದೆ.

ಸ್ಮಾರಕ ಶಿಲ್ಪಗಳಲ್ಲಿ ವೀರಗಲ್ಲುಗಳು ಮತ್ತು ಮಹಾಸತಿಕಲ್ಲುಗಳು ವಿಜಯನಗರ ಕಾಲ ಮತ್ತು ಎಲ್ಲಾ ಪಾಳೆಯಗಾರರ ಕಾಲದಂತೆ ತೀರಾ ಸಾಮಾನ್ಯವಾಗಿದ್ದು ವಿಶೇಷವಾಗಿಯೇನಿಲ್ಲ. ಆದರೆ ಅವು ಪಾಳೆಯಗಾರರ ಕಾಲದ ಸಾಮಾಜಿಕ ಆಚರಣೆಯ ಮೇಲೆ ಬೆಳಕು ಚೆಲ್ಲುತ್ತವೆ. ಹೀಗೆ ಚಿತ್ರದುರ್ಗ ಪರಿಸರದ ಬಿಡಿಶಿಲ್ಪಗಳಲ್ಲಿ ಹಲವಾರು ಶಿಲ್ಪಗಳು ತಮ್ಮ ವೈಶಿಷ್ಟ್ಯತೆಗಳಿಂದಾಗಿ ಶಿಲ್ಪಕಲೆಯಲ್ಲಿ ಮಹತ್ವ ಪಡೆಯುತ್ತವೆ ಎಂದು ಗುರುತಿಸಬಹುದು.

ಚಿತ್ರದುರ್ಗ ಪಾಳೆಯಗಾರರ ಸ್ಮಾರಕಗಳಲ್ಲಿ ಅಧಿಷ್ಠಾನ, ಭಿತ್ತಿ ಮತ್ತು ಕಂಬಗಳ ಮೇಲೆ ಉಬ್ಬುಶಿಲ್ಪಗಳು ಕಂಡುಬರುತ್ತವೆ. ಅಧಿಷ್ಠಾನದ ಶಿಲ್ಪಗಳಲ್ಲಿ ನೀರ್ಥಡಿಯ ರಂಗನಾಥಸ್ವಾಮಿ ದೇವಾಲಯದ ಅಧಿಷ್ಠಾನದ ಶಿಲ್ಪಗಳು ವಿಷಯ ವೈವಿಧ್ಯತೆಯಿದ ಗಮನಸೆಳೆಯುತ್ತವೆ. ಇಲ್ಲಿಯ ಶಿಲ್ಪಗಳು ಹಂಪಿಯ ವಿಜಯವಿಠ್ಠಲ ದೇವಾಲಯದ ಅಧಿಷ್ಠಾನದ ಶಿಲ್ಪಗಳ ಹೋಲಿಕೆ ಹೊಂದುತ್ತವೆ. ಇವುಗಳ ಕೆತ್ತನೆಯಲ್ಲಿ ಪರಿಪೂರ್ಣತೆಯಿದ್ದು ಶಿಷ್ಟ ಶೈಲಿಯದಾಗಿವೆ. ಉಳಿದಂತೆ ಹಿರಿಯೂರಿನ ತೇರುಮಲ್ಲೇಶ್ವರ, ಕೊರಟಗೆರೆ ರಂಗನಾಥ, ಅಂಬಲಗೆರೆ ರಂಗನಾಥ ದೇವಾಲಯಗಳ ಅಧಿಷ್ಠಾನಗಳ ಮೇಲೆ ವಿರಳವಾಗಿ ಉಬ್ಬುಶಿಲ್ಪಗಳಿವೆ. ಆದರೆ ಇವು ಗಮನಾರ್ಹವಾಗಿಲ್ಲ. ಹಾಗಾಗಿ ಪಾಳೆಯಗಾರರ ಕಾಲದ ದೇವಾಲಯಗಳಲ್ಲಿ ನೀರ್ಥಡಿಯ ರಂಗನಾಥ ದೇವಾಲಯದ ಅಧಿಷ್ಠಾನದ ಶಿಲ್ಪಗಳು ತಮ್ಮ ವೈಶಿಷ್ಟ್ಯತೆಯಿಂದ ಪ್ರತ್ಯೇಕ ಸ್ಥಾನವನ್ನು ಪಡೆದುಕೊಳ್ಳುತ್ತವೆ.

ಭಿತ್ತಿಯ ಮೇಲಿನ ಉಬ್ಬುಶಿಲ್ಪಗಳಲ್ಲಿ ಎರಡು ಶೈಲಿಗಳನ್ನು ಗುರುತಿಸಲಾಯಿತು. ಮೊದಲನೆಯದಾಗಿ ಶಿಷ್ಟ ಪ್ರಕಾರದ ಶಿಲ್ಪಗಳು. ಇವು ನೀರ್ಥಡಿ ರಂಗನಾಥ ದೇವಾಲಯದ ಗರ್ಭಗೃಹದ ಭಿತ್ತಿಯ ಮೇಲೆ ಕಂಡುಬರುತ್ತವೆ. ಹೊಯ್ಸಳ ಮತ್ತು ಚಾಲುಕ್ಯರ ಕಾಲದ ದೇವಾಲಯಗಳ ಭಿತ್ತಿಗಳ ಮೇಲಿರುವಂತೆ ಈ ಶಿಲ್ಪಗಳು ದೊಡ್ಡ ಪ್ರಮಾಣದಲ್ಲಿ ಇಲ್ಲ. ಬದಲಿಗೆ ಅಧಿಷ್ಠಾನಗಳಲ್ಲಿರುವ ಶಿಲ್ಪಪಟ್ಟಿಕೆಯಂತೆ ಕಪೋತದ ತಳಭಾಗದಲ್ಲಿ ಭಿತ್ತಿಯ

ಮೇಲೆ ಸಾಲಾಗಿ ಒಂದು ಪಟ್ಟಿಕೆಯಲ್ಲಿವೆ. ಇವುಗಳಲ್ಲಿ ಗಜಸಾಲಿನ ಮತ್ತು ಮನುಷ್ಯ ಶಿಲ್ಪಗಳು ಇವೆ. ಈ ರೀತಿ ಭಿತ್ತಿಯನ್ನು ಶಿಲ್ಪಪಟ್ಟಿಕೆಗಳಿಂದ ಅಲಂಕರಿಸುವ ಪದ್ಧತಿ ವಾಸ್ತುಶಿಲ್ಪ ದೃಷ್ಟಿಯಿಂದ ಮಹತ್ವದ್ದೆನಿಸುತ್ತದೆ. ಪ್ರಾಯಶಃ ಇದು ವಿರಳವಾದ ನಿದರ್ಶನವೆಂದು ಹೇಳಬಹುದು.

ಎರಡನೆಯದಾಗಿ ಹೆಚ್ಚಿನ ದೇವಾಲಯಗಳ ಭಿತ್ತಿಯಲ್ಲಿ ಪಾಳೆಯಗಾರರ ಕಾಲದ ಸ್ಥಳೀಯ ಶೈಲಿಯಲ್ಲಿ ನಿರ್ಮಿಸಿರುವ ಕೆಲವು ಉಬ್ಬುಶಿಲ್ಪಗಳು ಕಂಡುಬರುತ್ತವೆ. ಅವುಗಳಲ್ಲಿ ಏಳು ಹೆಡೆಯ ನಾಗಸರ್ಪ, ಜೋಡಿಮೀನು, ಕಾದಾಡುತ್ತಿರುವ ಆನೆಗಳು, ಮಿಥುನಶಿಲ್ಪಗಳು ಆಮೆ ಸಾಮಾನ್ಯವಾಗಿವೆ. ಪದೇಪದೇ ಪುನರಾವರ್ತಿತವಾಗುವ ಇಂತಹ ಉಬ್ಬುಶಿಲ್ಪಗಳ ಲಕ್ಷಣಗಳಿಂದಲೇ ಆ ದೇವಾಲಯಗಳು ಚಿತ್ರದುರ್ಗ ಪಾಳೆಯಗಾರರ ಕಾಲದ್ದೆಂದು ನಿರ್ಧರಿಸಬಹುದಾಗಿದೆ. ಅಷ್ಟೇ ಅಲ್ಲ, ಚಿತ್ರದುರ್ಗ ಕೋಟೆ ಸಹಿತ ಹೆಚ್ಚಿನ ಸ್ಮಾರಕಗಳಲ್ಲಿ ನಾಗಸರ್ಪ ಶಿಲ್ಪವು ಪದೇಪದೇ ಕಾಣಿಸಿಕೊಳ್ಳುವುದರಿಂದ ಅದು ಚಿತ್ರದುರ್ಗ ಪಾಳೆಯಗಾರರ ರಾಜಲಾಂಛನವಾಗಿರಬಹುದಾದ ಸಾಧ್ಯತೆಯನ್ನು ತರ್ಕಿಸಬಹದು. ಹೀಗೆ ಭಿತ್ತಿಯ ಶಿಲ್ಪಗಳು ಅಧಿಕ ಸಂಖ್ಯೆಯಿಂದಾಗಲಿ, ವಿಷಯ ವೈವಿಧ್ಯತೆಯಿಂದಾಗಲೀ, ಇಲ್ಲವೆ ಕಲಾತ್ಮಕವಾಗಿ ಕೂಡಿರದೆ ಸಾಮಾನ್ಯವಾಗಿದ್ದು, ಪಾಳೆಯಗಾರರ ಪ್ರಾದೇಶಿಕ ವಾಸ್ತುಲಕ್ಷಣಗಳೆಂದೇ ಹೇಳಬಹುದು.

ವಿಜಯನಗರ ಕಾಲದಲ್ಲಿ ಇದ್ದಂತೆ ಪಾಳೆಯಗಾರರ ಕಾಲದ ಸ್ಮಾರಕಗಳ ಕಂಬಗಳ ಮೇಲೂ ಅಧಿಕ ಸಂಖ್ಯೆಯಲ್ಲಿ ಉಬ್ಬುಶಿಲ್ಪಗಳು ಇರುವುದನ್ನು ಗುರುತಿಸಲಾಯಿತು ಇವು ವಿಷಯಾತ್ಮಕವಾಗಿಯೂ ಸಾಕಷ್ಟು ವೈವಿಧ್ಯತೆಯಿಂದ ಕೂಡಿವೆ. ಧಾರ್ಮಿಕ ಮತ್ತು ಲೌಕಿಕ ವಿಷಯಗಳಿಗೆ ಸಂಬಂಧಿಸಿದ ಮನುಷ್ಯ ಮತ್ತು ಪ್ರಾಣಿಗಳ ಅಪಾರ ಶಿಲ್ಪಗಳಿವೆ. ಶೈಲಿಯಿಂದಲೂ ಶಿಷ್ಠ ಮತ್ತು ಸ್ಥಳೀಯ ಅಥವಾ ಜಾನಪದ ಶೈಲಿಯಲ್ಲಿವೆ. ನೀರ್ಥಡಿ ರಂಗನಾಥ ದೇವಾಲಯದ ಕಂಬಗಳ ಮೇಲಿನ ಶಿಲ್ಪಗಳು ಹೆಚ್ಚು ವೈಶಿಷ್ಟ್ಯಪೂರ್ಣವಾಗಿವೆ. ಇಲ್ಲಿಯ ವೇಣುಗೋಪಾಲ, ಲಕ್ಷ್ಮಿನರಸಿಂಹ, ಕಾಳಿಂಗಮರ್ದನ ಕೃಷ್ಣ, ಪೂತನಿ ಸಂಹಾರದ ಕೃಷ್ಣ, ಹಿರಣ್ಯಕಶ್ಯಪುವಿನ ಸಂಹಾರ, ಹಿರಣ್ಯಕಶ್ಯಪು ಕಂಬವನ್ನು ಹೊಡೆದಾಗ ಅದರಿಂದ ಹೊರಬರುತ್ತಿರುವ ನರಸಿಂಹ, ದರ್ಪಣ ಸುಂದರಿ, ಗೋಪಿಕಾ ವಸ್ತ್ರಾಪಹರಣ ಮುಂತಾದ ಶಿಲ್ಪಗಳು ಶೈಲಿ, ಕೆತ್ತನೆ ಮತ್ತು ಪರಿಪೂರ್ಣತೆಯಿಂದ ಕೂಡಿದ್ದು ಆಕರ್ಷಕವಾಗಿವೆ. ಇವು ವಿಜಯನಗರದ ದೇವಾಲಯಗಳಲ್ಲಿ ಇರುವಂತೆ ಇವೆ. ರಚನೆಯ ದೃಷ್ಟಿಯಿಂದ ಶ್ರೇಷ್ಠವಾಗಿರುವ ಈ ಶಿಲ್ಪಗಳು ಪಾಳೆಯಗಾರರ ಕಾಲದ ಉತ್ಕೃಷ್ಟ

ರಚನೆಗಳಾಗಿ ಕಂಡುಬರುತ್ತವೆ. ಉಳಿದಂತೆ ಹೆಚ್ಚಿನ ದೇವಾಲಯಗಳಲ್ಲಿ ಪ್ರಾದೇಶಿಕ ಶೈಲಿಯ ಉಬ್ಬುಶಿಲ್ಪಗಳಿದ್ದು, ಪಾಳೆಯಗಾರರ ಸ್ವಂತ ಕಲಾಶೈಲಿಯನ್ನು ಬಿಂಬಿಸುತ್ತವೆ.

ಇಂತಹ ಶಿಲ್ಪಗಳಲ್ಲಿ ಬೆಣ್ಣೆಕೃಷ್ಣ, ಕಾಳಿಂಗಮರ್ದನಕೃಷ್ಣ, ಭೈರವ, ಗಣೇಶ, ಅನಂತಶಯನ, ಆಂಜನೇಯ, ಅಂಬೆಗಾಲಕೃಷ್ಣ, ಕೇಶವ, ಗರುಡ, ರಾಮ, ರಾಮಾನುಜಾಚಾರ್ಯ, ವಾದ್ಯಗಾರ, ಹಾವಾಡಿಗ ಮುಂತಾದ ಶಿಲ್ಪಗಳು ಸಾಮಾನ್ಯವಾಗಿವೆ. ಇವೆಲ್ಲಾ ವಿಜಯನಗರದ ದೇವಾಲಯಗಳಲ್ಲಿ ಕಂಡುಬರುವ ಶಿಲ್ಪಗಳ ಅನುಕರಣೆಯಾಗಿದೆ. ಜೊತೆಗೆ ಅಲ್ಲಲ್ಲಿ ರಾಮಾಜಾಚಾರ್ಯರ ಶಿಲ್ಪವಿರುವುದು ಹೊಯ್ಸಳರ ದೇವಾಲಯಗಳ ಶಿಲ್ಪಗಳಂತೆ ಸುಖಭಾಷಿಣಿ, ದರ್ಪಣ ಸುಂದರಿ ಶಿಲ್ಪಗಳಿರುವುದು ವಿಶೇಷವೆನಿಸುತ್ತದೆ.

ಕರ್ನಾಟಕಕ್ಕೆ ರಾಮಾನುಜಾಚಾರ್ಯರ ಆಗಮನದೊಂದಿಗೆ ವೈಷ್ಣವ ಮತ ಇಲ್ಲಿ ಹೆಚ್ಚು ಪ್ರಚಾರವನ್ನು ಪಡೆದುಕೊಳ್ಳುತ್ತದೆ. ವಿಜಯನಗರದಲ್ಲಿ ತುಳುವ ವಂಶದ ಅರಸರು ಕೂಡ ವೈಷ್ಣವ ಮತವನ್ನು ಹೆಚ್ಚಾಗಿ ಪೋಷಿಸಿ ಬೆಳೆಸಿದರು. ಚಿತ್ರದುರ್ಗ ಪಾಳೆಯಗಾರರು ಕೂಡ ಆ ಪ್ರಭಾವಕ್ಕೆ ಒಳಗಾಗಿ ಹೆಚ್ಚಿಗೆ ವೈಷ್ಣವ ದೇವಾಲಯಗಳನ್ನು ನಿರ್ಮಿಸಿದ್ದಾರೆ. ರಾಮಾನುಜಾಚಾರ್ಯರೊಂದಿಗೆ ವೈಷ್ಣವ ಮತ ಹೆಚ್ಚು ಪ್ರಚಾರಗೊಂಡಿದ್ದರಿಂದ ವೈಷ್ಣವ ದೇವಾಲಯಗಳಲ್ಲಿ ಅವರ ಶಿಲ್ಪವನ್ನು ಅಳವಡಿಸಿಕೊಳ್ಳುವ ಒಂದು ಪರಂಪರೆ ಪ್ರಾರಂಭವಾಯಿತು. ಅದು ಪಾಳೆಯಗಾರರ ಕಾಲದಲ್ಲೂ ಮುಂದುವರೆದಿರುವುದು ಕಂಡುಬರುತ್ತದೆ.

ಪ್ರಾಣಿ ಶಿಲ್ಪಗಳಲ್ಲಿ ಕುಳಿತ ಸಿಂಹ ಸಾಮಾನ್ಯವಾಗಿದ್ದರೆ, ಗಂಡಬೇರುಂಡ, ಗಜಶಾರ್ದೂಲ, ನರಶಾರ್ದೂಲ ಶಿಲ್ಪಗಳು ವಿಶಿಷ್ಟವಾಗಿವೆ. ಅಲ್ಲದೇ ಒಂದೇ ಮುಂಡ, ಹಲವು ಮುಖಗಳ ಹಸುವಿನ ಚಿತ್ರವೊಂದು ಪದೇಪದೇ ಕಾಣಿಸಿಕೊಳ್ಳುತ್ತಿದ್ದು, ಅದು ಪಾಳೆಯಗಾರರ ಕಾಲದ ವಿಶಿಷ್ಟ ಲಕ್ಷಣವಾಗಿರುವುದನ್ನು ಗುರುತಿಸಬಹುದು. ಪಾಳೆಯಗಾರರ ಹೊತ್ತಿನ ಕೊನೆಗಾಲದ ಚಿತ್ರಗಳನ್ನು ಮಾರಿಕಣಿವೆಯ ಮಾರಿಕಾಂಭ ದೇವಾಲಯದಲ್ಲಿ ಗುರುತಿಸಲಾಯಿತು. ತೀರಾ ಅಸಮರ್ಪಕವಾಗಿರುವ ಇಲ್ಲಿಯ ಶಿಲ್ಪಗಳು ಸ್ಥಳೀಯರ ರಚನೆಗಳಾಗಿವೆ ಎಂದು ಹೇಳಬಹುದು.

ಚಿತ್ರದುರ್ಗ ಪಾಳೆಯಗಾರರ ಕಾಲದ ಗಾರೆಶಿಲ್ಪಗಳು ಉಳಿದಿರುವುದಕ್ಕಿಂತ ಹಾಳಾಗಿರುವುದೇ ಹೆಚ್ಚು. ಚಿತ್ರದುರ್ಗದ ಏಕನಾಥೇಶ್ವರಿ ದೇವಾಲಯ, ಹಿರಿಯೂರಿನ ತೇರುಮಲ್ಲೇಶ್ವರ ದೇವಾಲಯ ಮತ್ತಿತರ ದೇವಾಲಯಗಳಲ್ಲಿ ಗಾರೆ ಶಿಲ್ಪಗಳು ಕಂಡುಬರುತ್ತವಾದರೂ, ಅವನ್ನು ದುರಸ್ತಿಗೊಳಿಸಿರುವುದರಿಂದ ತಮ್ಮ ಮೂಲ ರೂಪವನ್ನು ಕಳೆದುಕೊಂಡಿವೆ.

ಆದಾಗ್ಯೂ ಗಾರೆ ಶಿಲ್ಪ ಕ್ಷೇತ್ರಕ್ಕೆ ಗಾರೆಶಿಲ್ಪ ಪರಂಪರೆಯನ್ನು ಚಿತ್ರದುರ್ಗದ ಪಾಳೆಯಗಾರರು ಮುಂದುವರೆಸಿರುವುದನ್ನು ಗುರುತಿಸಬಹುದು.

ಹೀಗೆ ಚಿತ್ರದುರ್ಗ ಪಾಳೆಯಗಾರರ ಕಾಲದಲ್ಲಿ ಮೂರ್ತಿಶಿಲ್ಪ ಹಲವು ಪ್ರಕಾರಗಳಲ್ಲಿ ವೈವಿಧ್ಯಮಯವಾಗಿ ಬೆಳೆದುಬಂದಿದೆ. ಈ ಶಿಲ್ಪಗಳಲ್ಲಿ ಸಂಪ್ರದಾಯಬದ್ಧತೆಗಿಂತ ಮುಕ್ತಧೋರಣೆ ಯನ್ನು ಗುರುತಿಸಬಹುದು. ಇಂತಹ ಧೋರಣೆಗಳಿಂದ ಮಾತ್ರ ಯಾವುದೇ ಕಲಾಪ್ರಕಾರಕ್ಕೆ ಹೊಸ ಆಯಾಮವನ್ನು ನೀಡಿ ಅದನ್ನು ಬೆಳೆಸಲು ಸಾಧ್ಯ. ಆ ನಿಟ್ಟಿನಲ್ಲಿ ಪಾಳೆಯಗಾರರ ಶಿಲ್ಪಕಲೆ ರೂಢಿಬದ್ಧವಾಗಿರದೆ, ವೈವಿಧ್ಯತೆಯನ್ನು ಅಳವಡಿಸಿಕೊಂಡು ಕರ್ನಾಟಕದ ಮೂರ್ತಿಶಿಲ್ಪ ಕ್ಷೇತ್ರಕ್ಕೆ ಹೊಸ ಆಯಾಮವನ್ನು ಒದಗಿಸಿದೆ ಎಂದು ಹೇಳಬಹುದು.

ಭಾರತದ ಇತಿಹಾಸದಲ್ಲಿ ವಾಸ್ತುಶಿಲ್ಪ ಮತ್ತು ಮೂರ್ತಿಶಿಲ್ಪ ವ್ಯಾಪಕವಾಗಿ ಬೆಳೆದುಬಂದಂತೆ ಚಿತ್ರಕಲೆ ಬೆಳೆದಿಲ್ಲ. ಹಾಗಾಗಿ ಚರಿತ್ರೆಯ ಕೆಲವು ಕಾಲಘಟ್ಟಗಳಲ್ಲಿ ಮಾತ್ರ ಚಿತ್ರಕಲಾ ಪ್ರಕಾರಗಳನ್ನು ಕಾಣಬಹುದಾಗಿದೆ. ವಿಜಯನಗರದ ಅಸ್ತಿತ್ವದೊಂದಿಗೆ ಎಲ್ಲಾ ಲಲಿತ ಕಲಾ ಪ್ರಕಾರಗಳು ಸುಸ್ಪಷ್ಟವಾಗಿ ಬೆಳೆದುಬಂದವು. ಅವುಗಳಲ್ಲಿ ಚಿತ್ರಕಲೆಯೂ ಒಂದು. ವಿಜಯನಗರದ ಜೊತೆಗೆ ಪಾಳೆಯಗಾರರು ಕೂಡ ಆ ಪರಂಪರೆಯನ್ನು ಬೆಳೆಸಿರುವುದನ್ನು ಕಾಣಬಹುದು. ಚಿತ್ರದುರ್ಗ ಪಾಳೆಯಗಾರರೂ ಕೂಡ ಅವರಲ್ಲಿ ಒಬ್ಬರಾಗಿದ್ದಾರೆ. ಇವರ ಕಾಲದಲ್ಲೂ ವಾಸ್ತು ಮತ್ತು ಮೂರ್ತಿಶಿಲ್ಪಗಳಿಗೆ ಹೋಲಿಸಿದರೆ ತೀರಾ ನಗಣ್ಯವಾಗಿ ಹಿರಿಯೂರಿನ ತೇರುಮಲ್ಲೇಶ್ವರ ಮತ್ತು ಚಂದ್ರವಳ್ಳಿಯ ಅಂಕಲಿಮಠಗಳಲ್ಲಿ ಚಿತ್ರಕಲೆ (ವರ್ಣ) ಇದೆ.

ಇವುಗಳಲ್ಲಿ ಅಂಕಲಿಮಠದ ಚಿತ್ರಕಲೆ ಬಹುಮಟ್ಟಿಗೆ ನಾಶವಾಗಿದ್ದು, ಅಂಜಲಿಮುದ್ರೆಯಲ್ಲಿರುವ ವ್ಯಕ್ತಿ ಹಾಗು ಕೆಲವು ಪುಷ್ಪಾಕೃತಿಗಳು ಮಾತ್ರ ಗೋಚರಿಸುತ್ತವೆ. ವ್ಯಕ್ತಿಯ ವೇಷಭೂಷಣಗಳನ್ನು ಅನುಲಕ್ಷಿಸಿ ಅದು ವಿಜಯನಗರ ಶೈಲಿಯ ಪಾಳೆಯಗಾರರ ರಚನೆಯೆಂಬುದು ಸ್ಪಷ್ಟವಾಗುತ್ತದೆ. ಹಾಗೆಯೇ ಹಿರಿಯೂರಿನ ತೇರುಮಲ್ಲೇಶ್ವರ ದೇವಾಲಯದಲ್ಲಿ ತಕ್ಕಮಟ್ಟಿಗೆ ಚಿತ್ರಕಲೆ ಉಳಿದಿದ್ದು, ಹಂಪಿಯ ವಿರೂಪಾಕ್ಷ ದೇವಾಲಯದಲ್ಲಿರುವ ಚಿತ್ರಕಲೆಯನ್ನು ಹೋಲುತ್ತದೆಯಾದರೂ ವಿಷಯ ವೈವಿಧ್ಯತೆಯಿಂದ ಕೂಡಿದೆ. ಇವುಗಳಲ್ಲಿ ವೃಷಭಾರೂಢ ಉಮಾಮಹೇಶ್ವರ, ಬೇಡರಕಣ್ಣಪ್ಪ, ಯುದ್ಧದ ದೃಶ್ಯಗಳು, ಪ್ರಾಣಿಗಳಿಂದ ತುಂಬಿರುವ ಅರಣ್ಯ, ಯಜ್ಞದ ದೃಶ್ಯಗಳು, ಗೋಪಿಕಾ ವಸ್ತ್ರಾಪಹರಣ, ದಿಕ್ಪಾಲಕರು ಮುಂತಾದ ದೃಶ್ಯಗಳಿದ್ದು, ವೈವಿಧ್ಯತೆಯಿಂದ ಕೂಡಿದೆ.

ತೇರುಮಲ್ಲೇಶ್ವರ ದೇವಾಲಯದಲ್ಲಿನ ಚಿತ್ರಗಳಲ್ಲಿ ವಿಜಯನಗರ ಶೈಲಿಯ ಜೊತೆಗೆ ಪ್ರಾದೇಶಿಕ ಶೈಲಿಯೂ ಬೆರೆತಿರುವುದನ್ನು ಗುರುತಿಸಬಹುದು. ಅಂದರೆ ಇವು ಪಾಳೆಯಗಾರರ ಕಾಲದಲ್ಲಿ ರಚನೆಯಾಗಿರುವುದರಿಂದ ಸಮಕಾಲೀನ ವೇಷಭೂಷಣ, ಉಡುಗೆ-ತೊಡುಗೆಗಳಲ್ಲೇ ಅರಸರು, ಸೈನಿಕರು, ದೇವತೆಗಳನ್ನು ಚಿತ್ರಿಸಿರುವುದು ವಿಶಿಷ್ಟವೆನಿಸುತ್ತದೆ. ಅಷ್ಟೇ ಅಲ್ಲ ಬೇಡರಕಣ್ಣಪ್ಪನನ್ನು ಕೂಡ ಇದೇ ರೀತಿಯಲ್ಲಿ ಚಿತ್ರಿಸಲಾಗಿದೆ. ಹೀಗೆ ಪ್ರಾಚೀನ ಸಂಗತಿಗಳನ್ನು ರಚಿಸುವಾಗ ಸಮಕಾಲೀನ ಲಕ್ಷಣಗಳಲ್ಲಿ ಚಿತ್ರಗಳನ್ನು ರೂಪಿಸಿರುವುದು ಗಮನಾರ್ಹವೆನಿಸುತ್ತದೆ. ಚಿತ್ರಕಲೆಯ ಬೆಳವಣಿಗೆಗೆ ಮತ್ತು ಹೊಸ ಆಯಾಮಕ್ಕೆ ಇಂತಹ ಸಂಗತಿಗಳು ಕಾರಣವಾಗುತ್ತವೆ. ಅದನ್ನು ಪಾಳೆಯಗಾರರು ಸಮರ್ಥವಾಗಿ ನೆರವೇರಿಸಿದ್ದಾರೆ ಎಂಬುದನ್ನು ಗುರುತಿಸಬಹುದು.

ಒಟ್ಟಿನಲ್ಲಿ ಪ್ರಸ್ತುತ ಅಧ್ಯಯನದ ಮೂಲಕ ಕರ್ನಾಟಕದ ಸಾಂಸ್ಕೃತಿಕ ಚರಿತ್ರೆಯ ಒಂದು ಕಾಲಘಟ್ಟದ ಮೇಲೆ ಬೆಳಕನ್ನು ಬೀರುವ ಪ್ರಯತ್ನವನ್ನು ಮಾಡಲಾಗಿದೆ. ಆ ಪ್ರಯತ್ನವು ಕರ್ನಾಟಕದ ಸಾಂಸ್ಕೃತಿಕ ಇತಿಹಾಸವನ್ನು ತಕ್ಕಮಟ್ಟಿಗೆ ವಿಕಸಿಸುವುದೆಂಬ ಆಶಯವಿದೆ. ಆ ಹಿನ್ನೆಲೆಯಲ್ಲಿ ವಿಜಯನಗರ ಸಾಮ್ರಾಜ್ಯದ ಪತನಾ ನಂತರ ಹೆಚ್ಚಾಗಿ ಪ್ರವರ್ಧಮಾನಕ್ಕೆ ಬಂದ ಚಿತ್ರದುರ್ಗ ಪಾಳೆಯಗಾರರು ರಾಜಕೀಯ ಮತ್ತು ಸಾಂಸ್ಕೃತಿಕವಾಗಿ ನಿರ್ವಹಿಸಿದ ಪಾತ್ರ ವಿಶೇಷವಾಗಿದೆ. ಚರಿತ್ರೆಯ ರೋಚಕ ಪುಟಗಳಲ್ಲಿ ಸ್ಥಾನ ಪಡೆಯಬಹುದಾದ ರಾಜಕೀಯ ಘಟನಾವಳಿಗಳಿಗೆ ಸಾಕ್ಷಿಯಾಗಿ ನಿಭಾಯಿಸಿದ ಪಾಳೆಯಗಾರರ ಆ ಸಂಗತಿಗಳ ಬಗೆಗೆ ಬಹುಮಟ್ಟಿಗೆ ಅಧ್ಯಯನಗಳು ನಡೆದಿದ್ದರೂ, ಅವರ ಸಾಂಸ್ಕೃತಿಕ ಇತಿಹಾಸವನ್ನು ಕುರಿತಾಗಿ ನಡೆಸಿದ ಅಧ್ಯಯನಗಳು ತೀರಾ ವಿರಳವೆಂದೇ ಹೇಳಬಹುದು. ನಡೆದಿದ್ದರೂ ಅವು ಕೆಲವೊಂದು ಸಂಗತಿಗಳ ಕುರಿತಾದ ಬಿಡಿ ಅಧ್ಯಯನಗಳೇ ಆಗಿವೆ.

ಈ ಹಿನ್ನೆಲೆಯಲ್ಲಿ ಪಾಳೆಯಗಾರರ ಸಾಂಸ್ಕೃತಿಕ ಚರಿತ್ರೆಯ ಮಹತ್ವದ ಪ್ರತೀಕಗಳಾಗಿರುವ ಕಲೆ ಮತ್ತು ವಾಸ್ತುಶಿಲ್ಪದ ಕುರಿತಾಗಿ ನಡೆಸಿದ ಅಧ್ಯಯನದಲ್ಲಿ ಆ ಎಲ್ಲಾ ಸ್ಮಾರಕಗಳ ಸಮೀಕ್ಷೆ, ದಾಖಲೀಕರಣ ಮತ್ತು ವಾಸ್ತು ವೈಶಿಷ್ಟ್ಯಗಳನ್ನು ಗುರುತಿಸುವುದರ ಜೊತೆಗೆ, ಅವುಗಳ ಸಾಂಸ್ಕೃತಿಕ ಮಹತ್ವವನ್ನು ತಕ್ಕಮಟ್ಟಿಗೆ ವಿಮರ್ಶಾತ್ಮಕವಾಗಿ ಪರಿಶೀಲಿಸಲಾಗಿದೆ. ಅದರ ಫಲಿತವೆಂಬಂತೆ ಕರ್ನಾಟಕದ ಪಾಳೆಯಗಾರರಲ್ಲಿಯೇ ಕಲೆ ಮತ್ತು ವಾಸ್ತುಶಿಲ್ಪದ ಪೋಷಣೆಯ ದೃಷ್ಟಿಯಿಂದ ಚಿತ್ರದುರ್ಗ ಪಾಳೆಯಗಾರರಿಗೆ ಅಗ್ರಸ್ಥಾನವೆಂಬುದು ಗೋಚರಿಸುತ್ತದೆ. ಆ ಮೂಲಕ ಕರ್ನಾಟಕದ ವಾಸ್ತುಶಿಲ್ಪ ಪರಂಪರೆಯನ್ನು ಮುನ್ನೆಡೆಸಿ, ಅದನ್ನು ಶಿಷ್ಟ ರೂಪದಿಂದ ಸಾಮಾನ್ಯೀಕರಿಸಿ, ಜನಸಮುದಾಯವೂ ಕೂಡ ದೇವಾಲಯದಂತಹ ಕಟ್ಟಡಗಳನ್ನು ಕಟ್ಟಲು ಅವಕಾಶ ಮಾಡಿಕೊಟ್ಟ ಕೀರ್ತಿ ಪಾಳೆಯಗಾರರಿಗೆ ಸಲ್ಲುತ್ತದೆ.

ಪ್ರಸ್ತುತ ಅಧ್ಯಯನವು ಬಹುಮಟ್ಟಿಗೆ ಪಾಳೆಯಗಾರರ ಕಾಲದ ಎಲ್ಲಾ ಧಾರ್ಮಿಕ ಮತ್ತು ಲೌಕಿಕ ಕಟ್ಟಡಗಳ ವಿವೇಚನೆಯನ್ನು ಒಳಗೊಂಡಿದ್ದರಿಂದ ಕೆಲವು ಸಂಗತಿಗಳ ಬಗೆಗೆ ಹೆಚ್ಚಿನ ವಿಶ್ಲೇಷಣೆಗೆ ಆಸ್ಪದವಾಗಲಿಲ್ಲ. ವಿಶೇಷವಾಗಿ ಲೌಕಿಕ ಕಟ್ಟಡಗಳಲ್ಲಿ ಬಾವಿ, ಪುಷ್ಕರಣಿ ಮತ್ತು ಹೊಂಡಗಳ ಕುರಿತಾಗಿ ಪ್ರತ್ಯೇಕ ಅಧ್ಯಯನದ ಅವಶ್ಯಕತೆ ಬಿಂಬಿತವಾಗುತ್ತದೆ. ಜೊತೆಗೆ ಈ ಪ್ರದೇಶದಲ್ಲಿ ಹೆಚ್ಚಾಗಿ ವೈಷ್ಣವ ಮತ್ತು ಆಂಜನೇಯ ದೇವಾಲಯಗಳು ಇರುವುದರಿಂದ ಆ ಪಂಥಗಳ ಕುರಿತಾಗಿಯೂ ಮತ್ತು ಪಾಳೆಯಗಾರರ ಕಾಲದ ದೇವಾಲಯಗಳ ಉಬ್ಬುಶಿಲ್ಪಗಳ ಕುರಿತಾಗಿ ಪ್ರತ್ಯೇಕವಾದ ಅಧ್ಯಯನಗಳನ್ನು ಮಾಡಬಹುದಾದ ಸಾಧ್ಯತೆಗಳನ್ನು ಗುರುತಿಸಬಹುದು. ಇಂತಹವುಗಳ ಅಧ್ಯಯನ ಪಾಳೆಯಗಾರರ ರಾಜಕೀಯ ಮತ್ತು ಸಾಂಸ್ಕೃತಿಕ ಮಹತ್ವವನ್ನು ಬಿಂಬಿಸಲು ನೆರವಾಗುತ್ತವೆ ಎಂದೇ ಹೇಳಬಹುದು.

ಅನುಬಂಧಗಳು

೧. ದೇವಾಲಯಗಳ ನಕ್ಷೆ

೨. ತಲವಿನ್ಯಾಸ

೩. ಕೋಷ್ಟಕಗಳು

೪. ಸಂಕ್ಷಿಪ್ತ ರೂಪಗಳು


೫. ಗ್ರಂಥಸೂಚಿ

೬. ಛಾಯಾಚಿತ್ರಗಳು


೧. ದೇವಾಲಯಗಳ ನಕ್ಷೆ


ಕೊಣಚಗಲ್
ಜಗಲೂರು
ಹರಿಹರ
ದಾವಣಗೆರೆ
ನೀರ್ಥಡಿ
ಹಂಪನೂರು
ಹಳವುದರ
ಚಿತ್ರದುರ್ಗ
ಚಳ್ಳಕೆರೆ
ಕುಂದರ್ಪಿ
ಹುಲ್ಲೂರು
ಚಿತ್ರಹಳ್ಳಿ
ನುಲೆನೂರು
ಅಂಬಲಗೆರೆ
ಹಿರಿಯೂರು
ಹೊಸದುರ್ಗ
ಮಾರಿಕಣಿವೆ
ತುಮಕೂರು


೨. ತಲವಿನ್ಯಾಸ




ಶ್ರೀ ಉತ್ಸವಾಂಬೆ ದೇವಸ್ಥಾನ, ಚಿತ್ರದುರ್ಗ




ಶ್ರೀ ರಂಗನಾಥಸ್ವಾಮಿ ದೇವಸ್ಥಾನ, ಅಂಬಲಗೆರೆ




ಶ್ರೀ ತೇರುಮಲ್ಲೇಶ್ವರ ದೇವಸ್ಥಾನ, ಹಿರಿಯೂರು




ಶ್ರೀ ವೇಣುಗೋಪಾಲಸ್ವಾಮಿ ದೇವಸ್ಥಾನ, ಹೊಳಲ್ಕೆರೆ




ಶ್ರೀ ವೆಂಕಟರಮಣ ದೇವಸ್ಥಾನ, ಚಿತ್ರದುರ್ಗ




ಶ್ರೀ ರಂಗನಾಥಸ್ವಾಮಿ ದೇವಸ್ಥಾನ, ನೀರ್ಥಡಿ



ಶ್ರೀ ರಂಗನಾಥ ದೇವಸ್ಥಾನ, ಹಂಪನೂರು



ಶ್ರೀ ಸಿದ್ಧಲಿಂಗೇಶ್ವರಸ್ವಾಮಿ ದೇವಸ್ಥಾನ, ಹುಲ್ಲೂರು



ಶ್ರೀ ಲಕ್ಷ್ಮಿರಂಗನಾಥಸ್ವಾಮಿ ದೇವಸ್ಥಾನ, ಹೊರಕೆರೆದೇವರಪುರ

೩. ಕೋಷ್ಟಕಗಳು

೧. ಪ್ರಮುಖ ದೇವಾಲಯಗಳು

ಕ್ರ.ಸಂ.	ದೇವಾಲಯಗಳ ಹೆಸರು	ಸ್ಥಳ	ತಲವಿನ್ಯಾಸ	ವಾಸ್ತುಶೈಲಿ	ಕಾಲ	ಪಂಥ	ನಿರ್ಮಾಣಸಾಮಾಗ್ರಿ
೧.	ವೆಂಕಟರಮಣಸ್ವಾಮಿ	ಚಿತ್ರದುರ್ಗ	ಗರ್ಭಗೃಹ, ಅಂತರಾಳ ನವರಂಗ, ಮಹಾಮಂಟಪ ಗರುಡನಗುಡಿ, ಧ್ವಜಸ್ತಂಭ ಬಲಿಪೀಠ, ಪ್ರಾಂಗಣ ಪ್ರಾಕಾರ, ದೀಪಸ್ತಂಭ, ಪುಷ್ಕರಣಿ	ವಿಜಯನಗರ	೨ನೇ ಮದಕರಿನಾಯಕ	ವೈಷ್ಣವ	ಕಣಶಿಲೆ, ಇಟ್ಟಿಗೆ, ಗಾರೆ
೨.	ಚನ್ನಕೇಶವ	ಚಿತ್ರದುರ್ಗ	ಗರ್ಭಗೃಹ, ಸುಖನಾಸಿ ನವರಂಗ, ಮುಖಮಂಟಪ ಪ್ರಾಂಗಣ, ಪ್ರಾಕಾರ ಮಹಾದ್ವಾರ, ಮಂಟಪ ದೀಪಸ್ತಂಭ	ವಿಜಯನಗರ	ಪಾಳೆಯಗಾರರು(ಬಹುಶಃ ರಾಜಾ ಮದಕರಿನಾಯ)	ವೈಷ್ಣವ	ಕಣಶಿಲೆ, ಇಟ್ಟಿಗೆ, ಗಾರೆ
೩	ಗೋಪಾಲಸ್ವಾಮಿ	ಚಿತ್ರದುರ್ಗ	ಗರ್ಭಗೃಹ, ಅಂತರಾಳ ಪ್ರದಕ್ಷಿಣಾಪಥ, ಸಭಾ ಮಂಟಪ, ಮುಖ ಮಂಟಪ, ಪ್ರಕಾರ, ಬಲಿಪೀಠ, ಧ್ವಜಕಟ್ಟೆ	ವಿಜಯನಗರ	ಪಾಳೆಯಗಾರರು (ಜೀರ್ಣೋದ್ಧಾರ)	ವೈಷ್ಣವ	ಕಣಶಿಲೆ

ಕ್ರಸಂ.	ದೇವಾಲಯಗಳ ಹೆಸರು	ಸ್ಥಳ	ತಲವಿನ್ಯಾಸ	ವಾಸ್ತುಶೈಲಿ	ಕಾಲ	ಪಂಥ	ನಿರ್ಮಾಣಸಾಮಾಗ್ರಿ
೪	ರಂಗನಾಥಸ್ವಾಮಿ	ಹಂಪನೂರು	ಗರ್ಭಗೃಹ, ಅಂತರಾಳ, ಸಭಾಮಂಟಪ, ಮುಖ ಮಂಟಪ, ದೀಪಸ್ತಂಭ	ವಿಜಯನಗರ	ಪಾಳೆಯಗಾರರು	ವೈಷ್ಣವ	ಕಣಶಿಲೆ, ಇಟ್ಟಿಗೆ, ಗಾರೆ
೫	ರಂಗನಾಥಸ್ವಾಮಿ	ನೀರ್ಥಡಿ	ಗರ್ಭಗೃಹ, ಅಂತರಾಳ ಅರ್ಧಮಂಟಪ, ನವ ರಂಗ, ಮುಖಮಂಟಪ ಬಲಿಪೀಠ, ಪ್ರಾಕಾರ ಪ್ರವೇಶಮಹಾದ್ವಾರ ದೀಪಸ್ತಂಭ	ವಿಜಯನಗರ	ಮತ್ತಿತಿಮ್ಮಣ್ಣನಾಯಕ	ವೈಷ್ಣವ	ಕಣಶಿಲೆ, ಇಟ್ಟಿಗೆ, ಗಾರೆ
೬	ಉತ್ಸವಾಂಬೆ	ಚಿತ್ರದುರ್ಗ	ಗರ್ಭಗೃಹ, ಅಂತ ರಾಳ, ಸಭಾಮಂಟಪ ಮುಖಮಂಟಪ, ಪ್ರಕಾರ, ಮಹಾದ್ವಾರ ಮಂಟಪ ಗೋಪುರ, ದೀಪಸ್ತಂಭ ಉಯ್ಯಾಲೆ ಕಂಭ	ವಿಜಯನಗರ	೨ನೇ ಮದಕರಿನಾಯಕ	ಶಾಕ್ತ	ಕಣಶಿಲೆ, ಇಟ್ಟಿಗೆ, ಗಾರೆ

ಕ್ರಸಂ.	ದೇವಾಲಯಗಳ ಹೆಸರು	ಸ್ಥಳ	ತಲವಿನ್ಯಾಸ	ವಾಸ್ತುಶೈಲಿ	ಕಾಲ	ಪಂಥ	ನಿರ್ಮಾಣಸಾಮಾಗ್ರಿ
೭	ಏಕನಾಥೇಶ್ವರಿ	ಚಿತ್ರದುರ್ಗ	ಗರ್ಭಗೃಹ, ಅಂತರಾಳ ಮುಖಮಂಟಪ, ದೀಪ ಸ್ತಂಭ	ವಿಜಯನಗರ	ಮತ್ತಿತಿಮ್ಮಣ್ಣನಾಯಕ	ಶಾಕ್ತ	ಕಣಶಿಲೆ, ಇಟ್ಟಿಗೆ, ಗಾರೆ
೮	ತೇರುಮಲ್ಲೇಶ್ವರ	ಹಿರಿಯೂರು	ಗರ್ಭಗೃಹ, ಅಂತರಾಳ ಪರಿವಾರ ದೇವತೆಗಳ ಮಂಟಪ, ನವರಂಗ ಮಹಾರಂಗಮಂಟಪ ಮುಖಮಂಟಪ, ನವ ಗ್ರಹ ಮಂಟಪ, ದೀಪ ಸ್ತಂಭ, ಮಹಾದ್ವಾರ ಮಂಟಪ, ಗೋಪುರ ದೀಪಸ್ತಂಭ, ಉಯ್ಯಾಲೆ ಕಂಭ	ವಿಜಯನಗರ	ಪಾಳೆಗಾರರು(ಹಿರಿಯ ಮದಕರಿನಾಯಕ)	ಶೈವ	ಕಣಶಿಲೆ, ಇಟ್ಟಿಗೆ, ಗಾರೆ
೯	ವೇಣುಗೋಪಾಲಸ್ವಾಮಿ	ಹೊಳಲ್ಕೆರೆ	ಗರ್ಭಗೃಹ, ಅಂತರಾಳ ಸಭಾಮಂಟಪ, ಮಹಾ ರಂಗಮಂಟಪ	ವಿಜಯನಗರ	ಮತ್ತಿತಿಮ್ಮಣ್ಣನಾಯಕ	ವೈಷ್ಣವ	ಕಣಶಿಲೆ, ಇಟ್ಟಿಗೆ, ಗಾರೆ

ಕ್ರಸಂ.	ದೇವಾಲಯಗಳ ಹೆಸರು	ಸ್ಥಳ	ತಲವಿನ್ಯಾಸ	ವಾಸ್ತುಶೈಲಿ	ಕಾಲ	ಪಂಥ	ನಿರ್ಮಾಣಸಾಮಾಗ್ರಿ
೧೦.	ರಂಗನಾಥಸ್ವಾಮಿ	ಅಂಬಲಗೆರೆ	ಗರ್ಭಗೃಹ, ಅಂತರಾಳ ಸಭಾಮಂಟಪ, ಮಹಾ ರಂಗಮಂಟಪ, ಮುಖ ಮಂಟಪ, ಪ್ರಾಕಾರ ಮಹಾದ್ವಾರ ಮಂಟಪ ದೀಪಸ್ತಂಭ, ಗರುಡ ಸ್ತಂಭ, ಉಯ್ಯಾಲೆಕಂಬ	ವಿಜಯನಗರ	ಪಾಳೆಯಗಾರರು (ಜೀರ್ಣೋದ್ಧಾರ)	ವೈಷ್ಣವ	ಕಣಶಿಲೆ, ಇಟ್ಟಿಗೆ, ಗಾರೆ
೧೧	ಸಿದ್ಧೇಶ್ವರ	ಹುಲ್ಲೂರು	ಗರ್ಭಗೃಹ, ಅಂತರಾಳ ಅರ್ಧಮಂಟಪ, ಮಹಾ ಮಂಟಪ, ಮುಖಮಂಟಪ ದೀಪಸ್ತಂಭ, ಉಯ್ಯಾಲೆ ಕಂಬ	ವಿಜಯನಗರ	೨ನೇ ಮದಕರಿನಾಯಕ	ಶೈವ	ಕಣಶಿಲೆ, ಇಟ್ಟಿಗೆ, ಗಾರೆ
೧೨	ಲಕ್ಷ್ಮೀರಂಗನಾಥಸ್ವಾಮಿ	ಹೊರಕೇರೆ ದೇವರಪುರ	ಗರ್ಭಗೃಹ, ಅಂತರಾಳ ಸಭಾಮಂಟಪ, ಮಹಾ ರಂಗಮಂಟಪ, ಮುಖ ಮಂಟಪಗಳು, ಪ್ರಾಕಾರ ಮಹಾದ್ವಾರಮಂಟಪ ದೀಪಸ್ತಂಭ, ಗರುಡಸ್ತಂಭ ಉಯ್ಯಾಲೆಕಂಭ	ವಿಜಯನಗರ	೨ನೇ ಮದಕರಿನಾಯಕ ಬಿಚ್ಚುಗತ್ತಿ ಭರಮಣ್ಣ ನಾಯಕ	ವೈಷ್ಣವ	ಕಣಶಿಲೆ, ಇಟ್ಟಿಗೆ, ಗಾರೆ

ಕ್ರಸಂ.	ದೇವಾಲಯಗಳ ಹೆಸರು	ಸ್ಥಳ	ತಲವಿನ್ಯಾಸ	ವಾಸ್ತುಶೈಲಿ	ಕಾಲ	ಪಂಥ	ನಿರ್ಮಾಣಸಾಮಾಗ್ರಿ
೧೩	ಲಕ್ಷ್ಮೀರಂಗನಾಥಸ್ವಾಮಿ	ಗಿಲಕೇನಹಳ್ಳಿ	ಗರ್ಭಗೃಹ, ಸುಖನಾಸಿ ನವರಂಗ, ಮುಖಮಂಟಪ ಪ್ರಾಕಾರ, ಪ್ರವೇಶಮಹಾ ದ್ವಾರ, ಮಹಾದ್ವಾರಮಂಟಪ ಉಯ್ಯಾಲೆಕಂಭ, ದೀಪಸ್ತಂಭ	ವಿಜಯನಗರ	ಮತ್ತಿತಿಮ್ಮಣ್ಣನಾಯಕ	ವೈಷ್ಣವ	ಕಣಶಿಲೆ, ಇಟ್ಟಿಗೆ, ಗಾರೆ
೧೪	ಆಂಜನೇಯಸ್ವಾಮಿ	ಹುಲ್ಲೂರು	ಗರ್ಭಗೃಹ, ಅಂತರಾಳ, ಮುಖಮಂಟಪ, ಪ್ರಾಕಾರ ದೀಪಸ್ತಂಭ	ವಿಜಯನಗರ	೨ನೇ ಮದಕರಿನಾಯಕ	ಜನಪ್ರಿಯ (ಇತರೆ ದೇವಾಲಯ)	ಕಣಶಿಲೆ, ಇಟ್ಟಿಗೆ, ಗಾರೆ
೧೫	ರಂಗನಾಥಸ್ವಾಮಿ	ಕೊಣಚಗಲ್ಲು	ಗರ್ಭಗೃಹ, ಸಭಾಮಂಟಪ ಪುಷ್ಕರಣಿ	ವಿಜಯನಗರ	ಹಿರೇಮದಕರಿನಾಯಕ	ವೈಷ್ಣವ	ಕಣಶಿಲೆ
೧೬	ಆಂಜನೇಯ	ತಾಳ್ಯ	ಗರ್ಭಗೃಹ, ಅಂತರಾಳ ಸಭಾಮಂಟಪ, ಪ್ರಾಕಾರ ದೀಪಸ್ತಂಭ	ವಿಜಯನಗರ	ಪಾಳೆಗಾರರು	ಜನಪ್ರಿಯ (ಇತರೆ ದೇವಾಲಯ)	ಕಣಶಿಲೆ, ಇಟ್ಟಿಗೆ, ಗಾರೆ
೧೭	ಮಾರಿಕಾಂಭ	ಮಾರಿಕಣಿವೆ	ಗರ್ಭಗೃಹ, ಅಂತರಾಳ ಸಭಾಮಂಟಪ, ಮುಖ ಮಂಟಪ	ವಿಜಯನಗರ	ಪಾಳೆಗಾರರು	ಶಾಕ್ತ	ಕಣಶಿಲೆ, ಇಟ್ಟಿಗೆ ಗಾರೆ

ಕ್ರಸಂ.	ದೇವಾಲಯಗಳ ಹೆಸರು	ಸ್ಥಳ	ತಲವಿನ್ಯಾಸ	ವಾಸ್ತುಶೈಲಿ	ಕಾಲ	ಪಂಥ	ನಿರ್ಮಾಣಸಾಮಾಗ್ರಿ
೧೮	ವೀರಭದ್ರಸ್ವಾಮಿ	ಕುಂದುರ್ಪಿ	ಗರ್ಭಗೃಹ, ಅಂತರಾಳ ನವರಂಗ, ಮಹಾರಂಗ ಮಂಟಪ, ಮುಖಮಂಟಪ	ವಿಜಯನಗರ	ಪಾಳೆಗಾರರು (ಜೀರ್ಣೋದ್ಧಾರ)	ಶೈವ	ಕಣಶಿಲೆ, ಇಟ್ಟಿಗೆ, ಗಾರೆ
೧೯.	ವೀರಭದ್ರಸ್ವಾಮಿ	ಹೊಳಲ್ಕೆರೆ	ಗರ್ಭಗೃಹ(ತ್ರಿಕೂಟ) ಅಂತರಾಳ, ಸಭಾಮಂಟಪ ಪ್ರವೇಶಮಂಟಪ, ಪ್ರಾಕಾರ	ವಿಜಯನಗರ	ಪಾಳೆಗಾರರು (ಜೀರ್ಣೋದ್ಧಾರ)	ಶೈವ	ಕಣಶಿಲೆ, ಇಟ್ಟಿಗೆ, ಗಾರೆ

೨. ಇತರೆ ದೇವಾಲಯಗಳು : ಶೈಲಿ: ವಿಜಯನಗರ, ಕಾಲ: ಪಾಳೆಯಗಾರರು

ಕ್ರಸಂ. ದೇವಾಲಯಗಳ ಹೆಸರು	ಸ್ಥಳ	ಪಂಥ
ಲಕ್ಷ್ಮೀವೆಂಕಟೇಶ್ವರ	ಚಿತ್ರದುರ್ಗ	ವೈಷ್ಣವ
ರಂಗಯ್ಯನಬಾಗಿಲ ಶ್ರೀರಾಮ	ಚಿತ್ರದುರ್ಗ	ವೈಷ್ಣವ
ರಂಗನಾಥಸ್ವಾಮಿ	ಪಂಡರಹಳ್ಳಿ	ವೈಷ್ಣವ
ರಾಮೇಶ್ವರ	ರಾಮದುರ್ಗ	ವೈಷ್ಣವ
ರಾಮೇಶ್ವರ	ಬಿಳಿಚೋಡು	ವೈಷ್ಣವ
ರಂಗನಾಥಸ್ವಾಮಿ	ಕೊರಟಗೆರೆ	ವೈಷ್ಣವ
ಲಕ್ಷ್ಮೀವೆಂಕಟರಮಣ	ಹಿರಿಯೂರು	ವೈಷ್ಣವ
ರಂಗನಾಥಸ್ವಾಮಿ	ಅಬ್ಬಿನಹೊಳೆ	ವೈಷ್ಣವ
ರಂಗನಾಥಸ್ವಾಮಿ	ಬಬ್ಬೂರು	ವೈಷ್ಣವ
ತಿಮ್ಮಪ್ಪ(ವೆಂಕಟೇಶ್ವರ)	ಉಪ್ಪಳಗೆರೆ	ವೈಷ್ಣವ
ರಂಗನಾಥಸ್ವಾಮಿ	ನಂದಿಹಳ್ಳಿ	ವೈಷ್ಣವ
ವೆಂಕಟೇಶ್ವರ	ಜಾನಕಲ್ಲು	ವೈಷ್ಣವ
ರಂಗನಾಥಸ್ವಾಮಿ	ಜೋಡಿರಂಗಾಪುರ	ವೈಷ್ಣವ
ರಂಗನಾಥಸ್ವಾಮಿ	ಶ್ರೀರಂಗಪುರ	ವೈಷ್ಣವ
ಗಾರೆಬಾಗಿಲ ಈಶ್ವರ	ಚಿತ್ರದುರ್ಗ	ಶೈವ
ಉಮಾಮಹೇಶ್ವರ	ಚಿತ್ರದುರ್ಗ	ಶೈವ
ನೀಲಕಂಠೇಶ್ವರ	ಚಿತ್ರದುರ್ಗ	ಶೈವ
ಶಂಕರನಾರಾಯಣ	ಚಿತ್ರದುರ್ಗ	ಶೈವ
ವಿನಾಯಕ(ಬೆಟ್ಟ)	ಚಿತ್ರದುರ್ಗ	ಶೈವ
ಒಂಟಿಕಲ್ಲುಬಸವ	ಚಿತ್ರದುರ್ಗ	ಶೈವ
ಕರವರ್ತೀಶ್ವರ	ಚಿತ್ರದುರ್ಗ	ಶೈವ
ಭೀಮೇಶ್ವರ	ಭೀಮಸಮುದ್ರ	ಶೈವ
ಶಿವಾಲಯ	ಕಾವಾಡಿಗರಹಟ್ಟಿ	ಶೈವ
ಬಯಲುಗಣಪತಿ	ಹೊಳಲ್ಕೆರೆ	ಶೈವ
ನೀಲಕಂಠೇಶ್ವರ, ರಾಮೇಶ್ವರ	ಬಿಳಿಚೋಡು	ಶೈವ
ವೀರಭದ್ರಸ್ವಾಮಿ	ಹಿರಿಯೂರು	ಶೈವ

ವೀರಭದ್ರಸ್ವಾಮಿ	ಹೊಸದುರ್ಗ	ಶೈವ
ಶಂಕರಲಿಂಗೇಶ್ವರ	ಜಾನಕಲ್ಲು	ಶೈವ
ವೀರಭದ್ರಸ್ವಾಮಿ	ಜಾನಕಲ್ಲು	ಶೈವ
ವೀರಭದ್ರಸ್ವಾಮಿ	ಬಾಗೂರು	ಶೈವ
ಬಸವೇಶ್ವರ	ಮಾಯಕೊಂಡ	ಶೈವ
ಕಾಳಿಕಮ್ಮಟೇಶ್ವರಿ	ಚಿತ್ರದುರ್ಗ	ಶಾಕ್ತ
ಚಳ್ಳಕೆರೆಮ್ಮ	ಚಳ್ಳಕೆರೆ	ಶಾಕ್ತ
ಪೇಟೆ ಆಂಜನೇಯ	ಚಿತ್ರದುರ್ಗ	ಜನಪ್ರಿಯ
ರಂಗಯ್ಯನಬಾಗಿಲ ಆಂಜನೇಯ	ಚಿತ್ರದುರ್ಗ	ಜನಪ್ರಿಯ
ಒನಕೆಕಿಂಡಿ ಹನುಮಂತ	ಚಿತ್ರದುರ್ಗ	ಜನಪ್ರಿಯ
ಆಂಜನೇಯಸ್ವಾಮಿ	ಪಿಳ್ಳೇಕೇರನಹಳ್ಳಿ	ಜನಪ್ರಿಯ
ಆಂಜನೇಯ	ನೂಲೆನೂರು	ಜನಪ್ರಿಯ
ಆಂಜನೇಯ	ಕಡ್ಲೆಗುದ್ದು	ಜನಪ್ರಿಯ
ಆಂಜನೇಯ	ಹಿರೇಗುಂಟನೂರು	ಜನಪ್ರಿಯ
ಆಂಜನೇಯ	ಇಸಾಮುದ್ರ	ಜನಪ್ರಿಯ
ಆಂಜನೇಯ	ಭರಮಸಾಗರ	ಜನಪ್ರಿಯ
ಆಂಜನೇಯ	ಬಹದ್ದೂರುಘಟ್ಟ	ಜನಪ್ರಿಯ
ಆಂಜನೇಯ	ರೆಡ್ಡಿಹಳ್ಳಿ	ಜನಪ್ರಿಯ
ಆಂಜನೇಯ	ಚನ್ನಮ್ಮನಾಗತಿಹಳ್ಳಿ	ಜನಪ್ರಿಯ
ಆಂಜನೇಯ	ಚಿತ್ರಹಳ್ಳಿ	ಜನಪ್ರಿಯ
ಆಂಜನೇಯ	ರಾಮೇನಹಳ್ಳಿ	ಜನಪ್ರಿಯ
ಹನುಮಂತ	ನಂದನಹೊಸೂರು	ಜನಪ್ರಿಯ
ಆಂಜನೇಯ	ಬಿಳಿಚೋಡು	ಜನಪ್ರಿಯ

೪. ಸಂಕ್ಷಿಪ್ತ ರೂಪಗಳು

೧. ಕ.ವಿ.ವಿ.–ಕನ್ನಡ ವಿಶ್ವವಿದ್ಯಾನಿಲಯ

೨. ವಿ.ಅ.–ವಿಜಯನಗರ ಅಧ್ಯಯನ

೩. ಪ್ರಾ.ಸಂ.ನಿ.–ಪ್ರಾಚ್ಯವಸ್ತು ಸಂಗ್ರಹಾಲಯಗಳ ನಿರ್ದೇಶನಾಲಯ

೪. ಕ.ಇ.ದ.– ಕರ್ನಾಟಕ ಇತಿಹಾಸ ದರ್ಶನ

೫. ಕ.ಸಾ.ಪ.–ಕನ್ನಡ ಸಾಹಿತ್ಯ ಪರಿಷತ್

೬. ಮೈ.ವಿ.ವಿ.–ಮೈಸೂರು ವಿಶ್ವವಿದ್ಯಾನಿಲಯ

೭. ಕ.ಲ.ಅ.–ಕರ್ನಾಟಕ ಲಲಿತಕಲಾ ಅಕಾಡೆಮಿ

೮. ಕ.ವಿ.ವಿ.–ಕರ್ನಾಟಕ ವಿಶ್ವವಿದ್ಯಾನಿಲಯ

೯. ಕ.ಅ.ಸಂ.– ಕನ್ನಡ ಅಧ್ಯಯನ ಸಂಸ್ಥೆ

೧೦. ಬೆಂ.ವಿ.ವಿ.–ಬೆಂಗಳೂರು ವಿಶ್ವವಿದ್ಯಾನಿಲಯ

೧೧. ಮಾ.ಭಾ–ಮಾನವಿಕ ಭಾರತಿ

೧೨. ಇ.ದ.–ಇತಿಹಾಸ ದರ್ಶನ

೧೩ವಾ.ಸಾ.ಸಂ.–ವಾಲ್ಮೀಕಿ ಸಾಹಿತ್ಯ ಸಂಪದ

೧೪.I.A. :Indian Antiquaty

15.I.A.R: Indian Archaeology-A Review

16.I.H.R.C: Indian Historical Records Cpmmission

17.M.A.R.: Mysore Archaeological Reports

18.Q.J.M.S.: Quarterly Journals of Mythic Society

19.K.I.: Karnataka Inscriptions

20.S.I.I.: South Indian Inscription

21.E.C.: Epigraphia Carnatica

22.K.S.G.: Karnataka State Gazetteer

23.C.D.G: Chitredurga District Hazetteer

24.M.S.G: Mysore State Gazetteer

೫. ಗ್ರಂಥಸೂಚಿ

ಕನ್ನಡ

೧. ಅಪರ್ಣ ಕೂ.ಸ., *೧೯೯೯*, ದೇವಾಲಯ ವಾಸ್ತುಶಿಲ್ಪ ಪರಿಚಯ, ಪ್ರಸಾರಾಂಗ, ಕ.ವಿ.ವಿ, ಹಂಪಿ

೨. ಅನಂತರಂಗಾಚಾರ್ ಎನ್., *೧೯೮೪*, ಭಾರತೀಯ ದೇವಾಲಯಗಳು ಮತ್ತು ಸಂಸ್ಕೃತಿ, ಸ್ವಚ್ಛಂದಂ ಪ್ರಕಾಶನ, ಮೈಸೂರು.

೩. ಆಂಜನೇಯ ಸಿ., *೧೯೮೯*, ಚಿತ್ರದುರ್ಗ ರಾಜಮನೆತನದ ವಂಶಾವಳಿ.

೪. ಕಲ್ಬುರ್ಗಿ ಎಂ.ಎಂ., *೧೯೯೪*, ಕರ್ಣಾಟಕದ ಕೈಫಿಯತ್ತುಗಳು', ಪ್ರಸಾರಾಂಗ, ಕ.ವಿ.ವಿ. ಹಂಪಿ

೫. ಕರಿಶೆಟ್ಟಿರುದ್ರಪ್ಪ., *೧೯೯೫*, 'ಮ್ಯಾಸನಾಯಕರ ಒಂದು ಜನಾಂಗೀಯ ಅಧ್ಯಯನ',

೬. ಕುಲಕರ್ಣಿ ಆರ್.ಎಚ್., *೧೯೯೭*, ಬನವಾಸಿ ಕದಂಬರ ಕಾಲದ ಶಿಲ್ಪಕಲೆ–ಕದಂಬ ಅಧ್ಯಯನ', ಮೈಸೂರು

೭. ಕುಲಕರ್ಣಿ ಆರ್.ಎಚ್., *೨೦೦೧*, 'ವಿಜಯನಗರ ಕಾಲದಲ್ಲಿ ಗಾರೆಕಲೆ–ಒಂದು ಅವಲೋಕನ', ವಿ.ಅ., ಸಂ–೫, ಕೃಷ್ಣಪ್ಪ ಎಂ.ವಿ., ಚನ್ನಬಸಪ್ಪ ಎಸ್.ಪಾಟೀಲ್.,(ಸಂ), ಪ್ರಾ. ಸ. ನಿ., ಮೈಸೂರು

೮. ಕೃಷ್ಣ ಎಂ.ಎಚ್., *೧೯೫೩*, ಕರ್ನಾಟಕ ಪೂರ್ವಚರಿತ್ರೆ, ಸಾಧನ ಮುದ್ರಣಾಲಯ, ಧಾರವಾಡ.

೯. ಕೃಷ್ಣರಾವ್ ಎಂ.ವಿ., ಕೇಶವಭಟ್ಟ ಎಂ., *೧೯೭೦*, ಕ.ಇ.ದ., ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರ, ಬೆಂಗಳೂರು.

೧೦. ಗಂಡುಗಲಿ ಟಿ.ಎನ್., *೧೯೯೫*, ನೋಡಬನ್ನಿ ಚಿತ್ರದುರ್ಗ, ಮದಕರಿ ಪ್ರಕಾಶನ, ಚಿತ್ರದುರ್ಗ

೧೧. ಗಿರಿಜಾ ಟಿ., *೧೯೮೬*, ಚಿತ್ರದುರ್ಗ ಜಿಲ್ಲಾ ದರ್ಶಿನಿ, ರೇಖಾ ಪ್ರಕಾಶನ, ದಾವಣಗೆರೆ

೧೨. ಗೋಪಾಲ್ ಬಾ.ರಾ., *೧೯೯೫*, ಕನ್ನಡ ಶಾಸನಗಳು, ಕ.ಸಾ.ಪ., ಬೆಂಗಳೂರು

೧೩. ಗೋಪಾಲ್ ಬಾ.ರಾ., *೧೯೯೩,* ಕಲೆ ಮತ್ತು ವಾಸ್ತು, ಕ.ಸಾ.ಪ., ಬೆಂಗಳೂರು

೧೪. ಗೋಪಾಲ್ ಬಾ.ರಾ., ವಾಸ್ತುವಿದ್ಯಾ ಶಿಲ್ಪಶಾಸ್ತ್ರ

೧೫. ಗೋಪಾಲ್ ಬಾ.ರಾ. ೨೦೦೫, ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪ್ರಾ.ಸ.ನಿ., ಹೊಸಪೇಟೆ

೧೬. ಚನ್ನಪ್ಪ ಎಸ್.ಪಾಟೀಲ್., *೧೯೯೯,* ಕರ್ನಾಟಕದ ಕೋಟೆಗಳು, ಸಂ-೧, ಪ್ರಸಾರಾಂಗ ಕ.ವಿ.ವಿ., ಹಂಪಿ.

೧೭. ಚಿದಾನಂದಮೂರ್ತಿ ಎಂ., *೧೯೬೬,* ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪ್ರಸಾರಾಂಗ, ಮೈ.ವಿ.ವಿ. ಮೈಸೂರು.

೧೮. ಚಿದಾನಂದಮೂರ್ತಿ ಎಂ., *೧೯೯೮,* ಹೊಸತು ಹೊಸತು(ಸಂಪ್ರಬಂಧ ಸಂಪುಟ), ಕನ್ನಡ ಪುಸ್ತಕ ಪಾಧಿಕಾರ, ಬೆಂಗಳೂರು.

೧೯. ತಿಪ್ಪೇರುದ್ರಸ್ವಾಮಿ ಎಚ್., *೧೯೭೪,* ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಮೈಸೂರು

೨೦. ತಿಪ್ಪೇಸ್ವಾಮಿ, ಪಿ.ಆರ್., *೧೯೯೪,* ಶಿಲ್ಪಕಲಾ ಪ್ರಪಂಚ, ಕ.ಲ.ಅ., ಬೆಂಗಳೂರು

೨೧. ದೇಸಾಯಿ ಪಿ.ಬಿ., *೧೯೭೧,* ಕನ್ನಡ ಶಾಸನಗಳು, ಕ.ವಿ.ವಿ. ಧಾರವಾಡ

೨೨. ದೇವರಕೊಂಡಾರೆಡ್ಡಿ., *೧೯೯೪,* ತಲಕಾಡಿನ ಗಂಗರ ದೇವಾಲಯಗಳು-ಒಂದು ಅಧ್ಯಯನ, ಕ.ಸಾ.ಪ.ಬೆಂಗಳೂರು.

೨೩. ನರಸಿಂಹಮೂರ್ತಿ ಎ.ವಿ., *೧೯೭೧,* ಕರ್ನಾಟಕದ ಸೇವುಣರ ಇತಿಹಾಸ.

೨೪. ನಾಗರಾಜರಾವ್ ಎಚ್.ಎಂ., *೧೯೮೫,* ಹೊಯ್ಸಳ ವಾಸ್ತುಶಿಲ್ಪ

೨೫. ನಾಯಕ ಹಾ.ಮಾ., ವೆಂಕಟಾಚಲಶಾಸ್ತ್ರೀ ಟ.ವಿ., *೧೯೭೪,* ಕನ್ನಡ ಸಾಹಿತ್ಯ ಚರಿತ್ರೆ, ಸಂ-೧, ಕ.ಅ.ಸಂ. ಮೈ.ವಿ.ವಿ., ಮೈಸೂರು

೨೬. ಪರಮಶಿವಮೂರ್ತಿ ಡಿ.ವಿ., *೧೯೯೯,* ಕನ್ನಡ ಶಾಸನಶಿಲ್ಪ, ಪ್ರಸಾರಾಂಗ, ಕ.ವಿ.ವಿ. ಹಂಪಿ.

೨೭. ಪಾಡಿಗಾರ ಎಸ್.ವಿ., *೧೯೮೭,* ಪುರಾತತ್ವ ಪರಿಚಯ, ರಾಮಾಶ್ರಯ ಪಬ್ಲಿಕೇಷನ್ಸ್, ಧಾರವಾಡ.

೨೮. ಪಾಟೀಲ ಚನ್ನಬಸಪ್ಪ, *೧೯೯೯,* ಕರ್ನಾಟಕದ ಕೋಟೆಗಳು, ಕ.ವಿ.ವಿ., ಹಂಪಿ

೨೯. ಪಿಳ್ಳೆ ಕೆ.ಕೆ., ದಕ್ಷಿಣ ಭಾರತದ ಇತಿಹಾಸ

೩೦. ಪುಟ್ಟಣ್ಣ ಎಂ.ಎಸ್., *೧೯೨೪,* ಚಿತ್ರದುರ್ಗದ ಪಾಳೆಯಗಾರರು, ದಿ ಪವರ್ ಪ್ರಿಂಟಿಂಗ್ ಪ್ರೆಸ್, ಬೆಂಗಳೂರು

೩೧. ಪುಟ್ಟಣ್ಣ ಎಂ.ಎಸ್., *೧೯೨೩,* ಪಾಳೆಯಗಾರರು-ಐದು ಉಪನ್ಯಾಸಗಳು

೩೨. ಪ್ರಭಾಕರ್ ಎಂ.ಎನ್., *೧೯೯೯,* ದೇವಾಲಯಗಳ ವಾಸ್ತುಚಂದ್ರಿಕೆ, ಕ.ವಿ.ವಿ. ಹಂಪಿ

೩೩. ಬಸವರಾಜಪ್ಪ ಎಚ್.ಈ., *೨೦೦೬,* ಬಳ್ಳಾರಿ ಜಿಲ್ಲೆಯ ಚಿತ್ರಕಲೆ, ಪ್ರಸಾರಾಂಗ, ಕ.ವಿ.ವಿ ಹಂಪಿ.

೩೪. ಮಹದೇವ ಸಿ., *೨೦೦೦,* ವಿಜಯನಗರದ ಗಾರೆಶಿಲ್ಪ, ಪುರಾತತ್ವ ವಿಭಾಗದ ಪ್ರಕಟಣೆ-೩, ಕ.ವಿ.ವಿ., ಹಂಪಿ.

೩೫. ಮಸಗಲಿ ಮಂಜಪ್ಪಶೆಟ್ಟಿ ಎಂ., *೧೯೯೧,* ಕರ್ನಾಟಕದಲ್ಲಿ ಅಶೋಕನ ಶಾಸನಗಳು, ಮಸಗಲಿ ಪ್ರಕಾಶನ.

೩೬. ಮುಕುಂದರೆಡ್ಡಿ ಮಾ.ನಾ. ಹಿರಿಯೂರು ತಾಲ್ಲೂಕು ದರ್ಶನ, ಐ.ಬಿ.ಎಚ್.ಪ್ರಕಾಶನ, ಬೆಂಗಳೂರು.

೩೭. ರಂಗಸ್ವಾಮಿ ಡಿ.ಟಿ., *೨೦೦೨,* ಶ್ರೀಲಕ್ಷ್ಮೀನರಸಿಂಹಸ್ವಾಮಿ ಲೀಲಾಮೃತಂ, ಚಿನ್ಮೂಲಾದ್ರಿ ಪ್ರಕಾಶನ, ಚಿತ್ರದುರ್ಗ

೩೮. ರಂಗಸ್ವಾಮಿ ಡಿ.ಟಿ., *೨೦೦೭,* ದೇವಾಲಯ ದರ್ಶಿನಿ, ಹೊಳಲ್ಕೆರೆ ತಾಲ್ಲೂಕಿನ ಪ್ರಸಿದ್ಧ ದೇವಾಲಯಗಳ ಒಂದು ಸಾಂಸ್ಕೃತಿಕ ಅಧ್ಯಯನ, ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್, ಹೊಳಲ್ಕೆರೆ

೩೯. ರಾಜಣ್ಣ ಆರ್., ನಾಯಕ ಜನಾಂಗದ ಇತಿಹಾಸ

೪೦. ರಾಬರ್ಟ್ ಸಿವೆಲ್., *೧೯೯೨.* ಮರೆತು ಹೋಗಿರುವ ಸಾಮ್ರಾಜ್ಯ ವಿಜಯನಗರ,

ಸದಾನಂದ ಕನವಳ್ಳಿ(ಅನು), ಪ್ರಸಾರಾಂಗ, ಕವಿ.ವಿ., ಹಂಪಿ

೪೧. ರಾಮಚಂದ್ರರಾವ್ ಎಸ್.ಕೆ., *೧೯೭೫,* ಮೂರ್ತಿಶಿಲ್ಪ ನೆಲೆ ಹಿನ್ನೆಲೆ, ಬೆಂ.ವಿ.ವಿ., ಬೆಂಗಳೂರು

೪೨. ರಾಮಚಂದ್ರರಾವ್ ಎಸ್.ಕೆ., *೧೯೮೦,* ಭಾರತದ ದೇವಾಲಯಗಳ ನೆಲೆ ಹಿನ್ನೆಲೆ, ಐಬಿಎಚ್ ಪ್ರಕಾಶನ, ಬೆಂಗಳೂರು

೪೩. ರಾಮಚಂದ್ರರಾವ್ ಎಸ್.ಕೆ., *೧೯೯೨,* ಪ್ರತಿಮಾಕೋಶ, ಸಂ-೬

೪೪. ರಾಜಶೇಖರ್ ಸಿಂದಗಿ., *೧೯೯೮,* **ಕರ್ನಾಟಕ ವಾಸ್ತುಶಿಲ್ಪ ಮತ್ತು ಚಿತ್ರಕಲೆ,** ಸುಜಾತ ಪಬ್ಲಿಕೇಷನ್ಸ್. ಧಾರವಾಡ.

೪೫. ರಾಜಶೇಖರಪ್ಪ ಬಿ., *೨೦೦೧,* **ದುರ್ಗಶೋಧನ,** ಕ.ಸಾ.ಪ. ಬೆಂಗಳೂರು

೪೬. ರಾಜಶೇಖರಪ್ಪ ಬಿ., *೨೦೦೧,* **ಇತಿಹಾಸ ಕಥನ,** ಸಿ.ವಿ.ಜಿ. ಪಬ್ಲಿಕೇಷನ್ಸ್, ಬೆಂಗಳೂರು

೪೭. ರಾಜಶೇಖರಪ್ಪ ಬಿ., *೨೦೦೧,* ನಿರಂತರ(ವಿಮರ್ಶನ ಸಂಶೋಧನ ಲೇಖನ ಸಂಕಲನ), ಶ್ರೀಲೋಕಪಾವನಿ ಪ್ರಕಾಶನ, ಪಾಂಡವಪುರ.

೪೮. ಲಕ್ಷ್ಮಣ್‌ತೆಲಗಾವಿ, ಎಂ.ವಿ.ಶ್ರೀನಿವಾಸ್.(ಸಂ), *೧೯೭೬,* **ಚಂದ್ರವಳ್ಳಿ,** ಜಿಲ್ಲಾ ಇತಿಹಾಸ ಸಂಶೋಧನಾ ಮಂಡಳಿ, ಚಿತ್ರದುರ್ಗ

೪೯. ಲಕ್ಷ್ಮಣ್‌ತೆಲಗಾವಿ, ಕೆ.ವೆಂಕಣ್ಣಾಚಾರ್.(ಸಂ), *೧೯೭೯,* **ಐತಿಹಾಸಿಕ ಚಿತ್ರದುರ್ಗ,** ಜಿಲ್ಲಾ ಇತಿಹಾಸ ಸಂಶೋಧನಾ ಮಂಡಳಿ, ಚಿತ್ರದುರ್ಗ

೫೦. ಲಕ್ಷ್ಮಣ್‌ತೆಲಗಾವಿ, ಕೆ.ವೆಂಕಣ್ಣಾಚಾರ್, ಹು.ಶ್ರೀ.ಜೋ.,(ಸಂ), *೧೯೮೦,* **ಚಿತ್ರದುರ್ಗ ದರ್ಶಿನಿ,** ಬೃಂದಾವನ ಮುದ್ರಣ, ಸರಸ್ವತಿಪುರಂ, ಮೈಸೂರು

೫೧. ಲಕ್ಷ್ಮಣ್‌ತೆಲಗಾವಿ(ಸಂ), *೧೯೯೯,* **ಹರತಿಸಿರಿ,** ವಾ.ಸಾ.ಸಂ, ಹರ್ತಿಕೋಟೆ.

೫೨. ಲಕ್ಷ್ಮಣ್‌ತೆಲಗಾವಿ, *೨೦೦೩,* **ಸ್ಥಳೀಯ ಚರಿತ್ರೆ ಅಧ್ಯಯನದ ತಾತ್ವಿಕತೆ ಮತ್ತು ಸ್ವರೂಪ,** ಕ.ವಿ.ವಿ., ಹಂಪಿ

೫೩. ಲಕ್ಷ್ಮಣ್‌ತೆಲಗಾವಿ, *೨೦೦೪,* **ಚಿತ್ರದುರ್ಗ ಜಿಲ್ಲಾ ಇತಿಹಾಸ ಅಧ್ಯಯನದ ವ್ಯಾಪಕತೆ ಮತ್ತು ಸಾಧ್ಯತೆ–ಒಂದು ಶತಮಾನ,** ವಾ.ಸಾ.ಸಂ, ಹರ್ತಿಕೋಟೆ.

೫೪. ಲಕ್ಷ್ಮಣ್‌ತೆಲಗಾವಿ, *೨೦೦೪,* **ಮೌರ್ಯ ಮತ್ತು ಶಾತವಾಹನ ಯುಗ,** ಪ್ರಸಾರಾಂಗ, ಕ.ವಿ.ವಿ., ಹಂಪಿ

೫೫. ವಸು ಎಂ.ವಿ., *೨೦೦೧,* **ದಕ್ಷಿಣ ಕರ್ನಾಟಕದ ಅರಸು ಮನೆತನಗಳು,** ಕ.ವಿ.ವಿ. ಹಂಪಿ

೫೬. ವೀರನಾಯಕ ಎಚ್.ವಿ., ೧೯೯೬, **ದುರ್ಗದ ಧವಳ ಕೀರ್ತಿ,** ವಾ.ಸಾ.ಸಂ., ಹರ್ತಿಕೋಟೆ.

೫೭. ವೀರನಾಯಕ ಎಚ್.ವಿ., **ರಾಷ್ಟ್ರ ಸೇವೆಯಲ್ಲಿ ನಾಯಕ ಜನಾಂಗ,** ವಾ.ಸಾ.ಸಂ., ಹರ್ತಿಕೋಟೆ.

೫೮. ವಿರೂಪಾಕ್ಷಿ ಪೂಜಾರಹಳ್ಳಿ, *೨೦೦೨,* **ಚಿತ್ರದುರ್ಗ ಜಿಲ್ಲೆಯ ಬುಡಕಟ್ಟು ವೀರರು,** ಕ.ವಿ.ವಿ., ಹಂಪಿ

೫೮. ವಿರೂಪಾಕ್ಷಿ ಪೂಜಾರಹಳ್ಳಿ., *೨೦೦೬,* **ಕಾಮಗೇತಿ ವಂಶಜರ ಚರಿತ್ರೆ,** ಪ್ರಸಾರಾಂಗ, ಕ.ವಿ.ವಿ., ಹಂಪಿ

೫೯. ವೆಂಕಣ್ಣಾಚಾರ್ ಕೆ., ಹು,ಶ್ರೀ.ಜೋ., *೧೯೮೬,* **ಚಿತ್ರದುರ್ಗ ಮಾರ್ಗದರ್ಶಿ,** ಪ್ರಸನ್ನಪ್ರಕಾಶನ, ಚಿತ್ರದುರ್ಗ

೬೦. ವೆಂಕಟೇಶಯ್ಯ ಎಂ.ಜಿ. *೧೯೭೧,* **ಚಿತ್ರದುರ್ಗ ಪಾಳೆಯಗಾರರು**

೬೧. ಶಿವರಾಮಕಾರಂತ ಕೆ., *೧೯೭೫,* **ಭಾರತೀಯ ಶಿಲ್ಪ,** ಬೆಂಗಳೂರು

೬೨. ಶಿವರಾಮಕಾರಂತ ಕೆ., *೧೯೮೩,* **ಕರ್ನಾಟಕದಲ್ಲಿ ಶಿಲ್ಪ,** ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು

೬೩. ಶಿವರಾಮಕಾರಂತ ಕೆ., *೧೯೯೧,* **ಚಾಲುಕ್ಯ ವಾಸ್ತುಶಿಲ್ಪ**

೬೪. ಶಿವತಾರಕ್ ಕೆ.ಬಿ., *೨೦೦೧* **ಕರ್ನಾಟಕದ ಪುರಾತತ್ವ ನೆಲೆಗಳು,** ಕ.ವಿ.ವಿ, ಹಂಪಿ

೬೫. ಶೀಲಕಾಂತ ಪತ್ತಾರ., *೨೦೦೬,* **ಬಾದಾಮಿ,** ಕ.ವಿ.ವಿ., ಹಂಪಿ

೬೬. ಶ್ರೀನಿವಾಸ್ ಪಿ.ಆರ್., *೧೯೫೯,* ದಕ್ಷಿಣ ಭಾರತದ ದೇವಾಲಯಗಳು, ಮೈಸೂರು

೬೭. ಶ್ರೀಸತ್ಯನ್ ಬಿ.ಎನ್., *೧೯೬೭,* **ಮೈಸೂರು ಗೆಜೆಟಿಯರ್–ಚಿತ್ರದುರ್ಗ ಜಿಲ್ಲೆ**

೬೮. ಶ್ರೀನಿವಾಸನಾಯಕ ಬಿ.ಎಸ್., *೧೯೮೪,* **ಚಿತ್ರದುರ್ಗದ ಕಾಮಗೇತಿ ಅರಸರು,** ಪ್ರಶಾಂತಿ ಪ್ರಿಂಟರ್ಸ್, ದಾವಣಗೆರೆ

೬೯. ಶ್ರೀಸತ್ಯನ್ ಬಿ.ಎನ್., *೧೯೮೬,* **ಚಿತ್ರದುರ್ಗ ಜಿಲ್ಲಾ ಗೆಜೆಟಿಯರ್**

೭೦. ಶ್ರೀಕಂಠಶಾಸ್ತ್ರೀ ಎಸ್., *೧೯೯೫,* **ಹೊಯ್ಸಳ ವಾಸ್ತುಶಿಲ್ಪ,**

೭೧. ಶ್ರೀನಿವಾಸ್‌ಮೂರ್ತಿ ಎಚ್.ವಿ., ರಾಮಕೃಷ್ಣ ಆರ್.,(ಸಂ), *೧೯೯೫:* **ಸಮಗ್ರ ಕರ್ನಾಟಕ ಚರಿತ್ರೆ**

೭೨. ಶ್ರೀನಿವಾಸ ಎಂ.ವಿ., ಲಕ್ಷ್ಮಣ್‌ತೆಲಗಾವಿ, *೧೯೯೫,* **ಹುಲ್ಲೂರು ಶ್ರೀನಿವಾಸ ಜೋಯಿಸರ ಸಂಶೋಧನ ಲೇಖನಗಳು,** ಹು.ಶ್ರೀ.ಜೋ.ಗ್ರಂಥ ಪ್ರಕಟಣ ಸಮಿತಿ ಚಿತ್ರದುರ್ಗ

೭೩. ಶ್ರೀಶೈಲ ಆರಾಧ್ಯ ಎಚ್., *೧೯೯೭:* 'ವಿಜಯನಗರ ಅರಸರು ಮತ್ತು ಚಿತ್ರದುರ್ಗ ನಾಯಕರು', ವಿ.ಅ.ಸಂ–೨, ಪ್ರಾ.ಸಂ.,ನಿ.,ಮೈಸೂರು

೭೪. ಶೇಷಶಾಸ್ತ್ರಿ ಆರ್., *೧೯೮೨,* ಕರ್ನಾಟಕದ ವೀರಗಲ್ಲುಗಳು, ಕ.ಸಾ.ಪ., ಬೆಂಗಳೂರು

೭೫. ಸದಾಶಿವಪ್ಪ ಕುಂ.ಬಾ., *೧೯೯೬*, ಹರಪನಹಳ್ಳಿ ಪಾಳೆಯಗಾರರು, ಕ.ಸಾ.ಪ. ಬೆಂಗಳೂರು

೭೬. ಸುಂದರ ಅ., *೧೯೭೮*, ಚಿತ್ರದುರ್ಗ ಪರಿಸರ ಇತ್ತೀಚಿನ ಪುರಾತತ್ವ ಶೋಧನೆಗಳು ಮಾ.ಭಾ.,ಸಂ-೨. ಕ.ವಿ.ವಿ., ಧಾರವಾಡ.

೭೭. ಸುಂದರ ಅ., *೧೯೯೪*, ಕರ್ನಾಟಕ ಪ್ರಾಗಿತಿಹಾಸ ಕಾಲದ ಕಲೆ

೭೮. ಸುಂದರ ಅ., *೧೯೯೮*(ಸಂ), ಕರ್ನಾಟಕ ಚರಿತ್ರೆ ಸಂ-೧, ಕ.ವಿ.ವಿ. ಹಂಪಿ

೭೯. ಸೂರ್ಯನಾಥ್ ಕಾಮತ್., *೧೯೯೯*, ಕರ್ನಾಟಕದ ಸಂಕ್ಷಿಪ್ತ ಇತಿಹಾಸ,

೮೦. ಸ್ವಾಮಿ ಜಿ.ಎಲ್., *೧೯೩೯*, ಚಿತ್ರದುರ್ಗ ಡಿಸ್ಟ್ರಿಕ್ಟು ಕೈಪಿಡಿ

೮೧. ಹಯವದನರಾವ್., *೧೯೩೦.* ಮೈಸೂರು ಗೆಜೆಟಿಯರ್, ಸಂ-೫

೮೨. ಹು.ಶ್ರೀಜೋ.,(ಸಂ), ಚಿತ್ರದುರ್ಗದ ಬಖೈರು, ಮೈಸೂರು

ಲೇಖನಗಳು

೧. ಅಪರ್ಣ ಕೂ.ಸ., ೧೯೯೦, *'ದೇವಾಲಯದ ಕಂಬಗಳು ಒಂದು ಅಧ್ಯಯನ'*, ಇತಿಹಾಸ ದರ್ಶನ, ಸಂ-೪, ಸೂರ್ಯನಾಥ್ ಕಾಮತ್, ಲಕ್ಷ್ಮಣ್‌ತೆಲಗಾವಿ(ಸಂ), ಬೆಂಗಳೂರು.

೨. ಅಪರ್ಣ ಕೂ.ಸ., ೧೯೯೮, *'ವಾಸ್ತುಶಿಲ್ಪ ಶಾಸ್ತ್ರದ ಹಿನ್ನೆಲೆಯಲ್ಲಿ ದೇವಾಲಯದ ಮಂಟಪಗಳು'*, ಇತಿಹಾಸ ದರ್ಶನ, ಸಂ-೧೩, ಬೆಂಗಳುರು.

೩. ಉಷಾ ಎಂ.ಎಚ್., ೧೯೭೬ *'ಚಿತ್ರದುರ್ಗ ಜಿಲ್ಲೆಯಲ್ಲಿ ಕದಂಬರ ಆಳ್ವಿಕೆ'*, ಚಂದ್ರವಳ್ಳಿ

೪. ಕೃಷ್ಣಮೂರ್ತಿ ಪಿ.ವಿ., ೧೯೯೯, *'ಕದಂಬಳಿಗೆ ಸಾಸಿರ'*, ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು, ಕಲ್ಬುರ್ಗಿ ಎಂ.ಎಂ.(ಸಂ)

೫. ಕೃಷ್ಣಮೂರ್ತಿ ಎಂ.ಎಸ್., ೧೯೮೭, *'ನೊಳಂಬರ ಕಾಲದ ಪ್ರಾದೇಶಿಕ ವಿಭಾಗಗಳು'*, ಹರತಿಸಿರಿ

೬. ಕೃಷ್ಣಮೂರ್ತಿ ಪಿ.ವಿ., ೧೯೯೯, *'ಚಿತ್ರದುರ್ಗ ಜಿಲ್ಲೆಯಲ್ಲಿ ವಿಜಯನಗರ ಕಾಲದ ಆಡಳಿತ ವಿಭಾಗಗಳು'*,

೭. ಕೃಷ್ಣಮೂರ್ತಿ ಪಿ.ವಿ., ೧೯೯೯, *'ಬೆಮ್ಮತ್ತನೂರುನಾಡು'*,

೮. ಕೃಷ್ಣಮೂರ್ತಿ ಹನೂರು., ೧೯೭೯: *'ಜನಪದ ಸಾಹಿತ್ಯದಲ್ಲಿ ಚಿತ್ರದುರ್ಗ'*, ಐತಿಹಾಸಿಕ ಚಿತ್ರದುರ್ಗ.

೯. ಗೌಡೂರ್ ಎಸ್.ವಿ., ೧೯೭೯, *'ಚಿತ್ರದುರ್ಗದ ದೇವಮಂದಿರಗಳು',* **ಐತಿಹಾಸಿಕ ಚಿತ್ರದುರ್ಗ**

೧೦. ಜ್ಞಾನಾನಂದ ಜಿ. ೨೦೦೧, 'ಶಿಲ್ಪಾದರ್ಶ', ಸಂ-೧, ಪ್ರಸಾರಾಂಗ, ಕ.ವಿ.ವಿ., ಹಂಪಿ

೧೧. ಜ್ಞಾನಾನಂದ ಜಿ., ೨೦೦೨, 'ಶಿಲ್ಪಾದರ್ಶ', ಸಂ-೨, ಪ್ರಸಾರಾಂಗ, ಕ.ವಿ.ವಿ., ಹಂಪಿ

೧೨. ಜ್ಞಾನಾನಂದ ಜಿ., ೨೦೦೬ *'ಶ್ರೀಕಾಶ್ಯಪ ಶಿಲ್ಪಶಾಸ್ತ್ರಂ',* **ಪೂರ್ವಾರ್ಧ, ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಬೆಂಗಳೂರು**

೧೩. ಚನ್ನಕ್ಕಎಲಿಗಾರ, ೧೯೯೧: *'ಬಂಕಾಪುರದ ಕದಂಬರು',* **ಸಂಶೋಧನ,**

೧೪. ಚನ್ನಪ್ಪ ಎರೆಸೀಮೆ., *'ಚಿತ್ರದುರ್ಗ ಪಾಳೆಯಗಾರರ ಕಾಲದ ವ್ಯಾಜ್ಯ ತೀರ್ಮಾನ',* **ಚಂದ್ರವಳ್ಳಿ**

೧೫. ಜಯಣ್ಣ., ೧೯೭೯, *'ಚಿತ್ರದುರ್ಗದಲ್ಲಿ ಭೂಸಂಶೋಧನೆ',* **ಐತಿಹಾಸಿಕ ಚಿತ್ರದುರ್ಗ**

೧೬. ಜಯಣ್ಣ ಉಲ್ಲಾನಹಳ್ಳಿ., ೨೦೦೨, *'ಮೊಳಕಾಲ್ಮೂರು ತಾಲ್ಲೂಕು ಹಾನಗಲ್ಲಿನ ಪುರಾತತ್ವ ಸಮೀಕ್ಷೆ',* **ಇತಿಹಾಸ ದರ್ಶನ,** ಸಂ-೧೭

೧೭. ಜೋಷಿ ಎಸ್.ಕೆ., ೨೦೦೦: *'ದೈವಿ ಕಲ್ಪನೆಯಿಂದ ದೇವಸ್ಥಾನದವರೆಗೆ ಚಿಂತನೆ',* **ಇತಿಹಾಸ ದರ್ಶನ,** ಸಂ-೧೫, ಬೆಂಗಳೂರು

೧೮. ತಿಪ್ಪಣ್ಣಮರಿಕುಂಟೆ ಬಿ., *'ಚಿತ್ರದುರ್ಗದ ಮಠಮಾನ್ಯಗಳು',* **ಐತಿಹಾಸಿಕ ಚಿತ್ರದುರ್ಗ**

೧೯. ತಿಪ್ಪೇಸ್ವಾಮಿ ಎಚ್., ೧೯೯೮, *'ಕೂಡ್ಲಿಗೆ ತಾಲ್ಲೂಕಿನ ಅಪರೂಪದ ಮಾನವಾಕೃತಿಗಳು',* **ಇತಿಹಾಸ ದರ್ಶನ,** ಸಂ-೧೪

೨೦. ತಿಪ್ಪೇಸ್ವಾಮಿ ಎಚ್., ೨೦೦೦: ***'ನುಂಕೆಮಲೆ ಪರಿಸರದಲ್ಲಿ ಪ್ರಾಗೈತಿಹಾಸಿಕ ನೆಲೆಗಳ ಶೋಧನೆ',*** ಇತಿಹಾಸ ದರ್ಶನ, ಸಂ-೧೫

೨೧. ದೀಕ್ಷಿತ್ ಸಿ.ಕೆ.ವೈ., ೧೯೭೬, ***'ಚಿತ್ರದುರ್ಗ ಜಿಲ್ಲೆಯಲ್ಲಿ ಚಾಲುಕ್ಯರ ಆಳ್ವಿಕೆ',* ಚಂದ್ರವಳ್ಳಿ**

೨೨. ನರಸಿಂಹಮೂರ್ತಿ ಸಿ.ಎಸ್., ೧೯೭೬, *'ಪಂಡರಹಳ್ಳಿ ರಂಗನಾಥ ದೇವಾಲಯ',* **ಚಂದ್ರವಳ್ಳಿ**

೨೩. ಪ್ರಭಾಕರ್ ಎಂ.ಎನ್., ೧೯೭೬, *'ನಾಯಕನಹಟ್ಟಿ ಬಖೈರು',* **ಚಂದ್ರವಳ್ಳಿ**

೨೪. ಪ್ರಭಾಕರ್ ಎಂ.ಎನ್., ೧೯೮೯, *'ವಾಸ್ತುಶಿಲ್ಪ-ಕೆಲವು ಟಿಪ್ಪಣಿಗಳು',* **ಹರತಿಸಿರಿ**

೨೫. ಬಸವಲಿಂಗ ಸಿ.ಎಸ್., *'ಚಿತ್ರದುರ್ಗ ಜಿಲ್ಲೆಯಲ್ಲಿ ನೊಳಂಬರ ಆಳ್ವಿಕೆ',* **ಚಂದ್ರವಳ್ಳಿ**

೨೬. ಮಂಜುನಾಥ ಕೆ.ವಿ., ೧೯೭೬, *'ಚಿತ್ರದುರ್ಗ ಇತಿಹಾಸದಲ್ಲಿ ಐತಿಹ್ಯ'*, ಐತಿಹಾಸಿಕ ಚಿತ್ರದುರ್ಗ

೨೭. ಯೋಗೀಶ್ವರಪ್ಪ ಡಿ.ಎನ್., ೨೦೦೫, *'ಚಿತ್ರದುರ್ಗ ಜಿಲ್ಲೆಯಲ್ಲಿ ಹಟ್ಟಿ ಪಾಳೆಯಗಾರರ ಚರಿತ್ರೆ'*, ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ

೨೮. ಲಕ್ಷ್ಮಣ್ ತೆಲಗಾವಿ., ೧೯೭೬, *'ಚಿತ್ರದುರ್ಗದ ಸಂಕ್ಷಿಪ್ತ ಇತಿಹಾಸ'*, ಐತಿಹಾಸಿಕ ಚಿತ್ರದುರ್ಗ

೨೯. ಲಕ್ಷ್ಮಣ್‌ತೆಲಗಾವಿ., ೧೯೮೮, *'ಎಪ್ಪತ್ತೇಳು ಪಾಳೆಯಗಾರರು'*, ಇತಿಹಾಸ ದರ್ಶನ, ಸಂ.೩

೩೦. ಲಕ್ಷ್ಮಣ್‌ತೆಲಗಾವಿ., ೧೯೯೦, *'ಚಿತ್ರದುರ್ಗ ಬೆಟ್ಟದ ಪೆರುಮಾಳೆಪುರ ಪರಿಶೋಧನೆ'*, ಇತಿಹಾಸ ದರ್ಶನ, ಸಂ–೬

೩೧. ಲಕ್ಷ್ಮಣ್‌ತೆಲಗಾವಿ., ೨೦೦೨, *'ವೇದಾವತಿ ನದಿ ದಂಡೆ ಹಾಗೂ ಚಂದ್ರವಳ್ಳಿ ನಿವೇಶನಗಳಲ್ಲಿ ದೊರೆತ ಶಾತವಾಹನರ ನಾಣ್ಯಗಳು'*, ಇತಿಹಾಸ ದರ್ಶನ, ಸಂ–೧೭

೩೨. ರಾಜಶೇಖರಪ್ಪ ಬಿ., ೨೦೦೬, *'ಚಿತ್ರದುರ್ಗದ ಅಪ್ರಕಟಿತ ತಾಮ್ರ ಶಾಸನ'*, ಇತಿಹಾಸ ದರ್ಶನ, ಸಂ–೨೧, ಬೆಂಗಳೂರು

೩೩. ವಸಂತಲಕ್ಷ್ಮೀ ಕೆ., ೨೦೦೫, *'ಚಿತ್ರದುರ್ಗ ಜಿಲ್ಲೆಯ ಕಲ್ಯಾಣ ಚಾಲುಕ್ಯರ ದೇವಾಲಯಗಳು'*, ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ

೩೪. ವೆಂಕಣ್ಣಾಚಾರ್ ಕೆ., ೧೯೯೯, *'ಪ್ರವಾಸಿ ಕೇಂದ್ರವಾಗಿ ಚಿತ್ರದುರ್ಗ ಯೋಜನಾ'*

೩೫. ಸುಂದರ ಅ., *'ಜಟಿಂಗರಾಮೇಶ್ವರದಲ್ಲಿ ಪ್ರಾಗೈತಿಹಾಸಿಕ ಪುರಾತತ್ವ ಅವಶೇಷಗಳು ಮತ್ತು ಐತಿಹ್ಯ'*, ಇತಿಹಾಸ ದರ್ಶನ, ಸಂ–೬

೩೬. ಸುಂದರ ಅ., ೧೯೯೨, *'ಹಿಡಿಂಬಪಟ್ಟಣ ಒಂದು ವಿಮರ್ಶಾತ್ಮಕ ಟಿಪ್ಪಣಿ'*, ಇತಿಹಾಸ ದರ್ಶನ, ಸಂ–೭

ಮಹಾಪ್ರಬಂಧಗಳು

೧. ತಿಪ್ಪೇಸ್ವಾಮಿ ಎಚ್., ೧೯೯೪, ದಾವಣಗೆರೆ ಜಿಲ್ಲೆಯ ದೇವಾಲಯಗಳು–ಒಂದು ಅಧ್ಯಯನ, ಕ.ವಿ.ವಿ., ಹಂಪಿ

೨. ತಿಪ್ಪೇಸ್ವಾಮಿ ಎಸ್., ೨೦೦೪, ರಕ್ಷಣಾ ವಾಸ್ತುಶಿಲ್ಪ–ಚಿತ್ರದುರ್ಗ ಜಿಲ್ಲೆ, ಕ.ವಿ.ವಿ., ಹಂಪಿ

೩. ದೇಶಪಾಂಡೆ ಎಚ್.ಟಿ. ಚಿತ್ರದುರ್ಗ ನಾಯಕರ ಕಾಲದ ಭೂವ್ಯವಸ್ಥೆ

೪. ದುರುಗಪ್ಪ ಎಂ.ಕೆ., ವಿಜಯನಗರೋತ್ತರ ಕಾಲೀನ ಬೇಡ ಜನಾಂಗದಲ್ಲಾದ ಸ್ಥಿತ್ಯಂತರಗಳು., ಕ.ವಿ.ವಿ., ಹಂಪಿ

೫. ಶಿವಪ್ಪ ಆರ್., **ಚಿತ್ರದುರ್ಗ ಪಾಳೆಯಗಾರರ ಕಾಲದ ಸೈನ್ಯ ವ್ಯವಸ್ಥೆ**

೬. ಸುರೇಶ್ ಬಿ., **೨೦೦೨, ಚಿತ್ರದುರ್ಗ-ದಾವಣಗೆರೆ ಜಿಲ್ಲೆಗಳ ಪುರಾತತ್ವ ಅಧ್ಯಯನ,** ಮೈ.ವಿ.ವಿ., ಮೈಸೂರು

ಸ್ಮರಣಸಂಚಿಕೆಗಳು

೧. ರಘುನಾಥಭಟ್ ಎಚ್.ಆರ್., ೧೯೭೭, **ಚಿತ್ರದುರ್ಗ ಜಿಲ್ಲೆಯ ಕೆಲವು ಸೀಸದ ನಾಣ್ಯಗಳು,** ಚಿನ್ಮೂಲಾದ್ರಿ ವಾರ್ಷಿಕ ಸಂಚಿಕೆ, ಲಕ್ಷ್ಮಣ್‌ತೆಲಗಾವಿ(ಸಂ)

೨. ಲಕ್ಷ್ಮಣ್‌ತೆಲಗಾವಿ., ೧೯೯೮, 'ಶಿಲಾಯುಗದ ಶಿಲಾಸಮಾಧಿ ನಿಲುಗಲ್ಲುಗಳ ಪತ್ತೆ', **ಪ್ರಜಾವಾಣಿ ದಿನಪತ್ರಿಕೆ**

೩. ಬಾಗೂರು ಅರ್., ನಾಗರಾಜಪ್ಪ, ಬಸವರಾಜ ಶಿವಪುರ(ಸಂ), **೧೯೯೯, ಕಲ್ಪಾದ್ರಿ, ಸ್ಮರಣ ಸಂಚಿಕೆ,** ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್, ಹೊಸದುರ್ಗ

೪. ನಾರಾಯಣ್‌ರಾವ್ ಎ.ಎಸ್., ೭-೪-೨೦೦೧, 'ಬೆಂಗಾಡಿನಲ್ಲೊಂದು ಸುಂದರ ಮಲೆನಾಡು', **ಪ್ರಜಾವಾಣಿ ದಿನಪತ್ರಿಕೆ**

೫. ಶರಣಬಸಪ್ಪ ಕೋಲ್ಕಾರ, ೨೦೦೨, 'ಗಂಗಾವತಿ ತಾಲ್ಲೂಕಿನ ಭೌಗೋಳಿಕ ಮತ್ತು ಪ್ರಾಗೈತಿಹಾಸಿಕ ಪರಿಸರ', **ಅಕ್ಷಯ ಸಂಚಿಕೆ,** ಗಂಗಾವತಿ

೬. ದುರ್ಗಸಿರಿ, **೨೦೦೬, 'ಚಿತ್ರದುರ್ಗ ಜಿಲ್ಲಾ ಉತ್ಸವ' ಸ್ಮರಣ ಸಂಚಿಕೆ**

೭. ಮಂಜಣ್ಣ ರಾಮಸಾಗರ ಪಿ.ಎಂ., ೨೦೦೭, 'ಚಿತ್ರದುರ್ಗ ಐತಿಹಾಸಿಕ ಹಿನ್ನೆಲೆ', **ಚಂದ್ರವಳ್ಳಿ** ಮತ್ತು ಏಕಲವ್ಯ ಧ್ವನಿ ಮಾಸ ಪತ್ರಿಕೆ.

ENGLISH

1. Acharya P.K., 1934, **A Dictionary of Hindu Architecture,** According to Manasara Shilpashastra

2. Aljin F.R., 1998, **The Rise and birth of Indian civilization**

3. Dhaky M.A., and Miester M., 1977, **The Indian Temple Forms in Karnataka Inscriptions and Architecture,** Abhinava Publication, New Delhi

4. Dhaky M.A., 1996, **Encyclopidia of Indian Temple Architecture, South India upeer Dravida Desa,** Vol-1, Part-2, American institute of Indian Studies, New Delhi

5. Fergusson Jems., 1866, **Architecture in Dharwar and Mysore**

6. Fanindrqnath Bose., 1978, **Principles of Indian Shilpshastra**

7. Gopal B.R., 1981, **The Chalukyas of kalyana and the kalachuris.,** Dhrwar

8. Gopal B.R., 1985, **Corpur of kadamba Inscriptions**

9. Joshi S.K., 1985, **Defence Architecture in Early Karnataka**

10. Krishna M.H., 1931, **Escavation at Chandravalli,** Archaeological Survey of Mysore, Mysore.

11. Krishna M.H., 1940, **M.A.R.,** part-4, Excavation Chitredurga District, The Brahmagiri Site

12. KrishnA M.H., 1942, **M.A.R.,** part-5, Excavation

13. Krishnamurthy M.S., 1981, **The Nolambas,** University of Mysore, Mysore

14. Maladatta., 1990, **A Study of the Shatavahana Coin Age,** Harman Publishing House, New Delhi

15. Mohan N.Kotti., 1976, **The Pallava Intergnum in Chalukyas of Badami,** Edt by M.S. Nagaraja Rao, Bangalore

16. Martimar Veelar., 1968, **Early India and Pakistan Themer and Hudson,** London

17. Nagaraj Rao., M.S., 1971, **The Chalukyas of Badami,** Mythic Society, Babgalore

18. Percy Brown., 1942, **Indian Architecture,** D.B.Tara Porevalasons and co.pvt., Bombay

19. Patil C.S., 1992, **Temples of Raichur and Bellary District,** Directorate of Archeology and Museums Mysore, Mysore

20. Rea Alexnder., 1986, **Chalukyan Architecture,** Including exmples from the Bellary District, Madras Presidency, Archaeological Survey of India. Madras

21. Raghunathabhatt H.R., 1978, **Art and Architecture of Shatavahan-Kadamba Period,** Narasimha (Edt), Archaeology of Karnataka

22. Ramachandra Rao., P.B., **Paligers of Mysore and their civilization,** The Quarterly Journal of the Mythic Society.

23. Ramarao B., 1953, **Recollections of an Indian Geoligist**

24. Suryanarayana Rao., 1993, **A History of vijayanagar,** Assion Educational Services

25. Soundararajan K.V., 1960, **The Early Temple Architecture of Karnataka and its Ramification,** Dharwar

26. Somashekar S.Y., 7-2-2003., **Two Maharathi Coins of Turuvanur and Chippinakere,** Chitradurga Dist., National Seminor on South Indian Numismatichs, Mythic Society, Pandicheri

27. Shankar M.S., Venkannachar K., **Hullur Shreenivas Panduranga Joyis.,** 1984, Chitradurga-A Hand Book

28. Salatore R.S., 1982: Vijayanagr Art

29. Slater A.R., **The hill Forts of Mysore, The Madaras male Annual wheeler R.E.M., 1947-48: Bramhagiri and Chandravalli Megalithic and othere cultures in the Chitradurga District,** Mysore State, Al No-4

೬. ಛಾಯಾಚಿತ್ರಗಳು

ಅಧಿಷ್ಠಾನಗಳು



೧. ಜೋಡಿ ರಂಗಾಪುರ



೨.ಅಂಬಲಗೆರೆ



೩.ನೀರ್ಥಡಿ



೪.ಉತ್ಸವಾಂಬೆ



೫.ನೀರ್ಥಡಿ



೬.ಮಾರಿಕಣಿವೆ

ಭಿತ್ತಿಗಳು



೭.ಹಂಪನೂರು



೮.ಚಿತ್ರದುರ್ಗ(ಚನ್ನಕೇಶವ)



೯.ಜಾನಕಲ್ಲು



೧೦.ಕಾವಾಡಿಗರಹಟ್ಟಿ



೧೧.ಚಿತ್ರದುರ್ಗ(ಉತ್ಸವಾಂಬೆ)



೧೨.ಚಿತ್ರಹಳ್ಳಿ



೧೩.ಚಿತ್ರದುರ್ಗ(ವೆಂಕಟರಮಣ)



೧೪.ಕುಂದುರ್ಪಿ

ಶಿಖರಗಳು



೨೫.ನೀರ್ಥಡಿ



೨೬.ಲಕ್ಷ್ಮೀವೆಂಕಟೇಶ್ವರ(ಹಿರಿಯೂರು)




೨೭.ಜಾನಕಲ್ಲು(ಶಂಕರೇಶ್ವರ ದೇವಸ್ಥಾನ)




೨೮.ಕುಂದುರ್ಪಿ(ವೆಂಕಟರಮಣಸ್ವಾಮಿ)



೨೯.ಅಂಬಲಗೆರೆ



೩೦.ಅಬ್ಬಿನಹೊಳೆ













ಕೇಶ್ವರಿ(ಪ್ರಸ್ತರ)



ರ್ಡಿ(ಮುಂಜೂರು)







ಸುಖನಾಸಗಳು



೩೧.ಹೊರಕೆರ ದೇವರಪುರ



೩೨.ತಾಳ್ಯ

ಮುಖಮಂಟಪಗಳು



೩೩.ನೀರ್ಥಡಿ



೩೪.ಕುಂದುರ್ಪಿ(ನರಸಿಂಹಸ್ವಾಮಿ)



೩೫.ಹೊರಕೆರೆ ದೇವರಪುರ



೩೬.ಗಿಲಕೇನಹಳ್ಳಿ



೩೭.ಚಿತ್ರದುರ್ಗ(ಉತ್ಸವಾಂಬೆ)



೩೮.ಅಂಬಲಗೆರೆ


ದ್ವಾರಬಂಧಗಳು




೩೯.ಹಿರಿಯೂರು(ಲಕ್ಷ್ಮೀವೆಂಕಟೇಶ್ವರ)



೪೦.ನೀರ್ಥಡಿ



೪೧.ಅಂಬಲಗೆರೆ



೪೨.ಜಾನಕಲ್ಲು(ಶಂಕರೇಶ್ವರ)



೪೩.ಕಾವಾಡಿಗರಹಟ್ಟಿ




೪೪.ಚಿತ್ರದುರ್ಗ(ಉತ್ಸವಾಂಬೆ)


ಭುವನೇಶ್ವರಿಗಳು



೪೫.ತೇರುಮಲ್ಲೇಶ್ವರ



೪೬.ಅಂಬಲಗೆರೆ



೪೭.ತಾಳ್ಯ




೪೮.ಹುಲ್ಲೂರು(ಸಿದ್ದೇಶ್ವರ)



೪೯.ವೆಂಕಟರಮಣ(ಚಿತ್ರದುರ್ಗ)

೫೦.ಹುಲ್ಲೂರು(ಆಂಜನೇಯ)



ಕೈಪಿಡಿಗಳು




೫೧.ಚಿತ್ರದುರ್ಗ(ಚನ್ನಕೇಶವ)




೫೨.ಚಿತ್ರದುರ್ಗ(ಪೇಟೆ ಆಂಜನೇಯ)



೫೩.ಚಿತ್ರದುರ್ಗ(ಲಕ್ಷ್ಮೀನಾರಾಯಣ)



೫೪.ಚಿತ್ರದುರ್ಗ(ವೆಂಕಟರಮಣ)



೫೫.ಮಾರಿಕಣಿವೆ

೫೬.ತಾಳ್ಯ



ದ್ವಾರಮಂಟಪಗಳು



೫೭.ಅಂಬಲಗೆರೆ



೫೯.ತೇರುಮಲ್ಲೇಶ್ವರ



೫೮.ಉತ್ಸವಾಂಬೆ



೬೦.ಲಕ್ಷ್ಮೀರಂಗನಾಥಸ್ವಾಮಿ(ಹೊರಕೆರೆದೇವರಪುರ)

ದೀಪ, ಗರುಡ, ಉಯ್ಯಾಲೆ ಸ್ತಂಭಗಳು


೬೧.ನೀರ್ಥಡಿ


೬೨.ನೀರ್ಥಡಿ


೬೩.ಗಿಲಕೇನಹಳ್ಳಿ



೬೪.ಕೊಣಚಗಲ್


೬೫.ಚಿತ್ರದುರ್ಗ ಬೆಟ್ಟ


೬೬.ಅಂಬಲಗೆರೆ


೬೭.ಚಿತ್ರದುರ್ಗ ಬೆಟ್ಟ


೬೮.ಹುಲ್ಲೂರು


೬೯.ಉತ್ಸವಾಂಬೆ, ಚಿತ್ರದುರ್ಗ


೭೦.ವೀರಭದ್ರಸ್ವಾಮಿ, ಹಿರಿಯೂರು

ಪುಷ್ಕರಣಿ, ಹೊಂಡಗಳು



೭೧.ಸಂತೆಹೊಂಡ ಚಿತ್ರದುರ್ಗ

೭೨.ಕಾವಡಿಗರಹಟ್ಟಿ ಹೊಂಡ





೭೩.ಚನ್ನಕೇಶವಸ್ವಾಮಿ (ಸಿ.ಕೆ.ಪುರ)

೭೪.ತಾತಾಚಾರ್ಯರ ಮಠ (ಹೊಳಲ್ಕೆರೆ)






೭೫.ಏಕನಾಥೇಶ್ವರಿ (ಚಿತ್ರದುರ್ಗ ಬೆಟ್ಟ)

ಕಂಬಗಳು ಮತ್ತು ಬೋದುಗೆಗಳು


೭೬.ಹೊರಕೆರೆ ದೇವರಪುರ



೭೭.ಗೋಪಾಲಸ್ವಾಮಿ (ಚಿತ್ರದುರ್ಗ)


೭೮.ಅಂಬಲಗೆರೆ


೭೯.ಕುಂದುರ್ಪಿ


೮೦.ಹೊರಕೆರೆ ದೇವರಪುರ


೮೧.ಉತ್ಸವಾಂಬೆ ಚಿತ್ರದುರ್ಗ


೮೨.ನೀರ್ಥಡಿ



೮೩.ನೀರ್ಥಡಿ


೮೪.ನೀರ್ಥಡಿ


೮೫.ಅಬ್ಬಿನಹೊಳೆ



೮೬.ಚನ್ನಕೇಶವಸ್ವಾಮಿ
ಚಿತ್ರದುರ್ಗ



೮೭.ಚನ್ನಕೇಶವಸ್ವಾಮಿ
ಚಿತ್ರದುರ್ಗ



೮೮.ಗಣಪತಿರಂಗಯ್ಯನಬಾಗಿಲು



೮೯.ಮಾರಿಕಣಿವೆ

ದ್ವಿಕಾಂಡ ಸ್ತಂಭಗಳು



೯೦.ವೆಂಕಟರಮಣ(ಚಿತ್ರರ್ದು)



೯೧.ಹಿರಿಯೂರು ತೇರುಮಲ್ಲೇಶ್ವರ

೯೨.ಅಂಬಲಗೆರೆ ರಂಗನಾಥಸ್ವಾಮಿ ದೇವಾಲಯ





೯೩.ನೀರ್ಥಡಿ



೯೪.ನೀರ್ಥಡಿ




೯೫.ವೆಂಕಟರಮಣ
ಚಿತ್ರದುರ್ಗ

ಶಿಲ್ಪಗಳು: ೧ ಶೈವಶಿಲ್ಪಗಳು




೯೬.ಶಿವ (ದೊಡ್ಡೇರಿ)




೯೭.ಶಿವ(ಜಾನಕಲ್ಲು)




೯೮.ಕನ್ನೇಶ್ವರಸ್ವಾಮಿ(ದೊಡ್ಡೇರಿ)



೯೯.ವೀರಭದ್ರಶಿಲ್ಪ. ಹಿರಿಯೂರು




೧೦೦.ವೀರಭದ್ರೇಶ್ವರ. ಹೊಸದುರ್ಗ



೧೦೧.ಕಾಲಭೈರವೇಶ್ವರ. ಅಂಬಲಗೆರೆ



೧೦೨.ಬೆಟ್ಟದ ಗಣೇಶ. ಚಿತ್ರದುರ್ಗ



೧೦೩.ಬಯಲು ಗಣಪತಿ ಹೊಳಲ್ಕೆರೆ




೧೦೪.ಬಯಲು ಗಣಪತಿ (ಹಿಂಬದಿ) ಹೊಳಲ್ಕೆರೆ



೧೦೫.ಚನ್ನಕೇಶವ ದೇವಾಲಯದ ಗಣಪತಿ



೧೦೬.ಕನ್ನೇಶ್ವರಸ್ವಾಮಿ ದೇವಾಲಯ ದೊಡೇರಿ



೧೦೭.ಹೊಳಲ್ಕೆರೆ ಬಯಲು ಗಣಪತಿ



೧೦೮. ವೀರಭದ್ರೇಶ್ವರಸ್ವಾಮಿ ದೇವಾಲಯದಲ್ಲಿನ ಚಿತ್ರ

೨. ವೈಷ್ಣವ ಶಿಲ್ಪಗಳು



೧೦೯.ವೇಣುಗೋಪಾಲ, ಹೊಳಲ್ಕೆರೆ




೧೧೦.ವೆಂಕಟೇಶ್ವರಸ್ವಾಮಿ, ಜಾನಕಲ್ಲು




೧೧೧.ರಂಗನಾಥಸ್ವಾಮಿ, ಅಂಬಲಗೆರೆ



೧೧೨.ರಂಗನಾಥಸ್ವಾಮಿ, ನೀರ್ಥಡಿ



೧೧೩.ಕುರುಬಳಮ್ಮ, ಜೋಡಿರಂಗಾಪುರ



೧೧೪.ವೆಂಕಟೇಶ್ವರ (ಬಯಲು ಗಣಪತಿ ದೇವಾಲಯ)



೧೧೫.ಗರುಡ ಶಿಲ್ಪ, ಹೊಳಲ್ಕೆರೆ



೧೧೬.ಆಳ್ವಾರರು (ನೀರ್ಥಡಿ)


೭. ಶಾಕ್ತ ಶಿಲ್ಪಗಳು



೧೧೭.ಕಾಳಿಕಾಂಬ, ಹುಲ್ಲುರು




೧೧೮.ಪಾರ್ವತಿ, ಹಂಪನೂರು



೧೧೯.ಪಾರ್ವತಿ, ಕುಂದುರ್ಪಿ




೧೨೦.ಭದ್ರಕಾಳಿ, ಹೊಸದುರ್ಗ




೧೨೧.ಲಕ್ಷ್ಮಿ, ಹಂಪನೂರು



೧೨೨.ಪಾರ್ವತಿ, ಕುಂದುರ್ಪಿ



೧೨೪.ಲಕ್ಷ್ಮಿ, ನೀರ್ಥಡಿ



೧೨೫.ಲಕ್ಷ್ಮಿ ಗೋಪಾಲಸ್ವಾಮಿ ದೇವಸ್ಥಾನ, ಚಿತ್ರದುರ್ಗ



೧೨೬.ಲಕ್ಷ್ಮಿ, ಜಾನಕಲ್ಲು




೧೨೭.ಏಕನಾಥೇಶ್ವರಿ, ಚಿತ್ರದುರ್ಗ ಬೆಟ್ಟ



೧೨೮.ನಾಗದೇವತೆ, ಹುಲ್ಲೂರು

೪. ಆಂಜನೇಯ ಶಿಲ್ಪಗಳು (ಜನಪ್ರಿಯ ಪಂಥ)



೧೨೮.ಹೊರಕೆರೆದೇವರಪುರ




೧೨೯.ರೆಡ್ಡಿಹಳ್ಳಿ



೧೩೦.ರಾಮೇನಹಳ್ಳಿ




೧೩೧.ಹುಲ್ಲೂರು



೧೩೨.ತಾಳ್ಯ



೧೩೩.ಸೂರ್ಯ (ದೊಡ್ಡೇರಿ)




೧೩೪.ಸೂರ್ಯ(ಉತ್ಸವಾಂಬೆ)



೧೩೫.ತೀರ್ಥಂಕರ (ಜಾನಕಲ್ಲು)



೧೩೬.ವೀರಗಲ್ಲು (ಹುಲ್ಲೂರು)




೧೩೭.ಮಹಾಸತಿಕಲ್ಲು(ಹಂಪನೂರು)

೫. ಕಂಬಗಳ ಮೇಲಿನ ವಿವಿಧ ರೀತಿಯ ಉಬ್ಬು ಶಿಲ್ಪಗಳು



೧೩೯.ಹುಲಿಯೊಂದಿಗೆ ಹೋರಾಡುತ್ತಿರುವ ವೀರ (ಚಿತ್ರದುರ್ಗ)



೧೩೮.ಗೊಲ್ಲ(ಹಿರಿಯೂರು)



೧೪೦.ಆನೇ ಸವಾರ (ತಾಳ್ಯ)



೧೪೧.ಕುಸ್ತಿಪಟು (ಚಿತ್ರದುರ್ಗ)



೧೪೨.ಹಸು.ಗಜದ ಸಂಯುಕ್ತ ಚಿತ್ರ
(ಕಡ್ಲೆಗುಡ್ಡು)



೧೪೩.ಶುಖಬಾಷಿಣಿ(ನೀರ್ಥಡಿ)



೧೪೪.ಚಾಮರದಾರಿಣಿ(ಕುಂದುರ್ಪಿ)



೧೪೫.ಮೂರುಮುಖದ ಹಸು(ಹೆಚ್.ಡಿ.ಪುರ)



೧೪೬.ವೀಣಾವಾದಕಿ(ಹೆಚ್.ಡಿ.ಪುರ)




೧೪೭.ಹಸು,ಗಜ ಸಂಯುಕ್ತಚಿತ್ರ(ಕಡ್ಲೆಗುದ್ದು)




೧೪೮.ಐದುಮುಖದ ಹಸು(ಕಡ್ಲೆಗುದ್ದು)



೧೪೯.ಟಗರು (ಮಾರಿಕಣಿವೆ)



೧೫೦.ನರ್ತಕಿ(ನೀರ್ಥಡಿ)



೧೫೧.ಭೈರವ(ನೀರ್ಥಡಿ)



೧೫೨.ವೇಣುಗೋಪಾಲ(ನೀರ್ಥಡಿ)



೧೫೩.ಅನಂತಶಯನ(ಹೆಚ್.ಡಿ.ಪುರ)



೧೫೪.ನಂದಿವಾಹನ ಉಮಾಮಹೇಶ್ವರ (ಹೆಚ್.ಡಿ.ಪುರ)



೧೫೫.ಬೇಡರಕಣ್ಣಪ್ಪ (ಹೆಚ್.ಡಿ.ಪುರ)



೧೫೬.ಹಾವಾಡಿಗ (ಹಿರಿಯೂರು)



೧೫೭.ನರಶಾರ್ದೂಲ (ತಾಳ್ಯ)



೧೫೮.ಗೋಪಿಕಾ ಕೃಷ್ಣ (ಹೆಚ್.ಡಿ.ಪುರ)



೧೫೯.ಗೋಪಿಕಾ ವಸ್ತ್ರಾಪಹರಣ (ಹೆಚ್.ಡಿ.ಪುರ)



೧೬೦.ರಾಮಾನುಜಾಚಾರ್ಯರು (ಹೆಚ್.ಡಿ.ಪುರ)



೧೬೧.ಶಂಖನಾದಕ(ಹೆಚ್.ಡಿ.ಪುರ)




೧೬೨.ಲಿಂಗಕ್ಕೆ ಕ್ಷೀರಧಾರೆಗೈಯುತ್ತಿರುವ ಹಸು(ಹೆಚ್.ಡಿ.ಪುರ)




೧೬೩.ಪೂತನಿ ಸಂಹಾರ(ಹೆಚ್.ಡಿ.ಪುರ)



೧೬೪.ಲಕ್ಷ್ಮೀನರಸಿಂಹ (ನೀರ್ಥಡಿ)



೧೬೫.ಮಿಥುನ ಶಿಲ್ಪ (ನೀರ್ಥಡಿ)



೧೬೬.ಸಿಂಹ (ಕುಂದುರ್ಪಿ)



೧೬೭.ಗಂಡಬೇರುಂಡ(ಚಿತ್ರದುರ್ಗ)



೧೬೮.ಮಿಥುನ ದಂಪತಿ(ಕುಂದುರ್ಪಿ)



೧೬೯.ನಗ್ನ ಸ್ತ್ರೀ(ನೀರ್ಥಡಿ)



೧೭೦.ವೀರಭದ್ರ (ಹೆಚ್.ಡಿ.ಪುರ)



೧೭೧.ಭೈರವ (ಹೆಚ್.ಡಿ.ಪುರ)



೧೭೨.ಅರಸು ದಂಪತಿಗಳು (ಹೆಚ್.ಡಿ.ಪುರ)



೧೭೩.ಅರಸು ದಂಪತಿಗಳು (ತಾಳ್ಯ)




೧೭೪.ನಗ್ನ ಸ್ತ್ರೀ (ಕುಂದುರ್ಪಿ)

೬. ಭತ್ತಿನಲ್ಲಿರುವ ವರ್ಣಚಿತ್ರಕಲೆ ಹಿರಿಯೂರಿನ ತೇರುಮಲ್ಲೇಶ್ವರ ದೇವಾಲಯದ ಮಹಾಮಂಟಪದ ಚಿತ್ರಗಳು









ಭಿತ್ತಿನಲ್ಲಿರುವ ವರ್ಣಚಿತ್ರಕಲೆ : ಹಿರಿಯೂರಿನ ತೇರುಮಲ್ಲೇಶ್ವರ ದೇವಾಲಯದ ಮಹಾಮಂಟಪದ ಚಿತ್ರಗಳು









